


## ದ್ವಿತೀಯ ಪಿಯುಸಿ

# ಕನ್ನಡ ಟಿಪ್ಪಣಿಗಳು

**ಎಸ್ ಜಿ ವಿ ಮಹೇಶ ಪದವಿ ಪೂರ್ವ ಮಹಾವಿದ್ಯಾಲಯ, ಬೆಳಗಾವಿ**

# ಪರಿವಿಡಿ

## ಪದ್ಯ ಭಾಗ:


01 ಕದಡಿದ ಸಲಿಲಂ ತಿಳಿವಂದದೆ – ನಾಗಚಂದ್ರ

02 ವಚನಗಳು

2.1 ಬಸವಣ್ಣನವರ ವಚನಗಳು

2.1 ಉರಿ ಲಿಂಗ ಪೆದ್ದಿಯ ವಚನಗಳು

03 ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು – ಕುಮಾರವ್ಯಾಸ

04 ಪಗೆಯಂ ಬಾಲಕನೆಂಬರೇ – ಪುಲಿಗೆರೆ ಸೋಮನಾಥ

05 ಜಾಲಿಯ ಮರದಂತೆ – ಪುರಂದರದಾಸರು

06 ಹಬ್ಬಲಿ ಅವರ ರಸಬಳ್ಳಿ – ಜನಪದ

07 ಬೆಳಗು ಜಾವ – ದಾ. ರಾ ಬೇಂದ್ರೆ

08 ಮುಂಬೈ ಜಾತಕ – ಜಿ. ಎಸ್. ಶಿವರುದ್ರಪ್ಪ

09 ಶಿಲುಬೆ ಏರಿದ್ದಾನೆ – ಕೆ.ಎಸ್. ನಿಸಾರ್ ಅಹಮದ್

10 ಒಂದು ಹೂ ಹೆಚ್ಚಿಗೆ ಇಡುತೀನಿ – ಲಲಿತಾ ಸಿದ್ಧಬಸವಯ್ಯ

11 ಹತ್ತಿ...ಚಿತ್ತ...ಮತ್ತು... – ಟಿ. ಯಲ್ಲಪ್ಪ

12 ಒಮ್ಮೆ ನಗುತ್ತೇವೆ – ಸುಕನ್ಯಾ ಮಾರುತಿ


## ಗದ್ಯ ಭಾಗ:


01 ಮುಟ್ಟಿಸಿಕೊಂಡವನು – ಪಿ. ಲಂಕೇಶ್

02 ವಾಲ್ ಪರ್ರೈ : ಅಭಿವೃದ್ಧಿ ತಂದ ದುರಂತ – ಕೃಪಾಕರ ಸೇನಾನಿ, ಕೆ. ಪುಟ್ಟುಸ್ವಾಮಿ

03 ಆಯ್ಕೆಯಿದೆ ನಮ್ಮ ಕೈಯಲ್ಲಿ – ನೇಮಿಚಂದ್ರ

04 ಕನ್ನಡವನ್ನು ಕಟ್ಟುವ ಕೆಲಸ – ಹಾ. ಮಾ. ನಾಯಕ

05 ಧಣಿಗಳ ಬೆಳ್ಳಿಲೋಟ – ಎಚ್. ನಾಗವೇಣಿ

06 ಬದುಕನ್ನು ಪ್ರೀತಿಸಿದ ಸಂತ – ಎಚ್. ಆರ್. ರಾಮಕೃಷ್ಣರಾವ್

07 ತಿರುಳ್ಗನ್ನುಡದ ಬೆಳ್ನುಡಿ – ಮುದ್ದಣ್ಣ

08 ಹಳ್ಳಿಯ ಚಹಾ ಹೋಟೇಲುಗಳು – ವೀರೇಂದ್ರ ಸಿಂಪಿ


## ದೀರ್ಘಗದ್ಯ:


ಕೃಷ್ಣೇಗೌಡನ ಆನೆ – ಕೆ.ಪಿ. ಪೂರ್ಣಚಂದ್ರ ತೇಜಸ್ವಿ

# ಕದಡಿದ ಸಲಿಲಂ ತಿಳಿವಂದದೆ

–:ನಾಗಚಂದ್ರ

**ಸಾರಾಂಶ:**

ವ॥ ರಾವಣನು ಧ್ರುವಮಂಡಲದಂತೆ ನಿಶ್ಚಲನಾಗಿ ನಿಂತುಕೊಂಡು ಮನೋನಿಗ್ರಹವನ್ನು ಮಾಡಿ ದಿವ್ಯ ಮಂತ್ರ ಉಚ್ಚರಣೆಯಿಂದ ಬಹುರೂಪಿಣೀ ವಿದ್ಯೆಯ ಸಾಧನೆಯನ್ನು ಮಾಡುತ್ತಾನೆ.

ರಾವಣನ ಎದುರು ಹೇಗೆ ವಿದ್ಯಾದೇವತೆ ಪ್ರತ್ಯಕ್ಷವಾದಳು ಎನ್ನುವ ವಿವರಣೆ ಮೊದಲ ಭಾಗದಲ್ಲಿದೆ. ರಾವಣ ಮಂತ್ರೋಚ್ಚರಣೆಯಿಂದ ಪ್ರಸನ್ನಳಾದ ವಿದ್ಯಾಧಿದೇವತೆಯು ಮುಂಗಾರ ಸಿಡಿಲಿನ ಆರ್ಭಟವನ್ನೂ ಮೀರುವಂತೆ, ಯಮನ ನಾಲಗೆಯು ಕಂಪಿಸಿತೆಂಬಂತೆ ತನ್ನ ಕರಗಳನ್ನು ಹರಡಿಕೊಂಡು, "ಹೇಳು... ಹೇಳು"..ಎಂದು ನುಡಿದು ರಾವಣನ ಎದುರು ಪ್ರತ್ಯಕ್ಷವಾದಳು.

ವ॥ ಹಾಗೆ ಪ್ರತ್ಯಕ್ಷಳಾದ ವಿದ್ಯಾದೇವತೆಯು ರಾವಣನಲ್ಲಿ ಹೀಗೆ ಹೇಳುತ್ತಾಳೆ; "ಚಕ್ರಧಾರಿಯಾದ ಲಕ್ಷ್ಮಣನನ್ನು ಮತ್ತು ಚರಮ ದೇಹಧಾರಿಯಾದ ರಾಮ – ಇವರಿಬ್ಬರನ್ನುಳಿದು ಮಿಕ್ಕವರನ್ನೆಲ್ಲ ನಾಶಗೊಳಿಸುತ್ತೇನೆ" – ಎಂದು. ಆಗ ರಾವಣನು, "ಮಿಕ್ಕವರಸಾವಿನಿಂದನನಗೇನುಪ್ರಯೋಜನ?" – ಎನ್ನುತ್ತ ಆ ವಿದ್ಯಾಧಿದೇವತೆಗೆ ನಮಸ್ಕರಿಸಿ, ಶಾಂತಿ ಜಿನಭವನವನ್ನು ಮೂರುಬಾರಿ ಪ್ರದಕ್ಷಿಣೆ ಮಾಡುತ್ತಾನೆ. ಅಷ್ಟರಲ್ಲಿ ರಾಮನ ಪಾಳಯದವರಾಗಿದ್ದ ಅಂಗದಾದಿಗಳು ಲಂಕೆಗೆ ತೆರಳಿ ತಮ್ಮ ಅಟ್ಟಹಾಸವನ್ನು ಮೆರೆದು, ಮರಳಿ ತಮ್ಮ ಬೀಡನ್ನು ಪ್ರವೇಶಿಸಿದ್ದರು.

ಈ ಕಡೆಯಲ್ಲಿ ರಾವಣನು, ತನ್ನ ಅಂತಃಪುರದ ಸ್ತ್ರೀಯರನ್ನು ನಿಂದಿಸಿ, ಬೈದು ಭಂಗಿಸಿದ ಅಹಂಕಾರಿ ಅಂಗದಾದಿಗಳನ್ನು ಕೊಲ್ಲಬೇಕೆಂಬ ಅತಿಯಾದ ಕ್ರೋಧದಿಂದ, ಏಟು ತಿಂದ ಸಿಂಹದಂತೆ ಗರ್ಜಿಸಲು,

ಮುಂದುಗಡೆಯಲ್ಲಿ ಕೆಂಪು ಗರಿ ಮೂಡಿದ ದುಂಬಿಗಳ ಸಾಲು ವಿಸ್ತರಿಸಿದಂತೆ ಚಾಚಿದ್ದ ಮಂಡೋದರಿಯ ಬಾಡಿದ ಮುಖ ಕಮಲವನ್ನು ನೋಡಿದನು.

ವಚನ॥ ಮಂಡೋದರಿಯ ಸಹಿತವಾಗಿ ತನ್ನ ಪತ್ನಿಯರನ್ನು ನೋಡಿ, ಅವರನ್ನುದ್ದೇಶಿಸುತ್ತ, ರಾವಣ ಹೀಗೆ ಹೇಳುತ್ತಾನೆ; "ನಿಮಗಿಷ್ಟು ಅಪಮಾನವನ್ನುಂಟುಮಾಡಿದ ಅಂಗದಾದಿಗಳನ್ನು ಹುಬ್ಬು ಗಂಟಿಕ್ಕುವ ಮಾತ್ರದಿಂದಲೆ ಬಂಧಿಸಿ, ಸೆರೆಹಿಡಿದು ನಿಮ್ಮ ಮುಂದೆ ತಂದು ದಂಡಿಸುವುದರ ಮೂಲಕ, ನಿಮಗಾದ ಅಪಮಾನವನ್ನು ಕಳೆಯುತ್ತೇನೆ" – ಎಂದು ಅವರನ್ನುಸಮಾಧಾನಪಡಿಸಿ, ಶಾಂತಿಜಿನ ಭವನದಲ್ಲಿ ಮಹಾಪೂಜೆಯನ್ನು ಮಾಡಿಸಿದನು. ಪೂಜೆ ಪೂರೈಸಿದ ನಂತರ ನಿಯಮದಂತೆ ರಾವಣನು, ದಿವ್ಯವಾದ ಪ್ರಸಾದ ಭೋಜನವನ್ನುಂಡು, ಆ ಬಳಿಕ ಬಹುರೂಪಿಣೀ ವಿದ್ಯೆಯ ಪ್ರಭಾವವನ್ನು ಪರೀಕ್ಷಿಸಿ ನೋಡಿ, ಸಮಾಧಾನಗೊಂಡು ಸಂತೋಷವನ್ನು ಹೃದಯದಲ್ಲಿ ತುಂಬಿಕೊಳ್ಳುತ್ತಾನೆ.

ರಾವಣ ತನ್ನ ಬಗ್ಗೆ ತಾನೇ ಗರ್ವಪಟ್ಟುಕೊಳ್ಳುವುದನ್ನು ಈ ಪದ್ಯ ಭಾಗದಲ್ಲಿ ಕಾಣಬಹುದು. ರಾವಣನು ತನ್ನ ಬಾಹುಗಳನ್ನು ತಾನೇ ಅಭಿಮಾನದಿಂದ ನೋಡಿಕೊಳ್ಳುತ್ತ, ಇನ್ನು ಮುಂದೆ (ಸ್ವರ್ಗ, ಮರ್ತ್ಯ, ಪಾತಾಳಗಳೆಂಬ) ಮೂರು ಲೋಕಗಳಲ್ಲೂ ನನ್ನನ್ನು ಯಾರು ಜಯಿಸಬಲ್ಲರು? ಯುದ್ಧದಲ್ಲಿ ಎದುರಿಸುವವರಾರು? ಎಂದು ಗರ್ವ ಪಡುತ್ತಾನೆ. ಆ ಬಳಿಕ, ಸೀತಾದೇವಿಯ ವದನಾರವಿಂದವನ್ನು ನೋಡುವ ಕಾತರತೆಯುಳ್ಳವನಾಗಿ, ರಾವಣನು ಪುಷ್ಪಬಾಣಗಳಿಲ್ಲದ ಕಾಮದೇವನಂತೆ ಅಲಂಕೃತನಾಗಿ ಸೀತೆಯನ್ನು ಇರಿಸಿರುವ ಸ್ಥಳವಾದ ಪ್ರಮದವನಕ್ಕೆ ಬರುತ್ತಾನೆ.

ಗದ್ಯ: ಹಾಗೆ ವೇಗವಾಗಿ ಬರುತ್ತಿದ್ದ ರಾವಣನ ಪುರುಷ ಸೌಂದರ್ಯವನ್ನು, ಸೀತಾದೇವಿಯ ಬಳಿಯಲ್ಲಿದ್ದ ಗಂಧರ್ವ ಕಾಂತೆಯರು ಸೀತಾದೇವಿಗೆ ತೋರಿದರು.

ರಾವಣನ ಬಗ್ಗೆ ಸೀತಾದೇವಿ ಯಾವ ಭಾವನೆಯನ್ನು ಹೊಂದಿದ್ದಳು ಎನ್ನುವುದು ಈ ಪದ್ಯ ಭಾಗದಲ್ಲಿ ವ್ಯಕ್ತವಾಗುತ್ತದೆ. ರಾವಣನ ಅಪ್ರತಿಮವಾದ ರೂಪವು ಸೀತಾದೇವಿಗೆ ಹುಲ್ಲುಕಡ್ಡಿಗಿಂತಲೂ ಅಲ್ಪವಾಗಿ ತೋರಿತು. ಏಕೆಂದರೆ ರಾಮನ ಹೊರತಾಗಿ ಯಾವನೇ ಪರಪುರುಷನನ್ನು ಕನಸಿನಲ್ಲಿಯೂ ಕೂಡ ಎಣಿಸಿದವಳಲ್ಲ ಸೀತಾ ದೇವಿ. ಅಂತಹ ಪತಿವೃತೆಯಾಗಿದ್ದಳು. ಪತಿಭಕ್ತಿಯಲ್ಲಿ ಸೀತಾದೇವಿಗೆ ಸರಿಸಾಟಿಯಾದ ಪುಣ್ಯವತಿಯರು, ಪತಿವ್ರತೆಯರು ಇನ್ನೊಬ್ಬರಿರಲು ಸಾಧ್ಯವಿಲ್ಲ.

ರಾವಣನು ಸೀತಾದೇವಿಯ ಬಳಿಗೆ ಬರುವಾಗ ಆಕೆಯಲ್ಲಿ ಉಂಟಾದ ಕಳವಳವನ್ನು ಈ ಪದ್ಯ ಭಾಗ ವಿವರಿಸುತ್ತದೆ. "ರಾಮಲಕ್ಷ್ಮಣರನ್ನು ಕುರಿತಂತೆ ತಾನು ಇನ್ನೇನು ಕೆಟ್ಟವಾರ್ತೆಯನ್ನು ಕೇಳುವೆನೋ"- ಎಂದು ಆ ತಾವರೆ ಮುಖ ಉಳ್ಳವಳು ಬರುತ್ತಿರುವ ರಾವಣನನ್ನು, ಕಂಡೊಡನೆ ಭೀತಿಗೊಂಡು ನಡುಗತೊಡಗಿದಳು.

ಗದ್ಯ॥ ಹಾಗೆ ನಡುಗುತ್ತಿದ್ದ ಸೀತೆಯ ಸಮೀಪಕ್ಕೆ ಬಂದು, ರಾವಣನು "ಬಹುರೂಪಿಣೀ ವಿದ್ಯೆಯನ್ನು ನಾನು ಸಾಧಿಸಿದ್ದೇನೆ. ಇನ್ನು ನನಗೆ ಅಸಾಧ್ಯವಾದ ಶತ್ರುಪಕ್ಷವೆಂಬುದಿಲ್ಲ. ನೀನು ನಿನ್ನ ನೆಚ್ಚಿನ ರಾಮನ ಯೋಚನೆಯನ್ನು ಬಿಟ್ಟು, ನನ್ನನ್ನು ಹೊಂದಿ ಸಾಮ್ರಾಜ್ಯ ಸುಖವನ್ನನುಭವಿಸು". – ಎಂದನು. ಆಗ ಸೀತಾದೇವಿ ಅತೀವವಾಗಿ ದುಃಖ ಪಡುತ್ತಾಳೆ.

ಸೀತೆಯ ಪ್ರತ್ಯುತ್ತರ ಮತ್ತು ಮೂರ್ಛೆ ಹೋದ ಸಂದರ್ಭ ಈ ಭಾಗದಲ್ಲಿದೆ. ರಾವಣನ ಮಾತಿಗೆ ಪ್ರತಿಸ್ಪಂದಿಸಿದ ಸೀತೆ ಹೀಗೆ ಹೇಳುತ್ತಾಳೆ. "ಕರುಣಿಸುವುದಿದ್ದರೆ ದಶವದನನೇ, ಶ್ರೀ ರಾಮನ ಜೀವದುಸಿರು ಇರುವವರೆಗೆ ಇಲ್ಲಿಗೆ ಬರಬೇಡ" ಎಂದು. ಆಕೆಗೆ ಗೊತ್ತು ರಾವಣನಿಂದ ರಾಮನನ್ನು ಏನು ಮಾಡಲು ಸಾಧ್ಯವಿಲ್ಲ ಎಂದು. ಅಲ್ಲದೆ ರಾವಣನು ತನ್ನ ಕಾರಣಕ್ಕಾಗಿ ಬಂದಿರುವುದು ಆಕೆಗೆ ಎಳ್ಳಷ್ಟು ಇಷ್ಟವಿರಲಿಲ್ಲ. ಹಾಗೇ

ಹೇಳಿದವಳೇ ಪ್ರಜ್ಞೆ ಕಳೆದುಕೊಂಡು ಭೂಮಿಯ ಮೇಲೆ ಬೀಳುತ್ತಾಳೆ.

ರಾವಣನು ತನ್ನ ಕಾರಣದಿಂದ ಆದ ಅಚಾತುರ್ಯಕ್ಕೆ ಪರಿತಪಿಸುವ ಸಂದರ್ಭ ಇಲ್ಲಿದೆ. ಜಾನಕಿಯು ಮೂರ್ಛಿತಳಾಗಲು, ರಾವಣನಲ್ಲಿ ಅನುಕಂಪ ಹುಟ್ಟುತ್ತದೆ.ಆತ ಅಕೆಯ ಬಗೆಗೆ ಕರುಣೆ ದೋರುತ್ತಾನೆ. ಅಲ್ಲದೆ ತನ್ನನ್ನು ತಾನೇ ಬೈದುಕೊಳ್ಳುತ್ತಾನೆ. ಕರ್ಮಾರ್ಧೀನನಾಗಿ ತಾನು ಮಾಡಿದ ಹೀನಕರ್ಮದ ಪರಿಣಾಮ ಎಷ್ಟು ಘೋರವಾದುದು – ಎಂದು ಅರಿತು ತನ್ನನ್ನು ತಾನೇ ದೂಷಿಸಿಕೊಂಡು ಪರಿತಪಿಸುತ್ತಾನೆ.

ಈ ಭಾಗವು ಪದ್ಯದ ಶೀರ್ಷಿಕೆ ಭಾಗವಾಗಿದೆ. ಕದಡಿ ಹೋದ ಕೊಳದ ನೀರು ತನ್ನಷ್ಟಕ್ಕೇ ತಿಳಿಗೊಳ್ಳುವಂತೆ; ರಾವಣನಿಗೆ ತನ್ನೊಳಗೆ ಬದಲಾವಣೆಯಾಯಿತು. ಸೀತೆ ಮೂರ್ಛಿತಳಾಗುವವರೆಗೂ ರಾವಣನ ಮನಸ್ಸು ಕಲುಷಿತಗೊಂಡಿತ್ತು. ಯಾವಾಗ ಸೀತೆ ನೇರವಾಗಿ ತನ್ನ ಮನಸ್ಸಿನಲ್ಲಿ ತಾನು ಹೊಂದಿದ್ದ ನಿಲುವನ್ನು ವ್ಯಕ್ತಪಡಿಸಿದಳೋ ಆಗ ರಾವಣನಿಗೆ ತಾನು ಮಾಡುತ್ತಿರುವುದು ತಪ್ಪೆನಿಸತೊಡಗಿತು.ಅದುವರೆಗೂ ಕದಡಿದ್ದ ರಾವಣನ ಮನಸ್ಸು ಎಂಬ ಕೊಳ ತನ್ನ ತಪ್ಪಿನ ಅರಿವಿನ ನಂತರ ತಿಳಿಯಾಗ ತೊಡಗಿತು.ಉದಾತ್ತನಾದವನಲ್ಲಿ ಕಳಂಕದ ಪ್ರೀತಿ ಹೇಗೆ ಹುಟ್ಟಲಾರದೋ ಹಾಗೆ ರಾವಣನಿಗೆ ಸೀತೆಯಲ್ಲಿ ವೈರಾಗ್ಯ ಹುಟ್ಟಿತು. ಇಲ್ಲಿ ರಾವಣ ಉದಾತ್ತ ನಾಯಕನಾಗಿ ಗುರುತಿಸಿಕೊಳ್ಳುವುದು ಕಾವ್ಯ ವಿಶೇಷವಾಗಿದೆ.

ಕವಿ ಇಲ್ಲಿ ಹೋಲಿಕೆಯನ್ನು ಕೊಡುತ್ತಾ, ರಾವಣನು ಸೀತೆಯ ವ್ಯಾಮೋಹದಿಂದ ಬಿಡಿಸಿಕೊಂಡ ಪರಿಯನ್ನು ವಿವರಿಸುವುದನ್ನು ನಾವು ಗುರುತಿಸಬಹುದು. ಇಲ್ಲಿ ರಾವಣನನ್ನು ಕವಿ ಸೂರ್ಯನಿಗೆ ಹೋಲಿಸುತ್ತಾನೆ. ತನಗೆ ಅಂಟಿಕೊಂಡ ಸಂಜೆಯ ಅನುರಾಗವನ್ನು ರವಿಯು ಕಳೆದುಕೊಂಡು, ಹೇಗೆ ಮರುದಿನ ಮತ್ತೆ ಕಾಂತಿಯುಕ್ತನಾಗಿ ಕಾಣುತ್ತಾನೆಯೋ, ಹಾಗೆ ರಾವಣನೂ ಕೂಡ ತಾನು ಹೊಂದಿದ್ದ ಕೆಟ್ಟದ್ದನ್ನು ಕಳೆದು ಪರಿಶುದ್ಧನಾಗುತ್ತಾನೆ. ಉದಾತ್ತನಾದವನು ತನ್ನ ಮನಸ್ಸಿನ ದುರಾಸೆಯಿಂದ

ಕೆಟ್ಟದ್ದನ್ನು ಆಚರಿಸಿದರೂ, ಅರಿವು ಮೂಡಿದಮೇಲೆ ಅದನ್ನು ಬಿಡದಿರುತ್ತಾನೆಯೇ? (ಖಂಡಿತವಾಗಿ ಬಿಡುತ್ತಾನೆ) ಎನ್ನುವುದಾಗಿ ಹೇಳುವ ಕವಿ ರಾವಣನ ಶ್ರೇಷ್ಠವಾದ ವ್ಯಕ್ತಿತ್ವದ ಬಗ್ಗೆ ಹೇಳುತ್ತಾನೆ.

ಗದ್ಯ : ಎಂಬುದಾಗಿ, ಮನಸ್ಸಿನಲ್ಲಿ ಮೂಡಿದ ಕಾರುಣ್ಯ ರಸದಿಂದ ಸೀತೆಯಲ್ಲಾದ ಅನುರಕ್ತತೆಯನ್ನು ತಿಕ್ಕಿ ತೊಳೆಯುವಂತೆ ಸಂಪೂರ್ಣವಾಗಿ ಕಳೆದುಕೊಂಡು, ತನ್ನನ್ನು ತಾನು ಅರಿತುಕೊಂಡು, ತನ್ನೊಳಗೆ ಆಲೋಚಿಸಿ, ತನ್ನ ಆಪ್ತ ಪುರುಷರ, ಮಂತ್ರಿ ಪರಿಷತ್ತಿನ ಜನರನ್ನುದ್ದೇಶಿಸಿ ಹೀಗೆ ಹೇಳುತ್ತಾನೆ.

ರಾವಣನ ಅರಿವಿನ ಮಾತುಗಳನ್ನು ಕವಿ ಇಲ್ಲಿ ವಿವರಿಸಿದ್ದಾನೆ. ರಾವಣನೇ ಹೇಳುವಂತೆ ಸೀತೆ ಸದ್ಗುಣಿ. ಆ ಸದ್ಗುಣತ್ವವನ್ನು ಆಚರಿಸುವ ಸಲುವಾಗಿಯೇ ನನ್ನ ಕಡೆಗೆ ಗಮನಹರಿಸಲಿಲ್ಲ. ನನ್ನ ದಿವ್ಯವಾದ ವಸ್ತ್ರ, ಆಭರಣ, ಅಂಗ ಸುಖದ ಆಮಿಷಗಳನ್ನು ಒಪ್ಪದೆ ಗಂಧರ್ವ ರಾಜ್ಯಲಕ್ಷ್ಮಿಯನ್ನು ಹುಲ್ಲುಕಡ್ಡಿಗೆ ಸಮನಾಗಿ ಭಾವಿಸಿದಳು ಈ ಸತಿಯು. ಅದೂ ಅಲ್ಲದೆ ನಾನು ಪೌರುಷ ಪ್ರಣಯಿ. ನನ್ನ ಪಾಪದಿಂದ ಹೀಗೆ ಗುಣಹಾನಿಯನ್ನು ಬಯಸುತ್ತೇನೆಯೇ ಎಂದು ಹೇಳಿಕೊಳ್ಳುತ್ತಾನೆ.

ಇಲ್ಲಿ ರಾವಣನ ಪಶ್ಚಾತ್ತಾಪದ ಮಾತುಗಳನ್ನು ಕಾಣಬಹುದು. ರಾವಣ ಹೇಳುವಂತೆ, ಪ್ರಾಣ ಪ್ರಿಯರಾದ ರಾಮ–ಸೀತೆಯರನ್ನು ದೂರಮಾಡಲು ನನಗೆ ಯಾವ ಪೂರ್ವ ಯೋಜಿತ ಕಾರಣಗಳಿರಲಿಲ್ಲ. ಬದಲಾಗಿ ನನ್ನ ಕರ್ಮವಶದಿಂದ ನಾನು ಇವರನ್ನು ಪರಸ್ಪರ ದೂರವಾಗುವಂತೆ ಮಾಡಿದೆನು. ಮನ್ಮಥನ ಬಾಣಕ್ಕೆ ತುತ್ತಾಗಿ ಅವಿವೇಕತನದಿಂದ, ಕುಲದ ಹಿರಿಮೆಯನ್ನು ನಾನೇ ನಾಶ ಮಾಡುವಂತೆ ಈ ಹೀನ ಕಾರ್ಯವನ್ನು ಮಾಡಿದೆನು ಎನ್ನುತ್ತಾನೆ.

ಈ ಪದ್ಯ ಭಾಗದಲ್ಲಿ ರಾವಣ ಮತ್ತೆ ತನ್ನ ಪಶ್ಚಾತ್ತಾಪದ ಮಾತುಗಳನ್ನು ಮುಂದುವರೆಸುತ್ತಾ..... ರಾಮನಿಂದ ಅಗಲುವಂತೆ ಮಾಡಿ ನಾನು ಈ ಸೀತೆಗೆ ಇಷ್ಟು ದುಃಖವನ್ನು ಕೊಟ್ಟೆನು. ಕಾಮ ವ್ಯಾಮೋಹಕ್ಕೆ

ಒಳಗಾದದ್ದರಿಂದಾಗಿಯೇ ಕೆಟ್ಟ ಯಶಸ್ಸು ಎಂಬ ಭೇರಿಯ ನಾದ ಎಲ್ಲೆಡೆ ಹರಡುವಂತಾಯಿತು ಎಂದು ನೊಂದುಕೊಳ್ಳುತ್ತಾನೆ.

ತನ್ನ ತಮ್ಮನ ವಿವೇಚನೆಯ ಮಾತುಗಳನ್ನು ಕಡೆಗಣಿಸಿದ್ದಕ್ಕಾಗಿ ತೆರಬೇಕಾದ ಬೆಲೆಯ ಕುರಿತು ರಾವಣ ಇಲ್ಲಿ ನೊಂದುಕೊಳ್ಳುತ್ತಾನೆ. ನನಗೆ ವಿಭೀಷಣನು ಆದರದಿಂದಲೇ ಹಿತನುಡಿಗಳನ್ನು ಹೇಳಲು, ಆತನನ್ನು ವಿನಯವಂತನಲ್ಲದ ನಾನು, ದುರ್ವ್ಯಸನಿಯಾದ ನಾನು, ಬೆದರಿಸಿ ಹೆದರಿಸಿ ವಿನಯವಂತನಾದ ನನ್ನ ತಮ್ಮನನ್ನು ಹೊಡೆದೋಡಿಸಿ ಲಂಕೆಯಿಂದ ಹೊರಕ್ಕೆ ಕಳುಹಿಸಿದೆ. ವ್ಯಸನಗಳ ಹಿಡಿತಕ್ಕೆ ಸಿಲುಕಿದ ಯಾವನೂ ಅನುರಾಗದ ಸೆಳೆವೆನಿಂದ ಯಾವುದು ಹಿತ, ಯಾವುದು ಅಹಿತ ಎಂಬ ಚಿಂತನೆಯನ್ನು ಏಕೆ ಮಾಡುತ್ತಾನೆ? ಎನ್ನುತ್ತಾ ತನ್ನಿಂದ ಆದ ಅಚಾತುರ್ಯಕ್ಕೆ ಮರುಗಿದನು.

ವ್ಯಸನಕ್ಕೆ ಬಲಿಬಿದ್ದ ಮನುಷ್ಯನಿಗೆ ಯಾವುದೂ ಮುಖ್ಯವಾಗುವುದಿಲ್ಲ ಎಂಬುದನ್ನು ಕವಿ ಈ ಪದ್ಯಭಾಗದಲ್ಲಿ ವಿವರಿಸುತ್ತಾನೆ. ವ್ಯಸನಕ್ಕೆ ಬಲಿಬಿದ್ದ ಮನುಷ್ಯನು; ತನ್ನ ಯಶಸ್ಸಿನ ನಾಶವನ್ನು, ತನಗೆ ಸೋಲು ಅಂಟಿಕೊಂಡದ್ದನ್ನು,ತನ್ನ ಅಭಿಮಾನದ ಕೇಡನ್ನೂ, ಹಿರಿತನದ ಬವಣೆಯನ್ನು, ಬೇರೆ ಜನ್ಮಗಳಿಂದ ಪಡೆದುಕೊಂಡ ಉತ್ತಮಗತಿಯನ್ನು, ಆತ್ಮೀಯ ಗೆಳೆಯರ ವ್ಯಥೆಯನ್ನು, ಜನರು ಆಡಿಕೊಳ್ಳುವ ಅಪವಾದವನ್ನು, ವಿಷಯಲಾಲಸೆಗಳೆಂಬ ಮದ್ಯದ ಅಮಲೇರಿದ ಮನಸ್ಸಿನವರಾದ ವ್ಯಸನಿಗಳಾದವರು ಯಾರೇ ಆಗಲಿ ಇದನ್ನೆಲ್ಲ ಹೇಗೆ ತಿಳಿಯುತ್ತಾರೆ. ಅಂತವರು ವಿಷಯ ಸುಖವೆಂಬ ಮದ್ಯದ ಅಮಲಿಗೊಳಗಾಗಿ ವಿವೇಚನೆಯನ್ನು ಕಳಕೊಳ್ಳುತ್ತಾರೆ.

ಗದ್ಯ: ಎಂಬುದಾಗಿ ಭಾವ ತೀವ್ರತೆಯಿಂದ ತನ್ನ ಆಪ್ತೇಷ್ಟರಲ್ಲಿ ನುಡಿದು, ತನ್ನೊಳಗೆ ತಾನೇ ಹೀಗೆ ಹೇಳಿಕೊಳ್ಳುತ್ತಾನೆ.

ಈಗಲೇ ಸೀತೆಯನ್ನು ಕೊಂಡೊಯ್ದು ರಾಘವನಿಗೊಪ್ಪಿಸಿದೆಯೆಂದಾದರೆ... ನನ್ನ ಪರಾಕ್ರಮ, ಹೆಚ್ಚಿನದ್ದಾದ ಸಾಮರ್ಥ್ಯ, ವೀರತ್ವ, ಗಳಿಸಿದ ಹೆಸರು–ಬಿರುದುಗಳು ವ್ಯರ್ಥವಾಗಿ ಹೋಗುತ್ತವೆ. ಮುಂದೆಂದೂ ಸರಿಪಡಿಸದಂತೆ ಕೆಟ್ಟು ಹೋಗುತ್ತವೆ. ಹಾಗೆ

ಆಗದಿರಬೇಕಾದರೆ, ತನ್ನ ಬಾಹುಬಲವನ್ನು ಎರಡು ಸೇನೆಗಳೂ ಹೊಗಳುವಂತೆ ಯುದ್ಧ ಮಾಡಿ, ಯುದ್ಧಾಂತ್ಯದಲ್ಲಿ ರಾಮ ಲಕ್ಷ್ಮಣರನ್ನು ರಥರಹಿತರನ್ನಾಗಿ ಮಾಡಿ, ಸೆರೆಹಿಡಿದು, ಆ ಬಳಿಕ ಸೀತೆಯನ್ನು ಕೊಡುತ್ತೇನೆ.

ಗದ್ಯ: ಎಂದು ನಿರ್ಣಯ ಕೈಗೊಂಡು ತನ್ನ ಅರಮನೆಗೆ ಬರುತ್ತಾನೆ.

**ಅ) ಸಾಂದರ್ಭಿಕ ವಿವರಣೆ ಬಯಸುವ ವಾಕ್ಯಗಳು.**

1.ಕೃತಾಂತಜಿಹ್ವೆ ಪೊಡಕರಿಸವವೋಲ್.

ಆಯ್ಕೆ: ಈ ಮೇಲಿನ ವಾಕ್ಯವನ್ನು 'ಅಭಿನವ ಪಂಪ'ನೆಂದು ಖ್ಯಾತನಾಗಿರುವ, 'ನಾಗಚಂದ್ರ' ಕವಿಯು ರಚಿಸಿರುವ 'ರಾಮಚಂದ್ರಚರಿತ ಪುರಾಣ'ದಿಂದ ಆಯ್ದು, 'ಕದಡಿದ ಸಲಿಲಂ ತಿಳಿವಂದದೆ' ಎಂಬ ಕಾವ್ಯ ಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ರಾವಣನ ಎದುರಿಗೆ ಬಹುರೂಪಿಣಿ ವಿದ್ಯಾದೇವತೆ ಪ್ರತ್ಯಕ್ಷವಾಗುವ ಸಂದರ್ಭ ಇಲ್ಲಿದೆ.

ವಿವರಣೆ: ರಾವಣನು ಬಹುರೂಪಿಣಿ ವಿದ್ಯೆಯನ್ನು ಒಲಿಸಿಕೊಳ್ಳುವ ಸಲುವಾಗಿ ಶಾಂತಿಜಿನಭವನದಲ್ಲಿ ದೃಢಚಿತ್ತನಾಗಿ ಧ್ಯಾನಮಾಡುತ್ತಾನೆ.ಅವನ ಎದುರಿಗೆ ಆ ದೇವತೆಯು ಪ್ರತ್ಯಕ್ಷಗೊಂಡು ನುಡಿಯುವ ಸಂದರ್ಭವನ್ನು ಕವಿಯು ಈ ಮೇಲಿನ ವಾಕ್ಯದ ಮೂಲಕ ವಿವರಿಸಿದ್ದಾನೆ. ಯಮನ ನಾಲಿಗೆಯೇ ಸಂಚಲಿಸಿ ನುಡಿಯುತ್ತಿತ್ತೆಂದು ಕವಿವರ್ಯ ಹೇಳಬಯಸುತ್ತಾನೆ. ಯುದ್ಧದಲ್ಲಿ ನೆರವಾಗುವ ಬಹುರೂಪಿಣಿ ದೇವತೆಯನ್ನು ಯಮನ ನಾಲಿಗೆಗೆ ಹೋಲಿಕೆ ಮಾಡಿರುವುದು ತುಂಬಾ ಔಚಿತ್ಯಪೂರ್ಣವಾದ ಕಾರ್ಯವಾಗಿದೆ.

2. ಉಳಿದವರಳಿವೆನಗೇವುದೆಂ?

ಆಯ್ಕೆ: ಈ ಮೇಲಿನ ವಾಕ್ಯವನ್ನು 'ಅಭಿನವ ಪಂಪ'ನೆಂದು ಖ್ಯಾತನಾಗಿರುವ, 'ನಾಗಚಂದ್ರ' ಕವಿಯು ರಚಿಸಿರುವ 'ರಾಮಚಂದ್ರಚರಿತ ಪುರಾಣ'ದಿಂದ ಆಯ್ದು, 'ಕದಡಿದ ಸಲಿಲಂ ತಿಳಿವಂದದೆ' ಎಂಬ ಕಾವ್ಯ ಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ರಾವಣನು ಬಹುರೂಪಿಣೀ ವಿದ್ಯೆಯ ಬಳಿ ಪ್ರಶ್ನಿಸುವ ಸಂದರ್ಭ ಇಲ್ಲಿದೆ.

ವಿವರಣೆ : ರಾವಣನ ಎದುರು ಪ್ರತ್ಯಕ್ಷಳಾದ ವಿದ್ಯಾದೇವತೆಯು ರಾವಣನಲ್ಲಿ ಹೀಗೆ ಹೇಳುತ್ತಾಳೆ; "ಚಕ್ರಧಾರಿಯಾದ ಲಕ್ಷ್ಮಣನನ್ನು ಮತ್ತು ಚರಮದೇಹಧಾರಿಯಾದ ರಾಮ– ಇವರಿಬ್ಬರನ್ನುಳಿದು ಮಿಕ್ಕವರನ್ನೆಲ್ಲ ನಾಶಗೊಳಿಸುತ್ತೇನೆ"—ಎಂದು. ಆಗ ರಾವಣನು, "ಮಿಕ್ಕವರಸಾವಿನಿಂದನನಗೇನುಪ್ರಯೋಜನ?"– ಎನ್ನುತ್ತಾ ಈ ಮೇಲಿನಂತೆ ಹೇಳುತ್ತಾನೆ.

3. ಸಮಧಿಕರಾರ್ ಜಗತ್ತ್ರಯದೊಳಿನ್ನೆನಗೆ?

ಆಯ್ಕೆ: ಈ ಮೇಲಿನ ವಾಕ್ಯವನ್ನು 'ಅಭಿನವ ಪಂಪ'ನೆಂದು ಖ್ಯಾತನಾಗಿರುವ, 'ನಾಗಚಂದ್ರ' ಕವಿಯು ರಚಿಸಿರುವ 'ರಾಮಚಂದ್ರಚರಿತ ಪುರಾಣ'ದಿಂದ ಆಯ್ದ , 'ಕದಡಿದ ಸಲಿಲಂ ತಿಳಿವಂದದೆ' ಎಂಬ ಕಾವ್ಯ ಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ರಾವಣ ತನ್ನ ಶಕ್ತಿಯ ಕುರಿತಂತೆ ತಾನೇ ಹೇಳಿಕೊಳ್ಳುವ ಸಂದರ್ಭ ಇದಾಗಿದೆ.

ವಿವರಣೆ: ರಾವಣನು ಮಂಡೋದರಿಯ ಸಮೀಪ ಬಂದು "ನಿಮಗಿಷ್ಟು ಅಪಮಾನವನ್ನುಂಟುಮಾಡಿದ ಅಂಗದಾದಿಗಳನ್ನು ಹುಬ್ಬು ಗಂಟಿಕ್ಕುವ ಮಾತ್ರದಿಂದಲೆ ಬಂಧಿಸಿ, ಸೆರೆಹಿಡಿದು ನಿಮ್ಮ ಮುಂದೆ ತಂದು ದಂಡಿಸುವುದರ ಮೂಲಕ ನಿಮಗಾದ ಅಪಮಾನವನ್ನು ಕಳೆಯುತ್ತೇನೆ" – ಎಂದು ಅವರನ್ನು ಸಮಾಧಾನಪಡಿಸಿ, ಶಾಂತಿಜಿನಭವನದಲ್ಲಿ ಮಹಾಪೂಜೆಯನ್ನು ಮಾಡಿಸಿದನು. ನಿಯಮದಂತೆ ದಿವ್ಯವಾದ ಪ್ರಸಾದ ಭೋಜನವನ್ನುಂಡು, ಆ ಬಳಿಕ ಬಹುರೂಪಿಣೀ ವಿದ್ಯೆಯ ಪ್ರಭಾವವನ್ನು ಪರೀಕ್ಷಿಸಿ ನೋಡಿ, ಸಮಾಧಾನಗೊಂಡು ಸಂತೋಷವನ್ನು ಹೊಂದಿದ ರಾವಣನು ತನ್ನ ಬಾಹುಗಳನ್ನು ತಾನೇ ಅಭಿಮಾನದಿಂದ ನೋಡಿಕೊಳ್ಳುತ್ತ,

ಇನ್ನು ಮುಂದೆ (ಸ್ವರ್ಗ, ಮರ್ತ್ಯ, ಪಾತಾಳಗಳೆಂಬ) ಮೂರು ಲೋಕಗಳಲ್ಲೂ ನನ್ನನ್ನು ಜಯಿಸಬಲ್ಲವರಾರು? ಯುದ್ಧದಲ್ಲಿ ಎದುರಿಸುವವರಾರು? ಎಂದುಕೊಳ್ಳುವಾಗ ಈ ಮಾತು ಬಂದಿದೆ.

4. ಏನಂ ಕೇಳ್ದಪೆನೋ....ಪೊಲ್ಲವಾರ್ತೆಯನಿನ್.

ಆಯ್ಕೆ: ಈ ಮೇಲಿನ ವಾಕ್ಯವನ್ನು 'ಅಭಿನವ ಪಂಪ'ನೆಂದು ಖ್ಯಾತನಾಗಿರುವ, 'ನಾಗಚಂದ್ರ' ಕವಿಯು ರಚಿಸಿರುವ 'ರಾಮಚಂದ್ರಚರಿತ ಪುರಾಣ'ದಿಂದ ಆಯ್ದು, 'ಕದಡಿದ ಸಲಿಲಂ ತಿಳಿವಂದದೆ' ಎಂಬ ಕಾವ್ಯ ಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ತನ್ನನ್ನು ಕಾಣಲು ಬಂದ ರಾವಣನನ್ನು ಗಮನಿಸಿ, ಸೀತೆಯು ತನ್ನಲ್ಲಿ ತಾನು ಹೇಳಿಕೊಳ್ಳುವ, ಸಂದರ್ಭ ಇದಾಗಿದೆ.

ವಿವರಣೆ : ರಾವಣನು ತನ್ನ ಬಾಹುಗಳನ್ನು ತಾನೇ ಅಭಿಮಾನದಿಂದ ನೋಡಿಕೊಳ್ಳುತ್ತ, ಇನ್ನು ಮೂರು ಲೋಕಗಳಲ್ಲೂ ನನ್ನನ್ನು ಜಯಿಸಬಲ್ಲವರಾರು, ಯುದ್ಧದಲ್ಲಿ ಎದುರಿಸುವವರಾರು ಎಂದು ಗರ್ವಪಡುತ್ತಾನೆ. ಆ ನಂತರ ಸೀತಾದೇವಿಯ ವದನಾರವಿಂದವನ್ನು ನೋಡುವ ಕಾತರತೆಯುಳ್ಳವನಾಗಿ ಸೀತೆಯನ್ನು ಇರಿಸಿರುವ ಸ್ಥಳವಾದ ಪ್ರಮದವನಕ್ಕೆ ಬರುತ್ತಾನೆ. ಆದರೆ ರಾವಣನ ರೂಪವು ಸೀತಾದೇವಿಗೆ ಹುಲ್ಲುಕಡ್ಡಿಗಿಂತಲೂ ಅಲ್ಪವಾಗಿ ತೋರಿತು. ರಾವಣನು ಸೀತಾದೇವಿಯ ಬಳಿಗೆ ಧಾವಿಸಿ ಬರುವಾಗ ಆಕೆಯಲ್ಲಿ "ರಾಮಲಕ್ಷ್ಮಣರನ್ನು ಕುರಿತಂತೆ ತಾನು ಇನ್ನೇನು ಕೆಟ್ಟವಾರ್ತೆಯನ್ನು ಕೇಳುವೆನೋ ಎನ್ನುವಾಗ ಈ ಮೇಲಿನಂತೆ ಅಂದುಕೊಳ್ಳುತ್ತಾಳೆ.

5. ಅಸಾಧ್ಯಮಪ್ಪ ಮರುವಕ್ಕಮಿಲ್ಲ.

ಆಯ್ಕೆ: ಈ ಮೇಲಿನ ವಾಕ್ಯವನ್ನು 'ಅಭಿನವ ಪಂಪ'ನೆಂದು ಖ್ಯಾತನಾಗಿರುವ, 'ನಾಗಚಂದ್ರ' ಕವಿಯು ರಚಿಸಿರುವ 'ರಾಮಚಂದ್ರಚರಿತ ಪುರಾಣ'ದಿಂದ ಆಯ್ದು, 'ಕದಡಿದ ಸಲಿಲಂ ತಿಳಿವಂದದೆ' ಎಂಬ ಕಾವ್ಯ ಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಬಹುರೂಪಿಣೀ ವಿದ್ಯೆಯನ್ನು ಗಳಿಸಿದ ನಂತರ ರಾವಣನು ಸೀತೆಯ ಬಳಿ ಈ ಮಾತನ್ನು ಹೇಳುತ್ತಾನೆ.

ವಿವರಣೆ: ರಾವಣನು ಸೀತಾದೇವಿಯು ಇರುವ ಸ್ಥಳಕ್ಕೆ ಬರುವಾಗ, ಆಕೆ ತೀರಾ ಕಳವಳಕ್ಕೆ ಒಳಗಾಗುತ್ತಾಳೆ. ರಾಮ–ಲಕ್ಷ್ಮಣರನ್ನು ಕುರಿತಂತೆ ತಾನು ಇನ್ನೇನು ಕೆಟ್ಟವಾರ್ತೆಯನ್ನು ಕೇಳುವೆನೋ ಎಂದು ರಾವಣನನ್ನು ಕಂಡೊಡನೆ ಭೀತಿಗೊಂಡು ನಡುಗತೊಡಗುತ್ತಾಳೆ. ಹಾಗೆ ನಡುಗುತ್ತಿದ್ದ ಸೀತೆಯ ಸಮೀಪಕ್ಕೆ ಬಂದ ರಾವಣನು ಬಹುರೂಪಿಣೀ ವಿದ್ಯೆಯನ್ನು ನಾನು ಸಾಧಿಸಿದ್ದೇನೆ. ಇನ್ನು ನನಗೆ ಅಸಾಧ್ಯವಾದ ಕಾರ್ಯ ಯಾವುದೂ ಇಲ್ಲ, ನೀನು ರಾಮನ ಯೋಚನೆಯನ್ನು ಬಿಟ್ಟು, ನನ್ನನ್ನು ಹೊಂದಿ ಸಾಮ್ರಾಜ್ಯ ಸುಖವನ್ನನುಭವಿಸು ಎನ್ನುವಾಗ ಈ ಮೇಲಿನ ಮಾತು ಬಂದಿದೆ.

6. ರಘುತನೂಜನಾಯುಃಪ್ರಾಣಂಬರೆಗಂ ಬಾರದಿರು.

ಆಯ್ಕೆ: ಈ ಮೇಲಿನ ವಾಕ್ಯವನ್ನು 'ಅಭಿನವ ಪಂಪ'ನೆಂದು ಖ್ಯಾತನಾಗಿರುವ, 'ನಾಗಚಂದ್ರ' ಕವಿಯು ರಚಿಸಿರುವ 'ರಾಮಚಂದ್ರಚರಿತ ಪುರಾಣ'ದಿಂದ ಆಯ್ದ, 'ಕದಡಿದ ಸಲಿಲಂ ತಿಳಿವಂದದೆ' ಎಂಬ ಕಾವ್ಯ ಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಈ ಮಾತನ್ನು ಸೀತೆಯು ರಾವಣನಲ್ಲಿ ಹೇಳುತ್ತಾಳೆ.

ವಿವರಣೆ: ಸೀತೆಯ ಸಮೀಪಕ್ಕೆ ಬಂದ ರಾವಣನು ಬಹುರೂಪಿಣೀ ವಿದ್ಯೆಯನ್ನು ನಾನು ಸಾಧಿಸಿದ್ದೇನೆ. ಇನ್ನು ನನಗೆ ಅಸಾಧ್ಯವಾದ ಕಾರ್ಯ ಯಾವುದೂ ಇಲ್ಲ. ನೀನು ರಾಮನ ಯೋಚನೆಯನ್ನು ಬಿಟ್ಟು, ನನ್ನನ್ನು ಹೊಂದಿ ಸಾಮ್ರಾಜ್ಯ ಸುಖವನ್ನನುಭವಿಸು ಎನ್ನುತ್ತಾನೆ. ಆಗ ಸೀತೆ ಆತನ ಮಾತಿಗೆ ಪ್ರತಿಕ್ರಿಯಿಸುತ್ತಾ, ಕರುಣಿಸುವುದಿದ್ದರೆ ದಶವದನನೇ, ಶ್ರೀರಾಮನ ಆಯುಷ್ಯ ತೀರುವ ತನಕ, ಇಲ್ಲಿಗೆ ಬರಬೇಡ" ಎಂದು ಈ ಮೇಲಿನಂತೆ ಹೇಳುತ್ತಾಳೆ.

7. ಕದಡಿದ ಸಲಿಲಂ ತಿಳಿವಂದದೆ.

ಆಯ್ಕೆ : ಈ ಮೇಲಿನ ವಾಕ್ಯವನ್ನು 'ಅಭಿನವ ಪಂಪ'ನೆಂದು ಖ್ಯಾತನಾಗಿರುವ, 'ನಾಗಚಂದ್ರ' ಕವಿಯು ರಚಿಸಿರುವ 'ರಾಮಚಂದ್ರಚರಿತ ಪುರಾಣ'ದಿಂದ ಆಯ್ದ, 'ಕದಡಿದ ಸಲಿಲಂ ತಿಳಿವಂದದೆ' ಎಂಬ ಕಾವ್ಯ ಭಾಗದಿಂದ ಆರಿಸಲಾಗಿದೆ.

ಸಂದರ್ಭ: ರಾವಣನಿಗೆ ಸೀತೆಯ ಬಗ್ಗೆ ಹೊಂದಿರುವ ಕೆಟ್ಟ ಭಾವನೆ ಮರೆಯಾಗಿ, ಮನಃಪರಿವರ್ತನೆಯಾಗುವ ಸಂದರ್ಭ ಇದಾಗಿದೆ.

ವಿವರಣೆ: ರಾವಣನು ತಾನು ಬಹುರೂಪಿಣೀ ವಿದ್ಯೆಯನ್ನು ನಾನು ಸಾಧಿಸಿದ್ದೇನೆ. ಇನ್ನು ನನಗೆ ಅಸಾಧ್ಯವಾದ ಕಾರ್ಯ ಯಾವುದೂ ಇಲ್ಲ, ನೀನು ರಾಮನ ಯೋಚನೆಯನ್ನು ಬಿಟ್ಟು, ನನ್ನನ್ನು ಹೊಂದಿ ಸಾಮ್ರಾಜ್ಯ ಸುಖವನ್ನನುಭವಿಸು". – ಎಂದನು. ಆಗ ಸೀತಾದೇವಿ ಅತೀವವಾಗಿ ದುಃಖ ಪಡುತ್ತಾಳೆ. ರಾವಣನ ಮಾತಿಗೆ ಪ್ರತಿಸ್ಪಂದಿಸುತ್ತಾ ಸೀತೆ ಹೀಗೆ ಹೇಳುತ್ತಾಳೆ. ಕರುಣಿಸುವುದಿದ್ದರೆ ದಶವದನನೇ ಶ್ರೀರಾಮನ ಆಯುಷ್ಯ ತೀರುವ ತನಕ ಇಲ್ಲಿಗೆ ಬರಬೇಡ ಎಂದು. ಹಾಗೆ ಹೇಳಿದವಳೇ ಮೂರ್ಛೆ ಕಳಕೊಂಡು ಭೂಮಿಯ ಮೇಲೆ ಬೀಳುತ್ತಾಳೆ. ಆಗ ರಾವಣನಿಗೆ ಆಕೆಯ ಬಗೆಗೆ ಅನುಕಂಪ ಹುಟ್ಟುತ್ತದೆ. ಆತ ಕರುಣೆದೋರುತ್ತಾನೆ. ಕದಡಿ ಹೋದ ಕೊಳದ ನೀರು ತನ್ನಷ್ಟಕ್ಕೇ ತಿಳಿಗೊಳ್ಳುವಂತೆ; ರಾವಣನಿಗೆ ತನ್ನೊಳಗೆ ಬದಲಾವಣೆಯಾಯಿತು ಎನ್ನುವಾಗ, ಈ ಮೇಲಿನ ಮಾತು ಬಂದಿದೆ.

8. ಉದಾತ್ತನೊಳ್ ಪುಟ್ಟದಲ್ತೆ ನೀಲಿರಾಗಂ

ಆಯ್ಕೆ: ಈ ಮೇಲಿನ ವಾಕ್ಯವನ್ನು 'ಅಭಿನವ ಪಂಪ'ನೆಂದು ಖ್ಯಾತನಾಗಿರುವ, 'ನಾಗಚಂದ್ರ' ಕವಿಯು ರಚಿಸಿರುವ 'ರಾಮಚಂದ್ರಚರಿತ ಪುರಾಣ'ದಿಂದ ಆಯ್ದ, 'ಕದಡಿದ ಸಲಿಲಂ ತಿಳಿವಂದದೆ' ಎಂಬ ಕಾವ್ಯ ಭಾಗದಿಂದ ಆರಿಸಲಾಗಿದೆ.

ಸಂದರ್ಭ: ಉದಾತ್ತನಾದ ರಾವಣನ ಮನಃ ಪರಿವರ್ತನೆಯ ಕುರಿತಂತೆ ತಿಳಿಸುವ ಸಂದರ್ಭ ಇದಾಗಿದೆ.

ವಿವರಣೆ: ಜಾನಕಿಯು ಮೂರ್ಛಿತಳಾಗಲು ರಾವಣನಿಗೆ ಆಕೆಯ ಬಗ್ಗೆ ಅನುಕಂಪ ಹುಟ್ಟುತ್ತದೆ. ಆತ ಕರುಣೆದೋರುತ್ತಾನೆ. ಅಲ್ಲದೆ ತನ್ನನ್ನು ತಾನೇ ಬೈದುಕೊಳ್ಳುತ್ತಾನೆ. ಕರ್ಮಾಧೀನನಾಗಿ ತಾನು ಮಾಡಿದ ಹೀನಕರ್ಮದ ಪರಿಣಾಮ ಎಷ್ಟು ಘೋರವಾದುದು ಎಂದು ಅರಿತು ಪರಿತಪಿಸುತ್ತಾನೆ. ಸೀತೆ ಮೂರ್ಛಿತಳಾಗುವವರೆಗೂ ರಾವಣನ ಮನಸ್ಸು ಕಲುಷಿತಗೊಂಡಿತ್ತು. ತನ್ನ ತಪ್ಪಿನ ಅರಿವಿನ ನಂತರ ತಿಳಿಯಾಗ ತೊಡಗಿತು. ಉದಾತ್ತನಾದವನಲ್ಲಿ ದುರಾಸೆಯು ಹೇಗೆ ಸ್ಥಿರವಾಗಿ ನಿಲ್ಲಲಾರದೋ ಹಾಗೆ ರಾವಣನಿಗೆ ಸೀತೆಯಲ್ಲಿ ವೈರಾಗ್ಯ ಹುಟ್ಟಿತು ಎನ್ನುವಾಗ ಈ ಮೇಲಿನ ಮಾತು ಬಂದಿದೆ.

9. ಅಪೇಕ್ಷಿಸುವನೇ ಗುಣಹಾನಿಯನೆನ್ನ ಪಾಪದಿಂ.

ಆಯ್ಕೆ: ಈ ಮೇಲಿನ ವಾಕ್ಯವನ್ನು 'ಅಭಿನವ ಪಂಪ'ನೆಂದು ಖ್ಯಾತನಾಗಿರುವ, 'ನಾಗಚಂದ್ರ' ಕವಿಯು ರಚಿಸಿರುವ 'ರಾಮಚಂದ್ರಚರಿತ ಪುರಾಣ'ದಿಂದ ಆಯ್ದ, 'ಕದಡಿದ ಸಲಿಲಂ ತಿಳಿವಂದದೆ' ಎಂಬ ಕಾವ್ಯ ಭಾಗದಿಂದ ಆರಿಸಲಾಗಿದೆ.

ಸಂದರ್ಭ: ರಾವಣ ತನ್ನ ತಪ್ಪಿನ ಮನವರಿಕೆಯನ್ನು ಮಾಡಿಕೊಳ್ಳುವ ಸಂದರ್ಭ ಇದಾಗಿದೆ.

ವಿವರಣೆ: ಮನಸ್ಸಿನಲ್ಲಿ ಮೂಡಿದ ಕಾರುಣ್ಯ ರಸದಿಂದ ಸೀತೆಯಲ್ಲಾದ ಅನುರಕ್ತತೆಯನ್ನು ತಿಕ್ಕಿ ತೊಳೆಯುವಂತೆ ರಾವಣನು ಸಂಪೂರ್ಣವಾಗಿ ಕಳೆದುಕೊಳ್ಳುತ್ತಾನೆ. ತನ್ನ ಆಪ್ತವಲಯದ ಜನರನ್ನುದ್ದೇಶಿಸಿ ಆತ ಸೀತೆ ಸದ್ಗುಣಿ, ಆ ಸದ್ಗುಣತ್ವವನ್ನು ಆಚರಿಸುವ ಸಲುವಾಗಿಯೇ ನಾನು ಹೊಂದಿರುವ ದಿವ್ಯವಾದ ವಸ್ತ್ರ, ಆಭರಣ, ಅಂಗ ಸುಖದ ಆಮಿಷಗಳನ್ನು ಒಪ್ಪದೆ ಗಂಧರ್ವ ರಾಜ್ಯಲಕ್ಷ್ಮಿಯನ್ನು ಹುಲ್ಲುಕಡ್ಡಿಗೆ ಸಮನಾಗಿ ಭಾವಿಸಿದಳು. ಅದೂ ಅಲ್ಲದೆ ನಾನು ಪೌರುಷ ಪ್ರಣಯಿ. ನನ್ನ ಪಾಪದಿಂದ ಹೀಗೆ ಗುಣಹಾನಿಯನ್ನು ಬಯಸುತ್ತೇನೆಯೇ ಎಂದು ಹೇಳುವಾಗ ಈ ಮಾತು ಬಂದಿದೆ.

10. ಕಂದರ್ಪ ವಿಮೋಹದಿಂದಗಲ್ಚಿದೆ.

ಆಯ್ಕೆ: ಈ ಮೇಲಿನ ವಾಕ್ಯವನ್ನು 'ಅಭಿನವ ಪಂಪ'ನೆಂದು ಖ್ಯಾತನಾಗಿರುವ, 'ನಾಗಚಂದ್ರ' ಕವಿಯು ರಚಿಸಿರುವ 'ರಾಮಚಂದ್ರಚರಿತ ಪುರಾಣ'ದಿಂದ ಆಯ್ದ, 'ಕದಡಿದ ಸಲಿಲಂ ತಿಳಿವಂದದೆ' ಎಂಬ ಕಾವ್ಯ ಭಾಗದಿಂದ ಆರಿಸಲಾಗಿದೆ.

ಸಂದರ್ಭ: ರಾವಣನು ತಾನು ಗೈದ ಕಾರ್ಯಕ್ಕೆ ಪಶ್ಚಾತ್ತಾಪ ಪಟ್ಟುಕೊಳ್ಳುವ ಸಂದರ್ಭ ಇದಾಗಿದೆ.

ವಿವರಣೆ: ರಾವಣನೇ ಹೇಳುವಂತೆ ಸೀತೆ ಸದ್ಗುಣಿ. ಆ ಸದ್ಗುಣತ್ವವನ್ನು ಆಚರಿಸುವ ಸಲುವಾಗಿಯೇ ನಾನು ಹೊಂದಿದ್ದ ದಿವ್ಯವಾದ ವಸ್ತ್ರ, ಆಭರಣ, ಅಂಗ ಸುಖದ ಆಮಿಷಗಳನ್ನು ಒಪ್ಪದೆ ಗಂಧರ್ವ ರಾಜ್ಯಲಕ್ಷ್ಮಿಯನ್ನು ಹುಲ್ಲುಕಡ್ಡಿಗೆ ಸಮನಾಗಿ ಭಾವಿಸಿದಳು ಈ ಸತಿಯು. ಅದೂ ಅಲ್ಲದೆ ನಾನು ಪೌರುಷ ಪ್ರಣಯಿ. ನನ್ನ ಪಾಪದಿಂದ ಹೀಗೆ ಗುಣಹಾನಿಯನ್ನು ಬಯಸುತ್ತೇನೆಯೇ ಎನ್ನುತ್ತಾನೆ. ಪ್ರಾಣ ಪ್ರಿಯರಾದ ರಾಮ ಸೀತೆಯರನ್ನು ದೂರಮಾಡಲು ಯಾವ ಪೂರ್ವ ಯೋಜಿತ ಕಾರಣಗಳಿರಲಿಲ್ಲ. ನನ್ನ ಕರ್ಮವಶದಿಂದ ದೂರ ಮಾಡಿದೆನು. ಮನ್ಮಥನ ಬಾಣಕ್ಕೆ ತುತ್ತಾಗಿ ಅವಿವೇಕತನದಿಂದ, ಕುಲದ ಹಿರಿಮೆಯನ್ನು ನಾನೇ ನಾಶ ಮಾಡುವಂತೆ ಈ ಹೀನ ಕಾರ್ಯವನ್ನು ಮಾಡಿದೆನು ಎನ್ನುವಾಗ ಈ ಮೇಲಿನ ಮಾತು ಬಂದಿದೆ.

11. ಮಾನಿನಿಗಿನಿತು ದುಃಖಮಂ ಪುಟ್ಟಿಸಿದೆಯಂ.

ಆಯ್ಕೆ: ಈ ಮೇಲಿನ ವಾಕ್ಯವನ್ನು 'ಅಭಿನವ ಪಂಪ'ನೆಂದು ಖ್ಯಾತನಾಗಿರುವ, 'ನಾಗಚಂದ್ರ' ಕವಿಯು ರಚಿಸಿರುವ 'ರಾಮಚಂದ್ರಚರಿತ ಪುರಾಣ'ದಿಂದ ಆಯ್ದ, 'ಕದಡಿದ ಸಲಿಲಂ ತಿಳಿವಂದದೆ' ಎಂಬ ಕಾವ್ಯ ಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ತಿಳಿದುಕೊಂಡು ಎಚ್ಚೆತ್ತ ರಾವಣ ತನ್ನ ಸ್ವಗತದಲ್ಲಿ ಹೇಳುವ ಸಂದರ್ಭ ಇಲ್ಲಿದೆ.

ವಿವರಣೆ : ಶ್ರೀ ರಾಮನಿಂದ ಅಗಲಿಸಿ ಸೀತೆಯನ್ನು ಕರೆತಂದುದಕ್ಕೆ ರಾವಣನಲ್ಲಿ ಅಪಾರವಾದ ಕರುಣೆ , ಮರುಕವಿದೆ. ರಾಮನಿಂದ ಅಗಲಿಸಿ ಇವಳನ್ನು ಹೊತ್ತುತಂದುದರಿಂದ ಈಕೆಗೆ ತುಂಬಾ ದುಃಖವನ್ನುಂಟುಮಾಡಿದೆನೆಂದು ಆತ ಯೋಚಿಸುತ್ತಾನೆ. ಕಾಮವಶನಾಗಿ ತಾನು ಈ ರೀತಿಯ ತನಗೆ ತಕ್ಕುದಲ್ಲದ, ತನ್ನ ಘನತೆಯನ್ನು ಹಾಳುಮಾಡುವಂತಹ ಅಪಚಾರ ಮಾಡಿದ್ದಕ್ಕೆ ಅವನಿಗೆ ಪಶ್ಚಾತ್ತಾಪ ಉಂಟಾಗುತ್ತದೆ.

12. ರಣಾಗ್ರದೊಳ್ ಪಿಡಿದು ತಂದಾಂ ಕೊಟ್ಟಪೆಂ.

ಆಯ್ಕೆ: ಈ ಮೇಲಿನ ವಾಕ್ಯವನ್ನು 'ಅಭಿನವ ಪಂಪ'ನೆಂದು ಖ್ಯಾತನಾಗಿರುವ, 'ನಾಗಚಂದ್ರ' ಕವಿಯು ರಚಿಸಿರುವ 'ರಾಮಚಂದ್ರಚರಿತ ಪುರಾಣ'ದಿಂದ ಆಯ್ದ, 'ಕದಡಿದ ಸಲಿಲಂ ತಿಳಿವಂದದೆ' ಎಂಬ ಕಾವ್ಯ ಭಾಗದಿಂದ ಆರಿಸಲಾಗಿದೆ.

ಸಂದರ್ಭ: ರಾವಣ ಹೇಳುವ ಮಾತು ಇದಾಗಿದೆ.

ವಿವರಣೆ: ರಾವಣನು ಕೊನೆಯಲ್ಲಿ ಸೀತೆಯ ಮೇಲೆ ವಿರಕ್ತಿಯನ್ನು ಹೊಂದಿದ್ದರೂ, ಆಕೆಯನ್ನು ಸುಮ್ಮನೆ ರಾಮನಿಗೆ ಒಪ್ಪಿಸಲು ಅತನ ಮನಸ್ಸು ಒಪ್ಪದಾಯಿತು. ಸುಮ್ಮನೇ ರಾಘವನಿಗೊಪ್ಪಿಸಿದೆಯೆಂದಾದರೆ... ನನ್ನ ಪರಾಕ್ರಮ, ಹೆಚ್ಚಿನದ್ದಾದ ಸಾಮರ್ಥ್ಯ, ವೀರತ್ವ, ಗಳಿಸಿದ ಹೆಸರು – ಬಿರುದುಗಳು ವ್ಯರ್ಥವಾಗಿ ಹೋಗುತ್ತವೆ. ಮುಂದೆಂದೂ ಸರಿಪಡಿಸದಂತೆ ಕೆಟ್ಟು ಹೋಗುತ್ತವೆ. ಆದ ಕಾರಣ ತನ್ನ ಬಾಹುಬಲವನ್ನು ಎರಡು ಸೇನೆಗಳೂ ಹೊಗಳುವಂತೆ ಯುದ್ಧ ಮಾಡಿ, ಯುದ್ಧಾಂತ್ಯದಲ್ಲಿ ರಾಮ ಲಕ್ಷ್ಮಣರನ್ನು ರಥವಿಹೀನರನ್ನಾಗಿ ಮಾಡಿ, ಸೆರೆಹಿಡಿದು ಆ ಬಳಿಕ ಸೀತೆಯನ್ನು ಮರಳಿ ಒಪ್ಪಿಸುತ್ತೇನೆ, ಎನ್ನುವಾಗ ಈ ಮೇಲಿನ ಮಾತು ಬಂದಿದೆ.

**ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):**

1. ರಾವಣನು ಬಹುರೂಪಿಣೀ ವಿದ್ಯೆಯನ್ನು ಒಲಿಸಿಕೊಂಡ ಸಂದರ್ಭವನ್ನು ವಿವರವಾಗಿ ಬರೆಯಿರಿ.

ರಾವಣನು ಧ್ರುವಮಂಡಲದಂತೆ ನಿಶ್ಚಲನಾಗಿ ನಿಂತುಕೊಂಡು ಮನೋನಿಗ್ರಹವನ್ನು ಮಾಡಿ ದಿವ್ಯ ಮಂತ್ರೋಚ್ಚರಣೆಯಿಂದ ಬಹುರೂಪಿಣೀ ವಿದ್ಯೆಯ ಸಾಧನೆಯನ್ನು ಮಾಡುತ್ತಾನೆ. ಆಗ ವಿದ್ಯಾಧಿದೇವತೆಯು ಮುಂಗಾರ ಸಿಡಿಲಿನ ಆರ್ಭಟವನ್ನೂ ಮೀರುವಂತೆ, ಯಮನ ನಾಲಗೆಯು ಕಂಪಿಸಿತೆಂಬಂತೆ ತನ್ನ ಕರಗಳನ್ನು ಹರಡಿಕೊಂಡು, “ಹೇಳು... ಹೇಳು”..ಎಂದು ನುಡಿದು ರಾವಣನ ಎದುರು ಪ್ರತ್ಯಕ್ಷವಾದಳು. ಹಾಗೆ ಪ್ರತ್ಯಕ್ಷಳಾದ ವಿದ್ಯಾದೇವತೆಯು ರಾವಣನಲ್ಲಿ ಹೀಗೆ ಹೇಳುತ್ತಾಳೆ; “ಚಕ್ರಧಾರಿಯಾದ ಲಕ್ಷ್ಮಣನನ್ನು ಮತ್ತು ಕೊನೆಯ ಜನ್ಮದಲ್ಲಿರುವ ರಾಮ ಇವರಿಬ್ಬರನ್ನುಳಿದು ಮಿಕ್ಕವರನ್ನೆಲ್ಲ ನಾಶಗೊಳಿಸುತ್ತೇನೆ” ಎಂದು. ಆಗ ರಾವಣನು, “ಮಿಕ್ಕವರ ಸಾವಿನಿಂದ ನನಗೇನು ಪ್ರಯೋಜನ?” ಎನ್ನುತ್ತ ಆ ವಿದ್ಯಾಧಿದೇವತೆಗೆ ನಮಸ್ಕರಿಸಿ, ಶಾಂತಿ ಜಿನಭವನವನ್ನು ಮೂರುಬಾರಿ ಪ್ರದಕ್ಷಿಣೆ ಮಾಡಿ ಅಲ್ಲಿಂದ ಹೊರ ಬರುತ್ತಾನೆ. ರಾವಣನಿಗೆ ರಾಮ ಲಕ್ಷ್ಮಣರನ್ನು ಸೋಲಿಸುವುದು ಕಷ್ಟವೆಂದು ತಿಳಿದಿದ್ದರೂ ಅವರನ್ನು ಕೆಣಕಲು ಮುಂದಾಗುವುದು ಅವನಲ್ಲಿನ ವಿವೇಕ ನಾಶವಾಗಿರುವುದನ್ನು ಸಂಕೇತಿಸುತ್ತದೆ.

2. ಪ್ರಮದವನದಲ್ಲಿ ರಾವಣ – ಸೀತೆಯರ ನಡುವೆ ನಡೆದ ಸಂಭಾಷಣೆಯನ್ನು ವಿವರಿಸಿ.

ರಾವಣನು ಬಹುರೂಪಿಣೀ ವಿದ್ಯೆಯನ್ನು ಒಲಿಸಿಕೊಂಡ ನಂತರ ಪ್ರಮದವನದಲ್ಲಿರುವ ಸೀತೆಯ ಬಳಿಗೆ ಬರುತ್ತಾನೆ. ಬಂದವನು ಸೀತೆಯನ್ನು ಕಂಡು ಹೀಗೆ ಹೇಳುತ್ತಾನೆ. ಬಹುರೂಪಿಣೀ ವಿದ್ಯೆಯನ್ನು ನಾನು ಸಾಧಿಸಿದ್ದೇನೆ. ಇನ್ನು ನನಗೆ ಅಸಾಧ್ಯವಾದ ಕಾರ್ಯ ಯಾವುದೂ ಇಲ್ಲ, ನೀನು ರಾಮನ ಯೋಚನೆಯನ್ನು ಬಿಟ್ಟು ನನ್ನನ್ನು ಹೊಂದಿ ಸಾಮ್ರಾಜ್ಯಸುಖವನ್ನನುಭವಿಸು ಎನ್ನುತ್ತಾನೆ. ರಾವಣನ ಈ ಮಾತುಗಳನ್ನು ಕೇಳಿ ಆಕೆ ಅತೀವವಾಗಿ ದುಃಖಿಸುತ್ತಾಳೆ.

ನಂತರ ಸೀತೆಯು ರಾವಣನನ್ನು ಉದ್ದೇಶಿಸಿ ಹೀಗೆ ಹೇಳುತ್ತಾಳೆ– ಕರುಣಿಸುವುದಿದ್ದರೆ ಎಲೇ ದಶವದನನೇ, ಶ್ರೀರಾಮನ ಆಯುಷ್ಯ ತೀರುವ ತನಕ, ಇಲ್ಲಿಗೆ ಬರಬೇಡ" ಎಂದು. ಆಕೆಗೆ ಗೊತ್ತು ರಾವಣನಿಂದ ರಾಮನನ್ನು ಏನು ಮಾಡಲು ಸಾಧ್ಯವಿಲ್ಲ ಎಂದು. ಅಲ್ಲದೆ ರಾವಣನು ತನ್ನ ಕಾರಣಕ್ಕಾಗಿ ಬಂದಿರುವುದು ಆಕೆಗೆ ಎಳ್ಳಷ್ಟು ಇಷ್ಟವಿರಲಿಲ್ಲ. ಹಾಗೇ ಹೇಳಿದವಳೇ ಮೂರ್ಛೆಗೊಂಡು ಭೂಮಿಯ ಮೇಲೆ ಬೀಳುತ್ತಾಳೆ. ಆಕೆಯ ಸ್ಥಿತಿಯನ್ನು ಕಂಡ ರಾವಣನಿಗೆ ಅನುಕಂಪ ಹುಟ್ಟುತ್ತದೆ. ಆಕೆಯ ಬಗೆಗಿನ ವ್ಯಾಮೋಹ ದೂರವಾಗಿ, ವೈರಾಗ್ಯವನ್ನು ತಾಳುತ್ತಾನೆ.

3. ರಾವಣನ ಮನ:ಪರಿವರ್ತನೆಯ ಸಂದರ್ಭವನ್ನು ಕವಿ ಹೇಗೆ ಚಿತ್ರಿಸಿದ್ದಾನೆ? ವಿವರಿಸಿ.

ರಾವಣನ ರೂಪವು ಸೀತಾ ದೇವಿಗೆ ತೃಣ ಸಮಾನವೆನಿಸಿತ್ತು. ಆಕೆ ತನ್ನನ್ನು ಕಾಣಲು ಪ್ರಮದವನಕ್ಕೆ ಬರುತ್ತಿರುವ ರಾವಣನು ಇನ್ನೇನು ಕೆಟ್ಟ ಸುದ್ಧಿಯನ್ನು ತಂದಿರುವನೋ ಎಂದು ತಲ್ಲಣಗೊಳ್ಳುತ್ತಾಳೆ. ಅಲ್ಲಿಗೆ ಬಂದ ರಾವಣನು ಸೀತೆಯಲ್ಲಿ ನನಗೆ ಬಹೂರೂಪಿಣೀ ವಿದ್ಯೆ ಸಿದ್ಧಿಸಿದೆ. ಇನ್ನು ನನಗೆ ಅಸಾಧ್ಯವಾದುದು ಯಾವುದೂ ಇಲ್ಲ, ನೀನು ನನ್ನನ್ನು ಒಪ್ಪಿಕೊಂಡು ಸುಖದಿಂದಿರು ಎಂದಾಗ, ಸೀತೆಯು ರಾವಣನಲ್ಲಿ ರಾಮನ ಆಯುಷ್ಯ ಮುಗಿಯುವ ವರೆಗೆ ಇಲ್ಲಿಗೆ ಬರಬೇಡ ಎನ್ನುವುದಾಗಿ ಹೇಳಿ ಮೂರ್ಛೆ ಹೋಗುತ್ತಾಳೆ. ಜಾನಕಿಯು ಮೂರ್ಛಿತಳಾಗಲು ರಾವಣನಲ್ಲಿ ಅನುಕಂಪ ಹುಟ್ಟುತ್ತದೆ. ಆತ ಅಕೆಯ ಬಗೆಗೆ ಕರುಣೆಯನ್ನು ತೋರುತ್ತಾನೆ. ಅಲ್ಲದೆ ತನ್ನನ್ನು ತಾನೇ ಬೈದುಕೊಳ್ಳುತ್ತಾನೆ. ಕರ್ಮಾಧೀನನಾಗಿ ತಾನು ಮಾಡಿದ ಹೀನಕರ್ಮದ ಪರಿಣಾಮ ಎಷ್ಟು ಘೋರವಾದುದು – ಎಂದು ಅರಿತು ಪರಿತಪಿಸುತ್ತಾನೆ.

ಕದಡಿ ಹೋದ ಕೊಳದ ನೀರು ತನ್ನಷ್ಟಕ್ಕೇ ತಿಳಿಗೊಳ್ಳುವಂತೆ ರಾವಣನೂ ತನ್ನಿಂದ ತಾನೆ ಬದಲಾಗುತ್ತಾನೆ. ಉದಾತ್ತನಾದವನಲ್ಲಿ ದುರಾಸೆಯು ಹೇಗೆ ಸ್ಥಿರವಾಗಿ ನಿಲ್ಲಲಾರದೋ ಹಾಗೆ ರಾವಣನಿಗೆ

ಸೀತೆಯಲ್ಲಿ ವೈರಾಗ್ಯ ಹುಟ್ಟಿತು. ತನಗೆ ಅಂಟಿಕೊಂಡ ಸಂಜೆ ಬಣ್ಣವನ್ನು ರವಿಯು ಕಳೆದುಕೊಂಡು ಹೇಗೆ ಮರುದಿನ ಮತ್ತೆ ಕಾಂತಿಯುಕ್ತನಾಗಿ ಕಾಣುತ್ತಾನೆಯೋ, ಹಾಗೆ ರಾವಣನೂ ಕೂಡ ತಾನು ಹೊಂದಿದ್ದ ಕೆಟ್ಟದ್ದನ್ನು ಕಳೆದು ಪರಿಶುದ್ಧನಾಗುತ್ತಾನೆ.

4. ರಾವಣನಲ್ಲಿ ಕಂಡುಬರುವ ಪಶ್ಚಾತ್ತಾಪವನ್ನು ಕವಿ ಹೇಗೆ ನಿರೂಪಿಸಿದ್ದಾನೆ?

ರಾವಣನಿಗೆ ತಾನು ಕೈಗೊಂಡ ಕಾರ್ಯ ತಪ್ಪು ಎಂದು ಅರಿವಿಗೆ ಬಂದಾಗ ಆತ ತುಂಬಾ ಪಶ್ಚಾತ್ತಾಪ ಪಟ್ಟುಕೊಳ್ಳುತ್ತಾನೆ. ಪ್ರಾಣ ಪ್ರಿಯರಾದ ರಾಮ ಸೀತೆಯರನ್ನು ದೂರಮಾಡಲು ಯಾವ ಪೂರ್ವಯೋಜಿತ ಕಾರಣಗಳಿರಲಿಲ್ಲ. ನನ್ನ ಕರ್ಮವಶದಿಂದ ನಾನು ಅವರಿಬ್ಬರನ್ನು ಪರಸ್ಪರ ದೂರ ಮಾಡಿದೆನು. ಮನ್ಮಥನ ಬಾಣಕ್ಕೆ ತುತ್ತಾಗಿ ಅವಿವೇಕತನದಿಂದ, ಕುಲದ ಹಿರಿಮೆಯನ್ನು ನಾನೇ ನಾಶ ಮಾಡುವಂತೆ ಈ ಹೀನ ಕಾರ್ಯವನ್ನು ಮಾಡಿದೆನು. ಸೀತೆಯನ್ನು ರಾಮನಿಂದ ಅಗಲುವಂತೆ ಮಾಡಿ ನಾನು ಈ ಮಾನಿನಿಗೆ ಇಷ್ಟು ದುಃಖವನ್ನು ಕೊಟ್ಟೆನು. ಕಾಮ ವ್ಯಾಮೋಹಕ್ಕೆ ಒಳಗಾದದ್ದರಿಂದಾಗಿಯೇ ಕೆಟ್ಟ ಯಶಸ್ಸು ಎಂಬ ಭೇರಿಯ ನಾದ ಎಲ್ಲೆಡೆ ಹರಡುವಂತಾಯಿತು. ನನಗೆ ವಿಭೀಷಣನು ಆದರದಿಂದಲೇ ಹಿತನುಡಿಗಳನ್ನು ಹೇಳಿದನು. ಆತನನ್ನು ವಿನಯವಂತನಲ್ಲದ ನಾನು, ದುರ್ವ್ಯಸನಿಯಾದ ನಾನು, ಬೆದರಿಸಿ ಹೆದರಿಸಿ ವಿನಯವಂತನಾದ ನನ್ನ ತಮ್ಮನನ್ನು ಹೊಡೆದೋಡಿಸಿ ಲಂಕೆಯಿಂದ ಹೊರಕ್ಕೆ ಕಳುಹಿಸಿದೆ.

ವ್ಯಸನಗಳ ಹಿಡಿತಕ್ಕೆ ಸಿಲುಕಿದ ಯಾವನೂ ಅನುರಾಗದ ಸೆಳೆವಿನಿಂದ ಯಾವುದು ಹಿತ ಯಾವುದು ಅಹಿತ ಎಂಬ ಚಿಂತನೆಯನ್ನು ಏಕೆ ಮಾಡುತ್ತಾನೆ ಎಂದು ತನ್ನಿಂದ ಆದ ತಪ್ಪಿಗೆ ಪರಿತಪಿಸುತ್ತಾನೆ. ವ್ಯಸನಕ್ಕೆ ಬಲಿಬಿದ್ದ ಮನುಷ್ಯನು ತನ್ನ ಹಿಂದಿನ ಎಲ್ಲಾ ವಿಚಾರಗಳನ್ನು ಮರೆತು, ವಿಷಯ ಸುಖವೆಂಬ ಮದ್ಯದ ಅಮಲಿಗೊಳಗಾಗಿ ವಿವೇಚನೆಯನ್ನು ಕಳಕೊಳ್ಳುತ್ತಾನೆ ಎಂದು ವಿಧವಿಧವಾಗಿ ಪಶ್ಚಾತ್ತಾಪ ಪಡುತ್ತಾನೆ.

5. ಕದಡಿದ ಸಲಿಲಂ ತಿಳಿವಂದದೆ ಕಾವ್ಯಭಾಗದಲ್ಲಿ ಕಂಡುಬರುವ ರಾವಣನ ವ್ಯಕ್ತಿತ್ವವನ್ನು ವಿಮರ್ಶಿಸಿ ನಿಮ್ಮ ಮಾತುಗಳಲ್ಲಿ ಉತ್ತರಿಸಿ.

ಕದಡಿದ ಸಲಿಲಂ ತಿಳಿವಂದದೆ ಎನ್ನುವ ಕಾವ್ಯಭಾಗದಲ್ಲಿ ರಾವಣನು ಉದಾತ್ತ ನಾಯಕನಾಗಿಯೇ ಕಂಡು ಬರುತ್ತಾನೆ. ನಳಕೂಬರನ ಪತ್ನಿ ಉಪರಂಭೆಯು ಈತನನ್ನು ಬಯಸಿ ಬಂದಾಗ ಆಕೆಗೆ ಸದುಪದೇಶ ನೀಡಿ ಮರಳಿ ಕಳುಹಿಸುವ ರಾವಣ, ಖರದೂಷಣರ ನೆರವಿಗೆಂದು ಬಂದವನು ಸೀತೆಯ ರೂಪಕ್ಕೆ ಮಾರುಹೋಗುತ್ತಾನೆ. ಇದು ಕವಿಯ ಪ್ರಕಾರ ರಾವಣನ ವಿಧಿಲಿಖಿತ.

ಬಹುರೂಪಿಣೀ ವಿದ್ಯೆಯನ್ನು ಒಲಿಸಿಕೊಂಡು ರಾಮ–ಲಕ್ಷ್ಮಣರನ್ನು ಸೋಲಿಸಲು ಮುಂದಾಗುವ ರಾವಣನಿಗೆ, ಆ ವಿದ್ಯಾದೇವತೆಯಿಂದ ಅವರನ್ನು ಸೋಲಿಸುವುದು ಅಸಾಧ್ಯ ಎಂದು ತಿಳಿದಾಗ ಹೆದರದೆ ಶಾಂತಿಜಿನಭವನಕ್ಕೆ ಮಹಾಪೂಜೆಯನ್ನು ಸಲ್ಲಿಸಿ, ಸೀತೆಯನ್ನು ಕಾಣಲು ಪ್ರಮದವನಕ್ಕೆ ಹೋಗುತ್ತಾನೆ. ಸೀತೆಯನ್ನು ಕಂಡ ಆತ, ಅಕೆಯಲ್ಲಿ ತನ್ನ ಪರಾಕ್ರಮದ ಬಗ್ಗೆ ಹೇಳಿಕೊಳ್ಳುತ್ತಾನೆ. ಆದರೆ ಸೀತೆ ಮಾತ್ರ ಆತನನ್ನು ನಿರಾಕರಿಸಿ ರಾಮನ ಪ್ರಾಣ ಹೋಗುವ ವರೆಗೆ ನನ್ನನ್ನು ನೋಡಲು ಮರಳಿ ಬರಬೇಡ ಎನ್ನುತ್ತಾ ಮೂರ್ಛೆ ಹೋಗುತ್ತಾಳೆ.

ರಾವಣ ಒಬ್ಬ ಶ್ರೇಷ್ಠ ನಾಯಕ ಎಂದು ತಿಳಿಯುವುದು ಇಲ್ಲಿಯೇ.ಸೀತೆ ಮೂರ್ಛೆ ಹೋದ ಮರು ಕ್ಷಣದಲ್ಲಿ ರಾವಣನಿಗೆ ತಾನು ಮಾಡುತ್ತಿರುವುದು ತಪ್ಪೆನಿಸುತ್ತದೆ. ಆಕೆಯ ಬಗ್ಗೆ ಅನುಕಂಪ ಹುಟ್ಟುತ್ತದೆ, ಕರುಣೆದೋರುತ್ತಾನೆ. ಅಲ್ಲದೆ ತನ್ನನ್ನು ತಾನೇ ಬೈದುಕೊಳ್ಳುತ್ತಾನೆ. ಕರ್ಮಾಧೀನನಾಗಿ ತಾನು ಮಾಡಿದ ಹೀನಕರ್ಮದ ಪರಿಣಾಮ ಎಷ್ಟು ಘೋರವಾದುದು – ಎಂದು ಅರಿತುಪರಿತಪಿಸುತ್ತಾನೆ. ಕದಡಿ ಹೋದ ಕೊಳದನೀರು ತನ್ನಷ್ಟಕ್ಕೇ ತಿಳಿಗೊಳ್ಳುವಂತೆ; ರಾವಣನಿಗೆ ತನ್ನೊಳಗೆ ಬದಲಾವಣೆಯಗುತ್ತದೆ.

ಉದಾತ್ತನಾದವನಲ್ಲಿ ದುರಾಸೆಯುಹೇಗೆಸ್ಥಿರವಾಗಿ ನಿಲ್ಲಲಾರದೋಹಾಗೆ ರಾವಣನಿಗೆಸೀತೆಯಲ್ಲಿ ವೈರಾಗ್ಯ ಹುಟ್ಟುತ್ತದೆ.

**ಒಂದು ಅಂಕದ ಪ್ರಶ್ನೆಗಳು :**

1.ರಾವಣನು ಯಾವ ರೀತಿ ಚಲಿಸದೆ ಇದ್ದನು?

ರಾವಣನು ದ್ರುವಮಂಡಲದಂತೆ ಚಲಿಸದೆ ಇದ್ದನು.

2.ರಾವಣನ ಎದುರು ಪ್ರತ್ಯಕ್ಷವಾದ ವಿದ್ಯಾದೇವತೆ ಯಾರು?

ಬಹುರೂಪಿಣೀ ವಿದ್ಯೆ – ರಾವಣನ ಎದುರು ಪ್ರತ್ಯಕ್ಷವಾದ ವಿದ್ಯಾದೇವತೆ.

3.ಯಾರನ್ನು ಕೊಲ್ಲುವುದಿಲ್ಲವೆಂದು ವಿದ್ಯಾದೇವತೆ ಹೇಳಿತು?

ರಾಮ–ಲಕ್ಷ್ಮಣರನ್ನು ಕೊಲ್ಲುವುದಿಲ್ಲವೆಂದು ವಿದ್ಯಾದೇವತೆ ಹೇಳಿತು.

4. ಮಯತನೂಜೆ ಎಂದರೆ ಯಾರು?

ಮಯತನೂಜೆ ಎಂದರೆ ಮಂಡೋದರಿ.

5. ರಾವಣನು ಮಹಾ ಪೂಜೆಯನ್ನು ಎಲ್ಲಿ ಸಲ್ಲಿಸಿದನು?

ರಾವಣನು ಮಹಾ ಪೂಜೆಯನ್ನು ಶಾಂತಿಜಿನ ಭವನದಳೊಗೆ ಸಲ್ಲಿಸಿದನು.

6. ಸೀತೆಯನ್ನು ರಾವಣ ಎಲ್ಲಿರಿಸಿದ್ದನು?

ಸೀತೆಯನ್ನು ರಾವಣ ಪ್ರಮದವನದಲ್ಲಿ ಇರಿಸಿದ್ದನು.

7. ರಾವಣನ ಆಗಮನವನ್ನು ಸೀತೆಗೆ ತೋರಿದವರು ಯಾರು?

ರಾವಣನ ಆಗಮನವನ್ನು ಸೀತೆಗೆ ತೋರಿದವರು ಆಕೆಯ ಪಕ್ಕದಲ್ಲಿದ್ದ ರಾಕ್ಷಸ ಸ್ತ್ರೀಯರು.

8. ಸೀತೆ ಯಾವುದನ್ನು ಹುಲ್ಲಿಗೆ ಸಮಾನವೆಂದು ಭಾವಿಸಿದಳು?

ಸೀತೆಯು ರಾವಣನ ಅಪ್ರತಿಮವಾದ ರೂಪವನ್ನು ಹುಲ್ಲಿಗೆ ಸಮಾನವೆಂದು ಭಾವಿಸಿದಳು.

9. ಸೀತೆ ರಾವಣನನ್ನು ಏನೆಂದು ಬೇಡಿಕೊಂಡಳು?

"ಕರುಣಿಸುವುದಿದ್ದರೆ ದಶವದನನೇ, ಶ್ರೀರಾಮನ ಆಯುಃಪ್ರಾಣ ತೀರುವ ತನಕ

ಇಲ್ಲಿಗೆ ಬರಬೇಡ"  ಎಂದು. ಸೀತೆ ರಾವಣನನ್ನು ಬೇಡಿಕೊಂಡಳು.

10. ರಾವಣನಿಗೆ ಯಾರ ಬಗ್ಗೆ ವೈರಾಗ್ಯ ಮೂಡಿತು?

ರಾವಣನಿಗೆ ಸೀತೆಯ ಬಗ್ಗೆ ವೈರಾಗ್ಯ ಮೂಡಿತು.

11. ವಿಭೀಷಣ ಯಾರು?

ವಿಭೀಷಣ ರಾವಣನ ತಮ್ಮ.

12. ಸೌಮಿತ್ರಿ ಎಂದರೆ ಯಾರು?

ಸೌಮಿತ್ರಿ ಎಂದರೆ ಲಕ್ಷ್ಮಣ

13.ಯಾವಾಗ ಸೀತೆಯನ್ನು ರಾಮನಿಗೆ ಕೊಡುವೆನೆಂದು ರಾವಣನು ಯೋಚಿಸುತ್ತಾನೆ?

ಯುದ್ಧದಲ್ಲಿ ಶ್ರೀರಾಮನನ್ನು ಸೆರೆಹಿಡಿದು ತಂದು ಆನಂತರ ಅವನಿಗೆ ಸೀತೆಯನ್ನು ಕೊಡುವೆನೆಂದು ರಾವಣ ಯೋಚಿಸುತ್ತಾನೆ.

**ಎರಡು ಅಂಕಗಳ ಪ್ರಶ್ನೆಗಳು :**

1. ಬಹುರೂಪಿಣೀ ವಿದ್ಯೆಯು ರಾವಣನಿಗೆ ಏನೆಂದು ಆಶ್ವಾಸನೆಯಿತ್ತಿತು?

   ಬಹುರೂಪಿಣೀ ವಿದ್ಯೆಯು ರಾವಣನ ಎದುರು ಪ್ರತ್ಯಕ್ಷವಾಗಿ 'ಚಕ್ರಧಾರಿಯಾದ ಲಕ್ಷ್ಮಣನನ್ನು ಮತ್ತು  ಚರಮ ದೇಹಧಾರಿಯಾದ ರಾಮನನ್ನು ಬಿಟ್ಟು ಮಿಕ್ಕವರನ್ನೆಲ್ಲ ನಾಶಗೊಳಿಸುತ್ತೇನೆ' – ಎಂದು ಆಶ್ವಾಸನೆಯಿತ್ತಿತು.

2. ರಾವಣ ತನ್ನ ಅಂತಃಪುರದ ಸ್ತ್ರೀಯರನ್ನು ಹೇಗೆ ಸಂತೈಸಿದನು?

   ಮಂಡೋದರಿಯನ್ನು ಮತ್ತು ಸಮಸ್ತ ಅಂತಃಪುರದ ಸ್ತ್ರೀಯರನ್ನು ನೋಡಿದ ರಾವಣನು ಅವರನ್ನುದ್ದೇಶಿಸಿ, "ನಿಮಗಿಷ್ಟು ಅಪಮಾನವನ್ನುಂಟುಮಾಡಿದ ಅಂಗದಾದಿಗಳನ್ನು ಹುಬ್ಬು ಗಂಟಿಕ್ಕುವ ಮಾತ್ರದಿಂದಲೆ ಬಂಧಿಸಿ, ಸೆರೆಹಿಡಿದು ನಿಮ್ಮ ಮುಂದೆ ತಂದು ದಂಡಿಸುವುದರ ಮೂಲಕ ನಿಮಗಾದ  ಅಪಮಾನವನ್ನು ಕಳೆಯುತ್ತೇನೆ" – ಎಂದು ಸಂತೈಸಿದನು.

3. ಸೀತೆಯ ತಲ್ಲಣಕ್ಕೆ ಕಾರಣವೇನು?

ರಾವಣನ ಅಪ್ರತಿಮವಾದ ರೂಪವು ಸೀತಾದೇವಿಗೆ ಹುಲ್ಲುಕಡ್ಡಿಗಿಂತಲೂ ಅಲ್ಪವಾಗಿ ತೋರಿತ್ತು. ರಾವಣನು ಸೀತಾದೇವಿಯ ಬಳಿಗೆ ಬರುವಾಗ ಆಕೆಯು ಕಳವಳಕ್ಕೆ ಒಳಗಾಗುತ್ತಾಳೆ."ರಾಮಲಕ್ಷ್ಮಣರನ್ನು ಸಂಬಂಧಿಸಿದಂತೆ ತಾನು ಇನ್ನೇನು ಕೆಟ್ಟವಾರ್ತೆಯನ್ನು ಕೇಳುವೆನೋ" – ಎಂದು ರಾವಣನನ್ನು ಕಂಡೊಡನೆ ಭೀತಿಗೊಂಡು ನಡುಗತೊಡಗಿದಳು.

4. ರಾವಣನು ಸೊಕ್ಕಿನಿಂದ ಸೀತೆಯನ್ನುದ್ದೇಶಿಸಿ ಆಡಿದ ಮಾತುಗಳಾವುವು?

ರಾವಣನು ಸೊಕ್ಕಿನಿಂದ ಸೀತೆಯನ್ನುದ್ದೇಶಿಸಿ "ಬಹುರೂಪಿಣೀ ವಿದ್ಯೆಯನ್ನು ನಾನು ಸಾಧಿಸಿದ್ದೇನೆ. ಇನ್ನು ನನಗೆ ಅಸಾಧ್ಯವಾದ ಕಾರ್ಯ ಯಾವುದೂ ಇಲ್ಲ, ನೀನು ರಾಮನ ಯೋಚನೆಯನ್ನು ಬಿಟ್ಟು, ನನ್ನನ್ನು ಹೊಂದಿ ಸಾಮ್ರಾಜ್ಯ ಸುಖವನ್ನು ಅನುಭವಿಸು" – ಎಂದನು.

5. ರಾವಣನಿಗೆ ಸೀತೆಯ ಬಗ್ಗೆ ವೈರಾಗ್ಯ ಮೂಡಿದ ಸಂದರ್ಭವನ್ನು ವಿವರಿಸಿ.

ಸೀತೆಯು ಮೂರ್ಛಿತೆಯಾಗಲು ರಾವಣನಿಗೆ ಆಕೆಯ ಮೇಲೆ ಅನುಕಂಪ ಹುಟ್ಟಿತು. ಕರುಣೆದೋರುತ್ತಾನೆ. ಅಲ್ಲದೆ ತನ್ನ ಕರ್ಮಾಧೀನತೆಯಿಂದ ಹುಟ್ಟಿದಂತಹ ಕೆಟ್ಟ ಪಾಪದ ಘೋರ ಪರಿಣಾಮವನ್ನು ತಾನೇ ಹಳಿದುಕೊಳ್ಳುತ್ತಾನೆ. ಕದಡಿ ಹೋದ ಕೊಳದ ನೀರು ತನ್ನಷ್ಟಕ್ಕೇ ತಿಳಿಗೊಳ್ಳುವಂತೆ, ರಾವಣನಿಗೆ ತನ್ನೊಳಗೆ ಬದಲಾವಣೆಯಾಗಿ ಸೀತೆಯ ಬಗ್ಗೆ ವೈರಾಗ್ಯ ಮೂಡಿತು.

6. ರಾವಣನು ತನ್ನ ಆಪ್ತರನ್ನು ಕುರಿತು ಏನೆಂದು ಹೇಳಿದನು?

ರಾವಣನು ತನ್ನ ಆಪ್ತರನ್ನು ಕುರಿತು 'ಸದ್ಗುಣಗಳನ್ನು ಆಚರಣೆಯಲ್ಲಿ ಉಳಿಸಿಕೊಳ್ಳಲೆಂದೇ ಈಕೆ ನನ್ನ ಬಗೆಗೆ ಆಸಕ್ತಿಯನ್ನು ತೋರಲಿಲ್ಲ. ನಾನು ಹೊಂದಿದ್ದ ದಿವ್ಯವಾದ ವಸ್ತ್ರ, ಆಭರಣ, ಅಂಗ ಸುಖದ ಆಮಿಷಗಳನ್ನು ಒಪ್ಪದೆ ಗಂಧರ್ವ ರಾಜ್ಯಲಕ್ಷ್ಮಿಯನ್ನು

ಹುಲ್ಲುಕಡ್ಡಿಗಿಂತಲೂ ಕಡೆಯಾಗಿ ಕಂಡ ಈಕೆಯನ್ನು, ಪರಾಕ್ರಮಿಯಾದ ನಾನು ಅಪೇಕ್ಷಿಸಬಹುದೇ? ಹೀಗೆ ಕೆಟ್ಟ ಪಾಪ ಸಂಚಯನ ಮಾಡಿಕೊಳ್ಳಬಹುದೇ?' ಎಂದನು.

7. ಈಗಲೇ ಸೀತೆಯನ್ನು ರಾಮನಿಗೊಪ್ಪಿಸಲು ರಾವಣ ಬಯಸಲಿಲ್ಲವೇಕೆ?

ಈಗಲೇ ಸೀತೆಯನ್ನು ಕೊಂಡೊಯ್ದು ರಾಘವನಿಗೊಪ್ಪಿಸಿದೆಯೆಂದಾದರೆ, ನನ್ನ ಪರಾಕ್ರಮ, ಹೆಚ್ಚಿನದ್ದಾದ ಸಾಮರ್ಥ್ಯ, ವೀರತ್ವ, ಗಳಿಸಿದ ಹೆಸರು–ಬಿರುದುಗಳೆಲ್ಲವೂ ವ್ಯರ್ಥವಾಗಿ ಹೋಗುತ್ತವೆ, ಮುಂದೆಂದೂ ಸರಿಪಡಿಸದಂತೆ ಕೆಟ್ಟು ಹೋಗುತ್ತವೆ ಎಂದು ಸೀತೆಯನ್ನು ರಾಮನಿಗೊಪ್ಪಿಸದೇ ಇರಲು ನಿರ್ಧರಿಸುತ್ತಾನೆ.

8. ರಾವಣನು ಅಂತಿಮವಾಗಿ ಯಾವ ನಿರ್ಧಾರಕ್ಕೆ ಬರುತ್ತಾನೆ?

ರಾವಣನು ಅಂತಿಮವಾಗಿ ತನ್ನ ಬಾಹುಬಲವನ್ನು ಎರಡು ಸೇನೆಗಳೂ ಹೊಗಳುವಂತೆ ಯುದ್ಧ ಮಾಡಿ, ಯುದ್ಧಾಂತ್ಯದಲ್ಲಿ ರಾಮ ಲಕ್ಷ್ಮಣರನ್ನು ರಥವಿಹೀನರನ್ನಾಗಿ (ರಥ ತ್ಯಜಿಸುವಂತೆ) ಮಾಡಿ, ಸೆರೆಹಿಡಿದು ಆ ಬಳಿಕ ಸೀತೆಯನ್ನು ಕೊಡುತ್ತೇನೆ ಎನ್ನುವ ನಿರ್ಧಾರಕ್ಕೆ ಬರುತ್ತಾನೆ.

====0====

===0===

# ಬಸವಣ್ಣನವರ ವಚನಗಳು

ಬಸವಣ್ಣನವರು ತಮ್ಮ ವಚನದಲ್ಲಿ ಮನುಷ್ಯ ಮನುಷ್ಯರ ನಡುವೆ ಇರಬೇಕಾದ ಮಾನವೀಯ ಅಂತಃಕರಣವನ್ನು, ಹೃದಯವೈಶಾಲ್ಯತೆಯನ್ನು ಇಲ್ಲಿ ತಿಳಿಸುತ್ತಾರೆ.

ಮನಮನಗಳು ಬೆರೆತಾಗ ಅಹಂಕಾರಕ್ಕೆ ಸ್ಥಳವಿರದಂತೆ ತನು ಕರಗುತ್ತದೆ. ಪರಸ್ಪರ ಸ್ಪರ್ಶಿಸಿದಾಗ ದೇಹ ಪುಳಕಗೊಳ್ಳುತ್ತದೆ. ಪ್ರಿಯರನ್ನು ಕಂಡಾಗ ಅಶ್ರುಜಲ (ಕಣ್ಣೀರು) ಉಕ್ಕಿ ಹರಿಯುತ್ತದೆ. ಪರಸ್ಪರ ಮಾತನಾಡಿದಾಗ ಧ್ವನಿ ಆರ್ದ್ರಗೊಳ್ಳುತ್ತದೆ. ಇಂತಹ ಭಾವಗಳು ಭಕ್ತನಲ್ಲಿರಬೇಕು. ಆದರೆ ಎನ್ನಲ್ಲಿ ಇಂತಹ ಚಿಹ್ನೆ ಇಲ್ಲವಾದುದರಿಂದ ನಾನು ಡಂಬಕನೇ ಸರಿಎಂದು ಬಸವಣ್ಣ ಭಾವಿಸುತ್ತಾರೆ. ಭಕ್ತನಿಗೆ ಪ್ರೀತಿ, ವಿಶ್ವಾಸ, ಮಾನವೀಯತೆಯ ಗುಣಗಳಿರಬೇಕು. ಭಕ್ತಿಗೆ ಇವೇ ಬೇಕಾಗಿರುವಂತದ್ದು. (ಭಗವಂತನಲ್ಲಿ ವ್ಯಾಪಾರ ಮಾಡಬಾರದು ಪ್ರೀತಿ ಹೊಂದಿರಬೇಕು / ನಿಷ್ಕಾಮ ಭಕ್ತಿ ಎಂದೂ ಹೇಳಬಹುದು.)

ಶಿವಪಥವನ್ನು ಅರಿಯದದವರು ಕೈಯಲ್ಲಿ ಲಿಂಗವನ್ನು ಹಿಡಿದು ಪುಷ್ಪಗಳಿಂದ ಅರ್ಚಿಸಿದ ಮಾತ್ರಕ್ಕೆ ಅದು ಸದ್ಭಕ್ತಿಯ ಲಕ್ಷಣವಲ್ಲ. ಶಿವಪಥವನ್ನು ಅರಿಯುವುದು ಮುಖ್ಯ.ಇದನ್ನೇ ಬಸವಣ್ಣನವರು ಅರ್ಥರೇಖೆ ಇದ್ದು ಅನುಭವಿಸಲು ಆಯುಷ್ಯರೇಖೆ ಇಲ್ಲದಿದ್ದರೆ ಫಲವೇನು (ಕೋಟಿಕೋಟಿ ಹಣವಿದ್ದು ಅದರ ಸದುಪಯೋಗಮಾಡಿಕೊಳ್ಳಲು ಆಯುಷ್ಯವೇ ಇಲ್ಲದಿದ್ದರೆ ಎಲ್ಲವೂ ವ್ಯರ್ಥ ಅಲ್ಲವೇ?), ಹೇಡಿಯ ಕೈಯಲ್ಲಿ ಚಂದ್ರಾಯುಧವಿದ್ದು ಫಲವೇನು? (ಹೇಡಿಯಾದವನ ಕೈಯಲ್ಲಿ ಯಾವುದೇ ಶಸ್ತ್ರವಿದ್ದರೂ ಅದರ ಬಳಕೆ ಅವನಿಗೆ ಸಾಧ್ಯವಾಗದೆ ವ್ಯರ್ಥವಾಗುತ್ತದೆ) ಕುರುಡನಾದವನ ಕೈಯಲ್ಲಿರುವ ಕನ್ನಡಿ, ಕೋತಿಯ ಕೈಯಲ್ಲಿರುವ ಮಾಣಿಕ್ಯ ಎರಡೂ ವ್ಯರ್ಥ. ರತ್ನದ ಬೆಲೆ ಅರಿತವನಿಗೇ ರತ್ನದ ಮಹತ್ವ ತಿಳಿಯುವುದು. ಅಂತೆಯೇ ಶಿವಲಿಂಗವನ್ನು ಶಿವಪಥದಲ್ಲಿ ಇಲ್ಲದವನು ಹೇಗೆ ತಿಳಿಯಲು ಸಾಧ್ಯ ಎಂದಿದ್ದಾರೆ.

ಕಾಯುವ ದೈವವೇ ಕೊಲ್ಲಲು ಬಂದರೆ ಯಾರ ಬಳಿ ದೂರು ಹೇಳುವುದು. (ಕಾವರೇಕಣೆಗೊಂಡರ್ ನಾಗಚಂದ್ರ) ಬೇಲಿಯೇ ಹೊಲ

ಮೇಯ್ದರೆ ಇನ್ನಾರಿಗೆ ಕೇಳೋಣ ಎಂಬ ವಿಚಾರಗಳನ್ನೇ ಈ ವಚನದಲ್ಲಿ ವಿವರಿಸಿದ್ದಾರೆ. ಒಲೆಯು ಹತ್ತಿ ಉರಿದಾಗ ಬಿಸಿಯ ಝಳದಿಂದ ತಪ್ಪಿಸಿಕೊಳ್ಳಲು ದೂರ ನಿಲ್ಲಬಹುದು. ಆದರೆ ನಮ್ಮ ಕಾಲ ಅಡಿಯಲ್ಲಿರುವ ಭೂಮಿಯೇ ಹತ್ತಿ ಉರಿಯತೊಡಗಿದರೆ ನಿಲ್ಲುವುದೆಲ್ಲಿ? ಕೆರೆಯ ನೀರನ್ನು ಹಿಡಿದಿಡಲಿ ಎಂದು ಕಟ್ಟಿದ ಏರಿ (ಮಣ್ಣಿನ ದಿಬ್ಬ) ಕೆರೆಯ ನೀರನ್ನೆಲ್ಲಾ ಕುಡಿದು ಬಿಟ್ಟರೆ, ಹೊಲದ ರಕ್ಷಣೆಗೆಂದು ನಿರ್ಮಿಸಿದ ಬೇಲಿಯೇ ಹೊಲವನ್ನು ಮೇಯ್ದರೆ (ನಂಬಿದ ವ್ಯಕ್ತಿಗಳು ಅತ್ಯಾಚಾರಿಗಳಾಗುತ್ತಿರುವ ಇಂದಿನ ಸಂದರ್ಭದಲ್ಲಿ ಈ ವಚನ ಸೂಕ್ತವಾಗುತ್ತದೆ) ಮನೆಯ ಹೆಣ್ಣು ತನ್ನ ಮನೆಯಲ್ಲೇ ಕಳವು ಮಾಡಿದಾಗ, ತಾಯಿಯ ಹಾಲೇ ವಿಷವಾಗಿ ಮಗುವನ್ನು ಕೊಂದರೆ ಯಾರಿಗೆ ದೂರು ಹೇಳುವುದು.

**ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು :**

**1**.ಅರ್ಥರೇಖೆಯಿದ್ದಲ್ಲಿ ಫಲವೇನು, ಆಯುಷ್ಯರೇಖೆ ಇಲ್ಲದನ್ನಕ್ಕರ”

ಆಯ್ಕೆ : ಈ ಮೇಲಿನ ವಚನದ ಸಾಲನ್ನು ಬಸವಣ್ಣನವರ ವಚನಗಳಿಂದ ಆರಿಸಲಾಗಿದೆ.

ಸಂದರ್ಭ: ದೇವರನ್ನು ಆರಾಧಿಸಲು ಡಾಂಭಿಕ ಭಕ್ತಿ ಸಾಲದು, ನಿಜವಾದ ಭಕ್ತಿಯನ್ನು ತೋರಬೇಕು ಎನ್ನುವ ಸಂದರ್ಭವಿದು.

ವಿವರಣೆ: ದೇವರನ್ನು ಆರಾಧಿಸಲು ಡಾಂಭಿಕ ಭಕ್ತಿ ಸಾಲದು, ನಿಜವಾದ ಭಕ್ತಿಯನ್ನು ತೋರಬೇಕು, ಲಿಂಗವನ್ನು ಮೈಮೇಲೆ ಧರಿಸಿ, ಶಿವಭಕ್ತನೆಂದು ತೋರಿಕೆಯ ಭಕ್ತಿ ಆಚರಿಸುವುದಕ್ಕಿಂತ ಶಿವ ಪಥದಲ್ಲಿ ನಡೆಯುವುದು ಮುಖ್ಯವೆಂಬುದೆ ಬಸವಣ್ಣನವರ ಅಭಿಪ್ರಾಯವಾಗಿದೆ. ಕೈಯಲ್ಲಿ ಸಂಪತ್ತಿನ ರೇಖೆಯೊಂದಿದ್ದರೆ ಮಾತ್ರ ಸಾಲದು. ಅದನ್ನು ಅನುಭವಿಸಲು ಆಯುಷ್ಯ ರೇಖೆಯೂ ಇರಬೇಕು, ಅದೇ ರೀತಿ ಕೈಯಲ್ಲಿ ಲಿಂಗವಿದ್ದರೆ ಸಾಲದು ಅದನ್ನು ಅರಿತು ನಿಜಭಕ್ತಿಯಿಂದ ಪೂಜಿಸಬೇಕು.

2.ಮರ್ಕಟನ ಕೈಯಲ್ಲಿ ಮಾಣಿಕ್ಯವಿದ್ದು ಫಲವೇನು?

ಆಯ್ಕೆ : ಈ ಮೇಲಿನ ವಚನದ ಸಾಲನ್ನು ಬಸವಣ್ಣನವರ ವಚನಗಳಿಂದ ಆರಿಸಲಾಗಿದೆ.

ಸಂದರ್ಭ: ಬಸವಣ್ಣನವರು ಮೂಲದಲ್ಲಿ ಸತ್ವವಿರದ ತೋರಿಕೆಯ ಭಕ್ತಿಯ ಕುರಿತಂತೆ ತಿಳಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳಿದ್ದಾರೆ.

ವಿವರಣೆ: ಬಸವಣ್ಣನವರು ಭಕ್ತಿಯಕುರಿತಾದ ವಿಚಾರಗಳನ್ನು ಮಾತನಾಡುವಾಗ, ಭಕ್ತಿಯು ಯಾವಾಗಲೂ ದೃಢತೆಯಿಂದ ಕೂಡಿರಬೇಕು, ಸರಳವಾಗಿರಬೇಕು, ಸತ್ವಯುತವಾಗಿರಬೇಕು ಹಾಗಾದಾಗ ಮಾತ್ರ ಶಿವಪಥದತ್ತ ಸಾಗಲು ಸಾಧ್ಯ ಎನ್ನುವ ಅಭಿಪ್ರಾಯ ಮುಂದಿಡುತ್ತಾರೆ. ಮೂಲದಲ್ಲಿ ಭಕ್ತಿಯು ಸತ್ವಯುತವಾಗಿರದೇ ಇದ್ದರೆ ಅಂತಹ ಭಕ್ತಿಯು ಆಯುಷ್ಯರೇಖೆ ಇಲ್ಲದವನಲ್ಲಿ ಅರ್ಥರೇಖೆ ಇದ್ದ ಹಾಗೆ, ಹಂದೆಯ ಕೈಯಲ್ಲಿ ಚಂದ್ರಾಯುಧ ಇದ್ದ ಹಾಗೆ. ಕುರುಡನ ಕೈಯಲ್ಲಿ ಕನ್ನಡಿ ಇದ್ದ ಹಾಗೆ ನಿಷ್ಪ್ರಯೋಜಕ ಎನ್ನುತ್ತಾ ಈ ಮೇಲಿನಂತೆ ಹೇಳುತ್ತಾರೆ.

3. ಧರೆ ಹತ್ತಿ ಉರಿದಡೆ ನಿಲ್ಲಲುಬಾರದು.

ಆಯ್ಕೆ : ಈ ಮೇಲಿನ ವಚನದ ಸಾಲನ್ನು ಬಸವಣ್ಣನವರ ವಚನಗಳಿಂದ ಆರಿಸಲಾಗಿದೆ.

ಸಂದರ್ಭ: ನಮ್ಮನ್ನು ಕಾಯಬೇಕಾದವರೇ ಕೊಲ್ಲಲು ಮುಂದಾದರೆ ಇನ್ಯಾರು ಕಾಯಲು ಸಾಧ್ಯವಿಲ್ಲ ಎನ್ನುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ವಿವರಣೆ : ಬಸವಣ್ಣನವರ ಪ್ರಕಾರ ಭೂಮಿಯ ಮೇಲಿರುವ ಎಲ್ಲಾ ಜೀವಿಗಳನ್ನು ಸಲಹುವವನು ದೇವರು. ನಮ್ಮ ಕಷ್ಟದ ಕಾಲದಲ್ಲಿ ನಾವು ದೇವರ ನೆರವನ್ನು ಬಯಸುತ್ತೇವೆ. ಕಷ್ಟದಲ್ಲಿರುವ ನಮ್ಮನ್ನು ದೇವರು ಸಲಹುತ್ತಾನೆ ಎಂಬುದು ನಮ್ಮ ನಂಬಿಕೆ. ಆದರೆ ಕಾಯಬೇಕಾದವರೇ ಕೊಲ್ಲಲು ಮುಂದಾದರೆ ಕೆಟ್ಟ ಪರಿಣಾಮ ಎದುರಾಗುತ್ತದೆ ಎನ್ನುವುದನ್ನು ಹೀಗೆ ವಿವರಿಸುತ್ತಾರೆ. ಒಲೆಯಿಂದ ಉಂಟಾದ ಉರಿಯನ್ನು ಸ್ವಲ್ಪದೂರದಲ್ಲಿ

ನಿಲ್ಲುವುದರಿಂದ ತಾಳಿಕೊಳ್ಳಬಹುದು. ಆದರೆ ಇಡೀ ಭೂಮಿಯೇ ಹೊತ್ತಿ ಉರಿದರೆ ನಿಲ್ಲಲು ಸಾಧ್ಯವಿಲ್ಲ ಎನ್ನುತ್ತಾ ಈ ಮೇಲಿನಂತೆ ಹೇಳುತ್ತಾರೆ.

4. ತಾಯ ಮೊಲೆವಾಲು ನಂಜಾಗಿ ಕೊಲುವಡೆ

ಆಯ್ಕೆ : ಈ ಮೇಲಿನ ವಚನದ ಸಾಲನ್ನು ಬಸವಣ್ಣನವರ ವಚನಗಳಿಂದ ಆರಿಸಲಾಗಿದೆ.

ಸಂದರ್ಭ: ಬಸವಣ್ಣನವರು ತಮಗಾದ ವಿಶಿಷ್ಟ ಅನುಭವದ ಅಭಿವ್ಯಕ್ತಿಯನ್ನು ವಿವರಿಸುವ ಸಂದರ್ಭದಲ್ಲಿ ಈ ಮೇಲಿನಂತೆ ಹೇಳುತ್ತಾರೆ.

ವಿವರಣೆ: ಮಗುವಿಗೆ ತಾಯಿಯ ಎದೆ ಹಾಲು ಇತರ ಎಲ್ಲಾ ಔಷಧಿಗಳಿಗಿಂತ ಶ್ರೇಷ್ಠವಾದುದು. ಅದು ಮಗುವಿಗೆ ಸಂಜೀವಿನಿ ಇದ್ದ ಹಾಗೆ. ಆದರೆ ಅಂತಹಎದೆ ಹಾಲೇ ವಿಷವಾದರೆ ಮಗುವಿನ ಉಳಿವು ಅಸಾಧ್ಯ. ಅದನ್ನೇ ಬಸವಣ್ಣನವರು ತಾಯಿಯಂತೆ ಪೊರೆವ ದೇವರೇ ನಮ್ಮನ್ನು ಶಿಕ್ಷಿಸಲು ಮುಂದಾದರೆ ನಮ್ಮ ಉಳಿವು ಸಾಧ್ಯವಿಲ್ಲ ಎನ್ನುವುದನ್ನು ಈ ಮೇಲಿನ ಮಾತಿನ ಮೂಲಕ ವಿವರಿಸುತ್ತಾರೆ.

**ಒಂದು ವಾಕ್ಯದಲ್ಲಿ ಉತ್ತರಿಸಿ:**

1. ತನು ಯಾವಾಗ ಕರಗಬೇಕು ?

   ತನು ಮನಮನ ಬೆರೆತಲ್ಲಿ ಕರಗಬೇಕು.

2. ಯಾರ ಕೈಯಲ್ಲಿ ದರ್ಪಣವಿದ್ದು ಫಲವಿಲ್ಲ?

   ಕುರುಡನ ಕೈಯಲ್ಲಿ ದರ್ಪಣವಿದ್ದು ಫಲವಿಲ್ಲ.

3. ಶಿವಪಥವನ್ನು ಅರಿಯದಿದ್ದರೆ ಏನಾಗುವುದು?

   ಶಿವಪಥವನ್ನು ಅರಿಯದಿದ್ದರೆ ಲಿಂಗವಿದ್ದರೂ ಫಲವಿಲ್ಲದಂತಾಗುತ್ತದೆ.

4. ಬಸವಣ್ಣನವರ ವಚನಗಳ ಅಂಕಿತ ಯಾವುದು?

   ಬಸವಣ್ಣನವರ ವಚನಗಳ ಅಂಕಿತ ಕೂಡಲ ಸಂಗಮದೇವ.

**ಎರಡು– ಮೂರು ವಾಕ್ಯಗಳಲ್ಲಿ ಉತ್ತರಿಸಿ:**

1. ಯಾವ ಗುಣಗಳಿಲ್ಲದವನು ಡಾಂಭಿಕನೆನಿಸುತ್ತಾನೆ?

ಮನ ಮನ ಬೆರಸಿದಲ್ಲಿ ತನುಕರಗಬೇಕು. ಸ್ಪರ್ಶದಿಂದ ರೋಮಾಂಚನ ಹೊರಹೊಮ್ಮಬೇಕು. ದು:ಖಕ್ಕೆ ಕಣ್ಣೀರನ್ನು ಸುರಿಸಬೇಕು. ಮಾತನಾಡುವಾಗ ಗಂಟಲು ತೇವವಾಗಿ ಶಬ್ದ ಹೊರಹೊಮ್ಮಬೇಕು. ಇವೆಲ್ಲಾ ಕೂಡಲ ಸಂಗಮದೇವರ ಭಕ್ತಿಗೆ ಚಿಹ್ನೆಯಾಗಿದೆ. ಈ ಗುಣಗಳಿಲ್ಲದವನನ್ನು ಕೂಡಲ ಸಂಗಮ ದೇವ ಮೆಚ್ಚುವುದಿಲ್ಲ. ಇಂತಹ ಗುಣಗಳಿಲ್ಲದವನು ಡಾಂಭಿಕನೆನಿಸುತ್ತಾನೆ.

2.ಶಿವಪಥವನ್ನರಿಯದವನನ್ನು ಹೇಗೆ ವಿಡಂಬಿಸಲಾಗಿದೆ?

ಕೈಯಲ್ಲಿ ಹಣದರೇಖೆಯೊಂದಿದ್ದರೆ ಸಾಲದು, ಆಯುಷ್ಯರೇಖೆಯೂ ಇರಬೇಕು. ಹೇಡಿಯ ಕೈಯಲ್ಲಿ ಚಂದ್ರಾಯುಧವಿದ್ದರೆ ಫಲವೇನು? ಕುರುಡನ ಕೈಯಲ್ಲಿ ಕನ್ನಡಿಯಿದ್ದು ಫಲವೇನು? ಮಂಗನ ಕೈಯಲ್ಲಿ ಮಾಣಿಕ್ಯವಿದ್ದು ಫಲವೇನು? ಏನೂ ಪ್ರಯೋಜನವಿಲ್ಲ. ಅದೇ ರೀತಿ ಶಿವಪಥವನ್ನು ಅರಿಯದವನ ಕೈಯಲ್ಲಿ ಲಿಂಗವಿದ್ದರೂ ಉಪಯೋಗವಿಲ್ಲ ಎಂದು ವಿಡಂಬಿಸಲಾಗಿದೆ.

2. ಯಾವಾಗ ನಿಲಬಹುದು? ಯಾವಾಗ ನಿಲಲಾಗದು?

ಒಲೆ ಹತ್ತಿ ಉರಿದಾಗ ನಿಲ್ಲಬಹುದು, ಆದರೆ ಧರೆಯೇ ಹತ್ತಿ ಉರಿಯುವಾಗ ಅಲ್ಲಿ ನಿಲ್ಲಲು ಸಾಧ್ಯವಿಲ್ಲ ಒಲೆಯ ತಾಪ ಕಡಿಮೆ. ಧರೆ ಹತ್ತಿ ಉರಿದಾಗ ತಾಪ ಹೆಚ್ಚು. ಅಂದರೆ ನಮ್ಮನ್ನು ರಕ್ಷಿಸಬೇಕಾದವರೇ ಕೊಲ್ಲುವ ಸಂಚು ಹೂಡಿದಾಗ ಯಾರನ್ನೂ ದೂರಲು ಸಾಧ್ಯವಿಲ್ಲವೆಂದು ಬಸವಣ್ಣನವರು ಹೇಳುತ್ತಾರೆ.

**ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ:**

1. ಬಸವಣ್ಣನವರ ಪ್ರಕಾರ ನೈಜಭಕ್ತಿಯ ಲಕ್ಷಣಗಳಾವುವು?

ಬಸವಣ್ಣನವರ ವಚನಗಳು ಮನುಷ್ಯನ ವ್ಯಕ್ತಿತ್ವ ವಿಕಸನಕ್ಕೆ ಪ್ರಾಮುಖ್ಯತೆಯನ್ನು ನೀಡಿದೆ. ಬಸವಣ್ಣನವರು ಭಕ್ತನಾದವನಿಗೆ ಸಹಜೀವಿಗಳನ್ನು ತನ್ನಂತೆ ಕಾಣುವ ಹೃದಯ ವೈಶಾಲ್ಯತೆ ಇರುವುದು ಮುಖ್ಯವೆಂದಿದ್ದಾರೆ. ಮನುಷ್ಯರ ನಡುವಿನಲ್ಲಿ ಹೊಮ್ಮಬೇಕಾದ

ಮಾನವೀಯತೆ, ಹೃದಯ ವೈಶಾಲತೆಯು ಗೈರು ಹಾಜರಾದಾಗ ನಮ್ಮ ಭಕ್ತಿಗೆ ಅರ್ಥವಿರುವುದಿಲ್ಲ. ಮನುಷ್ಯ–ಮನುಷ್ಯರು ಒಂದೆಡೆ ಕಲೆತಾಗ ಅಹಂಕಾರ ತಗ್ಗಿ ಪರಸ್ಪರ ಮನ ಬೆರೆತು, ತನುಕರಗಬೇಕು. ಪರಸ್ಪರ ಸೋಂಕಿದಾಗ ಪುಳಕ ಇಬ್ಬರಲ್ಲೂ ಹೊರ ಹೊಮ್ಮಬೇಕು. ಸ್ಪರ್ಶಕ್ಕೆ ಸ್ಪಂದಿಸುವ ಗುಣವಿರಬೇಕು. ದುಃಖವನ್ನು ಕಂಡಾಗ ಕಣ್ಣೀರು ಸುರಿಸಬೇಕು. ಅವರ ದುಃಖಕ್ಕೆ ಭಾಗಿಯಾಗಿ ನಡೆಯುವ ಗುಣವನ್ನು ಬೆಳೆಸಿಕೊಳ್ಳಬೇಕು. ನೋವಿಗೆ ಸ್ಪಂದಿಸಬೇಕು, ಮಾತನಾಡುವಾಗ ಅಂತ:ಕರಣ ತುಂಬಿ ಧ್ವನಿ ಆರ್ದ್ರಗೊಳ್ಳಬೇಕು. ಮತ್ತೊಬ್ಬರ ದುಃಖಕ್ಕೆ ಸ್ಪಂದಿಸದೇ ಸಂತೋಷ ವ್ಯಕ್ತಪಡಿಸಬಾರದು. ಅಂತಹ ಚಿಹ್ನೆ ಇರುವವರನ್ನು ಕೂಡಲ ಸಂಗಮ ದೇವ ಮೆಚ್ಚುವುದಿಲ್ಲ. ಆದ್ದರಿಂದ ಸಹಜೀವಿಗಳಲ್ಲಿ ಮಾನವೀಯತೆಯಿಂದ ವರ್ತಿಸುವುದು ನಿಜಭಕ್ತನ ಆದ್ಯಗುಣವೆಂದು ಬಸವಣ್ಣನವರು ನಿರೂಪಿಸಿದ್ದಾರೆ.

2. ಶಿವ ಪಥವನ್ನರಿಯದವನ ಭಕ್ತಿ ನಿರರ್ಥಕ ವೆಂಬುದನ್ನು ಬಸವಣ್ಣ ಯಾವ ಯಾವ ಉದಾಹರಣೆಗಳ ಮೂಲಕ ವಿವರಿಸಿದ್ದಾರೆ?

ಸಮಾಜದಲ್ಲಿ ಬದುಕುವ ಜೀವಿಯು ನಡೆ – ನುಡಿಯಲ್ಲಿ ಹೊಂದಬೇಕಾಗಿರುವ ಸತ್ವವನ್ನು, ಅಂತರಂಗದ ಪರಿಶುದ್ಧತೆಯನ್ನು ವಚನಕಾರರು, ಬಲವಾಗಿ ಪ್ರತಿಪಾದಿಸಿದ್ದಾರೆ. ಶಿವಪಥವನ್ನು ಅರಿಯುವ ಸಂಕಲ್ಪ ಬಲ ನಿಜಭಕ್ತನ ಮೂಲ ಗುಣವಾಗಬೇಕು ಎಂಬುದನ್ನು ಪ್ರತಿಪಾದಿಸುವಲ್ಲಿಯೂ ಎದ್ದು ಕಾಣುವ ಕಾವ್ಯಾತ್ಮಕ ಗುಣ ಬಸವಣ್ಣನವರ ಕವಿ ಹೃದಯವನ್ನು ಬಿಂಬಿಸಿದೆ. ಶಿವಪಥವನ್ನೇ ಅರಿಯದವನ ಕೈಯಲ್ಲಿ ಲಿಂಗವಿದ್ದರೂ ಉಪಯೋಗವಿಲ್ಲ ಅಂತಹವನ ಭಕ್ತಿ ಡಾಂಭಿಕ ಭಕ್ತಿಯಾಗುತ್ತದೆ. ಅಂತವನ ಭಕ್ತಿಯು ನಿರರ್ಥಕ ಎನಿಸಿಕೊಳ್ಳುತ್ತದೆ. ಕೈಯಲ್ಲಿ ಹಣದ ರೇಖೆಯಿದ್ದರೆ ಉಪಯೋಗಕ್ಕೆ ಬಾರದು. ಆಯುಷ್ಯರೇಖೆಯೂ ಇರಬೇಕು. ಹೇಡಿಯ ಕೈಯಲ್ಲಿ ಚಂದ್ರಾಯುಧವಿದ್ದರೆ ಫಲವೇನು?

ಕುರುಡನಿಗೆ ಕಣ್ಣು ಕಾಣುವುದಿಲ್ಲ. ಅವನಿಗೆ ಕನ್ನಡಿಯನ್ನು ಕೊಟ್ಟರೆ ಏನು ಫಲ? ಮಂಗನಿಗೆ ಮಾಣಿಕ್ಯದ ಬೆಲೆಯೇ ತಿಳಿದಿಲ್ಲ. ಮಂಗನ ಕೈಗೆ ಮಾಣಿಕ್ಯ ಕೊಟ್ಟರೆ ಫಲವೇನು! ಅದೇ ರೀತಿ ಶಿವಪಥವನ್ನರಿಯದವನ ಕೈಯಲ್ಲಿ ಲಿಂಗವಿದ್ದರೆ ಆ ಭಕ್ತಿ ನಿರರ್ಥಕವೆನಿಸಿ ಕೊಳ್ಳುತ್ತದೆ.

3. ರಕ್ಷಿಸಬೇಕಾದವರೆ ಭಕ್ಷಕರಾದರೆ ಒದಗುವ ಘಟನೆಯನ್ನು ಬಸವಣ್ಣನವರು ಹೇಗೆ ಚಿತ್ರಿಸಿದ್ದಾರೆ?

ಸಮಾಜದಲ್ಲಿ ಬದುಕುವ ಜೀವಿ ನಡೆ–ನುಡಿಯಲ್ಲಿ ಹೊಂದಬೇಕಾಗಿರುವ ಸತ್ವವನ್ನು, ಅಂತರಂಗದ ಪರಿಶುದ್ಧತೆಯನ್ನು ಬಸವಣ್ಣನವರು ಬಲವಾಗಿ ಪ್ರತಿಪಾದಿಸಿದ್ದಾರೆ. 'ರಕ್ಷಕರೇ ಭಕ್ಷಕರಾದಾಗ', 'ಬೇಲಿಯೇಎದ್ದು ಹೊಲ ಮೇಯ್ದಂತೆ', ಎಂಬ ಒಂದೇ ಅರ್ಥದ ಗಾದೆ ಮಾತುಗಳು ನಮ್ಮಲ್ಲಿ ಬಳಕೆಯಲ್ಲಿವೆ. ಕಾಯುವವರೇ ಕೊಲ್ಲಲು ತೀರ್ಮಾನಿಸಿದ್ದಾಗ ನಮ್ಮನ್ನು ಇನ್ಯಾರಿಂದಲೂ ರಕ್ಷಿಸಲಾಗುವುದಿಲ್ಲ. ರಕ್ಷಣೆ ಪಡೆಯುವುದು ಅನಿವಾರ್ಯ, ಆದರೆ ರಕ್ಷಣೆ ಕೊಡಬೇಕಾದವರು ರಕ್ಷಣೆಯ ಕಾರ್ಯವನ್ನು ಮರೆತು ನಡೆದರೆ ರಕ್ಷಣೆ ಪಡೆದುಕೊಳ್ಳುವವನು ಅಸಹಾಯಕತೆಯ ಪರಿಸ್ಥಿತಿಯನ್ನು ತಲುಪುತ್ತಾನೆ. ಇವನ್ನು ಬಸವಣ್ಣ ಹಲವು ನಿದರ್ಶನಗಳೊಂದಿಗೆ ಸೊಗಸಾಗಿ ಚಿತ್ರಿಸಿದ್ದಾರೆ. ಅಡುಗೆ ಮನೆಯಲ್ಲಿ ಒಲೆ ಉರಿಯುವುದು ಅಗತ್ಯ. ಆಗ ಒಲೆಯೆದುರು ನಿಲ್ಲುವ ಶಕ್ತಿ ನಮಗಿದೆ. ಆದರೆ ನಾವು ವಾಸಿಸುವ ಈ ಧರೆ ಹತ್ತಿ ಉರಿದರೆ ನಾವು ನಿಲ್ಲುವುದಾದರೂ ಎಲ್ಲಿ? ನೀರನ್ನು ತಡೆಯಲು (ಏರಿ) ದಿಣ್ಣೆಯನ್ನು ಕಟ್ಟಿರುತ್ತಾರೆ. ಏರಿಯೇ ನೀರನ್ನು ಹರಿಯಲು ಬಿಟ್ಟರೆ! ಬೇಲಿ ಇರುವುದು ಬೆಳೆಯನ್ನು ರಕ್ಷಿಸಲು. ಅದೇ ಬೇಲಿ ಬೆಳೆಯನ್ನು ಮೇಯ್ದು ಹಾಕಿದರೆ ರಕ್ಷಣೆ ಹೇಗೆ? ಮನೆಯನ್ನು ಕಾಯಬೇಕಾದ ನಾರಿಯೇ ತನ್ನ ಮನೆಯಲ್ಲಿ ಕಳ್ಳತನ ಮಾಡಿದರೆ ತಾಯಿಯ ಮೊಲೆ ಹಾಲು ಮಗುವಿಗೆ ಅಮೃತ, ತಾಯಿಯ ಮೊಲೆಹಾಲೇ ವಿಷವಾಗಿ ಕೊಂದರೆ ಯಾರಿಗೂ ದೂರಲು ಸಾಧ್ಯವಿಲ್ಲ ಈ ಎಲ್ಲ ವಿಘಟನೆಗಳೂ ಕೂಡ ಕಾಯುವ ದೈವದ

ಕೊಲ್ಲುವ ಬುದ್ಧಿಯ ಸಂಕೇತವಾಗಿದೆ. ಹೀಗಾದಲ್ಲಿ ರಕ್ಷಿಸಲು ಇನ್ನಾರಿಗೂ ಸಾಧ್ಯವಿಲ್ಲ ಎಂಬುದನ್ನು ಬಸವಣ್ಣ ವಿವರಿಸಿದ್ದಾರೆ.

=====0======

# ಉರಿಲಿಂಗಪೆದ್ದಿಯ ವಚನಗಳು

**ಸಾರಾಂಶ :**

ಶಿವ ಹಾಗೂ ಶಿವಲಿಂಗದಲ್ಲಿ ಯಾವುದೇ ಬೇಧವಿಲ್ಲ ಎಂಬುದನ್ನು ಉದಾಹರಣೆಗಳ ಮೂಲಕ ಇಲ್ಲಿ ಸಾರಿದ್ದಾನೆ. ಸೂರ್ಯನಿಲ್ಲದೆ ಹಗಲು ಇರುವುದಿಲ್ಲ, ದೀಪವಿಲ್ಲದೆ ಬೆಳಕು, ಹೂವಿಲ್ಲದೆ ಪರಿಮಳ ಇರಲು ಸಾಧ್ಯವಿಲ್ಲ. ಅಂತೆಯೇ ಅತಿ ಶ್ರೇಷ್ಠವಾದ ವಿಚಾರವು ಶಿವನಿಂದ ಮಾತ್ರವೇ ತೋರಿಸಲ್ಪಡುವುದು.

ಇಲ್ಲೆಲ್ಲ ಒಂದಕ್ಕೊಂದು ಸಂಬಂಧ ಹೊಂದಿದೆ. ಸೂರ್ಯನನ್ನು ಬಿಟ್ಟು ಹಗಲು, ದೀಪವನ್ನು ಬಿಟ್ಟು ಬೆಳಕಿನ ಬಗ್ಗೆ ಯೋಚಿಸಲು ಸಾಧ್ಯವೇ ಇಲ್ಲ. ಅಂತೆಯೇ ಹೂವಿಲ್ಲದೆ ಪರಿಮಳದ ಯೋಚನೆ ಮಾಡಲು ಸಾಧ್ಯವೇ? ಎಲ್ಲವೂ ಶಿವನಿಂದ ಆಗಿರುವುದರಿಂದ ಎಲ್ಲೆಡೆ ಶಿವನೇ ತೋರುತ್ತಿದ್ದಾನೆ.

ಪರುಷಮಣಿಯು ಮುಟ್ಟಿದ್ದನ್ನು ಚಿನ್ನವಾಗಿಸುವ ಶಿಲೆ. ಇದರಿಂದ ಮಾಡಿದ ಮನೆಯಲ್ಲಿ ವಾಸಿಸುವವನು ಎಂದಾದರೂ ಭಿಕ್ಷೆಗೆ ಹೋಗುವನೇ? ಸದಾ ಶುಭ್ರಜಲ ಹರಿವ ತೊರೆಯಲ್ಲಿ ನಿಂತಿರುವ ವ್ಯಕ್ತಿ ಬಾಯಾರಿತು ಎಂದು ಕೆರೆಯನ್ನು ಹುಡುಕಿ ಹೋಗುವುದಿಲ್ಲ, ಅಂತೆಯೇ ಮಂಗಳಕರವಾದ ಲಿಂಗವನ್ನು ಧರಿಸಿದ ವ್ಯಕ್ತಿ ಇತರ ದೈವವನ್ನು ನೆನಪಿಸಿಕೊಳ್ಳುವುದಿಲ್ಲ ಎಂದು ಹೇಳಿದ್ದಾನೆ.

ಗುರುವಾದವರು ಲಘುವಾಗಿ ವರ್ತಿಸಬಾರದು ಗುರುಗುರುವೇ ಲಘು ಲಘುವೇ. ಗುರು ಲಘುವಾಗಿ ವರ್ತಿಸಿದರೆ ಅದು ಅನಾಚಾರ, ಗುರು ಲಿಂಗ ಜಂಗಮವನ್ನು ಲಘುವಾಗಿ ಕಂಡ ವ್ಯಕ್ತಿ ತಾನೇ ಲಘುವಾಗುವನು ಎಂದು ಇಲ್ಲಿ ಹೇಳುತ್ತಾನೆ.

ಹಿರಿಯರು ತಮ್ಮ ಹಿರಿತನ ಬಿಟ್ಟು ಸಣ್ಣತನ ತೋರಿದಾಗ ತಮ್ಮ ಮರ್ಯಾದೆಯನ್ನು ಕಳೆದುಕೊಳ್ಳುತ್ತಾರೆ. ಅವರು ಮರ್ಯಾದೆ ಕಳೆದುಕೊಂಡಾಗ ಅದು ಅಪಚಾರ. ಹಾಗಾಗಿ ತಮ್ಮ ತಮ್ಮ ನಡವಳಿಕೆ ತಮ್ಮ

ತಮ್ಮ ಘನತೆಗೆ ತಕ್ಕಂತೆ ಇರಬೇಕು ಎಂಬುದು ವಚನಕಾರನ ಆಶಯ.

**ಸಂದರ್ಭ:**

1.ಪುಷ್ಪವಿಲ್ಲದೆ ಪರಿಮಳವನರಿಯಬಹುದೆ.

ಆಯ್ಕೆ : ಈ ಸಾಲನ್ನು ಉರಿಲಿಂಗಪೆದ್ದಿ ಬರೆದಿರುವ ವಚನಗಳಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಮಹಾಘನ ನಿರಾಳನಾದ ಚಿಂತೆಯಿಲ್ಲದ ಪರಶಿವನಿಂದ ಲಿಂಗವು (ವೇದ್ಯವಾಗುತ್ತದೆ) ಕಾಣಿಸುತ್ತದೆ ಎನ್ನುವುದನ್ನು ನಿರೂಪಿಸುವಾಗ ವಚನಕಾರ ಈ ನಿದರ್ಶನದ ಮೂಲಕ ವಿವರಿಸಿದ್ದಾನೆ.

ವಿವರಣೆ: ಸೂರ್ಯನಿಲ್ಲದೆ ಹಗಲು ಸಾಧ್ಯವಿಲ್ಲ. ದೀಪವಿಲ್ಲದೆ ಬೆಳಕು ಇರಲು ಸಾಧ್ಯವಿಲ್ಲ. ಹೂವು ಇಲ್ಲದೆ ಪರಿಮಳ ಇರಲು ಸಾಧ್ಯವಿಲ್ಲ. ಸಕಲವೂ ಇಲ್ಲದೆ ಪರಿಶುದ್ಧತೆಯನ್ನುಕಾಣಲು ಸಾಧ್ಯವಿಲ್ಲ. ಅದೇರೀತಿ ಪರಿಶುದ್ಧನಾದ ಅತ್ಯಂತ ಶ್ರೇಷ್ಠನಾದ ಪರಶಿವನ ಮೂಲಕ ಲಿಂಗವು ಕಾಣುತ್ತದೆ.ಶಿವನಿಂದಲೇ ಲಿಂಗವು ಅನುಭವಕ್ಕೆ ಬರುತ್ತದೆ. ಹೂವು ಪರಿಮಳ ಹೇಗೆ ಅಭಿನ್ನವೋ ಅದೇ ರೀತಿ ಪರಶಿವ- ಲಿಂಗಗಳೂ ಭಿನ್ನವಲ್ಲವೆಂಬುದನ್ನು ಇಲ್ಲಿ ಹೇಳಲಾಗಿದೆ.

2.ಅನ್ಯಲಿಂಗಗಳ ನೆನೆವನೆ ನಿಮ್ಮ ಭಕ್ತನು.

ಆಯ್ಕೆ: ಈ ಸಾಲನ್ನು ಉರಿಲಿಂಗಪೆದ್ದಿ ಬರೆದಿರುವ ವಚನಗಳಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ವಚನಕಾರರು ಭಕ್ತನ ಭಕ್ತಿಯನ್ನು ಮತ್ತು ಆರಾಧ್ಯದೇವರ ಮಹಿಮೆಯನ್ನು ಕುರಿತು ಹೇಳುವಾಗ ಈ ಸಾಲು ಬಂದಿದೆ.

ವಿವರಣೆ: ಪರುಷ ಮಣಿಯ ಮನೆಯಲ್ಲಿರುವವನು ಭಿಕ್ಷೆಗಾಗಿ ಮನೆ-ಮನೆ ತಿರುಗುವುದಿಲ್ಲ. ಅದೇ ರೀತಿ ಮೈಮೇಲೆ ಲಿಂಗವನ್ನು ಧರಿಸಿದ ಮಹಾಭಕ್ತನು ಅನ್ಯಲಿಂಗಗಳನ್ನು ನೆನೆಯುವುದಿಲ್ಲ ಎನ್ನುವುದಾಗಿ ಉರಿಲಿಂಗಪೆದ್ದಿ ಹೇಳುತ್ತಾನೆ. 3. ತಾನೆ ಲಘುಮಾಡಿ ಲಘುವಾದನಯ್ಯ.

ಆಯ್ಕೆ : ಈ ಸಾಲನ್ನು ಉರಿಲಿಂಗಪೆದ್ದಿ ಬರೆದಿರುವ ವಚನಗಳಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಗುರುವಿನ ಶ್ರೇಷ್ಠತೆಯನ್ನು ಹೇಳುವಾಗ, ಗುರುವು ಲಘುವರ್ತನದಲ್ಲಿ ವರ್ತಿಸಬಾರದು ಎನ್ನುವಾಗ ವಚನಕಾರ ಈ ಮಾತನ್ನು ಹೇಳಿದ್ದಾನೆ.

ವಿವರಣೆ: ಗುರುವು ತನ್ನ ಸಚ್ಚಾರಿತ್ರ್ಯ ಮತ್ತು ವ್ಯಕ್ತಿತ್ವದಿಂದ ತನ್ನ ಘನತೆಯನ್ನು ಕಾಪಾಡಿಕೊಳ್ಳಬೇಕು. ಉಳಿದವರಿಗೆ ಮಾದರಿಯಾಗಿ ಬದುಕಬೇಕು. ಲಘುವರ್ತನವನ್ನು ತೋರಬಾರದು. ಲಘುವರ್ತನ ತೋರಿದರೆ ಉಳಿದವರ ದೃಷ್ಟಿಯಲ್ಲಿ ಲಘುವಾಗಿ ಹೋಗುತ್ತಾನೆ. ಲಘುವರ್ತನೆಯನ್ನು ತೋರದೆ ಶ್ರೇಷ್ಠವಾದ ವ್ಯಕ್ತಿತ್ವವನ್ನು ಕಾಯ್ದುಕೊಳ್ಳುವುದು ಗುರುವಿನ ಕರ್ತವ್ಯವಾಗಿದೆ ಎನ್ನುತ್ತಾನೆ. ಉರಿಲಿಂಗಪೆದ್ದಿ ಪೂಜೆ ಮತ್ತು ಭಕ್ತಿಯ ವಿಚಾರದಲ್ಲಿ ಅದರ ಬಗ್ಗೆ ಅನಾಸಕ್ತಿಯನ್ನು ತೋರಿ, ಹಗುರಮಾಡಿದರೆ ತಾನೂ ಲಘುವಾಗುತ್ತಾನೆ. ಎನ್ನಲಾಗಿದೆ.

**ಒಂದು ವಾಕ್ಯದಲ್ಲಿ ಉತ್ತರಿಸಿ :**

1. ಉರಿಲಿಂಗಪೆದ್ದಿಯ ವಚನಗಳ ಅಂಕಿತ ಯಾವುದು?

ಉರಿಲಿಂಗಪೆದ್ದಿಯ ವಚನಗಳ ಅಂಕಿತ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

2. ಯಾವುದರಿಂದ ಪರಿಮಳವನ್ನು ಅರಿಯಬಹುದು?

ಪುಷ್ಪದಿಂದ ಪರಿಮಳವನ್ನು ಅರಿಯಬಹುದು.

3.ಯಾರು ಅನ್ಯಲಿಂಗವನ್ನು ನೆನೆಯುವುದಿಲ್ಲ?

ಮಂಗಳ ಲಿಂಗವನ್ನು ಅಂಗದ ಮೇಲೆ ಧರಿಸಿದವನು ಅನ್ಯಲಿಂಗವನ್ನು ನೆನೆಯಲಾರ.

4. ಗುರು ಹೇಗೆ ವರ್ತಿಸಬಾರದು?

ಗುರು ಲಘುವಾಗಿ ವರ್ತಿಸಬಾರದು.

**ಎರಡು –ಮೂರುವಾಕ್ಯಗಳಲ್ಲಿ ಉತ್ತರಿಸಿ :**

1. ಸೂರ್ಯ ಮತ್ತು ದೀಪಗಳಿಂದಾಗುವ ಉಪಯೋಗಗಳಾವುವು?

ಸೂರ್ಯನಿಂದ ಹಗಲು ಉಂಟಾಗುತ್ತದೆ. ಹಗಲಿನಿಂದ ಸಕಲ ಪ್ರಾಣಿ ಪಕ್ಷಿಗಳಿಗೂ ಚಟುವಟಿಕೆಯಿಂದ ಇರಲು ಸಾಧ್ಯ. ದೀಪ ಇಲ್ಲದೇ ರಾತ್ರಿಯಲ್ಲಿ ಬೆಳಕುಂಟಾಗದು. ದೀಪದ ಬೆಳಕೇ ಕತ್ತಲಲ್ಲಿ ಮಾರ್ಗದರ್ಶಕವಾಗಿರುತ್ತದೆ. ಇಲ್ಲೆಲ್ಲ ಒಂದಕ್ಕೊಂದು ಸಂಬಂಧ ಹೊಂದಿದೆ. ದೀಪ ಹಾಗೂ ಸೂರ್ಯನನ್ನು ಬಿಟ್ಟು ಬೆಳಕಿನ ಬಗ್ಗೆ ಯೋಚಿಸಲು ಸಾಧ್ಯವೇ ಇಲ್ಲ.

2. ಯಾರು ಮನೆಮನೆಯನ್ನು ತಿರಿಯನು? ಕೆರೆಯುದಕವನ್ನರಸದವನು ಯಾರು?

ಪರುಷದ ಮನೆಯಲ್ಲಿ ವಾಸಿಸುವವನು ಭಿಕ್ಷೆಗಾಗಿ ಮನೆ ಮನೆಯನ್ನು ತಿರುಗುವುದಿಲ್ಲ. ನದಿಯಲ್ಲಿರುವವನು ಬಾಯಾರಿಕೆಯಾದ ಕೂಡಲೇ ಕೆರೆಯ ನೀರನ್ನು ಅರಸಿಕೊಂಡು ಹೋಗುವುದಿಲ್ಲ.

3. ಗುರುವಿನ ಲಕ್ಷಣಗಳೇನು?

ಗುರುವು ಯಾವಾಗಲೂ ಲಘುವಾಗಿ ವರ್ತಿಸಬಾರದು. ಗುರು ಯಾವಾಗಲೂ ಶಿಷ್ಯನ ಮೋಕ್ಷದ ಹಾದಿಗೆ ದಾರಿದೀಪವಾಗಿರಬೇಕು. ಗುರು ಲಿಂಗ ಜಂಗಮವೆಂಬ ತ್ರಿವಿಧವನ್ನು ಲಘುವಾಗಿ ಭಾವಿಸದೇ ಆಚರಿಸುವುದು ಗುರುವಿನ ಲಕ್ಷಣ. ಗುರು ಲಿಂಗ ಜಂಗಮಮನ್ನು ಲಘುವಾಗಿ ಕಂಡ ವ್ಯಕ್ತಿ ತಾನೇ ಲಘುವಾಗುವನು ಎಂದು ಇಲ್ಲಿ ಹೇಳುತ್ತಾನೆ. ಗುರುವು ಲಿಂಗಪೂಜೆಯಲ್ಲಿ ಪ್ರಸಾದದಲ್ಲಿ ಕಡಿಮೆ ಮಾಡದೇ ಭಕ್ತಿಯನ್ನು ತೋರಿಸಬೇಕು. ಹಿರಿಯರು ತಮ್ಮ ಹಿರಿತನ ಬಿಟ್ಟು ಸಣ್ಣತನ ತೋರಿದಾಗ ತಮ್ಮ ಮರ್ಯಾದೆಯನ್ನು ಕಳೆದುಕೊಳ್ಳುತ್ತಾರೆ.

**ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ :**

1. ಮಂಗಳ ಲಿಂಗದ ಮಹತ್ವವನ್ನು ಹೇಗೆ ವಿವರಿಸಲಾಗಿದೆ?

ಮಂಗಳ ಲಿಂಗದ ಮಹತ್ವವನ್ನು ಉರಿಲಿಂಗ ಪೆದ್ದಿಯು ಕೆಲವು ದೃಷ್ಟಾಂತಗಳ ಮೂಲಕ ವಿವರಿಸಿದ್ದಾನೆ. ಪರುಷದ ಗೃಹದೊಳಗೆ ವಾಸವಾಗಿರುವವನಿಗೆ ಸಂಪತ್ತಿನ ಕೊರತೆ ಇರುವುದಿಲ್ಲ. ಅವನು ಭಿಕ್ಷೆಗಾಗಿ

ಮನೆ ಮನೆಯನ್ನು ತಿರುಗುವುದಿಲ್ಲ. ನದಿಯೊಳಗೆ ಇಳಿದವನಿಗೆ ಒಂದು ವೇಳೆ ಬಾಯಾರಿಕೆಯಾದರೆ, ನೀರಿಗಾಗಿ ಕೆರೆಯನ್ನು ಹುಡುಕುತ್ತಾ ಹೋಗುವುದಿಲ್ಲ. ಅದೇ ರೀತಿ ಶರೀರದ ಮೇಲೆ ಮಂಗಳ ಲಿಂಗವನ್ನು ಧರಿಸಿದವನಿಗೆ ಅನ್ಯಲಿಂಗವನ್ನು ನೆನೆಯುವ ಅಗತ್ಯ ಬರುವುದಿಲ್ಲ. ಅನ್ಯಲಿಂಗಗಳನ್ನು ನೆನೆಯುವುದೂ ಇಲ್ಲ. ಶರೀರದ ಮೇಲಿನ ಮಂಗಳಲಿಂಗವು ಅತ್ಯಂತ ಪವಿತ್ರವಾದದ್ದು. ಅಂತಹ ಪವಿತ್ರವಾದ ಮಂಗಳಲಿಂಗವನ್ನು ಧರಿಸಿದವನಿಗೆ ಅನ್ಯದೇವರ ಅವಶ್ಯಕತೆಯಿರುವುದಿಲ್ಲ ಎಂಬುದಾಗಿ ವಚನಕಾರರು ಮಂಗಳಲಿಂಗದ ಮಹತ್ವವನ್ನು ಸಾರಿದ್ದಾರೆ. ಚಿಂತೆಯಿಲ್ಲದ ಅತಿಶ್ರೇಷ್ಠವಾದ ಮನಸ್ಥಿತಿಯನ್ನು ಶಿವಧ್ಯಾನದಿಂದ ಸಾಧಿಸಬಹುದೆಂಬುದನ್ನು ಇಲ್ಲಿ ತಿಳಿಸಲಾಗಿದೆ. ಮಂಗಳಕರವಾದ ಅಂಗದ ಸಾಂಗತ್ಯವುಳ್ಳವನು ಬೇರೆಯವರ ಬಗ್ಗೆ, ಬೇರೆಯದರ ಬಗ್ಗೆ ಚಿಂತಿಸನೆಂಬುದನ್ನು ಇಲ್ಲಿನ ವಚನಗಳು ನಿರೂಪಿಸುತ್ತವೆ.

2. ಗುರು ಲಘುವರ್ತನದಲ್ಲಿ ವರ್ತಿಸಬಾರದೇಕೆ?

ಗುರುವಿನ ನಡತೆಯು ಘನತೆಯುಳ್ಳದ್ದಾಗಿರಬೇಕೆಂಬುದನ್ನು ಉರಿಲಿಂಗಪೆದ್ದಿಯ ವಚನಗಳು ನಿರೂಪಿಸುತ್ತವೆ. ಗುರು ಒಬ್ಬ ಶ್ರೇಷ್ಠ ವ್ಯಕ್ತಿ. ಅನ್ಯರಿಗೆ ದಾರಿಯನ್ನು ತೋರುವವನು ಭಕ್ತಿಗೆ ತಾನೇ ಮಾದರಿಯಾಗಬೇಕಾದವನು. ಅಂತಹ ಗುರುವಿನಿಂದ ಕೆಳಮಟ್ಟದ ನಡತೆ ಸರಿಹೊಂದುವುದಿಲ್ಲ. ಗುರುವು ಲಘುವರ್ತನದಲ್ಲಿ ವರ್ತಿಸಿದರೆ ಅದು ಆಚಾರ ಎನಿಸಿಕೊಳ್ಳುವುದಿಲ್ಲ. ಗುರುವು ಆಚಾರವಂತನಾಗಬೇಕಾದರೆ ಆತನ ನಡತೆಯೂ ಶ್ರೇಷ್ಠವಾಗಿರಬೇಕು. ಲಘುವಿಗೆ ಗುರುವಿನ ವರ್ತನೆ ಅಸಾಧ್ಯ ಹಾಗಾಗಿ ಲಘು, ಎಂದಿಗೂ ಲಘುವಾಗಿಯೇ ವರ್ತಿಸುತ್ತಾನೆ. ಆದರೆ ಎಂದಿಗೂ ಗುರುವಾದವನು ಲಘುವಾಗಿ ವರ್ತಿಸಬಾರದು.ಇದು ಸಲ್ಲದ ಆಚಾರವಾಗುವುದು. ಸದಾ ಗುರುವರ್ತನೆಯಲ್ಲೇ ಮುನ್ನಡೆಯಬೇಕು. ಗುರು–ಲಿಂಗ–ಜಂಗಮವೆಂಬ ತ್ರಿವಿಧವನ್ನು ಲಘುವಾಗಿ ಭಾವಿಸದೆ ಆಚರಿಸುವುದು ಗುರುವಿನ ಲಕ್ಷಣ. ಗುರುವು ಲಿಂಗ

ಪೂಜೆಯಲ್ಲಿ, ಪ್ರಸಾದದಲ್ಲಿ ಕಡಿಮೆಯನ್ನು ಮಾಡದೇ ನಿಜ ಭಕ್ತಿಯನ್ನು ತೋರಿಸಬೇಕು. ಎಂದಿಗೂ ಲಘುವರ್ತನದಲ್ಲಿ ನಡೆದುಕೊಂಡು ತನ್ನ ಘನತೆಯನ್ನು ಹಾಳು ಮಾಡಿ ಕೊಳ್ಳಬಾರದು. ಘನತೆಯನ್ನು ಹಾಳುಮಾಡಿಕೊಂಡಲ್ಲಿ ಗುರುವೇ ಸಮಾಜಕ್ಕೆ ಲಘುವಾದಂತೆ ತೋರುತ್ತಾನೆ. ಹಾಗಾಗಿ ಗುರು ಲಘುವರ್ತನದಲ್ಲಿ ವರ್ತಿಸಬಾರದು.

3. ಉರಿಲಿಂಗಪೆದ್ದಿಯ ವಚನಗಳಲ್ಲಿನ ಆಶಯವೇನು?

ಉರಿಲಿಂಗ ಪೆದ್ದಿಯು ಒಬ್ಬ ಚಿಂತಕನೆಂಬುದು ಆತನ ವಚನಗಳ ಆಶಯದಿಂದ ಅರಿವಾಗುತ್ತದೆ. ಈತ ಶಿವ ಮತ್ತು ಲಿಂಗವನ್ನು ಅಭೇದ್ಯವಾಗಿ ಪ್ರತಿಪಾದಿಸಿದ್ದಾನೆ. ಸೂರ್ಯನಿಲ್ಲದೇ ಹಗಲು ಸಾಧ್ಯವಿಲ್ಲ. ದೀಪವಿಲ್ಲದೇ ಬೆಳಕು ಇರಲು ಸಾಧ್ಯವಿಲ್ಲ, ಪುಷ್ಪವಿಲ್ಲದೆ ಪರಿಮಳವಿಲ್ಲ. ಅದೇ ರೀತಿ ಸಕಲವೂ ಇಲ್ಲದೆ ಪರಿಶುದ್ಧತೆಯನ್ನು ಕಾಣಲು ಸಾಧ್ಯವಿಲ್ಲ. ಅದೇ ರೀತಿ ಪರಿಶುದ್ಧನಾದ ಅತ್ಯಂತ ಶ್ರೇಷ್ಠವಾದ ಪರಶಿವನ ಮೂಲಕ ಲಿಂಗವು ಕಾಣುತ್ತದೆ. ಶಿವನಿಂದಲೇ ಲಿಂಗವು ಅನುಭವಕ್ಕೆ ಬರುತ್ತದೆ. ಹೂವು– ಪರಿಮಳ ಹೇಗೆ ಅಭಿನ್ನವೋ ಅದೇ ರೀತಿ ಪರಶಿವ–ಲಿಂಗಗಳೂ ಭಿನ್ನವಲ್ಲ ಎಂಬುದನ್ನು ಹೇಳಲಾಗಿದೆ. ಮುಟ್ಟಿದ್ದೆಲ್ಲವನ್ನೂ ಚಿನ್ನವಾಗಿಸುವ ಮಣಿಯ ಮನೆಯೊಳಗಿದ್ದವನು ಭಿಕ್ಷೆಗಾಗಿ ಮನೆ ಮನೆ ತಿರುಗುವುದಿಲ್ಲ. ಸಂಪತ್ತಿನ ಕೊರತೆ ಆತನಿಗೆ ಇರುವುದಿಲ್ಲ. ನದಿಯಲ್ಲಿರುವವನಿಗೆ ಬಾಯಾರಿಕೆಯಾದರೆ ನೀರಿಗಾಗಿ ಕೆರೆಯನ್ನು ಹುಡುಕುತ್ತಾ ಹೋಗುವುದಿಲ್ಲ. ಅದೇ ರೀತಿ ಮೈಮೇಲೆ ಲಿಂಗವನ್ನು ಧರಿಸಿದ ಮಹಾಭಕ್ತನು ಅನ್ಯಲಿಂಗವನ್ನು ನೆನೆಯುವುದಿಲ್ಲ. ಗುರು ಒಬ್ಬ ಶ್ರೇಷ್ಠ ವ್ಯಕ್ತಿ, ಅನ್ಯರಿಗೆ ದಾರಿಯನ್ನು ತೋರುವವನು, ಭಕ್ತಿಗೆ ಮಾದರಿಯಾಗಿರುವವನು. ಭಕ್ತಿಯನ್ನು ಮೂಡಿಸುವ ಗುರುವು ಘನತೆಯುಳ್ಳವನಾಗಿರಬೇಕು, ಆಚಾರವಂತನಾಗಿರಬೇಕು, ಗುರುವು ಲಘುವಾಗಿ ವರ್ತಿಸಬಾರದು. ಗುರುವು ಲಿಂಗಪೂಜೆಯಲ್ಲಿ, ಪ್ರಸಾದದಲ್ಲಿ ಕಡಿಮೆಯನ್ನು ಮಾಡದೇ

ನಿಜಭಕ್ತಿಯನ್ನು ತೋರಿಸಬೇಕು ಎಂದಿದ್ದಾನೆ. ನಿಜಭಕ್ತಿಯಿಂದ ಜೀವನ ಸಾಗಿಸಬೇಕು, ನಿರ್ಮಲ ಮತ್ತು ಶುದ್ಧವಾದ ಮನಸ್ಸನ್ನು ಹೊಂದಲು ಶಿವಪೂಜೆಯ ಅಗತ್ಯವಿದೆ ಎನ್ನುವುದರ ಮೂಲಕ ಒಟ್ಟಾರೆಯಾಗಿ ಈತನ ವಚನಗಳಲ್ಲಿ ಲಿಂಗದ ಮಹತ್ವವನ್ನು ಪ್ರತಿಪಾದಿಸುವ ಆಶಯವಿದೆ ಎನ್ನಬಹುದು.

====0====

# ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು

**ಕುಮಾರವ್ಯಾಸ**

**ಸಾರಾಂಶ:**

ಕೀಚಕನ ಕಾಟಕ್ಕೆ ಒಳಗಾದ ದ್ರೌಪದಿಯು, ತನ್ನ ಮುಂದಿನ ಕಾರ್ಯದ ಬಗ್ಗೆ ಚಿಂತಿಸುತ್ತ ತನ್ನಲ್ಲೇ ಹೇಳಿಕೊಳ್ಳುತ್ತಾಳೆ. "ನನಗಾದ ಅವಮಾನವನ್ನು ಯಾರಿಗೆ ಹೇಳಲಿ? ಯಾರ ಬಳಿಗೆ ಹೋಗಲಿ? ಯಾರಲ್ಲಿ ಹೇಳಲಿ? ಯಾರನ್ನು ಬೇಡಿಕೊಳ್ಳಲಿ? ಆ! ಹೆಣ್ಣಿನ ಜನ್ಮಕ್ಕೆ ಧಿಕ್ಕಾರವಿರಲಿ. ಮಹಾಪಾಪಿಷ್ಟಳಾದ ನನ್ನಂತೆ ನವೆದವರು ಈ ಹಿಂದೆ ಯಾರಿದ್ದಾರೆ? ಅಯ್ಯೋ ನನಗೆ ಸಾವು ಕೂಡ ಬರುತ್ತಿಲ್ಲವಲ್ಲ!" ಎಂದು ತನ್ನ ಹೊಟ್ಟೆಯ ಮೇಲೆ ಹೊಡೆದುಕೊಂಡು ಸಂಕಟಪಟ್ಟಳು.

"ಧರ್ಮರಾಯನಲ್ಲಿ ಹೇಳೋಣ ಎಂದರೆ, ಅವನಿಗೆ ಧರ್ಮದ ಕ್ಷಮೆಯ ಗರ(ಗ್ರಹ) ಬಡಿದುಕೊಂಡಿದೆ. ಅರ್ಜುನನಿಗೆ ನನ್ನ ಮೇಲೆ ಮಮತೆಯುಂಟು ನಿಜ. ಆದರೆ ಅವನಿಗೆ ತನ್ನ ಅಣ್ಣನ ಆಜ್ಞೆಯ ಭ್ರಮೆ ಕವಿದಿದೆ. ಉಳಿದ ಇಬ್ಬರು ನಕುಲ ಸಹದೇವರಲ್ಲಿ ಹೇಳೋಣ ಎಂದರೆ ಅವರು ಈ ಕೀಚಕನೆಂಬ ನಾಯಿಯನ್ನು ಕೊಲ್ಲುವ ಸಾಮರ್ಥ್ಯವಿಲ್ಲದವರೆಂಬುದು ಸ್ಪಷ್ಟ." ಎಂದುಕೊಳ್ಳುತ್ತಾಳೆ.

"ಐವರು ಪಾಂಡವರಲ್ಲಿ ಪೌರುಷ ಮತ್ತು ಕೆಚ್ಚು ಉಳ್ಳವನೆಂದರೆ ಕಲಿಭೀಮ ಮಾತ್ರ. ನನಗೆ ವಿಪತ್ತು ಬಂದಿದೆಯೆಂದು ತಿಳಿದರೆ ತಡಮಾಡದೆ ಪ್ರತಿಕ್ರಿಯಿಸುತ್ತಾನೆ. ಆದುದರಿಂದ ದುಷ್ಟ ಕೀಚಕನು ಕೊಡುತ್ತಿರುವ ಹಿಂಸೆಯ ವಿಷಯವನ್ನೆಲ್ಲ ಭೀಮನಿಗೆ ಹೇಳಿಬಿಡುತ್ತೇನೆ. ಉಳಿದ ಸೋದರರಂತೆ ಅವನಲ್ಲೂ ಹುರುಳಿಲ್ಲ ಎಂದು ಗೊತ್ತಾದರೆ ನಾನು ಘೋರವಾದ ವಿಷವನ್ನು ಸೇವಿಸಿ ಪ್ರಾಣ ತ್ಯಾಗ ಮಾಡುತ್ತೇನೆ. ಎಂಬಂತೆ ದ್ರೌಪದಿಯು ಯೋಚಿಸಿದಳು.

ಈ ಭೀಮ ಎಬ್ಬಿಸಿದರೆ ಕೆರಳುತ್ತಾನೋ! ಅಥವಾ "ಒಬ್ಬಳೇ ಏಕೆ ಬಂದೆ? ಮುಖ ಏಕೆ ಮಂಕಾಗಿದೆ?" – ಎಂದು ನನ್ನನ್ನು ಸಮಾಧಾನದಿಂದ ಸಂತೈಸುತ್ತಾನೋ? ನಾನು ಬಂದುದು ಸರಿಯಾದ ಸಮಯವೋ ಅಲ್ಲವೋ!, ನೋಡುವ ಜನರ ಮನಸ್ಸಿಗೆ ಇದು ನಿಜಕ್ಕೂ ಅನಿರೀಕ್ಷಿತವಲ್ಲವೆ? ಏನು

ಮಾಡಲಿ? ... ಆಗುವುದೆಲ್ಲ ಆಗಲಿ... ಎಬ್ಬಿಸಿ ನೋಡಿಯೇ ಬಿಡುತ್ತೇನೆ" ಎಂದುಕೊಂಡು ದ್ರೌಪದಿ ಭೀಮನ ಸಮೀಪಕ್ಕೆ ಬಂದಳು.

ದ್ರೌಪದಿಯು ಮಲಗಿದ್ದ ಭೀಮನ ಮುಸುಕನ್ನು ಸಡಿಲಿಸಿ ಅವನ ಗಲ್ಲವನ್ನು ಹಿಡಿದು ಅಲುಗಿಸಿದಳು. ಆ ಮಹಾವೀರ ಕೂಡಲೇ ಎದ್ದು ದ್ರೌಪದಿಯನ್ನು ನೋಡಿದ, "ರಮಣಿ ! ಏಕೆ ಬಂದೆ? ನಿನ್ನ ಮುಖದಲ್ಲಿ ತುಂಬ ತಳಮಳ ಕಾಣುತ್ತಿದೆ!. ತಡಮಾಡದೆ ಬೇಗ ಹೇಳು. ರಾತ್ರಿಯ ಈ ಹೊತ್ತಿನಲ್ಲಿ ನೀನು ಏಕೆ ಬಂದೆ!?" ಎಂದು ಕೇಳಿದ.

ದ್ರೌಪದಿ ಭೀಮನಿಗೆ ಹೇಳಿದಳು, "ನಿನ್ನೆ ಮಧ್ಯಾಹ್ನ ಕೀಚಕನೆಂಬ ನಾಯಿ ಎಲ್ಲರೆದುರಿಗೆ ರಾಜಸಭೆಯ ಬಳಿ ನನ್ನನ್ನು ಒದ್ದ. ನಿನ್ನಂಥ ವೀರ ಗಂಡನಿರುವಾಗ ನನಗೆ ಅವಮಾನವಾದದ್ದು ಸರಿಯೇ ? ಅಷ್ಟೇ ಅಲ್ಲ, ಅವನು ನನ್ನ ಬೆನ್ನು ಬಿಡುವುದಿಲ್ಲ. ಆದ್ದರಿಂದ ನಾನು ಬದುಕುವುದಿಲ್ಲ. ನಾನು ಆತ್ಮಹತ್ಯೆ ಮಾಡಿಕೊಂಡರೆ ಆ ಪಾತಕ ನಿನ್ನನ್ನು ಸುತ್ತಿಕೊಳ್ಳುತ್ತದೆ". ಈ ಮಾತು ಕೇಳಿ ಭೀಮನಿಗೆ ತುಂಬ ಕೋಪ ಬಂದಿತು.

"ಭೀಮ!, ಕೇಳು. ಉಳಿದ ನಾಲ್ವರು ಪತಿಗಳು ಸುಖಕ್ಕಾಗಿ ನನ್ನ ಬಳಿ ಬರುತ್ತಾರೆ. ಆದರೆ ಮರ್ಯಾದೆ ಪ್ರತಿಷ್ಠೆಗಳ ಪ್ರಶ್ನೆ ಬಂದಾಗ ಅವರೆಲ್ಲ ಅಲ್ಲಿ ನಿಲ್ಲದೆ ಹೊರಟು ಹೋಗುತ್ತಾರೆ. ನಿನ್ನನ್ನು ಬಿಟ್ಟರೆ ಉಳಿದವರೆಲ್ಲ ಕಷ್ಟಕ್ಕೆ ಒಗ್ಗದವರಾಗಿದ್ದಾರೆ. ಆದುದರಿಂದ ನೀನು ನನ್ನನ್ನು ತುಂಬ ಕರುಣೆಯಿಂದ ನೋಡು. ಮನಸ್ಸಿನ ಶಾಂತತೆಯನ್ನು ದೂರವಿಡು. ಆ ಕ್ರೂರಿ ಕೀಚಕನನ್ನು ಕೊಲ್ಲು ನನ್ನ ಮೇಲೆ ಕರುಣೆದೋರು" ಎಂದು ದ್ರೌಪದಿ ಭೀಮನಿಗೆ ಕೈಮುಗಿಯುತ್ತ ಹೇಳಿದಳು.

ಆಗ ಭೀಮನು, ಹೋರಾಡುವುದಕ್ಕೆ ನಾನು; ನಿನ್ನನ್ನು ರಮಿಸಲು ಅವರು! ಚೆನ್ನಾಗಿದೆ. ಕೆಲವರು ಸಂಪಾದನೆ ಮಾಡಿ ಹಣ ತರುತ್ತಾರೆ, ಉಳಿದವರು ಕೆಲಸ ಮಾಡದೆ ಆನಂದವಾಗಿ ಉಂಡು ತಿಂದು ತಿರುಗಾಡುತ್ತಾರೆ. ಅವರು ಎಂದಿಗೂ ಯಾರಿಗೂ ಹೆದರಿ ನಡೆಯುವವರಲ್ಲ. ನೀನೀಗ ಅವರ ಬಳಿ ಹೋಗು. ನಿನಗಾದ ಅವಮಾನ, ಈಗ ಮಾಡಬೇಕಾದ

ಕೆಲಸ ಎರಡನ್ನೂ ಹೇಳಿ ಅವರು ಕಾರ್ಯ ಪ್ರವೃತ್ತರಾಗುವಂತೆ ಮಾಡು. ಪಾಂಡವರಲ್ಲಿ ನಾನು ಮಾತ್ರ ಬೇರೆ. ಏಕೆಂದರೆ ಅಣ್ಣ ಧರ್ಮರಾಯನಿಗೆ ನಾನು ಮಾಡಿದುದು ಯಾವುದು ಸರಿಬರುವುದಿಲ್ಲ, ನನಗೆ ಆತನನ್ನು ಕಂಡರೆ ತುಂಬ ಭೀತಿ. ಅವನನ್ನು ನಾನು ಖಂಡಿತವಾಗಿ ಇದಿರು ಹಾಕಿಕೊಳ್ಳಲಾರೆ.

ದ್ರೌಪದಿಯು, "ಹೆಂಡತಿಗೆ ವಿಪತ್ತು ಬಂದಾಗ ಒಬ್ಬನೇ ಗಂಡ ಇದ್ದರೂ ಆತ ವೈರಿಯನ್ನು ಖಂಡ ಖಂಡವಾಗಿ ತುಂಡರಿಸಿ ಕೊಂದುಬಿಡುತ್ತಾನೆ. ಅಥವಾ ತನ್ನೊಡಲನ್ನೇ ಬಲಿಕೊಟ್ಟಾದರೂ ಪತ್ನಿಯ ಮಾನವನ್ನುಳಿಸುತ್ತಾನೆ. ನನಗಾದರೋ ನೀವು ಐದು ಜನ ಗಂಡಂದಿರಿದ್ದೀರಿ. ನಿಮ್ಮನ್ನು ಗಂಡರೆಂದು ಕರೆಯಬೇಕೆ? ಭಂಡರೆಂದು ಕರೆಯಬೇಕೆ? – ನೀವೇ ಹೇಳಿ" ಎಂದು ದ್ರೌಪದಿ ಆರ್ಭಟಿಸಿದಳು.

ಅದಕ್ಕೆ ಭೀಮನು, "ದ್ರೌಪದಿ ! ಈಗ ನಾನು ಈ ಕೀಚಕನನ್ನು ಕೊಂದರೆ. ಆಹಾ! ಹೆಣ್ಣಿನ ಕೆಲಸಕ್ಕಾಗಿ ಈ ಕುಂತಿಯ ಮಗ ಭೀಮನು ತನ್ನ ಅಣ್ಣನ ಆಜ್ಞೆಯನ್ನು ಮೀರಿ ನಡೆದ ಎಂದು ದುರ್ಜನರು ಆಡಿಕೊಳ್ಳುತ್ತಾರೆ. ಆದುದರಿಂದ ನಾನು ಆ ತಂಟೆಗೇ ಹೋಗುವುದಿಲ್ಲ. ನೀನು ಈಗ ಅಣ್ಣನವರ ಬಳಿ ಹೋಗಿ ದೂರು ಹೇಳಿಕೋ. ಇದು ನಾವು ನುಂಗಲಾರದ ತುತ್ತು. ನಾವೀಗ ಅಣ್ಣನ ಆಜ್ಞೆ ಎಂಬ ಹಗ್ಗದಿಂದ ಬಂಧಿತರಾಗಿ ಬಿಟ್ಟಿದ್ದೇವೆ. ಏನೂ ಮಾಡಲಾರೆವು" ಎಂದು ಭೀಮನು ದ್ರೌಪದಿಗೆ ಹೇಳಿದ.

ದ್ರೌಪದಿಯು, "ನನ್ನಂತೆ ಅವಮಾನಕ್ಕೆ ಗುರಿಯಾಗುವ ಹೆಂಗಸರು ಇನ್ನು ಮುಂದೆ ಹುಟ್ಟದಿರಲಿ. ಹಾಗೆಯೆ ಲೋಕದಲ್ಲಿ ಭೀಮನಂಥ ಗಂಡ ಹುಟ್ಟದೆ ಇರಲಿ. ಪಾಂಡವರಿಗೆ, ಅವರ ಕೈಹಿಡಿದ ತನಗೆ ಅನುಭವಿಸುವುದಕ್ಕೆ ದಾರಿದ್ರ್ಯವಲ್ಲದೆ ಇನ್ನೇನೂ ಸಿಗಲಿಲ್ಲ. ಸಮೃದ್ಧವಾಗಿ ದೊರಕಿದ್ದೆಂದರೆ ದುಃಖ ಮಾತ್ರ. ಹಿಂದಿನವರಲ್ಲಿ ನನ್ನ ಹಾಗೆ ಮತ್ತು ಪಾಂಡವರ ಹಾಗೆ ಅತಿಶಯ ಸಂಕಟದಿಂದ ನವೆದವರು ಬೇರೆ ಯಾರಿದ್ದಾರೆ?' ಎಂದು ದ್ರೌಪದಿ ಸಂಕಟಪಟ್ಟಳು.

"ಸಭೆಯಲ್ಲಿ ಎಲ್ಲರ ಮುಂದೆ ಎಳೆಸಿ ತರೆಸಿ ಅವಮಾನಿಸಿದವನು ಕೌರವ. ಅನಂತರ ಅರಣ್ಯವಾಸ ಕಾಲದಲ್ಲಿ ಸೈಂಧವನು ಮುಂದಲೆಯನ್ನು ಹಿಡಿದು ನನ್ನನ್ನು ಎಳೆದುಕೊಡು ಹೋದ. ಇಂದು ಈ ಕೀಚಕ ನಾಯಿಯ ಕಾಲಲ್ಲಿ ಒದೆಸಿಕೊಂಡು ನೊಂದಿದ್ದೇನೆ. ಹೀಗೆ ಮೂರು ಬಾರಿ ಬಂದ ಭಂಗಗಳೇ ಸಾಕಲ್ಲವೇ?" ಎನ್ನುತ್ತ ದ್ರೌಪದಿ ನರಳಿದಳು.

"ನೀವು ಪಾಂಡವರು ಎಂತಹ ವೀರರೆಂದರೆ ಕೆರಳಿ ನಿಂತರೆ ಯಮನನ್ನೇ ಮುರಿದು ಕೆಡಹಬಲ್ಲ ಸಮರ್ಥರು. ಆದರೆ ನಿವೆಲ್ಲ ಸೇರಿದರೂ ನನ್ನೊಬ್ಬಳನ್ನು ಕಾಪಾಡಿಕೊಳ್ಳಲಾರಿರಿ. ಪಾಪಿಗಳು! ನಿಮಗೆ ಅಪಕೀರ್ತಿ ಬರುತ್ತದೆಂಬ ಅಂಜಿಕೆಯಾದರೂ ಬೇಡವೆ? ವೀರಕಾರ್ಯ ಮಾಡದ ತೋಳುಗಳು ನಿಮಗೆ ವ್ಯರ್ಥ ಹೊರೆಯಾಗಿವೆ. ಅವು ನಿಮಗೇಕೆ? ವೀವೆಲ್ಲ ರಾಜವಂಶದಲ್ಲಿ ಏಕೆ ಹುಟ್ಟಬೇಕಾಗಿತ್ತು?.. ಹೇಳಿ ಅನ್ನ ದಂಡಕ್ಕಾಗಿ ನಿಮ್ಮ ದೇಹವನ್ನು ಇಟ್ಟುಕೊಡಿದ್ದೀರಿ ಅಷ್ಟೆ" ಎಂದು ದ್ರೌಪದಿ ನಿಂದಿಸಿ ನುಡಿದಳು.

ದ್ರೌಪದಿಯ ನುಡಿಗಳನ್ನು ಕೇಳಿ ಭೀಮನ ಕಣ್ಣಿನಲ್ಲಿ ನೀರುಕ್ಕಿತು. ಅಂತರಂಗ ಆರ್ದ್ರವಾಯಿತು. ರೋಷವುಕ್ಕಿತು. ಮನಸ್ಸಿನಲ್ಲೇ ಹಗೆಗಳನ್ನು ಹಿಂಡಿದನು. ಪ್ರಚಂಡ ಮಲ್ಲರೊಂದಿಗೆ ಕಾದಾಡುವ ಪ್ರಸಂಗವನ್ನು ನೆನೆಸಿಕೊಂಡು ರೋಮಾಂಚನಗೊಂಡನು. ಅನುಕಂಪದಿಂದ ದ್ರೌಪದಿಯನ್ನು ಮೆಲ್ಲನೆ ಅಪ್ಪಿಕೊಂಡನು. ತನ್ನ ಸೆರಗಿನಿಂದ ಅವಳ ಕಣ್ಣುಗಳನ್ನು ಒರೆಸಿದನು.

ಭೀಮನು ದ್ರೌಪದಿಯ ತಲೆಗೂದಲನ್ನು ಮೆಲ್ಲಗೆ ಸವರಿದ. ಅವಳ ಗಲ್ಲವನ್ನು ಒರೆಸಿ ಮುದ್ದಾಡಿದ. ಅನಂತರ ಕಣ್ಣೀರಿನಲ್ಲಿ ಮುಳುಗಿದ್ದ ಅವಳ ಮುಖವನ್ನು ತನ್ನ ಮಂಚದ ಸಮೀಪದಲ್ಲಿ ಇರಿಸಿದ್ದ ಗಿಂಡಿಯ ನೀರಿನಲ್ಲಿ ತೊಳೆದ. ಅನಂತರ ಅವಳನ್ನು ಸಮಾಧಾನಪಡಿಸುತ್ತ "ದ್ರೌಪದಿ, ದುಃಖವನ್ನು ಹತ್ತಿಕ್ಕಿಕೋ. ನಾನು ಹೆಚ್ಚಿಗೆ ಏನನ್ನೂ ಹೇಳಬಯಸುವುದಿಲ್ಲ; ಒಟ್ಟಿನಲ್ಲಿ, ಇಂದು ನಾನು ನಮ್ಮಣ್ಣನ ಆಜ್ಞೆಯನ್ನು ದಾಟಿದೆ, ದಾಟಿದೆ ಹೋಗು."

ಕೀಚಕನ ಎದೆಯನ್ನು ಸೀಳಿ ಹಾಕುತ್ತೇನೆ. ವಿರಾಟನ ವಂಶದವರು ಯಾವುದೇ ರೀತಿಯಲ್ಲಿ ವಿರೋಧಿಸಿದರೆ ಅವನ ವಂಶದ ಹೆಸರೇ

ಉಳಿಯದಂತೆ ಅಳಿಸಿ ಹಾಕುತ್ತೇನೆ. ಕೀಚಕನ ಸಾವಿನಿಂದಾಗಿ ನಾವು ಇಲ್ಲಿರುವ ಸಂಗತಿ ಕೌರವನಿಗೆ ತಿಳಿದರೆ, ಕೌರವ ಸಮೂಹವನ್ನೆಲ್ಲ ಪುನಃ ಸೇರಿಸಿ ಬದುಕಿಸದಂತೆ ಸಣ್ಣ ಸಣ್ಣಕೆ ಕೊಚ್ಚಿ ಹಾಕುತ್ತೇನೆ. ಅನಂತರ ದೇವತೆಗಳು ನನ್ನ ಚರ್ಯೆಯನ್ನು ಒಪ್ಪದೆ ಅಯ್ಯೋ ಭೀಮನು ಈ ಅಹಿತ ಕೆಲಸ ಮಾಡಿದನೆ! ಎಂದು ಗೊಣಗಿದರೆ ಆ ದೇವ ಸಮೂಹದ ಮುಖಗಳನ್ನು ಮೇರುಪರ್ವತಕ್ಕೆ ಹಾಕಿ ತೇಯುತ್ತೇನೆ... – ಧೈರ್ಯ ತಳೆ, ಎನ್ನುತ್ತಾನೆ.

**ಸಂದರ್ಭ ಸ್ವಾರಸ್ಯ :**

1. ಎನ್ನವೊಲು ಮುನ್ನಾರು ನವೆದವರುಂಟು.

ಆಯ್ಕೆ: ಈ ಮಾತನ್ನು 'ಕುಮಾರವ್ಯಾಸ'ನು ರಚಿಸಿರುವ 'ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ: ಈ ಮಾತನ್ನು ದ್ರೌಪದಿಯು ತನ್ನಲ್ಲಿ ಹೇಳಿಕೊಳ್ಳುತ್ತಾಳೆ.

ಸ್ವಾರಸ್ಯ : ಪಾಂಡವರ ಅಜ್ಞಾತವಾಸದ ಅವಧಿಯಲ್ಲಿ. ಸೈರಂಧ್ರಿ ವೃತ್ತಿಯಲ್ಲಿದ್ದ ದ್ರೌಪದಿಯನ್ನು ಕಂಡ ಕಾಮುಕನಾದ ಕೀಚಕನು, ದ್ರೌಪದಿಯ ಬೆನ್ನು ಹತ್ತಿರುತ್ತಾನೆ. ಅವನ ಉಪಟಳದ ಕುರಿತಂತೆ ದೂರಿಕೊಂಡರೂ ರಾಜ–ರಾಣಿಯರಾಗಿದ್ದ ವಿರಾಟರಾಜ ಮತ್ತು ಸುದೇಷ್ಣೆಯರು ಸರಿಯಾಗಿ ಸ್ಪಂದಿಸಲಿಲ್ಲ. ಹೀಗಿರುವಾಗ ತನ್ನ ಅಸಹಾಯಕ ಸ್ಥಿತಿಗಾಗಿ ವ್ಯಥಿಸುತ್ತ ದ್ರೌಪದಿಯು ತನ್ನೊಳಗೆ ಈ ಮಾತನಾಡಿಕೊಳ್ಳುತ್ತಾಳೆ. ದ್ರೌಪದಿಯಂತಹ ಸಂಕಷ್ಟಕ್ಕೊಳಗಾದವರು ಇನ್ನೊಬ್ಬರಿಲ್ಲ ಎಂಬುದನ್ನು ಆಕೆಯ ಮಾತಿನಲ್ಲೇ ವ್ಯಕ್ತಪಡಿಸಿದ್ದು ಇಲ್ಲಿ ಕಾಣಿಸುತ್ತದೆ.

2. ಯಮಸುತಂಗರುಹುವೆನೆ ಧರ್ಮಕ್ಷಮೆಯ ಗರ ಹೊಡೆದಿಹುದು.

ಆಯ್ಕೆ: ಈ ಮಾತನ್ನು 'ಕುಮಾರವ್ಯಾಸ'ನು ರಚಿಸಿರುವ 'ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ: ಈ ಮಾತನ್ನು ದ್ರೌಪದಿಯು ತನ್ನಲ್ಲಿ ಹೇಳಿಕೊಳ್ಳುತ್ತಾಳೆ.

ಸ್ವಾರಸ್ಯ : ವಿವಾಹಿತಳಾದ ನಾರಿಯೊಬ್ಬಳನ್ನು ಆಕೆಯ ಗಂಡ ರಕ್ಷಿಸಬೇಕಾದುದು ಸಹಜ. ಆದರೆ ಅಜ್ಞಾತವಾಸದ ಅವಧಿಯಲ್ಲಿ ದ್ರೌಪದಿಯ ದಯನೀಯ ಸ್ಥಿತಿ ಹೇಗಿತ್ತೆಂದರೆ ಐದು ಮಂದಿ ಗಂಡಂದಿರಿದ್ದರೂ ಅವರಲ್ಲಿ ಯಾರೂ ಆಕೆಯನ್ನು ಕೀಚಕನಿಂದ ರಕ್ಷಿಸಲು ಮುಂದಾಗುವುದಿಲ್ಲ. ಹೀಗಿರುವಾಗ ದ್ರೌಪದಿಯು ತನ್ನ ಸಂಕಟವನ್ನು ಯಾರಲ್ಲಿ ಹೇಳಿಕೊಳ್ಳಲಿ? ಎಂದು ಆಲೋಚಿಸುತ್ತಾಳೆ. ಗಂಡಂದಿರಲ್ಲಿ ಹಿರಿಯನಾದ ಧರ್ಮರಾಜನಿಗೆ ಹೇಳೋಣ – ಎಂದು ಅಂದುಕೊಂಡರೆ, ಆತನಿಗೆ ಧರ್ಮಕ್ಷಮೆಯೆಂಬ (ನವಗ್ರಹಗಳಲ್ಲಿ ಸೇರದ) ಹತ್ತನೆಯ ಗ್ರಹ ಬಡಿದಿದೆ – ಎಂದು ತನ್ನೊಳಗೆ ಅಂದುಕೊಳ್ಳುತ್ತಾಳೆ. ತನ್ನ ಮಾನಕ್ಕೆ ಕುಂದು ಬರುವ ಪ್ರಸಂಗವೊದಗಿದಾಗ, ಹೆಣ್ಣೊಬ್ಬಳಿಗೆ ಉಂಟಾಗುವ ಸಾತ್ವಿಕ ಕ್ರೋಧ ಇಲ್ಲಿ ಕಾಣಿಸುತ್ತದೆ.

3.ನಾಯ ಕೊಲಲಕ್ಷಮರು

ಆಯ್ಕೆ: ಈ ಮಾತನ್ನು 'ಕುಮಾರವ್ಯಾಸ'ನು ರಚಿಸಿರುವ 'ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ: ಈ ಮಾತನ್ನು ದ್ರೌಪದಿಯು ತನ್ನಲ್ಲಿ ಹೇಳಿಕೊಳ್ಳುತ್ತಾಳೆ.

ಸ್ವಾರಸ್ಯ : ಕೀಚಕನ ಪುಟಳ ತಡೆಯುವಲ್ಲಿ ತನ್ನ ಪತಿಗಳೈವರಲ್ಲಿ ಯಾರು ಸಮರ್ಥರೆಂದು ದ್ರೌಪದಿ ತನ್ನ ಮನದೊಳಗೆ ಯೋಚಿಸುತ್ತಾಳೆ. ಧರ್ಮರಾಯನಾದರೋ ಧರ್ಮದ ಗರ ಹೊಡೆದವನು.ಅರ್ಜುನ ಅಣ್ಣನ ಆಜ್ಞೆಯ ಪಾಲನೆಯ ಭ್ರಮೆಗೆ ಒಳಗಾಗಿರುವವನು.ನಕುಲ ಸಹದೇವರಂತೂ ಕೀಚಕನೆಂಬ ನಾಯಿಯನ್ನು ಕೊಲ್ಲುವಲ್ಲಿ ನಿಸ್ಸಂದೇಹವಾಗಿಯೂ ಅಸಮರ್ಥರೆಂದು ತನ್ನ ಮನದಲ್ಲಿ ದ್ರೌಪದಿ ನಿರ್ಧರಿಸುತ್ತಾಳೆ.ಕೀಚಕನನ್ನು ಕೊಲ್ಲಲು ಭೀಮನೇ ಸಮರ್ಥನೆಂಬ ದ್ರೌಪದಿಯ ನಿರ್ಧಾರ ಅವನನ್ನು ಉಳಿದು ಉಳಿದಪಾಂಡವರ ಅಸಮರ್ಥತೆ ಇಲ್ಲಿ ವ್ಯಕ್ತವಾಗಿದೆ.

4.ಕಲಿಭೀಮನೇ ಮಿಡುಕುಳ್ಳ ಗಂಡನು.

ಆಯ್ಕೆ: ಈ ಮಾತನ್ನು 'ಕುಮಾರವ್ಯಾಸ'ನು ರಚಿಸಿರುವ 'ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ: ಈ ಮಾತನ್ನು ದ್ರೌಪದಿಯು ತನ್ನಲ್ಲಿ ಹೇಳಿಕೊಳ್ಳುತ್ತಾಳೆ.

ಸ್ವಾರಸ್ಯ : ಕೀಚಕನಿಂದ ಸಂತ್ರಸ್ತಳಾದ ದ್ರೌಪದಿ ತನ್ನ ಸಂಕಷ್ಟವನ್ನು ಪರಿಹರಿಸಬಲ್ಲ ವೀರರಾರೆಂದು ಯೋಚಿಸುತ್ತಾಳೆ. ಪರರಿಂದ ತೊಂದರೆಯಾದಾಗ ಮೊದಲು ತನ್ನ ಗಂಡನಲ್ಲಿ ದೂರಿಕೊಳ್ಳಬೇಕು. ಈಕೆಗೆ ಐವರು ಪತಿಯರಿರುವುದರಿಂದ ಅವರಲ್ಲಿ ಯಾರು ತನ್ನ ಕಷ್ಟವನ್ನು ನಿವಾರಿಸುವ ಸಾಮರ್ಥ್ಯವುಳ್ಳವರೆಂದು ಯೋಚಿಸುತ್ತಾಳೆ. ಧರ್ಮರಾಜನಾಗಲಿ ಅರ್ಜುನನಾಗಲಿ ನಕುಲಸಹದೇವರಾಗಲಿ ಕೀಚಕನನ್ನು ಕೊಂದು ತನ್ನ ಕಷ್ಟವನ್ನು ನಿವಾರಿಸಲಾರರೆಂದು ಯೋಚಿಸಿ, ಕೊನೆಗೆ ಭೀಮನೇ ತಕ್ಕವನೆಂದು ನಿರ್ಣಯಿಸುತ್ತಾಳೆ. ಭೀಮದೇವನು ಎಲ್ಲರಿಗಿಂತ ಶಕ್ತಿಶಾಲಿ ಮಾತ್ರವಲ್ಲ ತನ್ನ ಕಷ್ಟಕ್ಕೆ ಮಿಡಿಯುತ್ತಾನೆ ಎಂಬುದನ್ನು ದ್ರೌಪದಿ ಈ ರೀತಿ ಹೇಳಿಕೊಳ್ಳುತ್ತಾಳೆ.

5.ಹುರುಳಿಲ್ಲದೊಡೆ ಕುಡಿವೆನು ಘೋರತರ ವಿಷವ.

ಆಯ್ಕೆ: ಈ ಮಾತನ್ನು 'ಕುಮಾರವ್ಯಾಸ'ನು ರಚಿಸಿರುವ 'ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ : ಈ ಮಾತನ್ನು ದ್ರೌಪದಿಯು ತನ್ನಲ್ಲಿ ಹೇಳಿಕೊಳ್ಳುತ್ತಾಳೆ.

ಸ್ವಾರಸ್ಯ : ದ್ರೌಪದಿಯನ್ನು ಕೀಚಕನು ಬೆಂಬತ್ತಿರಲು, ಆತನಿಂದ ಬಿಡುಗಡೆಗೊಳಿಸಲು ಯಾರಲ್ಲಿ ವಿನಂತಿಸಿಕೊಳ್ಳಲಿ? ಎಂದು ಚಿಂತಿತಳಾಗಿ, ತನ್ನ ಪತಿಯರಲ್ಲಿ ಎರಡನೆಯವನಾದ ಭೀಮಸೇನನೇ ಯೋಗ್ಯನೆಂದುಕೊಳ್ಳುತ್ತಾಳೆ. ಒಂದೊಮ್ಮೆ ಆತನು ತನ್ನನ್ನು ಸಂರಕ್ಷಿಸದೆ ಹೋದಲ್ಲಿ, ತಾನು ಘೋರ ವಿಷವನ್ನು ಕುಡಿಯುತ್ತೇನೆ ಎಂದು ಹೇಳುತ್ತಾಳೆ. ಪ್ರಾಣಕ್ಕಿಂತಲೂ ಮಾನವೇ ಮುಖ್ಯವೆಂದು ಬಲವಾಗಿ ನಂಬಿದ್ದ ದ್ರೌಪದಿಯ ಮಾನಸಿಕ ದಾರ್ಢ್ಯ ಇಲ್ಲಿ ಕಾಣಿಸುತ್ತದೆ.

6.ತಳವಿಲ್ಲದುಸುರಿರುಳೇಕೆ ಬಂದೆ?

ಆಯ್ಕೆ: ಈ ಮಾತನ್ನು 'ಕುಮಾರವ್ಯಾಸ'ನು ರಚಿಸಿರುವ 'ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ: ಈ ಮಾತನ್ನು ಭೀಮ ದ್ರೌಪದಿಯಲ್ಲಿ ಕೇಳುತ್ತಾನೆ.

ಸ್ವಾರಸ್ಯ : ಕೀಚಕನಿಂದ ತನಗುಂಟಾದುಪಟಳವನ್ನು ತಡೆಯಲು ಭೀಮನೊಬ್ಬನೇ ಸಮರ್ಥನೆಂದು ನಿರ್ಧರಿಸಿದ ದ್ರೌಪದಿ ಅವನು ಮಲಗಿರುವಲ್ಲಿಗೆ ಬರುತ್ತಾಳೆ.ಮೆಲ್ಲ ಮೆಲ್ಲನೇ ಬಂದು ಮುಸುಕನ್ನು ಸರಿಸಿ ಗಲ್ಲವನ್ನು ಹಿಡಿದಲುಗಿಸಲು ಅಪ್ರತಿಮ ಮಲ್ಲ ಎದ್ದು ದ್ರೌಪದಿಯನ್ನು ಕಂಡು " ನೀನಿಲ್ಲಿಗೆ ಬರಲು ಕಾರಣವೇನು? ನಿನ್ನ ಮುಖದಲ್ಲಿ ಕಳವಳ, ಹೆದರಿಕೆ ಕಾಣುತ್ತಿದೆ.ರಾತ್ರಿ ಇಲ್ಲಿಗೆ ಬರಲು ಕಾರಣವೇನೆಂಬುದನ್ನು ಹೇಳು" ಎಂದು ಭೀಮ ದ್ರೌಪದಿಯನ್ನು ಕೇಳುತ್ತಾನೆ. ಹೊತ್ತಲ್ಲದ ಹುತ್ತಲ್ಲಿ, ಅಜ್ಞಾತದಲ್ಲಿರುವ ದ್ರೌಪದಿ ತನ್ನ ಬಳಿ ಬಂಧಾಗ ಭೀಮನಿಗುಂಟಾದ ಸಹಜವಾದ ಗಾಬರಿ ಇಲ್ಲಿ ವ್ಯಕ್ತವಾಗಿದೆ.

7. ಅವ ಬೆಂಬಳಿಯ ಬಿಡ ನಾನಿನ್ನು ಬದುಕುವಳಲ್ಲ.

ಆಯ್ಕೆ: ಈ ಮಾತನ್ನು 'ಕುಮಾರವ್ಯಾಸ'ನು ರಚಿಸಿರುವ 'ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ: ಈ ಮಾತನ್ನು ದ್ರೌಪದಿಯು ಭೀಮನಲ್ಲಿ ಹೇಳುತ್ತಾಳೆ.

ಸ್ವಾರಸ್ಯ : ಕೀಚಕನ ಉಪಟಳವನ್ನು ದ್ರೌಪದಿ ಭೀಮನಲ್ಲಿ ಹೇಳಿಕೊಳ್ಳುತ್ತಾಳೆ.ರಾತ್ರಿಯ ಕಾಲದಲ್ಲಿ ಭೀಮ ಮಲಗಿರುವಲ್ಲಿ ಮೆಲ್ಲನೆ ಬಂದ ದ್ರೌಪದಿ ಅವನನ್ನು ಎಬ್ಬಿಸುತ್ತಾಳೆ.ಈ ಇರುಳಲ್ಲಿ ಬರಲು ಕಾರಣವೇನೆಂದು ಕೇಳೀದಾಗ "ನಿನ್ನೆಯ ದಿನ ಕುನ್ನಿ ಕೀಚಕ ತನ್ನನ್ನು ಬೆನ್ನಟ್ಟಿ ಬಂದು ರಾಜಸಭೇಯಲ್ಲಿಯೇಒದೆದನು.ನೀನು ನಿನ್ನ ಜೊತೆಯ ಪಾಂಡವರೆದುರೇ ಇಂತಹ ಅವಮಾನವಾಯಿತಲ್ಲ. ಅವನು ನನ್ನ ಬೆನ್ನ ಹತ್ತದೇ ಬಿಡಲಾರನು,ಇನ್ನು ನಾನು ಬದುಕುಳಿಯಲಾರೆ ಈ ಪಾಪ ನಿಮಗ ತಟ್ಟದೇ ಇರದು. ಎಂದು ತನ್ನ ಅಳಲನ್ನು ಭೀಮನಲ್ಲಿ ತೋಡಿಕೊಂಡಳು.ಐವರಿದ್ದು

ದ್ರೌಪದಿಯ ಮಾನ ರಕ್ಷಣೆಗೆ ಮುಂದಾಗದ ಪಾಂಡವರ ಸ್ಥಿತಿ, ಪ್ರಾಣಕ್ಕಿಂತ ಮಾನವೇ ಮುಖ್ಯವೆಂಬ ಅವಳ ನಿರ್ಧಾರ ಇಲ್ಲಿ ವ್ಯಕ್ತವಾಗಿದೆ.

8.ನೀನಲ್ಲದುಳಿದವರುಚಿತ ಬಾಹಿರರು.

ಆಯ್ಕೆ: ಈ ಮಾತನ್ನು 'ಕುಮಾರವ್ಯಾಸ'ನು ರಚಿಸಿರುವ 'ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ: ಈ ಮಾತನ್ನು ದ್ರೌಪದಿಯು ಭೀಮನಲ್ಲಿ ಹೇಳುತ್ತಾಳೆ.

ಸ್ವಾರಸ್ಯ : ದ್ರೌಪದಿಯು; ಕೀಚಕನಿಂದ ತನ್ನ ಮಾನವನ್ನು ಕಾಯಬೇಕೆಂದು ವಿರಾಟರಾಜ – ಸುದೇಷ್ಣೆಯರಲ್ಲಿ ಕೇಳಿಕೊಂಡು ಪ್ರಯೋಜನವಾಗದಿರಲು, ಕೊನೆಯಲ್ಲಿ ತನ್ನ ಗಂಡ ಭೀಮಸೇನನಲ್ಲಿ ಅಂತರಂಗದಲ್ಲಿ ಕೇಳಿಕೊಳ್ಳುತ್ತಾಳೆ. ವಿರಾಟರಾಜ ಮತ್ತು ಆತನ ಪತ್ನಿ ಸುದೇಷ್ಣೆಯರಲ್ಲಿ ಅಧಿಕಾರವಿದ್ದರೂ ಧೈರ್ಯ–ಸಾಮರ್ಥ್ಯಗಳಿರಲಿಲ್ಲ. ಧರ್ಮರಾಜನಿಗೆ, ಕ್ಷಮಾಶೀಲತೆಯೇ ಗುಣವಾಗಿತ್ತಲ್ಲದೆ ಕೀಚಕನನ್ನು ಎದುರಿಸುವ ಧೈರ್ಯ–ಸಾಮರ್ಥ್ಯಗಳು ಇರಲಿಲ್ಲ. ಧೈರ್ಯ–ಸಾಮರ್ಥ್ಯ ಇವೆರಡೂ ಮೇಳೈಸಿದ್ದುದು ಭೀಮನಲ್ಲಿ ಮಾತ್ರ. ಆದ್ದರಿಂದ ದ್ರೌಪದಿಯು, ತನ್ನ ಮಾನವನ್ನು ಉಳಿಸಲು ಭೀಮನಲ್ಲದೆ ಅನ್ಯರು ಯಾರಿಂದಲೂ ಸಾಧ್ಯವಿಲ್ಲ ಎನ್ನುತ್ತಾಳೆ.

9.ಕೆಲಬರು ಗಳಿಸಿದೊಡೆ ಕೆಲರುಂಡು ಜಾರುವರು.

ಆಯ್ಕೆ: ಈ ಮಾತನ್ನು 'ಕುಮಾರವ್ಯಾಸ'ನು ರಚಿಸಿರುವ 'ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ : ಈ ಮಾತನ್ನು ಭೀಮನು ದ್ರೌಪದಿಯಲ್ಲಿ ಹೇಳುತ್ತಾನೆ.

ಸ್ವಾರಸ್ಯ : ರೂಢಿಯಲ್ಲಿರುವ ಗಾದೆಯಮಾತಿದು. ಕೂಡುಕುಟುಂಬದ ಮನೆಗಳಲ್ಲಿ ದುಡಿಯುವವರು ಬೇರೆ, ಕುಳಿತು ಉಣ್ಣುವವರು ಬೇರೆ. ಕೆಲವರು ಶ್ರಮಪಟ್ಟು ದುಡಿಯುತ್ತಾರೆ, ಇನ್ನು ಕೆಲವರು ಚೆನ್ನಾಗಿ ತಿಂದುಂಡು ಸುಖವಾಗಿದ್ದು ಅಗತ್ಯದ ಕೆಲಸಗಳಿಂದ, ಕರ್ತವ್ಯದಿಂದ ಜಾರಿಕೊಳ್ಳುತ್ತಾರೆ, ದ್ರೌಪದಿಯು ಭೀಮನಲ್ಲಿ, ನೀನಲ್ಲದೆ ಅನ್ಯರು ನನ್ನ ಮಾನವನ್ನು ಉಳಿಸಲು

ಅಸಮರ್ಥರು; ಸುಖಕ್ಕಷ್ಟೇ ನನ್ನ ಬಳಿಗೆ ಬರುತ್ತಾರೆ, ಕಷ್ಟಕ್ಕೆ ಒದಗಲಾರರು ಎಂದು ಹೇಳಿದುದಕ್ಕೆ ಪ್ರತಿಯಾಗಿ ಭೀಮ ಹೇಳುವ ಯುಕ್ತಿಯುತ ಮಾತು ಇದಾಗಿದೆ. ಅಣ್ಣನ ಆಜ್ಞೆಯು ತನ್ನ ಸ್ವಾತಂತ್ರ್ಯವನ್ನು ಕಸಿಯಿತೆಂಬ ಭೀಮನ ಅಸಹನೆ, ದುಡಿಯುವಾತನಿಗೇ ಮೇಲಿಂದ ಮೇಲೆ ಒದಗುವ ಒತ್ತಡಗಳು ಇಲ್ಲಿ ಪ್ರಕಟಗೊಂಡಿದೆ.

10.ಒಬ್ಬಳನಾಳಲಾರಿರಿ ಗಂಡರೋ ನೀವ್ ಭಂಡರೋ?

ಆಯ್ಕೆ: ಈ ಮಾತನ್ನು 'ಕುಮಾರವ್ಯಾಸ'ನು ರಚಿಸಿರುವ 'ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ : ಈ ಮಾತನ್ನು ದ್ರೌಪದಿಯು ಭೀಮನಲ್ಲಿ ಹೇಳುತ್ತಾಳೆ.

ಸ್ವಾರಸ್ಯ: ಸಮಾಜ ವ್ಯವಸ್ಥೆಯಲ್ಲಿ ಒಬ್ಬಳು ಹೆಣ್ಣಿಗೆ ಒಬ್ಬ ಗಂಡನಿರುತ್ತಾನೆ. ಒಬ್ಬನೇ ಗಂಡನಾದರೂ ಆತ ತನ್ನ ಹೆಂಡತಿಯ ಮಾನವನ್ನು ಸಂರಕ್ಷಿಸಿಕೊಳ್ಳಲು ಪ್ರಾಣವನ್ನು ಕೊಡುವುದಕ್ಕೂ ಸಿದ್ಧನಿರುತ್ತಾನೆ. ಆದರೆ ದ್ರೌಪದಿಗೆ ಐವರು ಗಂಡಂದಿರಿದ್ದರೂ ಒಬ್ಬರೂ ಆಕೆಯ ಮಾನವನ್ನು ಕಾಯುವುದಕ್ಕೆ ಮುಂದಾಗುತ್ತಿಲ್ಲ ಎಂಬುದಾಗಿ ದ್ರೌಪದಿ ಆರೋಪಿಸುತ್ತಾಳೆ. ತಟಸ್ಥನಾಗಿದ್ದ ಭೀಮನನ್ನು ಕಾರ್ಯೋನ್ಮುಖನನ್ನಾಗಿ ಮಾಡಲು ದ್ರೌಪದಿ ಛೇಡಿಸುವ ಮಾತಿದಾಗಿದೆ.

11.ಇನ್ನು ಹುಟ್ಟಿದೆಯಿರಲಿ ನಾರಿಯರೆನ್ನಮೊಲು.

ಆಯ್ಕೆ: ಈ ಮಾತನ್ನು 'ಕುಮಾರವ್ಯಾಸ'ನು ರಚಿಸಿರುವ 'ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ: ಈ ಮಾತನ್ನು ದ್ರೌಪದಿಯು ಭೀಮನಲ್ಲಿ ಹೇಳುತ್ತಾಳೆ.

ಸ್ವಾರಸ್ಯ: ಕೀಚಕನು ದ್ರೌಪದಿಯ ಸೌಂದರ್ಯದಿಂದ ಮನಸೋತು ಆಕೆಯನ್ನು ಹೊಂದಬೇಕೆಂದು ನಾನಾ ತೆರನಾಗಿ ತಂತ್ರವನ್ನು ರೂಪಿಸುತ್ತಾನೆ. ಈ ಬಾಧೆಯಿಂದ ಬೇಸತ್ತ ದ್ರೌಪದಿಯು, ಭೀಮನಲ್ಲಿಗೆ ಬಂದು ಅಂತರಂಗದಲ್ಲಿ ತನ್ನ ಅಳಲನ್ನು ತೋಡಿಕೊಂಡು, ತಾನು ಪಟ್ಟ ಪಾಡನ್ನು ಈ

ರೀತಿ ಹೇಳಿಕೊಳ್ಳುತ್ತಾಳೆ. ದ್ರೌಪದಿಯ ದಯನೀಯ ಅವಸ್ಥೆ ಇಲ್ಲಿ ಅನಾವರಣಗೊಂಡಿದೆ

12.ಕೂಳುಗೇಡಿಂಗೊಡಲ ಹೊರುವಿರಿ.

ಆಯ್ಕೆ : ಈ ಮಾತನ್ನು 'ಕುಮಾರವ್ಯಾಸ'ನು ರಚಿಸಿರುವ 'ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ: ಈ ಮಾತನ್ನು ದ್ರೌಪದಿಯು ಭೀಮನಲ್ಲಿ ಹೇಳುತ್ತಾಳೆ.

ಸ್ವಾರಸ್ಯ : ಕೀಚಕನಿಂದ ಉಪಟಳಕ್ಕೊಳಗಾದ ದ್ರೌಪದಿಯು ತನ್ನ ದೌರ್ಭಾಗ್ಯವನ್ನು ಭೀಮನಲ್ಲಿ ಹೇಳಿಕೊಳ್ಳುತ್ತ, ತಾನು ಪಾಂಚಾಲ ದೇಶದ ಅರಸನ ಮನೆಯಲ್ಲಿ ಹುಟ್ಟಿ, ಮನುಷ್ಯ, ಗಂಧರ್ವ, ದೇವತಾವರ್ಗಕ್ಕೂ ಮೀರಿದ ಶೌರ್ಯವುಳ್ಳ ಪಾಂಡವರ ಕೈಹಿಡಿದರೂ ಇನ್ನೊಬ್ಬರ ದಾಸ್ಯವನ್ನನುಭವಿಸುವ ಪ್ರಾರಬ್ಧ ತನ್ನದಾಯಿತೆಂದೂ ಪಾಂಡವರ ಶಕ್ತಿ ಸಾಮರ್ಥ್ಯ ವ್ಯರ್ಥವೆಂದು ಹೇಳುತ್ತ ಅಣಕಿಸಿ ಭೀಮನು ಕೆರಳುವಂತೆ ಮಾಡುತ್ತಾಳೆ. ಈ ಸಂದರ್ಭ, ಬಲಿಷ್ಠವಾದ ತೋಳುಗಳಿದ್ದರೂ ಅದರಿಂದ ಶತ್ರುನಾಶ ಮಾಡಲಾಗದಿದ್ದಲ್ಲಿ ಅದು ವ್ಯರ್ಥ, ಸುಮ್ಮನೆ ಹೊರೆ; ಶರೀರವನ್ನು ಪೋಷಿಸುತ್ತಿರುವುದೂ ಅನ್ನ ದಂಡಕ್ಕೆ ಎಂದು ಅಣಕಿಸುತ್ತಾಳೆ. ದ್ರೌಪದಿಯು ಕಾರ್ಯ ಸಾಧನೆಗೆ ಪ್ರಚೋದಿಸಲು ಭೀಮನನ್ನು ಕೆರಳಿಸಬೇಕೆಂದೇ ಆಡುವ ಚುಚ್ಚುಮಾತು ಇದಾಗಿದೆ.

13.ಹಗೆಗಳನು ಹಿಂಡಿದನು ಮನದೊಳಗೆ.

ಆಯ್ಕೆ: ಈ ಮಾತನ್ನು 'ಕುಮಾರವ್ಯಾಸ'ನು ರಚಿಸಿರುವ 'ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ: ಈ ಮಾತನ್ನು ಕವಿ ಭೀಮನ ಆಕ್ರೋಶವನ್ನು ಗಮನಿಸುತ್ತಾ ಹೇಳುತ್ತಾನೆ.

ಸ್ವಾರಸ್ಯ: ದ್ರೌಪದಿಯು, ತನ್ನ ಮಾನವನ್ನು ರಕ್ಷಿಸಬೇಕೆಂದು ಭೀಮನ ಬಳಿಗೆ ರಾತ್ರಿ ವೇಳೆಯಲ್ಲಿ ಬಂದು, ಅಂತರಂಗದಲ್ಲಿ ತನ್ನ ಅವಸ್ಥೆಯನ್ನು ಹೇಳಿಕೊಂಡು ಭೀಮನು ಕೋಪಗೊಳ್ಳುವಂತೆ ಕೆಣಕಿ ಮಾತನಾಡುತ್ತಾಳೆ.

ಇದರಿಂದ ಕೆರಳಿಕೋಪಾವಿಷ್ಟನಾದ ಭೀಮನು, ತನ್ನ ಅಂತರಂಗದಲ್ಲಿ ಶತ್ರುಗಳನ್ನು ಹಿಂಡಿ ಹಿಪ್ಪೆಮಾಡುತ್ತೇನೆಂದು ಬಗೆಯುತ್ತಾನೆ. ತಟಸ್ಥನಾಗಿದ್ದ ಭೀಮನು, ದ್ರೌಪದಿಯ ದಯನೀಯ ಸ್ಥಿತಿಯನ್ನು ಕಂಡು ಕನಿಕರಿಸಿ, ಶತ್ರುಗಳ ಬಗೆಗೆ ತಳೆದ ಭಾವ ಇದಾಗಿದೆ. ಭೀಮನ ಕೆಚ್ಚು ಇಲ್ಲಿ ಕಾಣಿಸಿಕೊಂಡಿದೆ.

14.ಮುಸುಡನಮರಾದ್ರಿಯಲಿ ತೇವೆನು ದೇವ ಸಂತತಿಯ

ಆಯ್ಕೆ: ಈ ಮಾತನ್ನು 'ಕುಮಾರವ್ಯಾಸ'ನು ರಚಿಸಿರುವ 'ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ: ಈ ಮಾತನ್ನು ಭೀಮನು ದ್ರೌಪದಿಯಲ್ಲಿ ಹೇಳುತ್ತಾಳೆ.

ಸ್ವಾರಸ್ಯ :ಕೀಚಕನ ಉಪಟಳವನ್ನು ಕಳೆಯುವಂತೆ ಪರಿಪರಿಯಿಂದ ಬೇಡಿಕೊಳ್ಳುವ ದ್ರೌಪದಿಯ ಮಾನ ರಕ್ಷಣೆಗೆ ಮುಂದಾದ ಭೀಮನು ದ್ರೌಪದಿಯನ್ನು ಸಂತೈಸುತ್ತ ಈ ಮಾತನ್ನು ಹೇಳುತ್ತಾನೆ. "ಕೀಚಕನ ಒಡಲನ್ನು ಬಗೆಯುತ್ತಾನೆ, ಭೀಮನು ಇಂತಹ ಕ್ರೂರ ಕಾರ್ಯ ಮಾಡಿದನೆಂದು ದೇವತೆಗಳು ಹಾಹಾಕಾರ ಮಾಡಿದರೆ ಮೇರುಪರ್ವತದಲ್ಲಿ ಅವರ ಮುಸುಡಿಗಳನ್ನು ತಿಕ್ಕಿ ಅರೆಯುತ್ತೇನೆ" ಎಂದು ರೋಷಾವೇಷದಿಂದ ನುಡಿಯುತ್ತಾನೆ. ಭೀಮನ ಪರಾಕ್ರಮ,ಕೆರಳಿನಿಂತ ಪರಿ ಇಲ್ಲ ವ್ಯಕ್ತವಾಗಿದೆ.

**ಒಂದು ವಾಕ್ಯದಲ್ಲಿ ಉತ್ತರಿಸಿ :**

1. ಧರ್ಮರಾಯನಿಗೆ ಎಂಥ ಗರ ಹೊಡೆದಿದೆ?

ಧರ್ಮರಾಯನಿಗೆ ಧರ್ಮ ಕ್ಷಮೆಯ ಗರ ಹೊಡೆದಿದೆ.

2. ಅಣ್ಣನಾಜ್ಞೆಯಲಿ ಭ್ರಮಿತನಾದವನು ಯಾರು?

ಅಣ್ಣನಾಜ್ಞೆಯಲಿ ಭ್ರಮಿತನಾದವನು ಪಾರ್ಥ.

3. ಪಾಂಚಾಲನಂದನೆ ಯಾರು?

ಪಾಂಚಾಲನಂದನೆ ಎಂದರೆ ದ್ರೌಪದಿ.

4.ರಾಜಸಭೆಯೊಳಗೆ ದ್ರೌಪದಿಯನ್ನು ಒದೆದವರು ಯಾರು?

ರಾಜಸಭೆಯೊಳಗೆ ದ್ರೌಪದಿಯನ್ನು ಒದೆದವನು ಕೀಚಕ.

5. ಯಾರನ್ನು ಯಮಲೋಕಕ್ಕೆ ಕಳಿಸಲು ದ್ರೌಪದಿ ಭೀಮನಿಗೆ ಹೇಳುತ್ತಾಳೆ?
ಕೀಚಕನನ್ನು ಯಮಲೋಕಕ್ಕೆ ಕಳಿಸಲು ದ್ರೌಪದಿ ಭೀಮನಿಗೆ ಹೇಳುತ್ತಾಳೆ.

6. 'ಗಂಡರೋ ನೀವ್ ಭಂಡರೊ' ಎಂದು ಕೇಳಿದವರಾರು?
'ಗಂಡರೋ ನೀವ್ ಭಂಡರೊ' ಎಂದು ದ್ರೌಪದಿ ಭೀಮನಲ್ಲಿ ಕೇಳುತ್ತಾಳೆ.

7. ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು ಎಂದವರಾರು?
ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು ಎಂದು ಹೇಳಿದವಳು ದ್ರೌಪದಿ.

8. ಅರಣ್ಯವಾಸದಲ್ಲಿದ್ದಾಗ ದ್ರೌಪದಿಯನ್ನು ಎಳೆದೊಯ್ದದವರಾರು?
ಅರಣ್ಯವಾಸದಲ್ಲಿದ್ದಾಗ ದ್ರೌಪದಿಯನ್ನು ಎಳೆದೊಯ್ದದವನು ಸೈಂಧವ.

9. ಮನದೊಳಗೆ ಹಗೆಗಳನು ಹಿಂಡಿದವರಾರು?
ಮನದೊಳಗೆ ಹಗೆಗಳನು ಹಿಂಡಿದವನು ಭೀಮ.

10. ಯಾರ ಬಸುರನ್ನು ಬಗೆಯುವುದಾಗಿ ಭೀಮ ಹೇಳುತ್ತಾನೆ?
ಕೀಚಕನ ಬಸುರನ್ನು ಬಗೆಯುವುದಾಗಿ ಭೀಮ ಹೇಳುತ್ತಾನೆ.

11. ದ್ರೌಪದಿ ತನ್ನನ್ನು ತಾನು ಏನೆಂದು ಕರೆದುಕೊಂಡಿದ್ದಾಳೆ?
ದ್ರೌಪದಿ ತನ್ನನ್ನು ತಾನು ಘೋರಪಾತಕಿ ಎಂದು ಕರೆದುಕೊಂಡಿದ್ದಾಳೆ.

12. ಕಲಿಭೀಮನು ಎಂತಹ ಗಂಡನೆಂದು ದ್ರೌಪದಿ ಹೇಳಿದ್ದಾಳೆ?
ಕಲಿಭೀಮನು ಮಿಡುಕುಳ್ಳ ಗಂಡನೆಂದು ದ್ರೌಪದಿ ಹೇಳಿದ್ದಾಳೆ.

13. ಧರ್ಮಜನ ಹೊರೆಗೆ ಭೀತರಾದವರು ಯಾರು?
ಧರ್ಮಜನ ಹೊರೆಗೆ ಭೀತರಾದವರು ಭೀಮ.

14. ದ್ರೌಪದಿಯ ಮುಂದಲೆ ಹಿಡಿದವರಾರು?
ದ್ರೌಪದಿಯ ಮುಂದಲೆ ಹಿಡಿದವರು ದುಶ್ಯಾಸನ.

15. ದ್ರೌಪದಿಯ ಮುಖವನ್ನು ಭೀಮ ಯಾವುದರಿಂದ ತೊಳೆದನು?
ದ್ರೌಪದಿಯ ಮುಖವನ್ನು ಭೀಮ ಮಂಚದಬಳಿಯಿದ್ದ ಗಿಂಡಿಯ ನೀರಿನಿಂದ ತೊಳೆದನು.

**ಎರಡು ಅಂಕಗಳ ಪ್ರಶ್ನೆಗಳು:**

1. ಕೊಲಲಕ್ಷಮರೆಂದು ದ್ರೌಪದಿ ಯಾರನ್ನು ಕುರಿತು ಹೇಳಿದ್ದಾಳೆ?

ದ್ರೌಪದಿ ತನಗೆ ಒದಗಿ ಬಂದ ಸಂಕಷ್ಟವನ್ನು ಇರುವ ಐವರು ಗಂಡದಿರಲ್ಲಿ ಯಾರ ಬಳಿಯಲ್ಲಿ ಹೇಳಿಕೊಳ್ಳುವುದು ಎಂದು ಚಿಂತಿಸುತ್ತಾಳೆ. ಧರ್ಮರಾಯನಲ್ಲಿ ಹೇಳೋಣವೆಂದರೆ ಆತ ಧರ್ಮವನ್ನು ಮೀರಿ ನಡೆಯುವವನಲ್ಲ. ಅರ್ಜುನನಲ್ಲಿ ಹೇಳೋಣವೆಂದರೆ, ಆತ ಅಣ್ಣನ ಮಾತನ್ನು ಮೀರಿ ನಡೆಯುವವನಲ್ಲ. ಇನ್ನು ನಕುಲ-ಸಹದೇವರಿಗೆ ಹೇಳೋಣವೆಂದರೆ ಅವರಿಬ್ಬರು ಕೀಚಕನೆನ್ನುವ ನಾಯಿಯನ್ನು ಕೊಲ್ಲಲು ಅಕ್ಷಮರು ಎನ್ನುತ್ತಾ, ಭೀಮನಲ್ಲಿ ಹೇಳುವ ನಿರ್ಧಾರ ಮಾಡುತ್ತಾಳೆ.

2. ಮಲಗಿರುವ ಭೀಮನನ್ನು ದ್ರೌಪದಿ ಹೇಗೆ ಎಬ್ಬಿಸಿದಳು?

ದ್ರೌಪದಿಯು ಭೀಮನಲ್ಲಿ ತನಗೆ ಒದಗಿ ಬಂದ ಕಷ್ಟವನ್ನು ಹೇಳಿಕೊಳ್ಳಲು ನಿರ್ಧರಿಸಿ, ನೋಡಿದವರು ಏನು ಅಂದುಕೊಂಡರೂ ಪರವಾಗಿಲ್ಲ ಎಂದು ಭೀಮನನ್ನು ನೋಡಲು ಬರುತ್ತಾಳೆ. ಆದರೆ ಆತ ಆ ವೇಳೆಯಲ್ಲಿ ಗಾಢವಾದ ನಿದ್ರೆಯಲ್ಲಿ ತೊಡಗಿರುತ್ತಾನೆ. ಆಕೆ ಮೆಲ್ಲಮೆಲ್ಲನೆ ಆತನ ಮುಸುಕನ್ನು ಸಡಿಲಿಸುತ್ತಾಳೆ. ಗಲ್ಲವನ್ನು ಹಿಡಿದು ಅಲುಗಾಡಿಸುತ್ತಾಳೆ. ಆಗ ಭೀಮ ಎಚ್ಚರಗೊಳ್ಳುತ್ತಾನೆ.

3. ತಾನು ಘೋರತರ ವಿಷ ಕುಡಿಯುವುದಾಗಿ ದ್ರೌಪದಿ ಏಕೆ ಹೇಳುತ್ತಾಳೆ?

ದ್ರೌಪದಿಯು ಇರುವ ಐವರು ಗಂಡಂದಿರಲ್ಲಿ ಭೀಮನು ತನಗೆ ಬಂದಿರುವ ಕಷ್ಟವನ್ನು ಪರಿಹರಿಸುವವನು ಅಂದುಕೊಳ್ಳುತ್ತಾಳೆ. ಆತ ಪರಾಕ್ರಮಿ, ಅಲ್ಲದೆ ಸ್ವಾಭಿಮಾನಿ ಕೂಡ. ಅವನೊಬ್ಬನೆ ಕೀಚಕನಿಗೆ ಸರಿಯಾದ ಬುದ್ಧಿ ಕಲಿಸಬಲ್ಲವನು. ಒಂದು ವೇಳೆ ಆತನಲ್ಲಿಯೂ ಕೀಚಕನನ್ನು ಎದುರಿಸುವ ಸಾಮರ್ಥ್ಯ ಇಲ್ಲದಿದ್ದರೆ ತಾನು ಘೋರತರ ವಿಷ ಕುಡಿಯುವುದಾಗಿ ದ್ರೌಪದಿ ಹೇಳುತ್ತಾಳೆ.

4. ಉಳಿದ ನಾಲ್ವರು ಪಾಂಡವರ ಬಗ್ಗೆ ದ್ರೌಪದಿಯ ಅಭಿಪ್ರಾಯವೇನು?

ದ್ರೌಪದಿಯು ಭೀಮನಲ್ಲಿ ತನ್ನ ಕಷ್ಟಕ್ಕೆ ಕಿವಿಗೊಡುವವನು ನೀನೊಬ್ಬನೆ. ಉಳಿದ ನಾಲ್ವರು ಪತಿಗಳು ಸುಖಕ್ಕಾಗಿ ನನ್ನ ಬಳಿ ಬರುತ್ತಾರೆ.

ಆದರೆ ಮರ್ಯಾದೆ ಪ್ರತಿಷ್ಠೆಗಳ ಪ್ರಶ್ನೆ ಬಂದಾಗ ಅವರೆಲ್ಲ ಅಲ್ಲಿ ನಿಲ್ಲದೆ ಹೊರಟು ಹೋಗುತ್ತಾರೆ. ಆದುದರಿಂದ ನೀನು ನನ್ನನ್ನು ಕರುಣೆಯಿಂದ ನೋಡು ಎಂದು ಕೈಮುಗಿದು ಬೇಡುತ್ತಾಳೆ.

5. ಗಂಡರೈವರು ಮೂರು ಲೋಕದ ಗಂಡರಾರು? ಹೆಸರಿಸಿ.

ದ್ರೌಪದಿಗೆ ಐದು ಜನ ಗಂಡಂದಿರು ಧರ್ಮರಾಯ, ಭೀಮ, ಅರ್ಜುನ, ನಕುಲ ಮತ್ತು ಸಹದೇವ. ಇವರಲ್ಲಿ ಎಲ್ಲರೂ ಮೂರು ಲೋಕದ ಗಂಡರೆ. ಆದರೆ ದ್ರೌಪದಿಯ ಕಷ್ಟದ ಪರಿಹಾರದ ವಿಷಯದಲ್ಲಿ ಇವರೆಲ್ಲರೂ ವೀರರಾಗಿದ್ದು ಪ್ರಯೋಜನವಿಲ್ಲದಂತಾಗಿದೆ.

6. ಹೆಂಡತಿಯ ಹರಿಬಕ್ಕಾಗಿ ಗಂಡುಗೂಸು ಏನು ಮಾಡುತ್ತಾನೆ?

ಹೆಂಡತಿಯ ಸಂಕಷ್ಟಕ್ಕಾಗಿ ಗಂಡುಗೂಸು ಒಬ್ಬನೇ ಇದ್ದರೂ ಆತ ವೈರಿಯನ್ನು ಕಡಿದು ತುಂಡರಿಸಿ ಬಿಡುತ್ತಾನೆ ಅಥವಾ ತನ್ನೊಡಲನ್ನೇ ಕೊಟ್ಟಾದರೂ ಪತ್ನಿಯ ಮಾನವನ್ನು ಉಳಿಸುತ್ತಾನೆ.

7. ಕುಜನರಾದವರು ಏನೆಂದು ನುಡಿಯುತ್ತಾರೆ?

"ಹೆಂಡತಿಯ ಮಾತಿಗಾಗಿ ತನ್ನ ಅಣ್ಣನ ಆಜ್ಞೆಯನ್ನು ಕುಂತಿಯ ಮಗ ಮೀರಿ ನಡೆದನು" ಎಂದು ಕುಜನರಾದವರು ನುಡಿಯುತ್ತಾರೆ.

8. ಸಹೋದರರ ಬಗ್ಗೆ ಭೀಮ ವ್ಯಕ್ತಪಡಿಸಿದ ಭಾವನೆ ಯಾವುದು?

ಕಲಹಕ್ಕಾದರೆ ತಾನು, ರಮಿಸುವುದಾದರೆ ಉಳಿದವರು, ಇದು 'ಯಾರೋ ಗಳಿಸಿದ್ದನ್ನು ಮತ್ತೆ ಯಾರೋ ಉಂಡುಹೋಗುವರು' ಎಂಬ ಗಾದೆಯಂತೆ ಆಯಿತು ಎಂದು ಸಹೋದರರ ಬಗ್ಗೆ ಭೀಮನು ಬೇಸರ ವ್ಯಕ್ತಪಡಿಸಿದನು.

**ನಾಲ್ಕು ಅಂಕಗಳ ಪ್ರಶ್ನೆಗಳು:**

1. ತನಗೊದಗಿದ ಸಂಕಟವನ್ನು ಹೇಳಿಕೊಳ್ಳುವ ದ್ರೌಪದಿಯ ಸ್ವಗತದ ನುಡಿಗಳಾವುವು?

ದ್ರೌಪದಿಯು ವಿರಾಟ ಆಸ್ಥಾನದಲ್ಲಿ ಕೀಚಕನಿಂದ ಪಡುತ್ತಿರುವ ಕಷ್ಟವನ್ನು ನೆನಪಿಸಿಕೊಳ್ಳುತ್ತಾ ಪರಿಹಾರಕ್ಕಾಗಿ ಚಿಂತಿಸುತ್ತಿದ್ದಳು. ತನಗಾದ

ಅವಮಾನವನ್ನು ಯಾರ ಬಳಿಯಲ್ಲಿ ಹೇಳಲಿ? ಯಾರ ಬಳಿಗೆ ಹೋಗಲಿ? ಯಾರಲ್ಲಿ ಹೇಳಲಿ? ಯಾರನ್ನು ಬೇಡಿಕೊಳ್ಳಲಿ? ಛಿ! ಹೆಣ್ಣಿನ ಜನ್ಮಕ್ಕೆ ಧಿಕ್ಕಾರವಿರಲಿ. ಮಹಾಪಾಪಿಷ್ಟಳಾದ ನನ್ನಂತೆ ನವೆದವರು ಈ ಹಿಂದೆ ಯಾರಿದ್ದಾರೆ? ಅಯ್ಯೋ ನನಗೆ ಸಾವು ಕೂಡ ಬರುತ್ತಿಲ್ಲವಲ್ಲ. ಎಂದು ತನ್ನ ಹೊಟ್ಟೆಯ ಮೇಲೆ ಹೊಡೆದುಕೊಂಡು ಸಂಕಟ ಪಡುತ್ತಾಳೆ. ಧರ್ಮರಾಯನಲ್ಲಿ ಹೇಳೋಣ ಎಂದರೆ ಅವನಿಗೆ ಧರ್ಮ ಕ್ಷಮೆಯ ಗರ ಹೊಡೆದಿದೆ. ನನ್ನಲ್ಲಿ ಮಮತೆಯುಳ್ಳ ಅರ್ಜುನನಲ್ಲಿ ಹೇಳೋಣವೆಂದರೆ ಅವನಿಗೆ ಅಣ್ಣನ ಆಜ್ಞೆಯ ಭ್ರಮೆ ಕವಿದಿದೆ. ಉಳಿದ ಇಬ್ಬರು ರಮಣರಾದ ನಕುಲ–ಸಹದೇವರು ಈ ಕೀಚಕ ಎನ್ನುವ ನಾಯಿಯನ್ನು ಕೊಲ್ಲಲು ಅವರು ಸಮರ್ಥರಲ್ಲವೆಂದುಕೊಳ್ಳುತ್ತಾಳೆ. ಆದರೆ ಐವರು ಪಾಂಡವರಲ್ಲಿ ಪೌರುಷ ಮತ್ತು ಕೆಚ್ಚು ಉಳ್ಳವನೆಂದರೆ ಕಲಿಭೀಮ ಮಾತ್ರ. ನನಗೆ ವಿಪತ್ತು ಬಂದಿದೆ ಎಂದು ತಿಳಿದರೆ ತಡಮಾಡದೆ ಪ್ರತಿಕ್ರಿಯಿಸುತ್ತಾನೆ. ಆದುದರಿಂದ ದುಷ್ಟ ಕೀಚಕನಿಂದ ಆಗುತ್ತಿರುವ ತೊಂದರೆಯನ್ನು ಭೀಮನಿಗೆ ಹೇಳಿಬಿಡುತ್ತೇನೆ. ಒಂದು ವೇಳೆ ಆತನಲ್ಲಿಯೂ ಹುರುಳಿಲ್ಲ ಎಂದು ಗೊತ್ತಾದರೆ ಘೋರವಿಷವನ್ನು ತೆಗೆದುಕೊಂಡು ಪ್ರಾಣ ಬಿಡುತ್ತೇನೆ ಎಂದು ತನ್ನಲ್ಲೆ ತಾನು ಯೋಚಿಸುತ್ತಾಳೆ.

2. ತನಗಾದ ಅವಮಾನವನ್ನು ದ್ರೌಪದಿ ಭೀಮನಿಗೆ ಹೇಳಿಕೊಂಡ ಬಗೆಯನ್ನು ವಿವರಿಸಿ.

ದ್ರೌಪದಿ ಭೀಮನಲ್ಲಿ ತನಗಾದ ಅವಮಾನವನ್ನು ಬಹಳ ದುಃಖದಿಂದ ಹೇಳಿಕೊಳ್ಳುತ್ತಾಳೆ. ನಿನ್ನೆ ಮಧ್ಯಾಹ್ನ ಕೀಚಕನೆಂಬ ನಾಯಿ ಎಲ್ಲರೆದುರಿಗೆ ರಾಜಸಭೆಯ ಬಳಿ ನನ್ನನ್ನು ಒದೆದ. ನಿನ್ನಂಥ ವೀರ ಗಂಡನಿರುವಾಗ ನನಗೆ ಅವಮಾನವಾದದ್ದು ಸರಿಯೆ? ಅಷ್ಟೆ ಅಲ್ಲ, ಅವನು ನನ್ನನ್ನು ಹಿಂಬಾಲಿಸದೆ ಬಿಡುವುದಿಲ್ಲ. ಆದ್ದರಿಂದ ನಾನು ಬದುಕುವುದಿಲ್ಲ. ನಾನು ಆತ್ಮಹತ್ಯೆ ಮಾಡಿಕೊಂಡರೆ ಆ ಪಾತಕ ನಿನ್ನನ್ನು ಸುತ್ತಿಕೊಳ್ಳುತ್ತದೆ. ದ್ರೌಪದಿ ತನ್ನ ಮಾತನ್ನು ಮುಂದುವರಿಸುತ್ತಾ ಉಳಿದ ನಾಲ್ವರು ಪತಿಗಳು

ಸುಖಕ್ಕಾಗಿ ನನ್ನ ಬಳಿ ಬರುತ್ತಾರೆ. ಆದರೆ ಮರ್ಯಾದೆ ಪ್ರತಿಷ್ಠೆಗಳ ಪ್ರಶ್ನೆ ಬಂದಾಗ ಅವರೆಲ್ಲ ಅಲ್ಲಿ ನಿಲ್ಲದೆ ಹೊರಟು ಹೋಗುತ್ತಾರೆ. ನಿನ್ನನ್ನು ಬಿಟ್ಟರೆ, ಉಳಿದವರೆಲ್ಲ ಕಷ್ಟಕ್ಕೆ ಒಗ್ಗದವರಾಗಿದ್ದಾರೆ. ಆದ್ದರಿಂದ ನೀನು ನನ್ನನ್ನು ತುಂಬ ಕರುಣೆಯಿಂದ ನೋಡು ಮನಸ್ಸಿನ ಶಾಂತತೆಯನ್ನು ದೂರವಿಡು. ಆ ಕ್ರೂರಿ ಕೀಚಕನನ್ನು ಕೊಲ್ಲು ನನ್ನ ಮೇಲೆ ಕರುಣೆದೋರು ಎಂದು ತನಗಾದ ಅವಮಾನವನ್ನು ಹೇಳಿಕೊಂಡಳು.

3. ಭೀಮನು ದ್ರೌಪದಿಯನ್ನು ಹೇಗೆ ಸಂತೈಸಿದನು?

ದ್ರೌಪದಿಯು ತನಗೆ ಒದಗಿ ಬಂದಿರುವ ಕಷ್ಟವನ್ನು ಭೀಮನಲ್ಲಿ ಹೇಳಲು ನಿರ್ಧರಿಸಿ ಆತನಲ್ಲಿ ಹೇಳುತ್ತಾಳೆ. ಆದರೆ ಭೀಮ ತಾನೂ ಕೂಡ ಈ ವಿಷಯದಲ್ಲಿ ಅಸಹಾಯಕ ಎನ್ನುತ್ತಾನೆ. ಇದರಿಂದ ಕೋಪಗೊಂಡ ದ್ರೌಪದಿ ನೀವು ಐವರು ಗಂಡಂದಿರು ನನ್ನೊಬ್ಬಳನ್ನು ಕಾಯಲಾರಿರಿ, 'ನೀವು ಗಂಡರೋ ಭಂಡರೋ' ಎನ್ನುತ್ತಾಳೆ. ಅಲ್ಲದೆ ನನ್ನಷ್ಟು ಅವಮಾನಕ್ಕೆ ಗುರಿಯಾಗುವ ಹೆಂಗಸರು ಜನಿಸಬಾರದು ಎನ್ನುತ್ತಾಳೆ. ದ್ರೌಪದಿಯ ಈ ಮಾತುಗಳನ್ನು ಕೇಳಿದ ಭೀಮನಿಗೆ ದುಃಖವಾಗುತ್ತದೆ. ಜೊತೆಯಲ್ಲಿ ಸಿಟ್ಟೂ ಬರುತ್ತದೆ. ಮನಸ್ಸಿನಲ್ಲಿಯೇ ತನ್ನ ಹಗೆಗಳನ್ನು ಹಿಂಡುತ್ತಾನೆ. ಅಲ್ಲದೆ ಅನುಕಂಪದಿಂದ ದ್ರೌಪದಿಯನ್ನು ಮೆಲ್ಲನೆ ಅಪ್ಪಿಕೊಳ್ಳುತ್ತಾನೆ. ತನ್ನ ಉತ್ತರೀಯದಿಂದ ಆಕೆಯ ಕಣ್ಣುಗಳನ್ನು ಒರೆಸಿದನು. ಆಕೆಯ ತಲೆಗೂದಲನ್ನು ನೇವರಿಸಿ ಅವಳ ಗಲ್ಲವನ್ನು ಒರೆಸಿ ಮುದ್ದಾಡಿ, ಗಿಂಡಿಯ ನೀರಿನಲ್ಲಿ ಆಕೆಯ ದುಃಖಿತವಾದ ಮುಖವನ್ನು ತೊಳೆಯುತ್ತಾನೆ. ತಮ್ಮ ಅಣ್ಣನ ಆಜ್ಞೆಯನ್ನು ದಾಟಿದೆ ದಾಟಿದೆ. ಕೀಚಕನ ಎದೆಯನ್ನು ಸೀಳಿಹಾಕುತ್ತೇನೆ. ವಿರೋಧಿಸಿದರೆ ವಿರಾಟನ ವಂಶವನ್ನು ಹೇಳಹೆಸರಿಲ್ಲದಂತೆ ಮಾಡುತ್ತೇನೆ. ನಾವು ಇಲ್ಲಿರುವುದು ಗೊತ್ತಾಗಿ ಕೌರವರು ನಮ್ಮ ವಿರುದ್ಧ ಯುದ್ಧಕ್ಕೆ ಬಂದರೆ ಅವರನ್ನು ಕೂಡ ನಾಶ ಮಾಡುತ್ತೇನೆ. ಭೀಮನು ಅಹಿತ ಕೆಲಸವನ್ನು ಮಾಡಿದ ಎಂದು

ದೇವತೆಗಳು ಗೋಣಗಿದರೆ ಅವರ ಮುಖವನ್ನು ಮೇರುಪರ್ವತಕ್ಕೆ ಹಾಕಿ ತೇಯುತ್ತೇನೆ ಎಂದು ಭೀಮ ದ್ರೌಪದಿಗೆ ಸಮಾಧಾನ ಪಡಿಸಿದನು.

4. ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿ.

ದ್ರೌಪದಿಯು ತನಗೆ ಬಂದಿರುವ ಕಷ್ಟದ ಪರಿಹಾರಕ್ಕಾಗಿ ಭೀಮನಲ್ಲಿಗೆ ಬರುತ್ತಾಳೆ. ಆದರೆ ಭೀಮ ಆಕೆಯ ಕಷ್ಟಕ್ಕೆ ಪರಿಹಾರವನ್ನು ಸೂಚಿಸದೆ ತನ್ನ ಅಸಹಾಯಕತೆಯನ್ನೇ ತೋಡಿಕೊಳ್ಳುತ್ತಾನೆ. ಆಗ ದ್ರೌಪದಿಯು ಭೀಮನಲ್ಲಿ ತಾನು ಈ ವರೆಗೂ ಅನುಭವಿಸದಂತಹ ಕಷ್ಟಗಳನ್ನು ಹೇಳಿಕೊಳ್ಳುತ್ತಾಳೆ. ಈ ಸಂದರ್ಭದಲ್ಲಿ ಆಕೆ ಅವಮನಕ್ಕೊಳಗಾದ ಮೂರು ಸಂದರ್ಭಗಳನ್ನು ನೆನಪಿಸುತ್ತಾಳೆ. ಅಂದು ಧರ್ಮರಾಯ ಜೂಜಿನ ಮೋಜಿನ ಹುಚ್ಚಿನಿಂದ ಎಲ್ಲವನ್ನೂ ಕಳೆದುಕೊಂಡು ನಂತರ ತನ್ನನ್ನು ಪಣಕ್ಕಿಟ್ಟು ಸೋತ ಪರಿಣಾಮ; ಪಾಪಿ ದುರ್ಯೋಧನ, ತನ್ನ ತಮ್ಮನಾದ ದುಷ್ಯಾಸನನಿಂದ ತುಂಬಿದ ಸಭೆಗೆ ತನ್ನ ಮುಡಿಯನ್ನು ಹಿಡಿದು ಎಳೆದು ತಂದ. ಸಾಲದೆಂಬಂತೆ ವಸ್ತ್ರಾಪಹರಣಕ್ಕೂ ಮುಂದಾದ. ಅನಂತರ ಅರಣ್ಯವಾಸದ ಸಂದರ್ಭದಲ್ಲಿ ದುರ್ಯೋಧನನ ತಂಗಿ, ದುಶ್ಯಳೆಯ ಗಂಡನಾದ ಪಾಪಿ ಸೈಂಧವ ನನ್ನ ಮುಂದಲೆಯನ್ನು ಹಿಡಿದು ನನ್ನನ್ನು ಎಳೆದುಕೊಂಡು ಹೋದ. ವಿರಾಟರಾಜನ ಆಸ್ಥಾನದಲ್ಲಿ ಅಜ್ಞಾತವಾಸದ ಈ ಸಂದರ್ಭದಲ್ಲಿ ಈ ಕೀಚಕ ಎನ್ನುವ ನಾಯಿಯಿಂದ ಒದೆಸಿಕೊಳ್ಳಬೇಕಾಯಿತು. ನಾನು ಎದುರಿಸಿದಂತಹ ಈ ಮೂರು ಕಷ್ಟದ ಸಂದರ್ಭಗಳು ಪಾಂಡವರ ಪತ್ನಿಯಾಗಿ ನನಗೆ ಉಚಿತವಾದುದಲ್ಲ ಎಂದು ದ್ರೌಪದಿ ದುಃಖಿಸಿ ಭೀಮನನ್ನು ರೊಚ್ಚಿಗೆಬ್ಬಿಸಲು ಮುಂದಾಗುತ್ತಾಳೆ.

5. ಈ ಕಾವ್ಯಭಾಗದಲ್ಲಿ ಮೂಡಿಬಂದಿರುವ ಭೀಮ–ದ್ರೌಪದಿಯರ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.

ಕವಿ ಕುಮಾರವ್ಯಾಸನು ಈ ಕಾವ್ಯಭಾಗದಲ್ಲಿ ಭೀಮ–ದ್ರೌಪದಿಯರ ನಡುವೆ ನಡೆಯುವ ಸಂಭಾಷಣೆಯನ್ನು ಬಹಳ ಸೊಗಸಾಗಿ ವಿವರಿಸಿದ್ದಾನೆ. ದ್ರೌಪದಿಯು ಮಲಗಿದ್ದ ಭೀಮನನ್ನು ಎಬ್ಬಿಸುತ್ತಾಳೆ. ಆಗ ಭೀಮ

ದ್ರೌಪದಿಯಲ್ಲಿ ನೀನೇಕೆ ಬಂದೆ ಎಂದು ಕೇಳುತ್ತಾನೆ. ಆಗ ದ್ರೌಪದಿಯು ಕೀಚಕನಿಂದ ಆಗುತ್ತಿರುವ ತೊಂದರೆಗಳನ್ನು ವಿವರಿಸುತ್ತಾಳೆ. ನಿನ್ನೆ ಮಧ್ಯಾಹ್ನ ಕೀಚಕನೆಂಬ ನಾಯಿ ಎಲ್ಲರೆದುರಿಗೆ ನನ್ನನ್ನು ಒದ್ದನೆಂದು ಹೇಳುತ್ತಾಳೆ. ಅಲ್ಲದೆ ಅತ ತನ್ನನ್ನು ಬಿಡುವುದಿಲ್ಲ ನಾನು ಅತ್ಮಹತ್ಯೆ ಮಾಡಿಕೊಂಡರೆ ಆ ಪಾತಕ ನಿನ್ನನ್ನು ಸುತ್ತಿಕೊಳ್ಳುತ್ತದೆ ಎನ್ನುತ್ತಾಳೆ. ಆಕೆ ಮತ್ತೆ ತನ್ನ ಮಾತನ್ನು ಮುಂದುವರಿಸಿ ಉಳಿದ ನಾಲ್ವರು ಪತಿಗಳು ಸುಖಕ್ಕಾಗಿ ನನ್ನ ಬಳಿ ಬರುತ್ತಾರೆ. ಆದರೆ ಮಾನ– ಮರ್ಯಾದೆಗಳ ವಿಚಾರ ಬಂದಾಗ ಹೊರಟು ಹೋಗುತ್ತಾರೆ. ಆದರೆ ನೀನು ನನ್ನನ್ನು ಕರುಣೆಯಿಂದ ಕಾಣಬೇಕು ಎಂದು ಹೇಳುತ್ತಾಳೆ. ಆಗ ಭೀಮನು ಹೋರಾಡುವುದಕ್ಕೆ ನಾನು – ರಮಿಸುವುದಕ್ಕೆ ಅವರು ಚೆನ್ನಾಗಿದೆ ಕೆಲವರು ಸಂಪಾದನೆ ಮಾಡಿ ಗಳಿಸಿದರೆ ಉಳಿದವರು ಆನಂದವಾಗಿ ಉಂಡು ತಿಂದು ತಿರುಗಾಡುತ್ತಾರೆ ಎನ್ನುವ ಗಾದೆಯಂತಾಯಿತು ನನ್ನ ಪರಿಸ್ಥಿತಿ ಎನ್ನುತ್ತಾನೆ. ನೀನು ನಿನಗಾದ ತೊಂದರೆಯನ್ನು ಅವರ ಬಳಿ ಹೇಳು ಕಾರ್ಯ ಪ್ರವೃತ್ತರಾಗುವಂತೆ ಮಾಡು. ಅಣ್ಣನಲ್ಲಿ ನನಗೆ ಭಯ ಎನ್ನುತ್ತಾನೆ. ಅಗ ದ್ರೌಪದಿಯು ವಿಪತ್ತು ಬಂದಾಗ ಒಬ್ಬನೇ ಗಂಡ ಇದ್ದರೂ ಆತ ಒಬ್ಬಂಟಿಯಾಗಿಯೇ ಎದುರಾಳಿಯ ವಿರುದ್ಧ ಹೋರಾಡುತ್ತಾನೆ. ಆದರೆ ನೀವು ಐದು ಜನ ಇದ್ದರೂ ಒಬ್ಬಳನ್ನು ಕಾಯಲಾರಿರಿ. ನೀವು ಗಂಡರೋ ಭಂಡರೋ ಎನ್ನುತ್ತಾಳೆ. ಆಗ ಭೀಮನು ಆಕೆಯ ಮಾತಿಗೆ ಪ್ರತಿಕ್ರಿಯಿಸುತ್ತಾ ತಾನೇನಾದರು ನಿನ್ನ ಮಾತಿಗೆ ಕಟ್ಟುಬಿದ್ದು ಕೀಚಕನನ್ನು ಕೊಲ್ಲಲು ಮುಂದಾದೆ ಎಂದರೆ, ಹೆಣ್ಣೊಬ್ಬಳ ಕಷ್ಟಕ್ಕಾಗಿ ತನ್ನ ಅಣ್ಣನ ಆಜ್ಞೆಯನ್ನು ಮೀರಿ ಕುಂತಿಯ ಮಗ ಬದುಕಿದನೆಂದು ಕೆಟ್ಟಜನರು ನುಡಿವರು. ನಾನೀಗ ಅಣ್ಣನ ಆಜ್ಞೆ ಎಂಬ ಹಗ್ಗದಿಂದ ಬಂಧಿತರಾಗಿ ಬಿಟ್ಟಿದ್ದೇವೆ ಎನ್ನುತ್ತಾನೆ. ಆಗ ದ್ರೌಪದಿಯು ನನ್ನಂತೆ ಅವಮಾನಕ್ಕೆ ಒಳಗಾಗುವ ಹೆಂಗಸರು ಇನ್ನು ಮುಂದೆ ಹುಟ್ಟದಿರಲಿ ಎನ್ನುತ್ತಾಳೆ. ಅಲ್ಲದೆ ಭೀಮನಂತ ಅಸಹಾಯಕರು ಹುಟ್ಟಬಾರದು ಅಲ್ಲದೆ ನನ್ನ ಹಾಗೆ ಮತ್ತು ಪಾಂಡವರ ಹಾಗೆ ಅತಿಶಯ

ಸಂಕಟದಿಂದ ನವೆದವರು ಬೇರೆ ಯಾರಿದ್ದಾರೆ? ಎಂದು ಸಂಕಟ ಪಡುತ್ತಾಳೆ. ದ್ರೌಪದಿಯು ಈ ಸಂದರ್ಭದಲ್ಲಿ ತಾನು ಈ ಹಿಂದೆ ಅನುಭವಿಸಿದ ಅವಮಾನದ ಸನ್ನಿವೇಶಗಳನ್ನು ನೆನಪಿಸುತ್ತಾಳೆ. ನೀವು ಯಮನನ್ನೇ ಎದುರಿಸಬಲ್ಲ ಪರಾಕ್ರಮಿಗಳು ಆದರೆ ನನ್ನೊಬ್ಬಳನ್ನು ಆಳಲಾರಿರಿ. ಪಾಪಿಗಳು ನೀವು ಅಪಕೀರ್ತಿಗೂ ಅಂಜದಂತವರು ಎಂದು ಆತನಿಗೆ ರೋಷ ಉಂಟಾಗುವಂತೆ ಮಾಡುತ್ತಾಳೆ. ಇದರಿಂದ ಸಿಟ್ಟುಗೊಂಡ ಭೀಮನು ಕೀಚಕನನ್ನು ಕೊಲ್ಲಲು ಮುಂದಾಗುತ್ತಾನೆ.

====0====

# ಪಗೆಯಂ ಬಾಲಕನೆಂಬರೇ

**ಪುಲಿಗೆರೆ ಸೋಮನಾಥ**

**ಸಾರಾಂಶ :**

ಕೆಲವನ್ನು ಶಾಸ್ತ್ರಗ್ರಂಥಗಳ ಅಧ್ಯಯನದ ಮೂಲಕ, ಇನ್ನೂ ಕೆಲವನ್ನು ಇತರರನ್ನು ಅನುಕರಿಸುವುದರ ಮೂಲಕ, ಕೆಲವನ್ನು ಸ್ವಂತ ಬುದ್ಧಿಯಿಂದ, ಮತ್ತೆ ಕೆಲವನ್ನು ಸಜ್ಜನರ ಸಂಗದಿಂದ ಹೀಗೆ ಜ್ಞಾನ ಸಂಪಾದಿಸಬೇಕು ಇಂತಹ ವ್ಯಕ್ತಿ ಸರ್ವಜ್ಞನಾಗುತ್ತಾನೆ. ಅನೇಕ ತೊರೆಗಳು ಸೇರಿ ಸಮುದ್ರವಾಗುವಂತೆ ಹಲವು ಮೂಲಗಳಿಂದ ಜ್ಞಾನವನ್ನು ಸಂಪಾದಿಸುವವನು ಸರ್ವಜ್ಞನಂತೆ ಆಗುವನು. ಕೇಳಿಕಲಿ / ಓದಿಕಲಿ / ನೋಡಿಕಲಿ/ ಮಾಡಿಕಲಿ.

ತನ್ನ ಉಪಯೋಗಕ್ಕೆ ಬಾರದ ಧನದಿಂದ ಏನುಪಯೋಗ? ಅಂತೆಯೇ ಮುಪ್ಪಿನಲ್ಲಿರುವ ತಂದೆ –ತಾಯಿಗಳನ್ನು ನೋಡಿಕೊಳ್ಳದ ಮಗ ಇದ್ದೂ ಸತ್ತ ಹಾಗೇ. ಬೆಳೆಯು ನೀರಿಲ್ಲದೆ ಒಣಗಿದ ಮೇಲೆ ಒಳ್ಳೆಯ ಮಳೆ ಬಂದರೆ ಏನು ಉಪಯೋಗ? ಅಂತೆಯೇ ಕಷ್ಟಕಾಲದಲ್ಲಿ ಬಂದು ನೋಡದ ಬಂಧುಮಿತ್ರರಿಂದ ಏನು ಪ್ರಯೋಜನ, ಸಮಯಕ್ಕೆ ಒದಗಿದ

ಹುಲ್ಲುಕಡ್ಡಿಯಷ್ಟು ಸಹಾಯವೂ ಪರ್ವತದಷ್ಟು ಉಪಕಾರಿಯಲ್ಲವೇ? ಎಂದಿದ್ದಾನೆ. ಪ್ರತಿಯೊಂದು ವಸ್ತುವೂ ಅದರದ್ದೇ ಆದ ಉಪಯೋಗವನ್ನು ಹೊಂದಿರುತ್ತದೆ. ಆ ಉಪಯೋಗ ಆಗದಿದ್ದಾಗ ಅದು ವ್ಯರ್ಥ ಅಂತೆಯೇ ವ್ಯಕ್ತಿಗಳೂ ವ್ಯರ್ಥ.

ಎಳೆಚಿಗುರು ಎಂದು ಬೇವಿನ ಎಲೆ ತಿಂದರೆ ರುಚಿಯಾಗಿರುವುದೇ? ಮರಿಚೇಳು ಎಂದು ಪ್ರೀತಿಯಿಂದ ಹಿಡಿಯ ಹೋದರೆ ಕುಟುಕದೇ ಇರುವುದೇ? ಹಾವಿಗೆ ಹಾಲನ್ನು ಎರೆದು ಪೋಷಿಸಿದರೆ ಅದು ನಮಗೆ ವಿಶ್ವಾಸ ತೋರುತ್ತದೆಯೇ? ಹಕ್ಕಿಗಳನ್ನು ಸಾಕುವ ಆಕಾಂಕ್ಷೆಯಿಂದ ಯಾರಾದರೂ ಗೂಬೆಯನ್ನು ಸಾಕುವರೇ? ಶತ್ರುವನ್ನು ಬಾಲಕನೆಂದು ಅಲಕ್ಷ್ಯಮಾಡಿ ಸೋತ ಅನೇಕ ಉದಾಹರಣೆಗಳಿವೆ ಬೆಂಕಿ ಕಿಡಿ ಚಿಕ್ಕದಾಗಿದ್ದರೂ ಜಗತ್ತನ್ನೇ ಸುಡಬಲ್ಲದು.

ಬಂಡೆಯನ್ನು ಸೀಳಬೇಕಾದರೆ ಪುಟಾಣಿ ಉಳಿ – ಸುತ್ತಿಗೆಯಿಂದ ಸಾಧ್ಯವೇ ಹೊರತು ಬೃಹದಾಕಾರವಾದ ಆನೆ ತುಳಿಯುವುರಿಂದ ಸಾಧ್ಯವಿಲ್ಲ. ಸಮಯಕ್ಕೆ ತಕ್ಕ ಉಪಾಯ ಮಾಡಬಲ್ಲವನು ಒಬ್ಬಂಟಿಯಾದರೂ ಕೋಟಿ ಜನರಿಗೆ ಸಮ.. ಅತಿ ಭಾರದ ವಸ್ತುವನ್ನು ಮೇಲೆತ್ತಲು ದೊಡ್ಡ ಮರದಿಂದಲೂ ಸಾಧ್ಯವಾಗುವುದಿಲ್ಲ. ಆದರೆ ಭಾರವನ್ನು ಎತ್ತಲು ಬಳಸುವ ಮೀಟುಗೋಲು (ಸನ್ನೆ,ಹಾರೆಕೋಲು)ಸಾವಿರ ಮಂದಿಗೆ ಸಮ. ಅದ್ದರಿಂದ ದೇಹಶಕ್ತಿಗಿಂತ ಯುಕ್ತಿಗೆ ಮಹತ್ವ ಎಂದು ಕವಿ ಹೇಳುತ್ತಾನೆ. ಪ್ರತಿಯೊಂದು ಕೆಲಸಕ್ಕೂ ಬುದ್ಧಿಯನ್ನು ಉಪಯೋಗಿಸಬೇಕು.

ಶತ್ರುಗಳನ್ನು ಕೊಲ್ಲ ಬಲ್ಲೆಯಾದರೆ ನೀನು ಸೈನಿಕನಾಗಬೇಕು. ಬುದ್ದಿವಂತಿಕೆ ಚಮತ್ಕಾರಗಳನ್ನು ತಿಳಿದಿರುವವನಾದರೆ ಮಂತ್ರಿಯಾಗಬೇಕು, ಎಲ್ಲರೊಂದಿಗೆ ತಾಳ್ಮೆ ಸಹನೆಯಿಂದ ಇರಬಲ್ಲೆಯಾದರೆ ದೊರೆಯಾಗು, ಕಾಮಾದಿ ಅರಿಷಡ್ವರ್ಗಗಳನ್ನು ಹಿಡಿತದಲ್ಲಿ ಇಟ್ಟುಕೊಳ್ಳಬಲ್ಲೆಯಾದರೆ ಯೋಗಿಯಾಗು. ತನ್ನ ಕೈಯಿಂದ ದಂಡ ತೆರಬಲ್ಲ ಯೋಗ್ಯತೆ

ಇರುವುದಾದರೆ ಇತರರು ಮಾಡಿದ ಸಾಲಕ್ಕೆ ಹೊಣೆಗಾರನಾಗಬೇಕು ಎಂದು ಹೇಳುತ್ತಾನೆ. ಪ್ರತಿಯೊಂದು ಕಾರ್ಯಕ್ಕೂ ತಕ್ಕ ಯೋಗ್ಯತೆ ಹೊಂದಿರಬೇಕು ಇಲ್ಲದಿದ್ದರೆ ಕಾರ್ಯಸಾಧ್ಯವಾಗುವುದಿಲ್ಲ.

ಹೊಟ್ಟೆಯಲ್ಲಿ ಕೆಸರನ್ನು ತುಂಬಿಕೊಂಡು ಮೇಲೆ ತೊಳೆಯಲು ಶುದ್ಧನಾಗುವನೇ? ಮಾಡಬಾರದ ಪಾಪಗಳನ್ನು ಮಾಡಿ ಪುಣ್ಯ ತೀರ್ಥಗಳಲ್ಲಿ ಮಿಂದರೆ / ಮುಳುಗಿ ಎದ್ದರೆ ಶುದ್ಧನಾಗುವನೇ? ಕಾಗೆಗಳೂ ಸ್ನಾನಮಾಡುವುದಿಲ್ಲವೆ? ಬೇವಿನ ಹಣ್ಣನ್ನು ಬೆಲ್ಲದ ಪಾಕದಲ್ಲಿ ಅದ್ದಿದರೆ ಅದರ ಕಹಿ ಹೋಗುವುದೇ? ಅಂತೆಯೇ ಮನಸ್ಸಿನ ಮಲಿನತೆಯನ್ನು ಕಳೆದುಕೊಳ್ಳದೆ ದೇಹಶುದ್ಧಿ ಮಾತ್ರ ಮಾಡಿದರೆ ಕೊಳೆ ಹೋಗುವುದಿಲ್ಲ. ಮನದ ಶುದ್ಧತೆಯೇ ನಿಜವಾದ ಮಡಿ ಎಂದು ಕವಿ ಹೇಳುತ್ತಾನೆ. ಅಂತರಂಗ–ಬಹಿರಂಗ ಶುದ್ಧಿ ಮುಖ್ಯವಾದುದು.

**ಸಂದರ್ಭ ಸಹಿತ ವಿವರಿಸಿ:**

1. ಕೆಲವಂ ಬಲ್ಲವರಿಂದ ಕಲ್ತು.

ಆಯ್ಕೆ: ಪುಲಿಗೆರೆ ಸೋಮನಾಥ ಬರೆದ ಸೋಮೇಶ್ವರ ಶತಕದಿಂದ ಆಯ್ದ ಪಗೆಯಂ ಬಾಲಕನೆಂಬರೇ ಎಂಬ ಪದ್ಯ ಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಯಾವ ಯಾವ ಮೂಲಗಳಿಂದ ಜ್ಞಾನವನ್ನು ಸಂಪಾದಿಸಿ ಜ್ಞಾನಿಯಾಗಬಹುದೆಂದು ಕೆಲವು ಉದಾಹರಣೆಗಳ ಮೂಲಕ ವಿವರಿಸುವಾಗ ಈ ಸಾಲು ಬಂದಿದೆ.

ವಿವರಣೆ: ಕೆಲವನ್ನು ಬಲ್ಲವರಿಂದ, ಕೆಲವನ್ನು ಶಾಸ್ತ್ರ ಕೇಳುವುದರಿಂದ, ಕೆಲವನ್ನು ಆಚರಿಸುವವರಿಂದ ಕಂಡು, ಇನ್ನು ಕೆಲವನ್ನು ಸುಜ್ಞಾನದಿಂದ ನೋಡಿ ಜ್ಞಾನವನ್ನು ಸಂಪಾದಿಸಬೇಕು. ಸಜ್ಜನರ ಸಂಗದಿಂದ ಒಳ್ಳೆಯತನವನ್ನು ಕಲಿಯಬೇಕು. ಅಂತವನು ಮಾತ್ರ ಸರ್ವಜ್ಞನಾಗಲು ಸಾಧ್ಯ. ಹಾಗೆಯೇ ಹಲವು ಹಳ್ಳಗಳು ಕೂಡಿ ಹೇಗೆ

ಸಮುದ್ರವಾಗುತ್ತದೆಯೋ ಹಲವು ಮೂಲಗಳಿಂದ ಜ್ಞಾನ ಸಂಪಾದಿಸಿ ಸರ್ವಜ್ಞನಾಗಬೇಕು ಎಂದು ಹೇಳಿದ್ದಾನೆ. ಈ ರೀತಿ ಬೇರೆ ಬೇರೆ ಮೂಲಗಳನ್ನು ಹೇಳುವಾಗ ಈ ಮೇಲಿನ ಮಾತು ಬಂದಿದೆ.

2. ಆಪತ್ತಿನೊಳ್ ಮಣಿದುಂ ನೋಡದ ಬಂಧುವೇತಕೆ

ಆಯ್ಕೆ: ಪುಲಿಗೆರೆ ಸೋಮನಾಥ ಬರೆದ ಸೋಮೇಶ್ವರ ಶತಕದಿಂದ ಆಯ್ದ ಪಗೆಯಂ ಬಾಲಕನೆಂಬರೇ ಎಂಬ ಪದ್ಯ ಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಬಂಧುಗಳ ಗುಣ ಹೇಗಿರುತ್ತದೆ ಬಂಧುಗಳು ಹೇಗಿರಬೇಕು ಎಂದು ತಿಳಿಸುವಾಗ ಈ ಸಾಲು ಬಂದಿದೆ.

ವಿವರಣೆ: ಕಷ್ಟಕಾಲದಲ್ಲಿ ಕಷ್ಟ ಸುಖಗಳನ್ನು ವಿಚಾರಿಸಿ ಹೋಗುವುದು ಬಂಧುವಿನ ಲಕ್ಷಣ. ಕಷ್ಟಕಾಲದಲ್ಲಿ ನೆರವಿಗೆ ಬರಬೇಕು. ಕೇವಲ ಸುಖವಿರುವಾಗ ಜೊತೆಯಾಗಿದ್ದು ಕಷ್ಟಕಾಲದಲ್ಲಿ ದೂರಹೋಗುವ ಬಂಧು ಬಂಧುವೇ ಅಲ್ಲ. ಬಂಧು ಆಪತ್ತಿನಲ್ಲಿರುವವರ ಕಷ್ಟವನ್ನು ನೋಡಬೇಕು. ಅಂಥವನು ನಿಜವಾದ ಬಂಧು ಎನಿಸಿಕೊಳ್ಳುತ್ತಾನೆ. ಆಪತ್ತಿನಲ್ಲಿ ನೋಡದ ಬಂಧು ಯಾಕಾಗಿ ಬೇಕು ಎಂದು ಸೋಮನಾಥ ಅಭಿಪ್ರಾಯಪಟ್ಟಿದ್ದಾನೆ.

3. ತೃಣವೇ ಪರ್ವತವಲ್ಲವೇ

ಆಯ್ಕೆ: ಪುಲಿಗೆರೆ ಸೋಮನಾಥ ಬರೆದ ಸೋಮೇಶ್ವರ ಶತಕದಿಂದ ಆಯ್ದ ಪಗೆಯಂ ಬಾಲಕನೆಂಬರೇ ಎಂಬ ಪದ್ಯ ಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಕಷ್ಟಕಾಲದಲ್ಲಿ ಚಿಕ್ಕ ಸಹಾಯ ಮಾಡಿದರೂ ಅದು ದೊಡ್ಡ ಸಹಾಯವಾಗುತ್ತದೆ ಎನ್ನುವ ಸಂದರ್ಭವಿದು.

ವಿವರಣೆ: ಸೋತಾಗ ಬಂದು ನೋಡದ ಬಂಧು ಏಕೆ? ಆಪತ್ತಿಗಾದವನೇ ನಿಜವಾದ ನೆಂಟ. ಚಿಕ್ಕದಾದ ಸಹಾಯವೂ ಕಷ್ಟದಲ್ಲಿರುವವನಿಗೆ ದೊಡ್ಡದಾಗಿ ಕಾಣಿಸುತ್ತದೆ. ಸಹಾಯ ಚಿಕ್ಕದಿರಲಿ ದೊಡ್ಡದಿರಲಿ ಅದು ಮುಖ್ಯ ಆಗುವುದಿಲ್ಲ. ಸಕಾಲಕ್ಕೆ ಒದಗುವ ಸಹಾಯ

ಎಲ್ಲಕ್ಕಿಂತ ದೊಡ್ಡದು. ಕಷ್ಟಕಾಲದಲ್ಲಿ ಸಮಯಕ್ಕೆ ಸರಿಯಾಗಿ ಬಂದು ಸಹಾಯ ಮಾಡುವ ಒಂದು ಹುಲ್ಲು ಕಡ್ಡಿಯೂ ಸಹ ಕಷ್ಟದಲ್ಲಿರುವವನಿಗೆ ಪರ್ವತದಂತೆ ಕಾಣುತ್ತದೆ ಎಂದು ಕವಿ ಈ ಸಾಲಿನಲ್ಲಿ ಹೇಳಿದ್ದಾನೆ.

4. ಚೇಳ್ ಚಿಕ್ಕದೆಂದಳ್ಕರಿಂ ತೆಗೆಯಲ್ ಕಚ್ಚದೇ

ಆಯ್ಕೆ:ಪುಲಿಗೆರೆ ಸೋಮನಾಥ ಬರೆದ ಸೋಮೇಶ್ವರ ಶತಕದಿಂದ ಆಯ್ದ ಪಗೆಯಂ ಬಾಲಕನೆಂಬರೇ ಎಂಬ ಪದ್ಯ ಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಹಗೆಯನ್ನು ಚಿಕ್ಕವನೆಂದು ಬಿಡಬಾರದೆಂದು ಹಗೆತನದಿಂದ ದೂರವಿರಬೇಕೆಂದು ಹೇಳುವ ಸಂದರ್ಭವಿದು.

ವಿವರಣೆ: ದುಷ್ಟರಿಂದ ದೂರವಿರಬೇಕು. ಬೇವಿನ ಮರದ ಚಿಗುರು ಸಹ ತನ್ನ ಸ್ವಾದವನ್ನು ಬಿಡದು ಚಿಕ್ಕದಾಗಿನಿಂದ ಅಕ್ಕರೆಯಿಂದ ಸಾಕಿರುವ ಚೇಳೂ ಸಹ ಕುಟುಕದೇ ಬಿಡಲಾರದು. ಆದುದರಿಂದ ಚಿಕ್ಕದಿರಲಿ, ದೊಡ್ಡದಿರಲಿ ಅಪಾಯ ತರುವ ಸಂಗತಿಗಳಿಂದ ದೂರವಿದ್ದು, ಆ ಬಗ್ಗೆ ಎಚ್ಚರಿಕೆಯಿಂದ ಇರಬೇಕೆಂದು ಈ ಸಾಲಿನ ಮೂಲಕ ಹೇಳಲಾಗಿದೆ.

5. ಪಗೆಯಂ ಬಾಲಕನೆಂಬರೆ

ಆಯ್ಕೆ: ಪುಲಿಗೆರೆ ಸೋಮನಾಥ ಬರೆದ ಸೋಮೇಶ್ವರ ಶತಕದಿಂದ ಆಯ್ದ ಪಗೆಯಂ ಬಾಲಕನೆಂಬರೇ ಎಂಬ ಪದ್ಯ ಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಹಗೆಯನ್ನು ಚಿಕ್ಕವನೆಂದು ಬಿಡಬಾರದೆಂದು ಹಗೆತನದಿಂದ ದೂರವಿರಬೇಕೆಂದು ಹೇಳುವ ಸಂದರ್ಭವಿದು.

ವಿವರಣೆ : ಚಿಕ್ಕವನಿರಲಿ, ದೊಡ್ಡವನಿರಲಿ ಶತ್ರು ಶತ್ರುವೇ. ಶತ್ರು ಚಿಕ್ಕವನೆಂದು ಸುಮ್ಮನಿದ್ದರೆ ಅಪಾಯವನ್ನು ಮೈ ಮೇಲೆ ಎಳೆದುಕೊಂಡಂತೆ. ದುಷ್ಟರಿಂದ ದೂರವಿರಬೇಕು. ಬೇವಿನ ಮರದ ಚಿಗುರು ಸಹ ತನ್ನ ಸ್ವಾದವನ್ನು ಬಿಡದು ಚಿಕ್ಕದಾಗಿನಿಂದ ಅಕ್ಕರೆಯಿಂದ ಸಾಕಿರುವ ಚೇಳೂ ಸಹ ಕುಟುಕದೇ ಬಿಡಲಾರದು. ಆದುದರಿಂದ

ಚಿಕ್ಕದಿರಲಿ, ದೊಡ್ಡದಿರಲಿ ಅಪಾಯ ತರುವ ಸಂಗತಿಗಳಿಂದ ದೂರವಿದ್ದು, ಆ ಬಗ್ಗೆ ಎಚ್ಚರಿಕೆಯಿಂದ ಇರಬೇಕೆಂದು ಹಗೆಯನ್ನು ಬಾಲಕನೆಂದು ತಿಳಿಯಬಾರದು ಎಂದು ಈ ಸಾಲಿನ ಮೂಲಕ ಹೇಳಲಾಗಿದೆ.

6. ಲೋಕದೊಳ್ ಮಡಿಯೇ ನಿರ್ಮಲ ಚಿತ್ತವ್ಯೆ

ಆಯ್ಕೆ: ಪುಲಿಗೆರೆ ಸೋಮನಾಥ ಬರೆದ ಸೋಮೇಶ್ವರ ಶತಕದಿಂದ ಆಯ್ದ ಪಗೆಯಂ ಬಾಲಕನೆಂಬರೇ ಎಂಬ ಪದ್ಯ ಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಮಡಿವಂತಿಕೆ ಹೇಗಿರಬೇಕೆಂದು ಹೇಳುವ ಸಂದರ್ಭವಿದು.

ವಿವರಣೆ: ಹೊಟ್ಟೆಯಲ್ಲಿ ಕೆಸರನ್ನು ತುಂಬಿಕೊಂಡು ಮೇಲೆ ತೊಳೆದರೆ ಶುದ್ಧನಾಗಲು ಸಾಧ್ಯವೇ? ಕಡುಪಾಪ ಮಾಡಿ ಬಲುವಾಗಿ ಸ್ನಾನ ಮಾಡಿದರೆ ಶುಚಿಯಾಗುತ್ತಾನೆಯೇ ಹಾಗೆ ನೋಡಿದರೆ ಕಾಗೆಯೂ ಕೂಡ ಸ್ನಾನ ಮಾಡುತ್ತದೆ.ಬೆಲ್ಲದ ಪಾನಕದೊಳಗೆ ಬೇವಿನ ಫಲವನ್ನು ಅದ್ದಿಟ್ಟರೆ ಬೇವಿನ ಫಲ ಸ್ವಾದವಾಗುವುದಿಲ್ಲ. ಮನಸ್ಸಿನ ನೈರ್ಮಲ್ಯ ಕಾಪಾಡಿಕೊಳ್ಳುವುದೇ ನಿಜವಾದ ಮಡಿ ಎನ್ನುವಾಗ ಈ ಮಾತು ಬಂದಿದೆ.

**ಒಂದು ವಾಕ್ಯದಲ್ಲಿ ಉತ್ತರಿಸಿ:**

1. ಹಲವು ಹಳ್ಳಗಳು ಸೇರಿ ಏನಾಗುತ್ತದೆ?

ಹಲವು ಹಳ್ಳಗಳು ಸೇರಿ ಸಮುದ್ರವಾಗುತ್ತದೆ.

2.ನಿಷ್ಪ್ರಯೋಜಕ ಮಗ ಯಾರು?

ಮುಪ್ಪಿನಲ್ಲಿ ತಂದೆ ತಾಯಿಗಳನ್ನು ಸಲಹದೇ ಇರುವ ಮಗ ನಿಷ್ಪ್ರಯೋಜಕ.

3. ಹಗೆಯನ್ನು ಏನೆಂದು ಉಪೇಕ್ಷಿಸಬಾರದೆಂದು ಸೋಮನಾಥನು ಹೇಳಿದ್ದಾನೆ?

ಹಗೆಯನ್ನು ಬಾಲಕನೆಂದು ಉಪೇಕ್ಷಿಸಬಾರದೆಂದು ಸೋಮನಾಥನು ಹೇಳಿದ್ದಾನೆ.

4.ವೀರನಾದವನು ಏನನ್ನು ಬಲ್ಲವನಾಗಿರಬೇಕೆಂದು ಸೋಮನಾಥನು

ಹೇಳಿದ್ದಾನೆ?

ವೀರನಾದವನು ಇರಿಯಲು ಬಲ್ಲವನಾಗಿರಬೇಕೆಂದು ಸೋಮನಾಥನು ಹೇಳಿದ್ದಾನೆ.

6. ಯಾರನ್ನು ಯೋಗಿ ಎನ್ನಬಹುದು?

ಅರಿಷಡ್ವರ್ಗಗಳನ್ನು ಗೆದ್ದವನನ್ನು ಯೋಗಿ ಎನ್ನಬಹುದು.

**ಎರಡು–ಮೂರು ವಾಕ್ಯದಲ್ಲಿ ಉತ್ತರಿಸಿ :**

1 ಯಾರಿಂದ ಯಾವುದನ್ನು ಹೇಗೆ ಕಲಿಯಬೇಕೆಂದು ಸೋಮನಾಥನು ಹೇಳಿದ್ದಾನೆ?

ಕವಿ ಪಗೆಯಂ ಬಾಲಕನೆಂಬರೇ ಎಂಬ ಪದ್ಯದಲ್ಲಿ ಮನುಷ್ಯ ಯಾವ ಯಾವ ಮೂಲಗಳಿಂದ ಜ್ಞಾನವನ್ನು ಸಂಪಾದಿಸಿ ಜ್ಞಾನಿಯಾಗಬಹುದೆಂದು ಕೆಲವು ಉದಾಹರಣೆಗಳ ಮೂಲಕ ವಿವರಿಸಿದ್ದಾನೆ. ಕೆಲವನ್ನು ಬಲ್ಲವರಿಂದ, ಕೆಲವನ್ನು ಶಾಸ್ತ್ರ ಕೇಳುವುದರಿಂದ, ಕೆಲವನ್ನು ಆಚರಿಸುವವರಿಂದ ಕಂಡು,ಇನ್ನು ಕೆಲವನ್ನು ಸುಜ್ಞಾನದಿಂದ ನೋಡಿ ಜ್ಞಾನವನ್ನು ಸಂಪಾದಿಸಬೇಕು.ಸಜ್ಜನರ ಸಂಗದಿಂದ ಒಳ್ಳೆಯತನವನ್ನು ಕಲಿಯಬೇಕು. ಅಂತವನು ಮಾತ್ರ ಸರ್ವಜ್ಞನಾಗಲು ಸಾಧ್ಯ. ಹಾಗೆಯೇ ಹಲವು ಹಳ್ಳಗಳು ಕೂಡಿ ಹೇಗೆ ಸಮುದ್ರವಾಗುತ್ತದೆಯೋ ಹಾಗೆಯೇ ಹಲವು ಮೂಲಗಳಿಂದ ಜ್ಞಾನ ಸಂಪಾದಿಸಿ ಸರ್ವಜ್ಞನಾಗಬೇಕು ಎಂದು ಹೇಳಿದ್ದಾನೆ

3.ಧನ ಮತ್ತು ಸುತನ ವಿಷಯದಲ್ಲಿ ಸೋಮನಾಥನ ಅಭಿಪ್ರಾಯವೇನು?

ಧನವನ್ನು ಕೂಡಿಡಬಾರದು. ತಾನು ಅನುಭೋಗಿಸಲಾಗದ ಧನವಿದ್ದು ಏನೂ ಪ್ರಯೋಜನವಿಲ್ಲ. ಅದೇ ರೀತಿ ಸುತನಾದವನು ವೃದ್ಧಾಪ್ಯದಲ್ಲಿ ತಂದೆತಾಯಿಯರ ಸೇವೆ ಮಾಡಬೇಕು. ವೃದ್ಧಾಪ್ಯದಲ್ಲಿ ತಂದೆತಾಯಿಯರ ಸೇವೆ ಮಾಡದ ಮಗ ನಿಷ್ಪ್ರಯೋಜಕನಾಗುತ್ತಾನೆ. ಎಂಬ ಅಭಿಪ್ರಾಯವಿದೆ. ಇದು ಧನ ಮತ್ತು ಸುತನ ವಿಷಯದಲ್ಲಿ ಸೋಮನಾಥನ ಅಭಿಪ್ರಾಯವಾಗಿದೆ.

3. ರಾಜ ಮತ್ತು ಮಂತ್ರಿಗಳಿಗೆ ಯಾವ ಅರ್ಹತೆಗಳಿರಬೇಕೆಂದು ಸೋಮನಾಥನು ಹೇಳಿದ್ದಾನೆ?

ರಾಜನು ಪ್ರಜೆಗಳನ್ನು ಕಾಪಾಡುವಂತವನು. ರಾಜನಾಗಬೇಕಾದರೆ ಕೋಪವನ್ನು ತ್ಯಜಿಸಬೇಕು. ಅದೇ ರೀತಿ ಮಂತ್ರಿಯಾದವನು ಚಮತ್ಕಾರಗಳನ್ನು ತಿಳಿದಿರಬೇಕು. ಚಮತ್ಕಾರಗಳನ್ನು ತಿಳಿದವನೇ ಮಂತ್ರಿ. ಈ ಅರ್ಹತೆಗಳು ರಾಜ ಮತ್ತು ಮಂತ್ರಿಗಳಿಗೆ ಇರಬೇಕೆಂದು ಸೋಮನಾಥನು ಹೇಳಿದ್ದಾನೆ.

4. ಶುಚಿ ಮತ್ತು ಸ್ವಾದಗಳನ್ನು ಕುರಿತು ಸೋಮನಾಥನ ಅಭಿಪ್ರಾಯವೇನು?

ಕಡುಪಾಪದ ಕೆಲಸ ಮಾಡಿ ಬಲುವಾಗಿ ಮಿಂದರೆ ಅವನು ಶುಚಿಯಾಗುವನೇ? ಕಾಗೆಗಳ ಗುಂಪು ಸ್ನಾನ ಮಾಡುವುದಿಲ್ಲವೇ? ಬೆಲ್ಲದ ಪಾನಕದೊಳಗೆ ಬೇವಿನ ಫಲವನ್ನು ಅದ್ದಿದರೆ ಅದರ ಕಹಿ ಹೋಗಿ ಸಿಹಿಯಾಗುವುದಿಲ್ಲ. ನಿರ್ಮಲವಾದ ಶುಚಿತ್ವ ಗುಣವೇ ಮನುಷ್ಯನಿಗೆ ಮುಖ್ಯ. ಮತ್ತು ಕಹಿಗುಣ ಯಾವತ್ತೂ ಸಿಹಿಯ ಸ್ವಾದವನ್ನು ಹೊಂದುವುದಿಲ್ಲ ಎಂಬುದು ಸೋಮನಾಥನ ಅಭಿಪ್ರಾಯವಾಗಿದೆ.

**ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ:**

1. ಜ್ಞಾನವನ್ನು ಹೊಂದುವ ಮಾರ್ಗ ಯಾವುದೆಂಬುದನ್ನು ಕವಿ ಹೇಗೆ ವಿವರಿಸಿದ್ದಾನೆ?

ಕವಿ ಪುಲಿಗೆರೆ ಸೋಮನಾಥನು "ಪಗೆಯಂ ಬಾಲಕನೆಂಬರೇ" ಎಂಬ ಪದ್ಯದಲ್ಲಿ ಬದುಕಿನ ನಡೆ ನುಡಿ ಆಚಾರ ವಿಚಾರಗಳನ್ನು, ಬದುಕಿನ ಮೌಲ್ಯಗಳನ್ನು ತಿಳಿ ಹೇಳಿದ್ದಾನೆ ಕವಿ ಈ ಪದ್ಯದಲ್ಲಿ ಮನುಷ್ಯ ಯಾವ ಯಾವ ಮೂಲಗಳಿಂದ ಜ್ಞಾನವನ್ನು ಸಂಪಾದಿಸಿ ಸರ್ವಜ್ಞನಾಗಬಹುದೆಂದು ವಿವರಿಸಿದ್ದಾನೆ. ಜ್ಞಾನವೆಂಬುದು ಹುಟ್ಟಿನಿಂದ ಬರುವುದಿಲ್ಲ. ಅದೊಂದು ಸಮುದ್ರವಿದ್ದಂತೆ ಹಲವು ತೊರೆಗಳು ಒಂದು ಸೇರಿ ಸಮುದ್ರವಾಗುವಂತೆ ಮನುಷ್ಯ ಜ್ಞಾನವನ್ನು ಬೇರೆ ಬೇರೆ ಮೂಲಗಳಿಂದ, ಬೇರೆ ಬೇರೆ ಮೂಲೆಗಳಿಂದ ಸಂಪಾದಿಸಬೇಕಾಗುತ್ತದೆ. ಕೆಲವನ್ನು ಬಲ್ಲವರಿಂದ ಅಂದರೆ

ತಿಳಿದ ವಿದ್ವಾಂಸರಿಂದ ತಿಳಿದುಕೊಳ್ಳಬೇಕಾಗುತ್ತದೆ. ಕೆಲವನ್ನು ಶಾಸ್ತ್ರಗಳನ್ನು ಕೇಳಿ ತಿಳಿದುಕೊಳ್ಳಬೇಕು. ಕೆಲವನ್ನು ಆಚರಿಸುವವರಿಂದ ಕಂಡು ಕಲಿಯಬೇಕು. ಇನ್ನು ಕೆಲವನ್ನು ಸುಜ್ಞಾನದಿಂದ ನೋಡಿ ಜ್ಞಾನವನ್ನು ಸಂಪಾದಿಸಬೇಕು. ಕೆಲವನ್ನು ಸಜ್ಜನರ ಸಂಗದಿಂದ ಅರಿಯಬೇಕು. ಅಂಥವನು ಮಾತ್ರ ಸರ್ವಜ್ಞನಾಗಲು ಸಾಧ್ಯ. ಅದೇ ರೀತಿ ಹಲವು ಹಳ್ಳಗಳು ಕೂಡಿ ಹೇಗೆ ಸಮುದ್ರವಾಗುತ್ತದೆಯೋ ಹಾಗೆಯೇ ಹಲವು ಮೂಲಗಳಿಂದ ಜ್ಞಾನ ಸಂಪಾದಿಸಿ ಸರ್ವಜ್ಞನಾಗಬೇಕು ಎಂದು ಹೇಳಿದ್ದಾನೆ.

2. ಸಕಾಲಕ್ಕೆ ಒದಗುವ ಸಹಾಯವೇ ಶ್ರೇಷ್ಠ ಎಂಬುದನ್ನು ಕವಿ ಹೇಗೆ ತಿಳಿಸಿದ್ದಾನೆ?

ಕವಿ ಪುಲಿಗೆರೆ ಸೋಮನಾಥನು "ಪಗೆಯಂ ಬಾಲಕನೆಂಬರೇ" ಎಂಬ ಪದ್ಯದಲ್ಲಿ ಬದುಕಿನ ನಡೆ ನುಡಿ ಆಚಾರ ವಿಚಾರಗಳನ್ನು, ಬದುಕಿನ ಮೌಲ್ಯಗಳನ್ನು ತಿಳಿ ಹೇಳಿದ್ದಾನೆ. ನಮ್ಮ ಆಚಾರ ವಿಚಾರಗಳಲ್ಲಿ ಮೌಲ್ಯಗಳನ್ನು ಮೇಳೈಸಿಕೊಂಡಾಗಲೇ ಬದುಕಿಗೊಂದು ಅರ್ಥ ಪ್ರಾಪ್ತವಾಗುತ್ತದೆ. ನಮ್ಮ ಕಷ್ಟಕಾಲದಲ್ಲಿ ಪ್ರಯೋಜನಕ್ಕೆ ಬಾರದ ವಸ್ತು, ಸಂಗತಿ,ವ್ಯಕ್ತಿಗಳಿಂದ ಯಾವ ಉಪಯೋಗವೂ ಇಲ್ಲವೆಂಬುದನ್ನು ಸೋಮೇಶ್ವರ ಹಲವು ಉದಾಹರಣೆಗಳ ಮೂಲಕ ವಿವರಿಸಿ ಹೇಳಿದ್ದಾನೆ. ಧನವನ್ನು ಕೂಡಿಡಬಾರದು.ತಾನು ಅನುಭೋಗಿಸಲಾಗದ ಧನವಿದ್ದು ಏನೂ ಪ್ರಯೋಜನವಿಲ್ಲ. ಅದೇ ರೀತಿ ಸುತನಾದವನು ವೃದ್ಧಾಪ್ಯದಲ್ಲಿ ತಂದೆತಾಯಿಯರ ಸೇವೆ ಮಾಡಬೇಕು. ವೃದ್ಧಾಪ್ಯದಲ್ಲಿ ತಂದೆತಾಯಿಯರ ಸೇವೆ ಮಾಡದ ಮಗ ನಿಷ್ಪ್ರಯೋಜಕನಾಗುತ್ತಾನೆ. ಒಣಗುವ ಬೆಳೆಗೆ ನೀರು ಅತ್ಯಾವಶ್ಯಕ. ಬೆಳೆಗೆ ನೀರು ಬೇಕಾದಾಗ ಮಳೆ ಬಾರದೇ ಈಗ ಮಳೆ ಬಂದು ಏನು ಪ್ರಯೋಜನ? ಕಷ್ಟಕಾಲದಲ್ಲಿ ಕಷ್ಟ ಸುಖಗಳನ್ನು ವಿಚಾರಿಸಿ ಹೋಗುವುದು ಬಂಧುವಿನ ಲಕ್ಷಣ. ಕೇವಲ ಸುಖವಿರುವಾಗ ಜೊತೆಯಾಗಿದ್ದು ಕಷ್ಟಕಾಲದಲ್ಲಿ ದೂರಹೋಗುವ ಬಂಧು ಬಂಧುವೇ ಅಲ್ಲ.ಬಂಧು ಆಪತ್ತಿನಲ್ಲಿರುವವರ ಕಷ್ಟವನ್ನು ನೋಡಬೇಕು. ಆಪತ್ತಿಗಾದವನೇ

ನಿಜವಾದ ನೆಂಟ. ಅಂಥವನು ನಿಜವಾದ ಬಂಧು ಎನಿಸಿಕೊಳ್ಳುತ್ತಾನೆ. ಆಪತ್ತಿನಲ್ಲಿ ನೋಡದ ಬಂಧು ಯಾಕಾಗಿ ಬೇಕು? ಚಿಕ್ಕದಾದ ಸಹಾಯವೂ ಕಷ್ಟದಲ್ಲಿರುವವನಿಗೆ ದೊಡ್ಡದಾಗಿ ಕಾಣಿಸುತ್ತದೆ. ಸಹಾಯ ಚಿಕ್ಕದಿರಲಿ ದೊಡ್ಡದಿರಲಿ ಅದು ಮುಖ್ಯ ಆಗುವುದಿಲ್ಲ. ಸಕಾಲಕ್ಕೆ ಒದಗುವ ಸಹಾಯ ಎಲ್ಲಕ್ಕಿಂತ ದೊಡ್ಡದು. ಕಷ್ಟಕಾಲದಲ್ಲಿ ಸಮಯಕ್ಕೆ ಸರಿಯಾಗಿ ಬಂದು ಸಹಾಯ ಮಾಡುವ ಒಂದು ಹುಲ್ಲು ಕಡ್ಡಿಯೂ ಸಹ ಕಷ್ಟದಲ್ಲಿರುವವನಿಗೆ ಪರ್ವತದಂತೆ ಕಾಣುತ್ತದೆ ಎಂದು ಸೋಮನಾಥ ಅಭಿಪ್ರಾಯಪಟ್ಟಿದ್ದಾನೆ.

3. ಯಾವ ಯಾವ ಸಂಗತಿಗಳನ್ನು ಉಪೇಕ್ಷಿಸಬಾರದಾಗಿ ಸೋಮನಾಥನು ತಿಳಿಸಿದ್ದಾನೆ?

ಪುಲಿಗೆರೆ ಸೋಮನಾಥನ ಶತಕವು ಕನ್ನಡ ನಾಡಿನಲ್ಲಿ ಕವಿವಾಣಿಯಾಗಿ, ಜನವಾಣಿಯಾಗಿ ಹಬ್ಬಿ ಹರಡಿ ನೀತಿಯ ಹಂದರದಲ್ಲಿ ಬದುಕಿನ ತನಿವಣ್ಣುಗಳನ್ನು ತುಂಬಿ ತಂದಿದೆ. ಮೌಲ್ಯಗಳಿಗೆಲ್ಲ ನೀತಿಯೇ ಮೂಲ ಬೀಜ. ಭಕ್ತಿ,ಜ್ಞಾನ, ವೈರಾಗ್ಯ, ನೀತಿಯನ್ನು ಪ್ರತಿಪಾದಿಸುವ ಪದ್ಯಗಳು ಪುಲಿಗೆರೆ ಸೋಮನಾಥನ ಹೆಸರನ್ನು ಸ್ಥಿರವಾಗಿಸಿದೆ.ಕವಿ ಕೆಲವು ಸಂಗತಿಗಳನ್ನು ಉಪೇಕ್ಷಿಸಬಾರದೆಂದು ಕೆಲವು ಉದಾಹರಣೆಯ ಮೂಲಕ ತಿಳಿಸಿದ್ದಾನೆ. ಬೇವಿನ ಮರ ಚಿಗುರೆಂದು ತಿನ್ನಲು ಸ್ವಾದವಾಗುವುದಿಲ್ಲ. ಬೇವಿನ ಮರದ ಚಿಗುರು ಸಹ ಬೇವಿನ ಸ್ವಾದವನ್ನು ಹೊಂದಿಕೊಂಡೇ ಬೆಳೆಯುತ್ತದೆ. ಚಿಗುರಾದರೂ ಸಹ ಬೇವಿನ ಸ್ವಾದ ಬಿಡದು. ಬೇವು ಎಂದಿಗೂ ಸಿಹಿಯಾಗುವುದಿಲ್ಲ. ಅದರಂತೆಯೇ ದುಷ್ಟರೆಂದೂ ಒಳ್ಳೆಯ ಗುಣ ತೋರುವುದಿಲ್ಲವಾದ್ದರಿಂದ ಅವರ ಬಗ್ಗೆ ಎಚ್ಚರದಿಂದಿರಬೇಕು. ಉಪೇಕ್ಷಿಸಬಾರದೆಂದು ಕವಿ ಹೇಳುತ್ತಾರೆ. ಚೇಳು ಚಿಕ್ಕದೆಂದು ಪ್ರೀತಿಯಿಂದ ಬೆಳೆಸಿ, ಅಕ್ಕರೆಯಿಂದ ತೆಗೆಯಲು ಅದು ಕಚ್ಚದೇ ಇರದು. ಹೆಡೆಯಿರುವ ವಿಷ ಸರ್ಪವನ್ನು ಹಾಲನ್ನು ಉಣಿಸಿ ಸಾಕಲು ಅದು ವಿಶ್ವಾಸಕ್ಕೆ ಯೋಗ್ಯವಲ್ಲ. ಪಕ್ಷಿಯನ್ನು ಸಾಕುವೆನೆಂದು ಗೂಬೆಮರಿಯನ್ನು ಮುದ್ದಿನಿಂದ ಸಲಹುವರೇ. ಹಗೆಯನ್ನು ಬಾಲಕನೆಂದು ಉಪೇಕ್ಷಿಸಬಾರದೆಂದು ಸೋಮನಾಥನು

ಹೇಳಿದ್ದಾನೆ. ಚಿಕ್ಕವನಿರಲಿ, ದೊಡ್ಡವನಿರಲಿ ಶತ್ರು ಶತ್ರುವೇ. ಹಾಗೆಯೇ ಸಣ್ಣ ಹುಡುಗ ನಮಗೇನು ಮಾಡಬಲ್ಲನೆಂದು ಶತ್ರುವಾದವನನ್ನು ಎಂದಿಗೂ ಅಲಕ್ಷ್ಯ ಮಾಡಬಾರದು. ಶತ್ರು ಚಿಕ್ಕವನೆಂದು ಸುಮ್ಮನಿದ್ದರೆ ಅಪಾಯವನ್ನು ಮೈ ಮೇಲೆ ಎಳೆದುಕೊಂಡಂತೆ. ದುಷ್ಟರಿಂದ ದೂರವಿರಬೇಕು. ಬೇವಿನ ಮರದ ಚಿಗುರು ಸಹ ತನ್ನ ಸ್ವಾದವನ್ನು ಬಿಡದು ಚಿಕ್ಕದಾಗಿನಿಂದ ಅಕ್ಕರೆಯಿಂದ ಸಾಕಿರುವ ಚೇಳೂ ಸಹ ಕುಟುಕದೇ ಬಿಡಲಾರದು. ಆದುದರಿಂದ ಚಿಕ್ಕದಿರಲಿ, ದೊಡ್ಡದಿರಲಿ ಅಪಾಯ ತರುವ ಸಂಗತಿಗಳಿಂದ ದೂರವಿದ್ದು, ಆ ಬಗ್ಗೆ ಎಚ್ಚರಿಕೆಯಿಂದ ಇರಬೇಕೆಂದು ಹಗೆಯನ್ನು ಬಾಲಕನೆಂದು ತಿಳಿಯಬಾರದು ಎಂದಿದ್ದಾನೆ. ಈ ಎಲ್ಲಾ ಸಂಗತಿಗಳನ್ನು ಉಪೇಕ್ಷಿಸಬಾರದಾಗಿ ಸೋಮನಾಥನು ತಿಳಿಸಿದ್ದಾನೆ.

4. ವೀರ,ಮಂತ್ರಿ, ರಾಜ ಮತ್ತು ಯೋಗಿಗಳಿಗೆ ಇರಬೇಕಾದ ಅರ್ಹತೆಗಳೇನು?

ಪುಲಿಗೆರೆ ಸೋಮನಾಥನ 'ಸೋಮೇಶ್ವರ ಶತಕವು' ಕನ್ನಡದ ಅತ್ಯಂತ ಜನಪ್ರಿಯ ಶತಕ ಗ್ರಂಥವಾಗಿದ್ದು ಹದಿನಾರನೇಶತಮಾನದಲ್ಲಿದ್ದ ಈ ಕವಿಯು ಪುಲಿಗೆರೆಯ ಸೋಮೇಶ್ವರನ ಮಹಾ ಭಕ್ತನಾಗಿದ್ದನು. ಆದ್ದರಿಂದಲೇ ತನ್ನ ಪ್ರತಿಪದ್ಯಗಳ ಕೊನೆಯಲ್ಲಿ 'ಹರಹರಾ ಶೀ ಚೆನ್ನ ಸೋಮೇಶ್ವರ'ಅಂಕಿತವನ್ನು ಕಾಣಿಸಿದ್ದಾನೆ. ಸ್ವತಂತ್ರ ಲೋಕಾನುಭವ,ಸ್ವೋಪಜ್ಞ ಕವಿತಾ ಶಕ್ತಿ , ಮೊದಲಾದ ಉನ್ನತ ಗುಣಗಳು ಕಂಡು ಬರುತ್ತದೆ. ಪ್ರತಿಯೊಂದು ಕೆಲಸಕ್ಕೂ ಅದನ್ನು ನಿರ್ವಹಿಸುವ ಸಾಮರ್ಥ್ಯವಿರುವುದು ಮುಖ್ಯವೆಂಬುದನ್ನು ಕವಿ ಸೋಮನಾಥ ತಿಳಿಸಿದ್ದಾನೆ. ಅವನ ಪ್ರಕಾರ ಯುದ್ಧ ಮಾಡಲು ತಿಳಿದಿರುವವನೇ ಸೈನಿಕ.ಶತ್ರುಗಳನ್ನು ಇರಿದು ಕೊಂದ ಸೈನಿಕನು ಭೂಮಿಯಲ್ಲಿ ನಿಜವಾದ ವೀರನೆನಿಸಿಕೊಳ್ಳುವನು. ಕೊಲ್ಲಲು, ಚುಚ್ಚಲು, ತಿವಿಯಲು ಬಲ್ಲವನಾದರೆ ವೀರನಾಗಿರಬೇಕು. ನಾನಾ ರೀತಿಯ ಚಮತ್ಕಾರಗಳನ್ನು ಅರಿತವನೇ ಮಂತ್ರಿ. ಭೂಮಿಯಲ್ಲಿ ನಾನಾ ರೀತಿಯ ಚಮತ್ಕಾರವನ್ನು ತಿಳಿದುಕೊಳ್ಳಬಲ್ಲವನಾದರೆ ಒಳ್ಳೆಯ ಮಂತ್ರಿಯಾಗುತ್ತಾನೆ.

ರಾಜನು ಪ್ರಜೆಗಳನ್ನು ಕಾಪಾಡುವಂತವನು. ರಾಜನಾಗಬೇಕಾದರೆ ಕೋಪವನ್ನು ತ್ಯಜಿಸಬೇಕು. ಕೋಪವನ್ನು ತ್ಯಜಿಸಬಲ್ಲೊಡೆ ರಾಜನಾಗಬೇಕು. ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಮೋಹ, ಲೋಭ ಮದ, ಮತ್ಸರಗಳನ್ನು ಗೆಲ್ಲಬಲ್ಲವನು ಯೋಗಿಯಾಗಬಹುದು. ಅಂಥವನು ಮಾತ್ರ ತನ್ನ ಹೊಣೆಗಾರಿಕೆಯನ್ನು ಅರಿತುಕೊಂಡು ನಡೆಯುವವನು. ಈ ರೀತಿ ಸೋಮನಾಥನು ವೀರ,ಮಂತ್ರಿ, ರಾಜ ಮತ್ತು ಯೋಗಿಗಳಿಗೆ ಇರಬೇಕಾದ ಅರ್ಹತೆಗಳ ವಿವರ ನೀಡಿದ್ದಾನೆ.

5. ನಿರ್ಮಲಚಿತ್ತದ ಅಗತ್ಯವನ್ನು ಸೋಮನಾಥ ಹೇಗೆ ನಿರೂಪಿಸಿದ್ದಾನೆ?

ಕವಿ ಪುಲಿಗೆರೆ ಸೋಮನಾಥನು 'ಪಗೆಯಂ ಬಾಲಕನೆಂಬರೇ' ಪದ್ಯದಲ್ಲಿ ಬದುಕಿನ ಮೌಲ್ಯವನ್ನು ತಿಳಿ ಹೇಳಿದ್ದಾನೆ. ಮೌಲ್ಯ ಗಳಿಗೆಲ್ಲ ನೀತಿಯೇ ಮೂಲ ಬೀಜ. ಲೋಕದ ಡೊಂಕನ್ನುತಿದ್ದುವುದರೊಂದಿಗೆ ತಮ್ಮ ಡೊಂಕನ್ನು ತಿದ್ದಿಕೊಳ್ಳುವ ನೈತಿಕ ಅನುಸಂಧಾನವಿದ್ದವರು ಮಹಾತ್ಮರಾದವರು. ಅವರ ಮಾತು ಮತ್ತು ಕೃತಿಗಳು ಸಮಾಜದಲ್ಲಿ ಆದರ್ಶವಾಗಿ ನೆಲೆನಿಂತು ನೀತಿಯ ಸೂಕ್ತಿಯಾದವು. ಸೋಮನಾಥನ ಪ್ರಕಾರ ನಿರ್ಮಲವಾದ ಮನಸ್ಸನ್ನು ಹೊಂದಿರುವಾತನೇ ನಿಜವಾದ ಮಡಿವಂತನಾಗಿದ್ದಾನೆ. ಹೊಟ್ಟೆಯಲ್ಲಿ ಕೆಸರನ್ನು ತುಂಬಿಕೊಂಡು ಮೇಲೆ ತೊಳೆದರೆ ಶುದ್ಧನಾಗಲು ಸಾಧ್ಯವೇ? ಕಡುಪಾಪ ಮಾಡಿ ಬಲುವಾಗಿ ಪುಣ್ಯ ತೀರ್ಥಗಳಲ್ಲಿ ಸ್ನಾನ ಮಾಡಿದರೆ ಶುಚಿಯಾಗುತ್ತಾನೆಯೇ ಹಾಗೆ ನೋಡಿದರೆ ಕಾಗೆಯೂ ಕೂಡ ಸ್ನಾನ ಮಾಡುತ್ತದೆ. ಬೆಲ್ಲದ ಪಾನಕದೊಳಗೆ ಬೇವಿನ ಫಲವನ್ನು ಅದ್ದಿಟ್ಟರೆ ಬೇವಿನ ಫಲ ಕಹಿ ಗುಣ ಬಿಡುವುದಿಲ್ಲ. ಸ್ವಾದವಾಗುವುದಿಲ್ಲ. ಮನಸ್ಸಿನ ನೈರ್ಮಲ್ಯ ಕಾಪಾಡಿಕೊಳ್ಳುವುದೇ ನಿಜವಾದ ಮಡಿ. ಇದೇ ರೀತಿ ಮನಸ್ಸಿನಲ್ಲಿ ಕೆಟ್ಟ ವಿಚಾರಗಳನ್ನು ಇಟ್ಟುಕೊಂಡು ಮೇಲ್ನೋಟಕ್ಕೆ ಎಷ್ಟೇ ಸ್ವಚ್ಛವಾಗಿ ಕಾಣಿಸಿದರೂ ಆತ ಶುಚಿಯಲ್ಲ.ಶುಭ್ರವಾದ ಒಳ್ಳೆಯ ಮನಸ್ಸನ್ನು ಹೊಂದಿರುವವನೇ ನಿಜವಾದ ಮಡಿವಂತನು. ನಿರ್ಮಲ ಮನಸ್ಸೇ ನಿಜವಾದ

ಮಡಿ ಎನ್ನುವುದರ ಮೂಲಕ ನಿರ್ಮಲಚಿತ್ತದ ಅಗತ್ಯವನ್ನು ಸೋಮನಾಥ ಹೇಗೆ ನಿರೂಪಿಸಿದ್ದಾನೆ.

===0===

# ಜಾಲಿಯ ಮರದಂತೆ

## ಪುರಂದರದಾಸರು

*ನಡುಗನ್ನಡ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೀರ್ತನ ಸಾಹಿತ್ಯವೂ ಒಂದು. ಕೀರ್ತನೆ ಎಂದರೆ ಸ್ತುತಿ, ಸ್ತೋತ್ರ ಎಂದರ್ಥ. ವೀರಶೈವ ಧರ್ಮದ ಉತ್ಕರ್ಷದ ಕಾಲದಲ್ಲಿ ಹೇಗೆ ವಚನಗಳು ಸೃಷ್ಟಿಯಾದವೋ, ಅದೇ ರೀತಿಯಲ್ಲಿ ಭಾಗವತ ಪರಂಪರೆಯ ಉತ್ಕರ್ಷದ ಕಾಲದಲ್ಲಿ ಕೀರ್ತನೆಗಳು ಹುಟ್ಟಿಕೊಂಡಿವೆ. ಕೀರ್ತನ ಸಾಹಿತ್ಯ ಪರಂಪರೆಯ ಆದ್ಯ ಪ್ರವರ್ತಕರು ನರಹರಿತೀರ್ಥರು. ನಂತರ ಶ್ರೀಪಾದರಾಯ, ವ್ಯಾಸರಾಯ, ಪುರಂದರದಾಸ, ಕನಕದಾಸರ ಕಾಲದಲ್ಲಿ ದಾಸಪಂಥವು ಉತ್ತುಂಗ ಶಿಖರವನ್ನು ತಲುಪಿತು. ಆದಿ ದೈವವನ್ನು ಕುರಿತು ದಾಸರು ಕಟ್ಟಿದ ಹಾಡುಗಬ್ಬಗಳೇ ಕೀರ್ತನೆಗಳು. ಪುರಂದರದಾಸರ ಕೀರ್ತನೆಯಿಂದ 'ಕರ್ನಾಟಕ ಸಂಗೀತ' ಉದಯವಾದದ್ದು ಒಂದು ಮಹತ್ವದ ವಿಷಯ.*

*ಕೀರ್ತನೆಗಳು ಪಲ್ಲವಿ, ಅನುಪಲ್ಲವಿ, ನಂತರ ನಾಲ್ಕು ಪಾದಗಳ ಕೆಲವು ಪದ್ಯಗಳು ಇರುವುದು ಇದರ ರೂಪವಾಗಿದೆ. ತತ್ವಜ್ಞಾನ ತಾರತಮ್ಯಗಳನ್ನು ಅನುಸರಿಸಿ ದೇವತಾಸ್ತುತಿ, ಭಗವಂತನ ವಿವಿಧ ಅವತಾರಗಳ ಲೀಲೆಗಳ ಉಲ್ಲೇಖ, ಸ್ವಾಭಾವಿಕ ಒಲವು–ನಿಲುವು, ಮಾನಸಿಕ ತೊಳಲಾಟ, ಬಳಲಾಟ, ಸಮಾಜ ವಿಡಂಬನೆ ಮತ್ತು ವಿಮರ್ಶೆ, ಕೀರ್ತನೆಗಳ ವಸ್ತುವಾಗಿದೆ. 'ಪುರಂದರವಿಠಲ'ಎಂಬುದು ಇವರ ಕೀರ್ತನೆಗಳ ಅಂಕಿತವಾಗಿದೆ.*

**ಸಾರಾಂಶ:**

ಪುರಂದರದಾಸರು ರಚಿಸಿರುವ 'ಜಾಲಿಯ ಮರದಂತೆ' ಎನ್ನುವ ಕೀರ್ತನೆಯು 'ಸಮಾಜ ವಿಮರ್ಶೆ'ಯ ಹಿನ್ನಲೆಯಲ್ಲಿ ಬಹಳ ಮುಖ್ಯವಾಗಿದೆ. ಜಾಲಿಯ ಮರ ಮತ್ತು ದುರ್ಜನರ ವೃಂದ ಎರಡನ್ನೂ ಸಮೀಕರಿಸಿ ಪುರಂದರದಾಸರು ರಚಿಸಿರುವ ಈ ರಚನೆಯಲ್ಲಿ ಹೂವಿಲ್ಲದ,

ಹಣ್ಣಿಲ್ಲದ, ನೆರಳಿಲ್ಲದ ರಸಹೀನವಾದ ಜಾಲಿಯ ಮರವು ಸಮಾಜ ಕಂಟಕರ ಇದೇ ಬಗೆಯ ಅವಗುಣಗಳನ್ನು ಧ್ವನಿಸುತ್ತದೆ. ಸತ್ಪುರುಷರಿಗೆ ದುರ್ಜನರು ಆಶ್ರಯ ಕೊಡುವುದಿಲ್ಲ. ದುರ್ಬಲರಿಗೆ ಸಹಾಯ ಮಾಡುವುದಿಲ್ಲ. ಜ್ಞಾನಗಂಧವಾಗಲೀ, ಸ್ನೇಹರಸವಾಗಲೀ ಅವರಲ್ಲಿಲ್ಲ. ಆಮೂಲಾಗ್ರವಾಗಿ ಕಂಟಕ ವೃತ್ತಿಯನ್ನೇ ಮೆರೆಸುವ ದುರ್ಜನರ ಸ್ವಭಾವ ಚಿತ್ರಣ ಈ ಕೀರ್ತನೆಯಲ್ಲಿ ಸಮರ್ಥವಾಗಿ ರೂಪಿತವಾಗಿದೆ.

ಕೀರ್ತನೆಯ ಆರಂಭದಲ್ಲಿಯೇ ದುರ್ಜನರ ಬಗ್ಗೆ ನೇರವಾಗಿ ಹೇಳಿರುವುದನ್ನು ಕಾಣಬಹುದು. ಭೂಮಿಯ ಮೇಲಿರುವ ದುರ್ಜನರು ಜಾಲಿಯ ಮರವಿದ್ದ ಹಾಗೆ. ಬುಡದಿಂದ ತುದಿಯವರೆಗೆ ಹೇಗೆ ಜಾಲಿಯ ಮರವು ಮುಳ್ಳನ್ನು ಹೊಂದಿರುತ್ತದೆಯೋ ಹಾಗೆ ದುರ್ಜನರು ಕೂಡ ತಮ್ಮ ಇಡೀ ವ್ಯಕ್ತಿತ್ವದಲ್ಲಿ ಕೆಟ್ಟತನವನ್ನು ಹೊಂದಿದವರಾಗಿದ್ದಾರೆ.

ಕೀರ್ತನೆಯ ಮೊದಲ ಭಾಗದಲ್ಲಿ ಪುರಂದರದಾಸರು, ಜಾಲಿಯ ಮರದ ಒಟ್ಟು ಸ್ವರೂಪದ ಬಗ್ಗೆ ಹೇಳುತ್ತಾರೆ. ಜಾಲಿಯ ಮರವು ಬಿಸಿಲಲ್ಲಿ ಆಯಾಸಗೊಂಡು ಬಂದವರಿಗೆ ನೆರಳನ್ನು ನೀಡುವುದಿಲ್ಲ. ಹಸಿದು ಬಂದವರಿಗೆ ಹಣ್ಣನ್ನು ನೀಡುವುದಿಲ್ಲ. ಅದರ ಹೂವಿನಲ್ಲಿ ಸುವಾಸನೆಯಿಲ್ಲ. ಅದರಲ್ಲಿ ಕುಳಿತುಕೊಳ್ಳಲು ಸ್ಥಳವಿಲ್ಲ. ಅದರ ರಸವನ್ನು ಸವಿಯಲು ಮುಂದಾದರೆ ವಿಷದ ರೀತಿಯ ಸ್ವಾದವನ್ನು ಹೊಂದಿದ್ದು, ಜೀವಕ್ಕೆ ಮಾರಕವಾದ ರೀತಿಯಲ್ಲಿ ಇರುವುದು. ಇಲ್ಲಿ ಜಾಲಿಯ ಮರದ ಸ್ವರೂಪವನ್ನು ಹೇಳುವುದರ ಜೊತೆಗೆ ಅದು ನಿರುಪಯುಕ್ತ ಎನ್ನುವ ಅಂಶವನ್ನು ಕೀರ್ತನಕಾರರು ವಿವರಿಸುತ್ತಾರೆ. ಅದೇ ಮಾದರಿಯಲ್ಲಿ ದುರ್ಜನರ ಗುಣ ಸ್ವಭಾವಗಳು ಉಪಯೋಗಾರ್ಹವಲ್ಲ ಎನ್ನುವುದನ್ನು ಇಲ್ಲಿ ಗುರುತಿಸಬಹುದು.

ಎರಡನೆ ಭಾಗದಲ್ಲಿ ಪುರಂದರದಾಸರು ದುರ್ಗುಣ ಹೊಂದಿದ, ಘೋರಪಾಪಿಯ ಮೂಲ ಸ್ವಭಾವವನ್ನು ತಿಳಿಸುತ್ತಾ ಆತನನ್ನು ಹಂದಿಗೆ ಹೋಲಿಸಿದ್ದಾರೆ. ಊರ ಹಂದಿಗೆ ಒಳ್ಳೆಯ ರಸಭರಿತವಾದ

(ಷಡ್ರಸಾನ್ನ)ವನ್ನು ನೀಡಿದರೆ, ಅದು ತನ್ನ ನಾರುವ ಕೆಟ್ಟವಾಸನೆಯನ್ನು ಬಿಡುವುದಿಲ್ಲ. ಹಾಗೆಯೇ ಘೋರಪಾಪಿಗೆ ತತ್ವಜ್ಞಾನದ ಬಗ್ಗೆ ಹೇಳಿದರೆ ಆತ ಎಂದಿಗೂ ಬದಲಾಗಲಾರ. ಇಲ್ಲಿ ದಾಸರು, ದುರ್ಗುಣಗಳನ್ನೇ ತನ್ನ ಮೂಲ ಸ್ವಭಾವದಲ್ಲಿ ಹೊಂದಿದವನು ಎಂದಿಗೂ ಒಳ್ಳೆಯವನಾಗಲಾರ ಎನ್ನುತ್ತಾರೆ. ಈ ಮೂಲಕ ಸಮಾಜಕ್ಕೆ ಕಂಟಕರಾದವರನ್ನು ಏನು ಮಾಡಿದರೂ ಬದಲಾಯಿಸಲು ಸಾಧ್ಯವಿಲ್ಲವೆನ್ನುವ ಭಾವ ಇಲ್ಲಿದೆ.

ಕೀರ್ತನೆಯ ಮೂರನೇ ಭಾಗದಲ್ಲಿ ದುರ್ಜನರ ಕೆಟ್ಟ ಗುಣಗಳ ವಿವರಣೆ ಕಾಣಬಹುದಾಗಿದೆ. ಪುರಂದರದಾಸರು ಹೇಳುವಂತೆ, ದುರ್ಜನರಿಂದ ನಾವು ಒಂದು ಸಣ್ಣ ಉಪಕಾರವನ್ನು ನಿರೀಕ್ಷಿಸುವ ಹಾಗಿಲ್ಲ. ಆದರೆ ಅವರಲ್ಲಿ ಬಿನ್ನಾಣದ ಮಾತುಗಳಿಗೆ ಯಾವುದೇ ಕೊರತೆಯಿರುವುದಿಲ್ಲ. ದುರ್ಜನರ ಒಯ್ಯಾರದ ಮಾತುಗಳನ್ನು ಕೇಳುವಾಗ, ತಾನು ದೊಡ್ಡ ಪರೋಪಕಾರಿ ಎನ್ನುವ ಭಾವನೆ ಅವರದ್ದಾಗಿರುತ್ತದೆ. ಇತರರಿಗೆ ಉಪಕಾರಿಯಾಗದ ಇವರು ತಮ್ಮ ಕಾರ್ಯಸಾಧನೆಗಾಗಿ 'ಅನ್ನತಿನ್ನಲು ಕಚ್ಚಾಡುವ ನಾಯಿಗಳಂತೆ' ಮೇಲೆ ಬಿದ್ದು ತಮ್ಮ ಕಾರ್ಯ ಸಾಧಿಸಿಕೊಳ್ಳುತ್ತಾರೆ.

ಹೀಗೆ ದುರ್ಜನರನ್ನು, ಅವರಗುಣ ಸ್ವಭಾವಗಳನ್ನು ಜಾಲಿಯ ಮರಕ್ಕೆ, ಹಂದಿಗೆ, ನಾಯಿಯ ರೀತಿಯ ಕಿತ್ತಾಟಕ್ಕೆ ಹೋಲಿಸಿ ಸಮಾಜದಲ್ಲಿ ಇವರಿಂದ ಒದಗಬಹುದಾದ ಸಂಕಷ್ಟಗಳ ಬಗ್ಗೆ ವಿವರಿಸುವ ಕೀರ್ತನೆ ಇದಾಗಿದೆ.

**ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು.**

1. ಮೂಲಾಗ್ರ ಪರಿಯಂತ ಮುಳ್ಳು ಕೂಡಿಪ್ಪಂತೆ.

ಆಯ್ಕೆ: ಈ ಮೇಲಿನ ವಾಕ್ಯವನ್ನು 'ಪುರಂದರದಾಸರು' ರಚಿಸಿರುವ 'ಜಾಲಿಯ ಮರದಂತೆ' ಎಂಬ ಕೀರ್ತನೆಯಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಪುರಂದರದಾಸರು ಬುಡದಿಂದ ತುದಿಯವರೆಗೆ ಮುಳ್ಳಿನಿಂದ ಕೂಡಿದ, ಜಾಲಿಯ ಮರದಂತಿರುವ ದುರ್ಜನರ ಕುರಿತು ವಿವರಿಸುವ ಸಂದರ್ಭ ಇದಾಗಿದೆ.

ವಿವರಣೆ: 'ಜಾಲಿಯ ಮರದಂತೆ ಧರೆಯೊಳು ದುರ್ಜನರು' ಎಂದು, ಕೀರ್ತನೆಯ ಆರಂಭದಲ್ಲಿಯೇ ದಾಸರು ದುರ್ಜನರ ಬಗ್ಗೆ ನೇರವಾಗಿ ಹೇಳಿರುವುದನ್ನು ಕಾಣಬಹುದು.ದುರ್ಜನರು ಜಾಲಿಯ ಮರವಿದ್ದ ಹಾಗೆ. ಜಾಲಿಯ ಮರವು ಹೇಗೆ ಬುಡದಿಂದ ತುದಿಯವರೆಗೆ ಮುಳ್ಳನ್ನು ಹೊಂದಿರುತ್ತದೆಯೋ ಹಾಗೆ ದುರ್ಜನರು ಕೂಡ ತಮ್ಮ ಗುಣದಲ್ಲಿ ಕೆಟ್ಟತನವನ್ನು ಹೊಂದಿದವರಾಗಿದ್ದಾರೆ. ಇವರಿಂದ ಯಾವುದೇ ಉಪಯೋಗ ಇಲ್ಲ ಎನ್ನುವಾಗ ಈ ಮೇಲಿನ ಮಾತು ಬಂದಿದೆ.

2. ಕುಸುಮ ವಾಸನೆಯಿಲ್ಲ ಕೂಡಲು ಸ್ಥಳವಿಲ್ಲ.

ಆಯ್ಕೆ: ಈ ಮೇಲಿನ ವಾಕ್ಯವನ್ನು 'ಪುರಂದರದಾಸರು' ರಚಿಸಿರುವ 'ಜಾಲಿಯ ಮರದಂತೆ' ಎಂಬ ಕೀರ್ತನೆಯಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಜಾಲಿಯ ಮರದ ಸ್ವರೂಪವನ್ನು ವಿವರಿಸುವ ಸಂದರ್ಭ ಇದಾಗಿದೆ.

ವಿವರಣೆ: ಪುರಂದರದಾಸರು ಜಾಲಿಯ ಮರದ ಒಟ್ಟು ಸ್ವರೂಪದ ಬಗ್ಗೆ ಹೇಳುತ್ತಾ, ಜಾಲಿಯ ಮರವು ಬಿಸಿಲಲ್ಲಿ ಆಯಾಸಗೊಂಡು ಬಂದವರಿಗೆ ನೆರಳನ್ನು ನೀಡುವುದಿಲ್ಲ. ಹಸಿದು ಬಂದವರಿಗೆ ಹಣ್ಣನ್ನು ನೀಡುವುದಿಲ್ಲ. ಅದರ ಹೂವಿನಲ್ಲಿ ಸುವಾಸನೆಯಿಲ್ಲ. ಕುಳಿತುಕೊಳ್ಳಲು ಸ್ಥಳವಿಲ್ಲ. ಅದರ ರಸವನ್ನು ಸವಿಯಲು ಮುಂದಾದರೆ ವಿಷದ ರೀತಿಯಲ್ಲಿ ಇರುವುದು ಎನ್ನುವಾಗ ಈ ಮೇಲಿನಂತೆ ಪುರಂದರದಾಸರು ಹೇಳುತ್ತಾರೆ. ಅದೇ ರೀತಿಯಲ್ಲಿ ದುರ್ಜನರು ಉಪಯೋಗಾರ್ಹರಲ್ಲ ಎನ್ನುವ ಭಾವ ಇಲ್ಲಿದೆ.

3. ನಾರುವ ದುರ್ಗಂಧ ಬಿಡಬಲ್ಲುದೆ.

ಆಯ್ಕೆ: ಈ ಮೇಲಿನ ವಾಕ್ಯವನ್ನು 'ಪುರಂದರದಾಸರು' ರಚಿಸಿರುವ 'ಜಾಲಿಯ ಮರದಂತೆ' ಎಂಬ ಕೀರ್ತನೆಯಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಹಂದಿಯ ಮೂಲ ಗುಣ ಮತ್ತು ದುರ್ಜನರ ಮೂಲ ಗುಣ ಎರಡು ಒಂದೇ, ಎಂದು ವಿವರಿಸುವ ಸಂದರ್ಭ ಇದಾಗಿದೆ.

ವಿವರಣೆ: ಊರಿನ ಹೊಲಸನ್ನು ತಿಂದು ಜೀವಿಸುವ ಹಂದಿಗೆ ಒಳ್ಳೆಯ ರಸಭರಿತವಾದ (ಷಡ್ರಸಾನ್ನ) ಅನ್ನವನ್ನು ನೀಡಿದರೆ, ಅದು ತನ್ನ ನಾರುವ ಕೆಟ್ಟವಾಸನೆಯನ್ನು ಬಿಡುವುದಿಲ್ಲ. ಅಂತೆಯೇ ಘೋರ ಪಾಪಿಗೆ ತತ್ವಜ್ಞಾನವನ್ನು ಹೇಳಲು ಆತ ಎಂದಿಗೂ ಅದರ ಬಗ್ಗೆ ಅರ್ಥೈಸಿಕೊಳ್ಳಲಾರ. ದುರ್ಗುಣಗಳನ್ನು ತನ್ನ ಮೂಲ ಸ್ವಭಾವದಲ್ಲಿ ಹೊಂದಿದವನು ಎಂದಿಗೂ ಒಳ್ಳೆಯವನಾಗಲಾರ ಎನ್ನುವ ಭಾವ ಇಲ್ಲಿದೆ.

4. ಬಿನ್ನಾಣದ ಮಾತಿಗೆ ಕೊನೆಯಿಲ್ಲ.

ಆಯ್ಕೆ: ಈ ಮೇಲಿನ ವಾಕ್ಯವನ್ನು 'ಪುರಂದರದಾಸರು' ರಚಿಸಿರುವ 'ಜಾಲಿಯ ಮರದಂತೆ' ಎಂಬ ಕೀರ್ತನೆಯಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ದುರ್ಜನರ ಗುಣ–ಸ್ವಭಾವದ ಕುರಿತಾಗಿ ವಿವರಿಸುವ ಸಂದರ್ಭ ಇದಾಗಿದೆ.

ವಿವರಣೆ : ಪುರಂದರದಾಸರು ಹೇಳುವಂತೆ, ದುರ್ಜನರಿಂದ ನಾವು ಒಂದು ಸಣ್ಣ ಉಪಕಾರವನ್ನು ನಿರೀಕ್ಷಿಸುವಂತಿಲ್ಲ. ಆದರೆ ಅವರ ಬಿನ್ನಾಣದ ಮಾತುಗಳು ಮಾತ್ರ ಯಾವುದೇ ಅಡೆತಡೆಯಿಲ್ಲದೆ ಹೊರಗಡೆ ಬರುತ್ತಿರುತ್ತವೆ. ಅವರ ಒಯ್ಯಾರದ ಮಾತುಗಳನ್ನು ಕೇಳುವಾಗ, ತಾನು ದೊಡ್ಡ ಪರೋಪಕಾರಿ ಎನ್ನುವ ಭಾವನೆ ಅವರದ್ದಾಗಿರುತ್ತದೆ. ಇತರರಿಗೆ ಉಪಕಾರಿಯಾಗದ ಇವರು ತಮ್ಮ ಕಾರ್ಯಸಾಧನೆಗಾಗಿ ಅನ್ನತಿನ್ನಲು ಕಚ್ಚಾಡುವ ನಾಯಿಗಳಂತೆ ಮೇಲೆ ಬಿದ್ದು ತಮ್ಮ ಕಾರ್ಯ ಸಾಧಿಸಿಕೊಳ್ಳುತ್ತಾರೆ, ಎನ್ನುವಾಗ ಈ ಮೇಲಿನ ಮಾತು ಬಂದಿದೆ.

**ಐದಾರು ವಾಕ್ಯಗಳಲ್ಲಿ ಉತ್ತರಿಸಿ:**

1. ಜಾಲಿಯ ಮರವು ನಿರುಪಯುಕ್ತವೆಂಬುದನ್ನು ಪುರಂದರದಾಸರು ಹೇಗೆ ನಿರೂಪಿಸಿದ್ದಾರೆ?

ಪುರಂದರದಾಸರು ರಚಿಸಿರುವ 'ಜಾಲಿಯ ಮರದಂತೆ' ಎನ್ನುವ ಕೀರ್ತನೆಯು ಸಮಾಜ ವಿಮರ್ಶೆಯ ಹಿನ್ನಲೆಯಲ್ಲಿ ಬಹಳ ಮುಖ್ಯವಾಗಿದೆ. ಕೀರ್ತನೆಯ ಆರಂಭದಲ್ಲಿಯೇ ದುರ್ಜನರ ಬಗ್ಗೆ ನೇರವಾಗಿ ಹೇಳಿರುವುದನ್ನು ಕಾಣಬಹುದು. ದುರ್ಜನರು ಜಾಲಿಯ ಮರವಿದ್ದ ಹಾಗೆ. ಜಾಲಿಯ ಮರವು ಹೇಗೆ ಬುಡದಿಂದ ತುದಿಯವರೆಗೆ ಮುಳ್ಳನ್ನು ಹೊಂದಿರುತ್ತದೆಯೋ ಹಾಗೆ ದುರ್ಜನರು ಕೂಡ ತಮ್ಮ ಇಡೀ ವ್ಯಕ್ತಿತ್ವದಲ್ಲಿ ಕೆಟ್ಟತನವನ್ನು ಹೊಂದಿದವರಾಗಿದ್ದಾರೆ. ಕೀರ್ತನೆಯ ಮೊದಲ ಭಾಗದಲ್ಲಿ ಪುರಂದರದಾಸರು, ಜಾಲಿಯ ಮರದ ಒಟ್ಟು ಸ್ವರೂಪದ ಬಗ್ಗೆ ಹೇಳುತ್ತಾ, ಜಾಲಿಯ ಮರವು ಬಿಸಿಲಲ್ಲಿ ಆಯಾಸಗೊಂಡು ಬಂದವರಿಗೆ ನೆರಳನ್ನು ನೀಡುವುದಿಲ್ಲ. ಹಸಿದು ಬಂದವರಿಗೆ ಹಣ್ಣನ್ನು ನೀಡುವುದಿಲ್ಲ. ಅದರ ಹೂವಿನಲ್ಲಿ ಸುವಾಸನೆಯಿಲ್ಲ. ಕುಳಿತುಕೊಳ್ಳಲು ಸ್ಥಳವಿಲ್ಲ. ಅದರ ರಸವನ್ನು ಸವಿಯಲು ಮುಂದಾದರೆ ವಿಷದ ರೀತಿಯಲ್ಲಿ ಇರುವುದು ಎನ್ನುತ್ತಾರೆ. ಹೀಗೆ ಅದರ ಸ್ವರೂಪವನ್ನು ಹೇಳುವುದರ ಜೊತೆಗೆ ಅದು ನಿರುಪಯುಕ್ತ ಎನ್ನುವ ಅಂಶವನ್ನು ಕೀರ್ತನಕಾರರು ವಿವರಿಸುತ್ತಾರೆ. ಅದೇ ರೀತಿಯಲ್ಲಿ ದುರ್ಜನರೂ ಕೂಡ ಸಮಾಜಕ್ಕೆ ಉಪಯೋಗಾರ್ಹರಲ್ಲ ಎಂಬುದನ್ನು ದಾಸರು ಇಲ್ಲಿ ಹೇಳಲಿಕ್ಕೆ ಮುಂದಾಗಿರುವುದನ್ನು ಇಲ್ಲಿ ಗಮನಿಸಬಹುದು.

2. ಜಾಲಿ ಮರ ಮತ್ತು ದುರ್ಜನರನ್ನು ಸಮೀಕರಿಸುವುದರ ಔಚಿತ್ಯವನ್ನು ಚರ್ಚಿಸಿ.

ಪುರಂದರದಾಸರು ಇಲ್ಲಿ ಜಾಲಿಯ ಮರ ಮತ್ತು ದುರ್ಜನರ ವೃಂದ ಎರಡನ್ನು ಸಮೀಕರಿಸಿ ಕೀರ್ತನೆ ರಚಿಸಿರುವುದನ್ನು ನಾವು ಕಾಣಬಹುದು. ಜಾಲಿಯ ಮರದಿಂದ ನಾವು ಯಾವುದೇ ರೀತಿಯ ಸದುಪಯೋಗವನ್ನು ಪಡೆಯಲು ಸಾಧ್ಯವಿಲ್ಲ. ಅದೇ ರೀತಿಯಲ್ಲಿ ದುರ್ಜನರಿಂದಲೂ ಕೂಡ ಸಮಾಜಕ್ಕೆ ಯಾವುದೇ ಒಳಿತನ್ನು ನಿರೀಕ್ಷಿಸಲು ಸಾಧ್ಯವಿಲ್ಲ ಎಂದಿದ್ದಾರೆ. ಜಾಲಿಯ ಮರವು ಬಿಸಿಲಲ್ಲಿ ಆಯಾಸಗೊಂಡು ಬಂದವರಿಗೆ ನೆರಳನ್ನು ನೀಡುವುದಿಲ್ಲ. ಹಸಿದು ಬಂದವರಿಗೆ ಹಣ್ಣನ್ನು ನೀಡುವುದಿಲ್ಲ. ಅದರ

ಹೂವಿನಲ್ಲಿ ಸುವಾಸನೆಯಿಲ್ಲ. ಕುಳಿತುಕೊಳ್ಳಲು ಸ್ಥಳವಿಲ್ಲ. ಅದರ ರಸವನ್ನು ಸವಿಯಲು ಮುಂದಾದರೆ ವಿಷದ ರೀತಿಯಲ್ಲಿ ಇರುವುದು. ಅದೇ ರೀತಿಯಲ್ಲಿ ದುರ್ಜನರು. ದುರ್ಜನರಿಂದ, ಯಾವುದೇ ಸಣ್ಣ ಉಪಕಾರವನ್ನು ನಿರೀಕ್ಷಿಸುವಂತಿಲ್ಲ. ಆದರೆ ಅವರ ಬಿನ್ನಾಣದ ಮಾತುಗಳು ಮಾತ್ರ ಯಾವುದೇ ಅಡೆತಡೆಯಿಲ್ಲದೆ ಹೊರಗಡೆ ಬರುತ್ತಿರುತ್ತವೆ. ಅವರ ಒಯ್ಯಾರದ ಮಾತುಗಳನ್ನು ಕೇಳುವಾಗ, ತಾನು ದೊಡ್ಡ ಪರೋಪಕಾರಿ ಎಂಬಂತೆ ವರ್ತಿಸುತ್ತಾರೆ. ಇತರರಿಗೆ ಉಪಕಾರಿಯಾಗದ ಇವರು ತಮ್ಮ ಕಾರ್ಯಸಾಧನೆಗಾಗಿ ಅನ್ನತಿನ್ನಲು ಕಚ್ಚಾಡುವ ನಾಯಿಗಳಂತೆ ಮೇಲೆ ಬಿದ್ದು ತಮ್ಮ ಕಾರ್ಯ ಸಾಧಿಸಿಕೊಳ್ಳುತ್ತಾರೆ.

3. ಸಮಾಜ ಕಂಟಕರ ಬಗೆಗೆ ಪುರಂದರದಾಸರ ಅಭಿಪ್ರಾಯಗಳನ್ನು ಸಂಗ್ರಹಿಸಿರಿ.

ಸಮಾಜಕ್ಕೆ ಕಂಟಕರಾದವರನ್ನು ಏನು ಮಾಡಿದರೂ ಬದಲಾಯಿಸಲು ಸಾಧ್ಯವಿಲ್ಲವೆನ್ನುತ್ತಾರೆ ಪುರಂದರದಾಸರು. ದುರ್ಜನರ ದುರ್ಗುಣಗಳನ್ನು ವಿವರಿಸುವ ಸಂದರ್ಭದಲ್ಲಿ ಪುರಂದರದಾಸರು ಜಾಲಿಯ ಮರ, ಹಂದಿ, ಕುನ್ನಿಗಳ ಹೋಲಿಕೆಗಳನ್ನು ನೀಡುತ್ತಾರೆ. ಮುಳ್ಳಿನಿಂದ ಕೂಡಿದ ಜಾಲಿಯ ಮರವು ಬಿಸಿಲಲ್ಲಿ ಆಯಾಸಗೊಂಡು ಬಂದವರಿಗೆ ನೆರಳನ್ನು ನೀಡುವುದಿಲ್ಲ. ಹಸಿದು ಬಂದವರಿಗೆ ಹಣ್ಣನ್ನು ನೀಡುವುದಿಲ್ಲ. ಅದರ ಹೂವಿನಲ್ಲಿ ಸುವಾಸನೆಯಿಲ್ಲ. ಕುಳಿತುಕೊಳ್ಳಲು ಸ್ಥಳವಿಲ್ಲ. ಅದರ ರಸವನ್ನು ಸವಿಯಲು ಮುಂದಾದರೆ ವಿಷದ ರೀತಿಯಲ್ಲಿ ಇರುವುದು. ಹೀಗೆ ಅದರಿಂದ ಯಾವ ರೀತಿಯ ಉಪಯೋಗವನ್ನು ನಿರೀಕ್ಷಿಸುವಂತಿಲ್ಲ. ಹಾಗೆಯೇ ದುರ್ಜನರು ಕೂಡ ಬುಡದಿಂದ ತುದಿಯವರೆಗೆ ಕೆಟ್ಟಗುಣಗಳನ್ನು ಹೊಂದಿರುತ್ತಾರೆ. ಅವರಿಂದಲೂ ಕೂಡ ಯಾವ ರೀತಿಯ ಸಣ್ಣ ಒಳಿತನ್ನು ನಿರೀಕ್ಷಿಸುವಂತಿಲ್ಲ. ಊರ ಹಂದಿಗೆ ಒಳ್ಳೆಯ ರಸಭರಿತವಾದ ಷಡ್ರಸಾನ್ನವನ್ನು ನೀಡಿದರೆ, ಅದುತನ್ನ ನಾರುವ ಕೆಟ್ಟವಾಸನೆಯನ್ನು ಬಿಡುವುದಿಲ್ಲ. ಅದೇ ರೀತಿಯಲ್ಲಿ ಘೋರಪಾಪಿಗೆ ತತ್ವಜ್ಞಾನವನ್ನು ಬೋಧಿಸಿದರೆ ಅದರಿಂದ ಆತನ ಮೂಲ

ಗುಣ ಬದಲಾಗುವುದಿಲ್ಲ. ಬೀದಿ ನಾಯಿಗಳು ಅನ್ನಕ್ಕಾಗಿ ತಾ–ಮುಂದು, ತಾ–ಮುಂದುಎಂದು ಹೇಗೆ ಕಚ್ಚಾಡುತ್ತವೆಯೋ ಹಾಗೆ ದುರ್ಜನರು ತಮ್ಮ ಕಾರ್ಯ ಸಾಧನೆಗಾಗಿ ಸದಾ ಹಾತೊರೆಯುತ್ತಿರುತ್ತಾರೆ. ತಮ್ಮ ಕಾರ್ಯ ಸಾಧನೆಯ ಹಿನ್ನಲೆಯಲ್ಲಿ ಯಾರಿಗೆ ತೊಂದರೆಯಾದರೂ ಅವರು ಲೆಕ್ಕಿಸುವವರಲ್ಲ ಎಂದು ಸಮಾಜಕಂಟಕರ ಕುರಿತಂತೆ ತನ್ನ ಅಭಿಪ್ರಾಯಗಳನ್ನು ಕೀರ್ತನೆಯ ಮುಖಾಂತರವಾಗಿ ಪುರಂದರದಾಸರು ವಿವರಿಸುತ್ತಾ ಹೋಗುತ್ತಾರೆ.

**ಒಂದು ಅಂಕದ ಪ್ರಶ್ನೆಗಳು.**

1. ಜಾಲಿಯ ಮರದಂತಿರುವವರು ಯಾರು?

ಜಾಲಿಯ ಮರದಂತಿರುವವರು ದುರ್ಜನರು.

2. ಯಾರಿಗೆ ನೆರಳು ಸಿಗುವುದಿಲ್ಲ?

ಬಿಸಿಲಲ್ಲಿ ಬಳಲಿ ಬಂದವರಿಗೆ ನೆರಳು ಸಿಗುವುದಿಲ್ಲ.

3. ಜಾಲಿಯ ರಸಸ್ವಾದ ಹೇಗಿರುತ್ತದೆ?

ಜಾಲಿಯ ರಸಸ್ವಾದ ವಿಷದಂತಿರುತ್ತದೆ.

4. ದುರ್ಗಂಧ ಬಿಡದಿರುವುದು ಯಾವುದು?

ದುರ್ಗಂಧ ಬಿಡದಿರುವುದು ಊರಹಂದಿ.

5. ಯಾವ ಮಾತಿಗೆ ಕೊನೆಯಿಲ್ಲವೆಂದು ಪುರಂದರದಾಸರು ಹೇಳಿದ್ದಾರೆ?

ಬಿನ್ನಾಣದ ಮಾತಿಗೆ ಕೊನೆಯಿಲ್ಲವೆಂದು ಪುರಂದರದಾಸರು ಹೇಳಿದ್ದಾರೆ.

6. ಜಾಲಿಯ ಮುಳ್ಳು ಹೇಗೆ ಆವರಿಸಿರುತ್ತದೆ?

ಜಾಲಿಯ ಮುಳ್ಳು ಮೂಲಾಗ್ರ ಪರಿಯಂತ ಆವರಿಸಿರುತ್ತದೆ.

7. ತತ್ವಜ್ಞಾನವನ್ನು ಕೇಳದವರಾರು?

ಘೋರಪಾಪಿಗಳು ತತ್ವಜ್ಞಾನವನ್ನು ಕೇಳುವುದಿಲ್ಲ.

**ಎರಡು ಅಂಕಗಳ ಪ್ರಶ್ನೆಗಳು.**

1. ಜಾಲಿಯ ಮರದ ನಿರರ್ಥಕತೆಯನ್ನು ಪುರಂದರದಾಸರು ಹೇಗೆ ತಿಳಿಸಿದ್ದಾರೆ?

ಜಾಲಿಯ ಮರವು ಮೂಲಾಗ್ರ ಪರಿಯಂತ ಮುಳ್ಳಿನಿಂದ ಕೂಡಿರುತ್ತದೆ. ಅದು ಬಿಸಿಲಲ್ಲಿ ಬಳಲಿ ಬಂದವರಿಗೆ ನೆರಳನ್ನು ನೀಡುವುದಿಲ್ಲ. ಹಸಿದು ಬಂದವರಿಗೆ ಹಣ್ಣನ್ನು ಒದಗಿಸುವುದಿಲ್ಲ. ಹೂವಿನಲ್ಲಿ ಸುವಾಸನೆಯಿಲ್ಲ, ಕುಳಿತುಕೊಳ್ಳಲು ಸ್ಥಳವಿಲ್ಲ. ಅದರ ರಸಸ್ವಾದ ಮಾಡಿದರೆ ವಿಷದಂತಿರುತ್ತದೆ ಎಂದು ಪುರಂದರದಾಸರು ಜಾಲಿಯ ಮರದ ನಿರರ್ಥಕತೆಯನ್ನು ತಿಳಿಸಿದ್ದಾರೆ. ಅದೇ ರೀತಿಯಲ್ಲಿ ದುರ್ಜನರು ಕೂಡ ಜಾಲಿಯ ಮರದಂತೆ ನಿಷ್ಪ್ರಯೋಜಕರು ಎಂಬುದು ದಾಸರ ನಿಲುವು.

2. ಯಾರಿಗೆ ಷಡ್ರಾಸಾನ್ನವನಿಕ್ಕಿ ಉಪಯೋಗವಿಲ್ಲ? ಏಕೆ?

ಪುರಂದರದಾಸರು ತಮ್ಮ ಕೀರ್ತನೆಯಲ್ಲಿ, ಊರಹಂದಿಗೆ ಷಡ್ರಾಸಾನವನಿಕ್ಕಿ ಉಪಯೋಗವಿಲ್ಲ ವೆಂದಿದ್ದಾರೆ. ಏಕೆಂದರೆ ಊರಹಂದಿಗೆ, ಆರು ರುಚಿ ಅಡಕವಾಗಿರುವ ಷಡ್ರಾಸಾನ್ನವನ್ನು ನೀಡಿದರೂ ಅದು ತನ್ನ ನಾರುವ ದುರ್ಗಂಧವನ್ನು ಎಂದಿಗೂ ಬಿಡುವುದಿಲ್ಲ.

3. ಯಾರಿಗೆ ತತ್ವಜ್ಞಾನ ಹೇಳಿ ಪ್ರಯೋಜನವಿಲ್ಲ?

ಪುರಂದರದಾಸರು ತಮ್ಮ ಕೀರ್ತನೆಯಲ್ಲಿ ಘೋರಪಾಪಿಗೆ ತತ್ವಜ್ಞಾನ ಹೇಳಿ ಪ್ರಯೋಜನವಿಲ್ಲ ಎಂದಿದ್ದಾರೆ. ಏಕೆಂದರೆ, ಘೋರಪಾಪಿಗೆ ತತ್ವಜ್ಞಾನ ಹೇಳಿದರೆ ಆತ ಯಾವತ್ತೂ ತನ್ನ ಕ್ರೂರಕರ್ಮವನ್ನು ಬಿಟ್ಟು ಒಳ್ಳೆಯ ದಾರಿಯಲ್ಲಿ ಸಾಗುವುದಿಲ್ಲ.

4. ದುರ್ಜನರ ಕಾರ್ಯ ಯಾವ ಬಗೆಯದು?

ದುರ್ಜನರು ಸದಾಕಾಲ ಒಯ್ಯಾರದ ಮಾತುಗಳನ್ನು ಆಡುತ್ತಿರುತ್ತಾರೆ. ಆದರೆ ಅವರಿಂದ ಸ್ವಲ್ಪ ಮಟ್ಟಿನ ಉಪಕಾರವನ್ನೂ ನಿರೀಕ್ಷಿಸಲು ಸಾಧ್ಯವಿಲ್ಲ. ದುರ್ಜನರು ಯಾವಾಗಲೂ ಅನ್ನ ತಿನ್ನಲು ಕಚ್ಚಾಡುವ ನಾಯಿಗಳಂತೆ ತಮ್ಮ ಕಾರ್ಯ ಸಾಧಿಸಿಕೊಳ್ಳಲು ಹೋರಾಡುತ್ತಿರುತ್ತಾರೆ.

===0===

# ಹಬ್ಬಲಿ ಅವರ ರಸಬಳ್ಳಿ

**ಜನಪದ**

**ಸಾರಾಂಶ:**

ಜಾನಪದ ತ್ರಿಪದಿಗಳಲ್ಲಿ ತಾಯಿ–ತವರು, ಬಡತನ–ಸಿರಿತನ ಮುಂತಾದ ವಿಚಾರಗಳ ಅಭಿವ್ಯಕ್ತಿ ಇದೆ. ಮಕ್ಕಳನ್ನು ಲಾಲಿಸುವ ಪಾಲಿಸುವ ಸುಂದರವಾದ ವಾತ್ಸಲ್ಯಗೀತೆಗಳೂ ಇವೆ.

ಶ್ರೀಮಂತಿಕೆ ಬಂದಾಗ ಬಂಗಾರದ ಬಳೆಯನ್ನು ಕೈಗೆ ತೊಟ್ಟು, ಬಡತನದಲ್ಲಿರುವವರ ಅಸಹಾಯಕತೆಯನ್ನು ನಿಂದಿಸಬಾರದು. ಬಡವರನ್ನು ಬೈಯಬಾರದು, ಬಂಗಾರ ಯಾರಲ್ಲೂ ಸ್ಥಿರವಾಗಿರುವುದಿಲ್ಲ. ಅದು ಬಂದಷ್ಟೇ ವೇಗವಾಗಿ ನಮ್ಮಿಂದ ದೂರಾಗಬಹುದು. ಮಧ್ಯಾಹ್ನದ ಬಿಸಿಲು ಸ್ವಲ್ಪಹೊತ್ತು ಇರುತ್ತದೆ ಬಿಸಿಲು ಇಳಿದು ನೆರಳು ಬರುವಂತೆ ಶ್ರೀಮಂತಿಕೆ ಇದೆಯೆಂದು ಬೀಗಿ ಬಡವರನ್ನು ಬಯ್ಯುವುದು ಸರಿಯಲ್ಲ ಶ್ರೀಮಂತಿಕೆ ಅಶಾಶ್ವತ ಎಂದು ತಿಳಿದಿದ್ದರೂ ಬೀಗುವುದೇಕೆ ಎಂದು ಜನಪದರು ಪ್ರಶ್ನಿಸಿದ್ದಾರೆ.

ಬಡತನವಿದೆಯೆಂದು ಮನೆಯಲ್ಲಿರುವ ಮಕ್ಕಳನ್ನು ಹಿಡಿದು ಬಡಿಯಬಾರದು, ಬಡತನವನ್ನು ತಂದವರು ಅವರಲ್ಲ. ಬಡತನದ ನೋವನ್ನು ಮರೆಸುವ ಶಕ್ತಿ ಮಕ್ಕಳಿಗಿದೆ. ನಾವು ದುಃಖ-ಚಿಂತೆಯಲ್ಲಿರುವಾಗ ಆಡುತ್ತಾ ಮಕ್ಕಳು ಬಂದು ತೊಡೆಯ ಮೇಲೆ ಕುಳಿತು ಬಾಲಲೀಲೆಗಳನ್ನು ಪ್ರದರ್ಶಿಸಿದರೆ ಸಾಕು ನಮ್ಮ ಬಡತನದ ಚಿಂತೆ ದುಃಖ ಕಷ್ಟ-ನೋವುಗಳೆಲ್ಲ ಓಡಿಹೋಗುತ್ತವೆ. ಇಂತಹ ಶಕ್ತಿಯಿರುವ ಬಾಲರನ್ನು ಬಡತನವೆಂದು ಬಡಿಯುವುದು ತರವಲ್ಲ ಎಂದು ಈ ತ್ರಿಪದಿಯಲ್ಲಿ ನೀತಿಬೋಧೆ ಮಾಡಲಾಗಿದೆ.

ಸಹವಾಸವೆಂಬುದು ತುಂಬಾ ಮುಖ್ಯ. ನಾವು ಯಾರೊಂದಿಗೆ ಸ್ನೇಹ ಬೆಳೆಸುತ್ತೇವೆ ಎನ್ನುವುದರ ಮೇಲೆ ನಮ್ಮ ವ್ಯಕ್ತಿತ್ವದ ಬೆಳವಣಿಗೆ ಅವಲಂಬಿಸಿರುತ್ತದೆ. ಆದ್ದರಿಂದ ಜನಪದರು ಉತ್ತಮರ ಗೆಳೆತನ ಮಾಡಿದರೆ ನಮ್ಮ ವ್ಯಕ್ತಿತ್ವಕ್ಕೆ ಅಪ್ಪಟ ಬಂಗಾರದ ಬೆಲೆ ಲಭಿಸುತ್ತದೆ. ಅದನ್ನು ಬಿಟ್ಟು ಬುದ್ಧಿ ಹೀನರೊಂದಿಗೆ ಗೆಳೆತನ ಮಾಡಿದರೆ ನಾವು ಹಿತ್ತಾಳೆಗಿಂತಲೂ ಬಲು ಹೀನರಾಗುತ್ತೇವೆ, ಕಳೆಗುಂದುತ್ತೇವೆ ಎಂದಿದ್ದಾರೆ ಸಜ್ಜನರ ಸಹವಾಸ ಹೆಜ್ಜೇನ ಸವಿದಂತೆ ದುರ್ಜನರ ಒಡನಾಟ ಬಚ್ಚಲಿನ ರೊಚ್ಚೆನಂತಿಹುದು ಸರ್ವಜ್ಞ

ಸಮಾಜದಲ್ಲಿ ಹೇಗೆ ಹೊಂದಾಣಿಕೆಯಿಂದ ಬದುಕಬೇಕು ಎಂಬುದನ್ನು ವ್ಯಕ್ತಪಡಿಸುವ ಈ ತ್ರಿಪದಿಯು ವ್ಯಕ್ತಿ ಬದುಕಿರುವಾಗ ಅಕ್ಕಪಕ್ಕದ ಜನರೊಂದಿಗೆ, ಮಕ್ಕಳು ಮರಿಗಳೊಂದಿಗೆ ಚೆನ್ನಾಗಿ ಹೊಂದಿಕೊಂಡು ಬಾಳಬೇಕು. ಆಗ ಅಂತಹ ಮನುಷ್ಯ ಸತ್ತಾಗ ಜನ ಸ್ಮರಿಸುತ್ತಾರೆ. ದೇವರ ದಯೆಯಿಂದ ನಾವು ಸತ್ತಮೇಲೂ ಜನರ ಬಾಯಲ್ಲಿ ಜೀವಿಸುವುದೇ ಸಾರ್ಥಕವಾದ ಜೀವನ ಎಂಬ ಆಶಯ ಇಲ್ಲಿದೆ.

ನಾವು ಬದುಕುತ್ತಿರುವ ವಾತಾವರಣದಲ್ಲಿ ಅಕ್ಕಪಕ್ಕದಲ್ಲಿ ಎಂತಹ ಜನರಿರುತ್ತಾರೆ, ಎಂಬ ನಾವು ಬದುಕುತ್ತಿರುವ ವಾತಾವರಣದಲ್ಲಿ ಅಕ್ಕಪಕ್ಕದಲ್ಲಿ ಎಂತಹ ಜನರಿರುತ್ತಾರೆ ಎಂಬುದು ಅತಿಮುಖ್ಯ. ಬುದ್ಧಿವಂತರು ನಮ್ಮ ನೆರೆಯಲ್ಲಿ ವಾಸಿಸಿದರೆ ಅವರಿಂದ ಉಪಯೋಗವಾಗುವುದು. ಅದಲ್ಲದೆ ದುಷ್ಟರು ನಮ್ಮ ನೆರೆಯಲ್ಲಿದ್ದರೆ ನಾವು ಇರುವ ಬುದ್ಧಿಯನ್ನು ಕಳಕೊಂಡು ಅವರಂತೆಯೇ ದುಷ್ಟಬುದ್ಧಿ ಬೆಳೆಸಿಕೊಳ್ಳುತೇವೆ. ಆದ್ದರಿಂದ ನಮಗೆ ಒಳ್ಳೆಯ ನೆರೆ ಹೊರೆಯವರ ಸಹವಾಸ ಅತಿ ಅಗತ್ಯ.

ಕಷ್ಟದಿಂದ ಪಾರು ಮಾಡಬೇಕೆಂದು ಸೃಷ್ಟಿಗೊಡೆಯನಾದ ದೇವರಲ್ಲಿ ಜನಪದರು ಮೊರೆಯಿಡುವ ಚಿತ್ರಣ ಇಲ್ಲಿದೆ. ಹುಟ್ಟುವ ಮೊದಲು ಈ ದೇಹ ಇರಲಿಲ್ಲ ಹುಟ್ಟಿದ ಮೇಲಷ್ಟೇ ಈ ದೇಹ ದೊರೆತಿದೆ. ಅದೇ ರೀತಿ ಸತ್ತಾಗಲೂ ಈ ದೇಹವನ್ನು ಭೂಮಿಯ ಮೇಲೆ ಬಿಟ್ಟು ಹೋಗುತ್ತೇವೆಯೇ ಹೊರತು ಹೊತ್ತುಕೊಂಡು ಹೋಗುವುದಿಲ್ಲ. ಆದರೆ ಹುಟ್ಟಿದಾಗಿನಿಂದ ಸಾಯುವವರೆಗಿನ ಅವಧಿಯಲ್ಲಿ ಜೀವನ ನಡೆಸಲೇ ಬೇಕಿರುವುದರಿಂದ ಆ ಬದುಕಿನಲ್ಲಿ ಕಷ್ಟಗಳು ಬಂದಾಗ ಬಿಡಿಸಿ ಸಲಹಬೇಕೆಂದು ದೇವರಲ್ಲಿ ಪ್ರಾರ್ಥಿಸಿದ್ದಾನೆ. ಜನಪದರು ಹುಟ್ಟುವಾಗ ಏನನ್ನೂ ತಂದೆ, ಭೂಮಿಗೆ ಬಂದ ಜೀವ ಈ ಭೂಮಿಯಲ್ಲಿ ಗಳಿಸಿದ್ದೆಲ್ಲವನ್ನು ಸತ್ತಾಗ ಬಿಟ್ಟುಹೋಗಬೇಕು ಎಂಬ ಸತ್ಯವನ್ನು ಜನರಿಗೆ ತಿಳಿಸುತ್ತಿದ್ದಾರೆ.

ತಾಯಿ ಮನೆ ಅಥವಾ ತವರನ್ನು ನೆನೆದು ಹೆಣ್ಣೊಬ್ಬಳು ಹಾಡಿದ ತ್ರಿಪದಿಯಿದು. ಬೇಸಗೆಯ ದಿನಗಳಲ್ಲಿ ಉಷ್ಣತೆ ಹೆಚ್ಚಿರುವುದರಿಂದ ಬೇವಿನ ಮರಗಳಿಂದ ಉಂಟಾದ ತಂಪಾದ ಹವೆ ಹಿತಕರವಾಗಿರುತ್ತದೆ. ಅದೇ ರೀತಿ ಭೀಮರತಿ ಎಂಬ ಹೊಳೆಯ ನೀರು ತಣ್ಣಗಿರುತ್ತದೆ. ಅಂತೆಯೇ ತವರಿನಲ್ಲಿರುವ ತಾಯಿಯ ನೆನಪು ಮಗಳಿಗೆ ತಂಪಾಗಿ ಕಂಡಿದೆ.

ತಾಯಿಯ ವಾತ್ಸಲ್ಯ ತಾಯಿ ತನ್ನ ಮಗುವಿಗೆ ದೃಷ್ಟಿ ತಾಗಬಾರದು ಎಂದು ಕಾಡಿಗೆಯನ್ನು ಮಗುವಿನ ಕೆನ್ನೆಗೋ, ಹಣೆಗೋ ಹಚ್ಚಿ ಮಗುವನ್ನು ಕಾಪಾಡುತ್ತಾಳೆ, ಅಂತೆಯೇ ಎಲೆ ಅಡಿಕೆಯನ್ನು ದೃಷ್ಟಿ ತೆಗೆಯುವಾಗ ಥೂ, ಥೂ, ಥೂ ಎಂದು ಉಗುಳಿ ದೃಷ್ಟಿ ತೆಗೆಯುತ್ತಾಳೆ. ಹೀಗಾಗಿ ಜನಪದರು ತಾಯಿಯ ಕಣ್ಣೆಂಜಲು, ಉಗುಳೆಂಜಲು ಉಂಡು ಮಗು ಬೆಳೆಯುತ್ತದೆ ಎಂದಿದ್ದಾರೆ. ತಾಯಿ ಮಕ್ಕಳಲ್ಲಿ ಬೇಧವಿಲ್ಲ ಎಂಬುದನ್ನು ಇಲ್ಲಿ ತಿಳಿಸಿದ್ದಾರೆ. ತಾಯಿಯ ಕಣ್ಣಲ್ಲಿ ಮಗು ಜಗತ್ತನ್ನು ಕಾಣುತ್ತಿರುವುದು ತಾಯಿ ಶಬರಿಯಂತೆ ಮೊದಲು ರುಚಿ ನೋಡಿ ಒಳ್ಳೆಯದನ್ನು ತನ್ನ ಮಗುವಿಗೆ ನೀಡುವುದು ಬಾಯೆಂಜಲು ಎಂದಿರಬಹುದೇ?

ತಾಯಿಗಿಂತ ದೊಡ್ಡ ಬಂಧು ಇನ್ನೊಬ್ಬರಿಲ್ಲ, ಅದ್ದರಿಂದ ಅವಳ ಸ್ಥಾನವನ್ನು ಬೇರೆ ಯಾರಿಗೂ ತುಂಬಲು ಸಾಧ್ಯವಿಲ್ಲ. ಯಾರಿದ್ದರೂ ತಾಯಿ ಇದ್ದಂತೆ ಆಗುವುದಿಲ್ಲ. ಹೆಂಡತಿ ಸತ್ತರೆ ಇನ್ನೊಬ್ಬ ಹೆಂಡತಿ ತರಬಹುದು, ಇನ್ನೊಬ್ಬ ಹೆತ್ತ ಅಮ್ಮನನ್ನು ತರಲಾಗದು. ಅವಳ ಸ್ಥಾನವನ್ನು ಯಾರೂ ತುಂಬಲಾಗದು. ಒಲೆಯಲ್ಲಿ ಸಾವಿರ ಕೊಳ್ಳಿ ಉರಿಯುತ್ತಿದ್ದರೂ ಅವು ದೇವರಕೋಣೆಯಲ್ಲಿ ಬೆಳಗುವ ಹಣತೆಯ ಜ್ಯೋತಿಗೆ ಸಮನಲ್ಲ. ಎಂದು ಈ ತ್ರಿಪದಿಯಲ್ಲಿ ಹೇಳಲಾಗಿದೆ.

ಹೆಣ್ಣುಮಕ್ಕಳ ದುಃಖ ತಾಯಿ ಮಾತ್ರವೇ ಅರ್ಥಮಾಡಿಕೊಳ್ಳಬಲ್ಲಳು. ತಂದೆಗಾಗಲಿ, ಗಂಡನಿಗಾಗಲಿ ಹೆಣ್ಣುಮಕ್ಕಳ ದುಃಖದ ತೀವ್ರತೆಯ ಅರಿವಾಗುವುದಿಲ್ಲ. ಹುತ್ತದಲ್ಲಿರುವ ಸರ್ಪದ ನೋವನ್ನು ನೆತ್ತಿಮೇಲಿರುವ

ಶಿವ ತಿಳಿಯುವಂತೆ ಹೆಣ್ಣುಮಕ್ಕಳ ದುಃಖ ಹೆತ್ತ ತಾಯಿಗೇ ಅರ್ಥವಾಗುವುದು ಎಂದಿದ್ದಾರೆ.

ಹೆತ್ತ ತಾಯಿಯನ್ನು ನೆನಪಿಸಿಕೊಳ್ಳಲು ಕಾಲದ ಪರಿಮಿತಿ ಇರುವುದಿಲ್ಲ ಯಾವ ವೇಳೆಯಲ್ಲಾದರೂ ಯಾವ ಸ್ಥಳದಲ್ಲಾದರೂ ನೆನಪಿಸಿಕೊಳ್ಳಬಹುದು. ಆದರೂ ಇಲ್ಲಿ ಜಾನಪದ ಕವಯಿತ್ರಿಯ ಊರೆಲ್ಲ ಉಂಡು ಮಲಗಿದ ಮೇಲೆ, ಮುಂಜಾನೆ ಬೆಳ್ಳಿಚುಕ್ಕಿ ಮೂಡಿದ ಸಮಯದಲ್ಲಿ ತಮ್ಮ ತಾಯಿಯನ್ನು ನೆನೆಯುವುದಾಗಿ ಹೇಳುತ್ತಾಳೆ.

ಅಣ್ಣ ಅಥವಾ ಅಕ್ಕ ತನ್ನ ತಮ್ಮನಿಗೆ ಹೇಳಿದ ಬುದ್ಧಿಮಾತು ಇಲ್ಲಿದೆ, ಸಾಮಾನ್ಯವಾಗಿ ಚಿಕ್ಕವರಲ್ಲಿ ಮಯೋವೃದ್ಧರ ಬಗ್ಗೆ ಸಲ್ಲದ ತಾತ್ಸಾರ ಇರುತ್ತದೆ. ಮಾತು ಮಾತಿಗೂ ವಯಸ್ಸಾದ ತಂದೆ–ತಾಯಿಯರನ್ನು ದೂಷಿಸುತ್ತಲೇ ಇರುತ್ತಾರೆ. ಆದ್ದರಿಂದ ತಮ್ಮನಿಗೆ ಬುದ್ಧಿಹೇಳುತ್ತ ಬುದ್ಧಿ ಇಲ್ಲದವರಂತೆ ತಾಯಿಯನ್ನು ಬೈಯದಿರು, ಆಕೆ ಹಿರಿಯಳು ಚಿಕ್ಕವನಾದ ನೀನು ಬೈದರೆ ಅವಳು ಮನದೊಳಗೇ ದುಃಖಿಸುತ್ತಾ ಕೊರಗಬಹುದು.

ತಾಯಿ ಇದ್ದರೆ ತವರಲ್ಲಿ ಪ್ರೀತಿ ವಿಶ್ವಾಸ, ಆದರ, ಗೌರವ ಇತ್ಯಾದಿ ಸಹಜ. ತಾಯಿ ಯಿಲ್ಲದ ತವರನ್ನು ನೆನೆವ ಮನಕ್ಕೆ ಬುದ್ಧಿವಾದ ಹೇಳುತ್ತಿರುವ ಹೆಣ್ಣೊಬ್ಬಳು ತಾಯಿಯಿಲ್ಲದ ತವರಿಗೆ ಹೋಗಬೇಡ ! ನೀರಿಲ್ಲದ ಕೆರೆಗೆ ನೀರನ್ನು ಅರಸುತ್ತಾ ಬಂದ ಬಾಯಾರಿದ ಕರು ಬೇಸರದಿಂದ ಹಿಂದಿರುಗಿ ಹೋಗುವಂತೆ ನಿನಗೆ ಕೂಡ ನಿರಾಸೆ, ದುಃಖ ಉಂಟಾಗುತ್ತದೆ ಎಂದಿದ್ದಾಳೆ.

ತಂದೆ–ತಾಯಿಗಳು ಮಾರುಕಟ್ಟೆಯಲ್ಲಿ ಸಿಗುವಂತಹ ವಸ್ತುಗಳಲ್ಲ ನಾವು ತೊಟ್ಟು ಕೊಳ್ಳುವ ಉಂಗುರ ಮುರಿದುಹೋದರೆ, ಸೊಂಟದ ಉಡುದಾರ ಕಿತ್ತುಹೋದರೆ ಸರಿಮಾಡಿಕೊಂಡು ಮತ್ತೆ ಧರಿಸಬಹುದು. ಆದರೆ ತಂದೆ–ತಾಯಿಗಳನ್ನು ಕಳೆದುಕೊಂಡರೆ ತಿರುಗಿ ಪಡೆದುಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಅವರಿರುವಾಗ ಪ್ರೀತಿಯಿಂದ ಅವರ ಆರೈಕೆ ಮಾಡಬೇಕು ಎಂಬ ಬುದ್ಧಿವಾದ ಇಲ್ಲಿದೆ.

ಅತ್ಯಂತ ಜನಪ್ರಿಯವಾದ ಈ ತ್ರಿಪದಿಯು ಒಳ್ಳೆಯದನ್ನು ಬಯಸುವ ಹೆಣ್ಣುಮಗಳೊಬ್ಬಳ ಹೃದಯ ವೈಶಾಲ್ಯತೆಯನ್ನು ಇಲ್ಲಿ ತೋರಿಸುತ್ತಿದೆ. ತಾನು ಹಾಲು ಕುಡಿದು ಬೆಳೆದಂತ ತವರಿಗೆ ಏನೆಂದು ಹರಸಲಿ ಎಂದು ತನ್ನನ್ನೇ ತಾನು ಪ್ರಶ್ನಿಸಿಕೊಳ್ಳುವ ಬಾಲೆ ಹೊಳೆಯ ದಂಡೆಯ ಮೇಲೆ ಇರುವಂತಹ ಗರಿಕೆಯ ಹುಲ್ಲಿನಂತೆ ನನ್ನ ತವರಿನ ವಂಶವೂ ಬೆಳೆಯಲಿ ಎಂದು ಮನದುಂಬಿ ಹಾರೈಸಿದ್ದಾಳೆ.

**ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಉತ್ತಮರ ಗೆಳೆತನ ಹೇಗೆ ಇರಬೇಕು?

ಉತ್ತಮರ ಗೆಳೆತನ ಬಂಗಾರದ ಪುತ್ಥಳಿಯಂತೆ ಇರಬೇಕು.

2. ಮಂದಿ ಮಕ್ಕಳೊಂದಿಗೆ ಹೇಗಿರಬೇಕು?

ಮಂದಿ ಮಕ್ಕಳೊಂದಿಗೆ ಛಂದದಿಂದ ಹೊಂದಿಕೊಂಡಿರಬೇಕು.

3. ಎಂತಹ ನೆರೆಯವರು ಇರಬೇಕು?

ಬುದ್ದಿವಂತರಾದ ನೆರೆಯವರು ಇರಬೇಕು.

4. ಸುಟ್ಟು ಸುಣ್ಣವಾದುದು ಯಾವುದು?

ಕಷ್ಟವನ್ನು ಅನುಭವಿಸಿದ ದೇಹವು ಸುಟ್ಟು ಸುಣ್ಣವಾಗಿದೆ.

5. ಬ್ಯಾಸಗಿ ದಿವಸಕ್ಕೆ ಯಾವ ಮರ ತಂಪು?

ಬ್ಯಾಸಗಿ ದಿವಸಕ್ಕೆ ಬೇವಿನ ಮರ ತಂಪು.

6. ತಾಯಿಯನ್ನು ಯಾವುದಕ್ಕೆ ಹೋಲಿಸಲಾಗಿದೆ?

ತಾಯಿಯನ್ನು ಜ್ಯೋತಿಗೆ ಹೋಲಿಸಲಾಗಿದೆ.

7. ಹೆಣ್ಣು ಮಕ್ಕಳ ದುಃಖವನ್ನು ಬಲ್ಲವರು ಯಾರು?

ಹೆಣ್ಣು ಮಕ್ಕಳ ದುಃಖವನ್ನು ಬಲ್ಲವರು ಹೆತ್ತ ತಾಯಿ.

8. ತಾಯಿಯನ್ನು ಯಾವಾಗ ನೆನೆಯಬೇಕು?

ಊರೆಲ್ಲ ಉಂಡು ಮಲಗುವಾಗ ಬೆಳ್ಳಿಚಿಕ್ಕಿ ಮೂಡುವಾಗ ತಾಯಿಯನ್ನು ನೆನೆಯಬೇಕು.

9. ಗರತಿಯು ಹಾಲುಂಡ ತವರಿಗೆ ಏನೆಂದು ಹರಸುತ್ತಾಳೆ?

ತವರಿನ ರಸಬಳ್ಳಿ ಹೊಳೆದಂಡೆಯ ಕರಕಿಯ ಕುಡಿಯ ಹಾಗೆ ಹಬ್ಬಲಿ ಎಂದು ಗರತಿ0ಯು ಹಾಲುಂಡ ತವರನ್ನು ಹರಸುತ್ತಾಳೆ.

**ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1. ಬಡತನ ಹೇಗೆ ಬಯಲಾಯಿತು?

ಬಡತನ ಬಂದಾಗ ಮಕ್ಕಳನ್ನು ಹೊಡೆಯಬಾರದು. ಮಕ್ಕಳಲ್ಲಿ ಬಡತನವನ್ನು ಮರೆಸುವ ಶಕ್ತಿ ಇದೆ. ಬಡತನವನ್ನು ಮರೆಸುತ್ತಾರೆ. ಮಕ್ಕಳು ಆಡುತ್ತಾ ಬಂದು ತೊಡೆಯ ಮೇಲೆ ಕುಳಿತುಕೊಂಡರೆ ಬಡತನವೆಲ್ಲ ಬಯಲಾಗುತ್ತದೆ.

2. ಇದ್ದಷ್ಟು ಬುದ್ದಿಯನ್ನು ಹೇಗೆ ಕಳೆದುಕೊಳ್ಳುತ್ತಾರೆ?

ನೆರೆಮನೆಯವರು ಬುದ್ಧಿವಂತರಾಗಿರಬೇಕು. ಒಳ್ಳೆಯವರಾಗಿರಬೇಕು.ಇದ್ದರೆ ಈ ರೀತಿಯ ಮನೆಯವರು ಇರಬೇಕು.ಗಿಲಅಜ್ಞಾನಿಗಳು ಕುಲಗೇಡಿಗಳು ನೆರೆಮನೆಯವರಿದ್ದರೆ ಅವರ ಸಹವಾಸದಿಂದ ನಮ್ಮಲ್ಲಿರುವ ಒಳ್ಳೆಯ ಗುಣಗಳನ್ನು ಕಳೆದುಕೊಳ್ಳಬೇಕಾಗುತ್ತದೆ. ಬುದ್ಧಿಹೀನರಾಗಿ ಬದುಕಬೇಕಾಗುತ್ತದೆ. ಹೀಗೆ ಇದ್ದಷ್ಟು ಬುದ್ದಿಯನ್ನು ಕಳೆದುಕೊಳ್ಳುತ್ತಾರೆ.

3. ಹಿತ್ತಾಳೆಗಿಂತ ಬಲುಹೀನ ಯಾವುದು?

ಉತ್ತಮರ ಗೆಳೆತನ ಪುತ್ಥಳಿ ಬಂಗಾರದಂತೆ. ಒಳ್ಳೆಯವರ ಗೆಳೆತನ ಅಮೂಲ್ಯವಾದುದು. ಹೀನರ ಗೆಳೆತನ ಮಾಡಿದರೆ ಹಿತ್ತಾಳೆಗಿಂತಲೂ ಬಲುಹೀನವಾಗಿರುತ್ತದೆ. ಕೆಟ್ಟವರ ಗೆಳೆತನಕ್ಕೆ ಯಾವ ಬೆಲೆಯೂ ಇರುವುದಿಲ್ಲ. ಆದ್ದರಿಂದ ಒಳ್ಳೆಯವರ ಸಹವಾಸ ಮಾಡಿ ಬಂಗಾರದಂತೆ ಇರಬೇಕು.

4. ಹಡೆದವ್ವನನ್ನು ಯಾವಾಗ ನೆನೆಯಬೇಕು?

ಹಡೆದವ್ವನನ್ನು ಯಾವ ವೇಳೆಯಲ್ಲಾದರೂ, ಯಾವ ಹೊತ್ತಿನಲ್ಲಾದರೂ ನೆನೆಯಬಹುದು. ಎಷ್ಟು ಹೊತ್ತಿನಲ್ಲಾದರೂ ನೆನೆಯಬಹುದು. ಊರೆಲ್ಲ ಉಂಡು ಮಲಗಿದಾಗ ರಾತ್ರಿಯಲ್ಲಿ ಬೆಳ್ಳಿಚಿಕ್ಕಿ ಮೂಡಿದಾಗ ತಾಯಿಯನ್ನು ನೆನೆಯಬೇಕು.

5. ಹಡೆದ ತಂದೆ–ತಾಯಿಯರ ಮಹತ್ವ ತಿಳಿಸಿರಿ.

ಉಂಗುರ ಕಳೆದು ಹೋದರೆ ಮಾಡಿಸಬಹುದು. ಸೊಂಟಕ್ಕೆ ಹಾಕುವ ದಾರ ಮುರಿದರೆ ಮಾಡಿಸಬಹುದು.ಹೆಂಡತಿ ಸತ್ತು ಹೋದರೆ ಮತ್ತೊಂದು ಹೆಂಡತಿಯನ್ನು ತರಲು ಸಾಧ್ಯವಿದೆ. ಆದರೆ ನಮ್ಮನ್ನು ಹಡೆದಂಥ, ಸಾಕಿ ಸಲಹಿದಂಥ ತಂದೆ ತಾಯಿ ಎಲ್ಲಿಯೂ ಸಿಗಲು ಸಾಧ್ಯವಿಲ್ಲ. ಇದೇ ಹಡೆದ ತಂದೆ–ತಾಯಿಯರ ಮಹತ್ವ.

ಸಂದರ್ಭ ಸಹಿತ ವಿವರಿಸಿ.

1. ಬಂಗಾರ ನಿನಗೆ ಸ್ಥಿರವಲ್ಲ.

ಆಯ್ಕೆ : ಈ ಸಾಲನ್ನು ಹಬ್ಬಲಿ ಅವರ ರಸಬಳ್ಳಿ ಎಂಬ ಜನಪದ ಗೀತೆಯಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಶ್ರೀಮಂತಿಕೆ ಅಂದರೆ ಬಂಗಾರ ಶಾಶ್ವತವಾದ ವಸ್ತುವಲ್ಲ ಎನ್ನುವ ಸಂದರ್ಭವಿದು.

ವಿವರಣೆ: ಪ್ರಸ್ತುತ ಪದ್ಯದಲ್ಲಿ ಜನಪದರು ಶ್ರೀಮಂತಿಕೆಯು ಶಾಶ್ವತವಲ್ಲ ಎಂದಿದ್ದಾರೆ. ಬಂಗಾರದ ಬಳೆಯುಟ್ಟು ಬಡವರನ್ನು ಬೈಯಬಾರದು. ಬಂಗಾರ ಸ್ಥಿರವಲ್ಲ.ಮಧ್ಯಾಹ್ನದ ಬಿಸಿಲು ಹೊರಳಲು ತಡವಾಗುವುದಿಲ್ಲ. ಹಾಗೆಯೇ ಶ್ರೀಮಂತಿಕೆಯೂ ಕೂಡ ಹೊರಟುಹೋಗಬಹದು. ಶ್ರೀಮಂತಿಕೆಯ ಅಹಂ ಇರಬಾರದು ಎನ್ನುವಾಗ ಈ ಸಾಲು ಬಂದಿದೆ.

2. ಹಿತ್ತಾಳೆಗಿಂತ ಬಲುಹೀನ

ಆಯ್ಕೆ : ಈ ಸಾಲನ್ನು ಹಬ್ಬಲಿ ಅವರ ರಸಬಳ್ಳಿ ಎಂಬ ಜನಪದ ಗೀತೆಯಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಹೀನರ ಗೆಳೆತನ ಮಾಡಿದಾಗ ಉಂಟಾಗುವ ಸ್ಥಿತಿಯನ್ನು ಕುರಿತಾಗಿ ಹೇಳುವಾಗ ಈ ಸಾಲು ಬಂದಿದೆ.

ವಿವರಣೆ: ನಾವು ಉತ್ತಮರ ಸ್ನೇಹವನ್ನು ಮಾಡಬೇಕು. ಉತ್ತಮರ ಸ್ನೇಹದಿಂದ ನಮ್ಮ ವ್ಯಕ್ತಿತ್ವ ಪುಟಕ್ಕಿಟ್ಟ ಚಿನ್ನದಂತಾಗುತ್ತದೆ. ಉತ್ತಮರ

ಗೆಳೆತನ ಪುತ್ಥಳಿ ಬಂಗಾರದಂತೆ. ಕೆಟ್ಟವರ ಗೆಳೆತನಕ್ಕೆ ಯಾವ ಬೆಲೆಯೂ ಇರುವುದಿಲ್ಲ. ಬಂಗಾರ ಉತ್ತಮ. ಬಂಗಾರಕ್ಕೆ ಹೋಲಿಸಿದರೆ ಹಿತ್ತಾಳೆ ಹೀನ ಎಂಬ ಭಾವನೆ ಇದೆ. ಒಂದು ವೇಳೆ ನಾವು ಹೀನರ ಗೆಳೆತನ ಮಾಡಿದರೆ ಹಿತ್ತಾಳೆಗಿಂತಲೂ ಬಲುಹೀನವಾಗಿರುತ್ತದೆ. ಎನ್ನುವ ಸಂದರ್ಭವಿದು.

3. ನೀ ತಂಪ ನನ್ನ ತವರೀಗೆ

ಆಯ್ಕೆ : ಈ ಸಾಲನ್ನು ಹಬ್ಬಲಿ ಅವರ ರಸಬಳ್ಳಿ ಎಂಬ ಜನಪದ ಗೀತೆಯಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಹೆತ್ತ ತಾಯಿ ತವರಿನಲ್ಲಿದ್ದಾಗ ಗರತಿಗೆ ಹಿತವಾದ ತಂಪಿನ ಅನುಭವವಾಗುತ್ತದೆ ಎನ್ನುವಾಗ ಈ ಸಾಲು ಬಂದಿದೆ.

ವಿವರಣೆ : ಗರತಿಗೆ ತವರು ಮನೆಯೇ ಅತ್ಯಂತ ತಂಪಾಗಿರುತ್ತದೆ.ಬೇಸಿಗೆಯಲ್ಲಿ ಬಳಲಿ ಬಂದವರಿಗೆ ಬೇವಿನ ಮರವು ತಂಪನ್ನು ನೀಡುತ್ತದೆ.ಭೀಮಾನದಿಯು ತಂಪನ್ನು ನೀಡುತ್ತದೆ. ಇಲ್ಲಿ ಗರತಿಗೆ ತಾಯಿಯೇ ತಂಪಾಗಿದ್ದಾಳೆ. ತವರಿನಲ್ಲಿ ತಾಯಿಯಿದ್ದರೆ ತವರುಮನೆ ತಂಪಾಗಿರುವುದು ಎಂಬುದು ಇಲ್ಲಿನ ಆಶಯವಾಗಿದೆ.

4. ಜ್ಯೋತಿ ನಿನ್ನ್ಯಾರ ಹೋಲಾರ

ಆಯ್ಕೆ : ಈ ಸಾಲನ್ನು ಹಬ್ಬಲಿ ಅವರ ರಸಬಳ್ಳಿ ಎಂಬ ಜನಪದ ಗೀತೆಯಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ತನ್ನ ತಾಯಿಗೆ ಸರಿಸಮವಾಗಿ ಯಾರನ್ನು ಹೋಲಿಸಲು ಆಗುವುದಿಲ್ಲ ಆಕೆಯೇ ಶ್ರೇಷ್ಠ ಎನ್ನುವ ಸಂದರ್ಭವಿದು.

ವಿವರಣೆ : ತನ್ನ ಬದುಕಿನಲ್ಲಿ ಎಷ್ಟು ಜನ ಬಂದು ಹೋದರೂ ಸಹ ಹೆತ್ತ ತಾಯಿಗೆ ಸರಿಸಮಾನರಾದವರು ಯಾರು ಸಿಗಲಾರರು.ಸಾವಿರ ಕೊಳ್ಳಿ ಒಲೆಯಲ್ಲಿ ಉರಿಯುತ್ತಿದ್ದರೂ ಜ್ಯೋತಿಯಷ್ಟು ಪ್ರಕಾಶಮಾನವಾದ ಬೆಳಕನ್ನು ನೀಡುವುದಿಲ್ಲ.ಸಾವಿರಾರು ಮಂದಿ ಇದ್ದರೂ ಅವರೊಳಗೆ ಹೆತ್ತತಾಯಿಯೇ ಜ್ಯೋತಿಯಂತೆ. ಅವಳನ್ನು ಯಾರಿಗೂ ಹೋಲಿಸಲು ಆಗುವುದಿಲ್ಲ ಎಂದು ತಾಯಿಯ ಮಹತ್ವವನ್ನು ಹೇಳಲಾಗಿದೆ.

5. ಭಾಳ ಮರುಗ್ಯಾಳ ಮನದಾಗ

ಆಯ್ಕೆ : ಈ ಸಾಲನ್ನು ಹಬ್ಬಲಿ ಅವರ ರಸಬಳ್ಳಿ ಎಂಬ ಜನಪದ ಗೀತೆಯಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಮಕ್ಕಳು ತಾಯಿಯನ್ನು ಬೈದರೆ ತಾಯಿಯ ಅಂತಃಕರಣ ನೊಂದುಕೊಳ್ಳುತ್ತದೆ ಎಂದು ಹೆಣ್ಣೊಬ್ಬಳು ತನ್ನ ತಮ್ಮನಿಗೆ ಬುದ್ಧಿ ಹೇಳುವ ಸಂದರ್ಭವಿದು.

ವಿವರಣೆ: ತಾಯಿಯನ್ನು ನಿಂದಿಸುವ ತನ್ನ ತಮ್ಮನಿಗೆ ಹೆಣ್ಣೊಬ್ಬಳು ಬುದ್ಧಿ ಹೇಳುತ್ತಾಳೆ. ತಿಳಿಗೇಡಿ ನನ್ನ ತಮ್ಮ ಹೆತ್ತ ತಾಯಿಯನ್ನು ನಿಂದಿಸಬೇಡ.ಅವಳು ಬಹಳ ದಿನದವಳು.ಹಿರಿಯವಳು. ಹಡೆದವ್ವನನ್ನು ಬೈದರೆ ಮನಸ್ಸಿನಲ್ಲಿ ಬಹಳ ನೊಂದುಕೊಳ್ಳುತ್ತಾಳೆ. ಮನದೊಳಗೆ ನೋವು ಪಡುತ್ತಾಳೆ.ಹಾಗಾಗಿ ನೀನು ಅವಳನ್ನು ಬೈಬೇಡ ಎಂದು ಹೇಳುವ ಸಂದರ್ಭದಲ್ಲಿ ಈ ಸಾಲು ಬರುತ್ತದೆ.

6. ತಾಯಿ ಇಲ್ಲದ ತವರೀಗೆ ಹೋಗದಿರು ನನಮನವೆ

ಆಯ್ಕೆ : ಈ ಸಾಲನ್ನು ಹಬ್ಬಲಿ ಅವರ ರಸಬಳ್ಳಿ ಎಂಬ ಜನಪದ ಗೀತೆಯಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ತಾಯಿ ಇಲ್ಲದ ತವರಿಗೆ ಹೋಗಬಾರದು ಎಂದು ಹೆಣ್ಣೊಬ್ಬಳು ತನ್ನ ಮನಸ್ಸಿಗೆ ಹೇಳುವ ಸಂದರ್ಭವಿದು.

ವಿವರಣೆ : ತಾಯಿ ತವರು ಎರಡೂ ಹೆಣ್ಣು ಮಕ್ಕಳಿಗೆ ಇಷ್ಟ. ತಾಯಿ ಇದ್ದಾಗ ತವರಿಗೆ ಒಂದು ಅರ್ಥ. ತಾಯಿ ಇಲ್ಲದ ತವರಿಗೆ ಹೆಣ್ಣು ಹೋಗಬಾರದು. ಹೋದರೆ ಅಲ್ಲಿ ಅವಳಿಗೆ ಸರಿಯಾದ ಸ್ಥಾನಮಾನ ಸಿಗುವುದಿಲ್ಲ. ಹೇಗೆ ನೀರು ಇಲ್ಲದ ಕೆರೆಗೆ ಕರು ನೀರು ಕುಡಿಯಲು ಬಂದು ದುಃಖಪಡುತ್ತದೆಯೋ ಹಾಗೆ ಆಗುತ್ತದೆ. ಗರತಿಗೆ ತಾಯಿ ಇಲ್ಲದ ತವರು ಮನೆಯು ದುಃಖವನ್ನು ಉಂಟು ಮಾಡುತ್ತದೆ. ಹಾಗಾಗಿ ಹೆಣ್ಣೊಬ್ಬಳು ತನ್ನ ಮನಸ್ಸಿಗೆ ಹೀಗೆ ಹೇಳುತ್ತಾಳೆ.

7. ಹಬ್ಬಲಿ ಅವರ ರಸಬಳ್ಳಿ

ಆಯ್ಕೆ : ಈ ಸಾಲನ್ನು ಹಬ್ಬಲಿ ಅವರ ರಸಬಳ್ಳಿ ಎಂಬ ಜನಪದ ಗೀತೆಯಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಹೆಣ್ಣು ತನ್ನ ತವರಿಗೆ ಶುಭವನ್ನು ಹಾರೈಸುವ ಸಂದರ್ಭವಿದು.

ವಿವರಣೆ : ಇದು ಪದ್ಯದ ಶೀರ್ಷಿಕೆಯೂ ಕೂಡ ಹೌದು. ಹಾಲು ಕುಡಿದು ಬೆಳೆದ ತವರಿಗೆ ಏನೆಂದು ಹಾಡಲಿ ಎಂದು ಹೆಣ್ಣುಮಗಳು ತನ್ನನ್ನು ಪ್ರಶ್ನಿಸಿಕೊಳ್ಳುತ್ತಾಳೆ. ತನ್ನ ತವರಿನ ಮನೆಯ ವಂಶ ಇನ್ನಷ್ಟು ಬೆಳೆಯಬೇಕು. ಅದು ಹೇಗೆ ಹಬ್ಬಬೇಕು ಎಂದರೆ ಹೊಳೆಯ ದಂಡೆಯಲ್ಲಿರುವ ಕರಕೀಯ ಕುಡಿಯ ಹಾಗೆ ಹಬ್ಬಬೇಕು. ತನ್ನ ತವರಿನ ರಸಬಳ್ಳಿ ಎಲ್ಲಾ ಕಡೆ ಹಬ್ಬಬೇಕು ಎಂದು ಮನದುಂಬಿ ಹಾರೈಸುವ ಸಂದರ್ಭದಲ್ಲಿ ಈ ಸಾಲು ಬರುತ್ತದೆ. **ಐದಾರು ವಾಕ್ಯಗಳಲ್ಲಿ ಉತ್ತರಿಸಿ.**

1.'ಬಂಗಾರ ನಿನಗೆ ಸ್ಥಿರವಲ್ಲ' ಎಂಬ ಮಾತಿನ ಸ್ವಾರಸ್ಯವನ್ನು ವಿವರಿಸಿರಿ.

ಬಡತನ ಸಿರಿತನ ಯಾವುದೂ ಶಾಶ್ವತವಲ್ಲ ಎಂದು ಜನಪದರು ತಿಳಿಸಿದ್ದಾರೆ. ಮನುಷ್ಯ ಬಂಗಾರವನ್ನು ಮೈ ಮೇಲೆ ಹೇರಿಕೊಂಡು ಬಡವರನ್ನು, ಅವರ ಅಸಹಾಯಕತೆಯನ್ನು ಅಣಕಿಸಿ ಬೀಗುತ್ತಾನೆ. ಆದ್ದರಿಂದಲೆ ಜನಪದರು 'ಬಂಗಾರ ನಿನಗೆ ಸ್ಥಿರವಲ್ಲ' ಎಂದಿದ್ದಾರೆ. ಸಿರಿತನ ಬಂಗಾರ ಇವೆಲ್ಲವೂ ದೊರೆತಷ್ಟೇ ವೇಗವಾಗಿ ನಮ್ಮಿಂದ ದೂರವಾಗುತ್ತದೆ. ಬಡತನ ಬರಲೂಬಹುದು. ಬಂಗಾರದ ಬಳೆಯುಟ್ಟು ಬಡವರನ್ನು ಬೈಯಬಾರದು. ಶ್ರೀಮಂತಿಕೆಯ ಮದ ಇರಬಾರದು. ಶ್ರೀಮಂತಿಕೆಯು ಶಾಶ್ವತವಲ್ಲ ಎಂದಿದ್ದಾರೆ. ಮಧ್ಯಾಹ್ನದ ಬಿಸಿಲು ಹೊರಳಲು ತಡವಾಗುವುದಿಲ್ಲ. ಮಧ್ಯಾಹ್ನದ ಬಿಸಿಲು ಹೊರಳಿದ ಹಾಗೆಯೇ ಶ್ರೀಮಂತಿಕೆಯೂ ಕೂಡ ಹೊರಟು ಹೋಗಬಹುದು. ಶ್ರೀಮಂತಿಕೆಯ ಅಹಂ ಇರಬಾರದು ಎಂದಿದ್ದಾರೆ. ಸಿರಿತನ ಬಂದಾಗ ಬೀಗದೆ ಜಂಭದಿಂದ ವರ್ತಿಸದೆ, ಎಲ್ಲರೊಂದಿಗೆ ಪ್ರೀತಿ– ಸಾಮರಸ್ಯದಿಂದ ಬಾಳುವುದು ಮುಖ್ಯ

ಎಂಬುದನ್ನು 'ಬಂಗಾರ ನಿನಗೆ ಸ್ಥಿರವಲ್ಲ' ಎಂಬ ಮಾತಿನ ಮೂಲಕ ಹೇಳಿದ್ದಾರೆ.

3. ಜನಪದರು ಹೇಳುವಂತೆ ನಮ್ಮ ನೆರೆಹೊರೆ ಹೇಗಿರಬೇಕು? ವಿವರಿಸಿರಿ.

ಜನಪದ ಗೀತ ಪ್ರಕಾರ ತುಂಬಾ ಜನಪ್ರಿಯವಾದುದು. ತ್ರಿಪದಿಯಲ್ಲಿ ನೆರೆಹೊರೆಯ ಸಂಬಂಧದ ಕುರಿತಾಗಿ ಹೇಳಲಾಗಿದೆ. ಮಾನವ ಸಮಾಜ ಜೀವಿ. ಸಮಾಜ ಜೀವಿಯಾದ ಮಾನವ ನೆರೆಹೊರೆಯವರೊಂದಿಗೆ ಸೇರಿ ಬದುಕಬೇಕಾಗುತ್ತದೆ. ನೆರೆಹೊರೆಯವರಿಂದ ಸಹಾಯ ತೆಗೆದುಕೊಂಡು ಒಬ್ಬರನ್ನೊಬ್ಬರು ಪ್ರೀತಿ ವಿಶ್ವಾಸದಿಂದ ಅನ್ಯೋನ್ಯತೆಯಿಂದ ಬದುಕಿದರೆ ಬಾಳು ಹಿತಕರವಾಗಿರುತ್ತದೆ. ನೆರೆಮನೆಯವರು ಬುದ್ಧಿವಂತರಾಗಿರಬೇಕು. ಒಳ್ಳೆಯವರಾಗಿರಬೇಕು. ಇದ್ದರೆ ಈ ರೀತಿಯ ಮನೆಯವರು ಇರಬೇಕು. ಅಜ್ಞಾನಿಗಳು ಕುಲಗೇಡಿಗಳು ನೆರೆಮನೆಯವರಿದ್ದರೆ ಅವರ ಸಹವಾಸದಿಂದ ನಮ್ಮಲ್ಲಿರುವ ಒಳ್ಳೆಯ ಗುಣಗಳನ್ನು ಕಳೆದುಕೊಳ್ಳಬೇಕಾಗುತ್ತದೆ. ಬುದ್ಧಿಹೀನರಾಗಿ ಬದುಕಬೇಕಾಗುತ್ತದೆ. ಆದ್ದರಿಂದ ನಾವು ವಾಸಿಸುವ ಪರಿಸರದಲ್ಲಿ ಬುದ್ಧಿವಂತರ ನೆರೆಯಿರುವುದು ಮುಖ್ಯವೆಂದು ಜನಪದರು ಹೇಳಿದ್ದಾರೆ.

4. ಹೆಣ್ಣುಮಕ್ಕಳ ದುಃಖವನ್ನು ಬಲ್ಲವರು ಯಾರು? ಹೇಗೆ?

ಜನಪದ ಸಾಹಿತ್ಯದಲ್ಲಿ ತ್ರಿಪದಿಯು ಪದ್ಯ ಪ್ರಕಾರಕ್ಕೆ ಸಂಬಂದಿಸಿದುದಾಗಿದೆ. ಜನಪದ ಗೀತ ಪ್ರಕಾರ ತುಂಬಾ ಜನಪ್ರಿಯವಾದುದು. ತ್ರಿಪದಿಗಳಲ್ಲಿ ತವರು ಮನೆಯ ತಣ್ಣನೆಯ ನೆನಪಿದೆ. ಇದರೊಳಗೆ ತಾಯಿಯ ರೂಪ–ಸ್ವರೂಪ, ತೋರಿದ ಪ್ರೀತಿಯಿದೆ. ಹೆಣ್ಣುಮಕ್ಕಳ ದುಃಖ ಅರ್ಥವಾಗುವುದು ಹೆತ್ತ ತಾಯಿಗೆ. ಏಕೆಂದರೆ ಆಕೆಯೂ ಒಬ್ಬ ಹೆಣ್ಣು. ತನ್ನ ಮಗಳು ಅನುಭವಿಸುವ ಕಷ್ಟ ನೋವುಗಳನ್ನು ಸ್ವಾನುಭವದಿಂದ ಅರಿಯಬಲ್ಲಳು. ಮತ್ತು ಸಹಾನುಭೂತಿಯಿಂದ ಕಾಣುವ ಕಣ್ಣು ಅವಳದಾಗಿದೆ. ಹೆಣ್ಣಿನ ಬಗ್ಗೆ ಮನೆಯ ಬೇರೆ ಯಾರಿಗೂ ಅರ್ಥವಾಗದೇ ಇರುವುದು ತಾಯಿಗೆ ಅರ್ಥವಾಗುತ್ತದೆ. ಹಡೆದ ತಾಯಿ

ಮಾತ್ರ ಮಗಳ ನೋವನ್ನು ತಿಳಿದುಕೊಳ್ಳಬಲ್ಲಳು. ಹುತ್ತದ ಮೇಲಿರುವ ಸರ್ಪದ ಬೇಗೆ ಅರ್ಥವಾಗುವುದು ಅದನ್ನು ಹೊತ್ತಿರುವ ಶಿವನಿಗೆ ಮಾತ್ರ. ಅದರಂತೆಯೇ ಹೆಣ್ಣನ್ನು ಹೆತ್ತ ತಾಯಿಗೆ ಮಾತ್ರ ಹೆಣ್ಣುಮಕ್ಕಳ ದುಃಖದ ಅರಿವಾಗುತ್ತದೆ. ಹೆಣ್ಣುಮಕ್ಕಳ ದುಃಖವನ್ನು, ಅಂತರಂಗವನ್ನು ಗ್ರಹಿಸುವ ಶಕ್ತಿ ತಾಯಿಗೆ ಮಾತ್ರ ಇರುತ್ತದೆ.

5. ಗರತಿ ತವರಿಗೆ ಏನೆಂದು ಹರಸುತ್ತಾಳೆ?

ಜನಪದಗೀತ ಪ್ರಕಾರ ತುಂಬಾ ಜನಪ್ರಿಯವಾದುದು. ತ್ರಿಪದಿಗಳಲ್ಲಿ ತವರು ಮನೆಯ ತಣ್ಣನೆಯ ನೆನಪಿದೆ. ಇದರೊಳಗೆ ತಾಯಿಯ ರೂಪ–ಸ್ವರೂಪ, ತೋರಿದ ಪ್ರೀತಿಯಿದೆ. ಜನಪದ ಲೋಕದ ಸುತ್ತೆಲ್ಲ ಇಂತಹ ಸಂಸ್ಕೃತಿ ಬಿತ್ತರಿಸುವ ಹಾಡು–ಪಾಡಿನೊಂದಿಗೆ ತಾಯಿ ಮತ್ತು ತವರಿನ ಬಗೆಗಿನ ಪ್ರೀತಿ ಇಲ್ಲಿ ಅಭಿವ್ಯಕ್ತಗೊಂಡಿದೆ. ಗರತಿಗೆ ತವರು ಮನೆಯೆಂದರೆ ಅತ್ಯಂತ ಪ್ರೀತಿ. ಆಕೆ ಗಂಡನ ಮನೆಯಲ್ಲಿದ್ದರೂ ಯಾವಾಗಲೂ ತವರು ಮನೆಯನ್ನು ಹರಸುತ್ತಾಳೆ. ಒಳ್ಳೆಯದನ್ನು ಬಯಸುತ್ತಾಳೆ. ಹಾಲುಂಡ ತವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಾಳೆ. ಹಾಲು ಉಂಡು ಬೆಳೆದು ದೊಡ್ಡವಳಾದ ಗರತಿಯು ಹಾಲುಂಡ ತವರನ್ನು ಎಷ್ಟು ಹೊಗಳಿದರೂ ಸಾಲದು. ಹಾಲು ಕುಡಿದು ಬೆಳೆದ ತವರಿಗೆ ಏನೆಂದು ಹಾಡಲಿ ಎಂದು ಹೆಣ್ಣುಮಗಳು ತನ್ನನ್ನು ಪ್ರಶ್ನಿಸಿಕೊಳ್ಳುತ್ತಾಳೆ. ತನ್ನ ತವರಿನ ಮನೆಯ ವಂಶ ಇನ್ನಷ್ಟು ಬೆಳೆಯಬೇಕು. ಅದು ಹೇಗೆ ಹಬ್ಬಬೇಕು ಎಂದರೆ ಹೊಳೆಯ ದಂಡೆಯಲ್ಲಿರುವ ಕರಕೀಯ ಕುಡಿಯ ಹಾಗೆ ಹಬ್ಬಬೇಕು. ತನ್ನ ತವರಿನ ರಸಬಳ್ಳಿ ಎಲ್ಲಾ ಕಡೆ ಹಬ್ಬಬೇಕು ಎಂದು ಮನದುಂಬಿ ಗರತಿ ಹಾರೈಸುತ್ತಾಳೆ.

===0===

# ಬೆಳಗು ಜಾವ

**ದ.ರಾ. ಬೇಂದ್ರೆ**

**ಸಾರಾಂಶ:**

ಕವಿಯು ಆರಂಭದ ಸಾಲುಗಳಲ್ಲಿಯೇ ಬೆಳಕಿನ ಆಗಮನವನ್ನು ಸೊಗಸಾಗಿ ವಿವರಿಸುತ್ತಾ ಯುವ ಮನಸ್ಸುಗಳನ್ನು ಎಬ್ಬಿಸುವ ಪ್ರಯತ್ನ ಮಾಡುತ್ತಿದ್ದಾರೆ. ಪೂರ್ವ ದಿಕ್ಕು ಕಣ್ಣು ತೆರೆದಿದೆ, ಕತ್ತಲು ದೂರವಾಗುತ್ತಿದೆ. ಬೆಳಕು ಬೇಟೆಗಾರ ಬಂದು ಜೇನ್ಗೊಣದ ಹೆದೆಗೆ ಹೂಬಾಣವನ್ನು ಬಿಟ್ಟಿರುವನು, ಏಳಿ–ಎದ್ದೇಳಿ ಎಂದು ಕರೆ ಕೊಡುತ್ತಿದ್ದಾರೆ. ಮುಂಜಾವಿನ

ಈ ಸೊಬಗಿಗೆ ಈ ಜಗವು ಸೋತಿದೆ. ಮಕ್ಕಳೇ ಬೇಗ ಎದ್ದು ಪೂರ್ಣವಾದ ಬಾಳನ್ನು ಸಾರ್ಥಕ ಮಾಡಿಕೊಳ್ಳಿ, ನಿದ್ದೆಯಿಂದ ಎಚ್ಚರಗೊಳ್ಳಿ ಎಂದಿದ್ದಾರೆ.

ಜೀವನದ ಅಂಗಡಿಯ ಕದವ ತೆರೆಯುವ ಕ್ಷಣ ಬಂದಾಯಿತು. ಯೌವನದ ರಸ ಕ್ಷಣಗಳನ್ನು ಪೂರ್ಣವಾಗಿ ಬಳಸಿಕೊಳ್ಳಿ. ಕಾರ್ಯ ಪ್ರವೃತ್ತರಾಗಿ. ಯಾವ ಕ್ಷಣದಲ್ಲೂ ಮರಣ ಬಂದೀತು. ಮತ್ತೆ ಜೀವನದ ಕಳೆದ ಕ್ಷಣಗಳು ಸಿಗಲಾರವು. ಜೀವನದ ಚೈತ್ರಕಾಲ ಯೌವನ. ಮುಪ್ಪು ಆವರಿಸಿದಾಗ, ಅದರ ಜೊತೆ ಚಿಂತೆಯೂ ಆವರಿಸಿ ಏನೂ ಮಾಡಲಾಗದು. ಹರೆಯವಿದ್ದಾಗಲೇ ಸಾಧನೆ ಮಾಡಿರೆಂದು ಕರೆ ನೀಡುತ್ತಿದ್ದಾರೆ.

ಕವಿ ಬೆಳಕು ಹರಿದಿರುವುದರ ಬಗ್ಗೆ ಎಚ್ಚರಿಕೆ ಮೂಡಿಸುತ್ತಾ, ಕೋಳಿ ಯಾವಾಗಲೋ ಕೂಗಿ ಆಯಿತು. ಎದ್ದೇಳಿ ಇನ್ನೂ ಯಾಕೆ ತಡ ಮಾಡುತ್ತಿದ್ದೀರಿ? ಪಾನೀಯ ಕುಡಿಯುವುದಕ್ಕೆ ಏಳಿ ಎಂದಿದ್ದಾರೆ. ಅಂಗಡಿಯ ಬಾಗಿಲನ್ನು ತಡಮಾಡದೇ ಈ ಕ್ಷಣ ತೆರೆಯಲು ಹೇಳಿ ಎಂದಿದ್ದಾರೆ. ಜೀವನವೆಂಬ ನದಿಗೆ ನೂರಾರು ಸೆಳವುಗಳಿವೆ. ಯಾವ ಕ್ಷಣದಲ್ಲೂ ಮರಣವು ಬರಬಹುದು. ಮಡಿದವರು ಮತ್ತೆ ತಿರುಗಿ ಬಂದಾರೆ? ಖಂಡಿತ ಇಲ್ಲ. ಆದುದರಿಂದ ಸಮಯವನ್ನು ವ್ಯರ್ಥ ಮಾಡಿಕೊಳ್ಳದೆ ಜೀವನದ ಆನಂದಮಯ ಕ್ಷಣಗಳನ್ನು ಮನಸಾರೆ ಅನುಭವಿಸಿ. ಆಲಸ್ಯವನ್ನು ದೂರಮಾಡಿ. ಆನಂದವನ್ನು ಹೊಂದಿ ಎನ್ನುತ್ತಿದ್ದಾರೆ.

ಬಾನು ಕಾಂತಿಯನ್ನು ಹೊಂದಬಹುದು.ಮರವು ಚಿಗುರಬಹುದು, ಸುಗ್ಗಿಯ ಕಾಲವೂ ಬರಬಹುದು. ಆದರೆ ಜೀವನದ (ಯೌವನ) ಸುಗ್ಗಿಯ ಕಾಲ ಮತ್ತೆ ಬರಲು ಸಾಧ್ಯವೇ? ಖಂಡಿತಾ ಇಲ್ಲ. ಯೋಗ್ಯವಾದ ಯೋಚನೆಗಳಲ್ಲಿ ಚಿಂತನೆಗಳಲ್ಲಿ ಇಂದೇ ತೊಡಗಿ ಬಾಳನ್ನು ಸಾರ್ಥಕಪಡಿಸಿಕೊಳ್ಳಿ ಎಂದು ಕವಿ ಕಿವಿಮಾತನ್ನು ಹೇಳುವ ಮೂಲಕ ವಾಸ್ತವತೆಯ ಅರಿವು ಮೂಡಿಸುತ್ತಿದ್ದಾರೆ.

## ಸಾಂದರ್ಭಿಕ ವಿವರಣೆ ಬಯಸುವ ವಾಕ್ಯಗಳು

1. ಬಲೆಬೀಸಿ ಬಂದ, ಅಗೋ ಬೆಳಕು–ಬೇಟೆಗಾರ.

ಆಯ್ಕೆ: ಈ ವಾಕ್ಯವನ್ನು ದ.ರಾ.ಬೇಂದ್ರೆಯವರು ಬರೆದ ಬೆಳಗು ಜಾವ ಎಂಬ ಕವಿತೆಯಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಕವಿ ಇಲ್ಲಿ ಬೆಳಕು ಬೇಟೆಗಾರನ ಆಗಮನದ ಬಗ್ಗೆ ತಿಳಿಸುತ್ತಿದ್ದಾರೆ.

ಸಾರಸ್ಯ: ಕವಿ ಬೇಂದ್ರೆಯವರು ದಿನ ನಿತ್ಯ ಬೆಳಗು ಹೇಗೆ ಕಾಣಿಸಿಕೊಳ್ಳುತ್ತದೆ ಎನ್ನುವುದನ್ನು ಇಲ್ಲಿ ವಿವರಿಸುತ್ತಿದ್ದಾರೆ. ದಿನ ನಿತ್ಯ ಕತ್ತಲೆಯು ನಿಧಾನಗತಿಯಲ್ಲಿ ಮಾಯವಾಗಿ ಬೆಳಕು ಪ್ರವೇಶಿಸುತ್ತದೆ. ಆದರೆ ಇದನ್ನು ಕಾಣುವ ಹುಮ್ಮಸ್ಸು ಬೇಕು. ಮಾರನು ತನ್ನ ಜೇನ್ನೊಣದ ಬಿಲ್ಲಿನ ಹೆದೆಗೆ ಹೂಬಾಣವನ್ನು ಹೂಡಿ ಪ್ರಯೋಗಿಸುತ್ತಿದ್ದಾನೆ. ಆಗ ಕಾಣಿಸಿಕೊಂಡ ಬೆಳಕಿನ ಬೇಟೆಗಾರ ಎಲ್ಲಾ ಕಡೆಯು ಬೆಳಕನ್ನು ಪಸರಿಸಿದನು ಎನ್ನುವಾಗ ಈ ಮೇಲಿನ ಸಾಲು ಧ್ವನಿಸುತ್ತದೆ.

2. ತುಂಬಿರುವ ತನಕ ತುಂತುಂಬಿ ಕುಡಿಯಬೇಕು.

ಆಯ್ಕೆ: ಈ ವಾಕ್ಯವನ್ನು ದ.ರಾ.ಬೇಂದ್ರೆಯವರು ಬರೆದ ಬೆಳಗು ಜಾವ ಎಂಬ ಕವಿತೆಯಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಕವಿಯು ನಮಗೆ ದೊರಕಿರುವ ಯೌವನವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂಬ ಕಿವಿಮಾತನ್ನು ಈ ವಾಕ್ಯದಲ್ಲಿ ಹೇಳುತ್ತಿದ್ದಾರೆ.

ಸಾರಸ್ಯ: ಜೀವನದಲ್ಲಿ ಯೌವನ ಬರುವುದು ಒಂದೇ ಬಾರಿ. ಅದನ್ನು ಹುಸಿನಿದ್ದೆ ಮಾಡುತ್ತಾ ವ್ಯರ್ಥವಾಗಿ ಕಳೆಯಬಾರದು. ತುಂಬಿಯ ಹಾಗಿನ ಬಾಳು ನಮ್ಮದಾಗಬೇಕು. ಯಾವ ರೀತಿಯಲ್ಲಿ ದುಂಬಿಯು ಹೂವಿನ ಮಕರಂದವನ್ನು ಸಂಪೂರ್ಣವಾಗಿ ಹೀರಿ ತನ್ನ ಬದುಕನ್ನು ಸಾರ್ಥಕಪಡಿಸಿಕೊಳ್ಳುತ್ತದೋ, ಹಾಗೆ ನಾವು ನಮಗೆ ಸಿಕ್ಕಿರುವ

ಯೌವನವನ್ನು ಸದುಪಯೋಗಪಡಿಸಿಕೊಳ್ಳಬೇಕು ಎನ್ನುವುದನ್ನು ಕವಿ ಈ ಮೇಲಿನಂತೆ ಹೇಳುತ್ತಾರೆ.

3. ಮರಣ ಬಂದೀತು ಕ್ಷಣವು ಉರುಳಿ

ಆಯ್ಕೆ : ಈ ವಾಕ್ಯವನ್ನು ದ.ರಾ.ಬೇಂದ್ರೆಯವರು ಬರೆದ ಬೆಳಗು ಜಾವ ಎಂಬ ಕವಿತೆಯಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಇಲ್ಲಿ ಕವಿಯು ವ್ಯರ್ಥ ಕಾಲಹರಣದಿಂದ ಭವಿಷ್ಯದಲ್ಲಿ ಬರಬಹುದಾದ ಮರಣದ ಬಗ್ಗೆ ಎಚ್ಚರಿಕೆಯನ್ನು ನೀಡುತ್ತಿದ್ದಾರೆ.

ಸಾರಸ್ಯ: ಬೇಂದ್ರೆಯವರುಬೆಳಕು ಕಾಣಿಸಿಕೊಂಡರೂ ಇನ್ನೂ ಮಲಗಿರುವ ಯುವಕರಿಗೆ ಎದ್ದೇಳುವಂತೆ ಕರೆ ನೀಡಿದ್ದಾರೆ. ಅದಾಗಲೇ ಕೋಳಿ ಕೂಗಿದೆ, ಎದ್ದೇಳಿ ಎದ್ದು ನಿತ್ಯ ಕರ್ಮಗಳನ್ನು ಮುಗಿಸಿ ಪಾನಕ ಕುಡಿಯಿರಿ, ಅಂಗಡಿಯ ಕದವನ್ನು ತೆರೆಯಲು ಹೇಳಿ ತಡಮಾಡಬೇಡಿ ಎನ್ನುತ್ತಿದ್ದಾರೆ. ಯಾಕೆಂದರೆ ಜೀವನ ಎನ್ನುವ ನದಿಗೆ ರಭಸವಿದೆ. ಯಾವಾಗ ಬೇಕಾದರೂ ಪ್ರವಾಹದ ರೂಪದಲ್ಲಿ ಮರಣ ಕಾಣಿಸಿಕೊಳ್ಳಬಹುದು ಎನ್ನುತ್ತಾ ಈ ಮೇಲಿನಂತೆ ಹೇಳುತ್ತಾರೆ.

4. ಬರಲುಂಟೆ ಸುಗ್ಗಿ ಮತ್ತೆ?

ಆಯ್ಕೆ: ಈ ವಾಕ್ಯವನ್ನು ದ.ರಾ.ಬೇಂದ್ರೆಯವರು ಬರೆದ ಬೆಳಗು ಜಾವ ಎಂಬ ಕವಿತೆಯಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಕವಿಯು ಯೌವನ ಮತ್ತು ಮುಪ್ಪಿನ ಕುರಿತು ಹೇಳುವ ಸಂದರ್ಭ ಇದಾಗಿದೆ.

ಸಾರಸ್ಯ: ಮುಪ್ಪು, ಮರಣಗಳು ಒಮ್ಮೆ ಆವರಿಸಿದವು ಎಂದರೆ ಮನುಷ್ಯ ಮತ್ತೆ ಯೌವನವನ್ನು ಕನಸಿನಲ್ಲೂ ನಿರೀಕ್ಷಿಸಲು ಸಾಧ್ಯವಿಲ್ಲ. ಪ್ರಕೃತಿಯ ಬದಲಾವಣೆ ಪುನರಾವರ್ತನೆಯಾಗುತ್ತಿರುತ್ತದೆ. ಬಾನು ತನ್ನ ಬೆಳಕನ್ನು ಪ್ರತಿ ನಿತ್ಯವೂ ಪ್ರಕಾಶಿಸುತ್ತದೆ. ಮರ ಪ್ರತಿನಿತ್ಯವೂ ಚಿಗುರುತ್ತಿರುತ್ತದೆ. ಸುಗ್ಗಿಯ ಕಾಲ ಮತ್ತೆ ಬರಬಹುದು ಅಥವಾ ಬರದೇ ಇರಬಹುದು ಆದರೆ ಜೀವನದ

ಸುಗ್ಗಿಕಾಲ ಮಾತ್ರ ಒಮ್ಮೆಯೇ ಬರುವುದು. ಅದನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂಬ ಕಳಕಳಿ ಇಲ್ಲಿದೆ.

5. ಮುಳುಗಿರಲಿ ಮುಪ್ಪು ಚಿಂತನದಿ.

ಆಯ್ಕೆ: ಈ ವಾಕ್ಯವನ್ನು ದ.ರಾ.ಬೇಂದ್ರೆಯವರು ಬರೆದ ಬೆಳಗು ಜಾವ ಎಂಬ ಕವಿತೆಯಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಇಲ್ಲಿ ಕವಿ ಯುವ ಮನಸ್ಸುಗಳಿಗೆ ಕಿವಿ ಮಾತು ಹೇಳುತ್ತಿರುವುದನ್ನು ಕಾಣಬಹುದು.

ಸ್ವಾರಸ್ಯ: ಆಕಾಶ ಮತ್ತೆ ಮತ್ತೆ ಪ್ರಕಾಶಿಸುತ್ತಾ ಇರುತ್ತದೆ. ಮರ ಮತ್ತೆ ಮತ್ತೆ ಚಿಗುರುತ್ತಾ ಇರುತ್ತದೆ. ಸುಗ್ಗಿಯ ಕಾಲವೂ ಮತ್ತೆ ಬರಬಹುದು ಅಥವಾ ಬರದೇ ಇರಬಹುದು. ಆದರೆ ಯೌವನದ ಕಾಲ ಕಳೆದು ಹೋದರೆ ಮತ್ತೆ ಖಂಡಿತಾ ಬರುವುದಿಲ್ಲ. ಆದ್ದರಿಂದ ಮುಪ್ಪು ಬರುವುದೆಂಬ ಚಿಂತೆಯಿರಲಿ ಯೌವನವು ಮತ್ತೆ ಸಿಗುವುದಿಲ್ಲವೆಂಬ ಎಚ್ಚರವಿರಲಿ ಎನ್ನುತ್ತಾ ಈ ಮೇಲಿನಂತೆ ಹೇಳುತ್ತಾರೆ.

**ಒಂದು ಅಂಕದ ಪ್ರಶ್ನೆಗಳು :**

1. ಜೇನ್ಕೊಣದ ಹೆದೆಗೆ ಹೂಬಾಣ ಹೂಡಿದವರು ಯಾರು?

ಜೇನ್ಕೊಣದ ಹೆದೆಗೆ ಹೂಬಾಣ ಹೂಡಿದವರು ಬೆಳಕು – ಬೇಟೆಗಾರ.

2. ಬೇಟೆಗಾರ ಯಾರು?

ಬೆಳಕು ಬೇಟೆಗಾರ.

3. ಹುಸಿನಿದ್ದೆ ಸಾಕು ಎಂದು ಕವಿ ಯಾರಿಗೆ ಹೇಳುತ್ತಾರೆ?

ಹುಸಿನಿದ್ದೆ ಸಾಕು ಎಂದು ಕವಿ ಮಕ್ಕಳಿಗೆ ಹೇಳುತ್ತಾರೆ.

4. ಯಾವುದಕ್ಕೆ ಸೆಳೆವಿದೆಯೆಂದು ಕವಿ ಹೇಳುತ್ತಾರೆ?

ಜೀವನದ ನದಿಗೆ ಸೆಳೆವಿದೆಯೆಂದು ಕವಿ ಹೇಳುತ್ತಾರೆ.

5. ಕವಿಯ ಪ್ರಕಾರ ಯಾವುದು ಮತ್ತೆ ಚಿಗುರುತ್ತದೆ?

ಕವಿಯ ಪ್ರಕಾರ ಮರವು ಮತ್ತೆ ಚಿಗುರುತ್ತದೆ.

6. ಯಾವುದು ಚಿಂತನದಿ ಮುಳುಗಿರಲಿ ಎಂದು ಕವಿ ಆಶಿಸುತ್ತಾರೆ?

ಮುಪ್ಪು ಚಿಂತನದಿ ಮುಳುಗಿರಲಿ ಎಂದು ಕವಿ ಆಶಿಸುತ್ತಾರೆ.

**ಎರಡು ಅಂಕಗಳ ಪ್ರಶ್ನೆಗಳು:**

1. ಬೆಳಕು–ಬೇಟೆಗಾರ ಹೇಗೆ ಬರುತ್ತಾನೆ?

ಏಳು ಚಿನ್ನ, ಬೆಳಗಾಯ್ತು ಅಣ್ಣ ಎಂದು ಕವಿ ಬೇಂದ್ರೆಯವರು ಮಲಗಿರುವ ಮನಸ್ಸುಗಳನ್ನು ಎಬ್ಬಿಸುತ್ತಿದ್ದಾರೆ. ಮೂಡಲ ದಿಕ್ಕಿನಲ್ಲಿ ಸೂರ್ಯ ಉದಯಿಸುತ್ತಿದ್ದಾನೆ. ನಕ್ಷತ್ರಗಳು ಜಾರಿ, ಕತ್ತಲೆ ಸೋರಿ ಹೋಗುತ್ತಿದೆ. ಆಗ ಮಾರನು ತನ್ನ ಜೇನ್ಬೊಣದ ಹೆದೆಗೆ ಹೂಬಾಣವನ್ನು ಹೂಡುತ್ತಾನೆ. ಆಗ ಬೆಳಕಿನ ಬೇಟೆಗಾರ ಆಗಮಿಸುತ್ತಾನೆ.

2 .ಕವಿ ಬೇಂದ್ರೆ ಮಕ್ಕಳಿಗೆ ಬಾಳಿನ ಬಗ್ಗೆ ಕೊಡುವ ಸಂದೇಶವೇನು?

ಕವಿ ಬೇಂದ್ರೆ ಬೆಳಗಿನ ವಿಶೇಷತೆಯನ್ನು ತಿಳಿಸುತ್ತಾ, ಮಕ್ಕಳಲ್ಲಿ ಬೇಗ ನಿಮ್ಮ ಹುಸಿ ನಿದ್ದೆ ಬಿಟ್ಟು ಏನಾದರೂ ಸಾಧಿಸಲು ಏಳಿ ಎದ್ದೇಳಿ ಎನ್ನುತ್ತಿದ್ದಾರೆ. ಬಾಳಿನಲ್ಲಿ ಯೌವನವು ತುಂಬಿರುವವರೆಗೆ ಅದನ್ನು ಸಂಪೂರ್ಣವಾಗಿ ಸಾರ್ಥಕ ಪಡಿಸಿಕೊಳ್ಳಬೇಕು, ಸೋಮಾರಿತನದ ಭಾಗವಾಗಿರುವ ಹುಸಿ ನಿದ್ದೆಯನ್ನು ಬಿಡಬೇಕು ಎಂದು ಬಾಳಿನ ಬಗ್ಗೆ ಸಂದೇಶವನ್ನು ನೀಡುತ್ತಿದ್ದಾರೆ.

2. ಹುಸಿನಿದ್ದೆ ಸಾಕು, ಎದ್ದೇಳಿ ಎಂದು ಕವಿ ಮಕ್ಕಳಿಗೆ ಹೇಳಲು ಕಾರಣವೇನು?

ಕವಿಯ ಪ್ರಕಾರ ಹುಸಿನಿದ್ದೆಯು ಸೋಮಾರಿ ಮನಸ್ಸಿನ ಲಕ್ಷಣವಾಗಿದೆ. ಅಲ್ಲದೆ ಹುಸಿನಿದ್ದೆಯಲ್ಲಿ ತೊಡಗಿದರೆ ಜೀವನದ ಮುಂದಿನ ಮಧುರ ಕ್ಷಣಗಳಿಂದ ದೂರವಾಗಬೇಕಾಗುತ್ತದೆ. ಹಾಗಾಗಿ ಬಾಳಿನಲ್ಲಿ ಹೆಚ್ಚು ಹೆಚ್ಚು ಉತ್ಸಾಹದಿಂದ ಕಾರ್ಯಪ್ರವೃತ್ತರಾಗಿ, ತುಂಬಿದ ಜೀವನ ನಡೆಸಲು ಬೇಗ ಎಚ್ಚರಗೊಳ್ಳಿ ಎಂದು ಕವಿ ಮಕ್ಕಳಿಗೆ ಹೇಳುತ್ತಿದ್ದಾರೆ.

3. ಕವಿಯ ಪ್ರಕಾರ ಮುಪ್ಪು ಮತ್ತು ಹರೆಯದ ನಡುವಿನ ವ್ಯತ್ಯಾಸವೇನು?

ಕವಿಯ ಪ್ರಕಾರ ಹರೆಯ(ಯೌವನ)ಜೀವನದ ಬೆಳಗುಜಾವ. ಹರೆಯದ ಕಾಲದಲ್ಲಿ ಸಮಯವನ್ನು ವ್ಯರ್ಥವಾಗಿ ಕಳೆಯದೆ, ಕಾರ್ಯಶೀಲರಾಗಿ ಜೀವನವನ್ನು ಸವಿಯಾಗಿಸಿಕೊಳ್ಳಬೇಕು. ಮುಪ್ಪುಜೀವನದ ಸಂಧ್ಯಾಕಾಲ ಜೊತೆಗೆ ನಾನಾ ರೀತಿಯ ಚಿಂತೆಗಳು ಮನಸ್ಸಿನಲ್ಲಿ ಮೂಡಿ ಮನಸ್ಸು ಘಾಸಿಗೊಳ್ಳುವ ಕಾಲ ಎಂದು ಕವಿ ಹರೆಯ ಮತ್ತು ಮುಪ್ಪಿನ ವ್ಯತ್ಯಾಸವನ್ನು ಹೇಳುತ್ತಾರೆ.

4. ಬಾನು ಮತ್ತು ಮರದ ನಿತ್ಯನೂತನತೆಯ ಬಗ್ಗೆ ಕವಿ ಏನು ಹೇಳಿದ್ದಾರೆ?

ಕವಿಯ ಪ್ರಕಾರ ಬಾನು ಮತ್ತು ಮರ ಎರಡೂ ಕೂಡ ಪ್ರಕೃತಿಯ ಭಾಗವಾಗಿದ್ದು ನಿತ್ಯನೂತನವಾಗಿದೆ. ಬಾನಿನಲ್ಲಿ ಪ್ರತಿನಿತ್ಯ ಕತ್ತಲೆ ಸರಿದು ಬೆಳಕು ಮೂಡುತ್ತಿರುತ್ತದೆ. ಮರವೂ ಕೂಡ ಎಲ್ಲಾ ಕಾಲದಲ್ಲೂ ಚಿಗುರುತ್ತಿರುತ್ತದೆ. ಈ ಎರಡೂ ಕ್ರಿಯೆಗಳು ನಿರಂತರ ಮತ್ತು ನಿತ್ಯ ನೂತನ.

**ನಾಲ್ಕು ಅಂಕಗಳ ಪ್ರಶ್ನೆಗಳು :**

1. ಮಾನವನ ಜೀವನದ ಸಾರ್ಥಕತೆ ಎಲ್ಲಿದೆಯೆಂದು ಕವಿ ಬೇಂದ್ರೆ ಹೇಳಿದ್ದಾರೆ?

ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿ ಪ್ರತಿಯೊಂದು ಬೆಳಗು ಹೊಸ ನಿರೀಕ್ಷೆಯನ್ನು ಮೂಡಿಸಿರುತ್ತದೆ. ಪ್ರತಿ ಬೆಳಗೂ, ನಿಂತುಕೊಂಡ ನಿನ್ನೆಯ ಕೆಲಸಗಳಿಗೆ ಚಾಲನೆಯನ್ನು ಕೊಟ್ಟು ಮುಂದುವರಿಸುತ್ತದೆ. ಹಾಗಾಗಿ ಪ್ರತಿಯೊಬ್ಬ ಮನುಷ್ಯನು ಪ್ರತಿ ಬೆಳಗಿನಲ್ಲಿಯೂ ತಾನು ಕಳೆದುಕೊಂಡದ್ದನ್ನು ಮತ್ತೆ ಪಡೆಯಲು ಮುಂದಾಗಬೇಕೆ ವಿನಃ ದಿನದ ಆರಂಭದಲ್ಲಿಯೇ ಹುಸಿ ನಿದ್ದೆಯನ್ನು ಮಾಡಿಕೊಂಡು ಜೀವನದ ಮಧುರ ಕ್ಷಣಗಳನ್ನು ಹಾಳುಮಾಡಿ ಕೊಳ್ಳಬಾರದೆಂಬುದಾಗಿ ಕವಿ ಆಶಿಸುತ್ತಾರೆ. ಪ್ರತಿಯೊಬ್ಬ ಮನುಷ್ಯನ ಜೀವನದಲ್ಲಿ ಬಾಲ್ಯ, ಯೌವನ, ಮುಪ್ಪು ಹಂತಹಂತವಾಗಿ ಬರುವ ಮುಖ್ಯ

ಘಟ್ಟಗಳು. ಇವುಗಳನ್ನು ಅರ್ಥಪೂರ್ಣವಾಗಿ ಕಳೆಯಬೇಕು ಎಂದಿದ್ದಾರೆ. ಯೌವನವೆಂದರೆ ಬರಿ ಮೋಜಿನ ಸಮಯವಲ್ಲ, ಅದು ಬೆವರು ಸುರಿಸಿ ದುಡಿಯುವ ಸಮಯ. ಇಂತಹ ಹೊತ್ತಿನಲ್ಲಿ ನಿದ್ದೆ ಮಾಡುತ್ತ ಕನಸು ಕಾಣುತ್ತಾ ವ್ಯರ್ಥ ಕಾಲಹರಣವನ್ನು ಮಾಡುವುದು ಸರಿಯಲ್ಲ. ಬೆಳಗಿನ ಜಾವದ ಪ್ರಕೃತಿಯ ಸೌಂದರ್ಯವನ್ನು ಸರಿಯಾಗಿ ಸವಿದು ಯೌವನವನ್ನು ಸವಿಯಾಗಿಸಿಕೊಳ್ಳಬೇಕು. ಮುಪ್ಪು ವ್ಯಾಪಿಸಿ ಚಿಂತೆ ಮೂಡುವ ಮೊದಲು ದುಡಿದು ದಣಿದು ಜೀವನ ಸಾರ್ಥಕಪಡಿಸಿಕೊಳ್ಳಬೇಕು ಎಂದಿದ್ದಾರೆ.

2. ಜೀವನದ ಉದ್ದೇಶ ಮತ್ತು ಆದರ್ಶಗಳನ್ನು ಹೇಗೆ ಸಫಲಗೊಳಿಸಿಕೊಳ್ಳಬೇಕು ಎಂದು ಬೇಂದ್ರೆ ಕರೆ ಕೊಡುತ್ತಾರೆ?

ಜೀವನಕ್ಕೆ ಒಂದು ಗುರಿ, ಒಂದು ಗುರು ಬಹಳ ಮುಖ್ಯ. ಗುರಿ ಮುಂದಿದ್ದು ಗುರು ಹಿಂದಿದ್ದರೆ ಉದ್ದೇಶಗಳು ಬಹಳ ಬೇಗ ಈಡೇರುತ್ತದೆ. ಉದ್ದೇಶಗಳು ಸರಿಯಾಗಿದ್ದಾಗ, ಪ್ರತಿ ಬೆಳಗು ಹುಸಿ ನಿದ್ದೆಗೆ ಸೀಮಿತವಾಗಿರದೆ ಅದು ಜೀವನಕ್ಕೆ ಬೆಳಕಾಗುತ್ತದೆ. ಪ್ರತಿ ಬೆಳಗನ್ನು ಸಾರ್ಥಕಪಡಿಸಿಕೊಳ್ಳುವ ಉದ್ದೇಶ ಪ್ರತಿ ಮಾನವಜೀವಿಯದ್ದಾಗಬೇಕು. ಅದರ ಈಡೇರಿಕೆಗಾಗಿ ಅವಿರತ ಪರಿಶ್ರಮ ಮುಖ್ಯ. ಕೋಳಿ ಕೂಗಿ ಬೆಳಕು ಆವರಿಸಿದಾಗಲೂ ಎದ್ದು ನಮ್ಮ ಕೆಲಸಕ್ಕೆ ತಯಾರಿ ನಡೆಸದೆ ಇದ್ದರೆ ಮುಪ್ಪು ಶರವೇಗದಲ್ಲಿ ವ್ಯಾಪಿಸಿಕೊಳ್ಳುತ್ತದೆ. ಬೆಳಕು ಜ್ಞಾನದ ಸಂಕೇತ, ಜ್ಞಾನದ ಆಕರವಾಗಿರುವ ಈ ಬೆಳಕಿನಲ್ಲಿ ಪ್ರತಿಕ್ಷಣದಲ್ಲೂ ಏನಾದರೊಂದು ತಿಳಿಯುವ ತವಕ ನಮಗಿರಬೇಕು. ಒಡೆದ ಮುತ್ತು ಮತ್ತು ಕಳೆದ ಹೊತ್ತು ಎಂದಿಗೂ ಮರಳಿ ಪಡೆಯಲು ಸಾಧ್ಯವಿಲ್ಲ. ಹಾಗಾಗಿ ಜೀವನದಲ್ಲಿ ನಮಗೆ ಪ್ರಾಪ್ತವಾದ ಯೌವನವನ್ನು ವಿನಾ ಕಾರಣ ವ್ಯರ್ಥವಾಗಿ ಹಾಳುಮಾಡದೆ ತುಂಬು ಜೀವನದ ಸಾರ್ಥಕ ಬಾಳು ಬಾಳುವುದು ನಮ್ಮ ಆದರ್ಶವಾಗಬೇಕು. ಅದನ್ನು ಸಫಲಗೊಳಿಸಲು ಅವಿರತ ಹೋರಾಟದಲ್ಲಿ ತೊಡಗಬೇಕು ಆಗ ಮಾತ್ರ ನಮ್ಮ ಜೀವನ ಸಾರ್ಥಕವಾಗುತ್ತದೆ ಎಂಬುದು ಕವಿಯ ಆಶಯ.

3. 'ಬೆಳಗು ಜಾವ' ಕವನದ ಮೂಲಕ ಕವಿ ಬೇಂದ್ರೆ ಹೇಳಿರುವ ವಿಚಾರಗಳಾವುವು?

ಕವಿಯು ಆರಂಭದ ಸಾಲುಗಳಲ್ಲಿಯೇ ಬೆಳಕಿನ ಆಗಮನವನ್ನು ಸೊಗಸಾಗಿ ವಿವರಿಸುತ್ತಾ ಯುವ ಮನಸ್ಸುಗಳನ್ನು ಎಬ್ಬಿಸುವ ಪ್ರಯತ್ನ ಮಾಡುತ್ತಿದ್ದಾರೆ.ಪೂರ್ವ ದಿಕ್ಕು ಕಣ್ಣುತೆರೆದಿದೆ, ಕತ್ತಲು ದೂರವಾಗುತ್ತಿದೆ. ಬೆಳಕು ಬೇಟೆಗಾರ ಬಂದು ಜೇನ್ನೊಣದ ಹೆದೆಗೆ ಹೂಬಾಣವನ್ನು ಬಿಟ್ಟಿರುವನು, ಏಳಿ–ಎದ್ದೇಳಿ ಎಂದು ಕರೆ ಕೊಡುತ್ತಿದ್ದಾರೆ. ಮುಂಜಾವಿನ ಈ ಸೊಬಗಿಗೆ ಈ ಜಗವು ಸೋತಿದೆ. ಮಕ್ಕಳೇ ಬೇಗ ಎದ್ದು ಪೂರ್ಣವಾದ ಬಾಳನ್ನು ಸಾರ್ಥಕ ಮಾಡಿಕೊಳ್ಳಿ, ನಿದ್ದೆಯಿಂದ ಎಚ್ಚರಗೊಳ್ಳಿ ಎಂದಿದ್ದಾರೆ. ಜೀವನದ ಅಂಗಡಿಯ ಕದವ ತೆರೆಯುವ ಕ್ಷಣ ಬಂದಾಯಿತು. ಯೌವನದ ರಸಕ್ಷಣಗಳನ್ನು ಪೂರ್ಣವಾಗಿ ಬಳಸಿಕೊಳ್ಳಿ ಕಾರ್ಯ ಪ್ರವೃತ್ತರಾಗಿ ಯಾವ ಕ್ಷಣದಲ್ಲೂ ಮರಣ ಬಂದೀತು. ಮತ್ತೆ ಜೀವನದ ಕಳೆದ ಕ್ಷಣಗಳು ಸಿಗಲಾರವು. ಜೀವನದ ಚೈತ್ರಕಾಲ ಯೌವನ. ಮುಪ್ಪು ಆವರಿಸಿದಾಗ, ಅದರ ಜೊತೆ ಚಿಂತೆಯೂ ಆವರಿಸಿ ಏನೂ ಮಾಡಲಾಗದು. ಹರೆಯವಿದ್ದಾಗಲೇ ಸಾಧನೆ ಮಾಡಿರೆಂದು ಕರೆ ನೀಡುತ್ತಿದ್ದಾರೆ.

4. ಬಾಳಿನ ಅಶಾಶ್ವತೆ ಮತ್ತು ಪ್ರಕೃತಿಯ ನಿತ್ಯನೂತನತೆಯ ಗುಣವನ್ನು 'ಬೆಳಗು ಜಾವ' ಕವನದಲ್ಲಿ ಕವಿ ಹೇಗೆ ವಿವರಿಸಿದ್ದಾರೆ?

ಕವಿ ಬೆಳಕು ಹರಿದಿರುವುದರ ಬಗ್ಗೆ ಎಚ್ಚರಿಕೆ ಮೂಡಿಸುತ್ತಾ, ಕೋಳಿ ಯಾವಾಗಲೋ ಕೂಗಿ ಆಯಿತು ಎದ್ದೇಳಿ ಇನ್ನೂ ಯಾಕೆ ತಡ ಮಾಡುತ್ತಿದ್ದೀರಿ? ಪಾನೀಯ ಕುಡಿಯುವುದಕ್ಕೆ ಏಳಿ ಎಂದಿದ್ದಾರೆ. ಅಂಗಡಿಯ ಬಾಗಿಲನ್ನು ತಡಮಾಡದೇ ಈ ಕ್ಷಣ ತೆರೆಯಲು ಹೇಳಿ ಎಂದಿದ್ದಾರೆ. ಜೀವನವೆಂಬ ನದಿಗೆ ನೂರಾರು ಸೆಳವುಗಳಿವೆ. ಯಾವ ಕ್ಷಣದಲ್ಲೂ ಮರಣವು ಬರಬಹುದು. ಮಡಿದವರು ಮತ್ತೆ ತಿರುಗಿ ಬಂದಾರೆ? ಖಂಡಿತ ಇಲ್ಲ. ಆದುದರಿಂದ ಸಮಯವನ್ನು ವ್ಯರ್ಥ ಮಾಡಿಕೊಳ್ಳದೆ ಜೀವನದ ಆನಂದಮಯ ಕ್ಷಣಗಳನ್ನು ಮನಸಾರೆ

ಅನುಭವಿಸಿ. ಆಲಸ್ಯವನ್ನು ದೂರಮಾಡಿ. ಆನಂದವನ್ನು ಹೊಂದಿ ಎನ್ನುತ್ತಿದ್ದಾರೆ. ಬಾನು ಕಾಂತಿಯನ್ನು ಹೊಂದಬಹುದು. ಮರವು ಚಿಗುರಬಹುದು, ಸುಗ್ಗಿಯ ಕಾಲವೂ ಬರಬಹುದು. ಆದರೆ ಜೀವನದ (ಯೌವನ)ದ ಸುಗ್ಗಿಯ ಕಾಲ ಮತ್ತೆ ಬರಲು ಸಾಧ್ಯವೇ? ಖಂಡಿತಾ ಇಲ್ಲ. ಯೋಗ್ಯವಾದ ಯೋಚನೆಗಳಲ್ಲಿ ಚಿಂತನೆಗಳಲ್ಲಿ ಇಂದೇ ತೊಡಗಿ ಬಾಳನ್ನು ಸಾರ್ಥಕಪಡಿಸಿಕೊಳ್ಳಿ ಎಂದು ಕವಿ ಕಿವಿಮಾತನ್ನು ಹೇಳುವ ಮೂಲಕ ವಾಸ್ತವತೆಯ ಅರಿವು ಮೂಡಿಸುತ್ತಿದ್ದಾರೆ.

===0===

# ಮುಂಬೈ ಜಾತಕ

**ಜಿ. ಎಸ್. ಶಿವರುದ್ರಪ್ಪ**

**ಸಾರಾಂಶ:**

ನಗರಗಳಲ್ಲಿ ವಾಸಿಸುವವರ ಅತ್ಯಂತ ಸ್ಥಿತಿ ಮರುಕ ಹುಟ್ಟಿಸುವಂಥದ್ದು. ಇಂಥಹ ನಗರಗಳಲ್ಲಿ ಹುಟ್ಟುವ ಮಕ್ಕಳು ಕಣ್ತೆರೆದಾಗ ಕಾಣುವುದು ಅವಸರದಿಂದ ಸರಿಯುವ ವಾಹನಗಳನ್ನು ಮಾತ್ರ. ಮಕ್ಕಳು ಬಾಲ್ಯಾವಸ್ಥೆಯನ್ನು ಹೆತ್ತವರೊಂದಿಗೆ, ಒಡಹುಟ್ಟಿದವರೊಂದಿಗೆ ಸಮೃದ್ಧಗೊಳಿಸಿಕೊಳ್ಳುವ ಅವಕಾಶದಿಂದ ವಂಚಿತರು.

ತಾಯಿಯ ಎದೆಹಾಲನ್ನೂ ಸಹ ಕುಡಿಯದೆ, ಎಮ್ಮೆಯ ಹಾಲು, ಬಾಟ್ಲಿಯ ಹಾಲು, ಗ್ರೈಪ್ ವಾಟರ್, ಸಿರಪ್ ಮುಂತಾದವುಗಳಲ್ಲಿಯೇ ಮಗು ಹೊಟ್ಟೆ ತುಂಬಿಸಿಕೊಳ್ಳುತ್ತದೆ. ಬೆಳಗಿನಿಂದ ಸಂಜೆಯ ತನಕ ಲಕ್ಷಚಕ್ರ ಉರುಳುವಲ್ಲಿ ಅವಸರದ ಹೆಜ್ಜೆಯನ್ನು ಹಾಕುತ್ತಾ ಸರಿಯುತ್ತಿರುವ

ಸಾವಿರಾರು ಜನಗಳನ್ನು ಕಾಣುತ್ತಾ ಮಗು ಬೆಳೆಯುತ್ತದೆ. ಈ ವಾತಾವರಣದಲ್ಲಿ ಮಗು ಕ್ಯೂ ನಿಲ್ಲುವುದನ್ನು, ಫುಟ್ ಪಾತಿನಲ್ಲೇ ಸಂಚರಿಸುವುದನ್ನು, ಎಚ್ಚರಿಕೆಯಿಂದ ರಸ್ತೆ ದಾಟುವುದನ್ನು, ಎಲ್ಲಿಯೂ ನಿಲ್ಲದಂತೆ ಓಡುವುದನ್ನು, ಅವರಿವರನ್ನು ತಳ್ಳಿಕೊಂಡು ಮುನ್ನುಗುವುದನ್ನು ಎಲ್ಲಾದರೂ ಸರಿ ಬೇರೂರುವುದನ್ನು, ಹೀರುವುದನ್ನು ಕಲಿಯುತ್ತದೆ.

ನಗರ ಸಂಸ್ಕೃತಿಯಲ್ಲಿ ಜೀವನದ ರಸಾನುಭವ ಅಸಾಧ್ಯ. ತಂದೆ–ತಾಯಿಯರ ಕರುಳಬಳ್ಳಿಯ ಪ್ರೀತಿ ಮಮತೆ ಆರೈಕೆಗಳಲ್ಲೂ ಕೃತಕವಾದ ಹೊಣೆಗಾರಿಕೆಯನ್ನು ಕವಿ ಮುಂಬೈ ಜಾತಕದಲ್ಲಿ ಚಿತ್ರಿಸಿದ್ದಾರೆ. ನಗರದಲ್ಲಿ ಮಕ್ಕಳೊಂದಿಗೆ ಪ್ರೀತಿ, ವಿಶ್ವಾಸ, ಕರುಳಬಳ್ಳಿಯ ಸಂಬಂಧಗಳೆಲ್ಲವೂ ಕಡಿಮೆಯಾಗಿ ಮಕ್ಕಳು ಬಾಲ್ಯದಲ್ಲಿಯೇ ಯಾಂತ್ರಿಕ ಬದುಕಿಗೆ ಸಿಕ್ಕಿ ನರಳುತ್ತದೆ. ಮಗುವಿನ ತಂದೆ–ತಾಯಿಯರು ತಮ್ಮಕೃತಕ ಜವಾಬ್ದಾರಿಯನ್ನು ನಿರ್ವಹಿಸುವ ಯಂತ್ರಗಳಂತಿದ್ದಾರೆ. ಮಕ್ಕಳೊಂದಿಗೆ ವಾತ್ಸಲ್ಯಭರಿತ ಒಡನಾಟದ ಚಿತ್ರಣವೇ ಇಲ್ಲಿಲ್ಲ. ತಾಯಿ ಇರುವ ಒಂದಿಂಚು ಕೋಣೆಯಲ್ಲಿ ಹೊರಲೋಕವನ್ನು ಪರಿಚಯಿಸುವ, ಎಚ್ಚರಿಕೆ ನೀಡುವ, ಸಾವಿರ ಗಾಲಿಗಳು ಹೊರಳುವ ರಸ್ತೆಯಂಚಿನಲ್ಲಿ ಕೈ ಹಿಡಿದು ನಡೆಸುವ ಕೆಲಸ ಮಾಡುತ್ತಾಳೆ.ಇನ್ನು ತಂದೆಯಾದವನು ಬೆಳಿಗ್ಗೆಯಿಂದ ಸಂಜೆಯವರೆಗೆ ಕೆಲಸದ ನೆಪದಲ್ಲಿ ಕಣ್ಮರೆಯಾಗಿ ಹೋಗಿ ಬಿಡುತ್ತಾನೆ. ಕೆಲಸದ ಒತ್ತಡ ಅವನಿಗಿದೆ. ಒಮ್ಮೊಮ್ಮೆ ರಜಾದಿನಗಳಲ್ಲಿ ಕಣ್ಣಿಗೆ ಕಂಡು ಕೆಮ್ಮುತ್ತಾ ಕುಳಿತಿರುವ ಪ್ರಾಣಿಯಂತೆ ಗೋಚರಿಸುತ್ತಾನೆ. ಈ ರೀತಿಯಲ್ಲಿ ತಂದೆ–ತಾಯಿಗಳು ಮಗುವಿನೊಂದಿಗೆ ಯಾಂತ್ರಿಕ ಕರ್ತವ್ಯ ನಿಭಾಯಿಸುತ್ತಿದ್ದಾರೆ.

ಮಗು ಕಲಿತ ವಿದ್ಯೆಗಳು ಶಾಲೆ ಕಾಲೇಜುಗಳು ಕಲಿಸಿದ್ದು, ದಾರಿ ಬದಿ ನೂರಾರು ಜಾಹೀರಾತುಗಳನ್ನು ನೋಡಿ ಅವುಗಳನ್ನು ತಲೆಗೆ ತುರುಕಿಸಿಕೊಳ್ಳುತ್ತದೆ., ರೇಡಿಯೋ ಸಿಲೋನ್ ವ್ಯಾಪಾರ ವಿಭಾಗ ಶಿಫಾರಸು ಮಾಡಿದ್ದನ್ನು ಕಲಿಯುತ್ತದೆ. ಇದರ ಜೊತೆಗೆ ತಾನಾಗಿ ಕಲಿತದ್ದು ಬಸ್

ಸ್ಟಾಪಿನಲ್ಲಿ ನಿಂತ ಬಣ್ಣಗಳ ಕಡೆಗೆ ಕಣ್ಣಾಡಿಸುವುದು. ಸ್ವಂತವಾಗಿ ಕಲಿಯುವುದು ಕಡಿಮೆಯೇ, ಇತರರ ಕೈ ಗೊಂಬೆಯಾಗಿ ಬಾಳುತ್ತದೆ. ಬೆಳಿಗ್ಗೆ ಎದ್ದರೆ ಬಟ್ಟೆ0ಯಲ್ಲಿ ಮೈ ತುರುಕಿ ಓಡುವುದು, ರೈಲನ್ನೋ, ಬಸ್ಸನ್ನೋ ಹಿಡಿಯುವುದು. ಯಾರದೋ ಕೈ ಗೊಂಬೆಯಾಗಿ ಬದುಕುವುದು. ಸಾಯಂಕಾಲ ಸುಸ್ತಾಗಿ ಮನೆಗೆ ಬಂದು ತಣ್ಣನೆ0ಯ ಕೂಳನ್ನು ತಿಂದು ಮಲಗುವುದು.

ಸಂದರ್ಭ ಸಹಿತ ವಿವರಿಸಿ:

1. ಅವಸರದ ಹೆಜ್ಜೆಯ ಮೇಲೆ ಸರಿವ ಸಾವಿರ ಕೊರಳು.

ಆಯ್ಕೆ : ಈ ಸಾಲನ್ನು ಜಿ.ಎಸ್. ಶಿವರುದ್ರಪ್ಪನವರು ಬರೆದ ಮುಂಬೈ ಜಾತಕ ಎನ್ನುವ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ: ನಗರ ಜೀವನದ ಅವಸರದ ಯಾಂತ್ರಿಕ ಬದುಕನ್ನು ಹೇಳುವ ಸಂದರ್ಭವಿದು.

ವಿವರಣೆ: ಮುಂಬೈ ನಗರದಲ್ಲಿನ ವಾಹನ ಮತ್ತು ಜನದಟ್ಟಣೆಯನ್ನು ಕುರಿತಾಗಿ ಕವಿ ಹೇಳುತ್ತಿದ್ದಾರೆ. ಬೆಳಿಗ್ಗೆಯಿಂದ ಸಂಜೆಯವರೆಗೆ ರಸ್ತೆಯಲ್ಲಿ ಲಕ್ಷ ಲಕ್ಷ ಚಕ್ರಗಳು ಉರುಳುವುದನ್ನು ಕಾಣಬಹುದು.ಜನರು ಅವಸರದಲ್ಲಿ ತಮ್ಮ ಕೆಲಸ ಕಾರ್ಯಗಳಿಗೆ ಹೊರಡುವುದನ್ನು ಕವಿ ಈ ಸಾಲಿನ ಮೂಲಕ ಹೇಳಿದ್ದಾರೆ. ನಗರದ ಯಾಂತ್ರಿಕ ಬದುಕನ್ನು, ಸ್ವಲ್ಪವೂ ಸಮಯವಿಲ್ಲದ ಸ್ಥಿತಿಯನ್ನು, ಜನನಿಬಿಡತೆಯನ್ನು ಕವಿ ಈ ಸಾಲಿನ ಮೂಲಕ ಹೇಳಿದ್ದಾರೆ.

2. ರಸ್ತೆದಾಟುವಾಗೆಚ್ಚರಿಕೆ.

ಆಯ್ಕೆ : ಈ ಸಾಲನ್ನು ಜಿ.ಎಸ್. ಶಿವರುದ್ರಪ್ಪನವರು ಬರೆದ ಮುಂಬೈ ಜಾತಕ ಎನ್ನುವ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ: ಮುಂಬೈ ನಗರದಲ್ಲಿ ಮಕ್ಕಳು ಕಲಿಯುವ ವಿಷಯ, ನಗರ ಜೀವನದ ಕಲಿಕೆಯ ಕುರಿತಾಗಿ ಹೇಳುವಾಗ ಈ ಮಾತು ಬಂದಿದೆ.

ವಿವರಣೆ: ಬೃಹತ್ ನಗರದಲ್ಲಿ ವಾಸಿಸುವವರು ಕಲಿಯುವ ವಿದ್ಯೆಯನ್ನು ಕುರಿತು ಲೇಖಕರು ಮಾತನಾಡುತ್ತಿದ್ದಾರೆ. ನಗರದ

ವಾತಾವರಣದಲ್ಲಿ ಮಗು ಕ್ಯೂ ನಿಲ್ಲುವುದನ್ನು, ಫುಟ್ ಪಾತಿನಲ್ಲೇ ಸಂಚರಿಸುವುದನ್ನು, ಎಚ್ಚರಿಕೆಯಿಂದ ರಸ್ತೆದಾಟುವುದನ್ನು, ಎಲ್ಲಿಯೂ ನಿಲ್ಲದಂತೆ ಓಡುವುದನ್ನು, ಅವರಿವರನ್ನು ತಳ್ಳಿಕೊಂಡು ಮುನ್ನುಗುವುದನ್ನು ಎಲ್ಲಾದರೂ ಸರಿ ಬೇರೂರುವುದನ್ನು, ಹೀರುವುದನ್ನು ಕಲಿಯುತ್ತದೆ.

3. ರಸ್ತೆಯಂಚಿನಲ್ಲೇ ಕೈ ಹಿಡಿದು ನಡೆಸಿದವಳು.

ಆಯ್ಕೆ : ಈ ಸಾಲನ್ನು ಜಿ.ಎಸ್. ಶಿವರುದ್ರಪ್ಪನವರು ಬರೆದ ಮುಂಬೈ ಜಾತಕ ಎನ್ನುವ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ: ನಗರದಲ್ಲಿ ತಾಯಿಯಾದವಳು ಮಕ್ಕಳಿಗೆ ಕಲಿಸಬೇಕಾದ, ಜೀವನಕ್ಕೆ ಅಗತ್ಯವಾದ ಕಲಿಕೆಯ ಕುರಿತಾಗಿ ಹೇಳುವಾಗ ಈ ಮಾತು ಬಂದಿದೆ.

ವಿವರಣೆ; ತಾಯಿಯ ಪ್ರೀತಿ ಮಮತೆಯ ಆರೈಕೆಗಳಲ್ಲೂ ಇರುವ ಕೃತಕವಾದ ಹೊಣೆಗಾರಿಕೆಯನ್ನು ಕವಿ ಇಲ್ಲಿ ಚಿತ್ರಿಸಿದ್ದಾರೆ. ಮಕ್ಕಳೊಂದಿಗೆ ವಾತ್ಸಲ್ಯಭರಿತ ಒಡನಾಟದ ಚಿತ್ರಣವೇ ಇಲ್ಲಿಲ್ಲ. ತಾಯಿ ಇರುವ ಒಂದಿಂಚು ಕೋಣೆಯಲ್ಲಿ ಹೊರಲೋಕವನ್ನು ಪರಿಚಯಿಸುವ, ಎಚ್ಚರಿಕೆ ನೀಡುವ, ಸಾವಿರ ಗಾಲಿಗಳು ಹೊರಳುವ ರಸ್ತೆಯಂಚಿನಲ್ಲಿ ಕೈ ಹಿಡಿದು ನಡೆಸುವ ಕೆಲಸ ಮಾಡುತ್ತಾಳೆ. ಹೀಗೆ ನಗರ ವಾಸಿಯಾದ ತಾಯಿಯೂ ತನ್ನ ಮಗುವಿಗೆ ಯಾಂತ್ರಿಕ ಜೀವನವನ್ನು ಕಲಿಸುತ್ತಾಳೆ.

4. ಕುಳಿತು ಕೆಮ್ಮುವ ಪ್ರಾಣಿ

ಆಯ್ಕೆ : ಈ ಸಾಲನ್ನು ಜಿ.ಎಸ್. ಶಿವರುದ್ರಪ್ಪನವರು ಬರೆದ ಮುಂಬೈ ಜಾತಕ ಎನ್ನುವ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ: ತಂದೆಯ ಬಿಡುವಿಲ್ಲದ ಯಾಂತ್ರಿಕ ಬದುಕನ್ನು, ಮಗುವಿನ ಜೊತೆಗೆ ತಂದೆಯ ಸಂಬಂಧವನ್ನು ಕುರಿತು ಹೇಳುವಾಗ ಈ ಮಾತು ಬಂದಿದೆ.

ವಿವರಣೆ: ತಂದೆಯಾದವನು ಬೆಳಿಗ್ಗೆಯಿಂದ ಸಂಜೆಯವರೆಗೆ ಕೆಲಸದ ನೆಪದಲ್ಲಿ ಕಣ್ಮರೆಯಾಗಿ ಹೋಗಿ ಬಿಡುತ್ತಾನೆ. ಮಗು ತಂದೆಯನ್ನು

ನೋಡುವ ಸಂದರ್ಭಗಳೇ ಅಪರೂಪ. ಏಕೆಂದರೆ ಮಗು ಏಳುವ ಮೊದಲೇ ಮನೆ ಬಿಟ್ಟು ಕೆಲಸಕ್ಕೆ ತೆರಳಿದವನು ಮತ್ತೆ ಹಿಂದಿರುಗುವುದು ಮಗು ಮಲಗಿದ ಮೇಲೆ ತಡರಾತ್ರಿಯಲ್ಲಿ. ಕೆಲಸದ ಒತ್ತಡ ಅವನಿಗಿದೆ. ಒಮ್ಮೊಮ್ಮೆ ರಜಾದಿನಗಳಲ್ಲಿ ಕಣ್ಣಿಗೆ ಕಂಡು ಕೆಮ್ಮುತ್ತಾ ಕುಳಿತಿರುವ ಪ್ರಾಣಿಯಂತೆ ಗೋಚರಿಸುತ್ತಾನೆ. ಈ ರೀತಿಯಲ್ಲಿ ತಂದೆ ಮಗುವಿನೊಂದಿಗೆ ಯಾಂತ್ರಿಕ ಕರ್ತವ್ಯ ನಿಭಾಯಿಸುತ್ತಿದ್ದಾನೆ.

5. ನೂರಾರು ಜಾಹೀರಾತುಗಳು ತಲೆಗೆ ತುರುಕಿದ್ದು

ಆಯ್ಕೆ : ಈ ಸಾಲನ್ನು ಜಿ.ಎಸ್. ಶಿವರುದ್ರಪ್ಪನವರು ಬರೆದ ಮುಂಬೈ ಜಾತಕ ಎನ್ನುವ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ: ನಗರದ ಯಾಂತ್ರಿಕ ಜೀವನದಲ್ಲಿ ಮಗು ಕಲಿಯುವ ವಿದ್ಯೆಯ ಕುರಿತಾಗಿ ಕವಿ ತಿಳಿಸುವಾಗ ಈ ಸಾಲು ಬಂದಿದೆ.

ವಿವರಣೆ : ಮಗು ಕಲಿತ ವಿದ್ಯೆಗಳು ಶಾಲೆ ಕಾಲೇಜುಗಳು ಕಲಿಸಿದ್ದು, ದಾರಿ ಬದಿ ನೂರಾರು ಜಾಹೀರಾತುಗಳನ್ನು ನೋಡಿ ಅವುಗಳನ್ನು ತಲೆಗೆ ತುರುಕಿಸಿಕೊಳ್ಳುತ್ತದೆ. ರೇಡಿಯೋ ಸಿಲೋನ್ ವ್ಯಾಪಾರ ವಿಭಾಗ ಶಿಫಾರಸು ಮಾಡಿದ್ದನ್ನು ಕಲಿಯುತ್ತದೆ. ಇದರ ಜೊತೆಗೆ ತಾನಾಗಿ ಕಲಿತದ್ದು ಬಸ್ ಸ್ಟಾಪಿನಲ್ಲಿ ನಿಂತ ಬಣ್ಣಗಳ ಕಡೆಗೆ ಕಣ್ಣಾಡಿಸುವುದು. ಸ್ವಂತವಾಗಿ ಕಲಿಯುವುದು ಕಡಿಮೆಯೇ. ಇತರರ ಕೈ ಗೊಂಬೆಯಾಗಿ ಬಾಳುತ್ತದೆ. ಜಾಹಿರಾತನ್ನೇ ತಲೆಯಲ್ಲಿ ತುಂಬಿಕೊಂಡು ಅದನ್ನೇ ಜೀವನ ವಿಧಾನವನ್ನಾಗಿ ಮಾಡಿಕೊಳ್ಳುವ ಮಗುವಿನ ಮನಸ್ಥಿತಿಯಿಲ್ಲಿದೆ.

6. ಬಟ್ಟೆಯಲಿ ಮೈ ತುರುಕಿ ಓಡುವುದು.

ಆಯ್ಕೆ : ಈ ಸಾಲನ್ನು ಜಿ.ಎಸ್. ಶಿವರುದ್ರಪ್ಪನವರು ಬರೆದ ಮುಂಬೈ ಜಾತಕ ಎನ್ನುವ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ: ನಗರದ ವೇಗದ ಬದುಕಿನ ಕುರಿತಾಗಿ ಹೇಳುವ ಸಂದರ್ಭವಿದು.

ವಿವರಣೆ : ನಗರಜೀವನ ಚದುರಂಗದಾಟ ಇದ್ದಂತೆ. ನಗರ ಜೀವನ ಅವಸರದಲ್ಲೇ ಶುರುವಾಗುತ್ತದೆ. ಬೆಳಿಗ್ಗೆ ಎದ್ದರೆ ಬಟ್ಟೆಯಲ್ಲಿ ಮೈ ತುರುಕಿ ಓಡುವುದು. ನಿಧಾನವಾಗಿ ಬಟ್ಟೆ ಹಾಕುವ ಕ್ರಮವೇ ಇಲ್ಲ. ರೈಲನ್ನೋ, ಬಸ್ಸನ್ನೋ ಹಿಡಿಯುವುದು. ಯಾರದೋ ಕೈ ಗೊಂಬೆಯಾಗಿ ಬದುಕುವುದು. ಸಾಯಂಕಾಲ ಸುಸ್ತಾಗಿ ಮನೆಗೆ ಬಂದು ತಣ್ಣನೆಯ ಕೂಳನ್ನು ತಿಂದು ಮಲಗುವುದು. ಇಲ್ಲೆಲ್ಲೂ ಸತ್ವದಿಂದ ಕೂಡಿದ ಜೀವನವಿಲ್ಲ. ನಗರದ ಸತ್ವರಹಿತದ ಜೀವನದ ಕುರಿತಾಗಿ ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಒಂದು ವಾಕ್ಯದಲ್ಲಿ ಉತ್ತರಿಸಿ:**

1. ಮಗು ಹುಟ್ಟಿದ್ದು ಎಲ್ಲಿ?

ಮಗು ಹುಟ್ಟಿದ್ದು ಆಸ್ಪತ್ರೆಯಲ್ಲಿ.

2. ಮುಂಬೈಯಲ್ಲಿ ಬೆಳಗಿನಿಂದ ಸಂಜೆಯ ತನಕ ಕಾಣುವುದೇನು?

ಮುಂಬೈಯಲ್ಲಿ ಬೆಳಗಿನಿಂದ ಸಂಜೆಯ ತನಕ ಕಾಣುವುದು ರಸ್ತೆಯಲ್ಲಿ ಉರುಳುವ ಲಕ್ಷಚಕ್ರಗಳು.

3. ಹೊರಲೋಕವನ್ನು ಪರಿಚಯಿಸಿ ಎಚ್ಚರಿಕೆ ಕೊಟ್ಟವಳು ಯಾರು?

ಹೊರಲೋಕವನ್ನು ಪರಿಚಯಿಸಿ ಎಚ್ಚರಿಕೆ ಕೊಟ್ಟವಳು ತಾಯಿ.

4. ಕುಳಿತು ಕೆಮ್ಮುವ ಪ್ರಾಣಿ ಯಾರು?

ಕುಳಿತು ಕೆಮ್ಮುವ ಪ್ರಾಣಿ ತಂದೆ.

5. ತಾನಾಗಿ ಕಲಿತದ್ದು ಏನನು?

ಬಸ್ ಸ್ಟಾಪಿನಲ್ಲಿ ನಿಂತ ಬಣ್ಣಗಳ ಕಡೆಗೆ ಕಣ್ಣಾಡಿಸುವುದೊಂದೆ ತಾನಾಗಿ ಕಲಿತದ್ದು.

7. ಲಕ್ಷದಾರಿಗಳ ಚದುರಂಗದಾಟ ಯಾವುದು?

ಮುಂಬೈನಂತಹ ನಗರಜೀವನ ಲಕ್ಷದಾರಿಗಳ ಚದುರಂಗದಾಟ.

8.ಕನಸು ಬಂಡಿಯ ಕೆಳಗೆ ನಿದ್ರಿಸುವುದು ಹೇಗೆ? ಕನಸು ಬಂಡಿಯ ಕೆಳಗೆ ರೈಲು ಹಳಿಯ ಹಾಗೆ ತತ್ತರಿಸುತ್ತ ನಿದ್ರಿಸಬೇಕು.

**ಎರಡು– ಮೂರುವಾಕ್ಯಗಳಲ್ಲಿ ಉತ್ತರಿಸಿ:**

1 ಮಗು ಹುಟ್ಟಿ ಬೆಳೆದದ್ದು ಎಲ್ಲಿ?

ಮಗು ಹುಟ್ಟಿದ್ದು ಆಸ್ಪತ್ರೆಯಲ್ಲಿ. ಬೆಳೆದದ್ದು ಬಸ್ಸು, ಟ್ರಾಂ, ಕಾರು, ಟ್ಯಾಕ್ಸಿ, ಎಲೆಕ್ಟ್ರಿಕ್ ಟ್ರೇನುಗಳಲ್ಲಿ ನಗರದ ಯಾಂತ್ರಿಕ ಬದುಕಿನಲ್ಲಿ.

2 ಮಗು ಏನನ್ನು ಕುಡಿದು ಬೆಳೆಯುವುದು?

ನಗರದಲ್ಲಿ ಬೆಳೆಯುವ ಮಗು ತಾಯಿಯ ಎದೆಹಾಲನ್ನು ಸಹ ಕುಡಿಯುವುದಿಲ್ಲ. ಕಾಣದ ಎಮ್ಮೆಯ ಕೆಚ್ಚಲು ಕರೆದು ಕಳುಹಿಸಿದ ಬಾಟ್ಲಿಯ ಹಾಲು, ಗ್ರೈಪ್‌ಸಿರಪ್, ಹಾರ್ಲಿಕ್ಸ್ ಇತ್ಯಾದಿಗಳನ್ನು ಕುಡಿದು ಬೆಳೆಯುತ್ತದೆ.

3. ಮಗು ಏನೇನು ಕಲಿಯಿತು?

ಮಗು ಕ್ಯೂ ನಿಲ್ಲುವುದನ್ನು, ಫುಟ್ ಪಾತಿನಲ್ಲೇ ಸಂಚರಿಸುವುದನ್ನು, ಎಚ್ಚರಿಕೆಯಿಂದ ರಸ್ತೆದಾಟುವುದನ್ನು, ಎಲ್ಲಿಯೂ ನಿಲ್ಲದಂತೆ ಓಡುವುದನ್ನು, ಅವರಿವರನ್ನು ತಳ್ಳಿಕೊಂಡು ಮುನ್ನುಗುವುದನ್ನು ಎಲ್ಲಾದರೂ ಸರಿ ಬೇರೂರುವುದನ್ನು, ಹೀರುವುದನ್ನು ಕಲಿಯುತ್ತದೆ.

5. ಮಗುವಿನ ಪಾಲಿಗೆ ತಾಯಿ ಹೇಗಿದ್ದಾಳೆ?

ಮಗುವಿನ ಪಾಲಿಗೆ ತಾಯಿ ಸಾವಿರ ಗಾಲಿ ಉರುಳಿ ಹೊರಳುವ ರಸ್ತೆಯಂಚಿನಲ್ಲಿ ಕೈ ಹಿಡಿದು ನಡೆಸಿದವಳು. ಇರುವ ಒಂದಿಂಚು ಕೋಣೆಯಲ್ಲಿ ಹೊರಲೋಕವನ್ನು ಪರಿಚಯಿಸಿ ಎಚ್ಚರಿಕೆ ಕೊಟ್ಟವಳಾಗಿದ್ದಾಳೆ.

6. ತಂದೆ ಮಗುವಿಗೆ ಕಾಣಿಸಿಕೊಳ್ಳುವ ಬಗೆ ಹೇಗೆ?

ತಂದೆ ಮಗುವಿಗೆ ಬೆಳಗಿನಿಂದ ಸಂಜೆಯವರೆಗೆ ಕಾಣಿಸುವುದಿಲ್ಲ. ತಂದೆಯಾದವನು ಬೆಳಿಗ್ಗೆಯಿಂದ ಸಂಜೆಯವರೆಗೆ ಕೆಲಸದ ನೆಪದಲ್ಲಿ ಕಣ್ಮರೆಯಾಗಿ ಹೋಗಿ ಬಿಡುತ್ತಾನೆ. ಮಗು ತಂದೆಯನ್ನು ನೋಡುವ ಸಂದರ್ಭಗಳೇ ಅಪರೂಪ. ಏಕೆಂದರೆ ಮಗು ಏಳುವ ಮೊದಲೇ ಮನೆ

ಬಿಟ್ಟು ಕೆಲಸಕ್ಕೆ ತೆರಳಿದವನು ಮತ್ತೆ ಹಿಂದಿರುಗುವುದು ಮಗುಮಲಗಿದ ಮೇಲೆ ತಡರಾತ್ರಿಯಲ್ಲಿ. ಕೆಲಸದ ಒತ್ತಡ ಅವನಿಗಿದೆ. ಒಮ್ಮೊಮ್ಮೆ ರಜಾದಿನಗಳಲ್ಲಿ ಕಣ್ಣಿಗೆ ಕಂಡು ಕೆಮ್ಮುತ್ತಾ ಕುಳಿತಿರುವ ಪ್ರಾಣಿಯಂತೆ ಗೋಚರಿಸುತ್ತಾನೆ.

7.ಮಗು ಕಲಿತ ವಿದ್ಯೆಗಳಾವುವು?

ಮಗು ಕಲಿತ ವಿದ್ಯೆಗಳು ಶಾಲೆ ಕಾಲೇಜುಗಳು ಕಲಿಸಿದ್ದು, ದಾರಿ ಬದಿ ನೂರಾರು ಜಾಹೀರಾತುಗಳು ತಲೆಗೆ ತುರುಕಿದ್ದು, ರೇಡಿಯೋ ಸಿಲೋನ್ ವ್ಯಾಪಾರ ವಿಭಾಗ ಶಿಫಾರಸು ಮಾಡಿದ್ದು. ಇದರ ಜೊತೆಗೆ ಬಸ್ ಸ್ಟಾಪಿನಲ್ಲಿ ನಿಂತ ಬಣ್ಣಗಳ ಕಡೆಗೆ ಕಣ್ಣಾಡಿಸುವುದು.

8.ಮುಂಬೈನ ಅವಸರದ ಜೀವನಚಿತ್ರಕ್ಕೆ ಎರಡು ಉದಾಹರಣೆ ನೀಡಿ.

ಬೆಳಿಗ್ಗೆ ಎದ್ದರೆ ಬಟ್ಟೆಯಲ್ಲಿ ಮೈ ತುರುಕಿ ಓಡುವುದು, ರೈಲನ್ನೋ, ಬಸ್ಸನ್ನೋ ಹಿಡಿಯುವುದು. ಯಾರದೋ ಕೈ ಗೊಂಬೆಯಾಗಿ ಬದುಕುವುದು. ಸಾಯಂಕಾಲ ಸುಸ್ತಾಗಿ ಮನೆಗೆ ಬಂದು ತಣ್ಣನೆಯ ಕೂಳನ್ನು ತಿಂದು ಮಲಗುವುದು. ಇದು ಮುಂಬೈನ ಅವಸರದ ಜೀವನ.

**ಐದು–ಆರುವಾಕ್ಯಗಳಲ್ಲಿ ಉತ್ತರಿಸಿ:**

1. ಮುಂಬೈನ ಜಾತಕದಲ್ಲಿ ಮಕ್ಕಳ ಬಾಲ್ಯದ ಚಿತ್ರಣ ಹೇಗೆ ನಿರೂಪಿತವಾಗಿದೆ?

ಯಾಂತ್ರಿಕ ಬದುಕಿನ ಆವರಣಕ್ಕೆ ಮಗು ಎಳೆತನದಲ್ಲೇ ಸಿಲುಕಿ ನಲುಗುವ ಧಾರುಣತೆಯನ್ನು ಪ್ರಸ್ತುತ ಕವಿತೆ ಹಿಡಿದಿಟ್ಟಿದೆ. ಜಿ.ಎಸ್.ಶಿವರುದ್ರಪ್ಪನವರು ಮುಂಬೈ ಜಾತಕ ಪದ್ಯದಲ್ಲಿ ನಗರದ ಯಾಂತ್ರಿಕ ಬದುಕನ್ನು ಕುರಿತು ವಿವರಿಸಿದ್ದಾರೆ. ನಗರದ ವೇಗದ ಬದುಕಿನಂತೆ ಮಕ್ಕಳ ಬಾಲ್ಯವೂ ಸಹ ಧಾರುಣ ಸ್ಥಿತಿಯನ್ನು ತಲುಪಿದೆ. ಮಕ್ಕಳು ಬೆಳೆಯುವ ವಿಧಾನವೂ ಸಹ ಕೃತಕತೆಯನ್ನು ಪಡೆದುಕೊಂಡಿದೆ. ಮಗುವು ಆಸ್ಪತ್ರೆಯಲ್ಲಿ ಹುಟ್ಟಿ, ಬಸ್ಸು, ಟ್ರಾಂ, ಕಾರು, ಟ್ಯಾಕ್ಸಿ, ಎಲಿಕ್ಟ್ರಿಕ್ ಟ್ರೇನ್‌ಗಳಲ್ಲಿಯೇ ಮಗು ಬೆಳೆಯುತ್ತಾ ಹೋಗುತ್ತದೆ. ತಾಯಿಯ ಎದೆಹಾಲನ್ನೂ ಸಹ ಕುಡಿಯದೆ,

ಎಮ್ಮೆಯ ಹಾಲು, ಬಾಟ್ಲಿಯ ಹಾಲು, ಗ್ರೈಪ್ ವಾಟರ್, ಸಿರಪ್ ಮುಂತಾದವುಗಳಲ್ಲಿಯೇ ಮಗು ಹೊಟ್ಟೆ ತುಂಬಿಸಿಕೊಳ್ಳುತ್ತದೆ. ಬೆಳಗಿನಿಂದ ಸಂಜೆಯ ತನಕ ಲಕ್ಷಚಕ್ರ ಉರುಳುವಲ್ಲಿ ಅವಸರದ ಹೆಜ್ಜೆಯನ್ನು ಹಾಕುತ್ತಾ ಸರಿಯುತ್ತಿರುವ ಸಾವಿರಾರು ಜನಗಳನ್ನು ಕಾಣುತ್ತಾ ಮಗು ಬೆಳೆಯುತ್ತದೆ. ಇದೇ ರೀತಿಯ ವಾತಾವರಣದಲ್ಲಿ ಮಗು ಕ್ಯೂ ನಿಲ್ಲುವುದನ್ನು, ಫುಟ್ ಪಾತಿನಲ್ಲೇ ಸಂಚರಿಸುವುದನ್ನು, ಎಚ್ಚರಿಕೆಯಿಂದ ರಸ್ತೆ ದಾಟುವುದನ್ನು, ಎಲ್ಲಿಯೂ ನಿಲ್ಲದಂತೆ ಓಡುವುದನ್ನು, ಅವರಿವರನ್ನು ತಳ್ಳಿಕೊಂಡು ಮುನ್ನುಗುವುದನ್ನು ಎಲ್ಲಾದರೂ ಸರಿ ಬೇರೂರುವುದನ್ನು, ಹೀರುವುದನ್ನು ಕಲಿಯುತ್ತದೆ.

2. ತಂದೆ–ತಾಯಿಗಳು ಮಗುವಿಗೆ ಗೋಚರಿಸುವ ಬಗೆಯನ್ನು ವಿವರಿಸಿ.

ನಗರ ಸಂಸ್ಕೃತಿಯಲ್ಲಿ ಜೀವನದ ರಸಾನುಭವ ಅಸಾಧ್ಯ. ತಂದೆ–ತಾಯಿಯರ ಕರುಳಬಳ್ಳಿಯ ಪ್ರೀತಿ ಮಮತೆ ಆರೈಕೆಗಳಲ್ಲೂ ಕೃತಕವಾದ ಹೊಣೆಗಾರಿಕೆಯನ್ನು ಕವಿ ಮುಂಬೈ ಜಾತಕದಲ್ಲಿ ಚಿತ್ರಿಸಿದ್ದಾರೆ. ನಗರದಲ್ಲಿ ಮಕ್ಕಳೊಂದಿಗೆ ಪ್ರೀತಿ,ವಿಶ್ವಾಸ, ಕರುಳಬಳ್ಳಿಯ ಸಂಬಂಧಗಳೆಲ್ಲವೂ ಕಡಿಮೆಯಾಗಿ ಮಕ್ಕಳು ಬಾಲ್ಯದಲ್ಲಿಯೇ ಯಾಂತ್ರಿಕ ಬದುಕಿಗೆ ಸಿಕ್ಕಿ ನರಳುತ್ತದೆ. ಮಗುವಿನ ತಂದೆ–ತಾಯಿಯರು ತಮ್ಮಕೃತಕ ಜವಾಬ್ದಾರಿಯನ್ನು ನಿರ್ವಹಿಸುವ ಯಂತ್ರಗಳಂತಿದ್ದಾರೆ. ಮಕ್ಕಳೊಂದಿಗೆ ವಾತ್ಸಲ್ಯಭರಿತ ಒಡನಾಟದ ಚಿತ್ರಣವೇ ಇಲ್ಲಿಲ್ಲ. ತಾಯಿಇರುವ ಒಂದಿಂಚು ಕೋಣೆಯಲ್ಲಿ ಹೊರಲೋಕವನ್ನು ಪರಿಚಯಿಸುವ, ಎಚ್ಚರಿಕೆ ನೀಡುವ, ಸಾವಿರ ಗಾಲಿಗಳು ಹೊರಳುವ ರಸ್ತೆಯಂಚಿನಲ್ಲಿ ಕೈ ಹಿಡಿದು ನಡೆಸುವ ಕೆಲಸ ಮಾಡುತ್ತಾಳೆ. ಇನ್ನು ತಂದೆಯಾದವನು ಬೆಳಿಗ್ಗೆಯಿಂದ ಸಂಜೆಯವರೆಗೆ ಕೆಲಸದ ನೆಪದಲ್ಲಿ ಕಣ್ಮರೆಯಾಗಿ ಹೋಗಿ ಬಿಡುತ್ತಾನೆ. ಕೆಲಸದ ಒತ್ತಡ ಅವನಿಗಿದೆ. ಒಮ್ಮೊಮ್ಮೆ ರಜಾದಿನಗಳಲ್ಲಿ ಕಣ್ಣಿಗೆ ಕಂಡು ಕೆಮ್ಮುತ್ತಾ ಕುಳಿತಿರುವ ಪ್ರಾಣಿಯಂತೆ ಗೋಚರಿಸುತ್ತಾನೆ. ಈ ರೀತಿಯಲ್ಲಿ

ತಂದೆ–ತಾಯಿಗಳು ಮಗುವಿನೊಂದಿಗೆ ಯಾಂತ್ರಿಕ ಕರ್ತವ್ಯ ನಿಭಾಯಿಸುತ್ತಿದ್ದಾರೆ.

3. ಮಗು ಕಲಿತದ್ದನ್ನು ಮತ್ತು ವಿದ್ಯಾಭ್ಯಾಸ ಮಾಡುವ ವಿವರಗಳನ್ನು ವಿಶ್ಲೇಷಿಸಿ.

ಮುಂಬೈಯಲ್ಲಿ ಬೆಳಗಿನಿಂದ ಸಂಜೆಯ ತನಕ ಕಾಣುವುದು ರಸ್ತೆಯಲ್ಲಿ ಉರುಳುವ ಲಕ್ಷಚಕ್ರಗಳು. ಅಂತಹ ವಾಹನಗಳ ಮಧ್ಯೆ ಅವಸರದ ಹೆಜ್ಜೆಯನ್ನು ಹಾಕುತ್ತಾ ಸರಿಯುತ್ತಿರುವ ಸಾವಿರಾರು ಜನಗಳನ್ನು ಕಾಣುತ್ತಾ ಮಗು ಬೆಳೆಯುತ್ತದೆ. ಈ ವಾತಾವರಣದಲ್ಲಿ ಮಗು ಕ್ಯೂ ನಿಲ್ಲುವುದನ್ನು, ಫುಟ್ ಪಾತಿನಲ್ಲೇ ಸಂಚರಿಸುವುದನ್ನು, ಎಚ್ಚರಿಕೆಯಿಂದ ರಸ್ತೆ ದಾಟುವುದನ್ನು, ಎಲ್ಲಿಯೂ ನಿಲ್ಲದಂತೆ ಓಡುವುದನ್ನು, ಅವರಿವರನ್ನು ತಳ್ಳಿಕೊಂಡು ಮುನ್ನುಗುವುದನ್ನುಎಲ್ಲಾದರೂ ಸರಿ ಬೇರೂರುವುದನ್ನು, ಹೀರುವುದನ್ನು ಕಲಿಯುತ್ತದೆ. ಮಗು ಕಲಿತ ವಿದ್ಯೆಗಳು ಶಾಲೆ ಕಾಲೇಜುಗಳು ಕಲಿಸಿದ್ದು, ದಾರಿ ಬದಿ ನೂರಾರು ಜಾಹೀರಾತುಗಳನ್ನು ನೋಡಿ ಅವುಗಳನ್ನು ತಲೆಗೆ ತುರುಕಿಸಿಕೊಳ್ಳುತ್ತದೆ. ರೇಡಿಯೋ ಸಿಲೋನ್ ವ್ಯಾಪಾರ ವಿಭಾ ಶಿಫಾರಸು ಮಾಡಿದ್ದನ್ನು ಕಲಿಯುತ್ತದೆ. ಇದರ ಜೊತೆಗೆ ತಾನಾಗಿ ಕಲಿತದ್ದು ಬಸ್ ಸ್ಟಾಪಿನಲಿ ನಿಂತ ಬಣ್ಣಗಳ ಕಡೆಗೆ ಕಣ್ಣಾಡಿಸುವುದು. ಸ್ವಂತವಾಗಿ ಕಲಿಯುವುದು ಕಡಿಮೆಯೇ. ಇತರರ ಕೈ ಗೊಂಬೆಯಾಗಿ ಬಾಳುತ್ತದೆ.

4 ನಗರ ಜೀವನದ ಯಾಂತ್ರಿಕ ವಿವರಗಳು ಕವಿತೆಯಲ್ಲಿ ಹೇಗೆ ಚಿತ್ರಿತಗೊಂಡಿದೆ? ವಿವರಿಸಿ.

ನಗರಗಳಲ್ಲಿ ವಾಸಿಸುವವರ ಅತಂತ್ರ ಸ್ಥಿತಿ ಮರುಕ ಹುಟ್ಟಿಸುವಂಥದ್ದು. ಇಂಥಹ ನಗರಗಳಲ್ಲಿ ಹುಟ್ಟುವ ಮಕ್ಕಳು ಕಣ್ತೆರೆದಾಗ ಕಾಣುವುದು ಅವಸರದಿಂದ ಸರಿಯುವ ವಾಹನಗಳನ್ನು ಮಾತ್ರ. ಮಕ್ಕಳು ಬಾಲ್ಯಾವಸ್ಥೆಯನು ಹೆತ್ತವರೊಂದಿಗೆ, ಒಡಹುಟ್ಟಿದವರೊಂದಿಗೆ ಸಮೃದ್ಧಗೊಳಿಸಿಕೊಳ್ಳುವ ಅವಕಾಶದಿಂದ ವಂಚಿತರು. ತಾಯಿಯ

ಎದೆಹಾಲನ್ನೂ ಸಹ ಕುಡಿಯದೆ, ಎಮ್ಮೆಯ ಹಾಲು, ಬಾಟ್ಲಿಯ ಹಾಲು, ಗ್ರೈಪ್ ವಾಟರ್, ಸಿರಪ್ ಮುಂತಾದವುಗಳಲ್ಲಿಯೇ ಮಗು ಹೊಟ್ಟೆ ತುಂಬಿಸಿಕೊಳ್ಳುತ್ತದೆ. ಬೆಳಗಿನಿಂದ ಸಂಜೆಯ ತನಕ ಲಕ್ಷಚಕ್ರ ಉರುಳುವಲ್ಲಿ ಅವಸರದ ಹೆಜ್ಜೆಯನ್ನು ಹಾಕುತ್ತಾ ಸರಿಯುತ್ತಿರುವ ಸಾವಿರಾರು ಜನಗಳನ್ನು ಕಾಣುತ್ತಾ ಮಗು ಬೆಳೆಯುತ್ತದೆ. ಈ ವಾತಾವರಣದಲ್ಲಿ ಮಗು ಕ್ಯೂ ನಿಲ್ಲುವುದನ್ನು, ಫುಟ್ ಪಾತಿನಲ್ಲೇ ಸಂಚರಿಸುವುದನ್ನು, ಎಚ್ಚರಿಕೆಯಿಂದ ರಸ್ತೆ ದಾಟುವುದನ್ನು, ಎಲ್ಲಿಯೂ ನಿಲ್ಲದಂತೆ ಓಡುವುದನ್ನು, ಅವರಿವರನ್ನು ತಳ್ಳಿಕೊಂಡು ಮುನ್ನುಗುವುದನ್ನು ಎಲ್ಲಾದರೂ ಸರಿ ಬೇರೂರುವುದನ್ನು, ಹೀರುವುದನ್ನು ಕಲಿಯುತ್ತದೆ. ನಗರ ಸಂಸ್ಕೃತಿಯಲ್ಲಿ ಜೀವನದ ರಸಾನುಭವ ಅಸಾಧ್ಯ.ತಂದೆ–ತಾಯಿಯರ ಕರುಳಬಳ್ಳಿಯ ಪ್ರೀತಿ ಮಮತೆ ಆರೈಕೆಗಳಲ್ಲೂ ಕೃತಕವಾದ ಹೊಣೆಗಾರಿಕೆಯನ್ನು ಕವಿ ಮುಂಬೈ ಜಾತಕದಲ್ಲಿ ಚಿತ್ರಿಸಿದ್ದಾರೆ. ನಗರದಲ್ಲಿ ಮಕ್ಕಳೊಂದಿಗೆ ಪ್ರೀತಿ,ವಿಶ್ವಾಸ, ಕರುಳಬಳ್ಳಿಯ ಸಂಬಂಧಗಳೆಲ್ಲವೂ ಕಡಿಮೆಯಾಗಿ ಮಕ್ಕಳು ಬಾಲ್ಯದಲ್ಲಿಯೇ ಯಾಂತ್ರಿಕ ಬದುಕಿಗೆ ಸಿಕ್ಕಿ ನರಳುತ್ತದೆ. ಮಗುವಿನ ತಂದೆ–ತಾಯಿಯರು ತಮ್ಮ ಕೃತಕ ಜವಾಬ್ದಾರಿಯನ್ನು ನಿರ್ವಹಿಸುವ ಯಂತ್ರಗಳಂತಿದ್ದಾರೆ. ಮಕ್ಕಳೊಂದಿಗೆ ವಾತ್ಸಲ್ಯಭರಿತ ಒಡನಾಟದ ಚಿತ್ರಣವೇ ಇಲ್ಲಿಲ್ಲ. ತಾಯಿಇರುವ ಒಂದಿಂಚು ಕೋಣೆಯಲ್ಲಿ ಹೊರಲೋಕವನ್ನು ಪರಿಚಯಿಸುವ, ಎಚ್ಚರಿಕೆ ನೀಡುವ, ಸಾವಿರ ಗಾಲಿಗಳು ಹೊರಳುವ ರಸ್ತೆಯಂಚಿನಲ್ಲಿ ಕೈ ಹಿಡಿದು ನಡೆಸುವ ಕೆಲಸ ಮಾಡುತ್ತಾಳೆ. ಇನ್ನು ತಂದೆಯಾದವನು ಬೆಳಿಗ್ಗೆಯಿಂದ ಸಂಜೆಯವರೆಗೆ ಕೆಲಸದ ನೆಪದಲ್ಲಿ ಕಣ್ಮರೆಯಾಗಿ ಹೋಗಿ ಬಿಡುತ್ತಾನೆ. ಕೆಲಸದ ಒತ್ತಡ ಅವನಿಗಿದೆ. ಒಮ್ಮೊಮ್ಮೆ ರಜಾದಿನಗಳಲ್ಲಿ ಕಣ್ಣಿಗೆ ಕಂಡು ಕೆಮ್ಮುತ್ತಾ ಕುಳಿತಿರುವ ಪ್ರಾಣಿಯಂತೆ ಗೋಚರಿಸುತ್ತಾನೆ. ಈ ರೀತಿಯಲ್ಲಿ ತಂದೆ–ತಾಯಿಗಳು ಮಗುವಿನೊಂದಿಗೆ ಯಾಂತ್ರಿಕ ಕರ್ತವ್ಯ ನಿಭಾಯಿಸುತ್ತಿದ್ದಾರೆ. ಮಗು ಕಲಿತ ವಿದ್ಯೆಗಳು ಶಾಲೆ ಕಾಲೇಜುಗಳು ಕಲಿಸಿದ್ದು, ದಾರಿ ಬದಿ ನೂರಾರು ಜಾಹೀರಾತುಗಳನ್ನು

ನೋಡಿ ಅವುಗಳನ್ನು ತಲೆಗೆ ತುರುಕಿಸಿಕೊಳ್ಳುತ್ತದೆ., ರೇಡಿಯೋ ಸಿಲೋನ್ ವ್ಯಾಪಾರ ವಿಭಾಗ ಶಿಫಾರಸು ಮಾಡಿದ್ದನ್ನು ಕಲಿಯುತ್ತದೆ. ಇದರ ಜೊತೆಗೆ ತಾನಾಗಿ ಕಲಿತದ್ದು ಬಸ್ ಸ್ಟಾಪಿನಲ್ಲಿ ನಿಂತ ಬಣ್ಣಗಳ ಕಡೆಗೆ ಕಣ್ಣಾಡಿಸುವುದು. ಸ್ವಂತವಾಗಿ ಕಲಿಯುವುದು ಕಡಿಮೆಯೇ. ಇತರರ ಕೈ ಗೊಂಬೆಯಾಗಿ ಬಾಳುತ್ತದೆ. ಬೆಳಿಗ್ಗೆ ಎದ್ದರೆ ಬಟ್ಟೆಯಲ್ಲಿ ಮೈ ತುರುಕಿ ಓಡುವುದು, ರೈಲನ್ನೋ, ಬಸ್ಸನ್ನೋ ಹಿಡಿಯುವುದು. ಯಾರದೋ ಕೈ ಗೊಂಬೆಯಾಗಿ ಬದುಕುವುದು. ಸಾಯಂಕಾಲ ಸುಸ್ತಾಗಿ ಮನೆಗೆ ಬಂದು ತಣ್ಣನೆಯ ಕೂಳನ್ನು ತಿಂದು ಮಲಗುವುದು ನಗರ ಜೀವನದ ಯಾಂತ್ರಿಕ ವಿವರಗಳು.

===0===

# ಶಿಲುಬೆ ಏರಿದ್ದಾನೆ

**ಕೆ.ಎಸ್. ನಿಸಾರ್ ಅಹಮದ್**

**ಸಾರಾಂಶ:**

ಶಿಲುಬೆ ಏರಿದ್ದಾನೆ ಕವನ ಜೀಸಸ್ ಬಗ್ಗೆ 'ಗೋವಿಂದ ಪೈ'ಯವರ 'ಗೊಲ್ಗೊಥಾ' ಕವನದ ನಂತರ ಬಂದ ವಿಶಿಷ್ಟ ಕವನ. ಜೀಸಸ್‌ನ ವ್ಯಕ್ತಿತ್ವ, ಆದರ್ಶಗಳನ್ನು ಅಪೂರ್ವವಾಗಿ ಚಿತ್ರಿಸಿರುವ ಕವಿ ಆ ಕಾಲದ ಕ್ರೌರ್ಯ ಈ ಕಾಲದಲ್ಲೂ ಹೊಸರೂಪದಲ್ಲಿ ಮುಂದುವರೆಯುತ್ತಿರುವ ದುರಂತವನ್ನು ಕಟ್ಟಿಕೊಟ್ಟಿದ್ದಾರೆ. ಜೀಸಸ್‌ನ ಸಾವನ್ನು ವಿಷಾದದಿಂದ ನೋಡುವ ಕವಿ, ಆತ ಇಂದು ಅಸಂಖ್ಯ ಹೃದಯಗಳಲ್ಲಿ ಮಾನವತೆಯ ಕಿಡಿಯನ್ನು ಹಚ್ಚಿಹೋಗುವ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿದ್ದಾರೆ.

ಕವಿತೆಯ ಆರಂಭದಲ್ಲಿ ಕ್ರಿಸ್ಮಸ್ ಮನೆಗೆ ಆಗಮಿಸುತ್ತಿರುವುದರ ವಿವರಣೆಯನ್ನು ಕೊಡುವ ಕವಿ ಕ್ರಿಸ್ಮಸ್ ಮನೆಗೆ ಕೇಕು, ಚಳಿ, ನಕ್ಷತ್ರ ದೀಪ, ಪ್ಲಾಸ್ಟಿಕ್‌ನ ನಕಲಿ ಗಿಡ, ಮಂಜಿನ ಹತ್ತಿಯಿಂದ ಕಂಗೊಳಿಸುತ್ತಿದೆ. ಇಲ್ಲೆಲ್ಲ ನಕಲಿತನ ಇದ್ದರೂ ಮೊಣಕಾಲಲ್ಲಿ ಮೋಂಬತ್ತಿ ಹಿಡಿದು ಕುಳಿತಿರುವ ಹುಡುಗಿಯ ಭಕ್ತಿ ಮಾತ್ರ ಅಸಲಿ ಎನ್ನುತ್ತಾರೆ ಕವಿ.

ಮನುಕುಲಕ್ಕೆ ಒಳ್ಳೆಯದನ್ನು ಬಯಸಿದ ದೇವಮಾನವ ಜೀಸಸ್. ಆದರೆ ಜನ ಆತನ ಒಳ್ಳೆಯತನವನ್ನು ಅರಿಯದಾದರು. ಕೊಲೆಗಡುಕ ಬರಬ್ಬನ ಪರ ವಕಾಲತ್ತು ನಡೆಸಿ ಎಡಕ್ಕೊಬ್ಬ ಬಲಕ್ಕೊಬ್ಬ ಕಳ್ಳನನ್ನು

ಯೇಸುವಿನ ಅಕ್ಕಪಕ್ಕದಲ್ಲಿ ಶಿಲುಬೆಗೇರಿಸಿ ಅವಮಾನ ಮಾಡಿದರು. ಅಂತಹ ಸ್ಥಿತಿಯಲ್ಲೂ ಆತ ಉದಾತ್ತ ಗುಣವನ್ನೇ ಪ್ರದರ್ಶಿಸಿ 'ದೇವರೇ ಇವರು ಏನು ಮಾಡುತ್ತಿರುವರೆಂದು ಅವರಿಗೆ ತಿಳಿಯುತ್ತಿಲ್ಲ ಅವರನ್ನು ಕ್ಷಮಿಸು' ಎನ್ನುವ ಆತನ ಮಾತುಗಳು ಅವನ ವಿಶಿಷ್ಟ ವ್ಯಕ್ತಿತ್ವವನ್ನು ತಿಳಿಸುತ್ತದೆ.

ಅಂದು ಯೇಸುವನ್ನು ಶಿಲುಬೆಗೇರಿಸಿ ಜೀವಂತ ಇರುವಾಗಲೇ ಮೊಳೆಗಳನ್ನು ಆತನ ದೇಹದ ಅಂಗಾಂಗಗಳಿಗೆ ಬಡಿಯಲಾಯಿತು.

ಜೊತೆಗೆ ಅವಮಾನ ಮಾಡುವ ನೆಲೆಯಲ್ಲಿ ಮುಳ್ಳಿನ ಕಿರೀಟವನ್ನೂ ಧರಿಸಲಾಯಿತು. ಆದರೆ ಹಿಂದೆ ನಡೆದಂತಹ ಈ ಎಲ್ಲಾ ಕ್ರೌರ್ಯಗಳು ಇನ್ನೂ ಕಾಲ ರಾಯನ ಗುಜರಿ ಸೇರಿಲ್ಲ, ಬದಲಾಗಿ ವೇಷ ಮರೆಸಿಕೊಂಡು ರೈಫಲ್ಲು, ಟ್ಯಾಂಕು, ಬಾಂಬು, ಗ್ರನೇಡು ಎಂಬ ಹೊಸ ರೂಪ ತಾಳಿವೆ.

ನಿಮ್ಮ ಸಾಮ್ರಾಜ್ಯ ಇರುವ ತನಕ ನಿಮ್ಮ ಕ್ರೋಧ, ತಿಳಿಗೇಡಿತನಕ್ಕೆ ನಾನು ತುಪ್ಪವಾಗುತ್ತೇನೆ. ಬಂದೇ ಬರುತ್ತದೆ ದೈವೀರಾಜ್ಯ ಎನ್ನುವಂತೆ, ಇಗರ್ಜಿ ಮಸಜೀದು ದೇವಸ್ಥಾನ ಮಠಗಳಲ್ಲಿ ಮತಮತದ ಮತಿರಹಿತ ಹಟಗಳಲ್ಲಿ ಕೋರ್ಟು, ಕಾರ್ಖಾನೆ, ಠಾಣೆ ಠಾಣೆಗಳಲ್ಲಿ ಕಣ್ಣಿನ ಬೆಳಕನ್ನು ಕಿತ್ತೆಸೆದು ಕುರುಡುಗೊಳಿಸುವ ಬಂಧಿಖಾನೆಗಳಲ್ಲಿ, ಆಸ್ಪತ್ರೆಗಳ ಕೋಣೆ ಕೋಣೆಗಳಲ್ಲಿ ತಿಂಗಳಿಗೆ ಒಮ್ಮೆಯೂ ಹಣತೆ ಹೊತ್ತಿಸದ ದಲಿತವಾಸದ ಸೋಗೆ ಬಿಲಗಳಲ್ಲಿ ಶೋಷಣೆ, ದಬ್ಬಾಳಿಕೆ, ಕ್ರೂರತೆಗಳನ್ನು ನೋಡುತ್ತಾ, ಶೋಷಿತರ ಕಂಬನಿಯನೊರೆಸಿ, ಅಸಂಖ್ಯ ಕ್ರಿಸ್ಮಸ್ಸುಗಳ ಹರಸಿ, ಸತ್ಯಕ್ಕೆ ಹೊಸ ಕವಲುಗಳನ್ನು ತೆರೆಸಿ ಜೀಸಸ್ ಶಿಲುಬೆಯೇರಿದ್ದಾನೆ.

**ಸಾಂದರ್ಭಿಕ ವಿವರಣೆ ಬಯಸುವ ವಾಕ್ಯಗಳು :**

1. ಯಾತನೆಗೂ ನಲ್ವಾತನೇ ನುಡಿವ ಮುಖಮುದ್ರೆ.

ಆಯ್ಕೆ: ಈ ವಾಕ್ಯವನ್ನು 'ಕೆ.ಎಸ್.ನಿಸಾರ್ ಅಹಮದ್'ರವರು ರಚಿಸಿದ 'ಶಿಲುಬೆ ಏರಿದ್ದಾನೆ' ಎಂಬ ಕವನದಿಂದ ಆರಿಸಲಾಗಿದೆ.

ಸಂದರ್ಭ: ಶಿಲುಬೆ ಏರಿದ ಯೇಸುವಿನ ವಿಶೇಷ ಸಹನಾ ಗುಣವನ್ನು ವಿವರಿಸುವ ವಾಕ್ಯವಿದು.

ವಿವರಣೆ: ಕವಿಯು ಆರಂಭದಲ್ಲಿ ಕ್ರಿಸ್ಮಸ್ ಆಗಮಿಸಿರುವುದರ ಬಗ್ಗೆ ವಿವರಿಸುತ್ತಾ, ಗೋಡೆಯ ಮೇಲೆ ಶಿಲುಬೆ ಏರಿದ ಜೀಸಸ್‌ನ ಪ್ರತಿಬಿಂಬವಿದೆ. ಆ ಬಿಂಬದಲ್ಲಿ ಅವನ ಶಿರಬಾಗಿದೆ, ಕುತ್ತಿಗೆಯಲ್ಲಿ ಒಂದು ನರ ಉಬ್ಬಿಕೊಂಡಿದೆ. ಅಂತಹ ನೋವಿನ ಸಂದರ್ಭದಲ್ಲಿಯೂ ಎಲ್ಲರಿಗೂ ಒಳ್ಳೆಯದನ್ನು ಬಯಸುವಂತೆ ಕಾಣುತ್ತಿದ್ದ ಆತನ ಮುಖ ಮುದ್ರೆ ಕವಿಯ ಗಮನವನ್ನು ಸೆಳೆದಿದೆ. ತನ್ನನ್ನು ಶಿಲುಬೆಗೇರಿಸಿದರೂ ಎಲ್ಲರಿಗೂ ಒಳ್ಳೆಯದಾಗಲಿ ಎಂದು ಬಯಸುವ ಯೇಸುವಿನ ಒಳ್ಳೆಯತನವನ್ನು ಕವಿ ವಿವರಿಸುತ್ತಾ ಈ ಮೇಲಿನಂತೆ ಹೇಳುತ್ತಾರೆ.

2. ಮನ್ನಿಸಲಿ ನಿಮ್ಮನ್ನ ಆ ದೇವರೆ!

ಆಯ್ಕೆ: ಈ ವಾಕ್ಯವನ್ನು 'ಕೆ.ಎಸ್.ನಿಸಾರ್ ಅಹಮದ್'ರವರು ರಚಿಸಿದ 'ಶಿಲುಬೆ ಏರಿದ್ದಾನೆ' ಎಂಬ ಕವನದಿಂದ ಆರಿಸಲಾಗಿದೆ.

ಸಂದರ್ಭ: ಯೇಸುವಿನ ಕ್ಷಮೆಯ ಗುಣವನ್ನು ವಿವರಿಸುವ ಸಾಲಿದು.

ವಿವರಣೆ: ಯೇಸುವನ್ನು ಶಿಲುಬೆಗೇರಿಸಿದ ಸಂದರ್ಭವನ್ನು ನೆನಪಿಸುತ್ತಾ ಕವಿ ವಿಷಾದವನ್ನು ವ್ಯಕ್ತಪಡಿಸುತ್ತಾರೆ. ಮನುಕುಲದ ಒಳ್ಳೆಯದನ್ನು ಬಯಸಿದ ದೇವಮಾನವನ ಒಳ ಮನಸ್ಸನ್ನು ಅರಿಯದ ಜನರು, ಕೊಲೆಗಡುಕ ಬರಬ್ಬನ ಪರವ ಕಾಲತ್ತು ನಡೆಸಿದರು. ಎಡಕ್ಕೊಬ್ಬ ಬಲಕ್ಕೊಬ್ಬ ಕಳ್ಳನನ್ನು ಯೇಸುವಿನ ಅಕ್ಕಪಕ್ಕದಲ್ಲಿ ಶಿಲುಬೆಗೇರಿಸಿ ಅವಮಾನ ಮಾಡಿದರು. ಅಂತಹ ಸ್ಥಿತಿಯಲ್ಲೂ ಆತ ಉದಾತ್ತ ಗುಣವನ್ನೇ ಪ್ರದರ್ಶಿಸಿ 'ದೇವರೇ ಇವರು ಏನು ಮಾಡುತ್ತಿರುವರೆಂದು ಅವರಿಗೆ ತಿಳಿಯುತ್ತಿಲ್ಲ ಅವರನ್ನು ಕ್ಷಮಿಸು' ಎನ್ನುವ ಆತನ ಗುಣವನ್ನು ಕವಿ ಸ್ಮರಿಸುವಾಗ ಈ ಮೇಲಿನ ಮಾತು ಬಂದಿದೆ.

3. ವೇಷ ಮರೆಸಿವೆ ಅಷ್ಟೆ–ಈ ಎಲ್ಲ ಕೇಡುಗಳು.

ಆಯ್ಕೆ: ಈ ವಾಕ್ಯವನ್ನು 'ಕೆ.ಎಸ್.ನಿಸಾರ್ಅಹಮದ್'ರವರು ರಚಿಸಿದ 'ಶಿಲುಬೆ ಏರಿದ್ದಾನೆ' ಎಂಬ ಕವನದಿಂದ ಆರಿಸಲಾಗಿದೆ.

ಸಂದರ್ಭ: ಕಾಲ ಗತಿಸಿದರೂ ಯೇಸುವಿನ ಕಾಲದಲ್ಲಿದ್ದ ಹಿಂಸೆ ಕೊನೆಗೊಳ್ಳದೆ ಬೇರೆರೂಪ ಪಡೆದ ವಿವರಣೆ ಇಲ್ಲಿದೆ.

ವಿವರಣೆ: ಅಂದು ಯೇಸುವನ್ನು ಶಿಲುಬೆಗೇರಿಸಿ ಜೀವಂತ ಇರುವಾಗಲೇ ಮೊಳೆಗಳನ್ನು ಆತನ ದೇಹದ ಅಂಗಾಂಗಳಿಗೆ ಬಡಿಯಲಾಯಿತು. ಜೊತೆಗೆ ಅವಮಾನ ಮಾಡುವ ನೆಲೆಯಲ್ಲಿ ಮುಳ್ಳಿನ ಕಿರೀಟವನ್ನೂ ಧರಿಸಲಾಯಿತು. ಆದರೆ ಹಿಂದೆ ನಡೆದಂತಹ ಈ ಎಲ್ಲಾ ಕ್ರೌರ್ಯಗಳು ಇನ್ನೂ ಕಾಲ ರಾಯಿನ ಗುಜರಿ ಸೇರಿಲ್ಲ, ಬದಲಾಗಿ ವೇಷ ಮರೆಸಿಕೊಂಡು ರೈಫಲ್ಲು, ಟ್ಯಾಂಕು, ಬಾಂಬು, ಗ್ರನೇಡು ಎಂಬ ಹೊಸ ರೂಪ ತಾಳಿವೆ. ನಮ್ಮದೇ ಬಲಿಷ್ಠ ಕೈಗಳು, ಎದೆಯಾಳದ ಮುಯ್ಯಿಗಳನ್ನು ಮುಂದಿಟ್ಟುಕೊಂಡು ಸೆಣಸುತ್ತಿದ್ದೇವೆ ಎನ್ನುವಾಗ ಈ ಮಾತು ಬಂದಿದೆ.

4. ಬಂದೇ ತೀರುತ್ತದೆ ದೈವೀರಾಜ್ಯ.

ಆಯ್ಕೆ: ಈ ವಾಕ್ಯವನ್ನು 'ಕೆ.ಎಸ್.ನಿಸಾರ್ಅಹಮದ್'ರವರು ರಚಿಸಿದ 'ಶಿಲುಬೆ ಏರಿದ್ದಾನೆ' ಎಂಬ ಕವನದಿಂದ ಆರಿಸಲಾಗಿದೆ.

ಸಂದರ್ಭ: ಆಶಾವಾದವನ್ನು ಹೊರಹೊಮ್ಮಿಸುವ ವಾಕ್ಯ ಇದಾಗಿದೆ.

ವಿವರಣೆ : ಯೇಸುವು ಶಿಲುಬೆಯೇರಿದ್ದರೂ, ಮತ್ತೆಆತ ಉದಯಿಸಿ ಬಂದು ದೈವೀರಾಜ್ಯ ತರುವನೆಂಬ ನಂಬಿಕೆ ಕವಿಯದಾಗಿದೆ. ಅದನ್ನು ಕವಿ ಹೀಗೆ ವಿವರಿಸುತ್ತಾರೆ. ನಿಮ್ಮ ಸಾಮ್ರಾಜ್ಯ ಇರುವ ತನಕ ನಿಮ್ಮ ಕ್ರೋಧ, ತಿಳಿಗೇಡಿತನಕ್ಕೆ ನಾನು ಆಜ್ಯವಾಗುತ್ತೇನೆ. ಬಂದೇ ಬರುತ್ತದೆ ದೈವೀರಾಜ್ಯ ಶೋಷಿತರ ಕಂಬನಿಯ ನೊರೆಸಿ, ಸತ್ಯಕ್ಕೆ ಹೊಸ ಕವಲುಗಳನ್ನು ತೆರೆಸಿ ಜೀಸಸ್ ಶಿಲುಬೆಯೇರಿದ್ದಾನೆ.

5. ದಿನನಿತ್ಯ ಶಿಲುಬೆ ಏರಿದ್ದಾನೆ ಜೀಸಸ್

ಆಯ್ಕೆ: ಈ ವಾಕ್ಯವನ್ನು 'ಕೆ.ಎಸ್.ನಿಸಾರ್ಅಹಮದ್'ರವರು ರಚಿಸಿದ 'ಶಿಲುಬೆ ಏರಿದ್ದಾನೆ' ಎಂಬ ಕವನದಿಂದ ಆರಿಸಲಾಗಿದೆ.

ಸಂದರ್ಭ: ಶೋಷಿತರ ಕಂಬನಿಯನ್ನೊರೆಸುವ ಆಶಾಕಿರಣ ಯೇಸು ಎಂಬ ಆಶಯವನ್ನು ವ್ಯಕ್ತಪಡಿಸುವ ಸಾಲು ಇದಾಗಿದೆ.

ವಿವರಣೆ: ಅಂದುಕ್ರೋಧ ತಿಳಿಗೇಡಿತನಕ್ಕೆ ಜೀಸಸ್ ಶಿಲುಬೆ ಏರಿದನು.ಆದರೆ ಇಂದಿನ ಕಾಲಕ್ಕೆ ಮತಧರ್ಮಗಳ ಕಿತ್ತಾಟಗಳನ್ನು ನೋಡುತ್ತಾ, ಕೋರ್ಟು, ಕಾರ್ಖಾನೆ, ಠಾಣೆ ಠಾಣೆಗಳಲ್ಲಿ ಕಣ್ಣಿನ ಬೆಳಕನ್ನು ಕಿತ್ತೆಸೆದು ಕುರುಡುಗೊಳಿಸುವ ಬಂದೀಖಾನೆಗಳಲ್ಲಿ, ಆಸ್ಪತ್ರೆಗಳ ಕೋಣೆ ಕೋಣೆಗಳಲ್ಲಿ ತಿಂಗಳಿಗೆ ಒಮ್ಮೆಯೂ ಹಣತೆ ಹೊತ್ತಿಸದ ದಲಿತವಾಸದ ಸೋಗೆ ಬಿಲಗಳಲ್ಲಿ ಶೋಷಣೆ, ದಬ್ಬಾಳಿಕೆ, ಕ್ರೂರತೆಗಳನ್ನು ನೋಡುತ್ತಾ, ಮರುಗುತ್ತಾ ನಿತ್ಯವೂ ಶಿಲುಬೆ ಏರಿದ್ದಾನೆ. ಇಂದಿನ ಸಮಾಜ ಸಾಗುತ್ತಿರುವ ಪರಿಯನ್ನು ವಿವರಿಸುತ್ತಾ, ಶೋಷಿತರ ಕಂಬನಿಗಳನ್ನು ಒರೆಸುವ ಆಶಾಕಿರಣ ಯೇಸುವಾಗುತ್ತಾನೆ ಎಂಬ ಆಶಯ ಇಲ್ಲಿದೆ.

**ಒಂದು ಅಂಕದ ಪ್ರಶ್ನೆಗಳು :**

1. ಕ್ರಿಸ್ಮಸ್ ಪ್ಲಾಸ್ಟಿಕ್ ನಕಲಿನ ಕುಬ್ಜತೆಗೆ ಯಾವ ರೂಪ ಕರುಣಿಸಿದೆ?

ಕ್ರಿಸ್ಮಸ್ ಪ್ಲಾಸ್ಟಿಕ್ ನಕಲಿನ ಕುಬ್ಜತೆಗೆ ಗಿಡದ ರೂಪ ಕರುಣಿಸಿದೆ.

2. ಕ್ರಿಸ್ಮಸ್ ಸಂದರ್ಭದಲ್ಲಿ ಹತ್ತಿ ಯಾವ ಕೆಲಸ ಮಾಡಿದೆ?

ಕ್ರಿಸ್ಮಸ್ ಸಂದರ್ಭದಲ್ಲಿ ಹತ್ತಿ ಮಂಜಿನ ಕೆಲಸ ಮಾಡಿದೆ.

3. ಶಿಲುಬೆಯೇರಿದವರು ಯಾರು?

ಶಿಲುಬೆಯೇರಿದವರು ಜೀಸಸ್.

4. ಜೀಸಸ್‌ನ ಮುಖಮುದ್ರೆ ಏನನ್ನು ನುಡಿವಂತಿದೆ?

ಜೀಸಸ್‌ನ ಮುಖಮುದ್ರೆ ಯಾತನೆಯಲ್ಲಿಯೂ ಒಳ್ಳೆಯ ಮಾತು ನುಡಿವಂತಿದೆ.

5. ಜೀಸಸ್‌ನ ಶಿಲುಬೆಗೇರಿಸಿದವರು ಯಾರ ವಕಾಲತ್ತು ನಡೆಸಿದವರಾಗಿದ್ದಾರೆ?

ಜೀಸಸ್‌ನ ಶಿಲುಬೆಗೇರಿಸಿದವರು ಕೊಲೆಗಡುಕ ಬರಬ್ಬನ ಪರ ವಕಾಲತ್ತು ನಡೆಸಿದವರಾಗಿದ್ದಾರೆ.

6. ಏನು ಬಂದೇ ತಿರುತ್ತದೆ ಎಂಬ ನಂಬಿಕೆಯಲ್ಲಿ ಜೀಸಸ್ ಶಿಲುಬೆಗೇರಿದ್ದಾನೆ?

ದೈವೀರಾಜ್ಯ ಬಂದೇ ತಿರುತ್ತದೆ ಎಂಬ ನಂಬಿಕೆಯಲ್ಲಿ ಜೀಸಸ್ ಶಿಲುಬೆಗೇರಿದ್ದಾನೆ.

7. ಕವಿಯ ಪ್ರಕಾರ ತಿಂಗಳಿಗೊಂದು ಸಲವೂ ದೀಪಹಚ್ಚದ ಸ್ಥಳ ಯಾವುದು?

ಕವಿಯ ಪ್ರಕಾರ ತಿಂಗಳಿಗೊಂದು ಸಲವೂ ದೀಪಹಚ್ಚದ ಸ್ಥಳ ದಲಿತ ವಾಸದ ಸೋಗೆ ಬಿಲಗಳು.

8. ಯಾರ ಕಂಬನಿಯನ್ನೊರೆಸಿ ಜೀಸಸ್ ದಿನನಿತ್ಯ ಶಿಲುಬೆ ಏರಿದ್ದಾನೆ?

ಶೋಷಿತರ ಕಂಬನಿಯನ್ನೊರೆಸಿ ಜೀಸಸ್ ದಿನನಿತ್ಯ ಶಿಲುಬೆ ಏರಿದ್ದಾನೆ.

## ಎರಡು ಅಂಕಗಳ ಪ್ರಶ್ನೆಗಳು:

1. ಕ್ರಿಸ್ಮಸ್ ಮನೆಗೆ ಏನನ್ನು ಹೊತ್ತು ತಂದಿದೆ?

ಕ್ರಿಸ್ಮಸ್ ಮನೆಗೆ ಕೇಕು, ಚಳಿ, ನಕ್ಷತ್ರ ದೀಪ, ಪ್ಲಾಸ್ಟಿಕನ ನಕಲಿ ಗಿಡ, ಅದಕೆ ಮಂಜಿನ ಕೆಲಸ ಮಾಡಿದ ಹತ್ತಿ, ಇವೆಲ್ಲದರ ನಡುವೆ ಬೆಚ್ಚನೆಯ ಪ್ರಾರ್ಥನೆಗಳನ್ನು ತಂದಿದೆ.

2. ಶಿಲುಬೆಗೇರಿದ ಯೇಸುವಿನ ದೇಹ ಯಾರಿಗೆ, ಏನನ್ನು ಅನ್ನುವಂತಿದೆ?

ಶಿಲುಬೆಗೇರಿದ ಯೇಸುವಿನ ದೇಹ ತನ್ನನ್ನು ಶಿಲುಬೆಗೇರಿಸಿದವರೆ ಕೊಲೆಗಡುಕ ಬರಬ್ಬನ ವಕಾಲತ್ತು ನಡಿಸಿದವರೇ, ಎಡಕ್ಕೊಬ್ಬ ಬಲಕ್ಕೊಬ್ಬ ಕಳ್ಳನ ತೂಗಿ ಸನ್ಮಾನಿಸಿದವರೇ, ಮನ್ನಿಸಲಿ ನಿಮ್ಮನ್ನು ಆ ದೇವರೆ! ಎಂದು ಹೇಳುವಂತಿದೆ.

3. ಶಿಲುಬೆಗೇರಿಸಿದವರ ಗುಣಗಳು ಇಂದು ಯಾವ ವೇಷ ತಾಳಿವೆ?

ಶಿಲುಬೆಗೇರಿಸಿದವರ ಗುಣಗಳು ಕಾಲ ರಾಯನಗುಜರಿ ಸೇರಿಲ್ಲ, ಬದಲಾಗಿ ವೇಷ ಮರೆಸಿಕೊಂಡಿವೆ. ಆಧಿಕಾರದ ಬಲಿಷ್ಠ ಕೈಗಳು, ಎದೆಯಾಳದ ಮುಯ್ಯಿಗಳು ರೈಫಲ್ಲು, ಟ್ಯಾಂಕು, ಬಾಂಬು, ಗ್ರನೇಡು ಇವುಗಳು ದ್ವೇಷದ ಹೊಸ ರೂಪಗಳಾಗಿವೆ.

4. ಯಾವ ಸಂದೇಶವನ್ನು ನೀಡುವರೀತಿಯಲ್ಲಿ ಜೀಸಸ್ ಶಿಲುಬೆಯೇರಿದ್ದಾನೆ?

ನಿಮ್ಮ ಸಾಮ್ರಾಜ್ಯ ಇರುವ ತನಕ ನಿಮ್ಮ ಕ್ರೋಧ, ತಿಳಿಗೇಡಿತನಕ್ಕೆ ನಾನು ಆಜ್ಯವಾಗುತ್ತೇನೆ. ಬಂದೇ ಬರುತ್ತದೆ ದೈವೀರಾಜ್ಯ ಎನ್ನುವಂತೆ, ಶೋಷಿತರ ಕಂಬನಿಯನೊರೆಸಿ, ಸತ್ಯಕ್ಕೆ ಹೊಸ ಕವಲುಗಳನ್ನು ತೆರೆಸಿ ಜೀಸಸ್ ಶಿಲುಬೆಯೇರಿದ್ದಾನೆ.

**ನಾಲ್ಕು ಅಂಕಗಳ ಪ್ರಶ್ನೆಗಳು:**

1. ಶಿಲುಬೆಗೇರಿಸಿದ ಜೀಸಸ್‌ನ ದೇಹ ಏನನ್ನು ಹೇಳುವಂತಿದೆ? ವಿವರಿಸಿ.

ಶಿಲುಬೆ ಏರಿದ್ದಾನೆ ಎಂಬ ಕವನವು ಜೀಸಸನ ವ್ಯಕ್ತಿತ್ವ, ಆದರ್ಶಗಳನ್ನು ಅಪೂರ್ವವಾಗಿ ಚಿತ್ರಿಸಿದೆ. ಮನುಕುಲಕ್ಕೆ ಒಳ್ಳೆಯದನ್ನು ಬಯಸಿದ ದೇವಮಾನವ; ಆತನ ಒಳ್ಳೆಯ ಮನಸ್ಸನ್ನು ಅರಿಯಲಾರದ ಜನ, ಆತನ ಮರಣಕ್ಕೆ ಮುನ್ನುಡಿಯನ್ನು ಬರೆಯಲು ಮುಂದಾಗುತ್ತಾರೆ.ಇದನ್ನುಕಂಡು ಮರುಗುವ ಕವಿ ಮನಸ್ಸು ಕ್ರಿಸ್ಮಸ್ ಇಂದು ನಮಗೆ ಸಂಭ್ರಮವನ್ನು ತರುತ್ತದೆ. ಆದರೆ ಅದರ ಹಿಂದೆ ಪ್ರಾಣವನ್ನುಗೈದ ಏಸುವಿನ ಉದ್ದೇಶ ಇಂದು ಈಡೇರಿಲ್ಲ ಎನ್ನುವ ಬಗ್ಗೆ ಕವಿಗೆ ವಿಷಾದವಿದೆ. ಗೋಡೆಯ ಮೇಲೆ ಶಿಲುಬೆ ಏರಿದ ಜೀಸಸ್‌ನ ಪ್ರತಿಬಿಂಬವಿದೆ.ಅವನ ಬಾಗಿದ ಶಿರ, ಕುತ್ತಿಗೆಯಲ್ಲಿ ಉಬ್ಬಿದ ನರ. ಅಂತಹ ನೋವಿನ ಸಂದರ್ಭದಲ್ಲಿಯೂ ಎಲ್ಲರಿಗೂ ಒಳ್ಳೆಯದನ್ನು ಬಯಸುವ ಆತನ

ಮುಖಮುದ್ರೆ. ತನ್ನನ್ನು ಶಿಲುಬೆಗೇರಿಸಿದರೂ ಎಲ್ಲರಿಗೂ ಒಳ್ಳೆಯದಾಗಲಿ ಎಂದು ಬಯಸುವ ಯೇಸುವಿನ ಒಳ್ಳೆಯತನ, ವಿಶಾಲವಾದ ಹೃದಯ ಅವರ್ಣನೀಯ ಎನ್ನುವ ಕವಿ ಮುಂದುವರಿಸಿ ಒಬ್ಬ ಮಹಾನ್ ವ್ಯಕ್ತಿಯನ್ನು ನಡೆಸಿಕೊಂಡ ರೀತಿಯನ್ನು ಕಂಡು ಬೇಸರಿಸುತ್ತಾರೆ. ಕೊಲೆಗಡುಕ ಬರಬ್ಬನ ಪರ ವಕಾಲತ್ತು ನಡೆಸಿದವರು. ಎಡಕೊಬ್ಬ ಬಲಕ್ಕೊಬ್ಬ ಕಳ್ಳನನ್ನು ಯೇಸುವಿನ ಅಕ್ಕಪಕ್ಕದಲ್ಲಿ ಶಿಲುಬೆಗೇರಿಸಿ ಅವಮಾನ ಮಾಡಿದಿರಿ. ಅಂತಹ ಸ್ಥಿತಿಯಲ್ಲೂ ಆತ ಉದಾತ್ತಗುಣವನ್ನೇ ಪ್ರದರ್ಶಿಸಿ 'ದೇವರೇ ಇವರು ಏನು ಮಾಡುತ್ತಿರುವರೆಂದು ಅವರಿಗೆ ತಿಳಿಯುತ್ತಿಲ್ಲ ಅವರನ್ನು ಕ್ಷಮಿಸು'ಎನ್ನುವಂತಿದೆ ಎಂದು ಕವಿ ಕವನದ ಮೂಲಕ ವಿವರಿಸುತ್ತಾರೆ.

2. ಯಾವ ಸ್ಥಳಗಳಲ್ಲಿ ಜೀಸಸ್ ದಿನನಿತ್ಯ ಶಿಲುಬೆ ಏರಿದ್ದಾನೆ? ಚರ್ಚಿಸಿ.

ಅಂದು ಜೀಸಸ್ ಶಿಲುಬೆ ಏರಿದನು; ಕಾರಣ ಅಂಧಕಾರದಲ್ಲಿದಿರುವ ಜನರನ್ನು, ತನ್ನ ಮೇಲೆ ಹರಿಹಾಯ್ದ ಜನರನ್ನು, ಅವರ ಮೌಢ್ಯತನವನ್ನು ಹೋಗಲಾಡಿಸಬೇಕು ಎಂದು. ಆದರೆ ಏಸುವಿನ ಒಳ್ಳೆಯತನ ಅರಿಯಲು ವಿಫಲರಾದ ರೋಮಿನ ಯಾಜಕರು (ಧರ್ಮಗುರು) ಆ ದಿನ ಕೊಲೆಗಡುಕ ಬರಬ್ಬನನ್ನು ಕ್ಷಮಿಸಲು ಆಗ್ರಹಿಸುತ್ತಾರೆಯೇ ವಿನಾ ಜೀಸಸ್‌ನನ್ನು ಕ್ಷಮಿಸಲು ಒಪ್ಪುವುದಿಲ್ಲ. ಇಬ್ಬರು ಕಳ್ಳರ ಮಧ್ಯೆ ಏಸುವನ್ನು ಗಲ್ಲಿಗೇರಿಸಲಾಯಿತು. ಅಂದು ಕ್ರೋಧ ತಿಳಿಗೇಡಿತನಕ್ಕೆ ಜೀಸಸ್ ಶಿಲುಬೆ ಏರಿದನು. ಆದರೆ ಇಂದಿನ ಕಾಲಕ್ಕೆ ಮತಧರ್ಮಗಳ ಕಿತ್ತಾಟಗಳನ್ನು ನೋಡುತ್ತಾ, ಕೋರ್ಟು, ಕಾರ್ಖಾನೆ, ಠಾಣೆ ಠಾಣೆಗಳಲ್ಲಿ ಕಣ್ಣಿನ ಬೆಳಕನ್ನು ಕಿತ್ತೆಸೆದು ಕುರುಡುಗೊಳಿಸುವ ಬಂದೀಖಾನೆಗಳಲ್ಲಿ, ಆಸ್ಪತ್ರೆಗಳ ಕೋಣೆ ಕೋಣೆಗಳಲ್ಲಿ ತಿಂಗಳಿಗೆ ಒಮ್ಮೆಯೂ ಹಣತೆ ಹೊತ್ತಿಸದ ದಲಿತವಾಸದ ಸೋಗೆ ಬಿಲಗಳಲ್ಲಿ ಶೋಷಣೆ, ದಬ್ಬಾಳಿಕೆ, ಕ್ರೂರತೆಗಳನ್ನು ನೋಡುತ್ತಾ, ಮರುಗುತ್ತಾ ನಿತ್ಯವೂ ಶಿಲುಬೆ ಏರಿದ್ದಾನೆ. ಶೋಷಿತರ ಕಂಬನಿಗಳನ್ನು ಒರೆಸುವ ಆಶಾಕಿರಣವಾಗಿ

ಸತ್ಯಕ್ಕೆ ಹೊಸ ಕವಲುಗಳ ತೆರೆಸುವ ಕಾರಣಕ್ಕಾಗಿ ಜೀಸಸ್ ಶಿಲುಬೆ ಏರಿದ್ದಾನೆ ಎಂಬುದು ಕವಿಯ ವಿವರಣೆಯಾಗಿದೆ.

3. ಶಿಲುಬೆ ಏರಿದ್ದಾನೆ ಕವನದಲ್ಲಿ ಜೀಸಸ್ ವ್ಯಕ್ತಿತ್ವ ಮತ್ತು ಆತನ ಮಹತ್ವವನ್ನು ಕವಿ ಯಾವ ರೀತಿ ನಿರೂಪಿಸಿದ್ದಾರೆ? ವಿವರಿಸಿ.

ಶಿಲುಬೆ ಏರಿದ್ದಾನೆ ಕವನ ಜೀಸಸ್ ಬಗ್ಗೆ 'ಗೋವಿಂದ ಪೈ'ಯವರ 'ಗೊಲ್ಗೊಥಾ'ಕವನದ ನಂತರ ಬಂದ ವಿಶಿಷ್ಟ ಕವನ. ಜೀಸಸ್‌ನ ವ್ಯಕ್ತಿತ್ವ, ಆದರ್ಶಗಳನ್ನು ಅಪೂರ್ವವಾಗಿ ಚಿತ್ರಿಸಿರುವ ಕವಿ ಆ ಕಾಲದ ಕ್ರೌರ್ಯ ಈ ಕಾಲದಲ್ಲೂ ಹೊಸರೂಪದಲ್ಲಿ ಮುಂದುವರೆಯುತ್ತಿರುವ ದುರಂತವನ್ನು ಕಟ್ಟಿಕೊಟ್ಟಿದ್ದಾರೆ. ಜೀಸಸ್‌ನ ಸಾವನ್ನು ವಿಷಾದದಿಂದ ನೋಡುವ ಕವಿ, ಆತ ಇಂದು ಅಸಂಖ್ಯ ಹೃದಯಗಳಲ್ಲಿ ಮಾನವತೆಯ ಕಿಡಿಯನ್ನು ಹಚ್ಚಿಹೋಗುವ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿದ್ದಾರೆ. ಕವಿತೆಯ ಆರಂಭದಲ್ಲಿ ಕ್ರಿಸ್ಮಸ್ ಮನೆಗೆ ಆಗಮಿಸುತ್ತಿರುವುದರ ವಿವರಣೆಯನ್ನು ಕೊಡುವ ಕವಿ ಕ್ರಿಸ್ಮಸ್ ಮನೆಗೆ ಕೇಕು, ಚಳಿ, ನಕ್ಷತ್ರದೀಪ, ಪ್ಲಾಸ್ಟಿಕ್‌ನ ನಕಲಿ ಗಿಡ, ಮಂಜಿನ ಹತ್ತಿಯಿಂದ ಕಂಗೊಳಿಸುತ್ತಿದೆ. ಇಲ್ಲೆಲ್ಲ ನಕಲಿತನ ಇದ್ದರೂ ಮೊಣಕಾಲಲ್ಲಿ ಮೋಂಬತ್ತಿ ಹಿಡಿದು ಕುಳಿತಿರುವ ಹುಡುಗಿಯ ಭಕ್ತಿ ಮಾತ್ರ ಅಸಲಿ ಎನ್ನುತ್ತಾರೆ ಕವಿ. ಮನುಕುಲಕ್ಕೆ ಒಳ್ಳೆಯದನ್ನು ಬಯಸಿದ ದೇವಮಾನವ ಜೀಸಸ್. ಆದರೆ ಜನ ಆತನ ಒಳ್ಳೆಯತನವನ್ನು ಅರಿಯದಾದರು. ಕೊಲೆಗಡುಕ ಬರಬ್ಬನ ಪರ ವಕಾಲತ್ತು ನಡೆಸಿ ಎಡಕ್ಕೊಬ್ಬ ಬಲಕ್ಕೊಬ್ಬ ಕಳ್ಳನನ್ನು ಯೇಸುವಿನ ಅಕ್ಕಪಕ್ಕದಲ್ಲಿ ಶಿಲುಬೆಗೇರಿಸಿ ಅವಮಾನ ಮಾಡಿದರು. ಅಂತಹ ಸ್ಥಿತಿಯಲ್ಲೂ ಆತ ಉದಾತ್ತಗುಣವನ್ನೇ ಪ್ರದರ್ಶಿಸಿ 'ದೇವರೇ ಇವರು ಏನು ಮಾಡುತ್ತಿರುವರೆಂದು ಅವರಿಗೆ ತಿಳಿಯುತ್ತಿಲ್ಲ ಅವರನ್ನು ಕ್ಷಮಿಸು' ಎನ್ನುವ ಆತನ ಮಾತುಗಳು ಅವನ ವಿಶಿಷ್ಟ ವ್ಯಕ್ತಿತ್ವವನ್ನು ತಿಳಿಸುತ್ತದೆ. ಅಂದು ಯೇಸುವನ್ನು ಶಿಲುಬೆಗೇರಿಸಿ ಜೀವಂತ ಇರುವಾಗಲೇ ಮೊಳೆಗಳನ್ನು ಆತನ ದೇಹದ ಅಂಗಾಂಗಳಿಗೆ ಬಡಿಯಲಾಯಿತು. ಜೊತೆಗೆ ಅವಮಾನ ಮಾಡುವ ನೆಲೆಯಲ್ಲಿ ಮುಳ್ಳಿನ

ಕಿರೀಟವನ್ನೂ ಧರಿಸಲಾಯಿತು. ಆದರೆ ಹಿಂದೆ ನಡೆದಂತಹ ಈ ಎಲ್ಲಾ ಕ್ರೌರ್ಯಗಳು ಇನ್ನೂ ಕಾಲರಾಯನ ಗುಜರಿ ಸೇರಿಲ್ಲ, ಬದಲಾಗಿ ವೇಷ ಮರೆಸಿಕೊಂಡು ರೈಫಲ್ಲು, ಟ್ಯಾಂಕು, ಬಾಂಬು, ಗ್ರನೇಡು ಎಂಬ ಹೊಸ ರೂಪ ತಾಳಿವೆ. ನಿಮ್ಮ ಸಾಮ್ರಾಜ್ಯ ಇರುವ ತನಕ ನಿಮ್ಮ ಕ್ರೋಧ, ತಿಳಿಗೇಡಿತನಕ್ಕೆ ನಾನು ಆಜ್ಯವಾಗುತ್ತೇನೆ. ಬಂದೇ ಬರುತ್ತದೆ ದೈವೀರಾಜ್ಯ ಎನ್ನುವಂತೆ, ಕೋರ್ಟು, ಕಾರ್ಖಾನೆ, ಠಾಣೆ ಠಾಣೆಗಳಲ್ಲಿ ಕಣ್ಣಿನ ಬೆಳಕನ್ನು ಕಿತ್ತೆಸೆದು ಕುರುಡುಗೊಳಿಸುವ ಬಂಧಿಖಾನೆಗಳಲ್ಲಿ, ಆಸ್ಪತ್ರೆಗಳ ಕೋಣೆ ಕೋಣೆಗಳಲ್ಲಿ ತಿಂಗಳಿಗೆ ಒಮ್ಮೆಯೂ ಹಣತೆ ಹೊತ್ತಿಸದ ದಲಿತವಾಸದ ಸೋಗೆ ಬಿಲಗಳಲ್ಲಿ ಶೋಷಣೆ, ದಬ್ಬಾಳಿಕೆ, ಕ್ರೂರತೆಗಳನ್ನು ನೋಡುತ್ತಾ, ಶೋಷಿತರ ಕಂಬನಿಯನೊರೆಸಿ, ಸತ್ಯಕ್ಕೆ ಹೊಸ ಕವಲುಗಳನ್ನು ತೆರೆಸಿ ಜೀಸಸ್ ಶಿಲುಬೆಯೇರಿದ್ದಾನೆ.

===0===

## ಒಂದು ಹೂ ಹೆಚ್ಚಿಗೆ ಇಡುತೀನಿ

**ಲಲಿತಾ ಸಿದ್ಧಬಸವಯ್ಯ**

**ಸಾರಾಂಶ :**

ವಯೋವೃದ್ಧ ತಂದೆ-ತಾಯಿಯರನ್ನು ಮಕ್ಕಳು ಜವಾಬ್ದಾರಿ ನಿಭಾಯಿಸುವ ನೆಪದಲ್ಲಿ ಹಂಚಿಕೊಂಡು, ಹಿರಿಯ ಜೀವಗಳ ತಲ್ಲಣಗಳನ್ನು ಅಲಕ್ಷಿಸುವಷ್ಟು ವ್ಯಾವಹಾರಿಕವಾಗಿದೆ. ಇಂದಿನ ಕೃತಕ ಜೀವನದಲ್ಲಿ ಮೌಲ್ಯಗಳು ನಾಶವಾಗಿದೆ. ಮಮತೆಯಿಂದ ಸಾಕಿ ಬೆಳೆಸಿದ ಹೆತ್ತವರನ್ನು ತಾತ್ಸಾರದಿಂದ ಕಾಣುವ ಮನೋಭಾವವಿಂದು ಎಲ್ಲೆಲ್ಲೂ ಸಾಮಾನ್ಯವಾಗಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಬೇರ್ಪಟ್ಟಿರುವ ಕಾರಣಕ್ಕೆ ಪರಸ್ಪರ ತಳಮಳ ವ್ಯಕ್ತಪಡಿಸುವ ಹಿರಿಯ ಜೀವಗಳೆರಡರ ತುಯ್ದಾಟವನ್ನು ಚಿತ್ರಿಸುವ ಪ್ರಸ್ತುತ ಕವಿತೆಯು ನಾವು ಕಳೆದುಕೊಳ್ಳುತ್ತಿರುವ ಮಾನವೀಯ ಮೌಲ್ಯಗಳಿಗೆ ಹಿಡಿದ ಕನ್ನಡಿಯಾಗಿದೆ.

ಮುದುಕಿಗೆ ದೂರದ ಊರಿನಲ್ಲಿರುವ ಗಂಡನೊಂದಿಗೆ ಮಾತನಾಡಬೇಕು. ಫೋನು ಝುಣಗುಡುತ್ತಿದ್ದರೆ ಅದನ್ನು ಎತ್ತಿಕೊಳ್ಳಲೋ ಬೇಡವೋ, ಸೊಸೆ ಏನೆನ್ನುವಳೋ. ಮಗ-ಎಷ್ಟು ಸಲವಮ್ಮ ಹೇಳುವುದು ನಿನಗೆ ಎಂದು ಗದರಬಹುದು ಎನ್ನುವ ಭಯ ಮುದುಕಿಯದು. ಫೋನು ಇಟ್ಟಿರುವ ಮಣೆಯವರೆಗೂ ಬರುತ್ತಾಳೆ. ಒಂದು ಸಲ ಸೊಸೆ ಏನೆನ್ನುವಳೋ ಎಂದು ಕಿಚನ್ನಿನ ಕಡೆಗೆ ನೋಡುತ್ತಾಳೆ.ಇನ್ನೊಂದು ಸಾರಿ ಸ್ಟಡಿರೂಮಿನೆಡೆಗೆ ನೋಡುತ್ತಾಳೆ. ಫೋನು ಝುಣಗುಡುವುದು ನಿಲ್ಲುತ್ತದೆಯೋ ಎನ್ನುವ ಭಯ. ಯಾರಾದರೂ ಬಂದು ಫೋನನ್ನು ಎತ್ತಬಾರದೇ? ಆ ಕಡೆ ಮುದುಕನಿರಬಹುದು. ಎಂದು ಮುದುಕಿಯ ಜೀವ ಎಳೆಯುತ್ತಿದೆ.

ಇಲ್ಲಿ ಮುದುಕಿ ಹಿರಿಯ ಮಗನ ಜೊತೆಗಿದ್ದಾಳೆ. ಕಿರಿಯ ಮಗನ ಜೊತೆಗಿದ್ದ ಮುದುಕನ ಹತ್ತಿರ ಮಾತನಾಡಬೇಕೆಂಬ ಚಡಪಡಿಕೆ

ಮುದುಕಿಯದು. ಅಸ್ಸಾಂನಲ್ಲಿದ್ದ ಮುದುಕನಿಗೂ ಹಾಗೆಯೇ. ಮುದುಕಿ ಇದ್ದ ಸ್ಥಳ ಕರ್ನಾಟಕ. ಭಾಷೆ ಕನ್ನಡವಾದ ಕಾರಣ ಸೊಸೆ ಹೊರಗೆ ಹೋದಾಗ ಹೊರಗಿನವರೊಂದಿಗೆ ಮಾತನಾಡಿ ಬಾಯತುರಿಕೆಯನ್ನು ತೀರಿಸಿಕೊಳ್ಳುತ್ತಾಳೆ. ಆದರೆ ಮುದುಕನಿರುವುದು ದೂರದ ಅಸ್ಸಾಮಿನಲ್ಲಿ. ಮುದುಕನಿಗೆ ಅಲ್ಲಿನ ಭಾಷೆ ಸ್ವಲ್ಪವೂ ಬರುವುದಿಲ್ಲ.

ಕಿರಿಯ ಮಗ ಮತ್ತವನ ಹೆಂಡತಿ ಬೆಳಿಗ್ಗೆ ಒಂಭತ್ತಕ್ಕೆ ಕೆಲಸಕ್ಕೆ ಹೋದರೆ ಬರುವುದು ಹೊತ್ತು ಕಳೆದ ಮೇಲೆ. ಹಾಗಾಗಿ ಅಸ್ಸಾಮಿ ಭಾಷೆ ಬರದ ಅವನಿಗೆ ಮಾತನಾಡಲು ಯಾರು ಇಲ್ಲ. ಮುದುಕಿ ಫೋನು ಮಾಡಿದಾಗಲೆಲ್ಲ ಮಾತೇ ಮರೆತು ಹೋಗಿದೆ ಕಣೆ. ಮಾತಾಡು ಮಾತಾಡು ಮಾತಾಡುತ್ತಿರು ಮಾತು ನಿಲ್ಲಿಸಬೇಡ. ಎಂದು ಗೋಗರೆಯುತ್ತಾನೆ. ಆತ ಫೋನುಗೂಡನ್ನೇ ತಬ್ಬಿಕೊಂಡಿರುವುದನ್ನು ನೆನೆದು ಮುದುಕಿಗೆ ಕಣ್ಣೀರು ಬಂದರೂ ಮುದುಕನಿಗೆ ತಿಳಿದರೆ ಕೊರಗಬಹುದೆಂದು ಆತಂಕದಿಂದ ಸುಯ್ಲು (ನಿಟ್ಟುಸಿರು)ಸೋರದ ಹಾಗೆ ಕಣ್ಣೀರು ಸುರಿಸುತ್ತಾಳೆ.ಮುದುಕಿ ಮುದುಕನ ಜೊತೆ ಮಾತನಾಡುವಾಗ ಅವನ ಭಾವನೆಗೆ ಸ್ಪಂದಿಸಿ ಅಳುವಾಗ ಮಗನಿಗೆ ಕೇಳಿಸಿದರೆ "ಸುಮ್ಮನಿರಮ್ಮ ಈಗ ಅಳುವಂಥದ್ದೇನಾಗಿದೆಯಮ್ಮ ನಿನಗೆ ಎಂದು ಗದರಬಹುದೆನ್ನುವ ಆತಂಕ ಮುದುಕಿಗಿದೆ.

ಫೋನು ನಿಂತು ಬಿಡಬಹುದೆನ್ನುವ ತಳಮಳ ಅವಳಿಗಿದೆ. ಅದು ರಿಂಗಣಿಸುತ್ತಾ ಇರುವ ಹಾಗೆಯೇ ಫೋನು ಎತ್ತಲು ಮೊಮ್ಮಗಳನ್ನು ಕರೆಯಲು ಹೋಗುತ್ತಾಳೆ. ಮಹಡಿ ಹತ್ತಿ ಮೊಮ್ಮಗಳನ್ನು ಕರೆದರೆ ಅವಳು ಕಂಪ್ಯೂಟರಿನ ಮೇಲೆ ಮೂಜಗವನ್ನೇ ಆವಾಹಿಸಿ ಕುಳಿತಿದ್ದಾಳೆ. ಚಿಟುಗುಡುತ್ತಲೇ ಅಟ್ಟವಿಳಿದು ಬಂದು ಧಡ್ಡನೆ ಫೋನೆತ್ತಿ "ರಾಂಗ್ ನಂಬರ್" ಎನ್ನುತ್ತಾಳೆ. ಅದು ಮುದುಕಿಗೆ ಅನುಮಾನ ತಂದಿತು.ಮೊಮ್ಮಗಳ ಆತುರಕ್ಕೆ ಮುದುಕಿ "ಈ ಹುಡುಗಿ ಸರಿಯಾಗಿ

ಕೇಳಿಸಿಕೊಂಡಳೋ ಗಡಿಬಿಡಿಯಲ್ಲಿ ಬಿಡುಗಡೆಗೆ ಹಾತೊರೆದು ರೈಟನ್ನೆ ರಾಂಗೆಂದಳೋ” ಎಂದುಕೊಂಡಳು. ಬಚ್ಚಲಿಗೆ ಹೋಗಿ ನಿಮಿಷ ನಿಂತಿದ್ದು ಮತ್ತೆ ಫೋನು ಬರಬಹುದೆಂದು ಫೋನಿನ ಬಳಿಗೆ ಬರುತ್ತಾಳೆ.

ಮುದುಕನಿಂದ ಕರೆ ಬಂದ ಸಮಯದಲ್ಲೇ ಮಗನ ಕಾರೂ, ಮೊಮ್ಮಗಳ ಸ್ಕೂಟಿ, ಮೊಮ್ಮಗನ ಸ್ಕೂಲಿನ ವ್ಯಾನೂ ಬಂದಿರುತ್ತದೆ. ಇನ್ನಿರುವ ಅಡ್ಡಿಯೆಂದರೆ ಸೊಸೆ. ಸೊಸೆ ಹೊರಗೆ ಕೆಲಸಕ್ಕೆ ಹೋದರೆ ತನಗೆ ಮುದುಕನ ಜೊತೆಯಲ್ಲಿ ಫೋನಿನಲ್ಲಿ ಮಾತನಾಡಬಹುದು ಎಂದು ಮುದುಕಿ ಅಂದುಕೊಳ್ಳುತ್ತಾಳೆ. ಆ ಕಾರಣಕ್ಕಾಗಿ ಮುದುಕಿ ಗುಟ್ಟೆಮಲ್ಲಪ್ಪನನ್ನು ಪ್ರಾರ್ಥಿಸಿ ಹರಕೆ ಹೊತ್ತಳು. ಸೊಸಯೊಬ್ಬಳಿಗೆ ಈ ಹೊತ್ತು ದೇವರೇ ಹೊರಗಿನ ಕೆಲಸ ಸಮ್ಮಿಲಿಸಲಿ (ಒಂದುಗೂಡಲಿ). ಗುಟ್ಟೆಮಲ್ಲಪ್ಪನ ಗಟ್ಟಿಪಾದಕ್ಕೆ ಒಂದು ಹೂ ಹೆಚ್ಚಿಗೆ ಇಡುತೀನಿ ಎಂದು ಹರಕೆ ಹೊತ್ತಳು.

ಹೀಗೆ ಒಂದು ಫೋನಿನ ಕರೆಗಾಗಿ ತಳಮಳಿಸುವ ಹಿರಿಯ ಜೀವಗಳೆರಡರ ತವಕ ತಲ್ಲಣಗಳನ್ನು ಕವಯಿತ್ರಿ ಹಿಡಿದಿಟ್ಟಿದ್ದಾರೆ. ನಮ್ಮನ್ನು ಪ್ರೀತಿಯಿಂದ ಪೋಷಿಸಿದ ಹಿರಿಯರನ್ನು ಅವರ ವೃದ್ಧಾಪ್ಯದಲ್ಲಿ ಆಸರೆಯಾಗದ ನಮ್ಮ ಹೊಣೆಗೇಡಿತನವನ್ನು ಕವಿತೆ ಪ್ರಶ್ನಿಸುವಂತಿದೆ. ವಿಷಾದದ ದನಿ ಎತ್ತಿದೆ ಎನ್ನಬಹುದು.

**ಸಂದರ್ಭ ಸಹಿತ ವಿವರಿಸಿ:**

1. ಎಷ್ಟು ಸಲವಮ್ಮ ಹೇಳುವುದು ನಿನಗೆ?

ಆಯ್ಕೆ : ಈ ಸಾಲನ್ನು ಶ್ರೀಮತಿ ಲಲಿತಾ ಸಿದ್ಧಬಸವ0ಯ್ಯ ಅವರು ಬರೆದ ಒಂದು ಹೂ ಹೆಚ್ಚಿಗೆ ಇಡುತೀನಿ ಎನ್ನುವ ಪದ್ಯದಿಂದ ಆರಿಸಲಾಗಿದೆ.

ಸಂದರ್ಭ: ಮುದುಕಿ ಮುದುಕನಿಂದ ಫೋನು ಬಂದಿರಬಹುದೆಂದು ತಿಳಿದು ಫೋನು ಎತ್ತಿಕೊಳ್ಳಲೋ ಬೇಡವೋ ಮಗ ಹೀಗೆನ್ನಬಹುದು ಎನ್ನುವ ಸಂದರ್ಭವಿದು.

ವಿವರಣೆ; ಮುದುಕಿಗೆ ದೂರದ ಊರಿನಲ್ಲಿರುವ ಗಂಡನೊಂದಿಗೆ ಮಾತನಾಡಬೇಕು. ಮುದುಕ ದೂರ ದೂರಿನಿಂದ ಫೋನು ಮಾಡಿರಬಹುದೆಂದು ಭಾವಿಸಿದ ಮುದುಕಿ ಫೋನು ಝುಣಗುಡುತ್ತಿದ್ದರೆ ಅದನ್ನು ಯಾರೂ ಎತ್ತಿಕೊಳ್ಳಲು ಬಾರದಿದ್ದಾಗ ತಾನು ಎತ್ತಿಕೊಳ್ಳಲು ಹಿಂಜರಿಯುತ್ತಾಳೆ. ಎತ್ತಿಕೊಳ್ಳಲೋ ಬೇಡವೋ, ಸೊಸೆ ಏನೆನ್ನುವಳೋ. ಮಗ–ಎಷ್ಟು ಸಲವಮ್ಮ ಹೇಳುವುದು ನಿನಗೆ ಎಂದು ಗದರಬಹುದು ಎನ್ನುವ ಭಯ ಮುದುಕಿಯದು. ಮಗನ ಮನೆಯಲ್ಲಿರುವ ಆಕೆಗೆ ಸ್ವಾತಂತ್ರ್ಯ ಇಲ್ಲ. ಭಯದಿಂದಲೇ ಬದುಕಬೇಕಾದ ಸ್ಥಿತಿಯಲ್ಲಿ ಮುದುಕಿಯಿರುವುದನ್ನು ಕಾಣಬಹುದು.

2. ಅಲ್ಲಿಯ ಮಾತು ಅವನಿಗೆ ಸಸೇಮಿರ ಬರದು

ಆಯ್ಕೆ: ಈ ಸಾಲನ್ನು ಶ್ರೀಮತಿ ಲಲಿತಾ ಸಿದ್ಧಬಸವಯ್ಯ ಅವರು ಬರೆದ ಒಂದು ಹೂ ಹೆಚ್ಚಿಗೆ ಇಡುತೀನಿ ಎನ್ನುವ ಪದ್ಯದಿಂದ ಆರಿಸಲಾಗಿದೆ.

ಸಂದರ್ಭ: ಕಿರಿಯ ಮಗನ ಜೊತೆಗೆ ಅಸ್ಸಾಂನಲ್ಲಿದ್ದ ಮುದುಕ ಅಲ್ಲಿಯ ಭಾಷೆ ಬಾರದೇ ಕಷ್ಟಪಡುತ್ತಿರುವುದನ್ನು ಈ ಸಾಲಿನಲ್ಲಿ ತಿಳಿಯಬಹುದು.

ವಿವರಣೆ : ಮುದುಕ ಕಿರಿಯ ಮಗನ ಮನೆಯಲ್ಲಿ ಅಸ್ಸಾಂನಲ್ಲಿದ್ದಾನೆ. ಕಿರಿಯ ಮಗ ಮತ್ತವನ ಹೆಂಡತಿ ಬೆಳಿಗ್ಗೆ ಒಂಭತ್ತಕ್ಕೆ ಕೆಲಸಕ್ಕೆ ಹೋದರೆ ಬರುವುದು ಹೊತ್ತು ಕಳೆದ ಮೇಲೆ. ಹಾಗಾಗಿ ಅಸ್ಸಾಮಿ ಭಾಷೆ ಬರದ ಅವನಿಗೆ ಮಾತನಾಡಲು ಯಾರು ಇಲ್ಲ. ಮುದುಕಿ ಫೋನು ಮಾಡಿದಾಗಲೆಲ್ಲ ಮಾತೇ ಮರೆತು ಹೋಗಿದೆ ಕಣೆ. ಮಾತಾಡು ಮಾತಾಡು ಮಾತಾಡುತ್ತಿರು ಮಾತು ನಿಲ್ಲಿಸಬೇಡ ಎಂದು ಗೋಗರೆಯುತ್ತಾನೆ.

3. ಮಾತೇ ಮರೆತು ಹೋಗಿದೆ ಕಣೆ

ಆಯ್ಕೆ : ಈ ಸಾಲನ್ನು ಶ್ರೀಮತಿ ಲಲಿತಾ ಸಿದ್ಧಬಸವ0ಯ್ಯ ಅವರು ಬರೆದ ಒಂದು ಹೂ ಹೆಚ್ಚಿಗೆ ಇಡುತೀನಿ ಎನ್ನುವ ಪದ್ಯದಿಂದ ಆರಿಸಲಾಗಿದೆ.

ಸಂದರ್ಭ: ಮುದುಕ ದೂರದ ಅಸ್ಸಾಂನಲ್ಲಿ ಅನುಭವಿಸುತ್ತಿರುವ ಪಾಡನ್ನು ಹೇಳುವ ಸಂದರ್ಭವಿದು.

ವಿವರಣೆ; ಮುದುಕನಿರುವುದು ದೂರದ ಅಸ್ಸಾಂಮಿನಲ್ಲಿ. ಮುದುಕನಿಗೆ ಅಲ್ಲಿನ ಭಾಷೆ ಬರುವುದಿಲ್ಲ. ಕಿರಿಯ ಮಗ ಮತ್ತವನ ಹೆಂಡತಿ ಬೆಳಿಗ್ಗೆ ಒಂಭತ್ತಕ್ಕೆ ಕೆಲಸಕ್ಕೆ ಹೋದರೆ ಬರುವುದು ಹೊತ್ತು ಕಳೆದ ಮೇಲೆ. ಹಾಗಾಗಿ ಅಸ್ಸಾಮಿ ಭಾಷೆ ಬರದ ಅವನಿಗೆ ಮಾತನಾಡಲು ಯಾರು ಇಲ್ಲ. ಮುದುಕಿ ಫೋನು ಮಾಡಿದಾಗಲೆಲ್ಲ ಮಾತೇ ಮರೆತು ಹೋಗಿದೆ ಕಣೆ. ಮಾತಾಡು ಮಾತಾಡು ಮಾತಾಡುತ್ತಿರು ಮಾತು ನಿಲ್ಲಿಸಬೇಡ ಎಂದು ಗೋಗರೆಯುತ್ತಾನೆ. ಆತ ಫೋನು ಗೂಡನ್ನೇ ತಬ್ಬಿಕೊಳ್ಳುವುದರ ಮೂಲಕ ತನ್ನ ಬೇಸರವನ್ನು ವ್ಯಕ್ತಪಡಿಸುತ್ತಿದ್ದಾನೆ.

4. ಬಿಡುಗಡೆಗೆ ಹಾತೊರೆದು ರೈಟನ್ನೆ ರಾಂಗೆದಳೋ

ಆಯ್ಕೆ : ಈ ಸಾಲನ್ನು ಶ್ರೀಮತಿ ಲಲಿತಾ ಸಿದ್ಧಬಸವಯ್ಯ ಅವರು ಬರೆದ ಒಂದು ಹೂ ಹೆಚ್ಚಿಗೆ ಇಡುತೀನಿ ಎನ್ನುವ ಪದ್ಯದಿಂದ ಆರಿಸಲಾಗಿದೆ.

ಸಂದರ್ಭ: ಮೊಮ್ಮಗಳು ಬಂದು ಫೋನನ್ನೆತ್ತಿ ರಾಂಗ್ ನಂಬರ್ ಎಂದಾಗ ಮುದುಕಿ ಅನುಮಾನದಿಂದ ತನ್ನಲ್ಲೇ ಈ ಮಾತನ್ನು ಹೇಳಿಕೊಳ್ಳುತ್ತಾಳೆ.

ವಿವರಣೆ: ಫೋನು ರಿಂಗಣಿಸುತಾ ್ತ ಇರುವ ಹಾಗೆಯೇ ಫೋನನ್ನು ಎತ್ತಲು ಮೊಮ್ಮಗಳನ್ನು ಕರೆಯಲು ಹೋಗುತ್ತಾಳೆ. ಮಹಡಿ ಹತ್ತಿ ಮೊಮ್ಮಗಳನ್ನು ಕರೆದರೆ ಅವಳು ಕಂಪ್ಯೂಟರಿನ ಮೇಲೆ ಮೂಜಗವನ್ನೇ ಆವಾಹಿಸಿ ಕುಳಿತಿದ್ದಾಳೆ. ಚಿಟುಗುಡುತ್ತಲೇ ಅಟ್ಟವಿಳಿದು ಬಂದು ಧಡ್ಡನೆ ಫೋನೆತ್ತಿ “ರಾಂಗ್ ನಂಬರ್” ಎನ್ನುತ್ತಾಳೆ. ಅದು

ಮುದುಕಿಗೆ ಅನುಮಾನ ತಂದಿತು. ಮೊಮ್ಮಗಳ ಆತುರಕ್ಕೆ ಮುದುಕಿ "ಈ ಹುಡುಗಿ ಸರಿಯಾಗಿ ಕೇಳಿಸಿಕೊಂಡಳೋ ಗಡಿಬಿಡಿಯಲ್ಲಿ ಬಿಡುಗಡೆಗೆ ಹಾತೊರೆದು ರೈಟನ್ನೆ ರಾಂಗೆಂದಳೋ" ಎಂದುಕೊಂಡಳು.

4. ಒಂದು ಹೂ ಹೆಚ್ಚಿಗೆ ಇಡುತೀನಿ ನಿನ್ನ ಗಟ್ಟಿಪಾದಕ್ಕೆ

ಆಯ್ಕೆ : ಈ ಸಾಲನ್ನು ಶ್ರೀಮತಿ ಲಲಿತಾ ಸಿದ್ಧಬಸವ0ಯ್ಯ ಅವರು ಬರೆದ ಒಂದು ಹೂ ಹೆಚ್ಚಿಗೆ ಇಡುತೀನಿ ಎನ್ನುವ ಪದ್ಯದಿಂದ ಆರಿಸಲಾಗಿದೆ.

ಸಂದರ್ಭ: ಮುದುಕಿ ದೇವರನ್ನು ಪ್ರಾರ್ಥಿಸುವ ಪರಿ ಈ ಸಾಲಿನಲ್ಲಿದೆ.

ವಿವರಣೆ: ಮುದುಕನಿಂದ ಕರೆ ಬಂದ ಸಮಯದಲ್ಲೇ ಮಗನ ಕಾರೂ, ಮೊಮ್ಮಗಳ ಸ್ಕೂಟಿ, ಮೊಮ್ಮಗನ ಸ್ಕೂಲಿನ ವ್ಯಾನೂ ಬಂದಿರುತ್ತದೆ. ಇನ್ನಿರುವ ಅಡ್ಡಿಯೆಂದರೆ ಸೊಸೆ. ಸೊಸೆ ಹೊರಗೆ ಕೆಲಸಕ್ಕೆ ಹೋದರೆ ತನಗೆ ಮುದುಕನ ಜೊತೆಯಲ್ಲಿ ಫೋನಿನಲ್ಲಿ ಮಾತನಾಡಬಹುದು ಎಂದು ಮುದುಕಿ ಅಂದುಕೊಳ್ಳುತ್ತಾಳೆ. ಆ ಕಾರಣಕ್ಕಾಗಿ ಮುದುಕಿ ಗುಟ್ಟೆಮಲ್ಲಪ್ಪನನ್ನು ಪ್ರಾರ್ಥಿಸಿ ಹರಕೆ ಹೊತ್ತಳು. ಸೊಸೆಯೊಬ್ಬಳಿಗೆ ಈ ಹೊತ್ತು ದೇವರೇ ಹೊರಗಿನ ಕೆಲಸ ಒಂದುಗೂಡಲಿ. ಗುಟ್ಟೆಮಲ್ಲಪ್ಪನ ಗಟ್ಟಿಪಾದಕ್ಕೆ ಒಂದು ಹೂ ಹೆಚ್ಚಿಗೆ ಇಡುತೀನಿ ಎಂದು ಹರಕೆ ಹೊತ್ತಳು.

5. ಇನ್ನೊಂದು ಸೇರ್ಪಡೆ ಆ ಲೀಲಾಮಾತ್ರನಿಗೆ

ಆಯ್ಕೆ : ಈ ಸಾಲನ್ನು ಶ್ರೀಮತಿ ಲಲಿತಾ ಸಿದ್ಧಬಸವಯ್ಯ ಅವರು ಬರೆದ ಒಂದು ಹೂ ಹೆಚ್ಚಿಗೆ ಇಡುತೀನಿ ಎನ್ನುವ ಪದ್ಯದಿಂದ ಆರಿಸಲಾಗಿದೆ.

ಸಂದರ್ಭ: ಮುದುಕಿ ದೇವರನ್ನು ಪ್ರಾರ್ಥಿಸಿದಾಗ ಇನ್ನೊಂದು ಪ್ರಾರ್ಥನೆ ದೇವರಿಗೆ ಸೇರಿತು ಎನ್ನುವ ಸಂದರ್ಭವಿದು.

ವಿವರಣೆ: ಮುದುಕನಿಂದ ಕರೆ ಬಂದ ಸಮಯದಲ್ಲೇ ಮಗನ ಕಾರೂ ಸ್ಟಾರ್ಟಾಯಿತು.ಮೊಮ್ಮಗಳು ಸ್ಕೂಟಿಯಲ್ಲಿ ಹೊರಟಳು.

ಮೊಮ್ಮಗನ ಸ್ಕೂಲಿನ ವ್ಯಾನೂ ಬಂದಿರುತ್ತದೆ. ಇನ್ನಿರುವ ಅಡ್ಡಿಯೆಂದರೆ ಸೊಸೆ. ಸೊಸೆ ಹೊರಗೆ ಕೆಲಸಕ್ಕೆ ಹೋದರೆ ನಾನು ಮುದುಕನ ಜೊತೆಗೆ ಮಾತನಾಡಬಹುದೆಂಬ ಆಸೆಯಿಂದ ಸೊಸೆಗೆ ಹೊರಗಿನ ಕೆಲಸ ಬರಲೆಂದು ಮುದುಕಿ ಬಯಸಿದಳು. ಆ ಕಾರಣಕ್ಕಾಗಿ ಮುದುಕಿ ಗುಟ್ಟೆಮಲ್ಲಪ್ಪನನ್ನು ಪ್ರಾರ್ಥಿಸಿ ಹರಕೆ ಹೊತ್ತಳು. ಸೊಸೆಯೊಬ್ಬಳಿಗೆ ಈ ಹೊತ್ತು ದೇವರೇ ಹೊರಗಿನ ಕೆಲಸ ಸಮ್ಮಿಲಿಸಲಿ. ಗುಟ್ಟೆಮಲ್ಲಪ್ಪನ ಗಟ್ಟಿಪಾದಕ್ಕೆ ಒಂದು ಹೂ ಹೆಚ್ಚಿಗೆ ಇಡುತೀನಿ ಎಂದು ಹರಕೆ ಹೊತ್ತಳು. ಈ ಸಂದರ್ಭದಲ್ಲಿ ಈ ಮೇಲಿನ ಸಾಲು ಬರುತ್ತದೆ.

**ಒಂದು ವಾಕ್ಯದಲ್ಲಿ ಉತ್ತರಿಸಿ:**

1. ಮುದುಕಿಯ ಭಯಕ್ಕೆ ಕಾರಣವೇನು?

ಫೋನು ಝುಣಗುಡುತ್ತಿದ್ದರೆ ಅದನ್ನು ಎತ್ತಿಕೊಳ್ಳಲೋ ಬೇಡವೋ, ಸೊಸೆ ಏನೆನ್ನುವಳೋ ಮಗ ಗದರಬಹುದು ಎನ್ನುವ ಭಯ ಮುದುಕಿಯದು.

2. ಮುದುಕಿಗೆ ಯಾರಿಂದ ಫೋನ್ ಕರೆ ಬಂದಿತ್ತು?

ಮುದುಕಿಗೆ ತನ್ನ ಗಂಡನಾದ ಮುದುಕನಿಂದ ಕರೆ ಬಂದಿತ್ತು.

3. ಮುದುಕ ಇರುವುದೆಲ್ಲಿ?

ಮುದುಕ ಇರುವುದು ಕಿರಿಯ ಮಗ ಸೊಸೆಯ ಜೊತೆ ಅಸ್ಸಾಮಿನಲ್ಲಿ.

4. ಮೊಮ್ಮಗಳು ಏನು ಮಾಡುತ್ತಿದ್ದಳು?

ಮೊಮ್ಮಗಳು ಸ್ವಂತ ಕಂಪ್ಯೂಟರಿನಲ್ಲಿ ಮೂಜಗವನ್ನೇ ಆವಾಹಿಸಿ ಕುಳಿತಿದ್ದಾಳೆ.

5. ಮುದುಕಿಯು ಯಾವ ದೇವರಿಗೆ ಹರಕೆ ಹೊತ್ತಳು?

ಮುದುಕಿಯು ಗುಟ್ಟೆಮಲ್ಲಪ್ಪನಿಗೆ ಹರಕೆ ಹೊತ್ತಳು.

6. ಮುದುಕಿಯು ಏನೆಂದು ಹರಕೆ ಹೊತ್ತಳು?

ಮುದುಕಿಯು ಗುಟ್ಟೆಮಲ್ಲಪ್ಪನ ಗಟ್ಟಿಪಾದಕ್ಕೆ ಒಂದು ಹೂ ಹೆಚ್ಚಿಗೆ ಇಡುತೀನಿ ಎಂದು ಹರಕೆ ಹೊತ್ತಳು.

**ಎರಡು– ಮೂರು ವಾಕ್ಯಗಳಲ್ಲಿ ಉತ್ತರಿಸಿ:**

1. ಮುದುಕಿಯ ಜೀವ ಎಳೆಯುತ್ತಿರುವುದೇಕೆ?

ಮುದುಕಿಯು ದೂರದ ಊರಿನಲ್ಲಿರುವ ಗಂಡನೊಂದಿಗೆ ಮಾತನಾಡಬೇಕು. ಫೋನು ಝುಣಗುಡುತ್ತಿದ್ದರೆ ಅದನ್ನು ಎತ್ತಿಕೊಳ್ಳಲೋ ಬೇಡವೋ, ಸೊಸೆ ಏನೆನ್ನುವಳೋ ಮಗ ಗದರಬಹುದು ಎನ್ನುವ ಭಯ ಮುದುಕಿಯದು. ಫೋನು ಇಟ್ಟಿರುವ ಮಣೆಯವರೆಗೂ ಬರುತ್ತಾಳೆ.ಒಂದು ಸಲ ಸೊಸೆ ಏನೆನ್ನುವಳೋ ಎಂದು ಕಿಚನ್ನಿನ ಕಡೆಗೆ ನೋಡುತ್ತಾಳೆ. ಇನ್ನೊಂದು ಸಾರಿ ಸ್ಟಡಿ ರೂಮಿನೆಡೆಗೆ ನೋಡುತ್ತಾಳೆ. ಫೋನು ಝುಣಗುಡುವುದು ನಿಲ್ಲುತ್ತದೆಯೋ ಎನ್ನುವ ಭಯ. ಯಾರಾದರೂ ಬಂದು ಫೋನನ್ನು ಎತ್ತಬಾರದೇ? ಆ ಕಡೆ ಮುದುಕನಿರಬಹುದು ಎಂದು ಮುದುಕಿಯ ಜೀವ ಎಳೆಯುತ್ತಿದೆ.

2. ಮುದುಕ ಏನೆಂದು ಗೋಗರೆಯುತ್ತಾನೆ?

ಮುದುಕ ಕಿರಿಯ ಮಗನ ಮನೆಯಲ್ಲಿ ಅಸ್ಸಾಂನಲ್ಲಿದ್ದಾನೆ. ಕಿರಿಯ ಮಗ ಮತ್ತವನ ಹೆಂಡತಿ ಬೆಳಿಗ್ಗೆ ಒಂಭತ್ತಕ್ಕೆ ಕೆಲಸಕ್ಕೆ ಹೋದರೆ ಬರುವುದು ಹೊತ್ತು ಕಳೆದ ಮೇಲೆ. ಹಾಗಾಗಿ ಅಸ್ಸಾಮಿ ಭಾಷೆ ಬರದ ಅವನಿಗೆ ಮಾತನಾಡಲು ಯಾರು ಇಲ್ಲ. ಮುದುಕಿ ಫೋನು ಮಾಡಿದಾಗಲೆಲ್ಲ ಮಾತೇ ಮರೆತು ಹೋಗಿದೆ ಕಣೆ. ಮಾತಾಡು ಮಾತಾಡು ಮಾತಾಡುತ್ತಿರು ಮಾತು ನಿಲ್ಲಿಸಬೇಡ ಎಂದು ಗೋಗರೆಯುತ್ತಾನೆ.

3. ಮೊಮ್ಮಗಳ ಆತುರಕ್ಕೆ ಮುದುಕಿ ಏನೆಂದುಕೊಂಡಳು?

ಮುದುಕಿಯು ಮೊಮ್ಮಗಳನ್ನು ಫೋನು ಎತ್ತಲು ಕರೆಯುತ್ತಾಳೆ. ಕಂಪ್ಯೂಟರಿನ ಮೇಲೆ ಮೂಜಗವನ್ನೇ ಆವಾಹಿಸಿ ಕುಳಿತ ಮೊಮ್ಮಗಳು ಚಿಟುಗುಡುತ್ತಲೇ ಅಟ್ಟವಿಳಿದು ಬಂದು ಧಡ್ಡನೆ ಫೋನೆತ್ತಿ "ರಾಂಗ್ ನಂಬರ್" ಎನ್ನುತ್ತಾಳೆ. ಅದು ಮುದುಕಿಗೆ ಅನುಮಾನ ತಂದಿತು.ಮೊಮ್ಮಗಳ ಆತುರಕ್ಕೆ ಮುದುಕಿ "ಈ ಹುಡುಗಿ ಸರಿಯಾಗಿ

ಕೇಳಿಸಿಕೊಂಡಳೋ ಗಡಿಬಿಡಿಯಲ್ಲಿ ಬಿಡುಗಡೆಗೆ ಹಾತೊರೆದು ರೈಟನ್ನೆ ರಾಂಗೆಂದಳೋ" ಎಂದುಕೊಂಡಳು.

4. ಸೊಸೆಗೆ ಹೊರಗಿನ ಕೆಲಸ ಬರಲೆಂದು ಮುದುಕಿ ಬಯಸಿದ್ದೇಕೆ?

ಮಗ ಕೆಲಸಕ್ಕೆ, ಮೊಮ್ಮಗ–ಮೊಮ್ಮಗಳು ಶಾಲೆಗೆ ಹೋಗುತ್ತಾರೆ. ಸೊಸೆ ಮನೆಯಲ್ಲೇ ಇದ್ದಳು. ಸೊಸೆ ಮನೆಯಲ್ಲಿದ್ದರೆ ಫೋನು ಎತ್ತಲಾಗುವುದಿಲ್ಲ. ಮುದುಕನ ಜೊತೆಗೆ ಮಾತನಾಡಲಾಗುವುದಿಲ್ಲ. ಸೊಸೆಗೆ ಹೊರಗಿನ ಕೆಲಸ ಬಂದರೆ ಹೊರಗೆ ಹೋಗುತ್ತಾಳೆ. ಆಗ ನಾನು ನಿರಾತಂಕವಾಗಿ ಮುದುಕನ ಜೊತೆ ಮಾತನಾಡಬಹುದೆಂಬ ಆಸೆಯಿಂದ ಸೊಸೆಗೆ ಹೊರಗಿನ ಕೆಲಸ ಬರಲೆಂದು ಮುದುಕಿ ಬಯಸಿದಳು.

5. ಮುದುಕಿಯು ಯಾರನ್ನು ಏನೆಂದು ಪ್ರಾರ್ಥಿಸುವಳು?

ಸೊಸೆ ಹೊರಗೆ ಕೆಲಸಕ್ಕೆ ಹೋದರೆ ತನಗೆ ಮುದುಕನ ಜೊತೆಯಲ್ಲಿ ಫೋನಿನಲ್ಲಿ ಮಾತನಾಡಬಹುದು ಎಂದು ಮುದುಕಿ ಅಂದುಕೊಳ್ಳುತ್ತಾಳೆ. ಆ ಕಾರಣಕ್ಕಾಗಿ ಮುದುಕಿ ಗುಟ್ಟೆಮಲ್ಲಪ್ಪನನ್ನು ಪ್ರಾರ್ಥಿಸಿ ಹರಕೆ ಹೊತ್ತಳು. ಸೊಸೆಯೊಬ್ಬಳಿಗೆ ಈ ಹೊತ್ತು ದೇವರೇ ಹೊರಗಿನ ಕೆಲಸ ಸಿಮ್ಮಲಿಸಲಿ. ಗುಟ್ಟೆಮಲ್ಲಪ್ಪನ ಗಟ್ಟಿಪಾದಕ್ಕೆ ಒಂದು ಹೂ ಹೆಚ್ಚಿಗೆ ಇಡುತೀನಿ ಎಂದು ಹರಕೆ ಹೊತ್ತಳು.

**ಐದು–ಆರು ವಾಕ್ಯದಲ್ಲಿ ಉತ್ತರಿಸಿ:**

1. ಮಗ, ಸೊಸೆ ಮತ್ತು ಮೊಮ್ಮಗಳು ಮುದುಕಿಯನ್ನು ಹೇಗೆ ನಡೆಸಿಕೊಳ್ಳುವರು?

ವಯೋವೃದ್ಧ ತಂದೆ–ತಾಯಿಯರನ್ನು ಮಕ್ಕಳು ಜವಾಬ್ದಾರಿ ನಿಭಾಯಿಸುವ ನೆಪದಲ್ಲಿ ಹಂಚಿಕೊಂಡು, ಹಿರಿಯ ಜೀವಗಳ ತಲ್ಲಣಗಳನ್ನು ಅಲಕ್ಷಿಸುವಷ್ಟು ವ್ಯಾವಹಾರಿಕವಾಗಿದೆ.ಇಂದಿನ ಕೃತಕ ಜೀವನದಲ್ಲಿ ಮೌಲ್ಯಗಳು ನಾಶವಾಗಿದೆ. ಇಲ್ಲಿನ ಮುದುಕಿ ಹಿರಿಯ ಮಗನ ಜೊತೆಗಿದ್ದಾಳೆ. ಕಿರಿಯ ಮಗನ ಜೊತೆಗಿದ್ದ ಮುದುಕನ ಹತ್ತಿರ

ಮಾತನಾಡಬೇಕೆಂಬ ಚಡಪಡಿಕೆ ಮುದುಕಿ0ಯುದು. ಅಸ್ಸಾಂನಲ್ಲಿದ್ದ ಮುದುಕನಿಗೂ ಹಾಗೆಯೇ.

ಮುದುಕಿಗೆ ದೂರದ ಊರಿನಲ್ಲಿರುವ ಗಂಡನೊಂದಿಗೆ ಮಾತನಾಡಬೇಕು. ಫೋನು ಝುಣಗುಡುತ್ತಿದ್ದರೆ ಅದನ್ನು ಎತ್ತಿಕೊಳ್ಳಲೋ ಬೇಡವೋ, ಸೊಸೆ ಏನೆನ್ನುವಳೋ. ಮಗ ಎಷ್ಟು ಸಲವಮ್ಮ ಹೇಳುವುದು ನಿನಗೆ ಎಂದು ಗದರಬಹುದು ಎನ್ನುವ ಭಯ ಮುದುಕಿಯದು. ಫೋನು ಇಟ್ಟಿರುವ ಮಣೆಯವರೆಗೂ ಬರುತ್ತಾಳೆ. ಒಂದು ಸಲ ಸೊಸೆ ಏನೆನ್ನುವಳೋ ಎಂದು ಕಿಚನ್ನಿನ ಕಡೆಗೆ ನೋಡುತ್ತಾಳೆ. ಇನ್ನೊಂದು ಸಾರಿ ಸ್ಟಡಿ ರೂಮಿನೆಡೆಗೆ ನೋಡುತ್ತಾಳೆ. ಫೋನು ಝುಣಗುಡುವುದು ನಿಲ್ಲುತ್ತದೆಯೋ ಎನ್ನುವ ಭಯ. ಯಾರಾದರೂ ಬಂದು ಫೋನನ್ನು ಎತ್ತಬಾರದೇ? ಆ ಕಡೆ ಮುದುಕನಿರಬಹುದು ಎಂದು ಮುದುಕಿಯ ಜೀವ ಎಳೆಯುತ್ತಿದೆ.

ಮುದುಕಿ ಮುದುಕನ ಜೊತೆ ಮಾತನಾಡುವಾಗ ಅವನ ಭಾವನೆಗೆ ಸ್ಪಂದಿಸಿ ಅಳುವಾಗ ಮಗನಿಗೆ ಕೇಳಿಸಿದರೆ "ಸುಮ್ಮನಿರಮ್ಮ ಈಗ ಅಳುವಂಥದ್ದೇನಾಗಿದೆಯಮ್ಮ ನಿನಗೆ ಎಂದು ಗದರಬಹುದೆನ್ನುವ ಆತಂಕ ಮುದುಕಿಗಿದೆ. ಫೋನು ನಿಂತುಬಿಡಬಹುದೆನ್ನುವ ತಳಮಳ ಅವಳಿಗಿದೆ.

ಅದು ರಿಂಗಣಿಸುತ್ತಾ ಇರುವ ಹಾಗೆಯೇ ಫೋನು ಎತ್ತಲು ಮೊಮ್ಮಗಳನ್ನು ಕರೆಯಲು ಹೋಗುತ್ತಾಳೆ. ಮಹಡಿ ಹತ್ತಿ ಮೊಮ್ಮಗಳನ್ನು ಕರೆದರೆ ಅವಳು ಕಂಪ್ಯೂಟರಿನ ಮೇಲೆ ಮೂಜಗವನ್ನೇ ಆವಾಹಿಸಿ ಕುಳಿತಿದ್ದಾಳೆ. ಚಿಟುಗುಟ್ಟುತ್ತಲೇ ಅಟ್ಟವಿಳಿದು ಬಂದು ಧಡ್ಡನೆ ಫೋನೆತ್ತಿ "ರಾಂಗ್ ನಂಬರ್" ಎನ್ನುತ್ತಾಳೆ. ಅದು ಮುದುಕಿಗೆ ಅನುಮಾನ ತಂದಿತು.ಮೊಮ್ಮಗಳ ಆತುರಕ್ಕೆ ಮುದುಕಿ "ಈ ಹುಡುಗಿ ಸರಿಯಾಗಿ ಕೇಳಿಸಿಕೊಂಡಳೋ ಗಡಿಬಿಡಿಯಲ್ಲಿ ಬಿಡುಗಡೆಗೆ ಹಾತೊರೆದು ರೈಟನ್ನೇ ರಾಂಗೆಂದಳೋ" ಎಂದುಕೊಂಡಳು. ಬಚ್ಚಲಿಗೆ ಹೋಗಿ ನಿಮಿಷ ನಿಂತಿದ್ದು

ಮತ್ತೆ ಫೋನು ಬರಬಹುದೆಂದು ಫೋನಿನ ಬಳಿಗೆ ಬರುತ್ತಾಳೆ. ಮಗ, ಸೊಸೆ ಮತ್ತು ಮೊಮ್ಮಗಳು ಮುದುಕಿಯನ್ನು ಈ ರೀತಿಯೆಲ್ಲಾ ನಡೆಸಿಕೊಳ್ಳುವರು.

2. ಮುದುಕನ ಕುರಿತು ಮುದುಕಿಯ ನೆನೆಕೆಗಳೇನು?

ವಯೋವೃದ್ಧ ತಂದೆತಾಯಿಯರನ್ನು ಮಕ್ಕಳು ಜವಾಬ್ದಾರಿಯನ್ನು ನಿಭಾಯಿಸುವ ನೆಪದಲ್ಲಿ ಹಂಚಿಕೊಂಡು, ಹಿರಿಯ ಜೀವಗಳ ತಲ್ಲಣಗಳನ್ನು ಅಲಕ್ಷಿಸುವಷ್ಟು ವ್ಯಾವಹಾರಿಕವಾಗಿದೆ. ಇಂದಿನ ಕೃತಕ ಜೀವನದಲ್ಲಿ ಮೌಲ್ಯಗಳು ನಾಶವಾಗಿದೆ. ಇಲ್ಲಿನ ಮುದುಕಿ ಹಿರಿಯ ಮಗನ ಜೊತೆಗಿದ್ದಾಳೆ. ಕಿರಿಯ ಮಗನ ಜೊತೆಗಿದ್ದ ಮುದುಕನ ಹತ್ತಿರ ಮಾತನಾಡಬೇಕೆಂಬ ಚಡಪಡಿಕೆ ಮುದುಕಿಯದು. ಅಸ್ಸಾಂನಲ್ಲಿದ್ದ ಮುದುಕನಿಗೂ ಹಾಗೆಯೇ.

ದೊಡ್ಡ ಮಗ ಮುದುಕಿಯನ್ನು ಕಿರಿಯ ಮಗ ಮುದುಕನನ್ನು ಹಂಚಿಕೊಂಡಿದ್ದಾರೆ. ಮುದುಕಿ ಇದ್ದ ಸ್ಥಳ ಕರ್ನಾಟಕ. ಭಾಷೆ ಕನ್ನಡವಾದ ಕಾರಣ ಸೊಸೆ ಹೊರಗೆ ಹೋದಾಗ ಹೊರಗಿನವರೊಂದಿಗೆ ಮಾತನಾಡಿ ಬಾಯತುರಿಕೆಯನ್ನು ತೀರಿಸಿಕೊಳ್ಳುತ್ತಾಳೆ. ಆದರೆ ಮುದುಕನಿರುವುದು ದೂರದ ಅಸ್ಸಾಂಮಿನಲ್ಲಿ. ಮುದುಕನಿಗೆ ಅಲ್ಲಿನ ಭಾಷೆ ಬರುವುದಿಲ್ಲ. ಕಿರಿಯ ಮಗ ಮತ್ತವನ ಹೆಂಡತಿ ಬೆಳಿಗ್ಗೆ ಒಂಭತ್ತಕ್ಕೆ ಕೆಲಸಕ್ಕೆ ಹೋದರೆ ಬರುವುದು ಹೊತ್ತು ಕಳೆದ ಮೇಲೆ. ಹಾಗಾಗಿ ಅಸ್ಸಾಮಿ ಭಾಷೆ ಬರದ ಅವನಿಗೆ ಮಾತನಾಡಲು ಯಾರು ಇಲ್ಲ. ಮುದುಕಿ ಫೋನು ಮಾಡಿದಾಗಲೆಲ್ಲ ಮಾತೇ ಮರೆತು ಹೋಗಿದೆ ಕಣೆ. ಮಾತಾಡು ಮಾತಾಡು ಮಾತಾಡುತ್ತಿರು ಮಾತು ನಿಲ್ಲಿಸಬೇಡ. ಎಂದು ಗೋಗರೆಯುತ್ತಾನೆ. ಆತ ಫೋನುಗೂಡನ್ನೇ ತಬ್ಬಿಕೊಂಡಿರುವುದನ್ನು ನೆನೆದು ಮುದುಕಿಗೆ ಕಣ್ಣೀರು ಬಂದರೂ ಮುದುಕನಿಗೆ ತಿಳಿದರೆ ಕೊರಗಬಹುದೆಂದು ಆತಂಕದಿಂದ ನಿಟ್ಟುಸಿರು ಸೋರದ ಹಾಗೆ ಕಣ್ಣೀರು ಸುರಿಸುತ್ತಾಳೆ. ತನ್ನ ಸಂಗಾತಿಯ ನೆನಪು ಮುದುಕಿಯನ್ನು ಅವರಿಸಿಕೊಂಡಿದೆ.

3. ಮುದುಕಿಯ ತಳಮಳ ಕವಿತೆಯಲ್ಲಿ ಹೇಗೆ ವ್ಯಕ್ತವಾಗಿದೆ?

ವಯೋವೃದ್ಧ ತಂದೆ ತಾಯಿಯರನ್ನು ಮಕ್ಕಳು ಜವಾಬ್ದಾರಿಯನ್ನು ನಿಭಾಯಿಸುವ ನೆಪದಲ್ಲಿ ಹಂಚಿಕೊಂಡು, ಹಿರಿಯ ಜೀವಗಳ ತಲ್ಲಣಗಳನ್ನು ಅಲಕ್ಷಿಸುವಷ್ಟು ವ್ಯಾವಹಾರಿಕವಾಗಿದೆ. ಇಂದಿನ ಕೃತಕ ಜೀವನದಲ್ಲಿ ಮೌಲ್ಯಗಳು ನಾಶವಾಗಿದೆ. ಇಲ್ಲಿನ ಮುದುಕಿ ಹಿರಿಯ ಮಗನ ಜೊತೆಗಿದ್ದಾಳೆ. ಕಿರಿಯ ಮಗನ ಜೊತೆಗಿದ್ದ ಮುದುಕನ ಹತ್ತಿರ ಮಾತನಾಡಬೇಕೆಂಬ ಚಡಪಡಿಕೆ ಮುದುಕಿ0ಯದು.ಅಸ್ಸಾಂನಲ್ಲಿದ್ದ ಮುದುಕನಿಗೂ ಹಾಗೆಯೇ.

ಮುದುಕಿಗೆ ದೂರದ ಊರಿನಲ್ಲಿರುವ ಗಂಡನೊಂದಿಗೆ ಮಾತನಾಡಬೇಕು. ಫೋನು ಝುಣಗುಡುತ್ತಿದ್ದರೆ ಅದನ್ನು ಎತ್ತಿಕೊಳ್ಳಲೋ ಬೇಡವೋ, ಸೊಸೆ ಏನೆನ್ನುವಳೋ. ಮಗ–ಎಷ್ಟು ಸಲವಮ್ಮ ಹೇಳುವುದು ನಿನಗೆ ಎಂದು ಗದರಬಹುದು ಎನ್ನುವ ಭಯ ಮುದುಕಿಯದು. ಫೋನು ಇಟ್ಟಿರುವ ಮಹೆಯವರೆಗೂ ಬರುತ್ತಾಳೆ. ಒಂದು ಸಲ ಸೊಸೆ ಏನೆನ್ನುವಳೋ ಎಂದು ಕಿಚನ್ನಿನ ಕಡೆಗೆ ನೋಡುತ್ತಾಳೆ. ಇನ್ನೊಂದು ಸಾರಿ ಸ್ಟಡಿರೂಮಿನೆಡೆಗೆ ನೋಡುತ್ತಾಳೆ. ಫೋನು ಝುಣಗುಡುವುದು ನಿಲ್ಲುತ್ತದೆಯೋ ಎನ್ನುವ ಭಯ. ಯಾರಾದರೂ ಬಂದು ಫೋನನ್ನು ಎತ್ತಬಾರದೇ? ಆ ಕಡೆ ಮುದುಕನಿರಬಹುದು ಎಂದು ಮುದುಕಿಯ ಜೀವ ಎಳೆಯುತ್ತಿದೆ.

ಮುದುಕಿ ಮುದುಕನ ಜೊತೆ ಮಾತನಾಡುವಾಗ ಅವನ ಭಾವನೆಗೆ ಸ್ಪಂದಿಸಿ ಅಳುವಾಗ ಮಗನಿಗೆ ಕೇಳಿಸಿದರೆ "ಸುಮ್ಮನಿರಮ್ಮ ಈಗ ಅಳುವಂಥದ್ದೇನಾಗಿದೆಯಮ್ಮ ನಿನಗೆ ಎಂದು ಗದರಬಹುದೆನ್ನುವ ಆತಂಕ ಮುದುಕಿಗಿದೆ. ಫೋನು ನಿಂತುಬಿಡಬಹುದೆನ್ನುವ ತಳಮಳ ಅವಳಿಗಿದೆ.

ಅದು ರಿಂಗಣಿಸುತ್ತಾ ಇರುವ ಹಾಗೆಯೇ ಫೋನು ಎತ್ತಲು ಮೊಮ್ಮಗಳನ್ನು ಕರೆಯಲು ಹೋಗುತ್ತಾಳೆ. ಮಹಡಿ ಹತ್ತಿ ಮೊಮ್ಮಗಳನ್ನು ಕರೆದರೆ ಅವಳು ಕಂಪ್ಯೂಟರಿನ ಮೇಲೆ ಮೂಜಗವನ್ನೇ ಆವಾಹಿಸಿ ಕುಳಿತಿದ್ದಾಳೆ. ಚಿಟುಗುಡುತ್ತಲೇ ಅಟ್ಟವಿಳಿದು ಬಂದು ಧಡ್ಡನೆ ಫೋನೆತ್ತಿ

"ರಾಂಗ್ ನಂಬರ್" ಎನ್ನುತ್ತಾಳೆ. ಅದು ಮುದುಕಿಗೆ ಅನುಮಾನ ತಂದಿತು.ಮೊಮ್ಮಗಳ ಆತುರಕ್ಕೆ ಮುದುಕಿ "ಈ ಹುಡುಗಿ ಸರಿಯಾಗಿ ಕೇಳಿಸಿಕೊಂಡಳೋ ಗಡಿಬಿಡಿಯಲ್ಲಿ ಬಿಡುಗಡೆಗೆ ಹಾತೊರೆದು ರೈಟನ್ನೆ ರಾಂಗೆಂದಳೋ" ಎಂದುಕೊಂಡಳು. ಬಚ್ಚಲಿಗೆ ಹೋಗಿ ನಿಮಿಷ ನಿಂತಿದ್ದು ಮತ್ತೆ ಫೋನುಬರಬಹುದೆಂದು ಫೋನಿನ ಬಳಿಗೆ ಬರುತ್ತಾಳೆ. ಮುದುಕನಿಂದ ಕರೆ ಬಂದ ಸಮಯದಲ್ಲೇ ಮಗನ ಕಾರೂ ಸ್ಟಾರ್ಟಾಯಿತು. ಮೊಮ್ಮಗಳು ಸ್ಕೂಟಿಯಲ್ಲಿ ಹೊರಟಳು. ಮೊಮ್ಮಗನ ಸ್ಕೂಲಿನ ವ್ಯಾನೂ ಬಂದಿರುತ್ತದೆ.ಇನ್ನಿರುವ ಅಡ್ಡಿಯೆಂದರೆ ಸೊಸೆ. ಸೊಸೆ ಹೊರಗೆ ಕೆಲಸಕ್ಕೆ ಹೋದರೆ ನಾನು ಮುದುಕನ ಜೊತೆಗೆ ಮಾತನಾಡಬಹುದೆಂಬ ಆಸೆಯಿಂದ ಸೊಸೆಗೆ ಹೊರಗಿನ ಕೆಲಸ ಬರಲೆಂದು ಮುದುಕಿ ಬಯಸಿದಳು. ಆ ಕಾರಣಕ್ಕಾಗಿ ಮುದುಕಿ ಗುಟ್ಟೆಮಲ್ಲಪ್ಪನನ್ನು ಪ್ರಾರ್ಥಿಸಿ ಹರಕೆ ಹೊತ್ತಳು. ಸೊಸೆಯೊಬ್ಬಳಿಗೆ ಈ ಹೊತ್ತು ದೇವರೇ ಹೊರಗಿನ ಕೆಲಸ ಸಮ್ಮಿಲಿಸಲಿ (ಒಂದುಗೂಡಲಿ). ಗುಟ್ಟೆಮಲ್ಲಪ್ಪನ ಗಟ್ಟಿಪಾದಕ್ಕೆ ಒಂದು ಹೂ ಹೆಚ್ಚಿಗೆ ಇಡುತೀನಿ ಎಂದು ಹರಕೆ ಹೊತ್ತಳು.ಹೀಗೆ ಮುದುಕಿಯ ತಳಮಳ ಕವಿತೆಯಲ್ಲಿ ಹೇಗೆ ವ್ಯಕ್ತವಾಗಿದೆ.

4. ವೃದ್ಧರ ತವಕ–ತಲ್ಲಣಗಳನ್ನು ಕವಯಿತ್ರಿ ಹೇಗೆ ಚಿತ್ರಿಸಿದ್ದಾರೆ?

ವಯೋವೃದ್ಧ ತಂದೆತಾಯಿಯರನ್ನು ಮಕ್ಕಳು ಜವಾಬ್ದಾರಿಯನ್ನು ನಿಭಾಯಿಸುವ ನೆಪದಲ್ಲಿ ಹಂಚಿಕೊಂಡು, ಹಿರಿಯ ಜೀವಗಳ ತಲ್ಲಣಗಳನ್ನು ಅಲಕ್ಷಿಸುವಷ್ಟು ವ್ಯಾವಹಾರಿಕವಾಗಿದೆ.ಇಂದಿನ ಕೃತಕ ಜೀವನದಲ್ಲಿ ಮೌಲ್ಯಗಳು ನಾಶವಾಗಿದೆ. ಮಮತೆಯಿಂದ ಸಾಕಿ ಬೆಳೆಸಿದ ಹೆತ್ತವರನ್ನು ತಾತ್ಸಾರದಿಂದ ಕಾಣುವ ಮನೋಭಾವವಿಂದು ಎಲ್ಲೆಲ್ಲೂ ಸಾಮಾನ್ಯವಾಗಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಬೇರ್ಪಟ್ಟಿರುವ ಕಾರಣಕ್ಕೆ ಪರಸ್ಪರ ತಳಮಳ ವ್ಯಕ್ತಪಡಿಸುವ ಹಿರಿಯ ಜೀವಗಳೆರಡರ ತುಯ್ದಾಟವನ್ನು ಚಿತ್ರಿಸುವ ಪ್ರಸ್ತುತ ಕವಿತೆಯು ನಾವು ಕಳೆದುಕೊಳ್ಳುತ್ತಿರುವ ಮಾನವೀಯ ಮೌಲ್ಯಗಳಿಗೆ ಹಿಡಿದ ಕನ್ನಡಿಯಾಗಿದೆ.

ಮುದುಕಿಗೆ ದೂರದ ಊರಿನಲ್ಲಿರುವ ಗಂಡನೊಂದಿಗೆ ಮಾತನಾಡಬೇಕು. ಫೋನು ಝುಣಗುಡುತ್ತಿದ್ದರೆ ಅದನ್ನು ಎತ್ತಿಕೊಳ್ಳಲೋ ಬೇಡವೋ,ಸೊಸೆ ಏನೆನ್ನುವಳೋ. ಮಗ–ಎಷ್ಟು ಸಲವಮ್ಮ ಹೇಳುವುದು ನಿನಗೆ ಎಂದು ಗದರಬಹುದು ಎನ್ನುವ ಭಯ ಮುದುಕಿಯದು. ಫೋನು ಇಟ್ಟಿರುವ ಮಣೆಯವರೆಗೂ ಬರುತ್ತಾಳೆ. ಒಂದು ಸಲ ಸೊಸೆ ಏನೆನ್ನುವಳೋ ಎಂದು ಕಿಚನ್ನಿನ ಕಡೆಗೆ ನೋಡುತ್ತಾಳೆ. ಇನ್ನೊಂದು ಸಾರಿ ಸ್ಟಡಿ ರೂಮಿನೆಡೆಗೆ ನೋಡುತ್ತಾಳೆ. ಫೋನು ಝುಣಗುಡುವುದು ನಿಲ್ಲುತ್ತದೆಯೋ ಎನ್ನುವ ಭಯ.ಯಾರಾದರೂ ಬಂದು ಫೋನನ್ನು ಎತ್ತಬಾರದೇ? ಆ ಕಡೆ ಮುದುಕನಿರಬಹುದು ಎಂದು ಮುದುಕಿಯ ಜೀವ ಎಳೆಯುತ್ತಿದೆ.

ಇಲ್ಲಿ ಮುದುಕಿ ಹಿರಿಯ ಮಗನ ಜೊತೆಗಿದ್ದಾಳೆ. ಕಿರಿಯ ಮಗನ ಜೊತೆಗಿದ್ದ ಮುದುಕನ ಹತ್ತಿರ ಮಾತನಾಡಬೇಕೆಂಬ ಚಡಪಡಿಕೆ ಮುದುಕಿಯದು. ಅಸ್ಸಾಂನಲ್ಲಿದ್ದ ಮುದುಕನಿಗೂ ಹಾಗೆಯೇ. ಮುದುಕಿ ಇದ್ದ ಸ್ಥಳ ಕರ್ನಾಟಕ.ಭಾಷೆ ಕನ್ನಡವಾದ ಕಾರಣ ಸೊಸೆ ಹೊರಗೆ ಹೋದಾಗ ಹೊರಗಿನವರೊಂದಿಗೆ ಮಾತನಾಡಿ ಬಾಯತುರಿಕೆಯನ್ನು ತೀರಿಸಿಕೊಳ್ಳುತ್ತಾಳೆ. ಆದರೆ ಮುದುಕನಿರುವುದು ದೂರದ ಅಸ್ಸಾಂಮಿನಲ್ಲಿ.ಮುದುಕನಿಗೆ ಅಲ್ಲಿನ ಭಾಷೆ ಬರುವುದಿಲ್ಲ. ಕಿರಿಯ ಮಗ ಮತ್ತವನ ಹೆಂಡತಿ ಬೆಳಿಗ್ಗೆ ಒಂಭತ್ತಕ್ಕೆ ಕೆಲಸಕ್ಕೆ ಹೋದರೆ ಬರುವುದು ಹೊತ್ತು ಕಳೆದ ಮೇಲೆ. ಹಾಗಾಗಿ ಅಸ್ಸಾಮಿ ಭಾಷೆ ಬರದ ಅವನಿಗೆ ಮಾತನಾಡಲು ಯಾರು ಇಲ್ಲ. ಮುದುಕಿ ಫೋನು ಮಾಡಿದಾಗಲೆಲ್ಲ ಮಾತೇ ಮರೆತು ಹೋಗಿದೆ ಕಣೆ. ಮಾತಾಡು ಮಾತಾಡು ಮಾತಾಡುತ್ತಿರು ಮಾತು ನಿಲ್ಲಿಸಬೇಡ. ಎಂದು ಗೋಗರೆಯುತ್ತಾನೆ. ಆತ ಫೋನು ಗೂಡನ್ನೇ ತಬ್ಬಿಕೊಂಡಿರುವುದನ್ನು ನೆನೆದು ಮುದುಕಿಗೆ ಕಣ್ಣೀರು ಬಂದರೂ ಮುದುಕನಿಗೆ ತಿಳಿದರೆ ಕೊರಗಬಹುದೆಂದು ಆತಂಕದಿಂದ ನಿಟ್ಟುಸಿರು ಸೋರದ ಹಾಗೆ ಕಣ್ಣೀರು ಸುರಿಸುತ್ತಾಳೆ.

ಮುದುಕಿ ಮುದುಕನ ಜೊತೆ ಮಾತನಾಡುವಾಗ ಅವನ ಭಾವನೆಗೆ ಸ್ಪಂದಿಸಿ ಅಳುವಾಗ ಮಗನಿಗೆ ಕೇಳಿಸಿದರೆ "ಸುಮ್ಮನಿರಮ್ಮ ಈಗ ಅಳುವಂಥದ್ದೇನಾಗಿದೆಯಮ್ಮ ನಿನಗೆ ಎಂದು ಗದರಬಹುದೆನ್ನುವ ಆತಂಕ ಮುದುಕಿಗಿದೆ. ಫೋನು ನಿಂತುಬಿಡಬಹುದೆನ್ನುವ ತಳಮಳ ಅವಳಿಗಿದೆ.

ಅದು ರಿಂಗಣಿಸುತ್ತಾ ಇರುವ ಹಾಗೆಯೇ ಫೋನು ಎತ್ತಲು ಮೊಮ್ಮಗಳನ್ನು ಕರೆಯಲು ಹೋಗುತ್ತಾಳೆ. ಮಹಡಿ ಹತ್ತಿ ಮೊಮ್ಮಗಳನ್ನು ಕರೆದರೆ ಅವಳು ಕಂಪ್ಯೂಟರಿನ ಮೇಲೆ ಮೂಜಗವನ್ನೇ ಆವಾಹಿಸಿ ಕುಳಿತಿದ್ದಾಳೆ. ಚಿಟುಗುಡುತ್ತಲೇ ಅಟ್ಟವಿಳಿದು ಬಂದು ಧಡ್ಡನೆ ಫೋನೆತ್ತಿ "ರಾಂಗ್ ನಂಬರ್" ಎನ್ನುತ್ತಾಳೆ. ಅದು ಮುದುಕಿಗೆ ಅನುಮಾನ ತಂದಿತು. ಮೊಮ್ಮಗಳ ಆತುರಕ್ಕೆ ಮುದುಕಿ "ಈ ಹುಡುಗಿ ಸರಿಯಾಗಿ ಕೇಳಿಸಿಕೊಂಡಳೋ ಗಡಿಬಿಡಿಯಲ್ಲಿ ಬಿಡುಗಡೆಗೆ ಹಾತೊರೆದು ರೈಟನ್ನೆ ರಾಂಗೆಂದಳೋ" ಎಂದುಕೊಂಡಳು. ಬಚ್ಚಲಿಗೆ ಹೋಗಿ ನಿಮಿಷ ನಿಂತಿದ್ದು ಮತ್ತೆ ಫೋನುಬರಬಹುದೆಂದು ಫೋನಿನ ಬಳಿಗೆ ಬರುತ್ತಾಳೆ. ಹೀಗೆ ಒಂದು ಫೋನಿನ ಕರೆಗಾಗಿ ತಳಮಳಿಸುವ ಹಿರಿಯ ಜೀವಗಳೆರಡರ ತವಕ ತಲ್ಲಣಗಳನ್ನು ಕವಯಿತ್ರಿ ಹಿಡಿದಿಟ್ಟಿದ್ದಾರೆ. ನಮ್ಮನ್ನು ಪ್ರೀತಿಯಿಂದ ಪೋಷಿಸಿದ ಹಿರಿಯರನ್ನು ಅವರ ವೃದ್ಧಾಪ್ಯದಲ್ಲಿ ಆಸರೆಯಾಗದ ನಮ್ಮ ಹೊಣೆಗೇಡಿತನವನ್ನು ಕವಿತೆ ಪ್ರಶ್ನಿಸುವಂತಿದೆ. ವಿಷಾದದ ದನಿ ಎತ್ತಿದೆ ಎನ್ನಬಹುದು.

===0===

# ಹತ್ತಿ...ಚಿತ್ತ...ಮತ್ತು...

**ಪ್ರೊ. ಟಿ. ಯಲ್ಲಪ್ಪ**

**ಸಾರಾಂಶ:**

ಕವಿ ಪ್ರೊ. ಟಿ. ಯಲ್ಲಪ್ಪರವರು ಈ ಕವಿತೆಯಲ್ಲಿ ಆತ್ಮ ಪರಮಾತ್ಮಗಳ ಅಸ್ತಿತ್ವವನ್ನು ಹತ್ತಿ ಮತ್ತು ಚಿತ್ತಗಳ ಮೂಲಕ ವಿವರಿಸುತ್ತಿದ್ದಾರೆ. ಜೀವಾತ್ಮದ ಸಾರ್ಥಕತೆಯಿರುವುದು ತನ್ನ ಅಹಂಕಾರವನ್ನು ಸುಟ್ಟುಕೊಂಡು ಬೆಳಕನ್ನು ಜ್ಞಾನವನ್ನು ಹೊಂದುವುದರಲ್ಲಿ.ಇಲ್ಲಿ ಹತ್ತಿಯ ಬೀಜವು ಬೆಳಕಿಗೆ ಜೀವದ್ರವ್ಯವಾಗಿದೆ. ಹತ್ತಿಯ ಬೀಜವು ಗಿಡವಾಗಿ ಬೆಳೆದು, ಅದರ ಹತ್ತಿಯು ಬತ್ತಿಯಾಗಿ, ಹತ್ತಿಯ ಬೀಜವು ತೈಲವಾಗಿ, ಹೊತ್ತಿ ಉರಿಯುವ ಬೆಳಕೂ ಆಗಿ ತನ್ನನ್ನು ತಾನು ಸುಟ್ಟುಕೊಂಡು ಜಗತ್ತಿಗೆ ಬೆಳಕನ್ನು ನೀಡುವ ಪರಿ ಬಹಳ ಸೊಗಸಾದುದು ಎನ್ನುವುದು ಕವಿಯ ಅಭಿಮತ.

ಹತ್ತಿಯ ಬೀಜ ತನ್ನಿಂದಲೇ ತಯಾರಾದ ಬತ್ತಿಯಿಂದ, ತನ್ನಿಂದಲೇ ಉದಿಸಿದ ಎಣ್ಣೆಯಿಂದ ಸುಟ್ಟು ಇಲ್ಲವಾಗುತ್ತದೆ. ಅದರಿಂದ ದೊರಕಿದ ಬೆಳಕಿನಿಂದ ಮಾತ್ರ ಲೋಕಕಲ್ಯಾಣವಾಗುತ್ತದೆ. ಅದರಂತೆ ಜೀವ ಹಲವು ಬಯಕೆಗಳಿಂದ ಘಾಸಿಗೊಂಡರೂ, ಆತ್ಮದ ಉನ್ನತಿಗೆ ಕಾರಣವಾಗಿ ಸುಟ್ಟುಕೊಳ್ಳುತ್ತದೆ. ಹೀಗೆ ಮಾಗುವ ಜೀವದ ಪಯಣ ಈ ಪರಿಯಲ್ಲಿ ಸದ್ದಿಲ್ಲದೆ ಸಾಗುತ್ತಿದೆ.

ನಿದ್ದೆಯಿಂದ ಎದ್ದ ಮಗು ಅಳಲು ಪ್ರಾರಂಭಿಸಿದೆ. ಆದರೆ ಅದು ಅಳುತ್ತಿರುವುದು ಅಮ್ಮನಿಗೋ ಬಾಟಲಿಯ ಹಾಲಿಗೋ ಎನ್ನುವುದು ಮೊದಲು ತಿಳಿಯಬೇಕಾಗಿದೆ. ಮಗು ಅಮ್ಮನಿದ್ದೂ ಬಾಟಲಿಯ ಹಾಲಿಗೆ ಬಾಯೊಡ್ಡುತ್ತದೆಯೆಂದರೆ, ಮಗು; ಎಲ್ಲವೂ ಇದ್ದೂ ಇಲ್ಲದಂತ ಅನಾಥ ಸ್ಥಿತಿಯನ್ನು ಅನುಭವಿಸುತ್ತಿರುವುದು ಗಮನಾರ್ಹ.

ದೀಪ ಆರಿದಾಗ ಕಮಟು ವಾಸನೆ ಬರುತ್ತದೆ. ಆಗ ಮಾತ್ರವೇ ನಮಗೆ ದೀಪ ಆರಿದೆಯೆಂದು ತಿಳಿಯುತ್ತದೆ. ಅಂತೆಯೇ ಆತ್ಮಕ್ಕೆ ಕಮಟು ಹತ್ತುವುದು ಎಂದರೆ ದೇಹ ನಾಶವಾಗಿ ಆತ್ಮ ಇಲ್ಲದಂತಾಗುವುದಾಗಿದೆ ಎಂಬುದನ್ನು ಕವಿ ವಿವರಿಸುತ್ತಾರೆ.

ಕವಿಯ ಪ್ರಕಾರ ಎಣ್ಣೆ ತೀರಿರುವ ದೀಪಗಳಿಗೆ ಬತ್ತಿ ಹೊಸೆಯುವ ಕೆಲಸ ವ್ಯರ್ಥವೇನಲ್ಲ. ಏಕೆಂದರೆ ಮತ್ತೆ ಬತ್ತಿ ಹೊಸೆದು ದೀಪ ಬೆಳಗುವ ಸಾಧ್ಯತೆ ಇದ್ದೇ ಇರುತ್ತದೆ. ಈ ಸಾಧ್ಯತೆಯೇ ಬದುಕಿನ ಆಶಾವಾದಿತನವಾಗಿದೆ ಮತ್ತು ಇದು ಬದುಕಿನ ನಿಜವಾದ ಇಂಧನ. ಈ ಬಗೆಯ ಜೀವನ ಪ್ರೇಮವು ಬದುಕನ್ನು ಮತ್ತೆ ಹೊಸದಾಗಿ ಪ್ರಾರಂಭಿಸಬೇಕೆಂಬ ಪ್ರಯತ್ನಕ್ಕೆ ಕಾರಣವಾಗುತ್ತದೆ ಎಂಬುದು ಕವಿಯ ಅಭಿಪ್ರಾಯ.

ಹತ್ತಿಯ ಬೀಜವು ಬೆಳಕಿಗೆ ಜೀವದ್ರವ್ಯವಾಗಿದೆ. ಹತ್ತಿಯ ಬೀಜವು ಗಿಡವಾಗಿ ಬೆಳೆದು, ಅದರ ಹತ್ತಿಯು ಬತ್ತಿಯಾಗಿ, ಹತ್ತಿಯ ಬೀಜವು ತೈಲವಾಗಿ, ಹೊತ್ತಿ ಉರಿಯುವ ಬೆಳಕೂ ಆಗಿ ತನ್ನನ್ನು ತಾನು ಸುಟ್ಟುಕೊಂಡು ಜಗತ್ತಿಗೆ ಬೆಳಕನ್ನು ನೀಡುತ್ತದೆ. ಈ ಬೆಳಕು ಜ್ಞಾನದ ಸಂಕೇತವಾಗಿದೆ. ಹಾಗೆಯೇ ಮಾನವ ಜೀವದ ಪಯಣ. ವ್ಯಕ್ತಿಯನ್ನು ಆವರಿಸಿದ ಮೋಹ, ಪಾಷಗಳು ಆತನನ್ನು ಸರಿಯಾಗಿ ಸುಟ್ಟು ನಂತರ ಅವುಗಳಿಂದ ದೂರಾಗಿ ಒಳಿತಿನ ಕಡೆಗೆ ಪ್ರಯಾಣಿಸಿದಾಗ ಮುಕ್ತಿ ದೊರಕಲು ಸಾಧ್ಯ. ಆಗ ಪ್ರಾಪ್ತವಾಗುವುದು ಮೋಕ್ಷದ ಮಾರ್ಗ.ಆದರೆ ಈ ಮೋಕ್ಷದ ಮಾರ್ಗ ಕಾಣಸಿಗುವುದು ವ್ಯಕ್ತಿ ತನ್ನನ್ನು ತಾನು ತೊಡಗಿಸಿಕೊಂಡಾಗ ಮಾತ್ರ.

**ಸಾಂದರ್ಭಿಕ ವಿವರಣೆ :**

1. ಬೆಳಕ ಬಟ್ಟೆಯ ತೊಡುವ ಯೋಗಿಯಂತೆ!

ಆಯ್ಕೆ: ಈ ಮೇಲಿನ ವಾಕ್ಯವನ್ನು 'ಪ್ರೊ. ಟಿ. ಯಲ್ಲಪ್ಪ'ರವರು ಬರೆದಿರುವ 'ಹತ್ತಿ...ಚಿತ್ತ...ಮತ್ತು...' ಎಂಬ ಕವಿತೆಯಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಹತ್ತಿಯ ಬದುಕು ಯೋಗಿಯ ಜೀವನದಂತೆ ಎಂದು ವಿವರಿಸುವ ಸಂದರ್ಭ ಇದಾಗಿದೆ.

ವಿವರಣೆ: ಯೋಗಿಯು ಪ್ರಾಪಂಚಿಕ ಸುಖವನ್ನು ತೊರೆದು, ಅಹಂಕಾರಗಳನ್ನು ಸುಟ್ಟುಕೊಂಡು ಜಗತ್ತಿಗೆ ಜ್ಞಾನದ ಮಾರ್ಗವನ್ನು ತೋರುತ್ತಾನೆ. ಅಂತೆಯೇ ಹತ್ತಿಯು, ಬತ್ತಿಯಾಗಿ ತೈಲದಲ್ಲಿ ಮುಳುಗಿ ತನ್ನನ್ನು ತಾನೇ ದಹಿಸಿಕೊಳ್ಳುತ್ತಾ ಜಗವನ್ನು ಬೆಳಗುತ್ತದೆ ಎನ್ನುತ್ತಾ ಈ ಮೇಲಿನಂತೆ ಹೇಳುತ್ತಾರೆ.

2. ಮಾಗುವ ಜೀವದ ಪಯಣ ಸಾಗುತ್ತಿದೆ ಸದ್ದಿಲ್ಲದೆ.

ಆಯ್ಕೆ: ಈ ಮೇಲಿನ ವಾಕ್ಯವನ್ನು 'ಪ್ರೊ. ಟಿ. ಯಲ್ಲಪ್ಪ'ರವರು ಬರೆದಿರುವ 'ಹತ್ತಿ...ಚಿತ್ತ...ಮತ್ತು...' ಎಂಬ ಕವಿತೆಯಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಮಾನವನ ಜೀವನ ಮಾಗುತ್ತ ಸಾಗುವ ಪರಿಯನ್ನು ಕವಿ ವಿವರಿಸುತ್ತಾರೆ.

ವಿವರಣೆ: ಈ ಜಗತ್ತಿನಲ್ಲಿ ಪರಿಪಕ್ವತೆಯನ್ನು ಸಾಧಿಸಿದ ಜೀವಗಳೆಲ್ಲ ನಿಸ್ವಾರ್ಥದಿಂದ ಸಮಾಜದ ಒಳಿತಿಗಾಗಿ ತಮ್ಮನ್ನು ಸಮರ್ಪಿಸಿಕೊಳ್ಳುತ್ತವೆ. ಯಾರು ಗಮನಹರಿಸಿದರೂ, ಗಮನಹರಿಸದಿದ್ದರೂ ತಾವು ಮಾಡುವ ಕೆಲಸವನ್ನು ನಿಸ್ವಾರ್ಥದಿಂದ ಮಾಡುತ್ತಿರುತ್ತಾರೆ. ಹೇಗೆ ಹತ್ತಿಯು ಗಿಡವಾಗಿ ಬೆಳೆದು, ಬತ್ತಿಯಾಗಿ, ಬೀಜವು ತೈಲವಾಗಿ, ಹೊತ್ತಿ ಉರಿಯುವ ಬೆಳಕನ್ನು ನೀಡುತ್ತದೊ ಹಾಗೆ ಜೀವವೂ ಕೂಡ ಇದೇ ನೆಲೆಯಲ್ಲಿ ಪಕ್ವಗೊಳ್ಳುತ್ತದೆ ಎನ್ನುವಾಗ ಈ ಮೇಲಿನ ಮಾತು ಧ್ವನಿಸುತ್ತದೆ.

3. ನಿದ್ದೆ ತಿಳಿದೆದ್ದ ಮಗು ಅತ್ತದ್ದು ಹಾಲಿಗೋ ಅಮ್ಮನಿಗೋ.

ಆಯ್ಕೆ: ಈ ಮೇಲಿನ ವಾಕ್ಯವನ್ನು 'ಪ್ರೊ. ಟಿ. ಯಲ್ಲಪ್ಪ'ರವರು ಬರೆದಿರುವ 'ಹತ್ತಿ...ಚಿತ್ತ...ಮತ್ತು...'ಎಂಬ ಕವಿತೆಯಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಎಲ್ಲವೂ ಇದ್ದು ಏನೂ ಇಲ್ಲದ ಅನಾಥಪ್ರಜ್ಞೆಯ ಅನುಭವವನ್ನು ವಿವರಿಸುವ ಸಂದರ್ಭವಿದು.

ವಿವರಣೆ: ನಿದ್ದೆ ತಿಳಿದೆದ್ದ ಮಗು ಅಳಲು ಪ್ರಾರಂಭಿಸಿದೆ. ಆದರೆ ಅದು ಅಳುತ್ತಿರುವುದು ಅಮ್ಮನಿಗೋ ಬಾಟಲಿಯ ಹಾಲಿಗೋ ಎನ್ನುವುದು ಮುಖ್ಯವಾಗಿ ತಿಳಿಯಬೇಕಾಗಿದೆ. ಮಗು ಅಮ್ಮನಿದ್ದೂ ಬಾಟಲಿಯ ಹಾಲಿಗೆ ಬಾಯೊಡ್ಡುತ್ತದೆಯೆಂದರೆ, ಮಗು; ಎಲ್ಲವೂ ಇದ್ದೂ ಇಲ್ಲದಂತ ಸ್ಥಿತಿಯನ್ನು ಅನುಭವಿಸುತ್ತಿದೆ ಎನ್ನುವುದನ್ನು ಈ ಮೇಲಿನಂತೆ ಹೇಳಲಾಗಿದೆ.

4. ಎಣ್ಣೆ ತೀರಿರುವ ದೀಪಗಳಿಗೆ ಬತ್ತಿ ಹೊಸೆಯುವ ಕೆಲಸ.

ಆಯ್ಕೆ: ಈ ಮೇಲಿನ ವಾಕ್ಯವನ್ನು 'ಪ್ರೊ. ಟಿ. ಯಲ್ಲಪ್ಪ'ರವರು ಬರೆದಿರುವ 'ಹತ್ತಿ...ಚಿತ್ತ...ಮತ್ತು...'ಎಂಬ ಕವಿತೆಯಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ವ್ಯರ್ಥವಲ್ಲದ ಪ್ರಯತ್ನವೊಂದರ ಕಡೆ ಕವಿ ಗಮನ ಸೆಳೆಯುವುದನ್ನು ಕಾಣಬಹುದು.

ವಿವರಣೆ: ಕವಿಯ ಪ್ರಕಾರ ಎಣ್ಣೆ ತೀರಿರುವ ದೀಪಗಳಿಗೆ ಬತ್ತಿ ಹೊಸೆಯುವ ಕೆಲಸ ವ್ಯರ್ಥವೇನಲ್ಲ. ಏಕೆಂದರೆ ಮತ್ತೆ ಬತ್ತಿ ಹೊಸೆದು ದೀಪ ಬೆಳಗುವ ಸಾಧ್ಯತೆ ಇದ್ದೇ ಇರುತ್ತದೆ. ಈ ಸಾಧ್ಯತೆಯೇ ಬದುಕಿನ ಆಶಾವಾದಿತನವಾಗಿದೆ ಮತ್ತು ಇದು ಬದುಕಿನ ನಿಜವಾದ ಇಂಧನ. ಈ ಬಗೆಯ ಜೀವನ ಪ್ರೇಮವು ಬದುಕನ್ನು ಮತ್ತೆ ಹೊಸದಾಗಿ ಪ್ರಾರಂಭಿಸಬೇಕೆಂಬ ಪ್ರಯತ್ನಕ್ಕೆ ಕಾರಣವಾಗುತ್ತದೆ ಎನ್ನುವುದನ್ನು ಈ ಮೇಲಿನ ವಾಕ್ಯದ ಮೂಲಕ ತಿಳಿಸುತ್ತಾರೆ.

5. ಬೆಣ್ಣೆಯಾಗುವ ಕರ್ಮ ತಪ್ಪಿದ್ದಲ್ಲ.

ಆಯ್ಕೆ: ಈ ಮೇಲಿನ ವಾಕ್ಯವನ್ನು 'ಪ್ರೊ. ಟಿ. ಯಲ್ಲಪ್ಪ'ರವರು ಬರೆದಿರುವ 'ಹತ್ತಿ...ಚಿತ್ತ...ಮತ್ತು...' ಎಂಬ ಕವಿತೆಯಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಮಾನವನ ಜೀವನದ ಸಾರ್ಥಕತೆಯ ಕುರಿತು ಕವಿ ಇಲ್ಲಿ ಹೇಳುತ್ತಾರೆ.

ವಿವರಣೆ: ಹತ್ತಿಗೆ ಮೆತ್ತಿಕೊಂಡಿರುವ ಬೀಜಕ್ಕೆ ಎಣ್ಣೆಯಾಗುವ ಕರ್ಮ ತಪ್ಪಿದ್ದಲ್ಲವೆನ್ನುತ್ತಾರೆ ಕವಿ. ಇಲ್ಲಿ ಎಣ್ಣೆಯು ಹತ್ತಿಯನ್ನು ಸುಡುವುದು ದುರಂತದಂತೆ ಕಂಡರೂ ಅದು ಪ್ರಕೃತಿ ನಿಯಮವಾಗಿದೆ. ಅದು ಬದುಕಿನ ಸಾರ್ಥಕ್ಯದ ಮಾರ್ಗವೂ ಹೌದು. ವ್ಯಕ್ತಿ ತನ್ನನ್ನು ಆವರಿಸಿದ ಮೋಹ, ಪಾಷಗಳು ಆತನನ್ನು ಸರಿಯಾಗಿ ಸುಟ್ಟು ದೂರಾಗಿ ಒಳಿತಿನ ಕಡೆಗೆ ಪ್ರಯಾಣಿಸಿದಾಗ ಮುಕ್ತಿ ದೊರಕಲು ಸಾಧ್ಯ. ಆಗ ಪ್ರಾಪ್ತವಾಗುವುದು ಮೋಕ್ಷದ ಮಾರ್ಗ. ಆದರೆ ಈ ಮೋಕ್ಷದ ಮಾರ್ಗ ಕಾಣಸಿಗುವುದು ವ್ಯಕ್ತಿ ತನ್ನನ್ನು ತಾನು ತೊಡಗಿಸಿಕೊಂಡಾಗ ಮಾತ್ರ.

**ಒಂದು ಅಂಕದ ಪ್ರಶ್ನೆಗಳು :**

1. ಎಣ್ಣೆಯಲ್ಲಿ ನೆನೆದ ಬತ್ತಿ ಹೇಗೆ ಕಾಣುತ್ತದೆ?

ಎಣ್ಣೆಯಲ್ಲಿ ನೆನೆದ ಬತ್ತಿ ಮಿಂದು ಮಡಿಯುಟ್ಟ ಭಕ್ತನಂತೆ ಕಾಣುತ್ತದೆ.

2. ಚಿತ್ತವನ್ನು ಯಾವುದಕ್ಕೆ ಹೋಲಿಸಲಾಗಿದೆ?

ಚಿತ್ತವನ್ನು ಹತ್ತಿಯ ಬೀಜಕ್ಕೆ ಹೋಲಿಸಲಾಗಿದೆ.

3. ಅನಾಥ ಭಾವವನ್ನು ಸೂಚಿಸುವ ಪದ ಯಾವುದು?

ಅಮ್ಮನಿದ್ದೂ ಬಾಟಲಿನ ಹಾಲಿಗೆ ಬಾಯೊಡ್ಡುವ ಮಗು ಅನಾಥ ಭಾವವನ್ನು ಸೂಚಿಸುತ್ತದೆ.

4. ಹತ್ತಿಯ ಬೀಜಕ್ಕೆ ಯಾವುದು ತಪ್ಪದ ಕರ್ಮ?

ಹತ್ತಿಯ ಬೀಜಕ್ಕೆ ಬೆಣ್ಣೆಯಾಗುವ ಕರ್ಮ ತಪ್ಪಿದ್ದಲ್ಲ.

5. ವ್ಯರ್ಥವಲ್ಲದ ಕೆಲಸವು ಯಾವುದು? ಎಣ್ಣೆ ತೀರಿರುವ ದೀಪಗಳಿಗೆ ಬತ್ತಿ ಹೊಸೆಯುವ ಕೆಲಸ ವ್ಯರ್ಥವಲ್ಲದ್ದು.

6. ತೈಲ ತೀರಿದ್ದು ಹೇಗೆ ತಿಳಿಯುತ್ತದೆ?

ತೈಲ ತೀರಿದ್ದು ದೀಪ ಆರಿದ ಮೇಲೆ ತಿಳಿಯುತ್ತದೆ.

**ಎರಡು ಅಂಕಗಳ ಪ್ರಶ್ನೆಗಳು:**

1. ಎಣ್ಣೆಯಲ್ಲಿ ನೆನೆದು ಉರಿವ ಬತ್ತಿಯನ್ನು ಯಾವ ಯಾವುದಕ್ಕೆ ಹೋಲಿಸಲಾಗಿದೆ?

ಎಣ್ಣೆಯಲ್ಲಿ ನೆನೆದು ಉರಿವ ಬತ್ತಿಯನ್ನು ಮಿಂದು ಮಡಿಯುಟ್ಟ ಭಕ್ತನಿಗೆ, ಬೆಳಕ ಬಟ್ಟೆ ತೊಡುವ ಯೋಗಿಗೆ, ತಾನು ಹೆಣೆದ ನೂಲಿನಲ್ಲೇ ತನ್ನ ಪ್ರಾಣ ಕಳೆದುಕೊಳ್ಳುವ ಜೇಡಕ್ಕೆ ಹೋಲಿಸಲಾಗಿದೆ.

2. ಮಾಗುವ ಜೀವದ ಪಯಣ ಹೇಗೆ ಸಾಗುತ್ತಿದೆ?

ಮಾಗುವ ಜೀವದ ಪಯಣ ಹತ್ತಿಯ ಜೀಜದಂತೆ ಸಾಗುತ್ತಿದೆ. ಹತ್ತಿಯ ಬೀಜವು ಗಿಡವಾಗಿ ಬೆಳೆದು, ಅದರ ಹತ್ತಿಯು ಬತ್ತಿಯಾಗಿ, ಬೀಜವು ತೈಲವಾಗಿ, ಹೊತ್ತಿ ಉರಿಯುವ ಬೆಳಕೂ ಆಗುವಂತೆ, ಜೀವವೂ ಕೂಡ ಮೋಹ, ಪಾಷಗಳಿಂದ ಸುತ್ತಿ, ಸೋತು ಒಳಿತಿನ ಕಡೆಗೆ ಪ್ರಯಾಣಿಸಿ ಮುಕ್ತಿ ದೊರೆಯುತ್ತದೆ. ಈ ನೆಲೆಯಲ್ಲಿ ಪಯಣ ಸಾಗುತ್ತಿದೆ.

3. ಆತ್ಮಕ್ಕೆ ಕಮಟು ಹತ್ತುವುದು ಎಂದರೇನು?

ತೈಲ ಮುಗಿದ ಮೇಲೆ ದೀಪ ಆರುತ್ತದೆ. ದೀಪ ಮುಗಿದಾಗ ಕಮಟು ವಾಸನೆ ಬರುತ್ತದೆ. ಹಾಗೆಯೇ ಆತ್ಮಕ್ಕೆ ಕಮಟು ಹತ್ತುವುದು ಎಂದರೆ ದೇಹ ನಾಶವಾಗಿ ಆತ್ಮ ಇಲ್ಲದಂತಾಗುವುದಾಗಿದೆ.

4. ಎಣ್ಣೆ ತೀರಿದ ದೀಪಗಳು ಏನನ್ನು ಸೂಚಿಸುತ್ತವೆ?

ಎಣ್ಣೆ ತೀರಿದ ದೀಪಗಳು ಆಯಸ್ಸು ಮುಗಿದ ಜೀವದ ಶರೀರವನ್ನು ಸೂಚಿಸುತ್ತವೆ. ಆದರೆ ಕವಿಯ ಪ್ರಕಾರ ಎಣ್ಣೆ ತೀರಿರುವ ದೀಪಗಳಿಗೆ ಬತ್ತಿ ಹೊಸೆಯುವ ಕೆಲಸ ವ್ಯರ್ಥವೇನಲ್ಲ. ಏಕೆಂದರೆ ಮತ್ತೆ ಬತ್ತಿ ಹೊಸೆದು ದೀಪ ಬೆಳಗುವ ಸಾಧ್ಯತೆ ಇದ್ದೇ ಇರುತ್ತದೆ. ಈ ಸಾಧ್ಯತೆಯೇ ಬದುಕಿನ ಬಗೆಗಿನ ಆಶಾವಾದಿತನವಾಗಿದೆ ಮತ್ತು ಇದು ಬದುಕಿನ ನಿಜವಾದ ಇಂಧನ. ಈ ಬಗೆಯ ಜೀವನ ಪ್ರೇಮವು ಬದುಕನ್ನು ಮತ್ತೆ ಹೊಸದಾಗಿ ಪ್ರಾರಂಭಿಸಬೇಕೆಂಬ ಪ್ರಯತ್ನಕ್ಕೆ ಕಾರಣವಾಗುತ್ತದೆ ಎಂಬುದು ಕವಿಯ ಅಭಿಪ್ರಾಯ.

5. ಹತ್ತಿಯ ಬೀಜ ಲೋಕದ ಹಿತಕ್ಕೆ ತನ್ನನ್ನು ಹೇಗೆ ಸುಟ್ಟುಕೊಳ್ಳುತ್ತದೆ?

ಹತ್ತಿಯ ಬೀಜ ಬೆಳೆದು ಗಿಡವಾಗುತ್ತದೆ. ಅದರಿಂದ ದೊರೆತ ಹತ್ತಿಯು ಉರಿಯುವ ಬತ್ತಿಯಾಗಿ, ಹತ್ತಿಯ ಬೀಜದಿಂದ ತಯಾರಾದ

ತೈಲವು ಬತ್ತಿಯನ್ನು ಸುಡುತ್ತಾ, ಹೊತ್ತಿ ಉರಿದು ಬೆಳಕು ನೀಡುತ್ತಾ ಲೋಕದ ಹಿತಕ್ಕಾಗಿ ತನ್ನನ್ನೇ ತಾನು ಸುಟ್ಟುಕೊಳ್ಳುತ್ತದೆ.

**ನಾಲ್ಕು ಅಂಕಗಳ ಪ್ರಶ್ನೆಗಳು:**

1. ಹತ್ತಿಯ ಬೀಜದ ಮತ್ತು ಮಾನವ ಜೀವದ ಪಯಣವನ್ನು ಕವಿ ಹೇಗೆ ಸಮೀಕರಿಸಿದ್ದಾರೆ?

ಕವಿ ಪ್ರೊ.ಟಿ.ಯಲ್ಲಪ್ಪರವರು ಈ ಕವಿತೆಯಲ್ಲಿ ಆತ್ಮ ಪರಮಾತ್ಮಗಳ ಅಸ್ತಿತ್ವವನ್ನು ಹತ್ತಿ ಮತ್ತು ಚಿತ್ತಗಳ ಮೂಲಕ ಸಂಕೇತಿಸುತ್ತಿದ್ದಾರೆ. ಜೀವಾತ್ಮದ ಸಾರ್ಥಕತೆಯಿರುವುದು ತನ್ನ ಅಹಂಕಾರವನ್ನು ಸುಟ್ಟುಕೊಂಡು ಬೆಳಕನ್ನು ಜ್ಞಾನವನ್ನು ಹೊಂದುವುದರಲ್ಲಿ. ಇಲ್ಲಿ ಹತ್ತಿಯ ಬೀಜವು ಬೆಳಕಿಗೆ ಜೀವದ್ರವ್ಯವಾಗಿದೆ. ಹತ್ತಿಯ ಬೀಜವು ಗಿಡವಾಗಿ ಬೆಳೆದು, ಅದರ ಹತ್ತಿಯು ಬತ್ತಿಯಾಗಿ, ಹತ್ತಿಯ ಬೀಜವು ತೈಲವಾಗಿ, ಹೊತ್ತಿ ಉರಿಯುವ ಬೆಳಕೂ ಆಗಿ ತನ್ನನ್ನು ತಾನು ಸುಟ್ಟುಕೊಂಡು ಜಗತ್ತಿಗೆ ಬೆಳಕನ್ನು ನೀಡುತ್ತದೆ. ಈ ಬೆಳಕು ಜ್ಞಾನದ ಸಂಕೇತವಾಗಿದೆ.

ಹಾಗೆಯೇ ಮಾನವ ಜೀವದ ಪಯಣ; ವ್ಯಕ್ತಿಯನ್ನು ಆವರಿಸಿದ ಮೋಹ, ಪಾಷಗಳು ಆತನನ್ನು ಸರಿಯಾಗಿ ಸುಟ್ಟು, ನಂತರ ಇವುಗಳಿಂದ ದೂರವಾಗಿ ಒಳಿತಿನ ಕಡೆಗೆ ಪ್ರಯಾಣಿಸಿದಾಗ ಮುಕ್ತಿ ದೊರಕಲು ಸಾಧ್ಯ. ಆಗ ಪ್ರಾಪ್ತವಾಗುವುದು ಮೋಕ್ಷದ ಮಾರ್ಗ. ಆದರೆ ಈ ಮೋಕ್ಷದ ಮಾರ್ಗ ಕಾಣಸಿಗುವುದು ವ್ಯಕ್ತಿ ತನ್ನನ್ನು ತಾನು ತೊಡಗಿಸಿಕೊಂಡಾಗ ಮಾತ್ರ. ಹೀಗೆ ಕವಿ ಹತ್ತಿ ಬೀಜದ ಮತ್ತು ಮಾನವ ಜೀವದ ಪಯಣವನ್ನು ಸಮೀಕರಿಸಿದ್ದಾರೆ.

2. ಬತ್ತಿ, ಎಣ್ಣೆ, ಭಕ್ತಿ, ಯೋಗಿ, ಜೇಡ– ಇವುಗಳ ಆತ್ಮ ಸಮರ್ಪಣೆಯ ಆಶಯವನ್ನು ಕವಿತೆ ಹೇಗೆ ಚಿತ್ರಿಸಿದೆ?

ಕವಿಯು ಇಲ್ಲಿ ಬತ್ತಿ, ಎಣ್ಣೆ, ಭಕ್ತಿ, ಯೋಗಿ, ಜೇಡ – ಇವುಗಳ ಆತ್ಮ ಸಮರ್ಪಣೆಯ ಆಶಯವನ್ನು ಬಹಳ ಸೊಗಸಾಗಿ ವಿವರಿಸಿದ್ದಾರೆ. ಬತ್ತಿಯು ಎಣ್ಣೆಯಲ್ಲಿ ಮಿಂದು ತನ್ನನ್ನು ತಾನೇ ಸುಟ್ಟುಕೊಂಡು ಜಗದ

ಕತ್ತಲೆಯನ್ನು ದೂರಮಾಡಲು ಯತ್ನಿಸುತ್ತದೆ. ಎಣ್ಣೆಯು ಬತ್ತಿಗೆ ಹಾಗೂ ಬೆಳಕಿಗೆ ಜೀವದ್ರವ್ಯವಾಗಿದ್ದೂ, ಬತ್ತಿಯ ಮೂಲಕ ಸುಡುತ್ತಾ, ತನ್ನ ಜೀವನದ ಸಾರ್ಥಕತೆಯನ್ನು ಕಾಣುತ್ತದೆ.

ಭಕ್ತನು ಮಿಂದು ಮಡಿಯುಟ್ಟು ಅಂತರಂಗ ಬಹಿರಂಗ ಶುದ್ಧಿಯಿಂದ ತನ್ನನ್ನು ತನ್ನ ಇಷ್ಟದೈವಕ್ಕೆ ಸಮರ್ಪಿಸಿಕೊಂಡು ಆತ್ಮ ಸಮರ್ಪಣೆ ಮಾಡಿಕೊಳ್ಳುತ್ತಾನೆ. ಯೋಗಿಯು ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಅರಿಷಡ್ವರ್ಗಗಳನ್ನು ಸುಟ್ಟುಕೊಂಡು ಜಗತ್ತಿಗೆ ಜ್ಞಾನದ ಮಾರ್ಗವನ್ನು ತೋರುತ್ತಾನೆ. ಜೇಡವು ತನ್ನ ಒಡಲಿನಿಂದ ಬರುವ ನೂಲಿನಿಂದ ಜಾಲವನ್ನು ನಿರ್ಮಿಸಿ ತಾನೇ ಸುತ್ತಿಕೊಂಡು ಜೀವಾತ್ಮವನ್ನು ಸಮರ್ಪಿಸಿಕೊಳ್ಳುತ್ತದೆ.

3. 'ಹತ್ತಿ...ಚಿತ್ತ...ಮತ್ತು...'ಕವಿತೆಯ ಸ್ವಾರಸ್ಯವನ್ನು ಚರ್ಚಿಸಿರಿ.

ಕವಿ ಪ್ರೊ.ಟಿ.ಯಲ್ಲಪ್ಪರವರು ಈ ಕವಿತೆಯಲ್ಲಿ ಆತ್ಮ ಪರಮಾತ್ಮಗಳ ಅಸ್ತಿತ್ವವನ್ನು ಹತ್ತಿ ಮತ್ತು ಚಿತ್ತಗಳ ಮೂಲಕ ವಿವರಿಸುತ್ತಿದ್ದಾರೆ. ಜೀವಾತ್ಮದ ಸಾರ್ಥಕತೆಯಿರುವುದು ತನ್ನ ಅಹಂಕಾರವನ್ನು ಸುಟ್ಟುಕೊಂಡು ಬೆಳಕನ್ನು ಜ್ಞಾನವನ್ನು ಹೊಂದುವುದರಲ್ಲಿ. ಇಲ್ಲಿ ಹತ್ತಿಯ ಬೀಜವು ಬೆಳಕಿಗೆ ಜೀವದ್ರವ್ಯವಾಗಿದೆ. ಹತ್ತಿಯ ಬೀಜವು ಗಿಡವಾಗಿ ಬೆಳೆದು, ಅದರ ಹತ್ತಿಯು ಬತ್ತಿಯಾಗಿ, ಹತ್ತಿಯ ಬೀಜವು ತೈಲವಾಗಿ, ಹೊತ್ತಿ ಉರಿಯುವ ಬೆಳಕೂ ಆಗಿ ತನ್ನನ್ನು ತಾನು ಸುಟ್ಟುಕೊಂಡು ಜಗತ್ತಿಗೆ ಬೆಳಕನ್ನು ನೀಡುವ ಪರಿ ಬಹಳ ಸೊಗಸಾದುದು ಎನ್ನುವುದು ಕವಿಯ ಅಭಿಮತ.

ಹತ್ತಿಯ ಬೀಜ ತನ್ನಿಂದಲೇ ತಯಾರಾದ ಬತ್ತಿಯಿಂದ, ತನ್ನಿಂದಲೇ ಉದಿಸಿದ ಎಣ್ಣೆಯಿಂದ ಸುಟ್ಟು ಇಲ್ಲವಾಗುತ್ತದೆ. ಅದರಿಂದ ದೊರಕಿದ ಬೆಳಕಿನಿಂದ ಮಾತ್ರ ಲೋಕಕಲ್ಯಾಣವಾಗುತ್ತದೆ. ಅದರಂತೆ ಜೀವ ಹಲವು ಬಯಕೆಗಳಿಂದ ಘಾಸಿಗೊಂಡರೂ, ಆತ್ಮದ ಉನ್ನತಿಗೆ ಕಾರಣವಾಗಿ ಸುಟ್ಟುಕೊಳ್ಳುತ್ತದೆ. ಹೀಗೆ ಮಾಗುವ ಜೀವದ ಪಯಣ ಈ ಪರಿಯಲ್ಲಿ ಸದ್ದಿಲ್ಲದೆ ಸಾಗುತ್ತಿದೆ. ನಿದ್ದೆಯಿಂದ ಎದ್ದ ಮಗು ಅಳಲು ಪ್ರಾರಂಭಿಸಿದೆ.

ಆದರೆ ಅದು ಅಳುತ್ತಿರುವುದು ಅಮ್ಮನಿಗೋ ಬಾಟಲಿಯ ಹಾಲಿಗೋ ಎನ್ನುವುದು ಮೊದಲು ತಿಳಿಯಬೇಕಾಗಿದೆ. ಮಗು ಅಮ್ಮನಿದ್ದೂ ಬಾಟಲಿಯ ಹಾಲಿಗೆ ಬಾಯೊಡ್ಡುತ್ತದೆಯೆಂದರೆ, ಮಗು; ಎಲ್ಲವೂ ಇದ್ದೂ ಇಲ್ಲದಂತ ಅನಾಥಸ್ಥಿತಿಯನ್ನು ಅನುಭವಿಸುತ್ತಿರುವುದು ಗಮನಾರ್ಹ.

ದೀಪ ಆರಿದಾಗ ಕಮಟು ವಾಸನೆ ಬರುತ್ತದೆ. ಆಗ ಮಾತ್ರವೇ ನಮಗೆ ದೀಪ ಆರಿದೆಯೆಂದು ತಿಳಿಯುತ್ತದೆ. ಅಂತೆಯೇ ಆತ್ಮಕ್ಕೆ ಕಮಟು ಹತ್ತುವುದು ಎಂದರೆ ದೇಹ ನಾಶವಾಗಿ ಆತ್ಮ ಇಲ್ಲದಂತಾಗುವುದಾಗಿದೆ ಎಂಬುದನ್ನು ಕವಿ ವಿವರಿಸುತ್ತಾರೆ. ಕವಿಯ ಪ್ರಕಾರ ಎಣ್ಣೆ ತೀರಿರುವ ದೀಪಗಳಿಗೆ ಬತ್ತಿ ಹೊಸೆಯುವ ಕೆಲಸ ವ್ಯರ್ಥವೇನಲ್ಲ. ಏಕೆಂದರೆ ಮತ್ತೆ ಬತ್ತಿ ಹೊಸೆದು ದೀಪ ಬೆಳಗುವ ಸಾಧ್ಯತೆ ಇದ್ದೇ ಇರುತ್ತದೆ. ಈ ಸಾಧ್ಯತೆಯೇ ಬದುಕಿನ ಆಶಾವಾದಿತನವಾಗಿದೆ ಮತ್ತು ಇದು ಬದುಕಿನ ನಿಜವಾದ ಇಂಧನ. ಈ ಬಗೆಯ ಜೀವನ ಪ್ರೇಮವು ಬದುಕನ್ನು ಮತ್ತೆ ಹೊಸದಾಗಿ ಪ್ರಾರಂಭಿಸಬೇಕೆಂಬ ಪ್ರಯತ್ನಕ್ಕೆ ಕಾರಣವಾಗುತ್ತದೆ ಎಂಬುದು ಕವಿಯ ಅಭಿಪ್ರಾಯ.

ಹತ್ತಿಯ ಬೀಜವು ಬೆಳಕಿಗೆ ಜೀವದ್ರವ್ಯವಾಗಿದೆ. ಹತ್ತಿಯ ಬೀಜವು ಗಿಡವಾಗಿ ಬೆಳೆದು, ಅದರ ಹತ್ತಿಯು ಬತ್ತಿಯಾಗಿ, ಹತ್ತಿಯ ಬೀಜವು ತೈಲವಾಗಿ, ಹೊತ್ತಿ ಉರಿಯುವ ಬೆಳಕೂ ಆಗಿ ತನ್ನನ್ನು ತಾನು ಸುಟ್ಟುಕೊಂಡು ಜಗತ್ತಿಗೆ ಬೆಳಕನ್ನು ನೀಡುತ್ತದೆ. ಈ ಬೆಳಕು ಜ್ಞಾನದ ಸಂಕೇತವಾಗಿದೆ. ಹಾಗೆಯೇ ಮಾನವ ಜೀವದ ಪಯಣ. ವ್ಯಕ್ತಿಯನ್ನು ಆವರಿಸಿದ ಮೋಹ, ಪಾಷಗಳು ಆತನನ್ನು ಸರಿಯಾಗಿ ಸುಟ್ಟು ನಂತರ ಅವುಗಳಿಂದ ದೂರಾಗಿ ಒಳಿತಿನ ಕಡೆಗೆ ಪ್ರಯಾಣಿಸಿದಾಗ ಮುಕ್ತಿ ದೊರಕಲು ಸಾಧ್ಯ. ಆಗ ಪ್ರಾಪ್ತವಾಗುವುದು ಮೋಕ್ಷದ ಮಾರ್ಗ. ಆದರೆ ಈ ಮೋಕ್ಷದ ಮಾರ್ಗ ಕಾಣಸಿಗುವುದು ವ್ಯಕ್ತಿ ತನ್ನನ್ನು ತಾನು ತೊಡಗಿಸಿಕೊಂಡಾಗ ಮಾತ್ರ.

===0===

# ಒಮ್ಮೆ ನಗುತ್ತೇವೆ

**ಸುಕನ್ಯ ಮಾರುತಿ**

**ಸಾರಾಂಶ:**

ನಮ್ಮದು ಸಮೃದ್ಧ ದೇಶವಾದರೂ ಸಮಾನತೆಗಾಗಿ ಸಮೃದ್ಧತೆಯ ಬದುಕಿಗಾಗಿ ನಿರಂತರ ಹೋರಾಟ ನಡೆದೇ ಇದೆ. ಶ್ರೀಮತಿ ಸುಕನ್ಯಾ ಮಾರುತಿ ಅವರು ಬರೆದಿರುವ ಒಮ್ಮೆ ನಗುತ್ತೇವೆ ಎಂಬ ಕವಿತೆಯು, ವ್ಯವಸ್ಥೆಯು ವ್ಯವಸ್ಥೆಯ ವಿರುದ್ಧ ಎತ್ತಿರುವ ಬಂಡಾಯದ ಧ್ವನಿಯಾಗಿದೆ.

ಸಾಮಾಜಿಕ ಅಸಮಾನತೆಯು ಬಡವರನ್ನು ಹಸಿವಿನ ಸುಳಿಯಲ್ಲಿ ಸಿಲುಕಿಸಿ ನರಳಿಸುತ್ತಿದೆ. ಶತಶತಮಾನಗಳಿಂದ ಶೋಷಣೆಗೆ ಒಳಗಾದ ಜನ ಸಮಪಾಲು – ಸಮಬಾಳು ಪಡೆಯಲು ಅವಿರತ ಪ್ರಯತ್ನದಲ್ಲಿದ್ದಾರೆ. ಆದರೂ 'ಇಲ್ಲಿ ಎಲ್ಲ ಇದ್ದರೂ ಯಾರಿಗುಂಟು ಯಾರಿಗಿಲ್ಲ' ಎನ್ನುವ ವಾತಾವರಣ ಇದೆ. ಇಲ್ಲಿನ ನಗು ವಿಶಿಷ್ಟವಾದುದು. ಇಲ್ಲಿನ ನಗು ವ್ಯಕ್ತಿಯ ಹಿತಕ್ಕಿಂತ ಸಮಷ್ಟಿಯ ಹಿತವನ್ನು ಬಯಸುತ್ತದೆ.

ದನಗಳಿಗೆ ಮೇವು ಇಲ್ಲದೇ ಸಾಯುತ್ತಿವೆ. ಜನರಿಗೆ ಕುಡಿಯಲು ನೀರು ಸಿಗುತ್ತಿಲ್ಲ. ತಿನ್ನಲು ಗಂಜಿಯೂ ಇಲ್ಲದಂತಾಗಿದೆ. ನನ್ನವರು ಹಸಿವಿನಿಂದ ನರಳುತಿದ್ದಾರೆ. ಸತ್ತ ದನಗಳನ್ನು ತಿನ್ನುತ್ತಿದ್ದಾರೆ. ಇಂತವರಲ್ಲಿ ನಗು ಎಲ್ಲಿಂದ ಬರುತ್ತದೆ. ಇದನ್ನೆಲ್ಲಾ ಕಣ್ಣಾರೆ ಕಾಣುತ್ತಾ ಕತಕತನೆ ಕುದಿಯುವ ಅಗ್ನಿಪರ್ವತವಾಗಿದ್ದೇನೆ ಎನ್ನುತ್ತಾರೆ ಕವಯಿತ್ರಿ.

ಏನೂ ಮಾಡಲಾಗದೇ ಅವರ ಸ್ಥಿತಿ ನೋಡಲಾಗದೇ ಅವರಿಗಾಗಿ ಮುಗಿಲತ್ತ ಕೈ ಚಾಚಿ ನಿಂತಿರುವ ಕವಯಿತ್ರಿ ಧಗಧಗಿಸಿ ಉರಿವ ಜ್ವಾಲಾಮುಖಿ ಆಗಿದ್ದೇನೆ ಎಂದಿದ್ದಾರೆ.

ನನ್ನವರಿಗಾಗಿ ತಾನು ಎಂದೂ ನಂಬಿರದ ದೇವರಲ್ಲಿ ಮೊರೆಯಿಡುತ್ತೇನೆ. ನೋಡದೇ ಇರುವ ದೇವರಲ್ಲಿ ಸಹಾಯ ಬೇಡುತ್ತೇನೆ. ಯಾರೂ ನನ್ನವರ ಕೈ ಹಿಡಿಯದಾದಾಗ ನನ್ನ ಕಂಬನಿಯ ಲಾವಾರಸದಲ್ಲಿ ವಿಶ್ವವನ್ನೇ ಮುಳುಗಿಸಿ ಬಿಡುವ ಛಲ ಮೂಡುತ್ತದೆ. ಬೆಂಕಿ ನಾಲಗೆ ಚಾಚಿ ನನ್ನವರ ದಾರಿದ್ರ್ಯವನ್ನೇ ಆಪೋಶನ ಮಾಡುತ್ತೇನೆ. ಅವರ ದೀನ ದಲಿತತನಕ್ಕೆ ಧಿಕ್ಕಾರವಿರಲಿ. ಅವರ ನೋವನ್ನೇ ಸರ್ವನಾಶ ಮಾಡುತ್ತೇನೆ ಎಂದು ಲೇಖಕಿ ಹೇಳುತ್ತಾರೆ.

ನನ್ನವರನ್ನು ನನ್ನ ಪ್ರೀತಿಯ ಜನರನ್ನು ಎಲ್ಲರೂ ನಾನೇ ಆದವರನ್ನು ನಾನು ನಗಿಸುತ್ತೇನೆ. ಧಗೆಯಿಂದ ಹೊರನುಗಿಸುತ್ತೇನೆ. ಹೊಗೆಯಿಂದ ಪಾರು ಮಾಡುತ್ತೇನೆ ಅವರನ್ನು ನಗಿಸುತ್ತೇನೆ. ಆಗ ಅವರ ಜೊತೆ ನಾನು ನಗುತ್ತೇನೆ.

ಕೊನೆಯಿಲ್ಲದ ನಗು ಮೊನೆಯಿಲ್ಲದ ನಗು ಆಕಾಶದಲ್ಲಿ ಕಾರ್ಮೋಡ ಕವಿಸುವ ನಗು ನನ್ನವರನ್ನು ಕಷ್ಟದಿಂದ, ಹಸಿವಿನಿಂದ ಪಾರುಮಾಡಿ ಅವರನ್ನು ನಗಿಸುತ್ತೇನೆ. ಆಗ ಮಾತ್ರ ನಾನು ನಗುತ್ತೇನೆ ಎಂದ ಕವಯಿತ್ರಿ ತಾನು ನಗುವ ನಗು ಕೊನೆಯಿಲ್ಲದ್ದು, ಮೊನೆಯಿಲ್ಲದ್ದು ಎಂದಿದ್ದಾರೆ. ಆಕಾಶದಲ್ಲಿ ಕಾರ್ಮೋಡ ಕವಿಸುವ ನಗು, ಮಳೆ ಸುರಿಸುವ ನಗು, ಹೊಳೆ ಹರಿಸುವ ನಗು, ಬೆಳೆ ಬೆಳೆಸುವ ನಗು, ದನ ಜನ ಎಲ್ಲ ಕೂಡಿ ನಗುತ್ತೇವೆ. ಒಮ್ಮೆಯಾದರೂ ನಕ್ಕೇ ನಗುತ್ತೇವೆಎಂದಿದ್ದಾರೆ.

ಸಾಮಾಜಿಕ ಅಸಮಾನತೆಯು ಬಡವರನ್ನು ಹಸಿವಿನ ಸುಳಿಯಲ್ಲಿ ಸಿಲುಕಿಸಿ ನರಳಿಸುತ್ತಿದೆ. ಅವರ ಮೊಗದಲ್ಲಿ ನಗು ಅರಳಬೇಕಾದರೆ ಸಾಮಾಜಿಕ ಅಸಮಾನತೆಯು ದೂರಾಗಿ ಸಮಾನತೆ ಬರಬೇಕು. ಅವರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ಆ ಮೂಲಕ ಹೊಗೆಯಾಗಿರುವ ಅವರ ಬದುಕಿನಲ್ಲಿ ನಗೆ ಮೂಡಿಸಬೇಕು ಎಂಬ ಕಳಕಳಿ ಇಲ್ಲಿದೆ.

**ಸಂದರ್ಭ ಸಹಿತ ವಿವರಿಸಿ :**

1. ಗಂಜಿಗೂ ಗತಿಯಿಲ್ಲ.

ಆಯ್ಕೆ : ಈ ಸಾಲನ್ನು ಪ್ರೊ.ಬಿ.ಸುಕನ್ಯಾ ಮಾರುತಿ ಅವರು ಬರೆದ ಒಮ್ಮೆ ನಗುತ್ತೇವೆ ಎಂಬ ಪದ್ಯದಿಂದ ಆರಿಸಲಾಗಿದೆ.

ಸಂದರ್ಭ: ಬಡವರು ಎದುರಿಸುತ್ತಿರುವ ಕಷ್ಟವನ್ನು ಹೇಳುವ ಸಂದರ್ಭದಲ್ಲಿ ಈ ಸಾಲು ಬಂದಿದೆ.

ವಿವರಣೆ : ದನಗಳಿಗೆ ಮೇವು ಇಲ್ಲ. ಜನರಿಗೆ ಕುಡಿಯಲು ನೀರು ಸಿಗುತ್ತಿಲ್ಲ. ತಿನ್ನಲು ಗಂಜಿಯೂ ಇಲ್ಲದಂತಾಗಿದೆ. ನನ್ನವರು ಹಸಿವಿನಿಂದ ನರಳುತ್ತಿದ್ದಾರೆ. ಸತ್ತ ದನಗಳನ್ನು ತಿನ್ನುತ್ತಿದ್ದಾರೆ. ಇದನ್ನು ನೋಡಿ ಸುಮ್ಮನಿರಲು ಸಾಧ್ಯವಾಗುತ್ತಿಲ್ಲ. ಇದನ್ನೆಲ್ಲಾ ಕಣ್ಣಾರೆ ಕಾಣುತ್ತಾ ಕತಕತನೆ ಕುದಿಯುವ ಅಗ್ನಿಪರ್ವತವಾಗಿದ್ದೇನೆ ಎನ್ನುತ್ತಾರೆ ಕವಯಿತ್ರಿ.

2. ಧಗಧಗ ಉರಿವ ಜ್ವಾಲಾಮುಖಿಯಾಗಿದ್ದೇನೆ.

ಆಯ್ಕೆ : ಈ ಸಾಲನ್ನು ಪ್ರೊ.ಬಿ.ಸುಕನ್ಯಾ ಮಾರುತಿ ಅವರು ಬರೆದ ಒಮ್ಮೆ ನಗುತ್ತೇವೆ ಎಂಬ ಪದ್ಯದಿಂದ ಆರಿಸಲಾಗಿದೆ.

ಸಂದರ್ಭ: ಬಡವರ ಕಷ್ಟಕ್ಕೆ ಲೇಖಕಿ ಸ್ಪಂದಿಸುವ ಸಂದರ್ಭವಿದು.

ವಿವರಣೆ: ದನಗಳಿಗೆ ಮೇವು ಇಲ್ಲ. ಜನರಿಗೆ ಕುಡಿಯಲು ನೀರು ಸಿಗುತ್ತಿಲ್ಲ. ತಿನ್ನಲು ಗಂಜಿಯೂ ಇಲ್ಲದಂತಾಗಿದೆ. ನನ್ನವರು ಹಸಿವಿನಿಂದ ನರಳುತ್ತಿದ್ದಾರೆ. ಸತ್ತ ದನಗಳನ್ನು ತಿನ್ನುತ್ತಿದ್ದಾರೆ. ದನಗಳ ಜನಗಳ ಈ ಸ್ಥಿತಿಯನ್ನು ಕಂಡು ಏನೂ ಮಾಡಲಾಗದೇ ಅವರ ಸ್ಥಿತಿ ನೋಡಲಾಗದೇ ಅವರಿಗಾಗಿ ಮುಗಿಲತ್ತ ಕೈ ಚಾಚಿ ನಿಂತಿದ್ದೇನೆ. ದೇಹ ಧಗಧಗಿಸಿ ಉರಿಯುತ್ತಿದೆ. ನಾನು ಉರಿಯುವ ಜ್ವಾಲಾಮುಖಿಯಾಗಿದ್ದೇನೆ ಎನ್ನುತ್ತಾರೆ ಕವಯಿತ್ರಿ.

3. ದೀನ ದಲಿತತನಕ್ಕೆ ಧಿಕ್ಕಾರವಿರಲಿ!

ಆಯ್ಕೆ : ಈ ಸಾಲನ್ನು ಪ್ರೊ.ಬಿ.ಸುಕನ್ಯಾ ಮಾರುತಿ ಅವರು ಬರೆದ ಒಮ್ಮೆ ನಗುತ್ತೇವೆ ಎಂಬ ಪದ್ಯದಿಂದ ಆರಿಸಲಾಗಿದೆ.

ಸಂದರ್ಭ: ಬಡವರ ಕಷ್ಟಕ್ಕೆ ಸ್ಪಂದಿಸುವ ಲೇಖಕಿಯು ರೋಷವನ್ನು ವ್ಯಕ್ತಪಡಿಸುವ ಸಂದರ್ಭವಿದು.

ವಿವರಣೆ : ನನ್ನ ಕಂಬನಿಯ ಲಾವಾರಸದಲ್ಲಿ ವಿಶ್ವವನ್ನೇ ಮುಳುಗಿಸಿ ಬಿಡುತ್ತೇನೆ. ಬೆಂಕಿ ನಾಲಗೆಯನ್ನು ಚಾಚಿ ನನ್ನವರ ದಾರಿದ್ರ್ಯವನ್ನು ನಾಶ ಮಾಡುತ್ತೇನೆ. ಅವರ ನೋವನ್ನೇ ಸರ್ವನಾಶ ಮಾಡುತ್ತೇನೆ. ದುಃಖವನ್ನು ಅಳಿಸಿ ಹಾಕುತ್ತೇನೆ. ಅವರ ದೀನ ದಲಿತತನಕ್ಕೆ ಧಿಕ್ಕಾರವಿರಲಿ ಎಂದು ಕವಯಿತ್ರಿ ಈ ಸಾಲಿನಲ್ಲಿ ಹೇಳಿದ್ದಾರೆ.

4. ಒಮ್ಮೆ ನಕ್ಕೇ ನಗುತ್ತೇವೆ.

ಆಯ್ಕೆ : ಈ ಸಾಲನ್ನು ಪ್ರೊ. ಬಿ. ಸುಕನ್ಯಾ ಮಾರುತಿವರು ಬರೆದ ಒಮ್ಮೆ ನಗುತ್ತೇವೆ ಎಂಬ ಪದ್ಯದಿಂದ ಆರಿಸಲಾಗಿದೆ.

ಸಂದರ್ಭ: ಬಡವರೂ ಸಹ ನಗುವ ಕಾಲ ಬರುತ್ತದೆ ಎನ್ನುವ ಆಶಯವನ್ನು ವ್ಯಕ್ತಪಡಿಸುವ ಸಂದರ್ಭವಿದು.

ವಿವರಣೆ : ಇಲ್ಲಿ ಲೇಖಕಿ ನನ್ನವರನ್ನು ಕಷ್ಟದಿಂದ, ಹಸಿವಿನಿಂದ ಪಾರುಮಾಡಿ ಅವರನ್ನು ನಗಿಸುತ್ತೇನೆ. ಆಗ ಮಾತ್ರ ನಾನು ನಗುತ್ತೇನೆ ಎಂದಿದ್ದಾರೆ. ಕವಯಿತ್ರಿ ತಾನು ನಗುವ ನಗು ಕೊನೆಯಿಲ್ಲದ್ದು, ಮೊನೆಯಿಲ್ಲದ್ದು ಎಂದಿದ್ದಾರೆ. ಆಕಾಶದಲ್ಲಿ ಕಾರ್ಮೋಡ ಕವಿಸುವ ನಗು, ಮಳೆ ಸುರಿಸುವ ನಗು, ಹೊಳೆ ಹರಿಸುವ ನಗು, ಬೆಳೆ ಬೆಳೆಸುವ ನಗು, ದನಜನ ಎಲ್ಲ ಕೂಡಿ ನಗುತ್ತೇವೆ. ಒಮ್ಮೆಯಾದರೂ ನಕ್ಕೇ ನಗುತ್ತೇವೆ ಎಂದಿದ್ದಾರೆ. ಅಂತಹ ಒಳ್ಳೆಯ ಸಮಯ ಬಂದೇ ಬರುತ್ತದೆ ಎನ್ನುವ ಸದಾಶಯ ಲೇಖಕಿಯದು.

**ಒಂದು ವಾಕ್ಯದಲ್ಲಿ ಉತ್ತರಿಸಿ:**

1. ದನಗಳಿಗೆ ಏನಿಲ್ಲ?

ದನಗಳಿಗೆ ಮೇವಿಲ್ಲ.

2. ಜನರಿಗೆ ಯಾವುದಕ್ಕೆ ಗತಿಯಿಲ್ಲ?

ಜನರಿಗೆ ಗಂಜಿಗೂ ಗತಿಯಿಲ್ಲ.

3. ಕವಯಿತ್ರಿ ಯಾರಲ್ಲಿ ಮೊರೆಯಿಡುತ್ತಾಳೆ?

ಕವಯಿತ್ರಿ ತಾನೆಂದೂ ನಂಬಿರದ ದೇವರಲ್ಲಿ ಮೊರೆಯಿಡುತ್ತಾಳೆ.

4. ಕವಯಿತ್ರಿ ಯಾವುದಕ್ಕೆ ಧಿಕ್ಕಾರವಿರಲಿ ಎನ್ನುತ್ತಾರೆ?

ಕವಯಿತ್ರಿ ತನ್ನವರ ದೀನದಲಿತತನಕ್ಕೆ ಧಿಕ್ಕಾರವಿರಲಿ ಎನ್ನುತ್ತಾರೆ.

5. ಜನರನ್ನು ಯಾವುದರಿಂದ ಪಾರು ಮಾಡುತ್ತೇನೆಂದು ಕವಯಿತ್ರಿ ಹೇಳುವರು?

ತಾವು ಬೇಯುತ್ತಿರುವ ಧಗೆಯಿಂದ ಮತ್ತು ಹೊಗೆಯಿಂದ ಜನರನ್ನು ಪಾರು ಮಾಡುತ್ತೇನೆಂದು ಕವಯಿತ್ರಿ ಹೇಳುವರು.

**ಎರಡು- ಮೂರು ವಾಕ್ಯಗಳಲ್ಲಿ ಉತ್ತರಿಸಿ:**

1. ದನಗಳಿಗೆ ಜನಗಳಿಗೆ ಏನೇನು ಇಲ್ಲ?

ದನಗಳಿಗೆ ಮೇವು ಇಲ್ಲ. ಜನರಿಗೆ ಕುಡಿಯಲು ನೀರು ಸಿಗುತ್ತಿಲ್ಲ. ತಿನ್ನಲು ಗಂಜಿಯೂ ಇಲ್ಲದಂತಾಗಿದೆ. ಅವರು ಹಸಿವಿನಿಂದ ನರಳುತಿದ್ದಾರೆ. ಸತ್ತ ದನಗಳನ್ನು ತಿನ್ನುತ್ತಿದ್ದಾರೆ.

2. ಕವಯಿತ್ರಿ ಮುಗಿಲತ್ತಕ್ಕೈ ಚಾಚಿ ಏಕೆ ನಿಂತಿದ್ದಾರೆ?

ದನಗಳ ಜನಗಳ ಈ ಸ್ಥಿತಿಯನ್ನು ಕಂಡು ದೇಹ ಧಗಧಗಿಸಿ ಉರಿಯುತ್ತಿದೆ. ನಾನು ಉರಿಯುವ ಜ್ವಾಲಾಮುಖಿಯಾಗಿದ್ದೇನೆ ಎನ್ನುತ್ತಾರೆ ಕವಯಿತ್ರಿ. ದನಗಳ ಜನಗಳ ಕಷ್ಟ ನೋಡಲಾಗದೇ ಕವಯಿತ್ರಿ ಮಳೆಗಾಗಿ ಮುಗಿಲತ್ತ ಕೈ ಚಾಚಿ ನಿಂತಿದ್ದಾರೆ.

3. ಜನರನ್ನುಕವಯಿತ್ರಿ ಯಾವ ಯಾವುದರಿಂದ ಪಾರು ಮಾಡುವುದಾಗಿ ಹೇಳಿದ್ದಾರೆ?

ಬೆಂಕಿ ನಾಲಗೆಯನ್ನು ಚಾಚಿ ನನ್ನವರ ದಾರಿದ್ರ್ಯವನ್ನು ನಾಶ ಮಾಡುತ್ತೇನೆ. ಅವರ ನೋವನ್ನೇ ಸರ್ವನಾಶ ಮಾಡುತ್ತೇನೆ. ದುಃಖವನ್ನು ಅಳಿಸಿ ಹಾಕುತ್ತೇನೆ. ನನ್ನ ಪ್ರೀತಿಯ ಜನರನ್ನು ಎಲ್ಲರೂ ನಾನೇ ಆದವರನ್ನು ನಾನು ನಗಿಸುತ್ತೇನೆ. ಸಂತೋಷದಲ್ಲಿ ತೇಲಿಸುತ್ತೇನೆ. ತಾವು ಪಡುತ್ತಿರುವ ಧಗೆಯಿಂದ ಹೊರನುಗಿಸುತ್ತೇನೆ. ಆವರಿಸಿರುವ ಹೊಗೆಯಿಂದ ಪಾರು ಮಾಡುತ್ತೇನೆ. ಅವರನ್ನು ನಗಿಸುತ್ತೇನೆ ಎಂದಿದ್ದಾರೆ.

4.ಕವಯಿತ್ರಿ ನಗುವ ನಗು ಎಂತಹುದು?

ನನ್ನವರನ್ನು ಕಷ್ಟದಿಂದ, ಹಸಿವಿನಿಂದ ಪಾರುಮಾಡಿ ಅವರನ್ನು ನಗಿಸುತ್ತೇನೆ. ಆಗ ಮಾತ್ರ ನಾನು ನಗುತ್ತೇನೆ ಎಂದ ಕವಯಿತ್ರಿ ತಾನು ನಗುವ ನಗು ಕೊನೆಯಿಲ್ಲದ್ದು, ಮೊನೆಯಿಲ್ಲದ್ದು ಎಂದಿದ್ದಾರೆ. ಆಕಾಶದಲ್ಲಿ ಕಾರ್ಮೋಡ ಕವಿಸುವ ನಗು, ಮಳೆ ಸುರಿಸುವ ನಗು, ಹೊಳೆ ಹರಿಸುವ ನಗು, ಬೆಳೆ ಬೆಳೆಸುವ ನಗು, ದನ ಜನ ಎಲ್ಲಕೂಡಿ ನಗುತ್ತೇವೆ. ಒಮ್ಮೆಯಾದರೂ ನಕ್ಕೇ ನಗುತ್ತೇವೆ ಎಂದಿದ್ದಾರೆ.

**ಐದು– ಆರು ವಾಕ್ಯಗಳಲ್ಲಿ ಉತ್ತರಿಸಿ :**

1. ಕವಯಿತ್ರಿ ಅಗ್ನಿಪರ್ವತ ಜ್ವಾಲಾಮುಖಿ ಆಗಿದ್ದೇನೆ ಎನ್ನಲು ಕಾರಣಗಳೇನು?

ನಮ್ಮದು ಸಮೃದ್ಧ ದೇಶವಾದರೂ ಸಮಾನತೆಗಾಗಿ ಸಮೃದ್ಧತೆಯ ಬದುಕಿಗಾಗಿ ನಿರಂತರ ಹೋರಾಟ ನಡೆದೇ ಇದೆ. ಶ್ರೀಮತಿ ಸುಕನ್ಯಾ ಮಾರುತಿ ಅವರು ಬರೆದಿರುವ ಒಮ್ಮೆ ನಗುತ್ತೇವೆ ಎಂಬ ಕವಿತೆಯು ವ್ಯವಸ್ಥೆಯು ವ್ಯವಸ್ಥೆಯ ವಿರುದ್ಧ ಎತ್ತಿರುವ ಬಂಡಾಯದ ಧ್ವನಿಯಾಗಿದೆ. ಸಾಮಾಜಿಕ ಅಸಮಾನತೆಯು ಬಡವರನ್ನು ಹಸಿವಿನ ಸುಳಿಯಲ್ಲಿ ಸಿಲುಕಿಸಿ ನರಳಿಸುತ್ತಿದೆ. ಶತಶತಮಾನಗಳಿಂದ ಶೋಷಣೆಗೆ ಒಳಗಾದ ಜನ ಸಮಪಾಲು-ಸಮಬಾಳು ಪಡೆಯಲು ಅವಿರತ ಪ್ರಯತ್ನದಲ್ಲಿದ್ದಾರೆ. ಆದರೂ ಇಲ್ಲಿ ಎಲ್ಲ ಇದ್ದರೂ ಯಾರಿಗುಂಟು ಯಾರಿಗಿಲ್ಲ' ಎನ್ನುವ ವಾತಾವರಣ ಇದೆ.

ದನಗಳಿಗೆ ಮೇವು ಇಲ್ಲದೇ ಸಾಯುತ್ತಿವೆ. ಜನರಿಗೆ ಕುಡಿಯಲು ನೀರು ಸಿಗುತ್ತಿಲ್ಲ. ತಿನ್ನಲು ಗಂಜಿಯೂ ಇಲ್ಲದಂತಾಗಿದೆ. ನನ್ನವರು ಹಸಿವಿನಿಂದ ನರಳುತ್ತಿದ್ದಾರೆ. ಸತ್ತ ದನಗಳನ್ನು ತಿನ್ನುತ್ತಿದ್ದಾರೆ. ಇದನ್ನು ನೋಡಿ ಸುಮ್ಮನಿರಲು ಸಾಧ್ಯವಾಗುತ್ತಿಲ್ಲ. ಇದನ್ನೆಲ್ಲಾ ಕಣ್ಣಾರೆ ಕಾಣುತ್ತಾ ಕತಕತನೆ ಕುದಿಯುವ ಅಗ್ನಿಪರ್ವತವಾಗಿದ್ದೇನೆ ಎನ್ನುತ್ತಾರೆ ಕವಯಿತ್ರಿ.

ಏನೂ ಮಾಡಲಾಗದೇ ಅವರ ಸ್ಥಿತಿ ನೋಡಲಾಗದೇ ಅವರಿಗಾಗಿ ಮುಗಿಲತ್ತ ಕೈ ಚಾಚಿ ನಿಂತಿರುವ ಕವಯಿತ್ರಿ ಧಗಧಗಿಸಿ ಉರಿವ ಜ್ವಾಲಾಮುಖಿ ಆಗಿದ್ದೇನೆ ಎಂದಿದ್ದಾರೆ. ಬಡವರ ನಿರ್ಗತಿಕರ ಆರ್ತ ನೋವಿಗೆ ಮನಮಿಡಿಯುವ ಅಂಶ ಈ ಕವಿತೆಯಲ್ಲಿದೆ.

2. 'ಒಮ್ಮೆ ನಗುತ್ತೇವೆ' ಎಂಬ ಕವಿತೆಯಲ್ಲಿ ವ್ಯಕ್ತವಾಗುವ ನಗುವಿನ ವೈಶಿಷ್ಟ್ಯ ವಿವರಿಸಿರಿ.

ನಮ್ಮದು ಸಮೃದ್ಧದೇಶವಾದರೂ ಸಮಾನತೆಗಾಗಿ ಸಮೃದ್ಧತೆಯ ಬದುಕಿಗಾಗಿ ನಿರಂತರ ಹೋರಾಟ ನಡೆದೇ ಇದೆ. ಶ್ರೀಮತಿ ಸುಕನ್ಯಾ ಮಾರುತಿ ಅವರು ಬರೆದಿರುವ ಒಮ್ಮೆ ನಗುತ್ತೇವೆ ಎಂಬ ಕವಿತೆಯು

ವ್ಯವಸ್ಥೆಯು ವ್ಯವಸ್ಥೆಯ ವಿರುದ್ಧಎತ್ತಿರುವ ಬಂಡಾಯದ ಧ್ವನಿಯಾಗಿದೆ. ಸಾಮಾಜಿಕ ಅಸಮಾನತೆಯು ಬಡವರನ್ನು ಹಸಿವಿನ ಸುಳಿ0ಯಲ್ಲಿ ಸಿಲುಕಿಸಿ ನರಳಿಸುತ್ತಿದೆ. ಶತಶತಮಾನಗಳಿಂದ ಶೋಷಣೆಗೆ ಒಳಗಾದ ಜನ ಸಮಪಾಲು – ಸಮಬಾಳು ಪಡೆಯಲು ಅವಿರತ ಪ್ರಯತ್ನದಲ್ಲಿದ್ದಾರೆ. ಆದರೂ 'ಇಲ್ಲಿ ಎಲ್ಲ ಇದ್ದರೂ ಯಾರಿಗುಂಟು ಯಾರಿಗಿಲ್ಲ'ಎನ್ನುವ ವಾತಾವರಣ ಇದೆ. ಇಲ್ಲಿನ ನಗು ವಿಶಿಷ್ಟವಾದುದು. ಇಲ್ಲಿನ ನಗು ವ್ಯಕ್ತಿಯ ಹಿತಕ್ಕಿಂತ ಸಮಷ್ಟಿಯ ಹಿತವನ್ನು ಬಯಸುತ್ತದೆ.

ದನಗಳಿಗೆ ಮೇವು ಇಲ್ಲದೇ ಸಾಯುತ್ತಿವೆ. ಜನರಿಗೆ ಕುಡಿಯಲು ನೀರು ಸಿಗುತ್ತಿಲ್ಲ. ತಿನ್ನಲು ಗಂಜಿಯೂ ಇಲ್ಲದಂತಾಗಿದೆ. ನನ್ನವರು ಹಸಿವಿನಿಂದ ನರಳುತಿದ್ದಾರೆ. ಸತ್ತ ದನಗಳನ್ನು ತಿನ್ನುತ್ತಿದ್ದಾರೆ. ಇಂತವರಲ್ಲಿ ನಗು ಎಲ್ಲಿಂದ ಬರುತ್ತದೆ.ಸಾಮಾಜಿಕ ಅಸಮಾನತೆಯು ಬಡವರನ್ನು ಹಸಿವಿನ ಸುಳಿಯಲ್ಲಿ ಸಿಲುಕಿಸಿ ನರಳಿಸುತ್ತಿದೆ. ಅವರ ಮೊಗದಲ್ಲಿ ನಗು ಅರಳಬೇಕಾದರೆ ಸಾಮಾಜಿಕ ಅಸಮಾನತೆಯು ದೂರಾಗಿ ಸಮಾನತೆ ಬರಬೇಕು. ಅವರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ಆ ಮೂಲಕ ಹೊಗೆಯಾಗಿರುವ ಅವರ ಬದುಕಿನಲ್ಲಿ ನಗೆ ಮೂಡಿಸಬೇಕು ಎಂಬ ಕಳಕಳಿ ಇಲ್ಲಿದೆ.

ನನ್ನವರನ್ನು ಕಷ್ಟದಿಂದ, ಹಸಿವಿನಿಂದ ಪಾರುಮಾಡಿ ಅವರನ್ನು ನಗಿಸುತ್ತೇನೆ. ಆಗ ಮಾತ್ರ ನಾನು ನಗುತ್ತೇನೆ ಎಂದ ಕವಯಿತ್ರಿ ತಾನು ನಗುವ ನಗು ಕೊನೆಯಿಲ್ಲದ್ದು, ಮೊನೆಯಿಲ್ಲದ್ದು ಎಂದಿದ್ದಾರೆ. ಆಕಾಶದಲ್ಲಿ ಕಾರ್ಮೋಡ ಕವಿಸುವ ನಗು, ಮಳೆ ಸುರಿಸುವ ನಗು, ಹೊಳೆ ಹರಿಸುವ ನಗು, ಬೆಳೆ ಬೆಳೆಸುವ ನಗು, ದನಜನ ಎಲ್ಲ ಕೂಡಿ ನಗುತ್ತೇವೆ. ಒಮ್ಮೆಯಾದರೂ ನಕ್ಕೇ ನಗುತ್ತೇವೆ ಎಂದಿದ್ದಾರೆ.

===0===

# ಗದ್ಯಭಾಗ

## ಮುಟ್ಟಿಸಿಕೊಂಡವನು

**ಪಿ. ಲಂಕೇಶ್**

**ಸಂದರ್ಭ ಸಹಿತ ವಿವರಿಸಿ:**

1. ಆಪರೇಷನ್ ಆಗಬೇಕು, ಪರವಾಗಿಲ್ಲವಾ?

ಆಯ್ಕೆ: ಈ ಮೇಲಿನ ವಾಕ್ಯವನ್ನು ಪಿ.ಲಂಕೇಶ್‌ರವರು ಬರೆದ 'ಮುಟ್ಟಿಸಿಕೊಂಡವನು' ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಡಾ. ತಿಮ್ಮಪ್ಪ ಬಸಲಿಂಗನಿಗೆ ಪ್ರಶ್ನಿಸುವ ಸಂದರ್ಭ ಇದಾಗಿದೆ.

ವಿವರಣೆ: ಬಸಲಿಂಗನಿಗೆ ಅದು ಪುರುಸೊತ್ತಿಲ್ಲದ ಕಾಲ. ದುಡಿಮೆಯ ಸಮಯವಾಗಿತ್ತು. ದುಡಿಯುವುದನ್ನು ನಾಲ್ಕು ದಿನ ತಡಮಾಡಿದರೂ ನೇಗಿಲಿನ ತುದಿ ನೆಲದಲ್ಲಿ ನಾಟುವುದು ಕಷ್ಟವಾಗಿತ್ತು. ದುಡಿಮೆಯ ಸಮಸ್ಯೆ ಒಂದೆಡೆಯಾದರೆ, ಇನ್ನೊಂದೆಡೆ ಆತನ ಎರಡೂ ಎತ್ತುಗಳು ಸೋಮಾರಿಗಳಾಗಿದ್ದವು. ಮಗು ಕಾಯಿಲೆಯನ್ನು ಹೊಂದಿತ್ತು. ಅದಕ್ಕಿಂತ ಮುಖ್ಯವಾಗಿ ಬಸಲಿಂಗ ಎಡಗಣ್ಣಿನ ಬೇನೆಯಿಂದ ಬಳಲುತ್ತಿದ್ದ. ಎಲ್ಲ ವೈದ್ಯರನ್ನು ಭೇಟಿಮಾಡಿ ಸರಿಯಾದ ಪರಿಹಾರ ಸಿಗದೇ ಇದ್ದಾಗ ಯಾರೋ ಒಬ್ಬರು ಸರ್ಕಾರಿ ಆಸ್ಪತ್ರೆಯ ವೈದ್ಯರಾದ ಡಾ॥ ತಿಮ್ಮಪ್ಪರನ್ನು ಭೇಟಿ ಮಾಡಲು ಹೇಳಿದರು. ಬಸಲಿಂಗನ ದೃಷ್ಟಿಯ ಅಳತೆ, ಸ್ಪಷ್ಟತೆಯನ್ನು ನೋಡಿ ನೋವಿನ ಕಾರಣಕ್ಕಾಗಿ ಹುಡುಕಿದ ತಿಮ್ಮಪ್ಪನವರು ಕೊನೆಗೆ ಈ ಮೇಲಿನಂತೆ ಹೇಳುತ್ತಾರೆ.

2. ನೀರು ಬಿದ್ದರೆ ಕಣ್ಣು ಹೋಗುವ ಅಪಾಯ ಇದೆ.

ಆಯ್ಕೆ: ಈ ಮೇಲಿನ ವಾಕ್ಯವನ್ನು ಪಿ.ಲಂಕೇಶ್‌ರವರು ಬರೆದ 'ಮುಟ್ಟಿಸಿಕೊಂಡವನು' ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಡಾ॥ ತಿಮ್ಮಪ್ಪನವರು ಬಸಲಿಂಗನಿಗೆ ಹೇಳಿದ ಮಾತಿದು.

ವಿವರಣೆ: ನಗರದ ವೈದ್ಯರಿಂದ ತನ್ನ ಕಣ್ಣುನೋವಿಗೆ ಏನೂ ಪರಿಹಾರ ದೊರಕದೇ ಇದ್ದಾಗ ಬಸಲಿಂಗ ಯಾರೋ ಒಬ್ಬರು ನೀಡಿದ ಸಲಹೆಯ ಮೇರೆಗೆ ಡಾ॥ತಿಮ್ಮಪ್ಪನವರಲ್ಲಿ ಚಿಕಿತ್ಸೆಗಾಗಿ ಬರುತ್ತಾನೆ. ತಿಮ್ಮಪ್ಪನವರ ಮಾತಿನ ರೀತಿ, ಪರೀಕ್ಷೆಯ ಕ್ರಮಗಳು ಆತನಿಗೆ ನೋವು ಸರಿಹೋಗುವ ಭರವಸೆಯೂ ಸಿಗುತ್ತದೆ. ಮರುದಿನ ತಿಮ್ಮಪ್ಪನವರು ಬಸಲಿಂಗನನ್ನು ಆಪರೇಷನ್‌ಗೆ ಸಿದ್ಧಗೊಳಿಸಿ ಕೆಲವೇ ನಿಮಿಷಗಳಲ್ಲಿ ಆಪರೇಷನ್ ಮುಗಿಸಿದರು. ಅವನ ಕೈ ಹಿಡಿದುಕೊಂಡು ಇದು ಸೂಕ್ಷ್ಮವಾದ ಶಸ್ತ್ರಚಿಕಿತ್ಸೆ, ನೀನು ಎರಡು ವಾರ ತಲೆಗೆ ನೀರನ್ನು ಸೋಂಕಿಸಬಾರದು ಎನ್ನುತ್ತಾ ಈ ಮೇಲಿನಂತೆ ಹೇಳುತ್ತಾರೆ.

3. ಬಸಲಿಂಗಪ್ಪ, ನೀನು ತುಂಬಾ ಒಳ್ಳೆಯವನು.

ಆಯ್ಕೆ: ಈ ಮೇಲಿನ ವಾಕ್ಯವನ್ನು ಪಿ.ಲಂಕೇಶ್‌ರವರು ಬರೆದ 'ಮುಟ್ಟಿಸಿಕೊಂಡವನು' ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಈ ಮಾತನ್ನು ಬಸಲಿಂಗನಿಗೆ ಡಾ॥ ತಿಮ್ಮಪ್ಪ ಹೇಳುತ್ತಾರೆ.

ವಿವರಣೆ: ಡಾ॥ ತಿಮ್ಮಪ್ಪ ಹೊಲೆಯ ಜಾತಿಗೆ ಸೇರಿದವರೆಂದು ತಿಳಿದ ಸಿದ್ಲಿಂಗಿ ಗಂಡನ ಎದುರು ರಾದ್ಧಾಂತವನ್ನೇ ಎಬ್ಬಿಸುತ್ತಾಳೆ. ಆಗ ಬೆರಗಾದ ಬಸಲಿಂಗ ಡಾ॥ ತಿಮ್ಮಪ್ಪ ನನ್ನನ್ನು ಮುಟ್ಟುವ ಮುನ್ನ ತಮ್ಮ ಜಾತಿಯ ಬಗ್ಗೆ ಹೇಳಿದ್ದರೆ ಒಳ್ಳೆಯದಿತ್ತೆಂದು ಅಂದುಕೊಳ್ಳುತ್ತಾನೆ. ಅಲ್ಲದೆ ಈ ವಿಚಾರವನ್ನು ಯಾರ ಬಳಿಯೂ ಹೇಳಬಾರದು ಎಂದು ತೀರ್ಮಾನಿಸಿದ ಇಬ್ಬರೂ, ಡಾ॥ ತಿಮ್ಮಪ್ಪನವರು ಹೇಳಿದ ಮುಂಜಾಗ್ರತಾ ಕ್ರಮಗಳನ್ನು ಪಾಲಿಸುವಲ್ಲಿ ವಿಫಲರಾದರು.ಇದರಿಂದ ಬಸಲಿಂಗ ಮತ್ತೆ ಕಣ್ಣಿನ ಬೇನೆಗೆ ಒಳಗಾಗುತ್ತಾನೆ. ಆಗ ತಿಮ್ಮಪ್ಪನವರ ಬಳಿಗೆ ಹೋಗದೇ ಉಳಿದ ಎಲ್ಲಾ ವೈದ್ಯರ ಬಳಿಗೆ ಹೋಗುತ್ತಾನೆ. ಏನೂ ಪರಿಹಾರದೊರಕದೇ ಹೋದಾಗ ಮತ್ತೆ ತಿಮ್ಮಪ್ಪನವರ ಬಳಿಗೆ ಬರುತ್ತಾನೆ. ಬಸಲಿಂಗನನ್ನು ಪ್ರೀತಿಯಿಂದ ಬರಮಾಡಿಕೊಂಡ ಡಾ॥ ತಿಮ್ಮಪ್ಪ ಆತನಿಗೆ ಪ್ರಶ್ನೆ ಕೇಳತೊಡಗಿದರು. ತಿಮ್ಮಪ್ಪನವರ ಪ್ರಶ್ನೆಯಿಂದ ತಬ್ಬಿಬ್ಬಾದ ಬಸಲಿಂಗನನ್ನು ಗಮನಿಸಿದ ವೈದ್ಯರು ಈ ಮೇಲಿನಂತೆ ಹೇಳುತ್ತಾರೆ.

4. ಅವರು ನನ್ನಷ್ಟೆ ಒಳ್ಳೆಯ ಡಾಕ್ಟರು, ಏನೂ ತಪ್ಪು ತಿಳಿಯಬೇಡ.

ಆಯ್ಕೆ: ಈ ಮೇಲಿನ ವಾಕ್ಯವನ್ನು ಪಿ.ಲಂಕೇಶ್‌ರವರು ಬರೆದ 'ಮುಟ್ಟಿಸಿಕೊಂಡವನು' ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಮರಳಿ ತನ್ನ ಬಳಿಗೇ ಚಿಕಿತ್ಸೆಗಾಗಿ ಬಂದ ಬಸಲಿಂಗನಿಗೆ ಡಾ॥ ತಿಮ್ಮಪ್ಪ ಈ ಮಾತನ್ನು ಹೇಳುತ್ತಾರೆ.

ವಿವರಣೆ: ತಿಮ್ಮಪ್ಪನವರ ಪ್ರೀತಿಯ ಮಾತುಗಳಿಗೆ ಮಣಿದ ಬಸಲಿಂಗ ಆದದ್ದೆಲ್ಲವನ್ನೂ ಹೇಳಿದ. ಅಲ್ಲದೆ ತನಗೆ ಎರಡನೇ ಬಾರಿ ಆಪರೇಷನ್ ಮಾಡಿಬಿಡಿ ಎಂಬುದಾಗಿ ತನ್ನ ಬೇಡಿಕೆಯನ್ನು ಮುಂದಿಟ್ಟ. ಆದರೆ ತಿಮ್ಮಪ್ಪ

ಆಪರೇಷನ್ ನಿರಾಕರಿಸಿ ಔಷಧಿ, ಮಾತ್ರೆ ಕೊಟ್ಟು ಕಳುಹಿಸಿದರು. ಇದರಿಂದ ಸಿಟ್ಟುಗೊಂಡ ಬಸಲಿಂಗ ತನ್ನ ಉಡಾಫೆತನದಿಂದ ತಿಮ್ಮಪ್ಪನ ವಿರುದ್ಧ ಇತರರು ಕೆಟ್ಟ ಮಾತುಗಳನ್ನು ಆಡುವ ಹಾಗೆ ಮಾಡಿದ. ಅಲ್ಲದೆ ತನ್ನ ಲಿಂಗಾಯತ ಜಾತಿಯ ರಾಜಕಾರಣಿ ರುದ್ರಪ್ಪನನ್ನು ಜೊತೆಗೆ ಕರೆದುಕೊಂಡು ಚಿಕಿತ್ಸೆಗಾಗಿ ವೈದ್ಯರ ಬಳಿಗೆ ಹೋದ. ಆದರೆ ಯಾರಿಂದಲೂ ಸರಿಯಾದ ಚಿಕಿತ್ಸೆ ಸಿಗಲಿಲ್ಲ. ಪುನಃ ತಿಮ್ಮಪ್ಪನವರ ಎದುರಿಗೆ ಬಂದಾಗ ಆತನನ್ನು ಗಮನಿಸಿದ ತಿಮ್ಮಪ್ಪನವರು ಬಸಲಿಂಗಪ್ಪ ನಾನು ನಿನ್ನನ್ನು ಮುಟ್ಟಿದ್ದು ಡಾಕ್ಟರಾಗಿ ಮಾತ್ರ. ಈ ಮುಟ್ಟುವಿಕೆ ನಾನು ಊಹಿಸದೇ ಇದ್ದದನ್ನು ಮಾಡಿದೆ ಎಂದು ಹೇಳುತ್ತಾ ಡಾ॥ ಚಂದ್ರಪ್ಪನವರನ್ನು ಕಾಣುವಂತೆ ಸಲಹೆ ನೀಡಿ ಈ ಮೇಲಿನಂತೆ ಹೇಳುತ್ತಾರೆ. 5. ಈ ಮುಟ್ಟುವಿಕೆ ನಾನು ಊಹಿಸದೆ ಇದ್ದದ್ದನ್ನು ಮಾಡಿದೆ.

ಆಯ್ಕೆ: ಈ ಮೇಲಿನ ವಾಕ್ಯವನ್ನು ಪಿ.ಲಂಕೇಶ್‌ರವರು ಬರೆದ 'ಮುಟ್ಟಿಸಿಕೊಂಡವನು' ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಈ ಮಾತನ್ನು ಡಾ॥ ತಿಮ್ಮಪ್ಪ ಬಸಲಿಂಗನಲ್ಲಿ ಹೇಳುತ್ತಾರೆ.

ವಿವರಣೆ: ಎರಡನೇ ಬಾರಿ ಆಪರೇಷನ್ ಮಾಡಲಿಕ್ಕೆ ಡಾ॥ತಿಮ್ಮಪ್ಪನವರು ನಿರಾಕರಿಸಿದ್ದರಿಂದ ಬಸಲಿಂಗ ಸಿಟ್ಟುಗೊಳ್ಳುತ್ತಾನೆ. ತನ್ನ ಜಾತಿಯನ್ನು ಕೆಡಿಸಿದ ತಿಮ್ಮಪ್ಪ ತನ್ನ ಬಗ್ಗೆ ನಿರ್ಲಕ್ಷ್ಯ ಬೆಳೆಸಿಕೊಂಡಿದ್ದಾರೆಂದು ಕೋಪಿಸಿಕೊಂಡು ಅವರ ಬಗ್ಗೆ ಅಪಪ್ರಚಾರಕ್ಕೆ ಮುಂದಾಗುತ್ತಾನೆ. ಆದರೆ ಈ ನಡುವೆ ಆತನ ಕಣ್ಣು ಬೇನೆ ಇನ್ನಷ್ಟು ತೀವ್ರವಾಗುತ್ತದೆ. ಆದರೆ ಆತ ತಿಮ್ಮಪ್ಪನವರನ್ನು ಹೊರತುಪಡಿಸಿ ಉಳಿದ ವೈದ್ಯರಿಗೆ ತೋರಿಸುತ್ತಾನೆ. ಆದರೆ ಪರಿಹಾರ ಶೂನ್ಯ. ಕೊನೆಗೆ ತನ್ನ ಉಡಾಫೆಯ ಶೈಲಿಯಲ್ಲೇ ತಿಮ್ಮಪ್ಪನವರಲ್ಲಿಗೆ ಚಿಕಿತ್ಸೆಗಾಗಿ ಬರುತ್ತಾನೆ. ಆಗ ಬಸಲಿಂಗನಲ್ಲಿ ಆದ ಬದಲಾವಣೆಯನ್ನು ಗಮನಿಸಿದ ತಿಮ್ಮಪ್ಪನವರು ನೋವಿನಿಂದಲೇ ಹೀಗೆ ಹೇಳುತ್ತಾರೆ. ಬಸಲಿಂಗ ನಾನು ನಿನ್ನನ್ನು ಮುಟ್ಟಿದ್ದು ಡಾಕ್ಟರಾಗಿ ಆದರೆ ನಿನ್ನಂಥ ಮುಗ್ಧ ಮನುಷ್ಯನಲ್ಲಿ

ಕೂಡ ಈ ಮುಟ್ಟುವಿಕೆ ನಾನು ಊಹಿಸದೇ ಇದ್ದದನ್ನು ಮಾಡಿದೆ ಎಂದು ಈ ಮೇಲಿನಂತೆ ಹೇಳುತ್ತಾರೆ.

5. ನೀನು ಅವರನ್ನು ನೋಡಿದರೆ ಮಾತ್ರ ಇರುವ ಒಂದು ಕಣ್ಣು ಉಳಿಯುತ್ತೆ.

ಆಯ್ಕೆ: ಈ ಮೇಲಿನ ವಾಕ್ಯವನ್ನು ಪಿ. ಲಂಕೇಶ್‌ರವರು ಬರೆದ 'ಮುಟ್ಟಿಸಿಕೊಂಡವನು' ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಈ ಮಾತನ್ನು ಡಾಕ್ಟರ್ ಚಂದ್ರಪ್ಪನವರು ಚಿಕಿತ್ಸೆಗಾಗಿ ತನ್ನ ಬಳಿಗೆ ಬಂದ ಬಸಲಿಂಗನಿಗೆ ಹೇಳುತ್ತಾರೆ.

ವಿವರಣೆ: ಬಸಲಿಂಗನ ಕಣ್ಣು ಬೇನೆಗೆ ಎಲ್ಲೂ ಚಿಕಿತ್ಸೆ ದೊರೆಯದಾದಾಗ ಆತ ನಾಲ್ಕನೇ ಹಾಗೂ ಕೊನೆಯ ಬಾರಿ ಎಂಬಂತೆ ತನ್ನ ಉಡಾಫೆಯ ಶೈಲಿಯಲ್ಲಿಯೇ ಡಾ|| ತಿಮ್ಮಪ್ಪನವರನ್ನು ಭೇಟಿ ಮಾಡುತ್ತಾನೆ. ಇವನನ್ನು ಗಮನಿಸಿದ ತಿಮ್ಮಪ್ಪನವರು ಬಸಲಿಂಗನಲ್ಲಿ ಈ ಮುಟ್ಟುವಿಕೆ ನಾನು ಊಹಿಸದೇ ಇದ್ದದ್ದನ್ನು ಮಾಡಿದೆ ಎನ್ನುತ್ತಾರೆ. ತನ್ನಷ್ಟೇ ಒಳ್ಳೆಯ ವೈದ್ಯರಾದ ಡಾ|| ಚಂದ್ರಪ್ಪನವರಲ್ಲಿಗೆ ಕಳುಹಿಸುತ್ತಾರೆ. ಬಸಲಿಂಗನ ಎಡಗಣ್ಣಿನ ಪೂರ್ಣ ಚರಿತ್ರೆಯನ್ನು ತಿಳಿದ ಚಂದ್ರಪ್ಪನವರು 'ಡಾ|| ತಿಮ್ಮಪ್ಪನವರಿಂದ ಆಗದ ಕೆಲಸ ನನ್ನಂಥವರಿಂದ ಸಾಧ್ಯವಿಲ್ಲ. ನಮ್ಮ ವೈದ್ಯಲೋಕ ಬಲ್ಲ ಅತ್ಯಂತ ಪ್ರಾಮಾಣಿಕ, ಪ್ರತಿಭಾವಂತ ಡಾಕ್ಟರು ತಿಮ್ಮಪ್ಪ. ಈ ಕಣ್ಣಿನ ರೋಗ ಅವರ ವಲಯಕ್ಕೆ ಸೇರಿದ್ದು' ಎನ್ನುತ್ತಾ ಮೇಲಿನಂತೆ ಹೇಳುತ್ತಾರೆ.

**ಒಂದು ಅಂಕದ ಪ್ರಶ್ನೆಗಳು :**

1. ಬಸಲಿಂಗನ ಹೆಂಡತಿಯ ಹೆಸರೇನು?

ಬಸಲಿಂಗನ ಹೆಂಡತಿಯ ಹೆಸರು ಸಿದ್ಲಿಂಗಿ.

2. ಬಸಲಿಂಗನಿಗೆ ಕಾಣಿಸಿಕೊಂಡ ತೊಂದರೆ ಯಾವುದು?

ಬಸಲಿಂಗನಿಗೆ ಕಣ್ಣಿನಲ್ಲಿ ನೋವು ಕಾಣಿಸಿಕೊಂಡಿತು.

3. ಬಸಲಿಂಗನಿಗೆ ಮೊದಲು ಯಾವ ಕಣ್ಣಿನಲ್ಲಿ ನೋವು ಆರಂಭವಾಯಿತು?

ಬಸಲಿಂಗನಿಗೆ ಮೊದಲು ಎಡಗಣ್ಣಿನಲ್ಲಿ ನೋವು ಆರಂಭವಾಯಿತು.

4. 'ಮುಟ್ಟಿಸಿಕೊಂಡವನು' ಕತೆಯಲ್ಲಿ ಬರುವ ಸರ್ಕಾರಿ ಆಸ್ಪತ್ರೆಯ ವೈದ್ಯರ ಹೆಸರೇನು?

'ಮುಟ್ಟಿಸಿಕೊಂಡವನು' ಕತೆಯಲ್ಲಿ ಬರುವ ಸರ್ಕಾರಿ ಆಸ್ಪತ್ರೆಯ ವೈದ್ಯರ ಹೆಸರು ಡಾ॥ ತಿಮ್ಮಪ್ಪ.

5. ಸರ್ಕಾರಿ ಆಸ್ಪತ್ರೆಯ ಬಗ್ಗೆ ಬಸಲಿಂಗನಲ್ಲಿದ್ದ ಅಭಿಪ್ರಾಯವೇನು?

ಸರ್ಕಾರಿ ಆಸ್ಪತ್ರೆಯ ಬಗ್ಗೆ ಬಸಲಿಂಗನಿಗಿದ್ದ ಅಭಿಪ್ರಾಯವೆಂದರೆ "ಸರ್ಕಾರಿ ಆಸ್ಪತ್ರೆ ಎಂದರೆ ದಿಕ್ಕು ದಿವಾಳಿ ಇಲ್ಲದವರು ಹೋಗುವ ಜಾಗ" ಎಂಬುದು.

6. ಬಸಲಿಂಗನು ಡಾ. ತಿಮ್ಮಪ್ಪನಿಗೆ ಏನೆಂದು ಸುಳ್ಳು ಹೇಳಿದನು?

ಬಸಲಿಂಗನು ಡಾ॥ ತಿಮ್ಮಪ್ಪನಿಗೆ "ತಾನು ತಲೆಗೆ ನೀರು ಸೋಂಕಿಸಿದರೂ ಸೋಂಕಿಸಿಯೇ ಇಲ್ಲವೆಂದು" ಸುಳ್ಳು ಹೇಳಿದನು.

7. ಬಸಲಿಂಗನು ವೈದ್ಯರಿಗಾಗಿ ಅಲೆದಾಗ ಜೊತೆಗಿದ್ದ ರಾಜಕಾರಣಿ ಯಾರು?

ಬಸಲಿಂಗನು ವೈದ್ಯರಿಗಾಗಿ ಅಲೆದಾಗ ಜೊತೆಗಿದ್ದ ರಾಜಕಾರಣಿ ಲಿಂಗಾಯತ ಜಾತಿಯ ರುದ್ರಪ್ಪ.

8.ಬಸಲಿಂಗನ ಕಾಯಿಲೆ ದೇಹದ ಮಟ್ಟದಿಂದ ಯಾವ ಸ್ತರವನ್ನು ತಲುಪತೊಡಗಿತ್ತು?

ಬಸಲಿಂಗನ ಕಾಯಿಲೆ ದೇಹದ ಮಟ್ಟದಿಂದ ಮಾನಸಿಕ ಸ್ತರವನ್ನು ತಲುಪತೊಡಗಿತ್ತು.

9.ಡಾ॥ ತಿಮ್ಮಪ್ಪ ಬಸಲಿಂಗನಿಗೆ ಯಾವ ವೈದ್ಯರನ್ನು ಕಾಣಬೇಕೆಂದು ಸೂಚಿಸಿದರು?

ಡಾ॥ ತಿಮ್ಮಪ್ಪ ಬಸಲಿಂಗನಿಗೆ ಡಾ॥ ಚಂದ್ರಪ್ಪ ಎಂಬ ವೈದ್ಯರನ್ನು ಕಾಣಬೇಕೆಂದು ಸೂಚಿಸಿದರು.

10.ಕೊನೆಗೆ ಬಸಲಿಂಗ ಯಾವುದರಿಂದ ಮುಕ್ತನಾಗಿದ್ದ?

ಕೊನೆಗೆ ಬಸಲಿಂಗ ಸುಳ್ಳುಗಳಿಂದ ಮುಕ್ತನಾಗಿದ್ದ.

**ಎರಡು– ಮೂರು ವಾಕ್ಯಗಳಲ್ಲಿ ಉತ್ತರಿಸಿ:**

1. ಬಸಲಿಂಗನಿಗೆ ಅದು ಪುರುಸೊತ್ತಿಲ್ಲದ ಕಾಲ ಯಾಕೆ?

ಬಸಲಿಂಗನಿಗೆ ಅದು ಪುರುಸೊತ್ತಿಲ್ಲದ ಕಾಲ ಏಕೆಂದರೆ ಅದು ಕೃಷಿ ಸಮಯವಾಗಿತ್ತು. ಒಂದು ವೇಳೆ ಬಸಲಿಂಗ ಉಳುಮೆ ಮಾಡುವುದನ್ನು ನಾಲ್ಕು ದಿನ ತಡಮಾಡಿದರೂ ನೇಗಿಲಿನ ತುದಿ ನೆಲದಲ್ಲಿ ನಾಟುವುದು ಕಷ್ಟವಾಗುತ್ತಿತ್ತು. ಅದೂ ಅಲ್ಲದೆ ಆತನ ಎರಡೂ ಎತ್ತುಗಳು ಒಂದಕ್ಕಿಂತ ಒಂದು ಸೋಮಾರಿಗಳಾಗಿದ್ದವು. ಅವುಗಳನ್ನು ಆತ ಸಾಟಿ ಮಾಡಲು ಆಲೋಚಿಸುತ್ತಿದ್ದ. ಅಲ್ಲದೆ ಮಗುವಿನ ಕೆಮ್ಮಿನ ಸಮಸ್ಯೆ, ಜೊತೆಯಲ್ಲಿ ಆತನ ಎಡಗಣ್ಣಿನಲ್ಲಿ ನೋವು ಕಾಣಿಸಿಕೊಂಡಿತ್ತು. ಈ ಎಲ್ಲಾ ಸವಾಲುಗಳನ್ನು ಆತ ಎದುರಿಸಬೇಕಾಗಿತ್ತು.

2. ಹೆಂಡ್ತಿ ಸಿದ್ಲಿಂಗಿ ಏನು ಹೇಳುತ್ತಲೇ ಇದ್ದಳು?

ಬಸಲಿಂಗನಿಗೆ ಗೇಯಬೇಕಾದ ಅನಿವಾರ್ಯತೆ ಒಂದೆಡೆಯಾದರೆ ಇನ್ನೊಂದೆಡೆ ಅವನು ಹೊಂದಿದ್ದ ಎರಡು ಎತ್ತುಗಳು ಸೋಮಾರಿಗಳಾಗಿದ್ದವು. ಇದರ ಜೊತೆಯಲ್ಲಿ ಆತನ ಹೆಂಡತಿ ಸಿದ್ಲಿಂಗಿ ಮಗುವಿಗೆ ಮೈಯಲ್ಲಿ ಸರಿಯಿಲ್ಲ, ಏನು ಮಾಡಿದರೂ ಕೆಮ್ಮು ಕಡಿಮೆಯಾಗಲಿಲ್ಲ, ಶಿವನೂರು ಸ್ವಾಮಿಗಳಿಗೆ ತೋರಿಸಬೇಕು ಎಂದು ಹೇಳುತ್ತಲೇ ಇದ್ದಳು.

3. ಬಸಲಿಂಗನಿಗೆ ತನ್ನ ಕಷ್ಟದ ಮುಂದೆ ಯಾವುದು ಗೌಣವಾಗಿ ಕಾಣತೊಡಗಿದವು?

ಬಸಲಿಂಗನಿಗೆ ಕಾಣಿಸಿಕೊಂಡ ಕಣ್ಣಿನ ಸಮಸ್ಯೆ ಆತನನ್ನು ತೀವ್ರತರದಲ್ಲಿ ಹಿಂಸೆಗೆ ಒಳಪಡಿಸುತ್ತಿತ್ತು. ಅದಕ್ಕೆ ಸರಿಯಾಗಿ ಆತನ ಹೆಂಡತಿಯು ಆತನ ನೋವನ್ನು ಅರಿಯದಾದಳು. ಇದರಿಂದ ಬಸಲಿಂಗನಲ್ಲಿ ತೀವ್ರವಾದ ಆಕ್ರೋಶ ಮತ್ತು ಅಸಹಾಯಕತೆ ಕಾಣಿಸಿಕೊಂಡಿತು. ನೋವನ್ನು ಸುಮ್ಮನೆ ವಿವರಿಸದೆ ಕೆಲವರಲ್ಲಿ ತನ್ನ ಇತರ ಕಷ್ಟಗಳನ್ನೂ ತೋಡಿಕೊಂಡ. ಅವನಿಗೆ ಆತನ ಕಷ್ಟದ ಮುಂದೆ ಉಳದಿರುವ ನೆಲ, ಮಗುವಿನ ಕಾಯಿಲೆ ಎಲ್ಲವೂ ಗೌಣವಾಗಿ ಕಾಣತೊಡಗಿದವು.

4. ಕಣ್ಣನ್ನು ಪರೀಕ್ಷಿಸಿದ ಡಾ॥ತಿಮ್ಮಪ್ಪ ಬಸಲಿಂಗನಿಗೆ ಏನೆಂದು ಹೇಳಿದರು?

ಬಸಲಿಂಗ ತನಗೆ ಕಾಣಿಸಿದ ಎಡಗಣ್ಣಿನ ನೋವಿಗೆ ಎಲ್ಲೂ ಸರಿಯಾದ ಚಿಕಿತ್ಸೆ ಸಿಗದೇ ಇದ್ದಾಗ ಡಾ॥ತಿಮ್ಮಪ್ಪನವರ ಬಳಿಗೆ ಹೋಗುತ್ತಾನೆ. ತನ್ನ ಎಲ್ಲಾ ಕಷ್ಟಗಳನ್ನು ಹೇಳಿಕೊಳ್ಳುತ್ತಾನೆ. ಸೂಟಿಯಾದ (ಕೈ ಚಳಕ) ಬೆರಳುಗಳ ವಿಶ್ವಾಸ ತುಂಬಿದ ಮಾತುಗಳ ಡಾಕ್ಟರು ತಿಮ್ಮಪ್ಪ ಅವನನ್ನು ಪರೀಕ್ಷಿಸಿದರು. ಬಸಲಿಂಗನ ದೃಷ್ಟಿಯ ಅಳತೆ, ಸ್ಪಷ್ಟತೆಯನ್ನು ನೋಡಿದರು. ನೋವಿನ ನಿಖರ ಕಾರಣಕ್ಕಾಗಿ ಹುಡುಕಿದರು. ಕೊನೆಗೆ ಹೇಳಿದರು. "ನಿನ್ನ ಕಣ್ಣು ಸರಿ ಹೋಗುತ್ತೆ, ಆದರೆ ಆಪರೇಷನ್ ಆಗಬೇಕು ಪರವಾಗಿಲ್ಲವಾ? ಎಂದರು.

5. ಸಿದ್ಲಿಂಗಿ ಏಕೆ ರಾದ್ಧಾಂತ ಮಾಡಿದಳು?

ಬಸಲಿಂಗ ಡಾಕ್ಟರ್ ತಿಮ್ಮಪ್ಪನವರಲ್ಲಿ ಚಿಕಿತ್ಸೆಯನ್ನು ಪಡೆಯಲು ಮುಂದಾಗುತ್ತಾನೆ. ಆತನಿಗೆ ತಿಮ್ಮಪ್ಪ ಹೊಲೆಯ ಜಾತಿಗೆ ಸೇರಿದವರೆಂಬುದು ತಿಳಿದಿರುವುದಿಲ್ಲ. ಆದರೆ ಬಸಲಿಂಗನ ಹೆಂಡತಿ ಸಿದ್ಲಿಂಗಿಗೆ ಡಾ॥ ತಿಮ್ಮಪ್ಪ ಹೊಲೆಯ ಜಾತಿಗೆ ಸೇರಿದವರೆಂಬುದು ತಿಳಿಯುತ್ತದೆ. ಒಬ್ಬ ಹೊಲೆಯ ಜಾತಿಯವನನ್ನು ಮುಟ್ಟುವುದು ಮೈಲಿಗೆ ಎಂಬ ಜಾತೀಯ ಭಾವನೆ ಹೊಂದಿದ ಆಕೆ ಈ ವಿಷಯ ತಿಳಿದಾಗ ರಾದ್ಧಾಂತವನ್ನೇ ಎಬ್ಬಿಸುತ್ತಾಳೆ.

6. ಅನ್ಯ ಡಾಕ್ಟರುಗಳು ಬಸಲಿಂಗನ ಕಾಯಿಲೆ ಬಗ್ಗೆ ಏನೆಂದು ಪ್ರತಿಕ್ರಿಯಿಸಿದರು?

ಬಸಲಿಂಗ ತನ್ನ ಎಡಗಣ್ಣಿನ ನೋವು ತಡೆಯದಾದಾಗ ಆತ ಮರಳಿ ಡಾ. ತಿಮ್ಮಪ್ಪನಲ್ಲಿಗೆ ಹೋಗುತ್ತಾನೆ. ಆದರೆ ಅವರು ಮರಳಿ ಆಪರೇಷನ್ ಮಾಡಲು ಸಾಧ್ಯವಿಲ್ಲವೆಂದು ಔಷಧಿ ಬರೆದು ಕೊಡುತ್ತಾರೆ. ಇದರಿಂದ ರೋಷಗೊಂಡ ಬಸಲಿಂಗ ತನ್ನ ಉಡಾಫೆತನದಿಂದ ಲಿಂಗಾಯತ ರಾಜಕಾರಣಿ ರುದ್ರಪ್ಪನನ್ನು ಕರೆದುಕೊಂಡು ಬೇರೆ ವೈದ್ಯರ ಬಳಿಗೆ ಹೋದ. ಇವನನ್ನು ಪರೀಕ್ಷಿಸಿದ ಕೆಲವು ಡಾಕ್ಟರುಗಳು "ಇದಕ್ಕೆ ಆಪರೇಷನ್ನೇ ಬೇಕಿಲ್ಲ. ಆ ಡಾಕ್ಟರ್ ತಿಮ್ಮಪ್ಪನಿಗೆ ಬುದ್ಧಿ ಇಲ್ಲ. ಅದಕ್ಕೆ ಆಪರೇಷನ್ ಮಾಡಿದ್ದಾರೆ ಎಂದರು. ಔಷಧಿ ನೀಡಿ ಹಿತವಚನ ಕೊಟ್ಟರು.

7. ಡಾ। ಚಂದ್ರಪ್ಪ ಬಸಲಿಂಗನಿಗೆ ಡಾ।ತಿಮ್ಮಪ್ಪನ ಬಗ್ಗೆ ಕೊಟ್ಟ ಅಭಿಪ್ರಾಯವೇನು?

ಡಾ। ತಿಮ್ಮಪ್ಪನವರ ಆದೇಶದ ಮೇರೆಗೆ ಡಾ। ಚಂದ್ರಪ್ಪನವರ ಬಳಿಗೆ ಬಂದ ಬಸಲಿಂಗನನ್ನು ಪರೀಕ್ಷಿಸಿದ ಡಾ। ಚಂದ್ರಪ್ಪನವರು ಬಸಲಿಂಗನ ಎಡಗಣ್ಣಿನ ಪೂರ್ತಿ ಚರಿತ್ರೆಯನ್ನು ತಿಳಿದು ಹೀಗೆ ಹೇಳಿದರು. "ಡಾ। ತಿಮ್ಮಪ್ಪನವರಿಂದ ಆಗದ ಕೆಲಸ ನನ್ನಂಥವರಿಂದ ಸಾಧ್ಯವಿಲ್ಲ. ನಮ್ಮ ವೈದ್ಯಲೋಕ ಬಲ್ಲ ಅತ್ಯಂತ ಪ್ರಾಮಾಣಿಕ, ಪ್ರತಿಭಾವಂತ ಡಾಕ್ಟರು ತಿಮ್ಮಪ್ಪ.ಈ ಕಣ್ಣಿನ ರೋಗ ಅವರ ವಲಯಕ್ಕೆ ಸೇರಿದ್ದು. ನೀನು ಅವರನ್ನು ನೋಡಿದರೆ ಮಾತ್ರ ಇರುವ ಒಂದು ಕಣ್ಣು ಉಳಿಯುತ್ತೆ" ಎಂದರು.

8. ಕೊನೆಯಲ್ಲಿ ಬಸಲಿಂಗನಿಗೆ ಏನೆಂದು ನಿಶ್ಚಿತವಾಗತೊಡಗಿತ್ತು?

ಡಾ। ತಿಮ್ಮಪ್ಪನವರ ಆದೇಶದ ಮೇರೆಗೆ ಬಸಲಿಂಗ ಡಾ। ಚಂದ್ರಪ್ಪನವರಲ್ಲಿಗೆ ಚಿಕಿತ್ಸೆಗಾಗಿ ಬರುತ್ತಾನೆ. ಆಗ ಚಂದ್ರಪ್ಪನವರು ತಿಮ್ಮಪ್ಪನವರಿಂದ ಆಗದ ಕೆಲಸ ನನ್ನಂಥವರಿಂದ ಸಾಧ್ಯವಿಲ್ಲ. ನೀನು ಅವರನ್ನು ನೋಡಿದರೆ ಮಾತ್ರ ಇರುವ ಒಂದು ಕಣ್ಣು ಉಳಿಯುತ್ತದೆ ಎನ್ನುತ್ತಾರೆ. ಆಗ ರುದ್ರಪ್ಪನವರೊಂದಿಗೆ ಹೊರಗೆ ಬಂದ ಬಸಲಿಂಗ ತಲೆಯ ಮೇಲೆ ಕೈ ಹೊತ್ತು ಕೂತು ಯಾರು ಮಾತಾಡಿಸಿದರೂ ಮಾತಾಡಲೇ ಇಲ್ಲ. ಹೆಂಡತಿಯ ಮಾತೂ ಸಹ ಕಿವಿಗೆ ಬೀಳದಾಯಿತು ಬಲಗಣ್ಣಿನ ದೃಷ್ಟಿಯು ಬರುಬರುತ್ತ ಮಂದವಾಗುತ್ತಿರುವುದು ಆತನಿಗೆ ಗೊತ್ತಿತ್ತು. ಈ ನಡುವೆ ಬಸಲಿಂಗನಿಗೆ ತನ್ನ ಉಡಾಫೆ, ಸುಳ್ಳು, ಜಾತಿ, ಮಠದ ಗುರು– ಯಾರೂ ತನ್ನ ಕಣ್ಣು ಉಳಿಸುವುದಿಲ್ಲ ಎಂಬುದು ನಿಶ್ಚಿತವಾಗತೊಡಗಿತ್ತು.

**ನಾಲ್ಕು ಅಂಕಗಳ ಪ್ರಶ್ನೆಗಳು :**

1. ಬಸಲಿಂಗ ಎದುರಿಸುತ್ತಿದ್ದ ಸಮಸ್ಯೆಗಳು ಯಾವುವು?

ಮುಟ್ಟಿಸಿಕೊಂಡವನು ಕತೆಯಲ್ಲಿ ಬರುವ ಬಸಲಿಂಗ ಒಬ್ಬ ಲಿಂಗಾಯತ ಜಾತಿಯ ಶ್ರಮಿಕ. ಕಷ್ಟಪಟ್ಟು ದುಡಿಯುವ ಮುಖಾಂತರವಾಗಿ ತನ್ನ ಸಂಸಾರದ ಜವಾಬ್ದಾರಿಯನ್ನು ನಿಭಾಯಿಸುತ್ತಿದ್ದ. ಅದು ಬಸಲಿಂಗನಿಗೆ

ದುಡಿಮೆಯ ಕಾಲವಾಗಿದ್ದರಿಂದ ಸ್ವಲ್ಪವೂ ಪುರುಸೊತ್ತು ಇರಲಿಲ್ಲ. ಒಂದು ವೇಳೆ ಬಸಲಿಂಗ ಉಳುಮೆ ಮಾಡುವುದನ್ನು ನಾಲ್ಕು ದಿನ ತಡಮಾಡಿದರೂ ನೇಗಿಲಿನ ತುದಿ ನೆಲದಲ್ಲಿ ನಾಟುವುದು ಕಷ್ಟವಾಗುತ್ತಿತ್ತು. ಹಾಗಾಗಿ ಬೇಗ ಬೇಗ ಉಳುಮೆ ಮಾಡುವ ಅನಿವಾರ್ಯತೆ ಅವನಿಗಿತ್ತು. ಅದರೆ ಬಸಲಿಂಗ ಆ ಸಮಯದಲ್ಲಿ ಹಲವು ಸಮಸ್ಯೆಗಳಿಂದ ಬಳಲುತ್ತಿದ್ದ. ಬಸಲಿಂಗನ ಸಮಸ್ಯೆಗಳಲ್ಲಿ ಮೊದಲನೆಯದು ಆತನ ಸೋಮಾರಿಗಳಾದ ಎರಡು ಎತ್ತುಗಳು. ಒಂದಕ್ಕಿಂತ ಇನ್ನೊಂದು ದುಡಿಮೆಯಲ್ಲಿ ಹಿಂದಿತ್ತು. ಒಂದು ನೊಗ ಇಟ್ಟೊಡನೆ ಮಲಗಿ ಬಿಡುತ್ತದೆ. ಎಷ್ಟು ಹೊಡೆದರೂ ಏಳುವುದಿಲ್ಲ. ಇನ್ನೊಂದು ಕೂಡ ತನ್ನ ಸಹೋದ್ಯೋಗಿಯಂತೆಯೇ ಆಗಿ ಬಿಡುವ ಸೂಚನೆಗಳಿವೆ. ಮಲಗಿರುವ ಒಂದು ಎತ್ತು ಒಂದು ಏಟು ಕೊಟ್ಟೊಡನೆ ಏಳುತ್ತದೆ. ಇನ್ನೊಂದು ಜೊತೆಗಾರ ಏಳುವುದನ್ನೇ ಕಾದು ಕೆಲಸವಿಲ್ಲದ ಬಗ್ಗೆ ಖುಷಿಗೊಳ್ಳುವಂತೆ ಕಂಡುಬರುತ್ತದೆ.ಇದರಿಂದ ಬೇಸರಗೊಂಡ ಬಸಲಿಂಗ ಈ ಎರಡೂ ಎತ್ತುಗಳನ್ನು ಯಾರಾದರೊಬ್ಬರಿಗೆ ಸಾಟಿಯಲ್ಲಿ ಕೊಟ್ಟು ಹೊಸ ಎತ್ತುಗಳನ್ನು ಹೊಂಚಿಕೊಳ್ಳುವ ಯೋಚನೆ ಮಾಡುತ್ತಿದ್ದ. ಆದರೆ ಈ ಎರಡು ಎತ್ತುಗಳನ್ನು ಮಾರುವುದು ಆತನಿಗೆ ಒಂದು ಸವಾಲಾಗಿತ್ತು. ಯಾಕೆಂದರೆ ಈ ಎತ್ತುಗಳ ಬಗ್ಗೆ ಒಳ್ಳೆಯದನ್ನು ಹೇಳಲು ಲೆಕ್ಕ ಹಾಕಿದಂತೆಲ್ಲ ಅವನ ತಲೆ ಬಿಸಿಯಾಗುತ್ತಿತ್ತು.

ಅವನು ಎದುರಿಸುತ್ತಿದ್ದ ಎರಡನೇ ಸಮಸ್ಯೆಯೆಂದರೆ, ಅವನ ಮಗುವಿಗೆ ಮೈಯಲ್ಲಿ ಸರಿಯಿಲ್ಲ. ಶಿವನೂರು ಸ್ವಾಮಿಗಳಿಗೆ ತೋರಿಸಬೇಕೆಂದು ಹೆಂಡತಿ ಸಿದ್ಲಿಂಗಿ ಹೇಳುತ್ತಲೇ ಇದ್ದಾಳೆ. ಸ್ವಲ್ಪ ನಿರ್ಲಕ್ಷ್ಯ ತೋರಿದರೂ ಅವನ ಮಗು ಅವನಿಂದ ದೂರವಾಗುವ ಸಂಭವವಿತ್ತು. ಮೂರನೆಯ ಮತ್ತು ಮುಖ್ಯವಾದ ಸಮಸ್ಯೆಯೆಂದರೆ ಬಸಲಿಂಗನ ಎಡಗಣ್ಣಿನಲ್ಲಿ ಕಾಣಿಸಿಕೊಂಡ ನೋವು. ಇದು ದಿನದಿಂದ ದಿನಕ್ಕೆ ವ್ಯಾಪಿಸಿ ಕುಗ್ಗುವಂತೆ ಮಾಡಿತು. ಈ ಎಲ್ಲಾ ಸಮಸ್ಯೆಗಳು ಮೇಲಿಂದ ಮೇಲೆ ಬಸಲಿಂಗನನ್ನು ಕಾಡುತ್ತಿದ್ದವು.

2. ಕಣ್ಣುನೋವು ಶುರುವಾದ ಆರಂಭದಲ್ಲಿ ಬಸಲಿಂಗ ಪಡೆದುಕೊಂಡ ಚಿಕಿತ್ಸೆ ಯಾವ ರೀತಿಯದು?

ಮುಟ್ಟಿಸಿಕೊಂಡವನು ಕತೆಯಲ್ಲಿ ಬರುವ ಬಸಲಿಂಗ ಆರಂಭದಲ್ಲಿಯೇ ಕೆಲವು ಸಮಸ್ಯೆಗಳನ್ನು ಎದುರಿಸುತ್ತಿದ್ದ. ಅದು ದುಡಿಮೆಯ ಕಾಲವಾಗಿತ್ತು. ಆದರೆ ಆತನ ಎತ್ತುಗಳು ಸೋಮಾರಿಗಳಾಗಿದ್ದವು. ಬಸಲಿಂಗನ ಮಗು ಕೆಮ್ಮಿನಿಂದ ಬಳಲುತ್ತಿತ್ತು. ಇದೆಲ್ಲಕ್ಕಿಂತ ಮುಖ್ಯವಾಗಿ ಬಸಲಿಂಗನ ಎಡಗಣ್ಣಿಲ್ಲಿ ನೋವು ಕಾಣಿಸಿಕೊಂಡಿತು.

ಆರಂಭದಲ್ಲಿ ಬಸಲಿಂಗ ತನಗೆ ಕಾಣಿಸಿಕೊಂಡ ಕಣ್ಣು ಬೇನೆಯನ್ನು ಅಷ್ಟೊಂದು ದೀರ್ಘವಾಗಿ ಪರಿಗಣಿಸಲಿಲ್ಲ. ಇದೊಂದು ಸಾಮಾನ್ಯ ಸಮಸ್ಯೆ ಎಂದುಕೊಂಡ. ನೋವು ಕಾಣಿಸಿಕೊಂಡರೂ ಆತನ ಕಣ್ಣು ಕೆಂಪಾಗಿರಲಿಲ್ಲ. ಆದರೆ ನೋವು ಇನ್ನಷ್ಟು ತೀವ್ರವಾಗಿ ಎಡಗಣ್ಣು ಮಂದವಾದಂತಾದಾಗ ಬಸಲಿಂಗನಿಗೆ ಹೆದರಿಕೆ ಶುರುವಾಯಿತು. ಅಲ್ಲದೆ ಎಡಗಣ್ಣಿನಲ್ಲಿ ಇರುವ ನೋವು ಬಲಗಣ್ಣಿನಲ್ಲಿ ಇರಲಿಲ್ಲ. ನೋವು ಇನ್ನಷ್ಟು ಜಾಸ್ತಿಯಾಗ ತೊಡಗಿದಾಗ ಆತ ನಗರದ ತನ್ನ ಮಾಮೂಲಿ ವೈದ್ಯರಿಗೆ ತೋರಿಸಿದ. ವೈದ್ಯರು ನೋವಿನ ವಿವರಗಳನ್ನೆಲ್ಲ ಕೇಳಿ ರೆಪ್ಪೆ ಅಗಲಿಸಿ ನೋಡಿದರು. ಅವರಿಗೆ ಏನೂ ಅರ್ಥವಾಗದಿದ್ದರೂ ಬಸಲಿಂಗನಿಗೆ ಧೈರ್ಯ ತುಂಬಲು ಒಳ್ಳೊಳ್ಳೆಯ ಮಾತನಾಡಿದರು. ತಮ್ಮ ವೈದ್ಯಕೀಯ ಪವಾಡಗಳನ್ನು ವಿವರಿಸಿದರು. ಹಚ್ಚಿಕೊಳ್ಳಲು ಒಂದು ಲೇಹ್ಯ ಕೊಟ್ಟರು. ಸ್ವಲ್ಪ ಸಮಾಧಾನದಿಂದ ಮನೆಗೆ ಬಂದ ಬಸಲಿಂಗ ಹಲವು ದಿನ ಲೇಹ್ಯ ಹಚ್ಚಿಕೊಂಡು ವೈದ್ಯರು ಹೇಳಿದಂತೆ ಬಟ್ಟೆಯ ಕಾವು, ಉಪ್ಪಿನಕಾವು ಕೊಟ್ಟುಕೊಂಡ. ಆದರೆ ಈ ರೀತಿಯಾದ ಯಾವ ಚಿಕಿತ್ಸೆಯೂ ಆತನ ನೋವನ್ನು ಕಡಿಮೆ ಮಾಡಲಿಲ್ಲ. ಬದಲಾಗಿ ಕಣ್ಣಿನ ಮಂದಸ್ಥಿತಿ ಹೆಚ್ಚಾಗುತ್ತಾ ಹೋಯಿತು. ಅಲ್ಲದೆ ತನ್ನ ನೋವಿನ ತೀವ್ರತೆಯನ್ನು ಹೆಂಡತಿ ಸಿದ್ಲಿಂಗಿಯಲ್ಲಿ ಹೇಳಿಕೊಂಡಾಗ ಆಕೆಯೂ ಕೂಡ ಸ್ಪಂದಿಸದೆ ಎಲ್ಲ ಅವನ ಭ್ರಮೆ ಎನ್ನುವಂತೆ ಮಾತನಾಡಿದಳು. ಕೊನೆಯಲ್ಲಿ ಎಲ್ಲೂ ಒಳ್ಳೆಯ ಚಿಕಿತ್ಸೆ ಸಿಗದಾಗ ಬಸಲಿಂಗನಿಗೆ ಯಾರೋ ಒಬ್ಬರು ಸರ್ಕಾರಿ ವೈದ್ಯ

ಡಾ।ತಿಮ್ಮಪ್ಪನವರನ್ನು ಕಾಣಲು ಹೇಳಿದರು.ಅದರಂತೆ ಆ ವೈದ್ಯರನ್ನು ಕಾಣಲು ಮುಂದಾದ.

3. ಬಸಲಿಂಗ ಡಾ॥ ತಿಮ್ಮಪ್ಪನವರ ಸೂಚನೆಗಳನ್ನು ಪಾಲಿಸದೆ ಇರಲು ಕಾರಣವೇನು?

ಆರಂಭದಲ್ಲಿ ಬಸಲಿಂಗನಿಗೆ ಕಾಣಿಸಿಕೊಂಡ ಕಣ್ಣು ಬೇನೆಗೆ ಎಲ್ಲಿಯೂ ಸರಿಯಾದ ಚಿಕಿತ್ಸೆ ಸಿಗಲಿಲ್ಲ. ನಗರದಲ್ಲಿರುವ ಖಾಸಗಿ ಆಸ್ಪತ್ರೆಯ ವೈದ್ಯರುಗಳು ಇವನ ನೋವನ್ನು ಸರಿಪಡಿಸುವಲ್ಲಿ ವಿಫಲರಾದರು.ಇದರಿಂದ ಬಸಲಿಂಗನ ಕಣ್ಣಿನ ನೋವು ದಿನದಿಂದ ದಿನಕ್ಕೆ ಹೆಚ್ಚಾಗತೊಡಗಿತು. ತನ್ನ ನೋವಿನ ಮುಂದೆ ಉಳಿದಿರುವ ನೆಲ, ಮಗುವಿನ ಕಾಯಿಲೆ ಎಲ್ಲವೂ ಅವನಿಗೆ ಗೌಣವಾಗಿ ಕಾಣತೊಡಗಿದವು. ಕೊನೆಗೆ ಯಾರೋ ಒಬ್ಬರು ಸರ್ಕಾರಿ ಆಸ್ಪತ್ರೆಯ ವೈದ್ಯ ಡಾ।ತಿಮ್ಮಪ್ಪನವರಿಗೆ ತೋರಿಸಲು ಹೇಳಿದರು. ಬಸಲಿಂಗ ಸರ್ಕಾರಿ ಆಸ್ಪತ್ರೆ ಎಂದರೆ ದಿಕ್ಕುದಿವಾಳಿ ಇಲ್ಲದವರು ಹೋಗುವ ಜಾಗ ಎಂದು ತಿಳಿದಿದ್ದ. ಆದರೆ ಕೊನೆಯ ಪ್ರಯತ್ನವಾಗಿ ಡಾ। ತಿಮ್ಮಪ್ಪನವರ ಬಳಿಗೆ ಹೋಗುತ್ತಾನೆ.

ಸೂಟಿಯಾದ ಬೆರಳುಗಳ ವಿಶ್ವಾಸ ತುಂಬಿದ ಡಾ। ತಿಮ್ಮಪ್ಪ ಬಸಲಿಂಗನ ದೈಹಿಕ ಸಮಸ್ಯೆಯ ಜೊತೆಗೆ ಅವನ ಇತರ ಸಮಸ್ಯೆಗಳನ್ನು ಆಲಿಸಿ ಬಸಲಿಂಗನ ದೃಷ್ಟಿಯ ಅಳತೆ ಸ್ಪಷ್ಟತೆಯನ್ನು ನೋಡಿ ನಿನ್ನ ಕಣ್ಣು ಸರಿಹೋಗುತ್ತೆ, ಆದರೆ ಆಪರೇಷನ್ ಆಗಬೇಕು ಪರವಾಗಿಲ್ಲವಾ ಎಂದರು.

ಮರುದಿನ ಆಪರೇಷನ್ ಮಾಡಿದ ತಿಮ್ಮಪ್ಪ ಮುಂಜಾಗ್ರತಾ ಕ್ರಮಗಳನ್ನು ಹೇಳಿ ಕಳುಹಿಸಿದರು. ಎರಡು ವಾರ ತಲೆಗೆ ನೀರು ಸೋಂಕಿಸಬಾರದು ನೀರು ಬಿದ್ದರೆ ಕಣ್ಣು ಕೆಟ್ಟುಹೋಗುತ್ತದೆ ಎಂದರು. ಆದರೆ ತಿಮ್ಮಪ್ಪನವರು ಹೊಲೆಯ ಜಾತಿಗೆ ಸೇರಿದವರೆಂದು ಸಿದ್ಲಿಂಗಿಗೆ ಅದು ಹೇಗೋ ಗೊತ್ತಾಗಿ ದೊಡ್ಡ ರಾದ್ಧಾಂತವನ್ನೇ ಎಬ್ಬಿಸುತ್ತಾಳೆ. ಈ ವಿಷಯ ಬಸಲಿಂಗನಿಗೆ ತಿಳಿದಾಗ ಒಂದು ಕ್ಷಣ ತಿಮ್ಮಪ್ಪನವರು ತಮ್ಮ ಜಾತಿಯ ಬಗ್ಗೆ ಹೇಳಬಾರದಿತ್ತೆ ಎನ್ನುವುದಾಗಿಯೂ ಅಂದುಕೊಳ್ಳುತ್ತಾನೆ.

ಹೊಲೆಯ ಜಾತಿಯ ತಿಮ್ಮಪ್ಪ ಬಸಲಿಂಗನನ್ನು ಮುಟ್ಟಿ ಮೈಲಿಗೆಯಾದ ಕಾರಣ ಆತ ಮೈಲಿಗೆಯನ್ನು ತೊಲಗಿಸಿ ಪರಿಶುದ್ಧತೆಗಾಗಿ ಮತ್ತೆ ಕಣ್ಣನ್ನು ಬಿಟ್ಟು ತಲೆಗೆ ನೀರನ್ನು ಹೆಂಡತಿ ಸಿದ್ಲಿಂಗಿ ಮೂಲಕ ಹಾಕಿಸಿಕೊಳ್ಳುತ್ತಾನೆ. ಬಸಲಿಂಗ ಮೈಲಿಗೆ, ಜಾತೀಯ ಕಾರಣಗಳಿಂದ ತಿಮ್ಮಪ್ಪ ನೀಡಿದ ಸೂಚನೆಗಳನ್ನು ಪಾಲಿಸಲು ಹಿಂಜರಿಯುತ್ತಾನೆ.

4. ಬಸಲಿಂಗನಿಗೆ ಸಿಟ್ಟು ಬರಲು ಕಾರಣವೇನು? ಅದನ್ನು ಆತ ಯಾವ ರೀತಿಯಲ್ಲಿ ವ್ಯಕ್ತಪಡಿಸುತ್ತಾನೆ?

ಆಪರೇಷನ್ ಮಾಡಿದ ಡಾ|ತಿಮ್ಮಪ್ಪ ಹೊಲೆಯ ಜಾತಿಗೆ ಸೇರಿದವರೆಂಬುದು ಸಿದ್ಲಿಂಗಿಗೆ ತಿಳಿದು ಆಕೆ ರಾದ್ಧಾಂತವನ್ನು ಎಬ್ಬಿಸುತ್ತಾಳೆ. ಈ ವಿಚಾರ ಬಸಲಿಂಗನಿಗೂ ತಿಳಿದಾಗ ಆತ ತಿಮ್ಮಪ್ಪನವರು ತಾನು ಹೊಲೆಯ ಜಾತಿಗೆ ಸೇರಿದವರೆಂದು ಒಮ್ಮೆ ಹೇಳಿದ್ದರೆ ಚೆನ್ನಾಗಿರುತಿತ್ತು ಅಂದುಕೊಂಡ. ಅನಂತರ ಇಬ್ಬರೂ ಕೂಡ ಡಾ| ತಿಮ್ಮಪ್ಪನವರಿಂದ ಚಿಕಿತ್ಸೆ ಪಡೆದ ವಿಚಾರ ಯಾರಿಗೂ ಹೇಳಬಾರದು ಎಂದುಕೊಂಡು ತಿಮ್ಮಪ್ಪನವರು ಹೇಳಿದ ಮುನ್ಸೂಚನೆಗಳನ್ನು ಸರಿಯಾಗಿ ಪಾಲಿಸದೆ ತನಗಾದ ಮೈಲಿಗೆಯನ್ನು ನೀರಿನಿಂದ ತಲೆಗೆ ನೀರು ಸೋಂಕಿಸಿಕೊಂಡು ಪರಿಶುದ್ಧಗೊಳಿಸಿಕೊಂಡ. ಆದರೆ ನೋವು ಮತ್ತೆ ಕಾಣಿಸಿಕೊಂಡಾಗ ಬಸಲಿಂಗ ತಬ್ಬಿಬ್ಬಾದ. ತಿಮ್ಮಪ್ಪನವರನ್ನು ಬಿಟ್ಟು ಉಳಿದ ಎಲ್ಲಾ ವೈದ್ಯರುಗಳನ್ನು ಭೇಟಿ ಆದ. ಆದರೆ ಎಲ್ಲೂ ಸರಿಯಾದ ಚಿಕಿತ್ಸೆ ಸಿಗಲಿಲ್ಲ. ಕೊನೆಗೆ ತಿಮ್ಮಪ್ಪನವರ ಬಳಿಗೆ ಬರುವುದು ಅನಿವಾರ್ಯವಾಯಿತು. ಆದರೆ ಬಸಲಿಂಗನನ್ನು ಕಂಡ ತಿಮ್ಮಪ್ಪನವರು ಬಸಲಿಂಗನ ಸ್ಥಿತಿ ಗಮನಿಸಿ ಆತನಿಂದ ನೈಜ ವಿಚಾರ ತಿಳಿದುಕೊಳ್ಳುತ್ತಾರೆ. ನಡೆದ ಎಲ್ಲಾ ವಿಚಾರ ಬಸಲಿಂಗ ಹೇಳಿ 'ಹೆಂಗಾದ್ರೂ ಮಾಡಿ ಇನ್ನೊಂದ್ಸಲ ಆಪರೇಷನ್ ಮಾಡಿಬಿಡ್ರಿ ನಿಮ್ಮ ಮಾತು ಮೀರೊಲ್ಲ' ಅಂದ.ಆದರೆ ತಿಮ್ಮಪ್ಪನವರು ನಿರಾಕರಿಸಿ ಗಾಯಕ್ಕೆ ಔಷಧಿ ಕೊಟ್ಟು ಕಳುಹಿಸುತ್ತಾರೆ.ಇದರಿಂದ ಬಸಲಿಂಗ ಸಿಟ್ಟುಗೊಂಡ.

ಬಸಲಿಂಗನಿಗೆ ತಿಮ್ಮಪ್ಪ ತನ್ನ ಜಾತಿಯನ್ನು ಕೆಡಿಸಿದ್ದು ಮಾತ್ರವಲ್ಲದೆ ತನ್ನ ಬಗ್ಗೆ ನಿರ್ಲಕ್ಷ್ಯ ಬೆಳೆಸಿಕೊಳ್ಳುತ್ತಿದ್ದಾರೆ ಎಂದು ಅನಿಸತೊಡಗಿತು. ತನ್ನ ಕಣ್ಣು ಹೋಗಲು ಅದ್ಯಾವುದೋ ರೀತಿಯಲ್ಲಿ ಇವರು ಕಾರಣವಾದಂತೆ ತಿಳಿದು ತಾನು ಬಲ್ಲವರಲ್ಲಿ ಹೇಳಿಕೊಂಡು ತಿಮ್ಮಪ್ಪನವರನ್ನು ಟೀಕಿಸಿದ. ಅಲ್ಲದೆ ತಾನು ಹೇಳುತ್ತಿರುವುದೇ ಸತ್ಯ ಎನ್ನುವುದನ್ನು ನಂಬಿದ.ಇದನ್ನು ಅಂದರೆ ಈ ಸುಳ್ಳುಗಳೆಲ್ಲವನ್ನು ತನ್ನ ಕೌಟುಂಬಿಕ ಸಮಸ್ಯೆಯ ಪರಿಹಾರಕ್ಕೆ ದಾಳವಾಗಿ ಬಳಸಿಕೊಳ್ಳಬಹುದೆಂದು ತಿಳಿದ. ಅನ್ಯ ಡಾಕ್ಟರುಗಳು ತಿಮ್ಮಪ್ಪನವರ ಬಗ್ಗೆ ಕೆಟ್ಟದಾಗಿ ಮಾತನಾಡುವ ಹಾಗೆ ಮಾಡಿದ. ಹೀಗೆ ತಿಮ್ಮಪ್ಪನವರ ಬಗೆಗಿನ ಅಸಮಾಧಾನವನ್ನು ಬಸಲಿಂಗ ಈ ರೀತಿಯಾಗಿ ತೀರಿಸಿಕೊಂಡ.

5. ಬಸಲಿಂಗ ಕೊನೆಯಲ್ಲಿ ತೆಗೆದುಕೊಂಡ ನಿರ್ಧಾರ ಯಾವುದು? ಅದಕ್ಕೆ ಕಾರಣಗಳೇನು?

ಬಸಲಿಂಗ ಕೊನೆಗೂ ತಿಮ್ಮಪ್ಪನವರನ್ನೇ ಕಾಣುವ ನಿರ್ಧಾರ ಮಾಡಿದ. ಬಸಲಿಂಗ ಡಾ।ತಿಮ್ಮಪ್ಪನವರ ಬಗ್ಗೆ ತನ್ನ ಜಾತಿಯನ್ನು ಕೆಡಿಸಿಕೊಳ್ಳಲು ಇವರೇ ಕಾರಣ ಎಂದು ತೀರ್ಮಾನಿಸಿ ಸಿಟ್ಟು ಮಾಡಿಕೊಂಡು ಅವರ ವಿರುದ್ಧ ಇತರರು ಕೆಟ್ಟ ಮಾತುಗಳನ್ನು ಮಾತನಾಡುವ ಹಾಗೆ ಮಾಡಿದ. ಹಾಗೆ ತನ್ನ ಉಡಾಫೆತನವನ್ನು ಇನ್ನಷ್ಟು ಹೆಚ್ಚಿಸಿಕೊಂಡು ಅದನ್ನು ತನ್ನ ಸ್ವಾರ್ಥಕ್ಕೆ ಬಳಸಿಕೊಳ್ಳಲು ಮುಂದಾದ. ಅಲ್ಲದೆ ಅನ್ಯ ಡಾಕ್ಟರುಗಳು ಕೂಡ ಡಾ। ತಿಮ್ಮಪ್ಪನಿಗೆ ಬುದ್ಧಿ ಇಲ್ಲ. ಅದಕ್ಕೆ ಆಪರೇಷನ್ ಮಾಡಿದ್ದಾರೆ ಎಂದು ಹೇಳುವ ಹಾಗೆ ಮಾಡಿದ. ಆದರೆ ಯಾರೂ ಕೂಡ ಬಸಲಿಂಗನಿಗೆ ಬೇಕಾದ ಸರಿಯಾದ ಔಷಧ ನೀಡಲಿಲ್ಲ. ಕೊನೆಗೆ ತಿಮ್ಮಪ್ಪನವರ ಬಳಿಗೆ ಹೋದಾಗ ಅವರು ಬಸಲಿಂಗನ ಪರಿಸ್ಥಿತಿಯನ್ನು ಗಮನಿಸಿ ನಾನು ನಿನ್ನನ್ನು ಮುಟ್ಟಿದ್ದು ಕೇವಲ ಡಾಕ್ಟರಾಗಿ ಈ ಮುಟ್ಟುವಿಕೆ ನಾನು ಊಹಿಸದೇ ಇದ್ದದ್ದನ್ನು ಮಾಡಿದೆ ಎನ್ನುತ್ತಾ ಆತನನ್ನು ಡಾ।ಚಂದ್ರಪ್ಪನ ಬಳಿಗೆ ಕಳುಹಿಸಿಕೊಡುತ್ತಾರೆ.

ಆದರೆ ಡಾ। ಚಂದ್ರಪ್ಪನವರು ಬಸಲಿಂಗನ ಪೂರ್ಣ ಕತೆಯನ್ನು ತಿಳಿದು 'ಡಾ। ತಿಮ್ಮಪ್ಪನವರಿಂದ ಆಗದ ಕೆಲಸ ನನ್ನಂಥವರಿಂದ ಸಾಧ್ಯವಿಲ್ಲ. ಅವರು

ನಮ್ಮ ವೈದ್ಯ ಲೋಕಬಲ್ಲ ಅತ್ಯಂತ ಪ್ರಾಮಾಣಿಕ, ಪ್ರತಿಭಾವಂತ ಡಾಕ್ಟರು. ನೀನು ಅವರನ್ನು ನೋಡಿದರೆ ಮಾತ್ರ ಇರುವ ಒಂದು ಕಣ್ಣು ಉಳಿಯುತ್ತೆ' ಎಂಬುದಾಗಿ ಹೇಳಿ ಪುನಃ ತಿಮ್ಮಪ್ಪನ ಬಳಿಗೆ ಕಳುಹಿಸುತ್ತಾರೆ. ಆಗ ಬಸಲಿಂಗನಿಗೆ ತನ್ನ ತಪ್ಪಿನ ಅರಿವು ಆಗುತ್ತದೆ. ಆತನಿಗೆ ಕೊನೆಯಲ್ಲಿ ತನ್ನ ಸುಳ್ಳು, ಉಡಾಫೆ, ಜಾತಿ, ಮಠದ ಗುರು – ಯಾರೂ ತನ್ನ ಕಣ್ಣು ಉಳಿಸುವುದಿಲ್ಲ ಎಂಬುದು ನಿಶ್ಚಿತವಾಗತೊಡಗುತ್ತದೆ. ಕೊನೆಗೆ ಆತ ಬೇರೆ ಕೆಟ್ಟ ಆಲೋಚನೆ ಮಾಡದೆ ತಿಮ್ಮಪ್ಪನವರ ಬಳಿಗೆ ಹೋಗಿ ತನ್ನ ತಪ್ಪಿಗೆ ಕ್ಷಮೆ ಕೇಳಿ ಚಿಕಿತ್ಸೆ ಪಡೆದುಕೊಳ್ಳುತ್ತಾನೆ.

===0===

# ವಾಲ್‌ಪರೈ : ಅಭಿವೃದ್ಧಿ ತಂದ ದುರಂತ

**ಕೃಪಾಕರ ಸೇನಾನಿ,**
**ಕೆ. ಪುಟ್ಟುಸ್ವಾಮಿ**

**ಸಂದರ್ಭ ಸಹಿತ ವಿವರಿಸಿ:**

1. ಈ ಪ್ರದೇಶಕ್ಕೆ ಆಗ ಹೆಸರೇ ಇರಲಿಲ್ಲ.

ಆಯ್ಕೆ: ಈ ವಾಕ್ಯವನ್ನು ಕೃಪಾಕರ ಸೇನಾನಿ, ಕೆ. ಪುಟ್ಟಸ್ವಾಮಿಯವರು ಬರೆದಿರುವ "ವಾಲ್‌ಪರೈ ಅಭಿವೃದ್ಧಿ ತಂದ ದುರಂತ" ಎಂಬ ಲೇಖನದಿಂದ ಆಯ್ಕೆ ಮಾಡಲಾಗಿದೆ.

ಸಂದರ್ಭ: ಪಶ್ಚಿಮ ಘಟ್ಟ ಶ್ರೇಣಿಯ ನಡುವಿನ ಒಂದು ದಟ್ಟ ಅರಣ್ಯ ಪ್ರದೇಶ ವಾಲ್‌ಪರೈಯನ್ನು ವರ್ಣಿಸುವಾಗ ಈ ಮಾತು ಬಂದಿದೆ.

ವಿವರಣೆ: ಬ್ರಿಟಿಷರು ರಾಷ್ಟ್ರದೆಲ್ಲೆಡೆ ಅಧಿಪತ್ಯ ಸಾಧಿಸಿದ್ದ ಸಮಯದಲ್ಲಿ ಅನನ್ಯಜೀವ ಸಂಕುಲಗಳಿಂದ ಸಮೃದ್ಧವಾಗಿದ್ದ ಕಾಡು ಪ್ರದೇಶ ವಾಲ್‌ಪರೈ. ಇದಕ್ಕೆ ಆಗ ಯಾವ ಹೆಸರೂ ಇರಲಿಲ್ಲ. ಗಗನಚುಂಬಿ ಮರಗಳ ಮೇಲ್ಹಾವಣಿಯನ್ನು ಭೇದಿಸಿ ಭೂಸ್ಪರ್ಶ ಮಾಡಲು ಸೂರ್ಯ ಕಿರಣಗಳು

ಸೆಣಸುತ್ತಿದ್ದ ದಟ್ಟವಾದ ಕಾಡನ್ನು ಹೊಂದಿದ ಪ್ರದೇಶ. ಹದಿನೆಂಟನೇ ಶತಮಾನದ ಅಂತ್ಯಭಾಗದಲ್ಲಿ ಆ ಕಾಡು ಹೇಗಿತ್ತು ಎನ್ನುವ ಚಿತ್ರಣವನ್ನು ಲೇಖಕರು ನೀಡುತ್ತಾರೆ. ಆ ಪ್ರದೇಶಕ್ಕೆ ಹೆಸರಿಲ್ಲದಿರುವ ಕಾರಣ ಆ ಪ್ರದೇಶ ಹೊರಗಿನ ಪ್ರಪಂಚಕ್ಕೆ ತಿಳಿದಿರಲಿಲ್ಲ. ಜನರು ಪ್ರವೇಶಿಸಿರಲಿಲ್ಲ ಎನ್ನುವುದನ್ನು ಹೇಳುವಾಗ ಈ ಮಾತು ಬಂದಿದೆ.

2. ಅದು ಅವರು ಆವರೆಗೂ ನೋಡಿರದ ಪ್ರಾಣಿ.

ಆಯ್ಕೆ: ಈ ವಾಕ್ಯವನ್ನು ಕೃಪಾಕರ ಸೇನಾನಿ, ಕೆ. ಪುಟ್ಟಸ್ವಾಮಿಯವರು ಬರೆದಿರುವ “ವಾಲ್ ಪರ್ರೈ : ಅಭಿವೃದ್ಧಿ ತಂದ ದುರಂತ” ಎಂಬ ಲೇಖನದಿಂದ ಆಯ್ಕೆ ಮಾಡಲಾಗಿದೆ.

ಸಂದರ್ಭ: ವಾಲ್‌ಪರ್ರೈ ಅರಣ್ಯಕ್ಕೆ ಕಾರ್ವರ್ ಮಾರ್ಷ್ ಪ್ರವೇಶಿಸಿದಾಗ ಅಲ್ಲಿನ ಆದಿವಾಸಿಗಳು ಪ್ರತಿಕ್ರಿಯಿಸಿದ ರೀತಿಯನ್ನು ಹೇಳುವಾಗ ಈ ಸಾಲು ಬಂದಿದೆ.

ವಿವರಣೆ: ವಾಲ್‌ಪರ್ರೈನ ಕಗ್ಗತ್ತಲ ಅರಣ್ಯ ಪ್ರದೇಶಕ್ಕೆ ಮೊದಲ ಬಾರಿಗೆ ಬ್ರಿಟಿಷಿಗ ಕಾರ್ವರ್ ಮಾರ್ಷ್ ಕುದುರೆಯೇರಿ ಕೊಯಮತ್ತೂರಿನಿಂದ ದಕ್ಷಿಣಕ್ಕೆ ನೂರು ಕಿ.ಮೀ ದೂರಕ್ಕೆ ಬಂದ. ಅಲ್ಲಿನ ಪ್ರಕೃತಿಯನ್ನು ಆನಂದಿಸುತ್ತಾ ವಾಲ್‌ಪರ್ರೈನಲ್ಲಿ ಕಗ್ಗತ್ತಲು ಅರಣ್ಯದ ಚಕ್ರವ್ಯೂಹದಲ್ಲಿ ಸಿಕ್ಕಿಬಿದ್ದ. ಅದರಿಂದ ಹೊರಬರಲು ಪ್ರಯತ್ನಿಸುತ್ತಿದ್ದ. ಕಾಲುದಾರಿಯೊಂದು ಕಣ್ಣಿಗೆ ಬಿದ್ದು ಗುಡಿಸಲುಗಳಿದ್ದ ಸ್ಥಳಕ್ಕೆ ಹೋದಾಗ ಅಲ್ಲಿನ ಆದಿವಾಸಿಗಳು ಇವನನ್ನು ನೋಡಿ ದಿಗಿಲುಗೊಂಡರು. ಇವನ ಕುದುರೆಯನ್ನು ನೋಡಿದಾಗ ಅವರಲ್ಲಿ ಆದ ಬದಲಾವಣೆಯನ್ನು ಕುರಿತು ಲೇಖಕರು ಹೇಳುವಾಗ ಈ ಮಾತು ಬಂದಿದೆ.

3. ದುರಂತದ ಮೂಲ ಬೀಜಗಳು ಚಹಾ ಗಿಡದ ರೂಪದಲ್ಲಿ ಬಂದವು.

ಆಯ್ಕೆ: ಈ ವಾಕ್ಯವನ್ನು ಕೃಪಾಕರ ಸೇನಾನಿ, ಕೆ. ಪುಟ್ಟಸ್ವಾಮಿಯವರು ಬರೆದಿರುವ “ವಾಲ್‌ಪರ್ರೈ : ಅಭಿವೃದ್ಧಿ ತಂದ ದುರಂತ” ಎಂಬ ಲೇಖನದಿಂದ ಆಯ್ಕೆ ಮಾಡಲಾಗಿದೆ.

ಸಂದರ್ಭ: ವಾಲ್‌ಪರ್ೈ ಅರಣ್ಯಕ್ಕೆ ಕಾರ್ವೆರ್ ಮಾರ್ಷ್ ಪ್ರವೇಶಿಸಿ ಚಹಾಗಿಡಗಳನ್ನು ನೆಟ್ಟ ಪರಿಣಾಮದ ಕುರಿತು ಹೇಳುವಾಗ ಈ ಮಾತು ಬಂದಿದೆ.

ವಿವರಣೆ: ವಾಲ್‌ಪರ್ೈ ಕಗ್ಗತ್ತಲ ಅರಣ್ಯಕ್ಕೆ ಮೊದಲ ಬಾರಿಗೆ ಬ್ರಿಟಿಷಿಗ ಕಾರ್ವೆರ್ ಮಾರ್ಷ್ ಪ್ರವೇಶಿಸಿದ. ಅಲ್ಲಿ ಆತನಿಗೆ ಪೂಣಚ್ಚಿ ಎಂಬ ಆದಿವಾಸಿ ಪರಿಚಯವಾದನು. ಅವನ ನೆರವಿನಿಂದ ಇಡೀ ಅರಣ್ಯವನ್ನೆಲ್ಲ ಮಾರ್ಷ್ ಅನ್ವೇಷಿಸಿದ. ಪ್ರಕೃತಿಯನ್ನು ಆಸ್ವಾದಿಸುತ್ತಾ ತಾನು ಇಲ್ಲಿಯೇ ನೆಲೆಸಬೇಕೆಂದು ತೀರ್ಮಾನಿಸಿದ. ಪೂಣಚ್ಚಿಯ ಸಹಕಾರದಿಂದ ಸ್ಥಳೀಯರ ವಿಶ್ವಾಸ ಸಂಪಾದಿಸಿ ಇಡೀ ಪ್ರದೇಶದ ನಕ್ಷೆ ತಯಾರಿಸಿ ಅಲ್ಲಿ ಆಗಷ್ಟೇ ಭಾರತ ಪ್ರವೇಶಮಾಡಿದ್ದ ಚಹಾ ಗಿಡಗಳನ್ನು ತಂದು ನೆಟ್ಟ ಎಂದು ಹೇಳುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳಿದ್ದಾರೆ.

4. ಕಾರ್ಮಿಕರು ಕೆಂಪು ಬಾವುಟ ಹಿಡಿದು ಹೋರಾಟಕ್ಕೆ ಸಜ್ಜಾಗಿದ್ದಾರೆ.

ಆಯ್ಕೆ: ಈ ವಾಕ್ಯವನ್ನು ಕೃಪಾಕರ ಸೇನಾನಿ, ಕೆ. ಪುಟ್ಟಸ್ವಾಮಿಯವರು ಬರೆದಿರುವ "ವಾಲ್ ಪರ್ೈ : ಅಭಿವೃದ್ಧಿ ತಂದ ದುರಂತ" ಎಂಬ ಲೇಖನದಿಂದ ಆಯ್ಕೆ ಮಾಡಲಾಗಿದೆ.

ಸಂದರ್ಭ: ವಾಲ್‌ಪರ್ೈನಲ್ಲಿ ಜನರ ಬದಲಿಗೆ ಯಂತ್ರಗಳನ್ನು ಬಳಸಿದ್ದರಿಂದ ಅಲ್ಲಿನ ಕಾರ್ಮಿಕರಿಗೆ ಆದಂತಹ ಸ್ಥಿತಿಯನ್ನು ಕುರಿತಾಗಿ ಹೇಳುವ ಸಂದರ್ಭವಿದು.

ವಿವರಣೆ : ವಾಣಿಜ್ಯ ವ್ಯವಹಾರದ ದೃಷ್ಟಿಯಿಂದ ಶ್ರೀಮಂತ ಪ್ರದೇಶವೆಂದು ಗುರುತಿಸಿಕೊಂಡಿದ್ದ ವಾಲ್‌ಪರ್ೈ ಈಗ ತತ್ತರಿಸುತ್ತಿದೆ. ಅಂತರಾಷ್ಟ್ರೀಯ ವಿದ್ಯಮಾನಗಳು ಅದರ ಆರ್ಥಿಕ ಸ್ಥಿತಿಗತಿಗೆ ಕುತ್ತುತಂದಿದೆ, ವಿಶ್ವ ಮಾರುಕಟ್ಟೆಯಲ್ಲಿ ಚಹಾ ಬೇಡಿಕೆ ಕುಸಿದಿದೆ. ರಫ್ತು ಇಳಿಮುಖಗೊಂಡು ಚಹಾ ತೋಟಗಳು ನಷ್ಟದಲ್ಲಿವೆ. ಬದುಕುಳಿಯಲು ತೋಟದ ಮಾಲಿಕರು ಉತ್ಪಾದನಾ ವೆಚ್ಚ ಕಡಿತಗೊಳಿಸುವ ಅನಿವಾರ್ಯತೆಯಲ್ಲಿದ್ದಾರೆ. ಜನರ ಬದಲು ಯಂತ್ರಗಳನ್ನು ಬಳಸಲು ಮುಂದಾಗಿದ್ದಾರೆ. ಕಂಗಾಲಾದ

ಕಾರ್ಮಿಕರು ಬಾವುಟ ಹಿಡಿದು ಹೋರಾಟಕ್ಕೆ ಸಜ್ಜಾಗಿದ್ದಾರೆ. ಸರ್ಕಾರಕ್ಕೆ ಮನವಿ ಕೊಟ್ಟರೂ ಹಸನಾಗುವ ಭರವಸೆಗಳಿಲ್ಲ ಎನ್ನುವಾಗ ಈ ಮಾತು ಬಂದಿದೆ.

5. ಹಾಡುವುದು ಅವುಗಳಿಗೆ ಅನಿವಾರ್ಯ; ಅವುಗಳ ಕರ್ಮ!

ಆಯ್ಕೆ: ಈ ವಾಕ್ಯವನ್ನು ಕೃಪಾಕರ ಸೇನಾನಿ, ಕೆ. ಪುಟ್ಟಸ್ವಾಮಿಯವರು ಬರೆದಿರುವ "ವಾಲ್ ಪರ್ರೈ : ಅಭಿವೃದ್ಧಿ ತಂದ ದುರಂತ" ಎಂಬ ಲೇಖನದಿಂದ ಆಯ್ಕೆ ಮಾಡಲಾಗಿದೆ.

ಸಂದರ್ಭ: ವಾಲ್‌ಪರ್ರೈ ಅಭಿವೃದ್ಧಿ ತಂದ ದುರಂತದಲ್ಲಿ ವಿಷಲಿಂಗ್ ಥ್ರಷ್‌ಗಳು ನೆಲೆ ಕಳೆದುಕೊಳ್ಳುವಂತಾಯಿತು ಎನ್ನುವಾಗ ಈ ಮಾತು ಬಂದಿದೆ.

ವಿವರಣೆ: ವಾಲ್‌ಪರ್ರೈನ ದಟ್ಟಕಾಡು ಅವನತಿಯಾಗುತ್ತಿದ್ದರೂ ಹಾಡು ಹಕ್ಕಿಗಳಾದ ವಿಷಲಿಂಗ್ ಥ್ರಷ್‌ಗಳು ಬದುಕುಳಿಯುವ ಛಲ ತೊಟ್ಟಿವೆ. ಕಾಡು ಕಣ್ಮರೆಯಾದ ಕಾರಣ ಅವು ಬದುಕುಳಿಯಲು ಕೊಳಚೆ ನೀರು ಇರುವ ಚರಂಡಿಗಳಲ್ಲಿ ವಾಸಿಸಬೇಕಾದ ಪರಿಸ್ಥಿತಿ ಎದುರಾಗಿದೆ. ಸ್ವಚ್ಛ ನೀರಿನ ಹಳ್ಳ-ಕೊಳ್ಳಗಳಲ್ಲಿ ವಾಸಿಸುತ್ತಿದ್ದ ಈ ಹಕ್ಕಿಗಳು ಈಗ ಮೆಲ್ಲನೆ ಹರಿಯುತ್ತಿರುವ ಕೊಳಚೆ ನೀರನ್ನು ಆಶ್ರಯಿಸಬೇಕಾಗಿದೆ. ನೆಲೆ ಕಳೆದುಕೊಂಡು ನೋವಿನಲ್ಲೂ ಮುಂಜಾನೆ ಬೇಗನೆ ಎದ್ದು ರಾಗವಾಗಿ ಹಾಡುತ್ತಿವೆ. ಹಾಗೆ ಹಾಡುವುದು ಅವುಗಳಿಗೆ ಅನಿವಾರ್ಯವಾಗಿದೆ ಎನ್ನುವಾಗ ಈ ಮಾತು ಬಂದಿದೆ.

**ಒಂದು ಅಂಕದ ಪ್ರಶ್ನೆಗಳು:**

1. ಬ್ರಿಟಿಷರ ಯಾವ ಗುಣವನ್ನು ಮೆಚ್ಚಬೇಕು?

ಹೊಸತನ್ನು ಶೋಧಿಸುವ, ಅನ್ವೇಷಿಸುವ ಪ್ರವೃತ್ತಿ ಬ್ರಿಟಿಷರಿಗೆ ಆನುಷಂಗಿಕವಾಗಿ ಬಂದ ಗುಣವನ್ನು ಮೆಚ್ಚಬೇಕು.

2. ವಾಲ್‌ಪರ್ರೈಗೆ ಬಂದ ಬ್ರಿಟಿಷ್ ಪ್ರಜೆ ಯಾರು?

ವಾಲ್‌ಪರ್ರೈಗೆ ಬಂದ ಬ್ರಿಟಿಷ್ ಪ್ರಜೆ ಕಾರ್ವೆರ್ ಮಾರ್ಷ್.

3. ಮಾರ್ಷ್ ವಾಲ್‌ಪರ್ರೈಗೆ ಬಂದದ್ದು ಯಾವಾಗ?

ಮಾರ್ಷ್ ವಾಲ್‌ಪರ್ರೈಗೆ ಬಂದದ್ದು 1890 ರಲ್ಲಿ.

4. ಮಾರ್ಷನ ಜೊತೆಗಾರನ ಹೆಸರೇನು?

ಮಾರ್ಷನ ಜೊತೆಗಾರನ ಹೆಸರು ಪೂಣಚ್ಚಿ.

5. ಕೆಂಪುಪಟ್ಟಿಗೆ ಸೇರಿದ ಪ್ರಾಣಿ ಯಾವುದು?

ಕೆಂಪುಪಟ್ಟಿಗೆ ಸೇರಿದ ಪ್ರಾಣಿ ಸಿಂಹಬಾಲದ ಕೋತಿ.

6. ವಾಲ್‌ಪರ್ರೈನ ದುರಂತದ ಮೂಲ ಬೀಜಗಳು ಯಾವ ರೂಪದಲ್ಲಿ ಬಂದವು?

ವಾಲ್‌ಪರ್ರೈನ ದುರಂತದ ಮೂಲ ಬೀಜಗಳು ಚಹಾ ಗಿಡಗಳ ರೂಪದಲ್ಲಿ ಬಂದವು.

7. ಮನುಕುಲದ ಪಥನಕ್ಕೆ ಕಾರಣ ಯಾವುದು?

ಮಾನವನ ದುರಾಸೆಯೇ ಮನುಕುಲದ ಪಥನಕ್ಕೆ ಕಾರಣವಾಗಿದೆ

8. ವಾಲ್ಪರ್ರೈ ಈಗ ಹೇಗೆ ಕಾಣುತ್ತಿದೆ?

ವಾಲ್ಪರ್ರೈ ಈಗ ಹಸಿರು ಕಂಬಳಿ ಹೊದ್ದು ಮಲಗಿದ ಹಾಗೆ ಕಾಣುತ್ತಿದೆ.

9. ದುರಂತದ ಶಾಪಕ್ಕೆ ತುತ್ತಾಗುವವರು ಯಾರು?

ನಮ್ಮ ಮುಂದಿನ ಪೀಳಿಗೆ ದುರಂತದ ಶಾಪಕ್ಕೆ ತುತ್ತಾಗುವವರು.

**ಎರಡು ಅಂಕದ ಪ್ರಶ್ನೆಗಳು:**

1. ಬ್ರಿಟಿಷರು ಬರುವ ಮೊದಲು ವಾಲ್‌ಪರ್ರೈ ಹೇಗಿತ್ತು?

ಬ್ರಿಟಿಷರು ಬರುವ ಮೊದಲು ವಾಲ್‌ಪರ್ರೈ ಗಗನಚುಂಬಿ ಮರಗಳಿಂದ ಕೂಡಿದ್ದು, ಈ ಮರಗಳ ಮೇಲ್ಛಾವಣಿಯನ್ನು ಭೇದಿಸಿ ಭೂಸ್ಪರ್ಶ ಮಾಡಲು ಸೂರ್ಯಕಿರಣಗಳು ಸೆಣೆಸುತ್ತಿದ್ದವು. ನಡುನಡುವೆ ಹುಲ್ಲುಗಾವಲುಗಳ ಅನಂತ ಬಯಲು, ಅದರ ಏಕತಾನತೆ ಮುರಿಯುವ ಶೋಲಾ ಕಾಡುಗಳು, ಪರ್ವತ ಶ್ರೇಣಿಗಳ ನಡುವೆ ಅಕ್ಷಾಂಶ ರೇಖಾಂಶಗಳನ್ನು ಬರೆದಂತೆ ಹರಿವ ಹಳ್ಳ–ಕೊಳ್ಳಗಳು. ಕಗ್ಗತ್ತಲ ಖಂಡ ಎಂದು ಹೆಸರಾಗಿದ್ದ ಆಫ್ರಿಕಾದಂತೆ ಅದು ಹೊರಗಿನ ಜನರಿಗೆ ಪರಿಚಯವಿರಲಿಲ್ಲ.

2. ಮಾರ್ಷ್‌ನನ್ನು ಕಂಡು ಆದಿವಾಸಿಗಳು ಹೇಗೆ ಪ್ರತಿಕ್ರಿಯಿಸಿದರು?

ಆದಿವಾಸಿಗಳು ಮಾರ್ಷ್‌ನ ಕುದುರೆಯ ಖುರ ಪುಟದ ಸದ್ದಿಗೆ ದಿಗಿಲುಗೊಂಡರು. ಅದು ಅವರು ಆವರೆಗೂ ನೋಡಿರದ ಪ್ರಾಣಿ. ಅದರ ಜೊತೆಯಲ್ಲಿ ಟೋಪಿ ಧರಿಸಿದ ನಾಜೂಕು ಪೋಷಾಕಿನ ಮಾರ್ಷ್. ಎರಡು ವಿಚಿತ್ರಗಳನ್ನು ಒಮ್ಮೆಲೆ ಕಂಡ ಅವರು ಹೆದರಿ ಮಕ್ಕಳನ್ನು ಎಳೆದುಕೊಂಡು ದಟ್ಟಡವಿಯಲ್ಲಿ ಮಿಂಚಿನಂತೆ ಮಾಯವಾದರು.

3. ಕೈಗಾರಿಕೋದ್ಯಮಿಗಳಿಂದ ಕಾಡು ನಾಶವಾದುದು ಹೇಗೆ?

ಕೈಗಾರಿಕೋದ್ಯಮವು ಕಾಡಿನ ಗರ್ಭಪಾತಕ್ಕೆ ಮೊದಲಾಯಿತು. ಪ್ರಭಾವದ ನೆರವಿಲ್ಲದ ಗಗನಚುಂಬಿ ಮರಗಳು ನೆಲಕ್ಕುರುಳಿದವು. ದಿಮ್ಮಿಕೊಳ್ಳಲು ಕಂಟ್ರಾಕ್ಟರ್‌ಗಳು ಬಂದರು. ಫಲವತ್ತಾದ ಭೂಮಿಯಲ್ಲಿ ರಸ್ತೆ ನಿರ್ಮಾಣವಾಯಿತು. ಹೊಗೆಯುಗುಳುವ ಗಡಗಡ ಸದ್ದು ಮಾಡುವ ಲಾರಿ, ಟ್ರಾಕ್ಟರ್‌ಗಳು ಬರತೊಡಗಿದವು. ನೀರವತೆ ನಾಶವಾಯಿತು. ನಿರುದ್ಯೋಗ ಸಮಸ್ಯೆಗೆ ಸಂಜೀವಿನಿಯಂತಿದ್ದ ವಾಲ್‌ಪರೈ ಅರಣ್ಯದ ಮೇಲಿನ ಅತ್ಯಾಚಾರಕ್ಕೆ ಸರ್ಕಾರ ಉತ್ತೇಜನ ನೀಡಿದ ಪರಿಣಾಮ ನಿಬಿಡ ಅರಣ್ಯಗಳೆಲ್ಲ ತೆರವಾಗಿ ಚಹಾ ತೋಟಗಳ ಅನಂತ ಬಯಲಿನ ಪ್ರದೇಶಗಳೇ ಏಕಸ್ವಾಮ್ಯತೆ ಪಡೆದವು.

4. ಸಿಂಹ ಬಾಲದ ಕೋತಿಗಳಿಗೆ ಒದಗಿದ ತೊಂದರೆ ಏನು?

ವಾಲ್‌ಪರೈ ಅರಣ್ಯ ನಾಶದಿಂದ ಸಿಂಹಬಾಲದ ಕೋತಿಗಳು ಸಂಕಷ್ಟದ ಪರಿಸ್ಥಿಯನ್ನು ಎದುರಿಸಬೇಕಾಯಿತು. ವೃಕ್ಷವಾಸಿಗಳಾದ ಕೋತಿಗಳು ಈಗ ಮರದಿಂದ ಮರಕ್ಕೆ ಹಾರುವಂತಿಲ್ಲ. ಬದಲು ನೆಲಕ್ಕೆ ಇಳಿದು ಡಾಂಬರ್ ರಸ್ತೆ ದಾಟಿ ಮತ್ತೊಂದು ಮರ ಹತ್ತಬೇಕು. ರಸ್ತೆ ದಾಟುವ ನಾಗರಿಕ ಬುದ್ಧಿ ಇಲ್ಲದ ಹಲವಾರು ಕೋತಿಗಳು ಈಗಾಗಲೇ ವಾಹನಕ್ಕೆ ಸಿಕ್ಕಿ ಅಂಗವಿಕಲಗೊಂಡಿವೆ. ಅವುಗಳಿಗೆ ಆಹಾರ ನೀಡುತ್ತಿದ್ದ ಮರಗಳು ಕ್ಷೀಣಿಸಿವೆ. ಅವುಗಳಿಗೆ ದಯಾ ಮೃತ್ಯು ಕರುಣಿಸಲೂ ಕಾನೂನಿನಲ್ಲಿ ಅವಕಾಶವಿಲ್ಲ. ಏಕೆಂದರೆ ಅವು ಕೆಂಪು ಪಟ್ಟಿಯಲ್ಲಿರುವ ಜೀವಿಗಳು. ಬದುಕುಳಿಯಲಿಕ್ಕಾಗಿ ಅವು ಊರಿನಂಗಳದ ಕಸದ ತೊಟ್ಟಿಗಳಲ್ಲಿ ಆಹಾರ ಹುಡುಕುತ್ತಾ ಬದುಕು ನೂಕುತ್ತಿವೆ.

**ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ:**

1. ವಾಲ್ ಪರ್ೈಗೆ ಬಂದ ಮಾರ್ಷ್‌ಅಲ್ಲಿ ಹೇಗೆ ನೆಲೆಯೂರಿದ ? ವಿವರಿಸಿ.

1890ರಲ್ಲಿ ಕಾರ್ವರ್ ಮಾರ್ಷ್ ಎಂಬ ಬ್ರಿಟಿಷಿಗ ಕುದುರೆಯೇರಿ ಕೊಯಮತ್ತೂರಿನಿಂದ ದಕ್ಷಿಣಕ್ಕೆ ನೂರು ಕಿ.ಮೀ. ದೂರದ ವಾಲ್‌ಪರ್ೈಗೆ ಬಂದ. ಜೀರುಂಡೆಗಳ ಗದ್ದಲದಲ್ಲಿ ತನ್ಮಯವಾಗಿದ್ದ ಕಗ್ಗತ್ತಲು ಅರಣ್ಯವನ್ನು ಪ್ರವೇಶಿಸಿದ. ಕಾಡಿನ ಅನ್ವೇಷಣೆಗೆ ಬಂದ ಮಾರ್ಷ್‌ಗೆ ತಾನೊಂದು ಚಕ್ರವ್ಯೂಹದಲ್ಲಿ ಸಿಕ್ಕಿಬಿದ್ದಿರುವುದು ಅರಿವಾಗುವಾಗ ತಡವಾಗಿತ್ತು. ಹೆಜ್ಜೆ ಹೆಜ್ಜೆಗೂ ಸರಪಳಿಯಂತೆ ಮರದಿಂದ ಮರಕ್ಕೆ ತೂಗು ಬಿದ್ದಿದ್ದ ನೂರಾರು ಬಳ್ಳಿಗಳನ್ನು ಭೇದಿಸುವುದೇ ಸವಾಲಾಯಿತು. ಎದುರಾದ ಸವಾಲುಗಳಿಗೆ ಕುಗ್ಗದೆ ಮುಂದುವರಿದ ಆತನಿಗೆ ಜನರು ಓಡಾಡಿ ಸವೆಸಿದಂತಿದ್ದ ಕಿರುಹಾದಿಯೊಂದು ಗೋಚರಿಸಿತು. ಅದೇ ಜಾಡನ್ನು ಹಿಡಿದು ಸಾಗಿದಾಗ ನಾಲ್ಕಾರು ಪುಟ್ಟ ಗುಡಿಸಲುಗಳಿದ್ದ ಹಾಡಿ ಪ್ರತ್ಯಕ್ಷವಾಯಿತು. ಗುಡಿಸಲಿನಲ್ಲಿ ಹತ್ತಾರು ಆದಿವಾಸಿಗಳಿದ್ದರು. ಈತನ ಖುರುಪುಟದ ಸದ್ದಿಗೆ ದಿಗಿಲು ಗೊಂಡರು. ಹೆದರಿ ಮಕ್ಕಳನ್ನು ಎಳೆದುಕೊಂಡು ದಟ್ಟಡವಿಯಲ್ಲಿ ಮಿಂಚಿನಂತೆ ಮಾಯವಾದರು.

ಒಂದು ಗುಡಿಸಲಿನಿಂದ ಸದ್ದು ಬಂದಂತಾಗಿ ಆ ಕಡೆ ನೋಡಿದರೆ ಕಟ್ಟುಮಸ್ತಾದ ಆದಿವಾಸಿಯೊಬ್ಬನಿದ್ದ. ಮಾರ್ಷ್‌ಗೆ ಪರಿಚಯವಾದ ಈ ಆದಿವಾಸಿ ಪೂಣಚ್ಚಿ. ಪೂಣಚ್ಚಿಯ ನೆರವಿನಿಂದ ಇಡೀ ಅರಣ್ಯವನ್ನೆಲ್ಲ ಮಾರ್ಷ್ ಅನ್ವೇಷಿಸಿದ. ಪ್ರಕೃತಿಯನ್ನು ಆಸ್ವಾದಿಸುತ್ತಾ ತಾನು ಇಲ್ಲಿಯೇ ಇದ್ದು ಬಿಡಬೇಕೆಂದು ತೀರ್ಮಾನಿಸಿದ. ಪೂಣಚ್ಚಿಯ ಸಹಾಯದಿಂದ ಸ್ಥಳೀಯರ ವಿಶ್ವಾಸ ಸಂಪಾದಿಸಿ, ಇಡೀ ಪ್ರದೇಶದ ನಕ್ಷೆ ತಯಾರಿಸಿದ. ಜೊತೆಗೆ ಆಗಷ್ಟೆ ಭಾರತ ಪ್ರದೇಶ ಮಾಡಿದ್ದ ಚಹಾ ಹಿಡಗಳನ್ನು ತಂದು ನೆಟ್ಟು ಮಾರ್ಷ್ ನಿಧಾನವಾಗಿ ಕಾಡು ಕಡಿಯುತ್ತಾ, ಚಹಾ ಗಿಡಗಳನ್ನು ಪಳಗಿಸುತ್ತಾ, ತೋಟವನ್ನು ವಿಸ್ತರಿಸುತ್ತಾ ನಡೆದ. ಸಮೃದ್ಧವಾಗಿ ಬೆಳೆದ ತೋಟವನ್ನು ಆನಂದಿಸುತ್ತಾ 1934 ರಲ್ಲಿ ಅಸುನೀಗಿದ.

2. ಅಂತರಾಷ್ಟ್ರೀಯ ವಿದ್ಯಾಮಾನಗಳಿಂದಾಗಿ ವಾಲ್‌ಪರೈಗೆ ಒದಗಿದ ಸಮಸ್ಯೆಗಳೇನು?

ಮಾರ್ಷ್‌ನ ಚಹಾ ತೋಟದ ಯಶಸ್ಸು ಸ್ವಾತಂತ್ರೋತ್ತರದಲ್ಲಿ ಭಾರತದ ಅಗ್ರಗಣ್ಯ ಕೈಗಾರಿಕೋದ್ಯಮಿಗಳನ್ನು ಕೈ ಬೀಸಿ ಕರೆಯಿತು. ಕಾಡಿನ ಗರ್ಭಪಾತಕ್ಕೆ ಮೊದಲಾಯಿತು. ಪ್ರಭಾವದ ನೆರವಿಲ್ಲದ ಗಗನಚುಂಬಿ ಮರಗಳು ನೆಲಕ್ಕುರುಳಿದವು. ದಿಮ್ಮಿಕೊಳ್ಳಲು ಕಂಟ್ರಾಕ್ಟರುಗಳು ಬಂದರು. ಫಲವತ್ತಾದ ಭೂಮಿಯಲ್ಲಿ ರಸ್ತೆ ನಿರ್ಮಾಣವಾಯಿತು. ಹೊಗೆಯುಗುಳುವ, ಗಡಗಡ ಸದ್ದು ಮಾಡುವ ಲಾರಿ, ಟ್ರಾಕ್ಟರ್‌ಗಳು ಬರತೊಡಗಿದವು. ನೀರವತೆ ನಾಶವಾಯಿತು. ನಿರುದ್ಯೋಗ ಸಮಸ್ಯೆಗೆ ಸಂಜೀವಿನಿಯಂತಿದ್ದ ವಾಲ್‌ಪರೈ ಅರಣ್ಯದ ಮೇಲಿನ ಅತ್ಯಾಚಾರಕ್ಕೆ ಸರ್ಕಾರ ಉತ್ತೇಜನ ನೀಡಿತು. ಉದ್ಯಮಿಗಳಿಗೆ ಅನುಕೂಲವಾಗುವಂತೆ ವರ್ತಿಸಿತು. ನಿಬಿಡ ಅರಣ್ಯಗಳೆಲ್ಲ ತೆರವಾಗಿ ಚಹಾ ತೋಟಗಳ ಅನಂತ ಬಯಲಿನ ಪ್ರದೇಶಗಳೇ ಏಕಸ್ವಾಮ್ಯತೆ ಪಡೆದವು.

ಈಗ ಇಡೀ ವಾಲ್‌ಪರೈ ಹಸಿರು ಕಂಬಳಿ ಹೊದ್ದು ಮಲಗಿದಂತಿದೆ.ಕಣ್ಣುಕಾಣುವವರೆಗೂ ಚಹಾ ತೋಟದ ಅನಂತ ಬಯಲು ಇದು ಮಾನವ ಸಾಮರ್ಥ್ಯಕ್ಕೆದಕ್ಕಿದ ವಿಜಯ ಪತಾಕೆಯಂತಿದೆ. ಆದರೆ ಈ ಅಭಿವೃದ್ಧಿ ಅಲ್ಲಿನ ಜೀವ ಸಂಕುಲಗಳ ಮೇಲೆ ಬೀರಿರಬಹುದಾದ ದುಷ್ಪರಿಣಾಮದ ಬಗ್ಗೆ ಯಾರಿಗೂ ಅರಿವಿರಲಿಲ್ಲ. ಅಲ್ಲಿ ಆದಿಪತ್ಯ ಸ್ಥಾಪಿಸಿ ಸ್ವಚ್ಛಂದವಾಗಿ ಬದುಕಿದ್ದ ಸಿಂಹಬಾಲದ ಕೋತಿಗಳು ವಂಶನಾಶದ ಅಂಚಿನಲ್ಲಿದೆ. ಅಲ್ಲದೆ ಅನೇಕ ಜೀವ ಸಂಕುಲಗಳು ಕಣ್ಮರೆಯಾದವು.

ಅಂತರಾಷ್ಟ್ರೀಯ ವಿದ್ಯಾಮಾನಗಳು ವಾಲ್‌ಪರೈನ ಆರ್ಥಿಕ ಸ್ಥಿತಿಗತಿಗೆ ಕುತ್ತುತಂದಿವೆ. ಜನರು ನಿರ್ವಹಿಸುತ್ತಿದ್ದ ಕೆಲಸಗಳನ್ನು ಯಾಂತ್ರೀಕರಣ ಮಾಡಲು ಮುಂದಾಗಿದ್ದಾರೆ. ಕಾರ್ಮಿಕರು ಹೋರಾಟಕ್ಕೆ ಮುಂದಾಗಿದ್ದಾರೆ ವಾಲ್‌ಪರೈನಲ್ಲಿ ಹಿಂದಿನ ವೈಭವವಿಲ್ಲ. ಪ್ರಶಾಂತ ನೀರವತೆಯ ಕುರುಹಿಲ್ಲ. ಕಾಡನ್ನು ಸೀಳಿ ಅನುರಣಿಸುತ್ತಿದ್ದ ವಾನರಗಳ ಕೇಕೆಯಿಲ್ಲ ಬದಲು ಯಂತ್ರಗಳ ಸದ್ದು ದಿನನಿತ್ಯ ಕಾರ್ಮಿಕರ ಮೆರವಣಿಗೆ,

ಪ್ರತಿಭಟನೆಯ ಘೋಷಣಾ ಧ್ವಜಗಳು ತುಂಬಿದೆ. ಸಿಂಹಬಾಲದ ಕೋತಿಗಳು ಅವನತಿಯ ದಿನಗಳನ್ನು ಎಣಿಸುತ್ತಿದೆ. ಈ ಎಲ್ಲ ಸಮಸ್ಯೆಗಳನ್ನು ಅಂತಾರಾಷ್ಟ್ರೀಯ ವಿದ್ಯಾಮಾನದಿಂದಾಗಿ ವಾಲ್‌ಪರ್ೈ ಎದುರಿಸುತ್ತಿದೆ.

3. ಸಿಂಹ ಬಾಲದ ಕೋತಿಗಳು ಮತ್ತು ಹಾಡುಹಕ್ಕಿಗಳಿಗಾದ ಅನನುಕೂಲಗಳಾವುವು? ವಿವರಿಸಿ.

ಮಾರ್ಷ್‌ನ ಚಹಾತೋಟದ ಯಶಸ್ಸು ಸ್ವಾತಂತ್ರ್ಯೋತ್ತರದಲ್ಲಿ ಭಾರತದ ಅಗ್ರಗಣ್ಯ ಕೈಗಾರಿಕೋದ್ಯಮಿಗಳನ್ನು ಕೈ ಬೀಸಿ ಕರೆಯಿತು. ವಾಲ್ ಪರ್ೈಗೆ ಲಗ್ಗೆಯಿಟ್ಟರು. ಇವರುಗಳಿಂದ ಕಾಡಿನ ಗರ್ಭಪಾತ ಆರಂಭಗೊಂಡಿತು. ಕಾಲಾಂತರದಿಂದ ಈ ಕಾಡಿನಲ್ಲಿ ಅಧಿಪತ್ಯ ಸ್ಥಾಪಿಸಿಕೊಂಡು ಸ್ವಚ್ಛಂದವಾಗಿ ಬದುಕಿದ್ದ ಸಿಂಹಬಾಲದ ಕೋತಿಗಳ ನೆಲೆ ಧ್ವಂಸವಾಯಿತು. ಕಾಡಿನೆಲ್ಲೆಡೆ ಆವರಿಸಿದ್ದ ಅವುಗಳ ಸಂಖ್ಯೆ ಕ್ಷೀಣಿಸಿ ಕೇವಲ ಎರಡು ಸಾವಿರಕ್ಕೆ ಇಳಿದಾಗ ಇಡೀ ಜಗತ್ತೆ ಬೆಚ್ಚಿಬಿದ್ದತು. ವಾಲ್‌ಪರ್ೈ ಮಧ್ಯದಲ್ಲಿ ಪುದುತೋಟಂ ಎಂಬ ತೋಟವಿದೆ. ವಾಲ್ ಪರ್ೈನ ಅಭಿವೃದ್ಧಿಯಿಂದ ನೆಲೆತಪ್ಪಿದ ಸುಮಾರು 30 ಸಿಂಹಬಾಲದ ಕೋತಿಗಳು ಇಲ್ಲಿ ಆಶ್ರಯ ಪಡೆದಿದೆ. ವೃಕ್ಷವಾಸಿಗಳಾದ ಕೋತಿಗಳು ಈಗ ಮರದಿಂದ ಮರಕ್ಕೆ ಹಾರದೆ ನೆಲಕ್ಕೆ ಇಳಿದು ಡಾಂಬರ್ ರಸ್ತೆದಾಟಿ ಮತ್ತೊಂದು ಮರ ಹತ್ತಬೇಕು. ರಸ್ತೆದಾಟುವ ನಾಗರಿಕ ಬುದ್ಧಿ ಇಲ್ಲದ ಹಲವಾರು ಕೋತಿಗಳು ಈಗಾಗಲೇ ವಾಹನಕ್ಕೆ ಸಿಕ್ಕಿ ಅಂಗವಿಕಲಗೊಂಡಿವೆ. ಅವುಗಳಿಗೆ ಆಹಾರ ನೀಡುತ್ತಿದ್ದ ಮರಗಳು ಕ್ಷೀಣಿಸುತ್ತಿವೆ. ಅವು ಕೆಂಪು ಪಟ್ಟಿಯಲ್ಲಿರುವ ಜೀವಿಯಾದ್ದರಿಂದ ದಯಾಮೃತ್ಯು ಕರುಣಿಸಲೂ ಕಾನೂನಿನಲ್ಲಿ ಅವಕಾಶವಿಲ್ಲ.

ಹಾಡುಹಕ್ಕಿಗಳಾದ ವಿಷಲಿಂಗ್ ಥ್ರಷ್‌ಗಳು ಬದುಕುಳಿಯುವ ಛಲ ತೊಟ್ಟಿದೆ. ಮಿನುಗುವ ಹಸಿರು ಪಾಚಿಗಳನ್ನು ಹೊದ್ದು ಮಲಗಿದ ಕಲ್ಲು ಬಂಡೆಗಳ ನಡುವೆ ನುಸುಳಿ ಹರಿಯುತ್ತಿದ್ದ ಸ್ವಚ್ಛ ನೀರಿನ ಹಳ್ಳ ಕೊಳ್ಳಗಳು ಇವುಗಳ ಬದುಕಿಗೆ ಆಧಾರವಾಗಿದ್ದವು. ಈಗ ಪರಿಸ್ಥಿತಿ ಬದಲಾಗಿದೆ. ಝರಿ

ಜಲಪಾತಗಳ ಪಾತ್ರಗಳನ್ನೆಲ್ಲ ಆಕ್ರಮಿಸಿ ಮೆಲ್ಲನೆ ತೆವಳುತ್ತಿರುವ ಕೊಳಚೆ ನೀರಿನ ಚರಂಡಿಗಳ ಈ ಹಾಡು ಹಕ್ಕಿಗಳ ನೆಲೆಯಾಗಿದೆ.

ಕೈಗಾರಿಕೋದ್ಯಮದ ಜನರ ಓಡಾಟದ ಕಾರಣದಿಂದ ಕಾಡಿನ ನೀರವತೆ ನಾಶವಾಗಿ ಕಾಡುಮಣ್ಣಪಾಲಾದ ಕಾರಣದಿಂದ ಸಿಂಹಬಾಲದ ಕೋತಿಗಳು ಹಾಗೂ ಹಾಡುಹಕ್ಕಿಗಳಿಗೆ ಅನಾನುಕೂಲವುಂಟಾಯಿತು.

4. ಅಭಿವೃದ್ಧಿ ತರುವ ಪ್ರಾಕೃತಿಕ ನಾಶದ ಸ್ವರೂಪವನ್ನು ಪಠ್ಯದ ಹಿನ್ನೆಲೆಯಲ್ಲಿ ಚರ್ಚಿಸಿ.

ಅಭಿವೃದ್ಧಿ ಹೆಸರಿನಲ್ಲಿ ವಾಲ್‌ಪರೈನ ಸೊಬಗು, ಅರಣ್ಯ ಸಂಪತ್ತು ನಾಶವಾಗುವುದರ ಜೊತೆಗೆ ಅಲ್ಲಿನ ಜೀವ ಸಂಕುಲಕ್ಕೆ ಅಪಾರ ಹಾನಿಯಾಯಿತು. ಮಾನವನ ಅಭಿವೃದ್ಧಿಯ ಆಸೆಗಳು ಕಾಡನ್ನು ನಾಶಮಾಡುವ ಮೂಲಕ ಜೈವಿಕ ಜಗತ್ತಿನ ಏರುಪೇರುಗಳಿಗೆ ಕಾರಣವಾಗುವ ದುರಂತಗಳನ್ನು ವಾಲ್‌ಪರೈನಲ್ಲಿ ನೋಡಬಹುದು.

ವಾಲ್‌ಪರೈ ಎಂಬ ದಟ್ಟವಾದ ಕಾಡಿನಲ್ಲಿ ಮಾರ್ಪ್ ಎಂಬ ಬ್ರಿಟಿಷ್ ಅಧಿಕಾರಿ ಚಹಾ ಬೀಜಗಳನ್ನು ಬಿತ್ತಿಕಾಡಿನ ನಾಶಕ್ಕೆ ಕಾರಣನಾದ. ಈ ಕಾಡು ಒಂದು ಕಾಲದಲ್ಲಿ ಗಗನಚುಂಬಿ ಮರಗಳ ಮೇಲ್ಹಾವಣಿಯನ್ನು ಭೇದಿಸಿ ಭೂಸ್ಪರ್ಶ ಮಾಡಲು ಸೂರ್ಯಕಿರಣಗಳು ಸೆಣೆಸುತ್ತಿದ್ದ ದಟ್ಟವಾದ ಕಾಡು, ನಡುನಡುವೆ ಹುಲ್ಲುಗಾವಲುಗಳ ಅನಂತ ಬಯಲು, ಅದರ ಏಕತನ ಮುರಿಯುವ ಶೋಲಾಕಾಡುಗಳು, ಪರ್ವತ ಶ್ರೇಣಿಗಳ ನಡುವೆ ಹಳ್ಳಕೊಳ್ಳಗಳು – ಈ ಎಲ್ಲಾ ಅಂಶಗಳಿಂದ ಅರಣ್ಯ ಸುಂದರವಾಗಿತ್ತು.

ನಂತರದ ದಿನಗಳಲ್ಲಿ ಮಾರ್ಷ್‌ಆಗಮಿಸುತ್ತಾನೆ. ಜೀರುಂಡೆ ಗದ್ದಲದಲ್ಲಿ ತನ್ಮಯವಾಗಿದ್ದ ಕಗ್ಗತ್ತಲು ಅರಣ್ಯವನ್ನು ಪ್ರವೇಶಿಸಿ ಚಹಾ ತೋಟವನ್ನು ವಿಸ್ತರಿಸಿ, ಅದನ್ನು ಆನಂದಿಸುತ್ತಾ ಅಸುನೀಗುತ್ತಾನೆ. ತದನಂತರ ಚಹಾತೋಟವು ಆಗ್ರಗಣ್ಯ ಕೈಗಾರಿಕೋದ್ಯಮಿಗಳನ್ನು ಕೈಬೀಸಿ ಕರೆಯಿತು. ಪ್ರಭಾವದ ನೆರವಿಲ್ಲದ ಗಗನಚುಂಬಿ ಮರಗಳು ನೆಲಕ್ಕೆ ಉರುಳಿದವು. ಫಲವತ್ತಾದ ಭೂಮಿಯಲ್ಲಿ ರಸ್ತೆ ನಿರ್ಮಾಣವಾಗಿ ಗಡಗಡ ಸದ್ದು ಮಾಡುವ

ಲಾರಿ, ಟ್ರ್ಯಾಕ್ಟರ್‌ಗಳು ಬರತೊಡಗಿದವು. ನೀರವತೆ ನಾಶವಾಯಿತು. ಅರಣ್ಯದ ಮೇಲಿನ ಅತ್ಯಾಚಾರಕ್ಕೆ ಸರ್ಕಾರ ಉತ್ತೇಜನ ನೀಡಿತು. ಅಂತರರಾಷ್ಟ್ರೀಯ ವಿದ್ಯಾಮಾನದಿಂದಾಗಿ ಕಾರ್ಮಿಕರು ನಿರುದ್ಯೋಗಿಗಳಾದರು.

ಅಭಿವೃದ್ಧಿ ಹೆಸರಿನಲ್ಲಿ ವಾಲ್‌ಪರ್ೖನ ನೈಸರ್ಗಿಕ ಸೊಬಗು, ಅರಣ್ಯ ಸಂಪತ್ತು ನಾಶವಾಗುವುದರ ಜೊತೆಗೆ ಅಲ್ಲಿನ ಜೀವ ಸಂಕುಲಕ್ಕೆ ಅಪಾರ ಹಾನಿಯಾಯಿತು. ಕಾಲಾಂತರದಿಂದ ಈ ಕಾಡಿನಲ್ಲಿ ವಾಸಿಸಿ, ಸ್ವಚ್ಛಂದವಾಗಿ ಬದುಕುತ್ತಿದ್ದ ಸಿಂಹಬಾಲದ ಕೋತಿಗಳ ನೆಲೆ ತಪ್ಪಿದಂತಾಯಿತು. ಅವುಗಳು ಈಗ ಮರದಿಂದ ಮರಕ್ಕೆ ಹಾರುವಂತಿಲ್ಲ. ನಡೆದಾಡಿದರೆ ವಾಹನಗಳಿಗೆ ಸಿಲುಕಿ ಅಂಗವೈಕಲ್ಯವನ್ನು ಹೊಂದುತ್ತಿದ್ದವು. ಅವುಗಳ ಸಂಖ್ಯೆ ಕ್ಷೀಣಿಸಿ ಕೆಂಪು ಪಟ್ಟಿಗೆ ಸೇರಲ್ಪಟ್ಟವು. ಸ್ವಚ್ಛ ನೀರಿನಲ್ಲಿ ಬದುಕುತ್ತಿದ್ದ ಹಾಡುಹಕ್ಕಿಗಳು ಕೊಳಚೆ ನೀರಿನ ಚರಂಡಿಗಳಲ್ಲಿ ನೆಲೆಸುವಂತಾಗಿದೆ. ನಾಗರಿಕತೆಯ ಉನ್ನತಿಯ ಆದರ್ಶದೊಡನೆ ಆರುಭವಾದ ಅಭಿವೃದ್ಧಿ ಮನುಕುಲದ ಪತನಕ್ಕೆ ಕಾರಣವಾದಂತಾಯಿತು.

===0===

# ಆಯ್ಕೆಯಿದೆ ನಮ್ಮ ಕೈಯಲ್ಲಿ

**ನೇಮಿಚಂದ್ರ**

ಸಾಂದರ್ಭಿಕ ವಿವರಣೆ :

1. 'ಅದೃಷ್ಟವನ್ನೇ' ಅವಲಂಬಿಸಿ ಬದುಕಲು ಸಾಧ್ಯವೇ?

ಆಯ್ಕೆ: ಈ ಮೇಲಿನ ವಾಕ್ಯವನ್ನು 'ಶ್ರೀಮತಿ ನೇಮಿಚಂದ್ರ'ರವರು ಬರೆದ 'ಬದುಕು ಬದಲಿಸಬಹುದು' ಎಂಬ ಕೃತಿಯಿಂದ ಆಯ್ದ 'ಆಯ್ಕೆಯಿದೆ ನಮ್ಮ ಕೈಯಲ್ಲಿ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಲೇಖಕಿ ನೇಮಿಚಂದ್ರರವರು ಅದೃಷ್ಟವನ್ನೇ ಅವಲಂಬಿಸಿ ಬದುಕುವುದು ಸರಿಯಲ್ಲ ಎನ್ನುವಾಗ ಹೇಳುವ ಮಾತು ಇದಾಗಿದೆ.

ವಿವರಣೆ: ನೇಮಿಚಂದ್ರರವರು ಅದೃಷ್ಟವನ್ನೇ ಅವಲಂಬಿಸಿ ಬದುಕುವವರ ಕುರಿತು ಸಿಟ್ಟನ್ನು ವ್ಯಕ್ತಪಡಿಸುತ್ತಾರೆ. ಕೆಲವರನ್ನು ಅವರ ಜೀವನದ ಕುರಿತು ವಿಚಾರಿಸುವಾಗ 'ಏನ್ ಮಾಡೋಕಾಗುತ್ತೆ ಎಲ್ಲಾ ಹಣೆ ಬರಹ, ಆಗೋದು ಆಗೇ ಆಗುತ್ತೆ' ಎನ್ನುತ್ತಾರೆ. ಹಾಗೆ ಹೇಳುವವರ ಬಗ್ಗೆ ಲೇಖಕಿ ಪ್ರತಿಕ್ರಿಯಿಸುತ್ತಾ, ನಿಜ ಕೆಲವೊಮ್ಮೆ ಆಗುವುದನ್ನು ತಡೆಯಲು ಆಗದಿರಬಹುದು. ಆದರೆ ಪ್ರಯತ್ನಿಸಬಹುದಲ್ಲ ಎನ್ನುತ್ತಾ ಈ ಮೇಲಿನಂತೆ ಹೇಳುತ್ತಾರೆ.

2. ಮತ್ತೆ ಅವರಿಗೆ ಮೂತ್ರಪಿಂಡದ ಕಲ್ಲು ಕಾಣಿಸಿರಲಿಲ್ಲ.

ಆಯ್ಕೆ: ಈ ಮೇಲಿನ ವಾಕ್ಯವನ್ನು 'ಶ್ರೀಮತಿ ನೇಮಿಚಂದ್ರ'ರವರು ಬರೆದ 'ಬದುಕು ಬದಲಿಸಬಹುದು' ಎಂಬ ಕೃತಿಯಿಂದ ಆಯ್ದ 'ಆಯ್ಕೆಯಿದೆ ನಮ್ಮ ಕೈಯಲ್ಲಿ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಕಿಡ್ನಿಸ್ಟೋನ್‌ನಿಂದ ಬಳಲಿ ಗುಣಮುಖರಾದ ಕಮಲ ಮೇಡಂ ಕುರಿತು ಲೇಖಕಿ ವಿವರಿಸುವ ಸಂದರ್ಭ ಇದು.

ವಿವರಣೆ: ಕಮಲಮ್ಮ ಮೇಡಂ ಹೋಗುತ್ತಿದ್ದ ಶಾಲೆಯಲ್ಲಿ ಶೌಚಾಲಯವಿರಲಿಲ್ಲ. ನೀರು ಜಾಸ್ತಿ ಕುಡಿದು ಜಲಬಾಧೆಯ ಸಮಸ್ಯೆ

ಎದುರಾಗಬಾರದು ಎಂದು ಆಕೆ ನೀರು ಕುಡಿಯುವುದನ್ನೇ ಕಡಿಮೆ ಮಾಡಿದ್ದರು. ಒಂದು ದಿನ ಅವರು ಹೆರಿಗೆ ನೋವಿಗಿಂತ ತೀವ್ರವಾದ ನೋವಿಗೆ ತುತ್ತಾದರು. ವೈದ್ಯರ ಸಲಹೆಯಂತೆ ಯಥೇಚ್ಚವಾಗಿ ನೀರು ಕುಡಿಯುವ ಅಭ್ಯಾಸ ಮಾಡಿದರು. ವೈದ್ಯರು ಹೇಳಿದ್ದ ಕೆಲವು ಆಹಾರದ ಬದಲಾವಣೆಗಳನ್ನೂ ಜಾರಿಗೆ ತಂದರು. ಕಳೆದ ಇಪ್ಪತ್ತು ವರ್ಷಗಳಲ್ಲಿ ಮತ್ತೆ ಅವರಿಗೆ ಮೂತ್ರಪಿಂಡದಲ್ಲಿ ಕಲ್ಲು ಕಾಣಿಸಲಿಲ್ಲ ಎಂದು ಲೇಖಕರು ಹೇಳುವಾಗ ಈ ಮಾತು ಬಂದಿದೆ.

3. ನೋಡು ನಿನ್ನ ಎದುರು ಎರಡು ಆಯ್ಕೆಗಳಿವೆ.

ಆಯ್ಕೆ: ಈ ಮೇಲಿನ ವಾಕ್ಯವನ್ನು 'ಶ್ರೀಮತಿ ನೇಮಿಚಂದ್ರ'ರವರು ಬರೆದ 'ಬದುಕು ಬದಲಿಸಬಹುದು' ಎಂಬ ಕೃತಿಯಿಂದ ಆಯ್ದ 'ಆಯ್ಕೆಯಿದೆ ನಮ್ಮ ಕೈಯಲ್ಲಿ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಈ ಮಾತನ್ನು ಲೇಖಕಿ ನೇಮಿಚಂದ್ರರವರು ತನ್ನ ಪತಿ ಕೀರ್ತಿಗೆ ಹೇಳುತ್ತಾರೆ.

ವಿವರಣೆ: ಲೇಖಕಿ ನೇಮಿಚಂದ್ರರವರು ಪತಿ ಕೀರ್ತಿಯಲ್ಲಿ ಕಂಡು ಬಂದ ಕಿಡ್ನಿಸ್ಟೋನ್ ಯಾಕಾಗುತ್ತದೆ ಎಂದು ತಿಳಿಯುವ ಕುತೂಹಲ ಹೊಂದಿದ್ದರು. ಈ ಕುರಿತಂತೆ ಅಕ್ಕಪಕ್ಕ ಮನೆಯವರಲ್ಲಿ ಯಾರಿಗಾದರೂ ಆಗಿದೆಯೇ ವಿಚಾರಿಸಲು ಮುಂದಾದರು. ಎದುರು ಮನೆಯ ಕಮಲ ಮೇಡಂ ಮತ್ತು ಮೂಲೆ ಮನೆ ಮುದ್ದೇಗೌಡರನ್ನು ಭೇಟಿಮಾಡಿ ಕಾರಣ ತಿಳಿದುಕೊಂಡರು. ಆದರೆ ಇಬ್ಬರೂ ಕೂಡ ಕಿಡ್ನಿಸ್ಟೋನ್‌ಗೆ ಕಂಡುಕೊಂಡ ಪರಿಹಾರ ಬೇರೆ ಬೇರೆಯಾಗಿತ್ತು. ನಂತರ ಕೀರ್ತಿಯ ಬಳಿ ಬಂದು ಇಬ್ಬರ ವಿಷಯ ತಿಳಿಸುವ ಸಂದರ್ಭದಲ್ಲಿ ಈ ಮೇಲಿನಂತೆ ಹೇಳುತ್ತಾರೆ.

4. ಈ ಅದೃಷ್ಟ ನಿನಗೂ ಇತ್ತಲ್ಲೆ?

ಆಯ್ಕೆ: ಈ ಮೇಲಿನ ವಾಕ್ಯವನ್ನು 'ಶ್ರೀಮತಿ ನೇಮಿಚಂದ್ರ'ರವರು ಬರೆದ 'ಬದುಕು ಬದಲಿಸಬಹುದು' ಎಂಬ ಕೃತಿಯಿಂದ ಆಯ್ದ 'ಆಯ್ಕೆಯಿದೆ ನಮ್ಮ ಕೈಯಲ್ಲಿ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಈ ಮಾತನ್ನು ಲೇಖಕಿ ನೇಮಿಚಂದ್ರರವರು ಗೆಳತಿ ಸೀತಾ ಹತ್ತಿರ ಹೇಳುತ್ತಾರೆ.

ವಿವರಣೆ: ಲೇಖಕಿ ನೇಮಿಚಂದ್ರ ಸಂಶೋಧನೆ ಮುಗಿಸಿ ಬೆಂಗಳೂರಿನ ಕಂಪೆನಿಯೊಂದರಲ್ಲಿ ಕೆಲಸಕ್ಕೆ ಸೇರಿಕೊಂಡರು. ಬಾಡಿಗೆ ಮನೆಯಲ್ಲಿ ರೋಸಿಹೋಗಿ, ಬ್ಯಾಂಕ್‌ನಿಂದ ಸಾಲ ಪಡೆದು ಸಣ್ಣ ಫ್ಲಾಟ್ ಕೂಡ ಕೊಂಡುಕೊಂಡಿದ್ದರು. ಒಮ್ಮೆ ಸೀತಾ ಅವರ ಮನೆಗೆ ಬಂದಾಗ ನೀನು ಬಿಡೆ ತುಂಬಾ ಅದೃಷ್ಟವಂತೆ ಎಂದು ಹಲುಬಿದಳು. ಅದಕ್ಕೆ ಲೇಖಕಿಯವರು ಖಂಡಿತ ನಾನು ಅದೃಷ್ಟವಂತೆ ಭಾರತದಲ್ಲಿ ಹೆಚ್ಚಿನ ಹೆಣ್ಣು ಮಕ್ಕಳಿಗೆ ಓದುವ ಅವಕಾಶವಿಲ್ಲ. ಆದರೆ ನನಗೆ ಆ ಅವಕಾಶ ದೊರೆತಿದೆ. ಎಷ್ಟು ಬೇಕಾದರೂ ಓದಿಸುತ್ತೇನೆ ಎನ್ನುವ ತಂದೆ ಇದ್ದಾರೆ. ಇವೆಲ್ಲ ನನ್ನ ಅದೃಷ್ಟ ಎನ್ನುತ್ತಾ ಸೀತಾಳನ್ನು ಉದ್ದೇಶಿಸಿ ಮರು ಪ್ರಶ್ನಿಸುವಾಗ ಈ ಮೇಲಿನ ಮಾತು ಬಂದಿದೆ.

5. ಮುಂಬಯಿಯ ಪ್ರಸಿದ್ಧ ನ್ಯಾಯವಾದಿಯಾದರು

ಆಯ್ಕೆ: ಈ ಮೇಲಿನ ವಾಕ್ಯವನ್ನು 'ಶ್ರೀಮತಿ ನೇಮಿಚಂದ್ರ'ರವರು ಬರೆದ 'ಬದುಕು ಬದಲಿಸಬಹುದು' ಎಂಬ ಕೃತಿಯಿಂದ ಆಯ್ದ 'ಆಯ್ಕೆಯಿದೆ ನಮ್ಮ ಕೈಯಲ್ಲಿ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಲೇಖಕಿ ನೇಮಿಚಂದ್ರರವರು ಕಷ್ಟದ ಬದುಕಿನಲ್ಲೂ, ತನ್ನ ಹಠದಿಂದ ಮತ್ತೆ ಓದಿ ಪಸಿದ್ಧ ನ್ಯಾಯವಾದಿಯಾದ ಪ್ಲೇವಿಯಾರವರ ಕುರಿತು ಹೇಳುವ ಮಾತು ಇದಾಗಿದೆ.

ವಿವರಣೆ: ಬದುಕು ಸದಾ ಅದೃಷ್ಟಗಳನ್ನು ನಮ್ಮತ್ತ ಎಸೆಯದಿದ್ದರೂ, ನಮ್ಮೆದುರು ನೂರು ಸಾವಿರ ಅವಕಾಶಗಳನ್ನು ತೆರೆದಿಡುತ್ತದೆ ಎನ್ನುವ ಲೇಖಕಿಯು, ಅಂತಹ ಅವಕಾಶಗಳನ್ನು ಉಪಯೋಗಿಸಿಕೊಂಡು ಬದುಕಿನಲ್ಲಿ ಮೇಲೆ ಬಂದ ಪ್ಲೇವಿಯಾ ಬಗ್ಗೆ ಹೆಮ್ಮೆ ಪಡುತ್ತಾರೆ. ಪ್ಲೇವಿಯಾ ಓದಿದ್ದು ಕೇವಲ ಹತ್ತನೆ ತರಗತಿ ಮಾತ್ರ. ಮದುವೆಯಾದ ಪ್ಲೇವಿಯಾಗೆ ಮೂರು ಮಕ್ಕಳು, ಜೊತೆಯಲ್ಲಿ ಗಂಡ ಕೆಟ್ಟವನು. ಇಷ್ಟೇ ಅಲ್ಲದೆ ಆಕೆಯ ಮನೆಯಲ್ಲಿಯೂ ಹೇಳಿಕೊಳ್ಳುವಂತಹ ಯಾವ ಆಸ್ತಿಯೂ ಇರಲಿಲ್ಲ. ಆದರೆ

ಆಕೆ ಎದುರು ಆಯ್ಕೆಗಳಿದ್ದವು. ತನ್ನ ಆ ದುಃಸ್ಥಿತಿಯ ಸಂದರ್ಭದಲ್ಲಿಯೂ, ನಲವತ್ತರ ವಯಸ್ಸಿನಲ್ಲಿ ವಿದ್ಯಾಭ್ಯಾಸ ಮುಂದುವರೆಸಿದ ಫ್ಲೇವಿಯಾ ಮುಂಬಯಿಯ ನ್ಯಾಯವಾದಿಯಾದರು ಎನ್ನುವುದನ್ನು ಲೇಖಕಿ ವಿವರಿಸುತ್ತಾರೆ.

6. "ನಾನು ನಾಲ್ಕು ಬಾರಿ ಆಪರೇಶನ್ ಮಾಡಿಸಿಕೊಂಡಿದ್ದೇನೆ"

ಆಯ್ಕೆ: ಈ ಮೇಲಿನ ವಾಕ್ಯವನ್ನು 'ಶ್ರೀಮತಿ ನೇಮಿಚಂದ್ರ'ರವರು ಬರೆದ 'ಬದುಕು ಬದಲಿಸಬಹುದು' ಎಂಬ ಕೃತಿಯಿಂದ ಆಯ್ದ 'ಆಯ್ಕೆಯಿದೆ ನಮ್ಮ ಕೈಯಲ್ಲಿ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಕಿಡ್ನಿಸ್ಟೋನ್‌ನಿಂದ ಬಳಲಿ ಗುಣಮುಖರಾದ ಮೂಲೆಮನೆ ಮುದ್ದೇಗೌಡರರ ಕುರಿತು ಲೇಖಕಿ ವಿವರಿಸುವ ಸಂದರ್ಭ ಇದು.

ವಿವರಣೆ : ಮೂಲೆ ಮನೆ ಮುದ್ದೇಗೌಡರಿಗೂ ಮೂತ್ರಪಿಂಡದಲ್ಲಿ ಕಲ್ಲು ಆಗಿತ್ತು ಎಂದು ತಿಳಿದು ಅವರ ಬಳಿಯಲ್ಲಿ ಕೇಳಿದರು. ಆಗ ಮುದ್ದೇಗೌಡರು 'ಅದೇನು ದುಡ್ಡ ವಿಷಯ ಅಲ್ಲಮ್ಮ' ಎಂದರು. ಎರಡು ವರ್ಷಕ್ಕೊಮ್ಮೆ ಆಪರೇಶನ್ ಮಾಡಿಸಕೋ ಬೇಕು ಎಂದು ಹೇಳುತ್ತಾರೆ ಎಂದಾಗ ಅದು ದೊಡ್ಡ ವಿಷಯವಲ್ಲ, "ನಾನು ನಾಲ್ಕು ಬಾರಿ ಆಪರೇಶನ್ ಮಾಡಿಸಿಕೊಂಡಿದ್ದೇನೆ" ಎಂದು ಹೇಳಿದರು.

7. "ಈ ಅದೃಷ್ಟ ನಿನಗೂ ಇತ್ತಲ್ಲೆ"

ಆಯ್ಕೆ: ಈ ಮೇಲಿನ ವಾಕ್ಯವನ್ನು 'ಶ್ರೀಮತಿ ನೇಮಿಚಂದ್ರ'ರವರು ಬರೆದ 'ಬದುಕು ಬದಲಿಸಬಹುದು' ಎಂಬ ಕೃತಿಯಿಂದ ಆಯ್ದ 'ಆಯ್ಕೆಯಿದೆ ನಮ್ಮ ಕೈಯಲ್ಲಿ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ತನ್ನ ಗೆಳತಿ ಸೀತಾ ಕುರಿತು ಲೇಖಕಿ ವಿವರಿಸುವ ಸಂದರ್ಭ ಇದು.

ವಿವರಣೆ : ಲೇಖಕಿ ಬಾಲ್ಯದ ಗೆಳತಿ ಸೀತಾಳ ಬದುಕಿನ ದುರಂತದ ಅವ್ಯವಸ್ಥೆಯನ್ನು ಹೇಳುತ್ತಾ ಇದ್ದರು. ವಾರಕ್ಕೊಮ್ಮೆ ಲೇಖಕಿಯ ಮನೆಗೆ

ನೋರು ದೂರನ್ನು ಹಿಡಿದು ಬರುತ್ತದ್ದಳು. "ನೀನು ಬಿಡೆ ತುಂಬಾ ಅದೃಷ್ಟವಂತೆ" ಅನ್ನುವಳು. ಖಂಡಿತ ಅದೃಷ್ಟವಂತೆ ಹೌದು ಎಷ್ಟು ಬೇಕಾದರೂ ಓದಿಸುವ ತಂದೆ ಸಿಕ್ಕಿದ್ದರು. ಆದರೆ "ನಿನಗೂ ಆ ಅದೃಷ್ಟ ಇತ್ತಲ್ಲೆ" ಎಂದರು. ಆ ಸಂದರ್ಭದಲ್ಲಿ ವಿವರಿಸಿದರು.

**ಒಂದು ಅಂಕದ ಪ್ರಶ್ನೆಗಳು:**

1. ಲೇಖಕಿಗೆ ಯಾವಾಗ ರೇಗಿ ಹೋಗುತ್ತಿತ್ತು?

'ಏನ್ ಮಾಡೋಕಾಗುತ್ತೆ ಎಲ್ಲಾ ಹಣೆ ಬರಹ, ಆಗೋದು ಆಗೇ ಆಗುತ್ತೆ' ಎಂದು ಯಾರಾದರೂ ಹೇಳಿದರೆ ಲೇಖಕಿಗೆ ರೇಗಿ ಹೋಗುತ್ತಿತ್ತು.

2. ಲೇಖಕಿಯ ಪತಿ ಯಾವ ತೊಂದರೆಯಿಂದ ಬಳಲಿದರು?

ಲೇಖಕಿಯ ಪತಿ ಮೂತ್ರಪಿಂಡದ ಕಲ್ಲಿನ ತೊಂದರೆಯಿಂದ ಬಳಲಿದರು.

3.'ಕಿಡ್ನಿಸ್ಟೋನ್' ಬಗ್ಗೆ ತಿಳಿಯಲು ಲೇಖಕಿ ಯಾರನ್ನು ಭೇಟಿ ಮಾಡಿದರು?

'ಕಿಡ್ನಿಸ್ಟೋನ್' ಬಗ್ಗೆ ತಿಳಿಯಲು ಲೇಖಕಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಮೂಲೆಮನೆ ಮುದ್ದೇಗೌಡರು ಮತ್ತು ಕಮಲಮ್ಮನವರನ್ನು ಭೇಟಿ ಮಾಡಿದರು.

4.ಲೇಖಕಿಯ ಪತಿಯನ್ನು ಸೋನಗ್ರಫಿ ರೂಮಿಗೆ ಕರೆದೊಯ್ದುದೇಕೆ?

ಮೂತ್ರಪಿಂಡದಲ್ಲಿನ ಕಲ್ಲು ಇರುವ ಸ್ಥಳವನ್ನು ಬದಲಿಸಿದೆಯೇ ಎಂದು ತಿಳಿದುಕೊಳ್ಳಲು ಲೇಖಕಿಯ ಪತಿಯನ್ನು ಸೋನಗ್ರಫಿ ಕರೆದೊಯ್ಯಲಾಯಿತು.

5. ಅದೃಷ್ಟದ ಪ್ರಶ್ನೆ ಬಂದಾಗ ಲೇಖಕಿಗೆ ಯಾರು ನೆನಪಾಗುತ್ತಾರೆ?

ಅದೃಷ್ಟದ ಪ್ರಶ್ನೆ ಬಂದಾಗ ಲೇಖಕಿಗೆ ತಮ್ಮ ಹೈಸ್ಕೂಲ್ ಸಹಪಾಠಿ ಸೀತಾ ನೆನಪಾಗುತ್ತಾರೆ.

6. ದುರಾಸೆಯ ಹುಡುಗನನ್ನು ನಿರಾಕರಿಸಿದವರು ಯಾರು?

ದುರಾಸೆಯ ಹುಡುಗನನ್ನು ನಿರಾಕರಿಸಿದವರು ನಿಶಾ ಶರ್ಮ.

**ಎರಡು ಅಂಕಗಳ ಪ್ರಶ್ನೆಗಳು:**

1. ಯಾವ ಉತ್ತರಗಳಿಂದ ಲೇಖಕಿಗೆ ತೃಪ್ತಿಯಾಗಲಿಲ್ಲ?

ಲೇಖಕಿಗೆ ಕಿಡ್ನಿಸ್ಟೋನ್ ಯಾಕಾಗುತ್ತೆ ಎಂದು ತಿಳಿದುಕೊಳ್ಳುವ ಕುತೂಹಲವಿತ್ತು. ಅದಕ್ಕಾಗಿ ಅವರು ಕೆಲವರಲ್ಲಿ ಕಿಡ್ನಿಸ್ಟೋನಿನ ಬಗ್ಗೆ ವಿಚಾರಿಸಿ ಅಭಿಪ್ರಾಯ ಕಲೆಹಾಕಲು ಮುಂದಾದರು. 'ಅಯ್ಯೋ ಈ ಕಿಡ್ನಿಸ್ಟೋನ್ ಕೆಲವರಿಗೆ ಆಗುತ್ತೆ, ಕೆಲವರಿಗೆ ಇಲ್ಲ ಅವರವರ ಅದೃಷ್ಟ' ಎಂಬಂಥ ಉತ್ತರಗಳು ತೃಪ್ತಿಯಾಗಲಿಲ್ಲ.

2. ಕಮಲ ಮೇಡಂ ವೈದ್ಯರ ಯಾವ ಸಲಹೆಯನ್ನು ರೂಢಿಸಿಕೊಂಡರು?

ಶೌಚಾಲಯದ ಸಮಸ್ಯೆಯಿಂದ ಜಲಬಾಧೆ ತಡೆದುಕೊಂಡ ಪರಿಣಾಮವಾಗಿ ಎದುರು ಮನೆಯ ಕಮಲ ಮೇಡಂಗೆ ಕಿಡ್ನಿಸ್ಟೋನ್ ಆಗಿತ್ತು. ವೈದ್ಯರ ಬಳಿಗೆ ಹೋಗಿ ಅವರ ಸಲಹೆಯಂತೆ ಯಥೇಚ್ಚವಾಗಿ ನೀರು ಕುಡಿಯುವ ಅಭ್ಯಾಸ ಮಾಡಿಕೊಂಡರು. ವೈದ್ಯರು ಹೇಳಿದ್ದ ಕೆಲವು ಆಹಾರದ ಬದಲಾವಣೆಗಳನ್ನೂ ಜಾರಿಗೆ ತಂದರು. ವೈದ್ಯರ ಸಲಹೆಯನ್ನು ರೂಢಿಸಿಕೊಂಡ ಕಾರಣ ಕಳೆದ ಇಪ್ಪತ್ತು ವರ್ಷಗಳಲ್ಲಿ ಮತ್ತೆ ಅವರಿಗೆ ಮೂತ್ರಪಿಂಡದ ಕಲ್ಲು ಕಾಣಿಸಿರಲಿಲ್ಲ.

3. ಮುದ್ದೇಗೌಡರು ಪಥ್ಯದ ವಿಚಾರವಾಗಿ ಹೊಂದಿದ್ದ ನಿಲುವು ಯಾವುದು?

ಮುದ್ದೇಗೌಡರು ಪಥ್ಯದ ವಿಚಾರದಲ್ಲಿ ಉದಾಸೀನದಿಂದಿದ್ದರು. ಲೇಖಕಿ ಕೇಳಿದಾಗ 'ಅಯ್ಯೋ ಅದೆಲ್ಲಾ ಪಥ್ಯ ಯಾರು ಮಾಡ್ಳೋಕೆ ಆಗುತ್ತೆ? ಬಾಡು ತಿನ್ಬೇಡಿ, ಹಾಲಿನ ಪದಾರ್ಥಗಳನ್ನು ಜಾಸ್ತಿ ಸೇವಸಬೇಡಿ, ಸದಾ ನೀರು ಕುಡೀರಿ ಅಂತಾರೆ, ಅದೆಲ್ಲಾ ಆಗೋ ಮಾತಲ್ಲ ಬಿಡಿ' ಎಂದು ತಲೆ ಕೊಡವಿದರು.

4. ಸೀತಾಳ ಓದುವ ಆಸಕ್ತಿ ಹೇಗಿತ್ತು?

ಸೀತಾಳಿಗೆ ಓದಿನಲ್ಲಿ ಆಸಕ್ತಿ ಇರಲಿಲ್ಲ. ಎಸ್.ಎಸ್.ಎಲ್.ಸಿಯಲ್ಲಿ ಎಲ್ಲಾ

ವಿಷಯದಲ್ಲೂ ಫೇಲ್ ಆದಳು. ಮತ್ತೊಮ್ಮೆ ಪರೀಕ್ಷೆ ಕಟ್ಟುವ ತಾಪತ್ರಯಕ್ಕೇ ಹೋಗಲಿಲ್ಲ. ಸದಾ ಯಾರಾದರೂ ಗೆಳತಿಯನ್ನು ಜೊತೆ ಮಾಡಿಕೊಂಡು ಮಾರ್ಕೆಟ್, ಸಿನೆಮಾ ಎಂದು ಸುತ್ತಾಡುತ್ತಿದ್ದಳು.

5. ಸೀತಾಳ ಬಯಕೆ, ನಂಬಿಕೆಗಳು ಹೇಗಿದ್ದವು?

ಸೀತಾ ಕಷ್ಟ ಪಡುವವಳಲ್ಲ. ಎಲ್ಲವೂ ತಟ್ಟನೆ ಸರಿಹೋಗಿ ಬಿಡಬೇಕು ಎಂದು ಬಯಸುತ್ತಿದ್ದಳು. ಕೈ ತುಂಬಾ ಸಂಪಾದಿಸಿ ತಂದು ಹಾಕಿ ಹೆಂಡ್ತಿನಾ ಚೆನ್ನಾಗಿ ಇಟ್ಟುಕೊಳ್ಳುವುದು ಗಂಡನ ಜವಾಬ್ದಾರಿ ಎಂದು ಬಲವಾಗಿ ನಂಬಿದ್ದ ಸೀತಾ ತನ್ನ ಕಿರುಬೆರಳನ್ನು ಎತ್ತಲು ಸಿದ್ಧವಿರಲಿಲ್ಲ.

6. ತಾನು ಅದೃಷ್ಟವಂತೆಯೆಂದು ಲೇಖಕಿ ಭಾವಿಸಲು ಕಾರಣವೇನು?

ಒಂದು ದಿನ ನಿರೂಪಕಿಯ ಮನೆಗೆ ಬಂದ ಸೀತಾ ನಿರೂಪಕಿಯಲ್ಲಿ 'ನೀನು ಬಿಡೆ ತುಂಬಾ ಅದೃಷ್ಟವಂತೆ ಎಂದು ಹಲುಬಿದಳು'. ಆಗ ನಿರೂಪಕಿಯವರು ಖಂಡಿತಾ ನಾನು ಅದೃಷ್ಟವಂತೆ ಕಣೆ, ನಮ್ಮ ಭಾರತದಲ್ಲಿ ಎಷ್ಟು ಜನ ಹೆಣ್ಣು ಮಕ್ಕಳಿಗೆ ಓದೋ ಅವಕಾಶ ಸಿಗುತ್ತೆ ಹೇಳು. ವಿದ್ಯಾವಂತರ ಕುಟುಂಬದಲ್ಲಿ ಹುಟ್ಟಿದೆನಲ್ಲಾ ಅದು ನನ್ನ ಅದೃಷ್ಟ. ಎಷ್ಟು ಬೇಕಾದರೂ ಓದಿಸ್ತೇನೆ ಅಂದ ಅಪ್ಪ ಇದ್ದಾರಲ್ಲ ಅದು ನನ್ನ ಅದೃಷ್ಟ ಎನ್ನುತ್ತಾರೆ.

**ನಾಲ್ಕು ಅಂಕಗಳ ಪ್ರಶ್ನೆಗಳು:**

1. ರಜೆಗೆಂದು ಮೈಸೂರಿಗೆ ಹೋದಾಗ ಲೇಖಕಿಯ ಪತಿಗಾದ ತೊಂದರೆಯೇನು?

ಲೇಖಕಿಯು ನಾಲ್ಕು ವರ್ಷಗಳ ಹಿಂದೆ ರಜೆಗೆಂದು ತಮ್ಮ ಕುಟುಂಬ ಸಮೇತರಾಗಿ ಮೈಸೂರಿನಲ್ಲಿರುವ ತನ್ನ ಅಮ್ಮನ ಮನೆಗೆ ಹೋಗಿದ್ದರು. ಆ ರಾತ್ರಿ ಇದ್ದಕಿದ್ದಂತೆ ಲೇಖಕಿಯ ಪತಿ ಕೀರ್ತಿಗೆ ಎಲ್ಲಿಲ್ಲದ ಕೆಳಹೊಟ್ಟೆಯ ನೋವು ಕಾಣಿಸಿಕೊಂಡಿತು. ಅದೆಲ್ಲೋ ಬೆನ್ನ ಹಿಂಬದಿಯಲ್ಲಿ ಹುಟ್ಟಿದ ನೋವು, ಕಿಬ್ಬೊಟ್ಟೆಯವರೆಗೂ ವ್ಯಾಪಿಸಿ ಕೀರ್ತಿ ನೋವಿನಿಂದ ಒದ್ದಾಡ ತೊಡಗಿದರು. ಕೂಡಲೇ ಮಿಶನ್ ಆಸ್ಪತ್ರೆಗೂ ಕೂಡ ಸೇರಿಸಲಾಯಿತು. ಸೋನೋಗ್ರಫಿ ಎಂಬ ತಪಾಸಣೆಯನ್ನು ಮಾಡಿದರು. ಆಗ 8 ಮಿ.ಮೀ

ಉದ್ದದ ಕಲ್ಲು ಮೂತ್ರಪಿಂಡದಲ್ಲಿ ಇರುವುದು ಖಚಿತವಾಯಿತು. ಅಲ್ಲದೆ ಎರಡು ದಿನದ ಅನಂತರ ಶಸ್ತ್ರಚಿಕಿತ್ಸೆಗೂ ಕೂಡ ದಿನಾಂಕ ನಿಗದಿಯಾಯಿತು. ನೋವು ಕಡಿಮೆ ಮಾಡಲು ಮಾತ್ರೆಯನ್ನು ಕೊಟ್ಟು ಕಳುಹಿಸಿದರು. ಹೀಗೆ ರಜೆಗೆಂದು ಹೋದ ಲೇಖಕಿಯವರು ಪತಿಗೆ ಕಾಣಿಸಿಕೊಂಡ ನೋವಿನಿಂದ ತೊಂದರೆ ಅನುಭವಿಸುವಂತಾಯಿತು.

2. ಕಮಲಾ ಮೇಡಂಗೆ ಮೂತ್ರಪಿಂಡದಲ್ಲಿ ಕಲ್ಲು ಮೂಡಿದ್ದೇಕೆ?

ಕಿಡ್ನಿಸ್ಟೋನ್ ಯಾಕಾಗುತ್ತೆ ಎಂದು ತಿಳಿಯಲು ಹೊರಟ ಲೇಖಕಿಯವರು ಈ ಕುರಿತಂತೆ ಅಕ್ಕಪಕ್ಕದಲ್ಲಿ ವಿಚಾರಿಸಿದರು. ಎದುರು ಮನೆಯ ಕಮಲ ಮೇಡಂ ಕಿಡ್ನಿಸ್ಟೋನ್ ಆಗಿತ್ತು ಎಂದು ತಿಳಿದು ಅವರ ಮನೆಗೆ ಹೋದರು. ಸಾಮಾನ್ಯವಾಗಿ ಗಂಡಸರಲ್ಲಿ ಮೂತ್ರಪಿಂಡದ ಕಲ್ಲುಗಳು ಹೆಚ್ಚು ಕಾಣಿಸಿಕೊಳ್ಳುವುದನ್ನು ನೋಡಿದ್ದೆ, ನಿಮಗೆ ಹೇಗೆ ಬಂತು ಮೇಡಂ? ಎಂದು ಕೇಳಿದರು. ಆಗ ಲೇಖಕಿಗೆ ಕೆಲವು ವಿಚಾರಗಳು ಮನವರಿಕೆಯಾದವು. ಕಮಲಮ್ಮ ಮೇಡಂ ರವರ ಶಾಲೆಯಲ್ಲಿ ಮಹಿಳೆಯರಿಗೆ ಶೌಚಾಲಯವಿರಲಿಲ್ಲ, ಹಾಗಾಗಿ ಬೆಳಿಗ್ಗೆ ಮನೆಯಿಂದ ಹೊರಟರೆ ಮತ್ತೆ ಸಂಜೆ ಹಿಂದಿರುಗಿ ಬರುವವರೆಗೂ ಜಲಬಾಧೆಯನ್ನು ತಡೆದುಕೊಳ್ಳದೆ ಬೇರೆ ದಾರಿ ಇರಲಿಲ್ಲ. ನೀರು ಕುಡಿದರೆ ಶೌಚಾಲಕ್ಕೆ ಹೋಗಬೇಕಾಗುತ್ತದೆ ಎಂದು ಈ ಮಹಿಳೆ ದಿನವೆಲ್ಲ ನೀರು ಕುಡಿಯುವುದನ್ನೇ ಬಿಟ್ಟಿದ್ದರು. ಒಂದು ದಿನ ಹೆರಿಗೆ ನೋವನ್ನು ಮೀರಿಸಿದ ನೋವಿನಿಂದ ಬೊಬ್ಬೆಯಿಟ್ಟು ವದ್ಯರಲ್ಲಿ ಪರಿಶೀಲಿಸಿದಾಗ ಮೂತ್ರಪಿಂಡಗಳಲ್ಲಿ ಕಲ್ಲಿರುವುದು ತಿಳಿದು ಬಂತು. ನೀರು ಕಡಿಮೆ ಕುಡಿದ ಕಾರಣಕ್ಕಾಗಿಯೇ ಕಮಲ ಮೇಡಂಗೆ ಮೂತ್ರಪಿಂಡದಲ್ಲಿ ಕಲ್ಲು ಕಾಣಿಸಿತ್ತು.

3. ಲೇಖಕಿಯ ಪತಿಯ ಮೂತ್ರಪಿಂಡದ ಕಲ್ಲು ಕರಗಿಹೋಗಿದ್ದು ಹೇಗೆ?

ಲೇಖಕಿಯು ಕಮಲಮ್ಮ ಮೇಡಂ ಮತ್ತು ಮುದ್ದೇಗೌಡರನ್ನು ಭೇಟಿ ಮಾಡಿ ಇಬ್ಬರಲ್ಲೂ ಕಾಣಿಸಿಕೊಂಡ ಕಿಡ್ನಿಸ್ಟೋನ್ ಮತ್ತು ಇಬ್ಬರೂ ಕಂಡುಕೊಂಡ ಪರಿಹಾರ ಮಾರ್ಗವನ್ನು ತಿಳಿದುಕೊಂಡು ಮರಳಿ ಮನೆಗೆ

ಬಂದರು. ಬಂದು ತನ್ನ ಪತಿ ಕೀರ್ತಿಗೆ ಹೀಗೆ ಹೇಳಿದರು, ನೋಡು ನಿನ್ನ ಎದುರು ಎರಡು ಆಯ್ಕೆಗಳಿವೆ. ಏನೂ ಮಾಡದೆ ಮುದ್ದೇಗೌಡರ ತರಹ ಎರಡೆರಡು ವರ್ಷಕ್ಕೆ ಆಪರೇಷನ್ ಮಾಡಿಸಿಕೊಳ್ಳೋದು. ಇಲ್ಲ, ಕಮಲಮ್ಮ ಮೇಡಂ ತರಹ ಇನ್ನು ಮೇಲೆ ಚೆನ್ನಾಗಿ ನೀರು ಕುಡಿಯೋದು. ನೀರು, ಎಳನೀರು, ಬಾರ್ಲಿ ವಾಟರ್ ಜಾಸ್ತಿ ಸೇವಿಸುವಂತೆ ಹೇಳುತ್ತಾ, ಮೊಳದುದ್ದ ಪಂಜಾಬಿ ಲೋಟದಲ್ಲಿ ಹಾಲನ್ನು ಕುಡಿಯುವುದನ್ನು ಕಡಿಮೆ ಮಾಡುವಂತೆ ಹೇಳಿದಳು. ಆರಂಭದಲ್ಲಿ ಲೇಖಕಿಯ ಸಲಹೆಗಳನ್ನು ಆಕೆಯ ಪತಿ ನಿರಾಕರಿಸಿದರೂ ನಿಧಾನವಾಗಿ ನೀರಿನ ಅಂಶದ ವಸ್ತುಗಳನ್ನು ದಿನದಿಂದ ದಿನಕ್ಕೆ ಹೆಚ್ಚು ಸೇವಿಸುತ್ತಾ ಬಂದರು. ಎರಡು ದಿನ ನೀರು ಕುಡಿದೂ ಕುಡಿದೂ ನೀರಿನಲ್ಲಿ ಕೀರ್ತಿ ತೇಲಿ ಮುಳುಗಿದ್ದರು. ಅಂತು ಆಪರೇಷನ್ ದಿನ ಬಂತು. ಮತ್ತೊಮ್ಮೆ ಕಲ್ಲು ಇರುವ ಜಾಗವೇನಾದರೂ ಸರಿದಿದೆಯೇ ಎಂದು ಸೋನೋಗ್ರಫಿ ಕೋಣೆಗೆ ಕರೆದೊಯ್ದಾಗ ಅಲ್ಲಿ ಕಲ್ಲಿನ ಪತ್ತೆಯೇ ಇರಲಿಲ್ಲ. ಕಲ್ಲು ಕೀರ್ತಿ ಕುಡಿದ ನೀರಿಗೆ ಎಲ್ಲೋ ಜಾರಿ ಹೋಗಿತ್ತು.

4. ಸೀತಾ ಎಂಬ ಗೆಳತಿಯ ಗುಣ–ಸ್ವಭಾವವನ್ನು ಲೇಖಕಿ ಹೇಗೆ ಚಿತ್ರಿಸಿದ್ದಾರೆ?

ಲೇಖಕಿಗೆ ಅದೃಷ್ಟ–ಆಯ್ಕೆ ಪ್ರಶ್ನೆ ಬಂದಾಗ ತನ್ನ ಹೈಸ್ಕೂಲು ಗೆಳತಿ ಸೀತಾ ನೆನೆಪಿಗೆ ಬರುತ್ತಾಳೆ. ಇಬ್ಬರ ತಂದೆ ಕೂಡ ಕಾಲೇಜು ಪ್ರಾಧ್ಯಾಪಕರಾಗಿದ್ದರು. ಎರಡು ಮನೆಯವರ ನಡುವೆ ಒಳ್ಳೆ ಸ್ನೇಹವೂ ಇತ್ತು. ಇಬ್ಬರ ಮನೆಯಲ್ಲೂ ಗಂಡು–ಹೆಣ್ಣು ಭೇದವಿಲ್ಲದೆ ಎಷ್ಟು ಬೇಕಾದರೂ ಓದಿಸಲು ಅಪ್ಪಂದಿರು ಸಿದ್ಧರಿದ್ದರು.

ಆದರೆ ಸೀತಾ ಮಾತ್ರ ಓದಿನಲ್ಲಿ ಆಸಕ್ತಿ ಹೊಂದಿರಲಿಲ್ಲ. ಎಸ್.ಎಸ್.ಎಲ್.ಸಿ ಯಲ್ಲಿ ಎಲ್ಲ ವಿಷಯದಲ್ಲೂ ಫೇಲ್ ಆದಳು. ಮತ್ತೆ ಕಟ್ಟಿ ಪಾಸ್ ಮಾಡಿಕೊಳ್ಳುವ ತಾಪತ್ರಯಕ್ಕೇ ಹೋಗಲಿಲ್ಲ. ಸದಾ ಯಾರಾದರೂ ಗೆಳತಿಯನ್ನು ಜೊತೆ ಮಾಡಿಕೊಂಡು ಮಾರ್ಕೆಟ್, ಸಿನೆಮಾ ಎಂದು ಸುತ್ತುತ್ತಿದ್ದಳು. ಆದರೆ ಓದಿನಲ್ಲಿ ನಿರ್ದಿಷ್ಟ ಗುರಿಯನ್ನು ಹೊಂದಿದ್ದ ಲೇಖಕಿ

ಇಂಜಿನಿಯರ್ ಆದರು. ಓದಿನಲ್ಲಿ ಹಿಂದೆ ಉಳಿದಿದ್ದ ಸೀತಾ ಮಾತ್ರ ಸಾಮಾನ್ಯವಾದ ಹುಡುಗನನ್ನು ಮದುವೆಯಾಗ ಬೇಕಾಯಿತು.

ಆದರೆ ಸೀತಾಳಿಗೆ ಗಂಡನ ಮನೆಗೆ ಹೊಂದಿಕೊಳ್ಳುವುದು ಬಹಳ ಕಷ್ಟವಾಯಿತು. ಸಣ್ಣ ಮನೆ, ಅದಿಲ್ಲ ಇದಿಲ್ಲ. ನಮ್ಮ ಮನೆ ಮೈಸೂರಿನಲ್ಲಿ ಹೇಗಿತ್ತು ಎಂದು ಆಲೋಚಿಸುತ್ತಿದ್ದಳು. ಅಲ್ಲದೆ ತನ್ನ ಸಮಸ್ಯೆಯನ್ನು ಆಗಾಗ ಲೇಖಕಿಯ ಬಳಿಗೆ ಹೋಗಿ ಹೇಳಿಕೊಳ್ಳುತ್ತಿದ್ದಳು. ಆದರೆ ಲೇಖಕಿಯು ಹೇಳಿದ ಯಾವ ದಾರಿಗಳು ಸೀತಾಳಿಗೆ ಬಲು ಪ್ರಯಾಸದ್ದಾಗಿ ಕಾಣುತ್ತಿತ್ತು. ತಟ್ಟನೆ ಎಲ್ಲ ಸರಿಹೋಗಿ ಬಿಡಬೇಕು ಎಂದು ಬಯಸುತ್ತಿದ್ದಳು. ಅಲ್ಲದೆ ಕೈತುಂಬ ಸಂಪಾದಿಸಿ ತಂದು ಹಾಕಿ ಹೆಂಡ್ತಿನಾ ಚೆನ್ನಾಗಿ ಇಟ್ಟುಕೊಳ್ಳುವುದು ಗಂಡನ ಜವಾಬ್ದಾರಿ ಎಂದು ಬಲವಾಗಿ ನಂಬಿದ್ದ ಸೀತಾ ತನ್ನ ಕಿರುಬೆರುಳನ್ನು ಎತ್ತಲೂ ಸಿದ್ದವಿರಲಿಲ್ಲ. ಇರುವುದು ಆಕೆಗೆ ಸಾಲುತ್ತಿರಲಿಲ್ಲ. ಬೇಕು ಅಂದದ್ದನ್ನು ದುಡಿದು ಗಳಿಸಲು ಸಿದ್ದವಿರಲಿಲ್ಲ. ಸೀತಾಳಿಗೆ ಬದುಕೆಲ್ಲ ಅದೃಷ್ಟದ ಆಟದಂತೆ ಕಾಣುತಿತ್ತು. ಕೊನೆಯಲ್ಲಿ ಅವಳ ಬದುಕು ದುರಂತದಲ್ಲಿ ಅಂತ್ಯವಾಯಿತು.

5. ಬದುಕಿನಲ್ಲಿ ಅಯ್ಕೆಗಳು ಮುಖ್ಯ ಎಂಬುದನ್ನು ಲೇಖಕಿ ಹೇಗೆ ನಿರೂಪಿಸಿದ್ದಾರೆ?

ಲೇಖಕಿ ನೇಮಿಚಂದ್ರರ ಪ್ರಕಾರ ಬದುಕಿನಲ್ಲಿ ಸುಖ ಕಷ್ಟಗಳು ಸಾಮಾನ್ಯ. ಸೋಲು ಅಥವಾ ಕಷ್ಟ ಬಂದಾಗ ನನ್ನ ದುರದೃಷ್ಟ ಎಂದು ಸುಮ್ಮನೆ ಕೂರದೆ ಪ್ರಯತ್ನ ಮಾಡಿದರೆ ನಾವು ಕಳೆದು ಕಳೆದುಕೊಂಡ ಸಂತೋಷವನ್ನು ಮರಳಿ ಪಡೆಯಬಹುದು ಎಂಬುದು ಅವರ ಅಭಿಪ್ರಾಯ. ಆದರೆ ಏನು ಮಾಡಬೇಕು ಎನ್ನುವ ಆಯ್ಕೆ ಮುಖ್ಯ ಎನ್ನುತ್ತಾರೆ. ಅದಕ್ಕಾಗಿಯೇ ಅವರು ಕಮಲ ಮೇಡಂ, ಮುದ್ದೇಗೌಡರು, ಸೀತಾ, ಫ್ಲೇವಿಯಾ, ನಿಶಾ ಶರ್ಮರ ದೃಷ್ಟಾಂತಗಳನ್ನು ಕೊಡುತ್ತಾರೆ.

ಕಿಡ್ನಿಸ್ಟೋನ್ ಆದ ಕಮಲ ಮೇಡಂ ವೈದ್ಯರ ಸಲಹೆಯನ್ನು ಪಾಲಿಸಿ ಹೆಚ್ಚು ನೀರು ಸೇವಿಸಿದ್ದರಿಂದ ತನ್ನ ಸಮಸ್ಯೆಯಿಂದ ಪಾರಾದರು. ಆದರೆ ಮುದ್ದೇಗೌಡರು ಅದೇ ಸಮಸ್ಯೆಗೆ ನಾಲ್ಕು ಬಾರಿ ಆಪರೇಷನ್

ಮಾಡಿಕೊಂಡರು. ಆದರೆ ಲೇಖಕಿಯ ಗೆಳತಿ ಸೀತಾ ಸರಿಯಾದ ಆಯ್ಕೆ ಮಾಡದೇ ಜೀವನದುದ್ದಕ್ಕೂ ಕಷ್ಟವನ್ನು ಅನುಭವಿಸುತ್ತಾ ದುರಂತಮಯವಾದ ಬದುಕಿಗೆ ಸಾಕ್ಷಿಯಾದರು. ಆದರೆ ನಿಶಾ ಶರ್ಮ, ಫ್ಲೇವಿಯಾ ಮಾತ್ರ ಕಷ್ಟದ ಸಂದರ್ಭದಲ್ಲಿಯೂ ಸರಿಯಾದ ಆಯ್ಕೆಯನ್ನು ಮಾಡಿದರು. ನಿಶಾ ಶರ್ಮ ದುರಾಸೆಯ ಗಂಡನನ್ನು ಹಸೆ ಮಣೆಯೇರುವ ಸಂದರ್ಭದಲ್ಲಿ ನಿರಾಕರಿಸದರು. ತನ್ನ ಬಡಿಯುವ ಗಂಡನನ್ನು ಯಾವುದೇ ಸುದೃಢ ಹಿನ್ನಲೆಯಿರದ ಫ್ಲೇವಿಯಾ ನಿರಾಕರಿಸಿ ತನ್ನ ನಲವತ್ತರ ವಯಸ್ಸಿನಲ್ಲಿಯೂ ಕಾನೂನು ವಿಷಯ ಆಯ್ಕೆ ಮಾಡಿಕೊಂಡು ಓದಿ, ತನ್ನ ಮಕ್ಕಳನ್ನೂ ಸಾಕಿಕೊಂಡು, ಮುಂಬಯಿಯ ಪಸಿದ್ಧ ನ್ಯಾಯವಾದಿಯಾದರು.

ಹೀಗೆ ಲೇಖಕಿ ಇವರೆಲ್ಲರ ವಿಚಾರಗಳನ್ನು ಮುಂದಿಟ್ಟುಕೊಂಡು ಆಯ್ಕೆ ಮುಖ್ಯ ಎಂಬುದನ್ನು ನಿರೂಪಿಸಿದ್ದಾರೆ.

===0===

# ಕನ್ನಡವನ್ನು ಕಟ್ಟುವ ಕೆಲಸ

**ಹಾ. ಮಾ. ನಾಯಕ**

**ಸಂದರ್ಭ ಸಹಿತ ವಿವರಿಸಿ:**

1. ಒಂದು ಅಂಗೈ ಅಗಲ ಬಿಟ್ಟರೆ ಮತ್ತೆಲ್ಲಿಯೂ ನೋಡಲಾರಿರಿ.

ಆಯ್ಕೆ: ಈ ಮೇಲಿನ ವಾಕ್ಯವನ್ನು ಡಾ॥ ಹಾ.ಮಾ ನಾ0ಯಕರವರು ಬರೆದ ಕನ್ನಡವನ್ನು ಕಟ್ಟುವ ಕೆಲಸಎನ್ನುವ ಪಾಠದಿಂದ ಆರಿಸಲಾಗಿದೆ.

ಸಂದರ್ಭ: ಎ.ಆರ್ ಕೃಷ್ಣಶಾಸ್ತ್ರಿಗಳ ಹೈದರಾಬಾದ್ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದ ಕುರಿತಾಗಿ ಹಾ.ಮಾ. ನಾಯಕರು ಉಲ್ಲೇಖಿಸುವ ಸಂದರ್ಭವಿದು.

ವಿವರಣೆ: ಎ.ಆರ್ ಕೃಷ್ಣಶಾಸ್ತ್ರಿಗಳು ಹೈದರಾಬಾದ್ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೀಯ ಭಾಷಣ ಮಾಡುವಾಗ ನಮ್ಮ ಬೌದ್ಧಧರ್ಮ ಖಿಲವಾಗಿ ಹೋದಂತೆ ಸಂಸ್ಕೃತವೂ ಆಗಿಹೋಗುವುದಾದರೆ ಅದು ಹೊರದೇಶದಲ್ಲಿ ಬದುಕಿರುತ್ತದೆ. ಆದರೆ ಕನ್ನಡವನ್ನು ಇಂಡಿಯ ದೇಶದ ದಕ್ಷಿಣ ಭಾಗದಲ್ಲಿ ಒಂದು ಅಂಗೈ ಅಗಲ ಬಿಟ್ಟರೆ ಮತ್ತೆಲ್ಲಿಯೂ ನೋಡಲಾರಿರಿ. ಹಾಗಾಗಿ ನಾವು ಅಲಕ್ಷ್ಯ ಮಾಡಿದರೆ ಮಿಕ್ಕ ಯಾವ ದೇಶವೂ ಅದನ್ನು ಎತ್ತಿಕೊಳ್ಳಲಾರರು. ಕನ್ನಡಿಗರ ಜವಾಬ್ದಾರಿಯ ಕುರಿತಾಗಿ ಹೇಳುವಾಗ ಈ ಮಾತುಬಂದಿದೆ.

2. ಇಂಗ್ಲಿಷ್ ಹಿಂದಿ ಬಾರದವರು ವಿಮಾನ ಪ್ರಯಾಣ ಮಾಡಬಾರದೇ?

ಆಯ್ಕೆ: ಈ ಮೇಲಿನ ವಾಕ್ಯವನ್ನು ಡಾ॥ ಹಾ.ಮಾ ನಾಯಕರವರು ಬರೆದ ಕನ್ನಡವನ್ನು ಕಟ್ಟುವ ಕೆಲಸಎನ್ನುವ ಪಾಠದಿಂದ ಆರಿಸಲಾಗಿದೆ.

ಸಂದರ್ಭ: ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಕನ್ನಡ ಸೂಚನೆಗಳು ಇಲ್ಲ. ಕೇಂದ್ರ ಸರ್ಕಾರ ಕನ್ನಡಕ್ಕೆಯಾವ ಸ್ಥಾನವನ್ನು ನೀಡಿದೆ ಎನ್ನುವ ಕುರಿತು ಮಾತನಾಡುವಾಗ ಈ ಮಾತು ಬಂದಿದೆ.

ವಿವರಣೆ: ಲೇಖಕರ ಮಿತ್ರರೊಬ್ಬರು ಬೆಂಗಳೂರಿನ ವಿಮಾನ ನಿಲ್ದಾಣದಲ್ಲಿ "ಇದೇನು ಸಾರ್. ನಾವು ಎಲ್ಲಿದ್ದೇವೆ? ಇಲ್ಲಿ ಒಂದೂ ಕನ್ನಡ ಅಕ್ಷರವೇ ಕಾಣಿಸುವುದಿಲ್ಲವಲ್ಲ!" ಎಂದರು. ಅದಕ್ಕೆ ಲೇಖಕರು "ಕಾಣಿಸದೇ ಏನು? ಅಲ್ಲಿ ನೋಡಿ ಕಕ್ಕಸಿನ ಮೇಲೆ ಕನ್ನಡದಲ್ಲಿ ಗಂಡಸರು ಹೆಂಗಸರು ಎಂದು ಬರೆದಿದ್ದಾರಲ್ಲ!. ಇದು ಕೇಂದ್ರ ಸರ್ಕಾರ ಕನ್ನಡಕ್ಕೆ ತೋರಿಸುವ ಮರ್ಯಾದೆ. ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಕನ್ನಡದಲ್ಲಿ ಸೂಚನೆಗಳಿಲ್ಲದಿದ್ದರೆ, ಇನ್ನು ಯಾವ ಕಡೆ ಇರುವುದು ಸಾಧ್ಯ. ವಿಮಾನ ನಿಲ್ದಾಣದ ಎಲ್ಲ ಪ್ರಕಟಣೆಗಳು ಪ್ರಾದೇಶಿಕ ಭಾಷೆಯಲ್ಲಿರುವುದು ಅಗತ್ಯ

ಎನ್ನುತ್ತಾ ಕನ್ನಡದ ಮೇಲಿನ ಕಾಳಜಿಯಿಂದ ಲೇಖಕರು ಈ ಮಾತನ್ನು ಹೇಳುತ್ತಾರೆ.

3. ನಾವು ಪರದೇಶಿಗಳೆಂಬ ಭಾವನೆ ಬರುತ್ತದೆ.

ಆಯ್ಕೆ: ಈ ಮೇಲಿನ ವಾಕ್ಯವನ್ನು ಡಾ॥ ಹಾ.ಮಾ ನಾ0ಯಕರವರು ಬರೆದ ಕನ್ನಡವನ್ನು ಕಟ್ಟುವ ಕೆಲಸ ಎನ್ನುವ ಪಾಠದಿಂದ ಆರಿಸಲಾಗಿದೆ.

ಸಂದರ್ಭ: ಲೇಖಕರು, ಕೇಂದ್ರ ಸರ್ಕಾರವು ಕನ್ನಡದ ಬಗ್ಗೆ ತೋರಿರುವ ಧೋರಣೆಯನ್ನು ವಿವರಿಸುತ್ತಾ ಈ ಮಾತನ್ನು ಹೇಳಿದ್ದಾರೆ.

ವಿವರಣೆ: ರೈಲ್ವೇ, ಅಂಚೆ ಮತ್ತು ತಂತಿ ಇಲಾಖೆಗಳೂ ಪ್ರಾದೇಶಿಕ ಭಾಷೆಗಳ ಮೇಲೆ ಸಾಕಷ್ಟು ಮಲತಾಯಿ ಧೋರಣೆ ಬೆಳೆಸಿಕೊಂಡಿವೆ. ಕನ್ನಡ ನಾಡಿನ ಸಣ್ಣಪುಟ್ಟ ಊರುಗಳಲ್ಲಿರುವ ರೈಲ್ವೇ ಸ್ಟೇಷನ್ನುಗಳಲ್ಲಿಯೂ ಹಿಂದಿ ಇಂಗ್ಲೀಷ್ ಗಳೇ ರಾರಾಜಿಸಿದರೆ ನಾವು ನಮ್ಮ ದೇಶದಲ್ಲಿದ್ದೇವೆಂಬ ಭಾವನೆ ಯಾರಲ್ಲಾದರೂ ಬರುವುದು ಸಾಧ್ಯವೇ. ಲೈಫ್ ಇನ್ಶ್ಯೂರೆನ್ಸ್ ಕಾರ್ಪೊರೇಷನ್ನಿನ್ನಂಥ ಸಂಸ್ಥೆಗಳು, ಬ್ಯಾಂಕುಗಳು ಹೀಗೆ ಕೇಂದ್ರಾಡಳಿತದ ಯಾವ ಸಂಸ್ಥೆಗಳಿಗೆ ಹೋದರೂ ನಾವು ಪರದೇಶಿಗಳೆಂಬ ಭಾವನೆ ಬರುತ್ತದೆ ಎಂದು ಲೇಖಕರು ತಮ್ಮ ಅನುಭವವನ್ನು ಈ ಮಾತಿನ ಮೂಲಕ ಹೇಳಿದ್ದಾರೆ.

4. ನಮ್ಮ ಭಾಷೆಯಲ್ಲಿ ಓದಿದ್ದೆ ಮೈಗೆ ಹತ್ತುವುದು.

ಆಯ್ಕೆ : ಈ ಮೇಲಿನ ವಾಕ್ಯವನ್ನು ಡಾ॥ ಹಾ.ಮಾ ನಾಯಕರವರು ಬರೆದ ಕನ್ನಡವನ್ನು ಕಟ್ಟುವ ಕೆಲಸ ಎನ್ನುವ ಪಾಠದಿಂದ ಆರಿಸಲಾಗಿದೆ.

ಸಂದರ್ಭ: ಕಲಿಕೆ ಯಾವ ಭಾಷೆಯಲ್ಲಿರಬೇಕೆಂದು ಹೇಳುವಾಗ ಈ ಮಾತು ಬಂದಿದೆ.

ವಿವರಣೆ : ಇಂಗ್ಲಿಷನ್ನು ಭಾಷೆಯನ್ನಾಗಿ ಕಲಿಸಿ, ವಿಷಯಗಳನ್ನು ನಮ್ಮ ನಮ್ಮ ಭಾಷೆಗಳಲಲಿಯೇ ಕಲಿಸಬೇಕು. ಮಾಧ್ಯಮದ ಪ್ರಶ್ನೆ ಬಂದಾಗ ನಮ್ಮಲ್ಲಿ ಬಗೆಹರಿಯಲಾರದ ಸಮಸ್ಯೆಯಾಗಿದೆ. ಶಿಕ್ಷಣ ತಜ್ಞರೆನ್ನಿಸಿಕೊಂಡವರಿಗೂ ಅನೇಕ ಸಲ ಭಾಷೆಯನ್ನು ಕಲಿಸುವುದು,

ಭಾಷೆಯ ಮೂಲಕ ಕಲಿಸುವುದು ಇವುಗಳ ನಡುವಿನ ಅಂತರ ತಿಳಿದಿರುವುದಿಲ್ಲ. ಕನ್ನಡ ಮಾಧ್ಯಮವಾಗಬೇಕು ಎಂದರೆ ಇಂಗ್ಲೀಷನ್ನು ಕಲಿಸಬಾರದು ಎಂದಲ್ಲ. ಆಧುನಿಕ ವಿಜ್ಞಾನವನ್ನು ಕಲಿ0ಯುವುದು ಕಲಿಸುವುದು ನಮ್ಮ ಭಾಷೆಗಳ ಮೂಲಕ ಸಾಧ್ಯವಾಗುವುದಿಲ್ಲ ಎನ್ನುವುದು ಮೂಢನಂಬಿಕೆ.

ಡಾ॥ ಸಿ.ಎನ್.ಆರ್.ರಾವ್ ಅವರ ಉದಾಹರಣೆಯನ್ನು ನೀಡಿ ಕನ್ನಡದಲ್ಲಿ ಕಲಿತು ಶ್ರೇಷ್ಠ ವಿಜ್ಞಾನಿಯಾಗಬಹುದೆಂದು ತಿಳಿಸಿದ್ದಾರೆ. ಜನರಿಗೆ ಇಂಗ್ಲಿಷಿನ ಮೇಲೆ ಮೋಹ ಬೆಳೆಯಲು ಪ್ರತಿಷ್ಠೆಯೇ ಕಾರಣ ಎನ್ನುವಾಗ ನಮ್ಮ ಭಾಷೆಯಲ್ಲಿ ಓದಿದ್ದೆ ಮೈಗೆ ಹತ್ತುವುದು ಎಂದಿದ್ದಾರೆ.

5. ಒಂದೊಂದು ಭಾಷೆಯೂ ಒಂದೊಂದು ವರ.

ಆಯ್ಕೆ: ಈ ಮೇಲಿನ ವಾಕ್ಯವನ್ನು ಡಾ॥ ಹಾ.ಮಾ ನಾಯಕರವರು ಬರೆದ ಕನ್ನಡವನ್ನು ಕಟ್ಟುವ ಕೆಲಸ ಎನ್ನುವ ಪಾಠದಿಂದ ಆರಿಸಲಾಗಿದೆ.

ಸಂದರ್ಭ: ಲೇಖಕರು ಕನ್ನಡ ಭಾಷೆಯ ಮಹತ್ವವನ್ನು ತಿಳಿಸುತ್ತಾ ಈ ಮಾತನ್ನು ಹೇಳಿದ್ದಾರೆ.

ವಿವರಣೆ: ಕನ್ನಡ ಭಾಷೆಯ ಮಹತ್ವವನ್ನು ತಿಳಿಸುತ್ತಾ ಪೋಷಕರು ಸರ್ಕಾರಿ ಶಾಲೆಗಳ ಕಡೆ ಹೋಗದೇ ಅನಿವಾರ್ಯವಾಗಿ ಖಾಸಗಿ ಉದ್ಯಮವಾದ ಇಂಗ್ಲಿಷ್ ಶಾಲೆಗಳ ಕಡೆಗೆ ಹೋಗುತ್ತಾರೆ. ಎಲ್ಲಿಯವರೆಗೆ ನಮ್ಮ ಸರ್ಕಾರಿ ಶಾಲೆಗಳ ಸ್ಥಿತಿಗತಿಗಳು ಉತ್ತಮವಾಗುವುದಿಲ್ಲವೋ ಅಲ್ಲಿಯವರೆಗೂ ಶಿಕ್ಷಣದಲ್ಲಿ ಕನ್ನಡ ಆಕರ್ಷಕವೆನಿಸುವುದಿಲ್ಲ. ಇಂಗ್ಲಿಷ್ ನಮಗೆ ಬೇಕು. ಆದರೆ ಕನ್ನಡದ ಬದಲಿಗೆ ಅಲ್ಲ. ಇಂಗ್ಲಿಷ್ ಒಂದೇ ಅಲ್ಲ.ಇನ್ನೂ ಹಲವು ಭಾಷೆಗಳು ಬೇಕು. ಎನ್ನುವ ಸಂದರ್ಭದಲ್ಲಿ ಡಾ॥ ಹಾ.ಮಾ ನಾಯಕರು ಈ ಮೇಲಿನಂತೆ ಹೇಳಿದ್ದಾರೆ.

6. ನಾವು ಯಾವ ಪತ್ರಿಕೆಗಳನ್ನು ಓದುತ್ತಿದ್ದೇವೆ.

ಆಯ್ಕೆ: ಈ ಮೇಲಿನ ವಾಕ್ಯವನ್ನು ಡಾ॥ ಹಾ.ಮಾ ನಾಯಕರವರು ಬರೆದ ಕನ್ನಡವನ್ನು ಕಟ್ಟುವ ಕೆಲಸ ಎನ್ನುವ ಪಾಠದಿಂದ ಆರಿಸಲಾಗಿದೆ.

ಸಂದರ್ಭ: ಲೇಖಕರು ನಾವು ಕನ್ನಡಿಗರೆನ್ನಿಸಿಕೊಳ್ಳಲು ಎಷ್ಟು ಅರ್ಹರು ಎನ್ನುವ ಸಂದರ್ಭವಿದು.

ವಿವರಣೆ: ನಾವು ಕನ್ನಡವನ್ನು ಎಷ್ಟು ಅನುಸರಿಸುತ್ತಿದ್ದೇವೆ. ಕನ್ನಡ ಹೇಳುವುದಕ್ಕೆ ಮಾತ್ರವಲ್ಲ. ಅನುಸರಿಸುವುದಕ್ಕೂ ಕೂಡ. ನಮ್ಮ ಮಕ್ಕಳನ್ನು ಯಾವ ಶಾಲೆಗಳಲ್ಲಿ ಓದಿಸುತ್ತಿದ್ದೇವೆ? ನಾವು ಯಾವ ಪತ್ರಿಕೆಯನ್ನು ಓದುತ್ತಿದ್ದೇವೆ? ನಾವು ನೋಡುವುದು ಯಾವ ಸಿನಿಮಾಗಳನ್ನು? ನಮ್ಮ ಮನೆಯ ಬೋರ್ಡು ಯಾವ ಭಾಷೆಯಲ್ಲಿದೆ? ಲಗ್ನ ಪತ್ರಿಕೆ, ಲೆಟರ್‌ಹೆಡ್

ಅಚ್ಚಾಗಿರುವುದು ಯಾವ ಭಾಷೆಯಲ್ಲಿ? ಇಂಥಹ ನೂರು ಪ್ರಶ್ನೆಗಳನ್ನು ನಾವು ಕೇಳಿಕೊಳ್ಳಬೇಕು? ಅವುಗಳ ಉತ್ತರ ನಮ್ಮನ್ನು ಚುಚ್ಚದಿದ್ದರೆ ಮಾತ್ರ ನಾವು ಕನ್ನಡದ ಬಗ್ಗೆ ಮಾತಾಡಲು ಯೋಗ್ಯತೆ ಗಳಿಸಿದ್ದೇವೆ ಎಂದು ಅರ್ಥ. ಎನ್ನುವಾಗ ಈ ಮಾತು ಬಂದಿದೆ.

7. ಕನ್ನಡಿಗರು ಮೊದಲು ಕನ್ನಡಿಗರಾಗಬೇಕು.

ಆಯ್ಕೆ: ಈ ಮೇಲಿನ ವಾಕ್ಯವನ್ನು ಡಾ॥ ಹಾ.ಮಾ ನಾ0ಯಕರವರು ಬರೆದ ಕನ್ನಡವನ್ನು ಕಟ್ಟುವ ಕೆಲಸ ಎನ್ನುವ ಪಾಠದಿಂದ ಆರಿಸಲಾಗಿದೆ.

ಸಂದರ್ಭ: ಪ್ರತಿಯೊಬ್ಬ ಕನ್ನಡಿಗನೂ ಪ್ರತಿ0ಯೊಂದು ಅಂಗುಲದಲ್ಲಿ0ಯೂ ಕನ್ನಡಿಗನಾಗಬೇಕು ಎನ್ನುವ ಸಂದರ್ಭವಿದು.

ವಿವರಣೆ: ನಾವು ಕನ್ನಡವನ್ನು ಎಷ್ಟು ಅನುಸರಿಸುತ್ತಿದ್ದೇವೆ. ಕನ್ನಡ ಹೇಳುವುದಕ್ಕೆ ಮಾತ್ರವಲ್ಲ. ಅನುಸರಿಸುವುದಕ್ಕೂ ಕೂಡ. ನಮ್ಮ ಮಕ್ಕಳನ್ನು ಯಾವ ಶಾಲೆಗಳಲ್ಲಿ ಓದಿಸುತ್ತಿದ್ದೇವೆ? ನಾವು ಯಾವ ಪತ್ರಿಕೆಯನ್ನು ಓದುತ್ತಿದ್ದೇವೆ? ನಾವು ನೋಡುವುದು ಯಾವ ಸಿನಿಮಾಗಳನ್ನು? ನಮ್ಮ ಮನೆಯ ಬೋರ್ಡು ಯಾವ ಭಾಷೆಯಲ್ಲಿದೆ? ಲಗ್ನ ಪತ್ರಿಕೆ, ಲೆಟರ್‌ಹೆಡ್ ಅಚ್ಚಾಗಿರುವುದು ಯಾವ ಭಾಷೆಯಲ್ಲಿ? ಇಂಥಹ ನೂರು ಪ್ರಶ್ನೆಗಳನ್ನು ನಾವು ಕೇಳಿಕೊಳ್ಳಬೇಕು? ಅವುಗಳ ಉತ್ತರ ನಮ್ಮನ್ನು ಚುಚ್ಚದಿದ್ದರೆ ಮಾತ್ರ ನಾವು ಕನ್ನಡದ ಬಗ್ಗೆ ಮಾತಾಡಲು ಯೋಗ್ಯತೆ ಗಳಿಸಿದ್ದೇವೆ ಎಂದು ಅರ್ಥ ಎನ್ನುವಾಗ ಈ ಮಾತು ಬಂದಿದೆ.

**ಒಂದು ವಾಕ್ಯದಲ್ಲಿ ಉತ್ತರಿಸಿ:**

1. ಎ.ಆರ್.ಕೃಷ್ಣಶಾಸ್ತ್ರಿಗಳು ಎಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು?

ಎ.ಆರ್.ಕೃಷ್ಣಶಾಸ್ತ್ರಿಗಳು ಹೈದರಾಬಾದ್‌ನಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

2. ನಮ್ಮ ದೇಶದಲ್ಲಿ ಖಿಲವಾಗಿ ಹೋದ ಧರ್ಮ ಯಾವುದು?

ನಮ್ಮ ದೇಶದಲ್ಲಿ ಖಿಲವಾಗಿ ಹೋದ ಧರ್ಮ ಬೌದ್ಧ ಧರ್ಮ.

3. ಪ್ರಾಂತೀಯ ಭಾಷೆಗಳ ಸ್ಥಾನವನ್ನು ಆಕ್ರಮಿಸುತ್ತಿರುವ ಭಾಷೆಗಳಾವುವು?

ಪ್ರಾಂತೀಯ ಭಾಷೆಗಳ ಸ್ಥಾನವನ್ನು ಆಕ್ರಮಿಸುತ್ತಿರುವ ಭಾಷೆಗಳು ಇಂಗ್ಲೀಷ್ ಮತ್ತು ಹಿಂದಿ.

4. ಯಾವ ಮರ್ಯಾದೆಯನ್ನು ನಾವು ಮೀರಬಾರದು?

ಯಾವ ಯಾವ ಭಾಷೆಗೆ ಯಾವ ಯಾವ ಸ್ಥಾನವಿರಬೇಕೋ ಆ ಮರ್ಯಾದೆಯನ್ನು ನಾವು ಮೀರಬಾರದು.

5. ಸ್ಥಳೀಯ ಭಾಷೆ ಕಲಿಯದ ಅನ್ಯ ಭಾಷಿಕರು ಏನಾಗುತ್ತಾರೆ?

ಸ್ಥಳೀಯ ಭಾಷೆ ಕಲಿಯದ ಅನ್ಯ ಭಾಷಿಕರು ದ್ವೀಪ ಜೀವಿಗಳಾಗಿ ಉಳಿಯುತ್ತಾರೆ.

6. ಯಾವುದು ನಮ್ಮ ಮೈಗೆ ಹತ್ತುವುದು?

ನಮ್ಮ ಭಾಷೆಯಲ್ಲಿ ಓದಿದ್ದೇ ನಮ್ಮ ಮೈಗೆ ಹತ್ತುವುದು.

7. ಕನ್ನಡದ ಮೂಲಕ ಕಲಿತು ಶ್ರೇಷ್ಠ ವಿಜ್ಞಾನಿಯಾದವರು ಯಾರು?

ಕನ್ನಡದ ಮೂಲಕ ಕಲಿತು ಶ್ರೇಷ್ಠ ವಿಜ್ಞಾನಿಯಾದವರು ಡಾ॥ಸಿ.ಎನ್.ಆರ್.ರಾವ್ (ಚಿಂತಾಮಣಿ ನಾಗೇಶ ರಾಮಚಂದ್ರರಾವ್)

8. ತಮ್ಮ ರಾಜ್ಯದಲ್ಲಿ ತಾವೇ ತಬ್ಬಲಿಗಳಾಗುತ್ತಿರುವವರು ಯಾರು?

ತಮ್ಮ ರಾಜ್ಯದಲ್ಲಿ ತಾವೇ ತಬ್ಬಲಿಗಳಾಗುತ್ತಿರುವವರು ಕನ್ನಡಿಗರು.

9. ಬದುಕು ಯಾವುದನ್ನು ಬಿಟ್ಟು ಇರುವುದಿಲ್ಲ?

ಬದುಕು ಭಾಷೆಯನ್ನು ಬಿಟ್ಟು ಇರುವುದಿಲ್ಲ.

10. ಕನ್ನಡದ ಸಮಸ್ಯೆಗಳಿಗೆ ಪರಿಹಾರ ದೊರಕಿಸಲು ನಾವು ಏನು ಮಾಡಬೇಕು?

ಪ್ರತಿಯೊಬ್ಬ ಕನ್ನಡಿಗನೂ ಪ್ರತಿಯೊಂದು ಅಂಗುಲದಲ್ಲಿಯೂ ಕನ್ನಡಿಗನಾಗಬೇಕು. ಆಗ ಮಾತ್ರ ಅನೇಕ ಸಮಸ್ಯೆಗಳಿಗೆ ಪರಿಹಾರ ದೊರಕುತ್ತದೆ.

**ಎರಡು- ಮೂರು ವಾಕ್ಯಗಳಲ್ಲಿ ಉತ್ತರಿಸಿ:**

1. ಲೇಖಕರಲ್ಲಿ ಕನ್ನಡ ಪ್ರೀತಿ ಸ್ಫುರಿಸಿದ್ದು ಹೇಗೆ?

ಲೇಖಕರಲ್ಲಿ ಮಾಸ್ತಿ, ಕುವೆಂಪು, ತೀನಂಶ್ರೀ ಅವರ ಪದ್ಯಗಳನ್ನು ಪಠ್ಯಪುಸ್ತಕಗಳಲ್ಲಿ ಓದಿದಾಗ ಕನ್ನಡದ ಪ್ರೀತಿ ಸ್ಫುರಿಸಿತು.

2. ಎ.ಆರ್.ಕೃಷ್ಣಶಾಸ್ತ್ರಿಗಳ ಭಾಷಣ ಓದಿ ಲೇಖಕರಲ್ಲಿ ಮೂಡಿದ ಭಾವನೆಗಳಾವುವು?

ಎ.ಆರ್.ಕೃಷ್ಣಶಾಸ್ತ್ರಿಗಳ ಭಾಷಣ ಓದಿ ಲೇಖಕರ ಹದಿಹರೆಯದ ಮನಸ್ಸಿನಲ್ಲಾದ ಖೇದವನ್ನು, ಭಯವನ್ನು, ಅಸಹಾಯಕತೆಯನ್ನು, ಕ್ರೋಧವನ್ನು ಈ ಹೊತ್ತು ಅನುಭವಿಸುತ್ತಿದ್ದಾರೆ. ಅಲ್ಲದೆ ಅಂದೇ ಕನ್ನಡದ ಕಾರಣಕ್ಕಾಗಿ ತಮ್ಮನ್ನು ತಾವು ಒಪ್ಪಿಸಿಕೊಂಡಿದ್ದಾಗಿ ಲೇಖಕರು ಹೇಳಿದ್ದಾರೆ.

3. ಕರ್ನಾಟಕದಲ್ಲಿ ಕನ್ನಡಕ್ಕೆ ಯಾವ ಸ್ಥಾನವಿರಬೇಕೆಂದು ಹಾಮಾನಾ ಅಪೇಕ್ಷಿಸಿದ್ದಾರೆ?

ಯಾವ ಯಾವ ಭಾಷೆಗೆ ಯಾವ ಯಾವ ಸ್ಥಾನವಿರಬೇಕೋ ಆ ಮರ್ಯಾದೆಯನ್ನು ನಾವು ಮೀರಬಾರದು. ಕರ್ನಾಟಕದಲ್ಲಿ ಕನ್ನಡವೇ ಪ್ರಥಮ, ಪ್ರಧಾನ, ರಾಜ, ರಾಣಿ, ರಾಜಕುಮಾರ ಎಲ್ಲ. ಮಿಕ್ಕ ಯಾವ ಭಾಷೆಯಾದರೂ ಇಲ್ಲಿ ಸೇವಕರ ಸ್ಥಾನದಲ್ಲಿರಬೇಕು.

4. ಕೇಂದ್ರದ ರೈಲು, ಅಂಚೆ ಇಲಾಖೆಗಳು ಯಾವ ಧೋರಣೆ ಬೆಳೆಸಿಕೊಂಡಿವೆ?

ರೈಲ್ವೇ, ಅಂಚೆ ಮತ್ತು ತಂತಿ ಇಲಾಖೆಗಳೂ ಪ್ರಾದೇಶಿಕ ಭಾಷೆಗಳ ಮೇಲೆ ಸಾಕಷ್ಟು ಮಲತಾಯಿ ಧೋರಣೆ ಬೆಳೆಸಿಕೊಂಡಿದೆ. ಕನ್ನಡ ಊರಿನ ಸಣ್ಣಪುಟ್ಟ ಊರುಗಳಲ್ಲಿರುವ ರೈಲ್ವೇ ಸ್ಟೇಷನ್ನುಗಳಲ್ಲಿಯೂ ಹಿಂದಿ ಇಂಗ್ಲಿಷ್‌ಗಳೇ ರಾರಾಜಿಸುತ್ತಿದೆ.

5. ತ್ರಿಭಾಷಾ ಸೂತ್ರದ ಬಳಕೆ ಹೇಗಿರಬೇಕು?

ಕೇಂದ್ರ ಸರ್ಕಾರದ ಕಚೇರಿಗಳ ಎಲ್ಲಾ ಸೂಚನೆಗಳು, ಎಲ್ಲಾ ಫಾರಂಗಳು, ಎಲ್ಲಾ ಬರವಣಿಗೆಯ ವ್ಯವಹಾರಗಳು ಕ್ರಮವಾಗಿ ಪ್ರಾದೇಶಿಕ ಭಾಷೆ ಹಿಂದಿ ಮತ್ತು ಇಂಗ್ಲೀಷ್‌ಗಳಲ್ಲಿರಬೇಕು. ಇದೇ ತ್ರಿಭಾಷಾ ಸೂತ್ರದ ಬಳಕೆ.

6. ನಮ್ಮ ಸಾರ್ವಜನಿಕರ ಶಾಲೆಗಳ ಬಗ್ಗೆ ಲೇಖಕರ ಅಭಿಪ್ರಾಯವೇನು?

ಕುಸಿದು ಬೀಳುತ್ತಿರುವ ಕಟ್ಟಡಗಳು, ದೊಡ್ಡಿಯಾದ ತರಗತಿಗಳು, ಅಧ್ಯಾಪಕರಿಲ್ಲದ ತರಗತಿಗಳು, ಪಾಠ ಹೇಳದ ಅನರ್ಹ ಅಧ್ಯಾಪಕರು, ದಿನ ಬೆಳಗಾದರೆ ರಜೆ, ಶಿಸ್ತಿಲ್ಲದ ವ್ಯವಸ್ಥೆ, ಮೂತ್ರದ ವಾಸನೆಯ ಪರಿಸರ ಇದು ನಮ್ಮ ಸರ್ಕಾರಿ ಶಾಲೆಗಳ ಸ್ಥಿತಿ. ಎಲ್ಲಿಯವರೆಗೆ ನಮ್ಮ ಸಾರ್ವಜನಿಕ ಶಾಲೆಗಳ ಸ್ಥಿತಿಗತಿಗಳು ಉತ್ತಮವಾಗಿರುವುದಿಲ್ಲವೋ ಅಲ್ಲಿಯವರೆಗೆ ಶಿಕ್ಷಣದಲ್ಲಿ ಕನ್ನಡ ಆಕರ್ಷಕವೆನಿಸುವುದಿಲ್ಲ.

7. ಕನ್ನಡದ ಸಮಸ್ಯೆಗಳು ಎಲ್ಲಿಯವರೆಗೂ ಇದ್ದೇ ಇರುತ್ತದೆ?

ಎಲ್ಲಿಯವರೆಗೂ ಕನ್ನಡ ನಮ್ಮ ಆಡಳಿತ, ಶಿಕ್ಷಣದಲ್ಲಿ ಪ್ರಥಮವೂ ಪ್ರಧಾನವೂ ಆಗಿರುವುದಿಲ್ಲವೋ,ಎಲ್ಲಿಯವರೆಗೆ ಅದು ಜನಜೀವನವನ್ನು ತುಂಬಿಕೊಳ್ಳುವುದಿಲ್ಲವೋ, ಎಲ್ಲಿಯವರೆಗೆ ಕನ್ನಡಿಗರು ಸ್ವಾಭಿಮಾನಿಗಳಾಗುವುದಿಲ್ಲವೋ ಅಲ್ಲಿಯವರೆಗೂ ಕನ್ನಡದ ಸಮಸ್ಯೆಗಳು ಇದ್ದೇ ಇರುತ್ತದೆ.

8. ಕನ್ನಡದ ಬಗ್ಗೆ ಮಾತಾಡಲು ನಾವು ಯೋಗ್ಯತೆ ಗಳಿಸುವುದು ಯಾವಾಗ?

ನಮ್ಮ ಮಕ್ಕಳನ್ನು ಯಾವ ಶಾಲೆಗಳಲ್ಲಿ ಓದಿಸುತ್ತಿದ್ದೇವೆ? ನಾವು ಯಾವ ಪತ್ರಿಕೆಯನ್ನು ಓದುತ್ತಿದ್ದೇವೆ? ನಾವು ನೋಡುವುದು ಯಾವ ಸಿನಿಮಾಗಳನ್ನು? ನಮ್ಮ ಮನೆಯ ಬೋರ್ಡು ಯಾವ ಭಾಷೆಯಲ್ಲಿದೆ? ಲಗ್ನ ಪತ್ರಿಕೆ, ಲೆಟರ್‌ಹೆಡ್ ಅಚ್ಚಾಗಿರುವುದು ಯಾವ ಭಾಷೆಯಲ್ಲಿ? ಇಂಥಹ ನೂರು ಪ್ರಶ್ನೆಗಳನ್ನು ನಾವು ಕೇಳಿಕೊಳ್ಳಬೇಕು? ಅವುಗಳ ಉತ್ತರ ನಮ್ಮನ್ನು ಚುಚ್ಚದಿದ್ದರೆ ಮಾತ್ರ ಕನ್ನಡದ ಬಗ್ಗೆ ಮಾತಾಡಲು ನಾವು ಯೋಗ್ಯತೆ ಗಳಿಸಿದ್ದೇವೆ ಎಂದು ಅರ್ಥ.

9.ಕುಂಡದಲ್ಲಿ ನೆಟ್ಟ ಗಿಡಗಳ ಸ್ಥಿತಿ ಹೇಗಿರುತ್ತದೆ?

ಇಂಗ್ಲೀಷ ಶಿಕ್ಷಣ ಎನ್ನುವುದು ಕುಂಡದಲ್ಲಿ ನೆಟ್ಟ ಗಿಡಗಳಂತೆ.ಬೇರು ನೆಲಕ್ಕಿಳಿಯುವುದಿಲ್ಲ. ಭೂಮಿಯ ಸಾರವನ್ನು ಅವು ಗ್ರಹಿಸುವುದಿಲ್ಲ. ಹಾಕಿದ ಹಿಡಿ ಗೊಬ್ಬರದಲ್ಲೇ ಅದು ಜೀವಮಾನವನ್ನು ಕಳೆಯಬೇಕು.

**ಐದು- ಆರು ವಾಕ್ಯಗಳಲ್ಲಿ ಉತ್ತರಿಸಿ:**

1. ಕೇಂದ್ರ ಸರ್ಕಾರದ ಕಚೇರಿಗಳಲ್ಲಿ ಕನ್ನಡತನವಿಲ್ಲದಿರುವ ಬಗ್ಗೆ ಹಾಮಾನಾ ಹೇಗೆ ಟೀಕಿಸಿದ್ದಾರೆ?

ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಕನ್ನಡದಲ್ಲಿ ಸೂಚನೆಗಳಿಲ್ಲದಿದ್ದರೆ, ಇನ್ನು ಯಾವ ಕಡೆ ಇರುವುದು ಸಾಧ್ಯ? ವಿಮಾನ ನಿಲ್ದಾಣದ ಎಲ್ಲ ಪ್ರಕಟಣೆಗಳೂ ಪ್ರಾದೇಶಿಕ ಭಾಷೆಗಳಲ್ಲಿರುವುದು ಅಗತ್ಯ. ಇಂಗ್ಲಿಷ್ ಹಿಂದಿ ಬಾರದವರು ಈ ದೇಶದಲ್ಲಿ ವಿಮಾನ ಪ್ರಯಾಣ ಮಾಡಬಾರದೆ? ಬೆಂಗಳೂರು, ಮಂಗಳೂರು ಬೆಳಗಾವಿ ವಿಮಾನ ನಿಲ್ದಾಣಗಳಿಂದ ಹೊರಡುವ ಮತ್ತು ಅಲ್ಲಿಗೆ ಬರುವ ವಿಮಾನಗಳೊಳಗಿನ ಪ್ರಕಟಣೆಗಳು ಕನ್ನಡದಲ್ಲಿರಬೇಕು. ಇದೇನು ಬಹು ಖರ್ಚಿನ ಭಾರೀ ದೊಡ್ಡ ಕೆಲಸವಲ್ಲ. ಬಹುಬಾಷೆಗಳ ರಾಷ್ಟ್ರದಲ್ಲಿ ನಾವು ಒಡೆಯದೆ ಬಾಳಬೇಕಾದರೆ ಎಲ್ಲ

ಭಾಷೆಗಳ ಸಮಾನ ಬಳಕೆ, ಎಲ್ಲ ಭಾಷೆಗಳಲ್ಲಿ ಸಮಾನ ಗೌರವ ಅತ್ಯಗತ್ಯ. ಕೇಂದ್ರ ಸರ್ಕಾರದ ಕಚೇರಿ ಯಾವ ರಾಜ್ಯದಲ್ಲಿರುತ್ತದೋ ಆ ರಾಜ್ಯದ ಭಾಷೆಯನ್ನು ಅದು ಅಲ್ಲಿನ ಜನರೊಂದಿಗೆ ಮತ್ತು ಸರ್ಕಾರದೊಂದಿಗೆ ಬಳಸಬೇಕು. ಆ ರಾಜ್ಯದಲ್ಲಿರುವ ಕೇಂದ್ರ ಸರ್ಕಾರದ ನೌಕರರು ಆ ರಾಜ್ಯದ ಭಾಷೆಯನ್ನು ಬಲ್ಲವರಾಗಿರಬೇಕು ಎಂದು ರಾಜಮನ್ನಾರ್ ಸಮಿತಿಯ ವರದಿ ಹೇಳಿದೆ. ಆದುದರಿಂದ ಈ ಭಾಷೆಯ ಸಮಸ್ಯೆ ಕೇಂದ್ರ–ರಾಜ್ಯಗಳ ಸಂಬಂಧದಲ್ಲಿ ಬಹಳ ಮುಖ್ಯ ವಿಷಯವಾಗಿದೆ.

ರೈಲ್ವೇ, ಅಂಚೆ ಮತ್ತು ತಂತಿ ಇಲಾಖೆಗಳೂ ಪ್ರಾದೇಶಿಕ ಭಾಷೆಗಳ ಮೇಲೆ ಸಾಕಷ್ಟು ಮಲತಾಯಿ ಧೋರಣೆ ಬೆಳೆಸಿಕೊಂಡಿವೆ. ಕನ್ನಡ ನಾಡಿನ ಸಣ್ಣಪುಟ್ಟ ಊರುಗಳಲ್ಲಿರುವ ರೈಲ್ವೇ ಸ್ಟೇಷನ್ನುಗಳಲ್ಲಿಯೂ ಹಿಂದಿ ಇಂಗ್ಲಿಷ್‌ಗಳೇ ರಾರಾಜಿಸಿದರೆ ನಾವು ನಮ್ಮ ದೇಶದಲ್ಲಿದ್ದೇವೆಂಬ ಭಾವನೆ ಯಾರಲ್ಲಾದರೂ ಬರುವುದು ಸಾಧ್ಯವೇ? ಲೈಫ್ ಇನ್‌ಶ್ಯೂರೆನ್ಸ್ ಕಾರ್ಪೊರೇಷನ್ನಿನಂಥ ಸಂಸ್ಥೆಗಳು, ಬ್ಯಾಂಕುಗಳು ಹೀಗೆ ಕೇಂದ್ರಾಡಳಿತದ ಯಾವ ಸಂಸ್ಥೆಗಳಿಗೆ ಹೋದರೂ ನಾವು ಪರದೇಶಿಗಳೆಂಬ ಭಾವನೆ ಬರುತ್ತದೆ. ಎಲ್ಲಿಯವರೆಗೆ ಈ ಸಂಸ್ಥೆಗಳಲ್ಲಿ ನಮ್ಮದೇ ಭಾಷೆಗಳ ಬಳಕೆಯಾಗುವುದಿಲ್ಲವೋ ಅಲ್ಲಿಯವರೆಗೂ ಈ ಸಂಸ್ಥೆಗಳು ಜನಜೀವನದಿಂದ ಹೊರಗೇ ಉಳಿಯುತ್ತದೆ.

2. ಹೊರನಾಡಿನಿಂದ ಬಂದು ಕನ್ನಡ ನಾಡಿನಲ್ಲಿ ನೆಲೆಸಿರುವ ಜವಾಬ್ದಾರಿಗಳನ್ನು ಲೇಖಕರು ಹೇಗೆ ವಿವರಿಸಿದ್ದಾರೆ?

ಯಾವ ಭಾಷೆಯ ಹೇರಿಕೆಯೂ ಸರಿಯಲ್ಲ. ಯಾವುದೇ ಭಾಷೆಯ ಕಲಿಕೆಯನ್ನು ತಡೆಯುವುದು ಸರಿಯಲ್ಲ. ಆದರೆ ಅದರಲ್ಲಿ ಔಚಿತ್ಯದ ಒಂದು ಪ್ರಶ್ನೆಯಿದೆ. ಒಂದು ಘಟ್ಟದಿಂದ ಮುಂದಕ್ಕೆ ವಿದ್ಯಾರ್ಥಿಗಳು ತಮಗೆ ಬೇಕಾದ ಭಾಷೆಗಳನ್ನು ಆಯ್ದುಕೊಂಡು ಅಭ್ಯಾಸ ಮಾಡುವ ಅವಕಾಶಗಳಿರಬೇಕು. ಆ ಘಟ್ಟದವರೆಗೆ ಮಾತೃ ಭಾಷೆಯ ಹಾಗೂ ಪ್ರಾದೇಶಿಕ ಭಾಷೆಯ ಕಡ್ಡಾಯ ಶಿಕ್ಷಣಕೊಡುವುದು ಸರ್ಕಾರದ ಕರ್ತವ್ಯವಾಗಿರುತ್ತದೆ.ಒಂದು ರಾಜ್ಯದಲ್ಲಿ ನೆಲೆಸಿದವರು ಅಲ್ಲಿನ ಪ್ರಾದೇಶಿಕ ಭಾಷೆಯನ್ನು ಕಲಿಯದೇ ಹೋಗದಂತೆ ನೋಡಿಕೊಳ್ಳುವ ಜವಾಬ್ದಾರಿ ಸರ್ಕಾರದ್ದು.ಅದು ಅಂಥ ಶಿಕ್ಷಣ ಕ್ರಮವನ್ನು ರೂಪಿಸಬೇಕಾಗುತ್ತದೆ. ಸ್ಥಳೀಯ ಭಾಷೆಯನ್ನು ಕಲಿಯದೇ ಹೋದರೆ

ಹೊರಗಿನಿಂದ ಬಂದವರು ದ್ವೀಪಜೀವಿಗಳಾಗಿ ಉಳಿಯಬೇಕಾಗುತ್ತದೆ. ಆ ರಾಜ್ಯದ ಜನರೊಂದಿಗೆ ಬೆಳೆಯುವುದು ಸಾಧ್ಯವಾಗುವುದಿಲ್ಲ. ಒಂದು ರಾಜ್ಯದ ಎಲ್ಲ ಸೌಲಭ್ಯಗಳನ್ನೂ ಬಳಸಿಕೊಂಡು ಬದುಕುವ ಜನ ಅಲ್ಲಿನ ಭಾಷೆಯನ್ನೂ ಬಳಸುವುದು ಅನಿವಾರ್ಯವಾಗುತ್ತದೆ. ಪ್ರದೇಶ ಭಾಷೆಯ ಕಲಿಕೆ ಮಾತೃ ಭಾಷಾ ಕಲಿಕೆಗೆ ವಿರೋಧವಾದುದಲ್ಲ. ಅವೆರಡೂ ಪೂರಕವಾದಾಗಲೇ ವಿದ್ಯಾರ್ಥಿಗಳಿಗೆ ತಮ್ಮ ಮನೆ ಮತ್ತು ಆವರಣಗಳ ಪರಿಚಯ ಸ್ಪಷ್ಟವಾಗುತ್ತದೆ.

3. ನಮಗೆ ಬೇಕಾಗಿರುವ ಕನ್ನಡ ಮಾಧ್ಯಮ ಶಿಕ್ಷಣ ಮತ್ತು ಇಂಗ್ಲಿಷ್ ಭಾಷೆಯ ಸಂಬಂಧ ಯಾವ ಸ್ವರೂಪದ್ದಾಗಿರಬೇಕೆಂದು ಲೇಖಕರು ಹೇಳಿದ್ದಾರೆ?

ಇಂಗ್ಲಿಷ್ ನಮಗೆ ಪ್ರಪಂಚಕ್ಕಿರುವ ಕಿಟಕಿ ಎಂಬುದರಲ್ಲಿ ಸಂದೇಹವಿಲ್ಲ. ಹಾಗೆಂದು ಅದನ್ನು ತಲೆಯ ಮೇಲೆ ಹೇರಿಕೊಳ್ಳಲಾಗುವುದಿಲ್ಲ. ಇಂಗ್ಲಿಷಿನ ದುರ್ದೈವವೆಂದರೆ, ಅದರ ನಿಜವಾದ ಸಾರ್ಥಕವಾದ ಬಳಕೆಯಾಗದೆ ಕೇವಲ ಒಂದು ಪ್ರತಿಷ್ಠೆಯ ವಿಷಯವಾಗಿರುವುದು. ಕಾನ್ವೆಂಟುಗಳ ಶಿಕ್ಷಣದಲ್ಲಿ ಅದು ಗಿಳಿ ಪಾಠವಾಗಿ ನಮ್ಮ ಬಾಲಕ ಬಾಲಕಿಯರಲ್ಲಿ ಒಂದು ಕೃತಕ ವ್ಯಕ್ತಿತ್ವವನ್ನು ಮೂಡಿಸುತ್ತಿದೆ. ಈ ಬಗೆಯ ಶಿಕ್ಷಣವೇ ಪರಮ ಶ್ರೇಷ್ಠವಾದುದೆಂದು ನಮ್ಮಲ್ಲಿ ಅನೇಕರು ಭ್ರಮಿಸಿದ್ದಾರೆ. ಇಂಗ್ಲಿಷ್ ನಮಗೆ ಬೇಕು ನಿಜ.ಆದರೆ ಎಷ್ಟು ಬೇಕು, ಹೇಗೆ ಬೇಕು ಎನ್ನುವುದನ್ನು ಮಾತ್ರ ಯಾರು ಯೋಚಿಸಿಲ್ಲ. ಶಾಲಾ ಶಿಕ್ಷಣದ ಕೊನೆಯಲ್ಲಿ ಎಷ್ಟೊಂದು ಜನ ಶಿಕ್ಷಣವನ್ನು ಮುಂದುವರಿಸದೇ ಹೋಗುತ್ತಾರೆಂಬುದನ್ನು ಗಮನಿಸಿದರೆ ಇಂಗ್ಲಿಷ್ ಶಿಕ್ಷಣದ ಅಪವ್ಯಯ ನಮಗೆ ತಿಳಿಯುತ್ತದೆ.

ಇಂಗ್ಲಿಷನ್ನು ಭಾಷೆಯನ್ನಾಗಿ ಕಲಿಸಿ, ವಿಷಯಗಳನ್ನು ನಮ್ಮ ನಮ್ಮ ಭಾಷೆಗಳಲ್ಲಿಯೇ ಕಲಿಸಬೇಕು. ಮಾಧ್ಯಮದ ಪ್ರಶ್ನೆ ನಮ್ಮಲ್ಲಿ ಬಗೆಹರಿಯಲಾರದ ಸಮಸ್ಯೆಯಾಗಿದೆ. ಶಿಕ್ಷಣತಜ್ಞರೆನ್ನಿಸಿಕೊಂಡವರಿಗೂ ಅನೇಕ ಸಲ ಭಾಷೆಯನ್ನು ಕಲಿಸುವುದು, ಬಾಷೆಯ ಮೂಲಕ ಕಲಿಸುವುದು, ಇವುಗಳ ನಡುವಿನ ಅಂತರ ತಿಳಿಯುವುದಿಲ್ಲ. ಕನ್ನಡ ಮಾಧ್ಯಮವಾಗಬೇಕು ಎಂದರೆ ಇಂಗ್ಲಿಷನ್ನು ಕಲಿಸಬಾರದು ಎಂದಲ್ಲ. ನಮ್ಮ ಭಾಷೆಯಲ್ಲಿ ಓದಿದ್ದೇ ಮೈಗೆ ಹತ್ತುವುದು. ಆಧುನಿಕ ವಿಜ್ಞಾನವನ್ನು ಕಲಿಯುವುದು ಕಲಿಸುವುದು ನಮ್ಮ ಭಾಷೆಗಳ ಮೂಲಕ ಸಾಧ್ಯವಾಗುವುದಿಲ್ಲ ಎನ್ನುವುದು ಒಂದು ಮೂಢನಂಬಿಕೆ. ಕನ್ನಡದ ಮೂಲಕ ಕಲಿತು ಶ್ರೇಷ್ಠ ವಿಜ್ಞಾನಿಯಾಗಬಹುದು

ಎನ್ನುವುದಕ್ಕೆ ನಮ್ಮವರೇ ಆದ ಡಾ। ಸಿ.ಎನ್. ಆರ್.ರಾವ್ ಅತ್ಯುತ್ತಮ ಉದಾಹರಣೆಯಾಗಿದ್ದಾರೆ. ಜನರಿಗೆ ಇಂಗ್ಲಿಷ್‌ನ ಮೇಲೆ ಮೋಹ ಬೆಳೆಯಲು ಪ್ರತಿಷ್ಠೆಯೇ ಕಾರಣ.

4. ಪೋಷಕರು ಖಾಸಗಿ ಶಾಲೆಗಳ ಕಡೆ ಹೊರಳಲು ಲೇಖಕರು ಯಾವ ಕಾರಣಗಳನ್ನು ಉದಾಹರಿಸುತ್ತಾರೆ?

ಪ್ರತಿಯೊಬ್ಬ ತಂದೆ–ತಾಯಿಗಳೂ ತಮ್ಮ ಮಕ್ಕಳು ಒಳ್ಳೆಯ ಶಾಲೆಗಳಲ್ಲಿ ಓದಬೇಕು, ಒಳ್ಳೆಯ ಶಿಕ್ಷಣ ಪಡೆಯಬೇಕು, ಅವರ ಭವಿಷ್ಯ ಉಜ್ವಲವಾಗಿರಬೇಕು ಎಂದು ಆಶಿಸುತ್ತಾರೆ. ಅವರು ನ್ಯಾಯವಾಗಿಯೇ ಅಸಹ್ಯ ಎನ್ನಿಸುವ ನಮ್ಮ ಸಾರ್ವಜನಿಕ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳಿಸಲು ಇಷ್ಟಪಡುವುದಿಲ್ಲ. ಎಷ್ಟೋ ಕಡೆಗಳಲ್ಲಿರುವ ಶಾಲೆಗಳನ್ನು ಒಮ್ಮೆ ನೋಡಿ: ಕುಸಿದು ಬೀಳುತ್ತಿರುವ ಕಟ್ಟಡಗಳು, ದೊಡ್ಡಿಯಾದ ತರಗತಿಗಳು, ಅಧ್ಯಾಪಕರಿಲ್ಲದ ತರಗತಿಗಳು, ಪಾಠ ಹೇಳದ ಅನರ್ಹ ಅಧ್ಯಾಪಕರು,ದಿನ ಬೆಳಗಾದರೆ ರಜೆ, ಶಿಸ್ತಿಲ್ಲದ ವ್ಯವಸ್ಥೆ, ಮೂತ್ರದ ವಾಸನೆಯ ಪರಿಸರ– ಇದು ನಮ್ಮ ಬಹಳಷ್ಟು ಶಾಲೆಗಳ ಸ್ಥಿತಿ. ಆದ್ದರಿಂದ ಸಾರ್ವಜನಿಕರು ಅನಿವಾರ್ಯವಾಗಿ ಖಾಸಗಿ ಉದ್ಯಮವಾದ ಇಂಗ್ಲಿಷ್ ಶಾಲೆಗಳ ಕಡೆಗೆ ಹೋಗುತ್ತಾರೆ.ಇಂಗ್ಲಿಷ್ ನಮಗೆ ಬೇಕು. ಆದರೆ ನಮ್ಮ ಭಾಷೆಯ ಬದಲಿಗೆ ಅಲ್ಲ. ಇಂಗ್ಲಿಷ್ ಒಂದೇ ಅಲ್ಲ. ಇನ್ನೂ ಹಲವು ಭಾಷೆಗಳು ನಮಗೆ ಬೇಕು. ಒಂದೊಂದು ಭಾಷೆಯೂ ಒಂದೊಂದು ವರ. ಒಂದೊಂದು ಜಗತ್ತು. ಆದರೆ ಯಾವ ಭಾಷೆ ಬೇಕು ಎನ್ನುವುದು ನಮ್ಮ ಅಗತ್ಯವನ್ನು ಅನುಸರಿಸಿದ್ದು. ಹೊರಜಗತ್ತಿನ ಸಂಪರ್ಕಕ್ಕಾಗಿ ನಮಗೆ ಇಂಗ್ಲಿಷ್ ಬೇಕು. ಆದರೆ ಅದೇ ಸರ್ವಸ್ವವಾಗಿ ಅಲ್ಲ.ಇಂಗ್ಲಿಷ್ ಮೂಲಕವಾದ ಶಿಕ್ಷಣ, ಕುಂಡದಲ್ಲಿ ನೆಟ್ಟ ಗಿಡಗಳಂತೆ. ಎಲ್ಲಿಯವರೆಗೆ ನಮ್ಮ ಸಾರ್ವಜನಿಕ ಶಾಲೆಗಳ ಸ್ಥಿತಿಗತಿಗಳು ಉತ್ತಮವಾಗುವುದಿಲ್ಲವೋ ಅಲ್ಲಿಯವರೆಗೆ ಶಿಕ್ಷಣದಲ್ಲಿ ಕನ್ನಡ ಆಕರ್ಷಕವಾಗುವುದಿಲ್ಲ.

5. ಕನ್ನಡಿಗರೆನ್ನಿಸಿಕೊಳ್ಳಲು ಯಾವ ಯೋಗ್ಯತೆಯ ಪ್ರಶ್ನೆಗಳು ನಮ್ಮನ್ನು ಚುಚ್ಚಬೇಕು? ವಿವರಿಸಿ.

ಪ್ರತಿಯೊಬ್ಬ ಕನ್ನಡಿಗನೂ ಪ್ರತಿಯೊಂದು ಅಂಗುಲದಲ್ಲಿಯೂ ಕನ್ನಡಿಗನಾಗಬೇಕು. ಆಗ ಮಾತ್ರ ಅನೇಕ ಸಮಸ್ಯೆಗಳಿಗೆ ಪರಿಹಾರ

ದೊರಕುತ್ತದೆ. ಕನ್ನಡ ಕನ್ನಡ ಎನ್ನುವ ನಾವು ನಮ್ಮನ್ನೇ ಪ್ರಶ್ನಿಸಿಕೊಳ್ಳುವುದು ತೀರ ಅಗತ್ಯ. ಕನ್ನಡ ಹೇಳುವುದಕ್ಕೆ ಮಾತ್ರ ಅಲ್ಲ, ಅನುಸರಿಸುವುದಕ್ಕೂ ಕೂಡ ಎಂದು ಎಷ್ಟು ಜನ ತಿಳಿದಿದ್ದೇವೆ? ನಮ್ಮ ಮಕ್ಕಳನ್ನು ಯಾವ ಶಾಲೆಗಳಲ್ಲಿ ಓದಿಸುತ್ತಿದ್ದೇವೆ?. ನಾವು ಯಾವ ಪತ್ರಿಕೆಗಳನ್ನು ಓದುತ್ತಿದ್ದೇವೆ? ನಾವು ನೋಡುವುದು ಯಾವ ಸಿನಿಮಾಗಳನ್ನು?ನಮ್ಮ ಮನೆಯ ಬೋರ್ಡು ಯಾವ ಭಾಷೆಯಲ್ಲಿದೆ? ನಮ್ಮ ಲೆಟೆರ್ ಹೆಡ್‌ಗಳು ಅಚ್ಚಾಗಿರುವುದು, ನಮ್ಮ ಮನೆಯ ಲಗ್ನ ಪತ್ರಿಕೆಗಳು ಅಚ್ಚಾಗಿರುವುದು ಯಾವ ಭಾಷೆಯಲ್ಲಿ? ನಾವು ಬ್ಯಾಂಕುಗಳಿಗೆ ಚೆಕ್ಕು ಬರೆಯುವುದು ಕನ್ನಡದಲ್ಲೇ? ನಾವು ಬರೆಯುವ ಕಾಗದ ಪತ್ರಗಳಲ್ಲಿ ಎಷ್ಟು ಭಾಗ ಕನ್ನಡ? ಇಂಥ ನೂರು ಪ್ರಶ್ನೆಗಳನ್ನು ನಾವು
ಕೇಳಿಕೊಳ್ಳಬೇಕು. ಅವುಗಳ ಉತ್ತರ ನಮ್ಮನ್ನು ಚುಚ್ಚದಿದ್ದರೆ ಮಾತ್ರ ನಾವು ಕನ್ನಡವನ್ನು ಕುರಿತು ಮಾತಾಡಲು ಯೋಗ್ಯತೆ ಗಳಿಸಿಕೊಂಡಿದ್ದೇವೆ ಎಂದು ಅರ್ಥ. ಕನ್ನಡಿಗರು ಮೊದಲು ಕನ್ನಡದವರಾಗಬೇಕು.

===0===

# ಧಣಿಗಳ ಬೆಳ್ಳಿಲೋಟ

**ಎಚ್. ನಾಗವೇಣಿ**

**ಒಂದು ವಾಕ್ಯದಲ್ಲಿ ಉತ್ತರಿಸಿ :**

1. ಧಣಿಗಳ ಮನೆಯ ಪಕ್ಕದಲ್ಲಿ ಹರಿಯುತ್ತಿದ್ದ ಹೊಳೆ ಯಾವುದು?
ಧಣಿಗಳ ಮನೆಯ ಪಕ್ಕದಲ್ಲಿ ಶಾಂಭವಿ ಹೊಳೆ ಹರಿಯುತ್ತಿತ್ತು.
2. ಗುಡ್ಡ ಹೊಳೆಯಲ್ಲಿ ಯಾವ ಆಟ ಆಡುತ್ತಿದ್ದನು?
ಗುಡ್ಡ ಹೊಳೆಯಲ್ಲಿ ಮುಸುರೆ ಪಾತ್ರೆಯಲ್ಲಿ ಮರಿಮೀನುಗಳನ್ನು ಹಿಡಿಯುವ ಆಟ ಆಡುತ್ತಿದ್ದನು.
3. ಧಣಿಗಳ ಹೆಸರೇನು?
ಧಣಿಗಳ ಹೆಸರು ವೆಂಕಪ್ಪಯ್ಯ.
4. ಬೆಳ್ಳಿಲೋಟ ಲಪಟಾಯಿಸಿದ ಅಪವಾದವನ್ನು ಯಾರ ಮೇಲೆ ಹೊರಿಸಲಾಯಿತು?
ಬೆಳ್ಳಿಲೋಟ ಲಪಟಾಯಿಸಿದ ಅಪವಾದವನ್ನು ಕುದುಪನ ಕುಟುಂಬದ ಮೇಲೆ ಹೊರಿಸಲಾಯಿತು.
5. ಧಣಿ ಎಂದಿಗೂ ಯಾರ ಮಾತನ್ನು ನಂಬುವುದಿಲ್ಲ?
ಧಣಿ ಎಂದಿಗೂ ಒಕ್ಕಲ ಮಕ್ಕಳ ಮಾತನ್ನು ನಂಬುವುದಿಲ್ಲ.
6. ಧಣಿಗಳು ಹೊಳೆಯ ಹೂಳೆತ್ತಲು ಯಾರಿಗೆ ಸೂಚಿಸಿದರು?
ಧಣಿಗಳು ಹೊಳೆಯ ಹೂಳೆತ್ತಲು ಕುದುಪನಿಗೆ ಸೂಚಿಸಿದರು.
7. ಬೆಳ್ಳಿಲೋಟ ಏನನ್ನು ಕಳೆದುಕೊಂಡಿತ್ತು?
ಬೆಳ್ಳಿಲೋಟ ಹೊಳೆಯ ಹೂಳೊಳಗೆ ಅವಿತು ತನ್ನ ಬಣ್ಣ ಗಾಂಭೀರ್ಯವನ್ನು ಕಳೆದುಕೊಂಡಿತ್ತು.
8. ಧಣಿಗಳ ದಾಂಪತ್ಯಕ್ಕೆ ಯಾವುದು ಮೂಕ ಸಾಕ್ಷಿಯಾಗಿತ್ತು?
ಧಣಿಗಳ ದಾಂಪತ್ಯಕ್ಕೆ ಬೆಳ್ಳಿಲೋಟ ಮೂಕ ಸಾಕ್ಷಿಯಾಗಿತ್ತು.
9.ಧಣಿಗಳ ಹೆಸರೇನು?
ಧಣಿಗಳ ಹೆಸರು ವೆಂಕಪ್ಪಯ್ಯ.
10.ಹೂಳೆತ್ತುವ ಕೆಲಸದ ಒತ್ತಡ ಯಾವ ರೀತಿಯದು?
ಹೂಳೆತ್ತುವ ಕೆಲಸ ಎಂದರೆ ಮೂಳೆ ಮುರಿದು ಹೋಗುವಂತ ಕೆಲಸವದು.

**ಎರಡು– ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1. ಮುಂಜಾನೆ ಚಿನ್ನಮ್ಮ ಯಾವ ಕೆಲಸದಲ್ಲಿ ತೊಡಗಿದ್ದಳು?

ಮುಂಜಾನೆ ಚಿನ್ನಮ್ಮ ಎಂದಿನಂತೆ ಹೊಳೆಯ ಸೆರಗಲ್ಲಿ ಮುಸುರೆ ಪಾತ್ರೆಗಳನ್ನು ರಾಶಿ ಹಾಕಿ ಕೂತು, ಪಕ್ಕದಲ್ಲಿ ಬೂದಿಯ ಗೆರಟೆಯನ್ನಿರಿಸಿಕೊಂಡು ಹೊಳೆಯ ಗುಣವಾಚನಕ್ಕೆ ತೊಡಗಿದ್ದಳು.

2. ನದಿಯ ಒಡಲು ಯಾವಾಗ ಪ್ರಕ್ಷುಬ್ಧವಾಗಿರುತ್ತದೆ?

ಆಷಾಢ–ಶ್ರಾವಣ–ಬಾದ್ರಪದ ಮಾಸದಲ್ಲಿ ನದಿಯ ಒಡಲು ಕಾವಿಗೆ ಕೂತ ಹೇಂಟೆಯಂತೆ ಯಾವತ್ತೂ ವ್ಯಗ್ರ ಪ್ರಕ್ಷುಬ್ಧ. ಹತ್ತಿರ ಬಂದವರನ್ನು ಕುಕ್ಕಿಮುಕ್ಕುವ ಸಿಡುಕು ಇರುತ್ತದೆ.

3 ಧಣಿಗಳು ಹೊಳೆಯನ್ನು ಹೇಗೆ ಮೂದಲಿಸುತ್ತಿದ್ದರು?

ಮಳೆಗಾಲದಲ್ಲಿ ಶಾಂಭವಿ ಹೊಳೆ ಆಡಿದ್ದೇ ಆಟ, ಹೂಡಿದ್ದೇ ಹೂಟವಾಗಿತ್ತು.ಧಣಿಗಳು ಹೊಳೆಯನ್ನು 'ಮಳೆಗಾಲ ಬಂದರೆ ಸಾಕು ಈ ಬಿಕನಾಸಿ ಹೊಳೆ ಊರಿಡೀ ತನ್ನ ಸೆರಗನ್ನೇ ಹಾಸಿಬಿಡುತ್ತದೆ...., ಎಷ್ಟಗಲ ಸೆರಗು ಹಾಸಿದರೂ ಇನ್ನಷ್ಟು ದೂರಕ್ಕೆ ಹಾಸಬೇಕೆಂಬ ಚಟ ಇದಕ್ಕೆ....'ಎಂದು ಮೂದಲಿಸುತ್ತಿದ್ದರು.

4. ಮುಸುರೆ ಪಾತ್ರೆಗಳ 'ಒಡೆಯ' ಏನೆಂದು ಯೊಚಿಸಿದನು?

ಮುಸುರೆ ಪಾತ್ರೆಗಳ 'ಒಡೆಯ' ಗುಡ್ಡನು ತೋರು ಬೆರಳನ್ನು ಬಾಯೊಳಗಿರಿಸಿಕೊಂಡು ಮೌನ ಮುದ್ರೆಯಲ್ಲಿದ್ದಾನೆ. ಹೇಗೂ ಚಡ್ಡಿ ಒದ್ದೆ ನೀರಾಗಿದೆ. ಮತ್ತೊಮ್ಮೆ ತಾನು ಈ ತುಂಬಿದ ಹೊಳೆಯಲ್ಲಿ ಯಾಕೆ ಈಜಬಾರದು? ಅಪ್ಪನಲ್ಲಿ ಕೇಳುವುದೋ.... ಬಿಡುವುದೋ ಎಂದು ಯೋಚಿಸಿದನು.

5. ಧಣಿಪತ್ನಿ ಬೆಳ್ಳಿಲೋಟವನ್ನು ಹೇಗೆ ಪರಿಚಯಿಸಿದ್ದಾಳೆ?

ಧಣಿಪತ್ನಿ 'ಈ ಬೆಳ್ಳಿ ಲೋಟ ಜಾಗ್ರತೆ ಮಾರಾಯ, ನನ್ನ ಮದುವೆಯಲ್ಲಿ ನನ್ನಪ್ಪ ಕೊಟ್ಟಿದ್ದು.... ಅಪ್ಪಯ್ಯ ಕುಡ್ಲದ ರಥಬೀದಿಯಲ್ಲಿರುವ ನರಸಿಂಹಾಚಾರಿಯಲ್ಲಿ ಮಾಡಿದ್ದು. ಅದರ ಮೈ ಮೇಲಿನ ಹೂಬಳ್ಳಿಯನ್ನು ಈ ಕಾಲದಲ್ಲಿ ಯಾವ ಅಚಾರಿ ತಾನೆ ಮಾಡಿಯಾನು....'ಎಂದು ಬೆಳ್ಳಿಲೋಟವನ್ನು ಪರಿಚಯಿಸಿದ್ದಾಳೆ.

6. ಧಣಿಯ ಬಡಿತದಿಂದ ಗುಡ್ಡ ಬಂಧಮುಕ್ತನಾದುದು ಹೇಗೆ?

ಧಣಿಗಳು ಗುಡ್ಡನ ಬಾಯಿ ಬಿಡಿಸಲು ಅಂಗಳದ ಹೊಂಗಾರೆ ಮರಕ್ಕೆ ಬಿಗಿದು ತೆಂಗಿನ ಕೊತ್ತಳಿಗೆಯಲ್ಲಿ ಬಡಿದರು. ತಾಯಿ ಚಿನ್ನಮ್ಮ ತಟ್ಟನೆ "ನಮ್ಮ ಊರ ಕೋಡ್ದಬ್ಬು ದೈವದ ಆಣೆಯಿದೆ. ಇನ್ನು ನನ್ನ ಮಗನ ಮೇಲೆ ಕೈ ಮಾಡಿದಲ್ಲಿ" ಎಂದು ಅಸಹಾಯಕತೆಯಿಂದ ಧಣಿಗಳ ಕಾಲಿಗೆಅಡ್ಡಬಿದ್ದುತಾನು ಆ ಬೆಳ್ಳಿಲೋಟದ ಹಣವನ್ನು ಪಡಿಯಿಲ್ಲದೆ ದುಡಿದು
ತೀರಿಸುತ್ತೇನೆಂದು ಅಳುತ್ತಾ ಬೇಡಿಕೊಂಡಳು. ಮುಂದಿನ ಮೂರು ಬೇಸಿಗೆಯವರೆಗೆ ಚಿನ್ನಮ್ಮನ ದುಡಿತಕ್ಕೆ ಪಡಿಯಿಲ್ಲ ಎಂಬ ಕರಾರಿನನ್ವಯ ಧಣಿಯ ಬಡಿತದಿಂದ ಗುಡ್ಡ ಬಂಧಮುಕ್ತನಾದ.

7. ಕುದುಪನಿಗೆ ಹನಿಗಣ್ಣಾಗಲು ಕಾರಣವೇನು?

ಕುದುಪ ಹೂಳು ತುಂಬಿದ್ದ ಬುಟ್ಟಿ0ಯನ್ನು ಚಿನ್ನಮ್ಮನ ತಲೆಗೇರಿಸುವಷ್ಟರಲ್ಲಿ ನವಮಾಸಗಳ ಕಾಲ ಹೊಳೆಯ ಉದರದಲ್ಲಿ ಅಡಗಿದ್ದ ಧಣಿಗಳ ಬೆಳ್ಳಿಲೋಟದ ಮಂಕುಮೂತಿ ಕಾಣಿಸಿತು. ಇನ್ನೂ ಸೂತಕ ಕಳೆಯದ ಹಸಿ ಮಗುವನ್ನು ಮೀಯಿಸುವಂತೆ ನಿಧಾನಕ್ಕೆ ಹೊಳೆ0ಯ ನೀರಲ್ಲಿ ಆ ಬೆಳ್ಳಿಲೋಟವನ್ನು ತೊಳೆಯತೊಡಗಿದ. ಈ ಲೋಟದಿಂದಾಗಿ ತಾನೆಷ್ಟು ಅಪಮಾನದ ಮಾತುಗಳನ್ನು ಆ ಧಣಿಪತ್ನಿ0ಯವರ ಕೊಳಕು ಬಾಯಿಂದ ಕೇಳಿಬಿಟ್ಟೆ ಎಂದು ಕುದುಪ ಹನಿಗಣ್ಣಾದ.

8.ಮಳೆಗಾಲದಲ್ಲಿ ಹೊಳೆ ಹೇಗೆ ಕಿರಿಕಿರಿ ಎಬ್ಬಸುತ್ತದೆ.?

ಹೊಳೆಗೆ ಬಾಯಿ ಇಲ್ಲದಿದ್ದರೂ ಮಳೆಗಾಲ ಬಂದೊಡನೆ ಬರಿ ಕ್ರೀಯೆಯಲ್ಲಿ ತನ್ನ ವ್ಯಾಪ್ತಿ, ತನ್ನ ಪರಿಹಾರ, ತನ್ನ ಬಲ ಎಷ್ಟೇಂಬುದನ್ನು ಧಣಿಗಳಿಗೆಮನವರಿಕೆ ಮಾಡಿ ಅವರಿಗೆ ಕಿರಿಕಿರಿ ಉಂಟುಮಾಡುತ್ತಿತ್ತು.

9.ಯಾವ ವಸ್ತುಗಳು ನೀರು ಪಾಲಾದವು?

ಧಣಿಗಳ ಮನೆಯ ಎರಡು ಕಂಚಿನ ಕೊಳಗ, ಎರಡು ಹಿತ್ತಾಳೆ ಗಿಂಡಿ, ಹತ್ತು ಹಿತ್ತಾಳೆ ಲೋಟ, ಆರು ಮರದ ಸೌಟು, ಎರಡು ಹಿತ್ತಾಳೆ ಸೌಟು, ಹತ್ತು ಕಂಚಿನ ಬಟ್ಟಲು, ಎಂಟು ಹಿತ್ತಾಳೆ ತಟ್ಟೆ, ಒಂದು ಬಾಣಲೆ ಹಾಗೂ ಬೆಳ್ಳಿಯ ಒಂದು ಲೋಟ– ಈ ಎಲ್ಲವೂ ನೀರು ಪಾಲಾಗಿದ್ದವು.

**ಸಂದರ್ಭ ಸಹಿತವಾದ ವಿವರಣೆ :**

1. ಅದಕ್ಕೂ ಚಿನ್ನಮ್ಮನ ಪುಟ್ಟ ಸಂಸಾರದ ಬಗ್ಗೆ ಅದೆಷ್ಟು ಪ್ರೀತಿ ವಾತ್ಸಲ್ಯ.

ಆಯ್ಕೆ: ಎಚ್. ನಾಗವೇಣಿಯವರ 'ಮೀ೦ಯುವ ಆಟ' ಕೃತಿಯಿಂದ ಆರಿಸಿದ ಧಣಿಗಳ ಬೆಳ್ಳಿಲೋಟ ಎನ್ನುವ ಕತೆಯಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಚಿನ್ನಮ್ಮಳ ಕುಟುಂಬಕ್ಕೆ ಶಾಂಭವಿ ಹೊಳೆ೦ಯು ಮಾಡಿರುವ ಉಪಕಾರವನ್ನು ವಿವರಿಸುವ ಸಂದರ್ಭವಿದು. ಆ ಕುಟುಂಬ ಮತ್ತು ಹೊಳೆ೦ಯ ಅವಿನಾಭಾವ ಸಂಬಂಧದ ಬಗ್ಗೆ ಹೇಳುವಾಗ ಲೇಖಕಿ ಈ ಮಾತನ್ನು ಹೇಳಿದ್ದಾರೆ.

ವಿವರಣೆ: ಚಿನ್ನಮ್ಮಳು ಮುಂಜಾನೆ ಎಂದಿನಂತೆ ಶಾಂಭವಿ ಹೊಳೆ೦ಯ ದಡದಲ್ಲಿ ಮುಸುರೆ ಪಾತ್ರೆಗಳನ್ನು ರಾಶಿ ಹಾಕಿ ತಿಕ್ಕುತ್ತಾ ಸಿಟ್ಟಿನಿಂದ ಹೊಳೆಗೆ ಬೈ೦ಯುತ್ತಿದ್ದಳು. ಏಕೆಂದರೆ ಆ ಹೊಳೆ ಚಿನ್ನಮ್ಮಳ ಸಂಸಾರಕ್ಕೆ ಅಪವಾದವನ್ನು ತಂದು ಹಾಕಿದೆ. ಆದರೆ ಶಾಂಭವಿ ಹೊಳೆಗೆ ಆ ಸಂಸಾರದ ಬಗ್ಗೆ ಪ್ರೀತಿಯಿದೆ. ಚಿನ್ನಮ್ಮಳ ಗಂಡ ಕುದುಪನ ಗಾಳಕ್ಕೆ ಮೀನುಗಳನ್ನು ಒದಗಿಸುತ್ತಿತ್ತು. ತಾನು ಹರಿದು ಬರುವಾಗ ಸೆರಗಿನಂಚಿನ ತೋಟಗಳಿಂದ ತೆಂಗಿನಕಾಯಿ-ಸೌದೆಗಳನ್ನು ತಂದು ಕುದುಪನ ಕಣ್ಣಿಗೆ ಬೀಳಿಸುತ್ತಿತ್ತು.ಮಳೆಗಾಲದಲ್ಲಿ ಪಾತ್ರೆ-ಪಗಡಿ, ಕೋಳಿ-ಕುರಿ, ಏಣಿ-ದೋಣಿ, ರೀಪು-ಪಕ್ಕಾಸುಗಳನ್ನು ಹೊತ್ತು ತಂದು ಹಾಕುತ್ತಿದ್ದ ಶಾಂಭವಿ ಹೊಳೆಗೆ ಚಿನ್ನಮ್ಮನ ಪುಟ್ಟ ಸಂಸಾರದ ಬಗ್ಗೆ ಪ್ರೀತಿ ವಾತ್ಸಲ್ಯಗಳಿದ್ದವೆಂದು ಲೇಖಕಿ ಈ ಮಾತಿನ ಮೂಲಕ ವಿವರಿಸಿದ್ದಾರೆ.

2. ಕಾವಿಗೆ ಕೂತ ಹೇಂಟೆಯಂತೆ -ಒಡಲು ಯಾವತ್ತೂ ವ್ಯಗ್ರ-ಪ್ರಕ್ಷುಬ್ಧ.

ಆಯ್ಕೆ: ಎಚ್. ನಾಗವೇಣಿಯವರ 'ಮೀ೦ಯುವ ಆಟ' ಕೃತಿಯಿಂದ ಆರಿಸಿದ ಧಣಿಗಳ ಬೆಳ್ಳಿಲೋಟ ಎನ್ನುವ ಕತೆಯಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಮಳೆಗಾಲದಲ್ಲಿ ಶಾಂಭವಿ ಹೊಳೆಯು ತುಂಬಿ ಹರಿಯುವ ಬಗೆಯನ್ನು ಹೇಳುವ ಸಂದರ್ಭವಿದು.

ವಿವರಣೆ: ಶ್ರಾವಣ ಮಾಸದ ನಾಲ್ಕನೇ ದಿನ ಚಿನ್ನಮ್ಮನ ಮಗ ಗುಡ್ಡ ತುಂಬಿ ಹರಿಯುವ ಶಾಂಭವಿ ಹೊಳೆಯ ದಡದಲ್ಲಿ ಕುಳಿತು ಧಣಿಗಳ ಮನೆಯ ಮುಸುರೆ ಪಾತ್ರೆಗಳನ್ನು ತಿಕ್ಕುತ್ತಿದ್ದ. ಆಷಾಡ -ಶ್ರಾವಣ-ಭಾದ್ರಪದಮಾಸಗಳಲ್ಲಿ ಹೆಚ್ಚುಮಳೆ ಸುರಿಯುವ ಕಾಲಕ್ಕೆ ನದಿಯು ತುಂಬಿ ಹರಿಯುತ್ತದೆ ಆ ಕಾರಣದಿಂದ ಹರಿಯುವ ಕ್ರಿಯೆಯಲ್ಲಿ ಸಿಡುಕಿದೆ. ಅದರ ಒಡಲು ವ್ಯಗ್ರ, ಪ್ರಕ್ಷುಬ್ಧವಾದುದರಿಂದ ಲೇಖಕಿಯು ಅದನ್ನು ಕಾವಿಗೆ ಕೂತ ಹೇಂಟೆಯಂತೆ ಎಂದು ಹೇಳಿದ್ದಾರೆ. ಕಾವಿಗೆ ಕೂತ ಹೇಂಟೆಗೆ ಹತ್ತಿರ

ಬಂದವರನ್ನು ಕುಕ್ಕಿ ಮುಕ್ಕುವ ಸಿಡುಕಿರುತ್ತದೆ. ಅದೇ ರೀತಿ ಇಲ್ಲಿನ ಶಾಂಭವಿ ಹೊಳೆಗೂ ಇದೆ ಎನ್ನುವಾಗ ಲೇಖಕಿ ಈ ಮಾತನ್ನು ಹೇಳಿದ್ದಾರೆ.

3. ಗದ್ದೆಯಲ್ಲಿ ಬಿತ್ತುವುದನ್ನು ಮರಳದಿನ್ನೆ ಮೇಲೆ ಬಿತ್ತಿದೆಯಲ್ಲವ ಮಾರಾಯ......?'

ಆಯ್ಕೆ: ಎಚ್. ನಾಗವೇಣಿಯವರ 'ಮೀ0ಯುವ ಆಟ' ಕೃತಿಯಿಂದ ಆರಿಸಿದ ಧಣಿಗಳ ಬೆಳ್ಳಿಲೋಟ ಎನ್ನುವ ಕತೆಯಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಮಳೆಗಾಲದಲ್ಲಿ ತುಂಬಿ ಹರಿಯುತ್ತಿದ್ದ ಹೊಳೆಗೆ ತಡೆಯೊಡ್ಡುವ ಧಣಿ ವೆಂಕಪ್ಪಯ್ಯನ ಪ್ರಯತ್ನಕ್ಕೆ ಹೊಳೆ ಪ್ರತಿಕ್ರಿಯಿಸುವ ರೀತಿಯನ್ನು ಲೇಖಕಿ ಈ ಮಾತಿನ ಮೂಲಕ ಹೇಳಿದ್ದಾರೆ.

ವಿವರಣೆ: ಶಾಂಭವಿ ಹೊಳೆಯು ಮಳೆಗಾಲದಲ್ಲಿ ಧಣಿ ವೆಂಕಪ್ಪ0ಯ್ಯನವರ ತೆಂಗಿನ ತೋಟದ ಅಂಚನ್ನು ಹೊಳೆ0ಯು ಕೊಚ್ಚಿ ಹಾಕುತ್ತಿದ್ದರಿಂದ ವೆಂಕಪ್ಪ0ಯ್ಯ ಹೊಳೆ0ಯನ್ನು ಮೂದಲಿಸುತ್ತಿದ್ದರು. ಹೊಳೆಗೆ ಬಾಯಿ ಬರದಿದ್ದರೂ ಮಳೆಗಾಲ ಬಂದೊಡನೆ ಬರೀ ಕ್ರಿ0ಯೆ0ಯಲ್ಲೇ ತನ್ನ ವ್ಯಾಪ್ತಿ, ತನ್ನ ಪರಿಹಾರ,ತನ್ನ ಬಲ ಎಷ್ಟು ಎಂಬುದನ್ನು ಮನವರಿಕೆ ಮಾಡಿ ಧಣಿಗಳಿಗೆ ಕಿರಿಕಿರಿ ಮೂಡಿಸುತಿತ್ತು. ಹೊಳೆಯು ಈ ಉಪಟಳ ತಾಳಲಾರದೆ ಧಣಿ0ಯವರು ಹೊಳೆ ಸೊರಗುವ ಕಾಲಕ್ಕೆ ತನ್ನ ಮೇಲುಸ್ತುವಾರಿ0ಯಲ್ಲಿ ನದಿ ಸೆರಗನ್ನು ಆಚೆಗೆ ದೂಡುವಂತೆ ಪಾದೆಕಲ್ಲು, ಮುರಕಲ್ಲಿನ ಗಟ್ಟಿ ಪಂಚಾಂಗ ತೋಟಕ್ಕೂ , ನದಿಸೆರಗಿಗೂ ನಡುವೆ ದರೆ ಎಬ್ಬಿಸಿ ಎತ್ತರಿಸುತ್ತಾರೆ. ಪ್ರತಿ ವರ್ಷ ವೆಂಕಪ್ಪ0ಯ್ಯ ಗದ್ದೆ0ಯಂಚನ್ನು ನಾಲ್ಕು, ಐದು ಅಡಿ ಎತ್ತರಿಸಿದರೂ ಬೇಸಿಗೆ0ಯಲ್ಲಿ ಅದನ್ನು ನೋಡಿಕೊಂಡು ಸುಮ್ಮನಿರುತ್ತಿದ್ದ ಹೊಳೆ, ಗದ್ದೆ0ಯಲ್ಲಿ ಬಿತ್ತುವುದನ್ನು ಮರಳ ದಿನ್ನೆ ಮೇಲೆ ಬಿತ್ತಿದೆ0ಯಲ್ಲವಾ ಮಾರಾ0ಯಾ..? ಎಂದು ಮನಸ್ಸಿನಲ್ಲೇ ವೆಂಕಪ್ಪಯ್ಯನವರ ಪೆದ್ದುತನವನ್ನು ಅಣಕಿಸಿ ಆ ಎತ್ತರವನ್ನು ಕೆಡವಿ ಹಾಕುತ್ತಿತ್ತು ಎಂಬುದನ್ನು ವರ್ಣಿಸುವ ಸಂದರ್ಭವಾಗಿದೆ.

4. ಆತನ ಈಜಿಗೆ ಮೀನುಗಳೇ ನಾಚಬೇಕು.

ಆಯ್ಕೆ: ಎಚ್. ನಾಗವೇಣಿಯವರ 'ಮೀ0ಯುವ ಆಟ' ಕೃತಿಯಿಂದ ಆರಿಸಿದ ಧಣಿಗಳ ಬೆಳ್ಳಿಲೋಟ ಎನ್ನುವ ಕತೆಯಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಪಾತ್ರೆ ತಿಕ್ಕುತ್ತಿರುವ ಗುಡ್ಡ ನೀರು ಪಾಲಾದಾಗ ಈಜಿ ಬಂದ ರೀತಿ0ಯನ್ನು ಲೇಖಕಿ ವಿವರಿಸುವಾಗ ಈ ಸಾಲು ಬಂದಿದೆ.

ವಿವರಣೆ: ಕುದುಪ ಚೆನ್ನಮ್ಮರ ಮಗ ಗುಡ್ಡ ಶಾಂಭವಿ ಹೊಳೆ೦ಯ ಅಂಚಿನಲ್ಲಿ ಧಣಿಗಳ ಮನೆ೦ಯ ಮುಸುರೆ ಪಾತ್ರೆ೦ಯನ್ನು ತಿಕ್ಕುತ್ತಿದ್ದ. ಶಾಂಭವಿ ಹೊಳೆ ರಭಸವಾಗಿ ಹರಿ೦ಯುತ್ತಿದೆ. ಗುಡ್ಡ ಹಿಂದಿನ ದಿನ ರಾತ್ರಿ೦ಯ ಹರಿಕಥೆ ಪ್ರಸಂಗವನ್ನು ನೆನಪಿಸಿಕೊಳ್ಳುತ್ತಾ ಪಾತ್ರೆ ತೊಳೆ೦ಯುತ್ತಿದ್ದಾಗ ಕಾಲಡಿ೦ಯ ಮಣ್ಣು ಕುಸಿದು, ಪಾತ್ರೆಗಳ ಸಮೇತ ನೀರಿಗೆ ಬಿದ್ದನು. ಅವನು ಚಿಕ್ಕವನಾದರೂ ಚೆನ್ನಾಗಿ ಈಜು ಬಲ್ಲವನಾಗಿದ್ದ ಎನ್ನುವಾಗ ಲೇಖಕಿ ಗುಡ್ಡನ ಕುರಿತಾಗಿ ಈ ಮಾತನ್ನು ಹೇಳುತ್ತಾರೆ.

5. ಧಣಿಯವರು ಎಂದಾದರೂ ಒಕ್ಕಲು ಮಕ್ಕಳನ್ನು ನಂಬಿದ್ದುಂಟೆ?

ಆಯ್ಕೆ: ಎಚ್. ನಾಗವೇಣಿಯವರ 'ಮೀಯುವ ಆಟ' ಕೃತಿಯಿಂದ ಆರಿಸಿದ ಧಣಿಗಳ ಬೆಳ್ಳಿಲೋಟ ಎನ್ನುವ ಕತೆಯಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಹೊಳೆಯಲ್ಲಿ ಬೆಳ್ಳಿ ಲೋಟ ಕಾಣೆಯಾದುದನ್ನು ಧಣಿಗಳ ಹತ್ತಿರ ಕುದುಪ ಬಂದು ಹೇಳಿದಾಗ, ಧಣಿ ನಂಬದೇ ಇರುವ ಸ್ಥಿತಿ ಇದಾಗಿದೆ.

ವಿವರಣೆ: ಗುಡ್ಡ ಮುಸುರೆ ಪಾತ್ರೆಗಳು ಹೊಳೆಯ ಪಾಲಾದುವೆಂದು ಬಂದು ಹೇಳಿದಾಗ ಕುದುಪ ಹೊಳೆಯಲ್ಲಿ ಮುಳುಗಿ ಸಿಕ್ಕ ಪಾತ್ರೆಗಳನ್ನೆಲ್ಲ ಜಾಲಾಡಿ ತಂದನು.ಆದರೆ ಎಷ್ಟೇ ಪ್ರಯತ್ನಿಸಿದರೂ ಧಣಿಗಳ ಮನೆಯ ಬೆಳ್ಳಿಲೋಟ ಸಿಗಲಿಲ್ಲ. ಚೆನ್ನಮ್ಮ, ಕುದುಪ, ಗುಡ್ಡರ ಕಣ್ಣೀರು ಹೊಳೆಯನ್ನು ಸೇರಿತೆ ವಿನಃ ಬೇರೆ ಪ್ರಯೋಜನವಾಗಲಿಲ್ಲ. ಆಕಾಶ ಭೂಮಿ ಒಂದು ಮಾಡುವಂತೆ ಮಳೆ ಸುರಿಯುತ್ತಿದ್ದುದರಿಂದ ಪ್ರಯತ್ನಿಸಿ ನಿರಾಶನಾದ ಕುದುಪ ಧಣಿಗಳ ಮನೆಯ ಅಂಗಳದಲ್ಲಿ ನಿಂತು ಬೆಳ್ಳಿಲೋಟ ಕಾಣೆಯಾದ ವಿಷಯವನ್ನು ಧಣಿಗೆ ತಿಳಿಸುತ್ತಾನೆ. ಆಗ ಧಣಿಗಳು ಈ ಸಂಸಾರದ ಮೇಲೆಯೇ ಅಪವಾದವನ್ನು ಹಾಕಿದರು. ಈ ಸಂದರ್ಭದಲ್ಲಿ ಅಸಹಾಯಕ ಸ್ಥಿತಿಯಲ್ಲಿರುವ ಒಕ್ಕಲು ಮಕ್ಕಳನ್ನು ಸತ್ಯ ಹೇಳಿದರೂ ಯಜಮಾನರ ಸ್ಥಾನದಲ್ಲಿರುವವರು ನಂಬುವುದಿಲ್ಲ ಎನ್ನುವಾಗ ಲೇಖಕಿ ಈ ಮೇಲಿನ ಮಾತನ್ನು ಹೇಳಿದ್ದಾರೆ.

6. ಮೂರು ಬೇಸಿಗೆಯವರೆಗೆ ಚೆನ್ನಮ್ಮನ ದುಡಿತಕ್ಕೆ ಪಡಿಯಿಲ್ಲ.

ಆಯ್ಕೆ: ಎಚ್. ನಾಗವೇಣಿಯವರ 'ಮೀಯುವ ಆಟ' ಕೃತಿಯಿಂದ ಆರಿಸಿದ ಧಣಿಗಳ ಬೆಳ್ಳಿಲೋಟ ಎನ್ನುವ ಕತೆಯಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಧಣಿಗಳು ಗುಡ್ಡ ಮಾಡಿದ ತಪ್ಪಿಗೆ ಚೆನ್ನಮ್ಮನಿಗೆ ಶಿಕ್ಷೆ ವಿಧಿಸುವ ಸಂದರ್ಭವಿದು.

ವಿವರಣೆ: ಗುಡ್ಡ ಮುಸುರೆ ಪಾತ್ರೆಗಳು ಹೊಳೆಯ ಪಾಲಾದುವೆಂದು ಬಂದು ಹೇಳಿದಾಗ ಕುದುಪ ಹೊಳೆಯಲ್ಲಿ ಮುಳುಗಿ ಸಿಕ್ಕ ಪಾತ್ರೆಗಳನ್ನೆಲ್ಲ ಜಾಲಾಡಿ ತಂದನು. ಆದರೆ ಎಷ್ಟೇ ಪ್ರಯತ್ನಿಸಿದರೂ ಧಣಿಗಳ ಮನೆಯ ಬೆಳ್ಳಿಲೋಟ ಸಿಗಲಿಲ್ಲ. ಧಣಿಗೆ ತಿಳಿಸುತ್ತಾನೆ. ಆಗ ಧಣಿಗಳು ಅವನ ಸಂಸಾರದ ಮೇಲೆಯೇ ಅಪವಾದವನ್ನು ಹಾಕಿದರು. ಮಾತ್ರವಲ್ಲ ಮುಸುರೆ ಪಾತ್ರೆ ತಿಕ್ಕುತ್ತಿದ್ದ ಗುಡ್ಡನ ಬಾಯಿ ಬಿಡಿಸಲು ಅಂಗಳದ ಹೊಂಗಾರೆ ಮರಕ್ಕೆ ಕಟ್ಟಿ ಹಾಕಿ ತೆಂಗಿನ ಕೊತ್ತಳಿಗೆಯಲ್ಲಿ ಬಡಿದರು. ಇದನ್ನು ನೋಡಲಾಗದ ತಾಯಿ ಚಿನ್ನಮ್ಮ ತಟ್ಟನೆ "ನಮ್ಮ ಊರ ಕೋಡ್ದಬ್ಬು ದೈವದ ಆಣೆಯಿದೆ, ಎಂದು ಅಸಹಾಯಕತೆಯಿಂದ ಧಣಿಗಳ ಕಾಲಿಗೆ ಅಡ್ಡಬಿದ್ದು ತಾನು ಆ ಬೆಳ್ಳಿಲೋಟದ ಹಣವನ್ನು ಪಡಿಯಿಲ್ಲದೆ ದುಡಿದು ತೀರಿಸುತ್ತೇನೆಂದು ಅಳುತ್ತಾ ಬೇಡಿಕೊಂಡಳು. ಆಗ ಧಣಿಗಳು ಮೇಲಿನ ತೀರ್ಮಾನಕ್ಕೆ ಬರುತ್ತಾರೆ.

7. ಪಾವಕ್ಕಿ ಕಮ್ಮಿ ಮಾಡಿದರೆ ಸುಮ್ಮನೆ ಇರ್ತಿಯೇನೋ ನೀನು?

ಆಯ್ಕೆ: ಎಚ್. ನಾಗವೇಣಿಯವರ 'ಮೀಯುವ ಆಟ' ಕೃತಿಯಿಂದ ಆರಿಸಿದ ಧಣಿಗಳ ಬೆಳ್ಳಿಲೋಟ ಎನ್ನುವ ಕತೆಯಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಹೂಳೆತ್ತುತ್ತಿದ್ದ ಕುದುಪನಿಗೆ ಧಣಿ ವೆಂಕಪ್ಪಯ್ಯ ಹೇಳುವ ಮಾತಿದು.

ವಿವರಣೆ: ಕುದುಪ ಚಿನ್ನಮ್ಮರು ಧಣಿಗಳ ಮನೆಯಲ್ಲಿ ಕೆಲಸ ಮಾಡುತ್ತಿದ್ದರು. ಹೊಳೆಯಿಂದ ಹೂಳೆತ್ತಿ ತೆಂಗಿನ ಬುಡಕ್ಕೆ ಹಾಕುತ್ತಿದ್ದರು. ಮೂಳೆ ಮುರಿದು ಹೋಗುವಂತ ಈ ಕೆಲಸದ ನಡುವೆ ಸುಸ್ತಾದ ಕುದುಪ ಒಂದರೆ ಕ್ಷಣ ನೀರಲ್ಲಿ ಕುಸಿದು ಕುಳಿತಾಗ ಧಣಿಗಳ ಸಿಟ್ಟು ನೆತ್ತಿಗೇರಿತು. ಧಣಿ ವೆಂಕಪ್ಪಯ್ಯ ಕುದುಪನನ್ನು ಗದರಿಸುತ್ತಾ ಈ ಮೇಲಿನಂತೆ ಹೇಳುತ್ತಾರೆ. ಮೊದಲೇ ಈ ಸಂಸಾರದ ಮೇಲೆ ಆಪಾದನೆಯಿದೆ. ಈಗ ಈ ರೀತಿಯ ಬೈಗುಳಗಳಿಂದ ಆ ಸಂಸಾರ ಇನ್ನಷ್ಟು ನೋವನ್ನು ಅನುಭವಿಸುವಂತಾಯಿತು.

8. ಇದೇ ಲೋಟವಲ್ಲವೇ......ತನ್ನ ಬೆವರಿನ ಬೆಲೆ ಕಳೆದದ್ದು.

ಆಯ್ಕೆ: ಎಚ್. ನಾಗವೇಣಿಯವರ 'ಮೀಯುವ ಆಟ' ಕೃತಿಯಿಂದ ಆರಿಸಿದ ಧಣಿಗಳ ಬೆಳ್ಳಿಲೋಟ ಎನ್ನುವ ಕತೆಯಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಹೊಳೆಯಲ್ಲಿ ಕಳೆದು ಹೋದ ಬೆಳ್ಳಿಲೋಟ ಸಿಕ್ಕಿದಾಗ ಅದನ್ನು ಕೈಯಲ್ಲಿ ಹಿಡಿದು ಚಿನ್ನಮ್ಮ ತನಗೆ ತಾನೆ ಹೇಳಿಕೊಳ್ಳುತ್ತಾ ಪ್ರತಿಕ್ರಿಯಿಸಿದ ರೀತಿಯಿದು.

ವಿವರಣೆ: ಹಿಂದೆ ಧಣಿಗಳ ಬೆಳ್ಳಿಲೋಟ ಕಳೆದು ಹೋಗಿ ಆ ಅಪವಾದ ಕುದುಪ ಚಿನ್ನಮ್ಮರ ಕುಟುಂಬದ ಮೇಲೆ ಬಂದಿತ್ತು. ಹೊಳೆಯಲ್ಲಿ ಹೂಳೆತ್ತುವಾಗ ಅದೇ ಬೆಳ್ಳಿ ಲೋಟ ಕುದುಪನಿಗೆ ಸಿಕ್ಕಿತ್ತು. ಚಿನ್ನಮ್ಮ ಕುದುಪನ ಕೈಯಿಂದ ಬೆಳ್ಳಿಲೋಟವನ್ನು ತೆಗೆದುಕೊಂಡು ತಿರುಗಿಸಿ ತಿರುಗಿಸಿ ನೋಡುತ್ತಾಳೆ. ಆ ಲೋಟದ ಪರಿಚಯ ಅವಳಿಗೆ ಚೆನ್ನಾಗಿತ್ತು. ತನ್ನ ಸಂಸಾರಕ್ಕೆ ಅಪವಾದವನ್ನು ತಂದಿದ್ದ, ತನ್ನ ಸಂಸಾರವನ್ನು ಕಷ್ಟಕ್ಕೀಡು ಮಾಡಿದ್ದ ಬೆಳ್ಳಿ ಲೋಟದ ಮೇಲೆ ಕೋಪ ಬಂದಿತ್ತು. ಆಗ ಈ ಮೇಲಿನಂತೆ ಹೇಳುತ್ತಾ ಬೆಳ್ಳಿಲೋಟವನ್ನು ನೀರಿನ ಮಡುವಿಗೆ ಎಸೆದು ಬಿಡುತ್ತಾಳೆ. ಬೆಳ್ಳಿ ಲೋಟದ ಮೇಲೆ ಆಕೆಗೆ ಇರುವ ಸಿಟ್ಟಿನ ತೀವ್ರತೆಯನ್ನು ಇಲ್ಲಿ ಗುರುತಿಸಬಹುದು.

9.ಬೆಳ್ಳಿಲೋಟಕ್ಕೆ ಇದಿಗ ಕುದುಪನಿಂದಾಗ ಜೀವ ಬಂದಂತಾಯಿತ್ತು.

ಆಯ್ಕೆ: ಎಚ್. ನಾಗವೇಣಿಯವರ 'ಮೀಯುವ ಆಟ' ಕೃತಿಯಿಂದ ಆರಿಸಿದ ಧಣಿಗಳ ಬೆಳ್ಳಿಲೋಟ ಎನ್ನುವ ಕತೆಯಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಹೂಳೆತ್ತುತ್ತಿದ್ದ ಕುದುಪನಿಗೆ ಬೆಳ್ಳಿ ಲೋಟ ಸಿಕ್ಕಿದಾಗ ಲೇಖಕರು ಹೇಳುವ ಮಾತಿದು.

ವಿವರಣೆ:ಕುದುಪ ಮತ್ತು ಚಿನ್ನಮ್ಮರು ಹೊಳೆಯಿಂದ ಹೂಳೆತ್ತುತ್ತಿರುವಾಗ ಕುದುಪನಿಗೆ ಅಷ್ಟುದಿನ ಹೊಳೆಯಲ್ಲಿ ಹುದುಗಿದ್ದ ಬೆಳ್ಳಿಲೋಟ ಸಿಕ್ಕುತ್ತದೆ. ಮಣ್ಣಿಡಿದು, ಮಂಕಾಗಿದ್ದ ಲೋಟವನ್ನು ಕುದುಪ ನೀರಿನಲ್ಲಿ ತೊಳೆದು ಸ್ವಚ್ಛಗೊಳಿಸಿದಾಗ, ಆ ಲೋಟ ಮಂಕನ್ನು ಕಳೆದುಕೊಂಡು ಸ್ವಲ್ಪ ಹೊಳಪಾಗಿ ಕಾಣಿಸುತ್ತದೆ. ಇದನ್ನು ವಿವರಿಸುವಾಗ ಲೇಖಕರು ವಿವರಿಸಿದ್ದಾರೆ. ಕಳ್ಳತನದ ಆರೋಪ ಹೊತ್ತಿದ್ದ ಕುದುಪನಿಗೆ ಬೆಳ್ಳಿಲೋಟ ಸಿಕ್ಕಿದ್ದು ಸಂತೋಷ. ಹಾಗಾಗಿ ಆತ ಲೋಟವನ್ನು ಎಳೆಮಗುವಿಗೆ ಸ್ನಾನ ಮಾಡಿಸುವಂತೆ ತೊಳೆದನೆಂದು , ಅವನಿಂದಾಗಿ ಆ ಲೋಟಕ್ಕೆ ಜೀವ ಬಂದಂತಾಯಿತು ಎಂದು ವಿವರಿಸಿದರು.

**ಐದಾರು ವಾಕ್ಯಗಳಲ್ಲಿ ಉತ್ತರಿಸಿ.**

1. ಚಿನ್ನಮ್ಮನ ಕುಟುಂಬ ಹೊಳೆಯ ಬಗ್ಗೆ ಅಸಹನೆ ಹೊಂದಬಾರದೆಂದು ಲೇಖಕಿ ಬಯಸುವುದೇಕೆ? ವಿವರಿಸಿ.

ಶಾಂಭವಿ ಹೊಳೆಯು ಇಡೀ ಕಥೆಯಲ್ಲಿ ಒಂದು ಜೀವಂತ ಪಾತ್ರವಾಗಿದೆ. ಚಿನ್ನಮ್ಮನ ಕುಟುಂಬಕ್ಕೆ ಹೊಳೆಯು ಧಣಿಗಳ ಬೆಳ್ಳಿಲೋಟವನ್ನು ಮುಳುಗಿಸಿಕೊಂಡಿದೆ ಮತ್ತು ಆ ಆಪಾದನೆಯನ್ನು ತಮ್ಮ ಕುಟುಂಬದ ಮೇಲೆ ಹಾಕಿದೆ ಎನ್ನುವ ಕೋಪವಿದೆ. ಮಗ ಗುಡ್ಡ ಈ ಕಾರಣಕ್ಕಾಗಿ ಪೆಟ್ಟು ತಿಂದಿದ್ದನು. ಚಿನ್ನಮ್ಮನಿಗೆ ಮುಂದಿನ ಮೂರು ವರ್ಷಗಳ ಕಾಲ ಪಡಿಯಿಲ್ಲದೇ ದುಡಿಯಬೇಕಾದ ಪರಿಸ್ಥಿತಿ. ಅಸಹಾಯಕತೆ, ಬಡತನ, ಅಪವಾದ ಈ ಎಲ್ಲಾ ಕಾರಣದಿಂದ ಚಿನ್ನಮ್ಮನ ಕುಟುಂಬ ಹೊಳೆಯ ಬಗ್ಗೆ ಅಸಹನೆ ಹೊಂದಿತ್ತು. ಆದರೆ ಲೇಖಕಿ ಚಿನ್ನಮ್ಮನ ಕುಟುಂಬ ಹೊಳೆಯ ಬಗ್ಗೆ ಅಸಹನೆ ಹೊಂದಬಾರದೆಂದು ಬಯಸುತ್ತಾರೆ. ಏಕೆಂದರೆ ಆ ಹೊಳೆ ಚಿನ್ನಮ್ಮನ ಕುಟುಂಬಕ್ಕೆ ಬೇಕೆಂದೇ ಈ ಅಪವಾದವನ್ನು ತಂದು ಹಾಕಿಲ್ಲ. ಹೊಳೆಗೂ ಚಿನ್ನಮ್ಮನ ಪುಟ್ಟ ಸಂಸಾರದ ಮೇಲೆ ವಾತ್ಸಲ್ಯವಿದೆ.

ಅದು ಆ ಕುಟುಂಬಕ್ಕೆ ಎಲ್ಲಾ ರೀತಿಯಲ್ಲೂ ಸಹಾಯ ಮಾಡುತ್ತಿದೆ.ಎಂತಹ ಹೊಡೆಯುವ ಮಳೆಯಲ್ಲಾದರೂ ಕುದುಪನ ಗಾಳದ ಬಾಯಿಗೆ ಮೀನುಗಳನ್ನು ಸಿಲುಕಿಸುತಿತ್ತು. ತಾನು ಹರಿದು ಬರುವಾಗಲೆಲ್ಲ ತನ್ನ ಸೆರಗಿನಂಚಿನಲ್ಲಿರುವ ತೋಟಗಳಿಂದ ಆಗಾಗ ಒಂದಷ್ಟು ಸೌದೆತೆಂಗಿನಕಾಯಿಗಳನ್ನು ಹೊತ್ತು ತಂದು ಕುದುಪನ ಕಣ್ಣಿಗೆ ಬೀಳಿಸುತಿತ್ತು. ಪಾತ್ರೆ– ಪಗಡಿ, ಕೋಳಿ–ಕುರಿ, ಏಣಿ–ದೋಣಿ, ರೀಪು–ಪಕ್ಕಾಸುಗಳನ್ನು ಹೊತ್ತು ತಂದು ಚಿನ್ನಮ್ಮ ಕುದುಪರ ಮಡಿಲಿಗೆ ಸುರಿಯುತ್ತದೆ. ಈ ಕುಟುಂಬದೊಂದಿಗೆ ಇಷ್ಟೊಂದು ಒಡನಾಟವಿಟ್ಟುಕೊಂಡಿರುವ ಹೊಳೆಯ ಬಗೆಗೆ ಬೆಳ್ಳಿಲೋಟದ ಕಾರಣಕ್ಕಾಗಿ ಅಸಹನೆ ಸಲ್ಲದೆಂದು ಲೇಖಕಿಯ ಅಭಿಪ್ರಾಯ.

2. ಧಣಿ ಹಾಗೂ ಹೊಳೆಯ ನಡುವಿನ ಸಮರವನ್ನು ಚಿತ್ರಿಸಿ.

ನಿಜಕ್ಕೂ ಧಣಿ ವೆಂಕಪ್ಪಯ್ಯನವರ ಮಾತಿನಂತೆ ಹೇಳುವುದಾದರೆ ಗುಡ್ಡ ಪಾತ್ರೆ ಉಜ್ಜುತ್ತಿದ್ದುದು ಹೊಳೆಯ ಸೆರಗಲ್ಲಿ ಅಲ್ಲ. ವೆಂಕಪ್ಪಯ್ಯನವರ ತೆಂಗಿನ ತೋಟದ ಅಂಚಿನಲ್ಲಿ. ಆ ಹೊಳೆ ಆಡಿದ್ದೇ ಆಟ, ಹೂಡಿದ್ದೇ ಹೂಟ. ಮಳೆಗಾಲದಲ್ಲಿ ತೆಂಗಿನ ತೋಟದ ಅಂಚನ್ನು ಹೊಳೆಯು ಕೊಚ್ಚಿ ಹಾಕುತ್ತಿದ್ದರಿಂದ ಧಣಿ ವೆಂಕಪ್ಪಯ್ಯನವರು ಆ ಹೊಳೆಯನ್ನು "ಮಳೆಗಾಲ

ಬಂದರೆ ಸಾಕು ಈ ಬಿಕನಾಸಿ ಹೊಳೆ ಊರಿಡೀ ತನ್ನ ಸೆರಗನ್ನೇ ಹಾಸಿ ಬಿಡುತ್ತದೆ..., ಎಷ್ಟಗಲ ಸೆರಗು ಹಾಸಿದರೂ ಇನ್ನಷ್ಟು ದೂರಕ್ಕೆ ಹಾಸಬೇಕೆಂಬ ಚಟ ಇದಕ್ಕೆ...., ಎಂದು ಮೂದಲಿಸುತ್ತಿದ್ದರು. ಹೊಳೆಗೆ ಬಾಯಿ ಬರದಿದ್ದರೂ ಮಳೆಗಾಲ ಬಂದೊಡನೆ ಬರೀ ಕ್ರಿಯೆಯಲ್ಲೇ ತನ್ನ ವ್ಯಾಪ್ತಿ,ತನ್ನ ಪರಿಹಾರ, ತನ್ನ ಬಲ ಎಷ್ಟು ಎಂಬುದನ್ನು ಮನವರಿಕೆ ಮಾಡಿ ಧಣಿಗಳಿಗೆ ಕಿರಿಕಿರಿ ಮೂಡಿಸುತಿತ್ತು. ಹೊಳೆಯ ಈ ಉಪಟಳ ತಾಳಲಾರದೆ ಧಣಿಯವರು ಹೊಳೆ ಸೊರಗುವ ಕಾಲಕ್ಕೆ ತನ್ನ ಮೇಲುಸ್ತುವಾರಿಯಲ್ಲಿ ನದಿ ಸೆರಗನ್ನು ಆಚೆಗೆ ದೂಡುವಂತೆ ಪಾದೆಕಲ್ಲು, ಮುರಕಲ್ಲಿನ ಗಟ್ಟಿ ಪಂಚಾಂಗ ತೋಟಕ್ಕೂ , ನದಿಸೆರಗಿಗೂ ನಡುವೆ ದರೆ ಎಬ್ಬಿಸಿ ಎತ್ತರಿಸುತ್ತಾರೆ. ಪ್ರತಿ ವರ್ಷ ವೆಂಕಪ್ಪಯ್ಯ ಗದ್ದೆಯಂಚನ್ನು ನಾಲ್ಕು, ಐದು ಅಡಿ ಎತ್ತರಿಸಿದರೂ ಬೇಸಿಗೆಯಲ್ಲಿ ಅದನ್ನು ನೋಡಿಕೊಂಡು ಸುಮ್ಮನಿರುತ್ತಿದ್ದ ಹೊಳೆ, 'ಗದ್ದೆಯಲ್ಲಿ ಬಿತ್ತುವುದನ್ನು ಮರಳ ದಿನ್ನೆ ಮೇಲೆ ಬಿತ್ತಿದೆ೦ಯಲ್ಲವಾ ಮಾರಾ೦ಯಾ..?' ಎಂದು ಮನಸ್ಸಿನಲ್ಲೇ ಹೇಳಿಕೊಳ್ಳುವ ಹಾಗೆ ಮಳೆಗಾಲದಲ್ಲಿ ಮತ್ತೆ ಆ ದರೆಯನ್ನು ಕೆಡವುತಿತ್ತು. ಬೇಸಿಗೆಯಲ್ಲಿ ವೆಂಕಪ್ಪಯ್ಯ ಹೊಳೆಗೆ ಅಡ್ಡಲಾಗಿ ದರೆಯನ್ನು ಎತ್ತರಿಸುವುದು, ಮಳೆಗಾಲದಲ್ಲಿ ಹೊಳೆ ಅದನ್ನು ಕೊಚ್ಚಿಕೊಂಡು ಹೋಗುವುದು ಮಾಮೂಲಾಗಿತ್ತು. ಈ ರೀತಿ ಧಣಿ ಹಾಗೂ ಹೊಳೆಯ ನಡುವಿನ ಸಮರ ಮುಂದುವರಿಯುತಿತ್ತು.

3. ಮುಸುರೆ ಪಾತ್ರೆಗಳು ನೀರು ಪಾಲಾದುದು ಹೇಗೆ?ಅವುಗಳನ್ನು ಮೇಲೆತ್ತಲು ಮಾಡಿದ ಪ್ರಯತ್ನಗಳೇನು?

ಕುದುಪ ಚಿನ್ನಮ್ಮರ ಮಗ ಗುಡ್ಡ ಶಾಂಭವಿ ಹೊಳೆ೦ಯ ಅಂಚಿನಲ್ಲಿ ಧಣಿಗಳ ಮನೆಯ ಮುಸುರೆ ಪಾತ್ರೆಯನ್ನು ತಿಕ್ಕುತ್ತಿದ್ದ. ಆತನಿಗೆ ಹೊಳೆಯ ಅಂಚು ತುಳುವ ಹಲಸಿನಂತೆ ಮೆತ್ತಗಾಗಿರುವುದು ತಿಳಿದಿರಲಿಲ್ಲ. ಶಾಂಭವಿ ಹೊಳೆ ರಭಸವಾಗಿ ಹರಿಯುತ್ತಿದೆ. ಗುಡ್ಡ ಹಿಂದಿನ ದಿನ ರಾತ್ರಿಯ ಹರಿಕಥೆ ಪ್ರಸಂಗವನ್ನು ನೆನಪಿಸಿಕೊಳ್ಳುತ್ತಾ ಪಾತ್ರೆ ತೊಳೆಯುತ್ತಿದ್ದಾಗ ಕಾಲಡಿಯ ಮಣ್ಣು ಕುಸಿದು, ಪಾತ್ರೆಗಳ ಸಮೇತ ನೀರಿಗೆ ಬಿದ್ದನು. ಎರಡು ಕಂಚಿನ ಕೊಳಗ, ಎರಡು ಹಿತ್ತಾಳೆ ಗಿಂಡೆ, ಹತ್ತು ಹಿತ್ತಾಳೆ ಲೋಟ, ಎರಡು ಚೊಂಬು, ಆರು ಮರದ ಸೌಟು, ಎರಡು ಹಿತ್ತಾಳೆ ಸೌಟು, ಹತ್ತು ಕಂಚಿನ ಬಟ್ಟಲು,

ಎಂಟು ಹಿತ್ತಾಳೆ ತಟ್ಟೆ, ಒಂದು ಬಾಣಲೆ ನೀರು ಪಾಲಾದವು ಹಾಗೂ ಧಣಿಗಳ ಪತ್ನಿಗೆ ಅವರಪ್ಪ ಕೊಟ್ಟ ಒಂದು ಬೆಳ್ಳಿಲೋಟವೂ ಇದರ ಜೊತೆಗೆ ಸೇರಿತ್ತು. ಗುಡ್ಡ ಚಿಕ್ಕವನಾದರೂ ಚೆನ್ನಾಗಿ ಈಜು ಬಲ್ಲವನಾಗಿದ್ದ. ಈಜಿಕೊಂಡು ಮೇಲೆ ಬಂದವನು ಅಳುತ್ತಾ ಅಪ್ಪ ಕುದುಪನತ್ತ ಬಂದ.ಧಣಿಗಳ ತೋಟದಲ್ಲಿ ತೆಂಗಿನ ಬುಡ ಬಿಡಿಸುತ್ತಿದ್ದ ಕುದುಪನಿಗೆ ಮಗನ ಮಾತು ಕೇಳಿ ಎದೆ ಬಡಿತ ನಿಂತಂತಾಯಿತು. ಬಂದು ನೋಡಿದರೆ ಮುಸುರೆ ಪಾತ್ರೆಗಳೆಲ್ಲವೂ ನೀರು ಪಾಲಾಗಿತ್ತು. ಧಣಿಗಳಿಗೇನಾದರೂ ಈ ವಿಷಯ ತಿಳಿದರೆ ಅವರ ಸಿಟ್ಟಿನ ಭರಕ್ಕೆ ತಾವೆಲ್ಲರೂ ಹೊಳೆ ಪಾಲಾಗುವುದು ಖಂಡಿತ ಎಂದು ಆಲೋಚಿಸಿದವನೆ ತಟ್ಟನೆ ಮೈಯ ಬಟ್ಟೆಬರೆಗಳನ್ನೆಲ್ಲ ಜಾರಿಸಿ ಎಸೆದು ಹೊಳೆ0ಯಲ್ಲಿ ಮುಳುಗಿ ನೆಲಕಚ್ಚಿರುವ ಪಾತ್ರೆಗಳನ್ನು ಹುಡುಕುತ್ತಾನೆ. ಕುಸಿದ ಮಣ್ಣಡಿ0ಯಲ್ಲಿ ಸಿಗುವಷ್ಟು ಪಾತ್ರೆಗಳು ಸಿಕ್ಕವು. ಆದರೆ ಏನು ಮಾಡಿದರೂ ಧಣಿಗಳ ಮನೆ0ಯ ಬೆಳ್ಳಿಲೋಟ ಸಿಗಲಿಲ್ಲ. ಕೊನೆಗೆ ಈ ಕುಟುಂಬವೇ ಧಣಿಗಳಿಂದ ಅಪವಾದಕ್ಕೆ ಗುರಿ0ಯಾಯಿತು.

4. ಬೆಳ್ಳಿಲೋಟ ಕಂಡಾಗ ಧಣಿಯಲ್ಲಿ ಆತಂಕ , ಗಾಬರಿ, ಭಯ ಉಂಟಾಗಲು ಕಾರಣವೇನು?

ಕುದುಪ ಯಾವುದೋ ಒಂದು ಕುಲಗೆಟ್ಟ ಲೋಟವನ್ನು ನೀರೊಳಗೆ ಅದ್ದಿ ತೆಗೆದು ಚಿನ್ನಮ್ಮನ ಕೈಗೆ ಕೊಡುವುದನ್ನು ಧಣಿಗಳು ಮೌನವಾಗಿಯೇ ದಿಟ್ಟಿಸಿದರು. ಮಾನಗೆಟ್ಟ ಈ ಹುಚ್ಚು ಹೊಳೆ ಯಾವುದೋ ಮಳೆಗಾಲದಲ್ಲಿ ಯಾರದ್ದೋ ಮನೆ, ಮಟ ಮುಳುಗಿಸಿ ಹೊತ್ತು ತಂದಿರುವ ಲೋಟವಿರಬೇಕೆಂದು ಯೋಚಿಸಿದರು. ಈ ಹಾಳುಲೋಟದ ಜಗತ್ತಲ್ಲೇ ಮುಳುಗಿ ಹೋದ ಗಂಡ-ಹೆಂಡಿರ ಚಲನವಲನವನ್ನು ಕಿರಿದು ಕಣ್ಣಿಂದ ಮತ್ತಷ್ಟು ದಿಟ್ಟಿಸಿ ನೋಡಿದರು. ನಿಧಾನಕ್ಕೆ ಕೂತಲ್ಲಿಂದ ಎದ್ದು ಬಂದರು. ಹಾಗೇ ಸದ್ದಿಲ್ಲದೆ ಬಂದ ಧಣಿಗಳು ನೆರಳಲ್ಲೇ ನಿಂತು ತನ್ನೆದುರು ನಡೆಯುತ್ತಿದ್ದ, ವ್ಯಾಪಾರವನ್ನು ಕಿರುಗಣ್ಣಿನಿಂದ ಗಮನಿಸುತ್ತಿದ್ದಂತೆ ಅವರ ಎದೆ ಬಡಿತದ ಲಯ ತಪ್ಪತೊಡಗಿತು. ಅವರ ಒಡಲ ಸಮಸ್ತ ವ್ಯವಹಾರಗಳು ಒಂದರೆಗಳಿಗೆ ಸ್ತಬ್ಧಗೊಂಡಂತಾಯಿತು. ಚಿನ್ನಮ್ಮ ತನ್ನ ಕೈಲಿದ್ದ ಲೋಟ ತಿರುಗಿಸುತ್ತಿದ್ದಂತೆ ಅವರನ್ನೇ ಆಕೆ ತಿರುಗಿಸಿದಂತಾಯಿತು. ಏಕೆಂದರೆ ಆಕೆಯ ಕೈಲಿದ್ದುದು ತಮ್ಮ ಮನೆಯದೇ ಬೆಳ್ಳಿಲೋಟವೆಂಬ ಅರಿವು ಅವರಿಗೆ ಬಂತು.

ಅದರ ಕಂಟ ಏಳು ಎಸಳುಗಳ ಹೂವಿನಂತಿರುವುದು. ಕಳೆದ ನಲ್ವತ್ತು ವಸಂತಗಳಿಂದ ತಮ್ಮ ದಾಂಪತ್ಯ ಜೀವನಕ್ಕೆ ಮೂಕ ಸಾಕ್ಷಿಯಾಗಿದ್ದ ಲೋಟವಿದು ಎಂಬಅರಿವು ಮೂಡಿ ಭೀತರಾದರು. ಕುದುಪ ಚಿನ್ನಮ್ಮ ಗುಡ್ಡರ ಮೇಲೆ ಕಳ್ಳತನದ ಆಪಾದನೆ ಹೊರಿಸಿದ್ದ ತಮ್ಮ ಬಗ್ಗೆ ಆತಂಕ ಗಾಬರಿ, ಭಯ ಉಂಟಾಯಿತು.

5. ಚಿನ್ನಮ್ಮ ಬೆಳ್ಳಿಲೋಟವನ್ನು ಮತ್ತೆ ಹೊಳೆಗೆ ಎಸೆಯಲು ಕಾರಣವೇನು? ವಿಶ್ಲೇಷಿಸಿ.

ಕುದುಪ ಚಿನ್ನಮ್ಮನ ಕೈಲಿದ್ದ ಬೆಳ್ಳಿಲೋಟವನ್ನೊಮ್ಮೆ ಧಣಿಯವರ ಪರಿಧಿಗೆ ಒಪ್ಪಿಸಿಬಿಡಬೇಕೆಂದು ಕಾತುರನಾಗಿ ಆ ಲೋಟ ಚಿನ್ನಮ್ಮನಿಂದ ತನ್ನ ಕೈಗೆ ಹಸ್ತಾಂತರಗೊಳ್ಳುವ ಕ್ಷಣಕ್ಕಾಗಿ ಕಾಯುತ್ತಿದ್ದ. ಬೆಳ್ಳಿಲೋಟ ಸಿಕ್ಕಿದ್ದು ಆತನಿಗೆ ಅತ್ಯಂತ ಸಂತೋಷವಾಗಿತ್ತು. ಆದರೆ ಚಿನ್ನಮ್ಮ ಅದನ್ನು ತಿರುಗಿಸಿ ನೋಡುತ್ತಿದ್ದಂತೆ ಆಕೆಯ ಒಡಲಲ್ಲಿ ಅದೆಷ್ಟೋ ಭಾವನೆಗಳು ಗಿರಕಿ ಹೊಡೆಯತೊಡಗಿದವು. ತನ್ನ ಬೆವರಿನ ಬೆಲೆ ಕಳೆದ, ಕಳ್ಳತನದ ಕಿರೀಟವನ್ನು ತನ್ನ ಮುರುಕಲು ಗುಡಿಸಲ ಚಾವಣಿಗೆ ಜೋಡಿಸಿದ ಆ ಲೋಟದ ಮೇಲೆ ವಿಪರೀತ ಕೋಪ ಬರುತ್ತದೆ. ಲೋಟ ಬೆಳ್ಳಿಯದ್ದಾದರೇನು ಗುಣ ಮಣ್ಣಿಗಿಂತಲೂ ಬುರ್ನಾಸು, ಮೂರ್ಕಾಸಿನದು ಎಂದು ಯೋಚಿಸುತ್ತಾಳೆ. ಈ ಬೆಳ್ಳಿಲೋಟದಿಂದಾಗಿ ತನ್ನ ಕುಟುಂಬ ಇದುವರೆಗೆ ಅನುಭವಿಸಿದ ನೋವು, ಅವಮಾನ ಪಟ್ಟ ಪಾಡು, ಪರಿತಾಪಗಳೆಲ್ಲ ಚಿನ್ನಮ್ಮನ ಮನಸ್ಸಿನಲ್ಲಿ ದಿಗಿಣ ತೆಗೆದು ಮೇಲೆದ್ದು ಬಂದು ಆಕೆಯ ಯೋಚನಾಶಕ್ತಿಯನ್ನು ಕ್ಷಣಕಾಲ ಕಸಿದುಕೊಂಡಿತು.ಒಡಲ ಪಿತ್ತ ಒಂದರೆಕ್ಷಣ ಕೆರಳಿದಂತಾಯಿತು. ಪೂರ್ವಾಭಿಮುಖವಾಗಿ ನಡೆದು ದೂರದಲ್ಲಿದ್ದ ಹೊಳೆಯ ಆಳ ಮಡುವಿನತ್ತ ಬೆಳ್ಳಿಲೋಟವನ್ನು ಎಸೆದುಬಿಟ್ಟಳು. ಒಂದು ವೇಳೆ ಬೆಳ್ಳಿಲೋಟವನ್ನು ಧಣಿಗಳಿಗೆ ಹಿಂದಿರುಗಿಸಿದ್ದರೆ ಅವಳ ಕುಟುಂಬ ಆಪಾದನೆಯಿಂದ ಪಾರಾಗಬಹುದಿತ್ತು.ಆದರೆ ಅದುವರೆಗೆ ಆ ಕುಟುಂಬ ಅನುಭವಿಸಿದ ಸಂಕಟಕ್ಕೆ ಪರಿಹಾರ ಸಿಗಲಾರದು. ಲೋಟ ಕದ್ದ ಆಪಾದನೆಯಿಂದ ಅನುಭವಿಸಿದ ಯಾತನೆಗೆ ಬೆಲೆ ಕಟ್ಟಲು ಸಾಧ್ಯವಿಲ್ಲ.ತನ್ನ ಕುಟುಂಬ ಆಪಾದನೆಯಿಂದ ಹೊರಬರುವುದಕ್ಕಿಂತ ಆ ಲೋಟವನ್ನು ಮತ್ತೆ ನೀರಿಗೆ ಎಸೆಯುವ ಮೂಲಕ ತನ್ನ ಸಿಟ್ಟನ್ನು ಹೊರಹಾಕುತ್ತಾಳೆ. ಈ ಮೂಲಕ ತಮ್ಮ ಕುಟುಂಬದ ಮೇಲಿನ

ಅಪವಾದವನ್ನು ನಿವಾರಿಸಿಕೊಳ್ಳುವ ಅವಕಾಶ ಇದ್ದರೂ ಚೆನ್ನಮ್ಮ ಆ ಸಾಧ್ಯತೆಯನ್ನು ನಿರಾಕರಿಸುತ್ತಾಳೆ.

====0====

# ಬದುಕನ್ನು ಪ್ರೀತಿಸಿದ ಸಂತ

**ಎಚ್. ಆರ್. ರಾಮಕೃಷ್ಣರಾವ್**

**ಸಂದರ್ಭ ಸಹಿತ ವಿವರಿಸಿ:**

1. ಭಗವಂತನ ಸೃಷ್ಟಿಯಲ್ಲಿರುವವರೆಲ್ಲ ಆತನ ಬಂಧುಗಳೆ.

ಆಯ್ಕೆ: ಈ ಮಾತನ್ನು ಪ್ರೊ.ಎಚ್.ಆರ್. ರಾಮಕೃಷ್ಣರಾವ್ ಅವರು ಬರೆದ ಬದುಕನ್ನು ಪ್ರೀತಿಸಿದ ಸಂತ ಎಂಬ ಪಾಠದಿಂದ ಆರಿಸಲಾಗಿದೆ.

ಸಂದರ್ಭ: ಅಬ್ದುಲ್ ಕಲಾಂ ಅವರ ವ್ಯಕ್ತಿತ್ವವನ್ನು ಕುರಿತು ವಿವರಿಸುವಾಗ ಈ ಮಾತು ಬಂದಿದೆ.

ವಿವರಣೆ : ವಿಜ್ಞಾನ ತಂತ್ರಜ್ಞಾನಗಳ ಸಂಕೀರ್ಣ ಪ್ರಪಂಚದಲ್ಲಿ ಅಬ್ದುಲ್ ಕಲಾಂ ಅವರು ತಮ್ಮನ್ನು ತಾವೇ ತೊಡಗಿಸಿಕೊಂಡದ್ದು ಯಾವುದೋ ಪ್ರಶಸ್ತಿ, ಪುರಸ್ಕಾರ,ಹಣ ಗಳಿಸಲಿಕ್ಕಲ್ಲ. "ಭಗವಂತನ ಸೃಷ್ಟಿಯಲ್ಲಿರುವವರೆಲ್ಲ ಆತನ ಬಂಧುಗಳೆ; ಯಾರು ಅವರುಗಳ ಸೇವೆ ಮಾಡುತ್ತಾರೋ ಅವರೇ ದೇವರಿಗೆ ಹತ್ತಿರವಾದವರು" ಎಂಬುದೇ ಇವರ ಬದುಕಿನ ಸೂತ್ರವಾಗಿತ್ತು ಎನ್ನುವಾಗ ಈ ಮೇಲಿನ ಮಾತು ಬಂದಿದೆ.

2. ನೀನು ಯಾವ ಸ್ಕೂಲಿನಲ್ಲಿ ಓದುತ್ತಿದ್ದೀಯೇ?

ಆಯ್ಕೆ: ಈ ಮಾತನ್ನು ಪ್ರೊ.ಎಚ್.ಆರ್. ರಾಮಕೃಷ್ಣರಾವ್ ಅವರು ಬರೆದ ಬದುಕನ್ನು ಪ್ರೀತಿಸಿದ ಸಂತ ಎಂಬ ಪಾಠದಿಂದ ಆರಿಸಲಾಗಿದೆ.

ಸಂದರ್ಭ: ಸಿಕಂದರಾಬಾದಿನ ಶಾಲಾ ಬಾಲಕಿಯನ್ನು ಕಲಾಂ ಅವರು ಪ್ರಶ್ನಿಸಿದ ಸಂದರ್ಭವಿದು.

ವಿವರಣೆ: ಸಿಕಂದರಾಬಾದಿನ ಬಾಲಕಿಯೊಬ್ಬಳು ತಯಾರಿಸಿದ್ದ ಪೃಥ್ವಿ ಕ್ಷಿಪಣಿಯ ಮಾದರಿ ಚಿತ್ರವನ್ನು ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಇದನ್ನು ಹೆಮ್ಮೆಯಿಂದ ತಿಳಿಸಿದ ಉಪನಿರ್ದೇಶಕರಿಗೆ ಕಲಾಂ ಅವರು ಆ ಹುಡುಗಿಯನ್ನು ಇಲ್ಲಿಗೇಕೆ ಕರೆ ತರಬಾರದು? ಆ ಮಗು ನಿಜವಾದ ಕ್ಷಿಪಣಿಯನ್ನು ನೋಡಲಿ ಎನ್ನುತ್ತಾರೆ. ಮುಂದೆ ಆ ಹುಡುಗಿಯನ್ನು ಇಲಾಖೆಯ ಕಾರಿನಲ್ಲಿ ಕರೆದುಕೊಂಡು ಹೋಗಿ ಪೃಥ್ವಿಯನ್ನು ತೋರಿಸಿದರು. ಕ್ಯಾಂಟೀನಿನಲ್ಲಿ ತಂತ್ರಜ್ಞರೊಡನೆ ಸಹ ಭೋಜನ, ಮೀಟಿಂಗ್ ಮಧ್ಯದಲ್ಲಿಯೇ

ಹೊರಕ್ಕೆ ಬಂದ ಕಲಾಂ ಅವರು ಆ ಹುಡುಗಿಯನ್ನು ಕುರಿತು ಈ ಮೇಲಿನಂತೆ ಪ್ರಶ್ನಿಸಿ ಮಾತನಾಡುತ್ತಾರೆ.

3. ವಿಜ್ಞಾನದ ಅಡಿಪಾಯವೇ ಪ್ರಶ್ನೆ ಕೇಳುವುದು.

ಆಯ್ಕೆ: ಈ ಮಾತನ್ನು ಪ್ರೊ.ಎಚ್.ಆರ್. ರಾಮಕೃಷ್ಣರಾವ್ ಅವರು ಬರೆದ ಬದುಕನ್ನು ಪ್ರೀತಿಸಿದ ಸಂತ ಎಂಬ ಪಾಠದಿಂದ ಆರಿಸಲಾಗಿದೆ.

ಸಂದರ್ಭ: ಕಲಾಂ ಅವರು ಹುಡುಗನೊಬ್ಬನ ಪ್ರಶ್ನೆಗೆ ಉತ್ತರಿಸುವ ಸಂದರ್ಭವಿದು.

ವಿವರಣೆ: ಹುಡುಗನೊಬ್ಬನು "ಭೂಮಿಯ ಮೇಲಿನ ಮೊದಲ ವಿಜ್ಞಾನಿ ಯಾರಾಗಿರಬಹುದು? ದಯವಿಟ್ಟು ಹೇಳಿ" ಎಂದು ಕಲಾಂ ಅವರನ್ನು ಪ್ರಶ್ನಿಸಿದನು. ಆಗ ಕಲಾಂ ಅವರು "ನನಗನ್ನಿಸುತ್ತೆ ವಿಜ್ಞಾನ ಹುಟ್ಟಿದ್ದು ಮತ್ತು ಈಗಲೂ ಜೀವಂತವಾಗಿರುವುದು ಪ್ರಶ್ನೆಗಳಿಂದ ಎನ್ನುತ್ತಾ ಈ ಮೇಲಿನ ಮಾತನ್ನು ಆ ಹುಡುಗನಿಗೆ ಹೇಳಿದರು.

4. ಮಗುವೇ ಮೊದಲ ವಿಜ್ಞಾನಿ

ಆಯ್ಕೆ: ಈ ಮಾತನ್ನು ಪ್ರೊ.ಎಚ್.ಆರ್. ರಾಮಕೃಷ್ಣರಾವ್ ಅವರು ಬರೆದ ಬದುಕನ್ನು ಪ್ರೀತಿಸಿದ ಸಂತ ಎಂಬ ಪಾಠದಿಂದ ಆರಿಸಲಾಗಿದೆ.

ಸಂದರ್ಭ: ಕಲಾಂ ಅವರು ಹುಡುಗನೊಬ್ಬನ ಪ್ರಶ್ನೆಗೆ ಉತ್ತರಿಸುವ ಸಂದರ್ಭವಿದು.

ವಿವರಣೆ: ಹುಡುಗನೊಬ್ಬನು ಭೂಮಿಯ ಮೇಲಿನ ಮೊದಲ ವಿಜ್ಞಾನಿ ಯಾರಾಗಿರಬಹುದು? ದಯವಿಟ್ಟು ಹೇಳಿ" ಎಂದು ಕಲಾಂ ಅವರನ್ನು ಪ್ರಶ್ನಿಸಿದನು. ಆಗ ಕಲಾಂ ಅವರು "ನನಗನ್ನಿಸುತ್ತೆ ವಿಜ್ಞಾನ ಹುಟ್ಟಿದ್ದು ಮತ್ತು ಈಗಲೂ ಜೀವಂತವಾಗಿರುವುದು ಪ್ರಶ್ನೆಗಳಿಂದ ಎನ್ನುತ್ತಾರೆ.ವಿಜ್ಞಾನದ ಅಡಿಪಾಯವೇ ಪ್ರಶ್ನೆ ಕೇಳುವುದು. ಕೊನೆಯಿಲ್ಲದಷ್ಟು ಪ್ರಶ್ನೆಗಳನ್ನು ಕೇಳುವವರು ಮಕ್ಕಳೇ. ಹಾಗಾಗಿ ಮಗುವೇ ಮೊದಲ ವಿಜ್ಞಾನಿ ಎನ್ನುತ್ತಾ ಕಲಾಂ ಈ ಮೇಲಿನ ಮಾತನ್ನು ಆ ಹುಡುಗನಿಗೆ ಹೇಳಿದರು.

5. ವ್ಯಕ್ತಿಗಿಂತ ರಾಷ್ಟ್ರ ದೊಡ್ಡದು.

ಆಯ್ಕೆ: ಈ ಮಾತನ್ನು ಪ್ರೊ.ಎಚ್.ಆರ್. ರಾಮಕೃಷ್ಣರಾವ್ ಅವರು ಬರೆದ ಬದುಕನ್ನು ಪ್ರೀತಿಸಿದ ಸಂತ ಎಂಬ ಪಾಠದಿಂದ ಆರಿಸಲಾಗಿದೆ.

ಸಂದರ್ಭ: ಅಬ್ದುಲ್ ಕಲಾಂ ರಾಷ್ಟ್ರಪತಿ ಸ್ಥಾನಕ್ಕೆ ಆಯ್ಕೆಯಾದಾಗ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಂದರ್ಭವಿದು.

ವಿವರಣೆ: ಅಬ್ದುಲ್ ಕಲಾಂ ಅವರು ರಾಷ್ಟ್ರಪತಿ ಸ್ಥಾನಕ್ಕೆ ಆಯ್ಕೆಯಾದ ಸುದ್ದಿ ಬಂದಾಗ ಅವರು ಚೆನ್ನೈನಲ್ಲಿದ್ದರು. ಪತ್ರಿಕಾಗೋಷ್ಠಿಯನ್ನು ಮಾಧ್ಯಮದವರು ಏರ್ಪಡಿಸಿದ್ದರು. ತಾವು ಸಂದರ್ಶಿಸುತ್ತಿರುವುದು ಒಬ್ಬ ರಾಜಕಾರಣಿಯನ್ನಲ್ಲವೆಂಬುದನ್ನು ಮಾಧ್ಯಮದವರು ಮರೆತಂತಿತ್ತು. ಆಗ ಅಬ್ದುಲ್ ಕಲಾಂ "ಎಲ್ಲರೂ ಗಮನವಿಟ್ಟು ಕೇಳಿ. ಇದುವರೆಗೆ ಏನಾಗಿದೆಯೋ ಅದೆಲ್ಲ ಒಳ್ಳೆಯದಕ್ಕೆ? ಈಗ ಆಗುತ್ತಿರುವುದೂ ಒಳ್ಳೆಯದಕ್ಕಾಗಿಯೇ ಎನ್ನುತ್ತಾರೆ. ಆ ಸಂದರ್ಭದಲ್ಲಿ ಭಗವದ್ಗೀತೆಯ ಪ್ರಸಿದ್ಧ ಸಾಲುಗಳನ್ನು ಉದ್ಧರಿಸುತ್ತಾ ಈ ಮೇಲಿನ ಮಾತನ್ನು ಹೇಳುತ್ತಾರೆ.

6. ಮಿ. ಪ್ರೆಸಿಡೆಂಟ್ ನಿಮ್ಮ ಯಶಸ್ಸಿನ ಗುಟ್ಟೇನು?

ಆಯ್ಕೆ: ಈ ಮಾತನ್ನು ಪ್ರೊ.ಎಚ್.ಆರ್. ರಾಮಕೃಷ್ಣರಾವ್ ಅವರು ಬರೆದ ಬದುಕನ್ನು ಪ್ರೀತಿಸಿದ ಸಂತ ಎಂಬ ಪಾಠದಿಂದ ಆರಿಸಲಾಗಿದೆ.

ಸಂದರ್ಭ: ಕಲಾಂ ಅವರನ್ನು ಭೇಟಿಯಾದ ಮಕ್ಕಳು ಅವರನ್ನು ಪ್ರಶ್ನಿಸಿದ ಸಂದರ್ಭವಿದು.

ವಿವರಣೆ: ಮಕ್ಕಳು "ಮಿ. ಪ್ರೆಸಿಡೆಂಟ್, ನಿಮ್ಮ ಯಶಸ್ಸಿನ ಗುಟ್ಟೇನು?" ಎಂದು ಕೇಳಿದರು. ಅದಕ್ಕೆ ಕಲಾಂ ಯಶಸ್ಸಿನ ಪಂಚಾಕ್ಷರಿ ಮಂತ್ರವನ್ನು ಹೀಗೆ ಹೇಳುತ್ತಾರೆ. ಕುತೂಹಲ, ಆಲೋಚನಾಶಕ್ತಿ, ಜ್ಞಾನ(ತಿಳಿವು), ಕಷ್ಟಪಟ್ಟು ಕೆಲಸ ಮಾಡುವುದು ಮತ್ತು ಗುರಿ ಸಾಧಿಸುವ ಛಲ. ಇವು ನನ್ನ ಯಶಸ್ಸಿನ ಗುಟ್ಟು ಎಂದರು.

7. ಎಲ್ಲ ಮಕ್ಕಳ ಕನಸೂ ಒಂದೇ.

ಆಯ್ಕೆ: ಈ ಮಾತನ್ನು ಪ್ರೊ.ಎಚ್.ಆರ್. ರಾಮಕೃಷ್ಣರಾವ್ ಅವರು ಬರೆದ ಬದುಕನ್ನು ಪ್ರೀತಿಸಿದ ಸಂತ ಎಂಬ ಪಾಠದಿಂದ ಆರಿಸಲಾಗಿದೆ.

ಸಂದರ್ಭ: ಅಬ್ದುಲ್ ಕಲಾಂ ಅವರು ಅಧ್ಯಕ್ಷರಾದ ತರುವಾಯ ಮಕ್ಕಳನ್ನು ಕುರಿತು ಮಾತನಾಡಿದ ಸಂದರ್ಭವಿದು.

ವಿವರಣೆ: ಅಧ್ಯಕ್ಷರಾದ ತರುವಾಯ ಲಕ್ಷಾಂತರ ಮಕ್ಕಳನ್ನು ಅಬ್ದುಲ್ ಕಲಾಂ ಭೇಟಿಮಾಡಿದ್ದಾರೆ. ಬಡವರಾಗಿರಲಿ ಅಥವಾ ಶ್ರೀಮಂತರಾಗಿರಲಿ,

ಎಲ್ಲ ಮಕ್ಕಳ ಕನಸೂ ಒಂದೆ; "ಅವರೆಲ್ಲರೂ ಶಾಂತಿ, ಸಮೃದ್ಧಿ ಮತ್ತು ಸುಭದ್ರ ಭಾರತದಲ್ಲಿ ಬದುಕಬಯಸುತ್ತಾರೆ.

**ಒಂದು ವಾಕ್ಯದಲ್ಲಿ ಉತ್ತರಿಸಿ:**

1. ದೇವರಿಗೆ ಹತ್ತಿರವಾದವರು ಯಾರು?

ಭಗವಂತನ ಸೃಷ್ಟಿಯಲ್ಲಿರುವವರೆಲ್ಲ ಆತನ ಬಂಧುಗಳೆ; ಯಾರು ಅವರುಗಳ ಸೇವೆ ಮಾಡುತ್ತಾರೋ ಅವರೇ ದೇವರಿಗೆ ಹತ್ತಿರವಾದವರು.

2. ಚಿಪ್ ಎಂದರೇನು?

ಅಗತ್ಯ ಮಾಹಿತಿಗಳನ್ನು ಕ್ರೋಡೀಕರಿಸಿರುವ ಸೂಕ್ಷ್ಮ ಎಲೆಕ್ಟ್ರಾನಿಕ್ ಸಾಧನವೇ ಚಿಪ್.

3. ಕಲಾಂ ಅವರ ಆತ್ಮಚರಿತ್ರೆಯ ಹೆಸರೇನು?

ಕಲಾಂ ಅವರ ಆತ್ಮಚರಿತ್ರೆಯ ಹೆಸರು "ವಿಂಗ್ಸ್ ಆಫ್ ಫೈರ್".

4. ಕಲಾಂ ಅವರ ಕ್ರಿಯಾಶೀಲತೆಗೆ ಸಾಕ್ಷಿ ಯಾವುದು?

ಅಂತಾರಾಷ್ಟ್ರೀಯ ಕ್ಷಿಪಣಿ ಕೇಂದ್ರವಾಗಿ ಹೈದರಾಬಾದಿನ ಸಮೀಪದ ಬರಡು ಭೂಮಿಯನ್ನು "ಸಂಶೋಧನಾ ಕೇಂದ್ರ ಇಮಾರತ್" ಎಂಬ ಹೆಸರಿನಲ್ಲಿ ಸ್ಥಾಪಿಸಿದ್ದು ಅವರ ಕ್ರಿಯಾಶೀಲತೆಗೆ ಸಾಕ್ಷಿಯಾಗಿದೆ.

5. ವಿಜ್ಞಾನದ ಅಡಿಪಾಯ ಯಾವುದು?

ವಿಜ್ಞಾನದ ಅಡಿಪಾಯವೇ ಪ್ರಶ್ನೆ ಕೇಳುವುದು.

6. ಭೂಮಿಯ ಮೇಲಿನ ಮೊದಲ ವಿಜ್ಞಾನಿ ಯಾರು?

ಕೊನೆಯಿಲ್ಲದಷ್ಟು ಪ್ರಶ್ನೆ ಕೇಳುವ ಮಗುವೇ ಭೂಮಿಯ ಮೇಲಿನ ಮೊದಲ ವಿಜ್ಞಾನಿ.

7. ಕಲಾಂ ಅವರು ರಾಷ್ಟ್ರಪತಿಯ ಸ್ಥಾನಕ್ಕೆ ಆಯ್ಕೆಯಾದ ಸುದ್ದಿ ತಿಳಿದಾಗ ಅವರು ಎಲ್ಲಿದ್ದರು?

ಕಲಾಂ ಅವರು ರಾಷ್ಟ್ರಪತಿಯ ಸ್ಥಾನಕ್ಕೆ ಆಯ್ಕೆಯಾದ ಸುದ್ದಿ ತಿಳಿದಾಗ ಅವರು ಚೆನ್ನೈನಲ್ಲಿದ್ದರು.

8. ಕಲಾಂ ಅವರನ್ನು ಶಾಲೆಗೆ ಕಳಿಸುವಂತೆ ಪ್ರೇರೇಪಿಸಿದವರು ಯಾರು?

ಕಲಾಂ ಅವರನ್ನು ಶಾಲೆಗೆ ಕಳಿಸುವಂತೆ ಪ್ರೇರೇಪಿಸಿದವರು ಶಿವಸುಬ್ರಮಣ್ಯ ಅಯ್ಯರ್.

9. ಕಲಾಂ ಅವರು ಯಾವ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರೊಫೆಸರ್ ಆಗಿದ್ದರು?

ಕಲಾಂ ಅವರು ಅಣ್ಣಾಮಲೈ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರೊಫೆಸರ್ ಆಗಿದ್ದರು.

**ಎರಡು- ಮೂರು ವಾಕ್ಯಗಳಲ್ಲಿ ಉತ್ತರಿಸಿ**

1. ಕಲಾಂ ಅವರ ಬದುಕಿನ ಮಂತ್ರ ಯಾವುದು?

ವಿಜ್ಞಾನ ತಂತ್ರಜ್ಞಾನಗಳ ಸಂಕೀರ್ಣ ಪ್ರಪಂಚದಲ್ಲಿ ಅಬ್ದುಲ್ ಕಲಾಂ ಅವರು ತಮ್ಮನ್ನು ತಾವೇ ತೊಡಗಿಸಿಕೊಂಡದ್ದು ಯಾವುದೋ ಪ್ರಶಸ್ತಿ, ಪುರಸ್ಕಾರ, ಹಣ ಗಳಿಸಲಿಕ್ಕಲ್ಲ. "ಭಗವಂತನ ಸೃಷ್ಟಿಯಲ್ಲಿರುವವರೆಲ್ಲ ಆತನ ಬಂಧುಗಳೆ; ಯಾರು ಅವರುಗಳ ಸೇವೆ ಮಾಡುತ್ತಾರೋ ಅವರೇ ದೇವರಿಗೆ ಹತ್ತಿರವಾದವರು".ಇದು ಕಲಾಂ ಅವರ ಬದುಕಿನ ಮಂತ್ರ.

2. ಕಲಾಂ ಅವರು ತಾವು ಆತ್ಮಕಥೆ ಬರೆದುದು ಏತಕ್ಕಾಗಿ?

"ನನ್ನ ಬದುಕು ಯಾರೊಬ್ಬರಿಗೆ ಅನುಕರಣೆಗೆ ಯೋಗ್ಯವಾದ ಮಾದರಿಯಾಗುತ್ತದೆಂಬ ಭ್ರಮೆ ನನಗಿಲ್ಲ. ಯಾವುದೋ ಮೂಲೆಯಲ್ಲಿನ ಊರಿನಲ್ಲಿ ಹುಟ್ಟಿ, ಸಾಮಾಜಿಕವಾಗಿ ಸೌಲಭ್ಯಗಳಿಂದ ವಂಚಿತವಾಗಿರುವ ಮಗುವಿಗೆ ಅದರಂಥದೆ ಪರಿಸರದಲ್ಲಿದ್ದ ನನ್ನ ಭವಿಷ್ಯ ಅರಳಿದ್ದನ್ನು ಓದಿದಾಗ ಭರವಸೆ ಮೂಡಬಹುದು. ಅಂತಹ ಮಕ್ಕಳಿಗೆ, ತಾವು ಹಿಂದುಳಿದವರು, ಅಸಮರ್ಥರು ಅನ್ನುವ ಭ್ರಮೆಯಿಂದ ಬಿಡುಗಡೆ ಹೊಂದಲು ನನ್ನ ಬದುಕು ಸ್ಫೂರ್ತಿ ನೀಡಬಹುದೇನೋ" ಎಂಬ ಭಾವನೆಯಿಂದ ಆತ್ಮ ಕಥೆ ಬರೆದಿರುವುದಾಗಿ ಕಲಾಂ ಹೇಳಿಕೊಂಡಿದ್ದಾರೆ.

3. ಕಲಾಂ ಅವರು ಬಂಡೆಗಳ ಬಸಿರಲ್ಲಿ ಕಂಡದ್ದೇನು?

ಕಲಾಂ ಅವರು ಒಬ್ಬ ಶಿಲ್ಪಿ. ಬೇರೆಯವರಿಗೆ ಬಂಡೆಯಾಗಿ ಕಾಣಿಸಿದ್ದು ಅವರಿಗೆ ಅದರೊಳಗೆ ಅಡಗಿರುವ ಶಿವಶಕ್ತಿಯಾಗಿ ಕಾಣಿಸುತ್ತದೆ. ಕುಗ್ರಾಮ ಇಮಾರತ್ ಇಂದು ವಿಶ್ವವಿಖ್ಯಾತ. ಕಗ್ಗಲ್ಲ ಬಂಜರು ನಾಡಿನಲ್ಲಿ, ಬಂಡೆಗಳ ಬಸಿರಲ್ಲಿ "ಶಿವನ ನಿಹಿತ ಶಕ್ತಿ"ಯನ್ನು ಕಲಾಂ ಕಂಡರು. ಕ್ಷಿಪಣಿ ರೂಪದಲ್ಲಿ ಶಕ್ತಿ ಹೊರಬರಲು ಕಂಪಿಸುತ್ತಿರುವುದನ್ನು ಅವರ ಒಳಗಣ್ಣು ನೋಡಿತು.

4. ವಿ.ಜೆ ಸುಂದರಮ್ ಸಿಕಂದರಾಬಾದ್ ಶಾಲಾ ಬಾಲಕಿ ಬಗೆಗೆ ಹೇಳಿದ ಹೆಮ್ಮೆಯ ಮಾತುಗಳಾವುವು?

ಸಿಕಂದರಾಬಾದಿನ ಶಾಲಾ ಬಾಲಕಿಯೊಬ್ಬಳು ತಯಾರಿಸಿದ್ದ ಪೃಥ್ವಿ ಕ್ಷಿಪಣಿಯ ಮಾದರಿಯ ಚಿತ್ರವನ್ನು ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಈ ವಿಷಯವನ್ನು ವಿ.ಜೆ ಸುಂದರಮ್ ಸಿಕಂದರಾಬಾದ್ ಶಾಲಾ ಬಾಲಕಿ ಬಗೆಗೆ ಹೇಳಿದ ಹೆಮ್ಮೆಯ ಮಾತುಗಳು. ಉಪನಿರ್ದೇಶಕ ಸಾರಸ್ವತ "ಈ ಬಾಲಕಿ, ನಮ್ಮ ಕ್ಷಿಪಣಿ0ಯ ಆಕಾರ, ಗಾತ್ರ ಕುರಿತು ಒಂದಷ್ಟು ವಿವರ ಕೇಳಿದ್ದಳು. ನಾನು ಮಾಹಿತಿ ನೀಡಿದ್ದೆ. ನೋಡಿ ಎಂಥ ಅದ್ಭುತ ಮಾದರಿ ತಯಾರಿಸಿದ್ದಾಳೆ."ಎಂದು ಹೆಮ್ಮೆಯಿಂದ ಹೇಳಿದರು.

5. ಕಲಾಂ ಅವರ ದೃಷ್ಟಿಯಲ್ಲಿ ಕನಸುಗಳು ಏನಾಗುತ್ತವೆ?

ಕಲಾಂ ಅವರ ದೃಷ್ಟಿಯಲ್ಲಿ ಕನಸುಗಳು ಆಲೋಚನೆಗಳಾಗುತ್ತವೆ. ಆಲೋಚನೆಗಳು ಸೃಜನಾತ್ಮಕ ಕ್ರಿಯೆಗಳಾಗಿ ಪರಿವರ್ತನೆಗೊಳ್ಳುತ್ತವೆ.

6. ಕಲಾಂ ಮೇಷ್ಟ್ರು ಹೇಳಿದ ಯಶಸ್ಸಿನ ಪಂಚಾಕ್ಷರಿ ಮಂತ್ರ ಯಾವುದು?

ಕುತೂಹಲ, ಆಲೋಚನಾಶಕ್ತಿ, ಜ್ಞಾನ(ತಿಳಿವು), ಕಷ್ಟಪಟ್ಟು ಕೆಲಸ ಮಾಡುವುದು ಮತ್ತು ಗುರಿ ಸಾಧಿಸುವ ಛಲ ಇವು ಕಲಾಂ ಮೇಷ್ಟ್ರು ಹೇಳಿದ ಯಶಸ್ಸಿನ ಪಂಚಾಕ್ಷರಿ ಮಂತ್ರ.

**ಐದು – ಆರುವಾಕ್ಯಗಳಲ್ಲಿ ಉತ್ತರಿಸಿ:**

1. ಕಲಾಂ ಅವರು ಯಾವಾಗಲೂ ಸಾಧ್ಯತೆಗಳನ್ನು ಅರಸುವ ಆಶಾಜೀವಿ ಹೇಗೆ? ವಿವರಿಸಿರಿ.

ರಾಷ್ಟ್ರಪತಿಯಾಗಿ ಆಯ್ಕೆಗೊಳ್ಳುವುದಕ್ಕೆ ಕೆಲವೇ ದಿನಗಳ ಹಿಂದೆ ಅವರು ಹೈದರಾಬಾದಿನ ಒಂದು ಆಸ್ಪತ್ರೆಗೆ ಭೇಟಿ ಕೊಟ್ಟಿದ್ದರು. ಬುದ್ಧಿಮಾಂದ್ಯ ಮಕ್ಕಳ ಮೆದುಳಿನಲ್ಲಿ 'ಚಿಪ್' ಅಳವಡಿಸಿ ಗುಣಪಡಿಸಲು ಸಾಧ್ಯವೇ ಎಂದು ಪ್ರಶಿಸಿದರು. ಅಗತ್ಯ ಮಾಹಿತಿಗಳನ್ನು ಕ್ರೋಡೀಕರಿಸಿರುವ ಸೂಕ್ಷ್ಮ ಎಲೆಕ್ಟ್ರಾನಿಕ್ ಸಾಧನವೇ ಚಿಪ್. ಕಂಪ್ಯೂಟರ್ ಸಹಾಯದಿಂದ ಮಿದುಳಿನಲ್ಲಿ ಇದನ್ನು ಅಳವಡಿಸಿ ಬುದ್ಧಿಮಾಂದ್ಯತೆ ನಿವಾರಿಸಬಹುದೆ ಎಂದು ಕಲಾಂ ಪ್ರಶ್ನಿಸಿದರು. ವೈದ್ಯರು ಸಾಧ್ಯತೆಯ ಬಗ್ಗೆ ಅನುಮಾನ ವ್ಯಕ್ತಪಡಿಸಿದಾಗ ಕಲಾಂ ಹೇಳಿದರು, "ಇದು ಸಾಧ್ಯವಿಲ್ಲ ಎಂದು ಹೇಳುವ ನೂರು ಕಾರಣಗಳ ಬಗ್ಗೆ ನನಗೆ ಸ್ವಲ್ಪವೂ ಆಸಕ್ತಿ ಇಲ್ಲ. ಅದು ಹೇಗೆ ಸಾಧ್ಯವಾಗುತ್ತದೆ ಎಂಬ ಒಂದು ಕಾರಣ

ಹೇಳಬಲ್ಲಿರಾ?" ಈ ಘಟನೆಯ ಮೂಲಕ ನಾವು ಕಲಾಂ ಅವರು ಯಾವಾಗಲೂ ಸಾಧ್ಯತೆಗಳನ್ನು ಅರಸುವ ಆಶಾಜೀವಿ. ಎಂದು ತಿಳಿಯಬಹುದು.

2. ಚೆನ್ನೈನಲ್ಲಿ ನಡೆದ ಪದ್ಮಶೇಷಾದ್ರಿ ಬಾಲಭವನದ ಪ್ರೌಢಶಾಲೆಯಲ್ಲಿ ನಡೆದ ಕ್ವಿಜ್ ಕಾರ್ಯಕ್ರಮದ ಔಚಿತ್ಯವನ್ನು ಕುರಿತು ವಿವರಿಸಿ.

ಚೆನ್ನೈನಲ್ಲಿ ನಡೆದ ಪದ್ಮಶೇಷಾದ್ರಿ ಬಾಲಭವನದ ಪ್ರೌಢಶಾಲೆಯಲ್ಲಿ ನಡೆದ ಕ್ವಿಜ್ ಕಾರ್ಯಕ್ರಮ. ಕ್ವಿಜ್ ಮಾಸ್ಟರ್ ಭಾರತರತ್ನ, ಕ್ಷಿಪಣಿ ಮನುಷ್ಯ ಅಬ್ದುಲ್ ಕಲಾಂ. ಏನೆಲ್ಲಾ ಪ್ರಶ್ನೆ ಕೇಳಬಹುದು ಅಂತ ವಿದ್ಯಾರ್ಥಿಗಳಿಗೆ ಕಾತುರ. ಕಲಾಂ ಅವರ ಪ್ರಶ್ನೆ ಹೀಗಿತ್ತು. "ಭೂಮಿ ಸೂರ್ಯನನ್ನು ಪರಿಭ್ರಮಿಸಲು ಒಂದು ವರ್ಷ ತೆಗೆದುಕೊಳ್ಳುತ್ತದೆ. ಹಾಗಿದ್ದಲ್ಲಿ ಹದಿನೈದನೇ ಪರಿಭ್ರಮಣ ಪಥದಲ್ಲಿದ್ದ ವ್ಯಕ್ತಿಗೆ ಎಷ್ಟು ವಯಸ್ಸಾಗಿರುತ್ತದೆ?" ಈಪ್ರಶ್ನೆ ಕೇಳಿದ ಅನೇಕ ಮಕ್ಕಳು ತಬ್ಬಿಬ್ಬಾಗಿದ್ದರು. ಅಭಿಷೇಕ್ ಎಂಬ ಹುಡುಗ ಸ್ವಲ್ಪ ಯೋಚಿಸಿ, 'ಹದಿನಾಲ್ಕು' ಎಂದು ಉತ್ತರಿಸಿದ. ಉತ್ತರ ಸರಿಯಾಗಿತ್ತು. ಭೂಮಿಯ ಮೇಲೆ ನಿಂತಿದ್ದ ವ್ಯಕ್ತಿ ಹದಿನಾಲ್ಕು ಸುತ್ತು ಮುಗಿಸಿರುತ್ತಾನೆ. ಕಲಾಂ ಅವರು ತಮ್ಮ ವಯಸನ್ನು ಹೇಳುತ್ತಿದ್ದುದೂ ಹೀಗೆಯೇ. ಕಲಾಂ ಅವರು ಇದ್ದ ಮನೆಯ ಮುಂದೆ ಪುಟ್ಟ ಮಕ್ಕಳ ಹಿಂಡೂ ಯಾವಾಗಲೂ ಇರುತ್ತಿತ್ತು. ಗಹನವಾದ ವಿಷಯಗಳನ್ನು ಪುಟ್ಟಕತೆಗಳ ರೂಪದಲ್ಲಿ ಹೇಳುತ್ತಾ ಕಲಾಂ ಮೇಷ್ಟ್ರು ಬದುಕಿನ ಸಾರ್ಥಕತೆ ಪಡೆಯುತ್ತಿದ್ದರು. ಇದು ಚೆನ್ನೈನಲ್ಲಿ ನಡೆದ ಪದ್ಮಶೇಷಾದ್ರಿ ಬಾಲಭವನದ ಪ್ರೌಢಶಾಲೆಯಲ್ಲಿ ನಡೆದ ಕ್ವಿಜ್ ಕಾರ್ಯಕ್ರಮದ ಔಚಿತ್ಯ.

3. ತಾಯಿ–ತಂದೆ ಶಿಕ್ಷಕರು ಸೇರಿ ಆದ ತ್ರಿಭುಜವೇ ಉತ್ತಮ ಬದುಕಿಗೆ ಆದರ್ಶ ಮಾದರಿ ಹೇಗೆ? ವಿವರಿಸಿರಿ.

ಮಕ್ಕಳನ್ನು ಬುದ್ಧಿವಂತರೂ ಮತ್ತು ಕಷ್ಟಪಟ್ಟು ಕೆಲಸ ಮಾಡುವಂತವರೂ ಆದ ಉತ್ತಮ ಮನುಷ್ಯರನ್ನಾಗಿ ಮಾಡುವುದು ತಂದೆ ತಾಯಿಯರ ಆದ್ಯ ಕರ್ತವ್ಯ. ಅಧ್ಯಾಪಕರು ಕಲಿಕೆ ಮತ್ತು ಜ್ಞಾನದ ಬೆಳಕನ್ನು ಮಕ್ಕಳಿಗೆ ನೀಡುವ ಕಿಟಕಿಗಳು. ಮಕ್ಕಳಲ್ಲಿ ಕ್ರೀಯಾಶೀಲತೆ ಮೊಳೆಯುವಂತೆ ಮಾಡುವ ಆದರ್ಶ ವ್ಯಕ್ತಿಗಳು. ತಾಯಿ ತಂದೆ ಶಿಕ್ಷಕರು ಸೇರಿ ಆದ ತ್ರಿಭುಜವೇ ಉತ್ತಮ ಬದುಕಿಗೆ ಆದರ್ಶ ಮಾದರಿ. ಈ ಮೂವರೂ ಶ್ರದ್ಧೆಯಿಂದ ದುಡಿದಾಗ ಮಾತ್ರ ಭಾರತಕ್ಕೆ ಹೊಸ ತಾರುಣ್ಯ ಬರುತ್ತದೆ. ಮಾತಾ ಪಿತೃಗಳ ಹಿಂದೆ ಶಾಲೆ ಮತ್ತು ಶಿಕ್ಷಕರ

ಹಿಂದೆ ಮನೆ ಇರುತ್ತದೆ. ವಿದ್ಯಾಭ್ಯಾಸ ಹಾಗೂ ಶಿಕ್ಷಕ ವಿದ್ಯಾರ್ಥಿ ಸಂಬಂಧಗಳನ್ನು ವ್ಯಾಪಾರಿ ಮನೋಭಾವದಿಂದ ನೋಡಬಾರದು. ರಾಷ್ಟ್ರಾಭಿವೃದ್ಧಿಯೇ ಮುಖ್ಯ ಗುರಿಯಾಗಿರಬೇಕು. ಸರಿಯಾದ ಶಿಕ್ಷಣ ನಮ್ಮ ಯುವಕರಲ್ಲಿ ಆತ್ಮ ಗೌರವ ಮತ್ತು ಘನತೆಗಳನ್ನು ಪೋಷಿಸುತ್ತದೆ. ಯಾವುದೇ ಕಾನೂನು ಒತ್ತಡದಿಂದ ಈ ಗುಣಗಳನ್ನು ಬೆಳೆಸಲಾರದು. ಇವುಗಳನ್ನು ನಾವೇ ಪೋಷಿಸಿಕೊಳ್ಳಬೇಕು." ತಾಯಿ–ತಂದೆ ಶಿಕ್ಷಕರು ಸೇರಿ ಆದ ತ್ರಿಭುಜವೇ ಉತ್ತಮ ಬದುಕಿಗೆ ಆದರ್ಶ ಮಾದರಿ.

4. ರಾಷ್ಟ್ರಪತಿಯಾಗಿ ಆಯ್ಕೆಯಾದಾಗ ಚೆನ್ನೈನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಕಲಾಂ ಹೇಳಿದ್ದೇನು?

ಅಬ್ದುಲ್ ಕಲಾಂ ಅವರು ರಾಷ್ಟ್ರಪತಿ ಸ್ಥಾನಕ್ಕೆ ಆಯ್ಕೆಯಾದ ಸುದ್ದಿ ಪ್ರಕಟವಾದಾಗ ಚೆನ್ನೈನಲ್ಲಿದ್ದರು. ಮುಖ್ಯಮಂತ್ರಿ ಜಯಲಲಿತ ಅಭಿನಂದಿಸಿದರು. ಕಲಾಂ ಅವರು ಹೇಳಿದರು. "ಕನಸುಗಳು ಆಲೋಚನೆಗಳಾಗುತ್ತವೆ, ಆಲೋಚನೆಗಳು ಸೃಜನಾತಕ ಕ್ರಿಯೆಗಳಾಗಿ ಪರಿವರ್ತನೆಗೊಳ್ಳುತ್ತವೆ." ಪತ್ರಿಕಾ ಗೋಷ್ಠಿಯನ್ನು ಮಾಧ್ಯಮದವರು ಏರ್ಪಡಿಸಿದ್ದರು. ಆಧುನಿಕ ಎಲೆಕ್ಟ್ರಾನಿಕ್ ಮಾಧ್ಯಮದವರೆಲ್ಲಾ ಜಮಾಯಿಸಿದ್ದ ಸಂತೆ. ಎಲ್ಲರಿಗೂ ಪ್ರಶ್ನೆ ಕೇಳುವ ಆತುರ. ತಾವು ಸಂದರ್ಶಿಸುತ್ತಿರುವುದು ಒಬ್ಬ ರಾಜಕಾರಣಿಯನ್ನಲ್ಲವೆಂಬುದನ್ನು ಮಾಧ್ಯಮದವರು ಮರೆತಂತಿತ್ತು. ಕಲಾಂ ಮೇಷ್ಟ್ರು ಪರಿಸ್ಥಿತಿಯನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡರು. "ಎಲ್ಲರೂ ಗಮನವಿಟ್ಟು ಕೇಳಿ. ಇದುವರೆಗೆ ಏನಾಗಿದೆಯೋ ಅದೆಲ್ಲ ಒಳ್ಳೆಯದಕ್ಕೆ, ಈಗ ಆಗುತ್ತಿರುವುದೂ ಒಳ್ಳೆಯದಕ್ಕಾಗಿಯೇ ಮತ್ತು ಮುಂದೆ ಆಗಲಿರುವುದೂ ಒಳ್ಳೆಯದಕ್ಕಾಗಿಯೇ, ಅರ್ಥವಾಯಿತೇ?'ಎಂದು ಅನೇಕ ಬಾರಿ ಶಾಲಾ ಮಕ್ಕಳನ್ನು ಕೇಳಿದರು. ಶಿಷ್ಯ ಸಮೂಹ ಹೂಂಗುಟ್ಟಿತು.! ಭಗವದ್ಗೀತೆಯ ಪ್ರಸಿದ್ಧ ಸಾಲುಗಳನ್ನು ಉದ್ಧರಿಸುತ್ತಾ ಜೀವನ ಮೌಲ್ಯಗಳ ಕ್ಲಾಸ್ ತೆಗೆದುಕೊಂಡರು. ಎಲ್ಲರೂ ಒಟ್ಟಿಗೆ ತಾವು ಹೇಳಿದ್ದನ್ನು ಹೇಳುವಂತೆ ಕೋರಿದರು. "ವ್ಯಕ್ತಿಗಿಂತ ರಾಷ್ಟ್ರ ದೊಡ್ಡದು, ವ್ಯಕ್ತಿಗಿಂತ......ಎಂದು ವಾಕ್ಯ ಮುಗಿಸುವ ಮೊದಲೇ ಎಲ್ಲರೂ ಒಟ್ಟಿಗೆ 'ರಾಷ್ಟ್ರ ದೊಡ್ಡದು'ಎಂದು ದನಿಗೂಡಿಸಿದರು.

5. ತಮ್ಮನ್ನು ಭೇಟಿಯಾದ ಮಕ್ಕಳಿಗೆ ಕಲಾಂ ಹೇಳಿದ್ದೇನು?

ತಮ್ಮನ್ನು ಭೇಟಿಯಾದ ಮಕ್ಕಳು , "ಮಿ. ಪ್ರೆಸಿಡೆಂಟ್, ನಿಮ್ಮ ಯಶಸ್ಸಿನ ಗುಟ್ಟೇನು? ಎಂದು ಕೇಳಿದರು. ಕಲಾಂಮೇಷ್ಟ್ರು ಹೇಳಿದರು– "ಯಶಸ್ಸಿನ ಪಂಚಾಕ್ಷರಿ ಮಂತ್ರ ಹೀಗಿದೆ. ಕುತೂಹಲ, ಆಲೋಚನಾ ಶಕ್ತಿ, ಜ್ಞಾನ (ತಿಳಿವು), ಕಷ್ಟಪಟ್ಟು ಕೆಲಸ ಮಾಡುವುದು ಮತ್ತು ಗುರಿ ಸಾಧಿಸುವ ಛಲ." ಅಧ್ಯಕ್ಷರಾದ ತರುವಾಯ ಲಕ್ಷಾಂತರ ಮಕ್ಕಳನ್ನು ಅಬ್ದುಲ್ ಕಲಾಂ ಭೇಟಿ ಮಾಡಿದ್ದಾರೆ. ಬಡವರಾಗಿರಲಿ ಅಥವಾ ಶ್ರೀಮಂತರಾಗಿರಲಿ, ಎಲ್ಲ ಮಕ್ಕಳ ಕನಸೂ ಒಂದೆ: "ಅವರೆಲ್ಲರೂ ಶಾಂತಿ ಸಮೃದ್ಧಿ ಮತ್ತು ಸುಭದ್ರ ಭಾರತದಲ್ಲಿ ಬದುಕ ಬಯಸುತ್ತಾರೆ." ಮಕ್ಕಳಿಗೆ ಅವರು ಯಾವಾಗಲೂ ಹೇಳುತ್ತಿದ್ದುದು ಒಂದೇ ಮಾತು. "ಎಲ್ಲವನ್ನೂ ಪ್ರಶ್ನಿಸಿ. ಪ್ರಶ್ನೆಗಳಿಂದ ವಿಕಾಸಗೊಂಡದ್ದೇ ವಿಜ್ಞಾನ. ನಾವು ಮೊದಲು ಕ್ಷಿಪಣಿ ತಯಾರಿಸುತ್ತೇವೆಂದಾಗ ಅನೇಕರು ಅದು ಅಸಾಧ್ಯವಾದದ್ದು ಎಂದಿದ್ದರು." ಅವರ ಮಾತಿನಲ್ಲಿದ್ದ ದೃಢತೆ, ಕಳಕಳಿಯಿಂದಾಗಿ ಅವು ಮಕ್ಕಳ ಮನಸ್ಸಿನಲ್ಲಿ ನಾಟುತ್ತಿದ್ದವು.

===0===

# ತಿರುಳ್ಗನ್ನಡದ ಬೆಳ್ನುಡಿ

**ಮುದ್ದಣ**

**ಅ. ಒಂದು ಅಂಕದ ಪ್ರಶ್ನೆಗಳು:**

1. ಮುದ್ದಣ ಅರಮನೆಯಿಂದ ಬರುತ್ತಿರುವುದನ್ನು ನಿಂತು ನೋಡಿದವರು ಯಾರು?

ಮನೋರಮೆಯು ಮುದ್ದಣ ಅರಮನೆಯಿಂದ ಬರುತ್ತಿರುವುದನ್ನು ನಿಂತು ನೋಡಿದಳು.

2. ಯಾವ ಕತೆ ಹೇಳಬೇಕೆಂದು ಮನೋರಮೆ ಕೇಳಿದಳು?

ಉಳಿದರೂ ಅಳಿದರೂ ದಾರಿತೋರಿಸುವಂತಹ ರಸಭರಿತವಾದ ರಾಮಾಯಣದ ಯಾವುದಾದರೊಂದು
ಪ್ರಸಂಗ ಹೇಳಬೇಕೆಂದು ಕೇಳಿದಳು.

3. ಶೇಷನು ರಾಮಾಯಾಣದ ಕತೆಯನ್ನು ಯಾರಿಗೆ ಹೇಳಿದನು?

ಶೇಷನು ಮೊದಲು ರಾಮಾಯಾಣದ ಕತೆಯನ್ನು ವಾತ್ಸಾಯನನಿಗೆ ಹೇಳಿದನು.

4. ಎಂತಹ ಗದ್ಯದಲ್ಲಿ ಕತೆ ಹೇಳೆಂದು ಮನೋರಮೆ ಕೇಳುವಳು?

ಹೃದಯಕ್ಕೆ ಆನಂದ ನೀಡುವಂತ ಗದ್ಯದಲ್ಲಿ ಕತೆ ಹೇಳಬೇಕೆಂದು ಮನೋರಮೆ ಕೇಳಿದಳು.

5. ಮನೋರಮೆ ಬಹುಮಾನವಾಗಿ ಏನನ್ನು ಕೊಡುವೆನೆಂದಳು?

ಮನೋರಮೆ ಬಹುಮಾನವಾಗಿ ತನ್ನನ್ನು ತಾನು ಅರ್ಪಿಸಿಕೊಳ್ಳುವೆನೆಂದಳು.

6. ವಸುಧೆಗೆ ಒಡೆಯನೆನಿಸಿದವನು ಯಾರು?

ವಸುಧೆಗೆ ಒಡೆಯನೆನಿಸಿದವನು ಶ್ರೀ ರಾಮಚಂದ್ರ.

7. ಕನ್ನಡವು ಕಸ್ತೂರಿಯಲ್ಲವೇ! ಎಂದವರಾರು?

ಮನೋರಮೆಯು ಕನ್ನಡವು ಕಸ್ತೂರಿಯಲ್ಲವೇ ! ಎಂದು ಹೇಳಿದಳು.

**ಎರಡು ಅಂಕದ ಪ್ರಶ್ನೆಗಳು:**

1. ಮುದ್ದಣನನ್ನು ಮನೋರಮೆ ಹೇಗೆ ಉಪಚರಿಸಿದಳು?

ದೂರದಿಂದಲೇ ಪತಿಬರುವುದನ್ನು ಕಂಡ ಮನೋರಮೆ ಎದ್ದು ಆತನನ್ನು ಎದುರುಗೊಂಡು ಕೈಕಾಲು ತೊಳೆದುಕೊಳ್ಳುವುದಕ್ಕೆ ನೀರು ಕೊಟ್ಟು ಮನೆಯೊಳಗೆ ಕರೆದುಕೊಂಡು ಹೋಗಿ ಮಣೆಯಿತ್ತು, ಕುಡಿಯಲು ಹಾಲನ್ನು, ತಿನ್ನಲು ರುಚಿಕರವಾದ ಹಣ್ಣುಗಳನ್ನು, ಮಾತ್ರವಲ್ಲದೆ ರಸವತ್ತಾದ ಕಂಪುಭರಿತ ತಾಂಬೂಲವನ್ನು ನೀಡಿ ಉಪಚರಿಸಿದಳು.

2. ಮನೋರಮೆ ಕಥೆ ಹೇಳೆಂದು ಕೇಳಲು ಕಾರಣವೇನು?

ಹಗಲಿರುಳು ಒಂದೇ ಸಮನೆ ಸುರಿಯುತ್ತಿರುವ ಈ ಜಡಿಮಳೆಯಿಂದಾಗಿ ಹಗಲು ಬಹಳ ದೀರ್ಘವಾಗಿ ಕಾಣಿಸುತ್ತಿದೆ, ಮನಸ್ಸಿಗೆ ಬೇಸರವಾಗಿದೆ, ಆದ್ದರಿಂದ ಯಾವುದಾದರೂ ನಲ್ಗತೆಯನ್ನು ಹೇಳು ಎಂದು ಕೇಳಿದಳು.

3. ಕತೆಯನ್ನು ಯಾವ ರಸಗಳಲ್ಲಿ ಹೇಳಲೆಂದು ಮುದ್ದಣ ಕೇಳಿದನು?

ಮನೋರಮೆಯು ಹಗಲಿರುಳು ಒಂದೇ ಸಮನೆ ಸುರಿಯುತ್ತಿರುವ ಈ ಜಡಿಮಳೆಯಿಂದಾಗಿ ಮನಸ್ಸಿಗೆ ಬೇಸರವಾಗಿದೆ. ಯಾವುದಾದರೂ ಒಂದು ಕಥೆಯನ್ನು ಹೇಳು ಎಂದಾಗ, ಮುದ್ದಣನು ಅಷ್ಟೇ ತಾನೇ ಯಾವ ಕಥೆ ಹೇಳಲಿ ಭೋಜ ಪ್ರಬಂಧವೋ? ವಿಕ್ರಮ ವಿಜಯವೋ? ಮಹಾವೀರ ಚರಿತೆಯೋ? ಎಂದಾಗ ಇವುಗಳಲ್ಲಿ ನನಗೆ ಆಸಕ್ತಿಯಿಲ್ಲ ಉಳಿದರೂ ಅಳಿದರು ದಾರಿರೋರಿಸುವಂತ ರಸಭರಿವಾದ ಕಥೆ ಹೇಳು ಎನ್ನುತ್ತಾಳೆ. ಆಗ ಮುದ್ದಣನು ನಿನಗೆ ಯಾವ ರಸ ಇಷ್ಟ ಶೃಂಗಾರರಸವೇ? ವೀರರಸವೇ? ಹಾಸ್ಯರಸವೇ? ಎಂದು ಕೇಳಿದನು.

4. ಯಾವ ಧಾಟಿಯಲ್ಲಿ ಕಥೆಯನ್ನು ಹೇಳೆಂದು ಮನೋರಮೆ ಕೇಳಿದಳು?

ಮುದ್ದಣನು ಪದ್ಯದಲ್ಲಿ ಕಥೆ ಹೇಳಲೋ ಗದ್ಯದಲ್ಲಿ ಕಥೆ ಹೇಳಲೋ ಎಂದು ಕೇಳಿದಾಗ, ಪದ್ಯದಲ್ಲಿ ಬೇಡ, ಹೃದಯಕ್ಕೆ ಹತ್ತಿರವಾದ ಗದ್ಯದಲ್ಲೇ ಕಥೆ ಹೇಳು ಎಂದು ಕೇಳಿದಳು.

5. ಅರಮನೆಯಿಂದ ಎಂತಹ ಬಹುಮಾನ ಸಿಗಬಹುದೆಂದು ಮುದ್ದಣ ಹೇಳಿದನು?

ಕಥೆ ಹೇಳಲು ಆರಂಭಿಸುವ ಮುನ್ನ ಮುದ್ದಣನು ಮನೋರಮೆಯಲಿ ಇಂಥ ನಲ್ಗತೆಯನ್ನು ಹೇಳಿದರೆ ಅರಮನೆಯಲ್ಲಿ ರತ್ನದ ಕಡಗವನ್ನೋ, ಚಿನ್ನದ ಕಂಠೀಹಾರವನ್ನೋ ಕೊಡುತ್ತಾರೆ. ಆದರೆ ನೀನು ಏನು ಕೊಡುವೆ ಎಂದು ಹೇಳಿದನು.

6. ನೀರಿಳಿಯದ ಗಂಟಲಲ್ಲಿ ಕಡುಬನ್ನು ತುರಿಕಿದಂತಾಯ್ತು'ಎಂದು ಮನೋರಮೆ ಹೇಳಿದ್ದೇಕೆ ?

ಮುದ್ದಣ ಕಥೆಯನ್ನು ಸ್ವಸ್ತಿ ಶ್ರೀಮತ್ಸುರಾಸುರೇಂದ್ರ ನರೇಂದ್ರ ಮುನೀಂದ್ರ... ಎಂದು ಆರಂಭಿಸಿದಾಗ ಮನೋರಮೆಯು ಇದು ಸಂಸ್ಕೃತದ ನುಡಿ, ಕನ್ನಡದ ಸೊಗಸನ್ನೇ ತಿಳಿಯದ ನನಗೆ ಸಂಸ್ಕೃತದ ಸೊಗಸು ಅರ್ಥವಾಗುವುದೇ ಎಂದು ಹೇಳುವಾಗ ನೀರಿಳಿಯದ ಗಂಟಲಲ್ಲಿ ಕಡುಬನ್ನು ತುರಿಕಿದಂತಾಯ್ತು' ಎಂದು ಹೇಳಿದ್ದಾಳೆ.

7. ಸಂಸ್ಕೃತ– ಕನ್ನಡಗಳು ಸೇರಿದರೆ ಹೇಗೆ ಸೊಗಯಿಸುತ್ತದೆ?

ಸಂಸ್ಕೃತ ಒಂದು ಚಿನ್ನದಲ್ಲಿ ಪೋಣಿಸಿದ ರತ್ನದ ಮಣಿ. ಕರಿಮಣಿ ಸರದಲ್ಲಿ ಕೆಂಪು ಹವಳವನ್ನು ಪೋಣಿಸಿದಂತೆ, ಸಂಸ್ಕೃತ ಮತ್ತು ಕನ್ನಡವನ್ನು ರಸಂ ಒಸರುವಂತೆ, ಕಾವ್ಯ ಲಕ್ಷಣವಿರುವಂತೆ ಅಲ್ಲಲ್ಲಿ ಬೆರೆಸಿ ಹೇಳಿದಾಗ ಚೆನ್ನಾಗಿರುತ್ತದೆ ಎಂದು ಮುದ್ದಣ ಹೇಳುತ್ತಾನೆ.

**ಸಂದರ್ಭ ಸಹಿತ ವಿವರಣೆ :**

1. ಬಲ್ಲೋನೆಯಜಿನುಂಗಿನತ್ತಣಿನೆನ್ನ ಬಗೆಯುಂ ಬೇಸರ್ತುದು.

ಆಯ್ಕೆ: ಈ ಮಾತನ್ನು ಮುದ್ದಣ ಕವಿಯು ರಚಿಸಿರುವ ತಿರುಳ್ಗನ್ನಡದ ಬೆಳ್ನುಡಿ ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಮನೋರಮೆಯು ಮುದ್ದಣನಲ್ಲಿ ಹೇಳುವ ಮಾತು ಇದಾಗಿದೆ.

ವಿವರಣೆ: ಅರಮನೆಯಿಂದ ಒಂದು ಸಂಜೆ ಮನೆಗೆ ಬಂದ ಮುದ್ದಣನಿಗೆ, ಮನೋರಮೆಯು ಹಸಿವು ಬಳಲಿಕೆ ಹೋಗಲು ಹಾಲು ಹಣ್ಣು ತಾಂಬೂಲಗಳನ್ನೆಲ್ಲ ಕೊಟ್ಟು ಉಪಚಾರಮಾಡುತ್ತಾಳೆ. ನಂತರ ತನ್ನ ಬೇಡಿಕೆಯನ್ನು ಮುಂದಿಡುತ್ತಾ, ಹಗಲಿರುಳು ಒಂದೇ ಸಮನೆ ಸುರಿಯುತ್ತಿರುವ ಈ ಜಡಿಮಳೆಯಿಂದಾಗಿ ಹಗಲು ಬಹಳ ದೀರ್ಘವಾಗಿ ಕಾಣಿಸುತ್ತಿದೆ, ಮನಸ್ಸಿಗೆ ಬೇಸರವಾಗಿದೆ ಎನ್ನುವಾಗ ಈ ಮೇಲಿನ ಮಾತು ಬಂದಿದೆ.

2. ನಿನಗಾವ ರಸದೊಳಿಷ್ಟಂ?

ಆಯ್ಕೆ: ಈ ಮಾತನ್ನು ಮುದ್ದಣ ಕವಿಯು ರಚಿಸಿರುವ ತಿರುಳ್ಗನ್ನಡದ ಬೆಳ್ನುಡಿ ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಈ ಮಾತನ್ನು ಮುದ್ದಣ ಮನೋರಮೆಯಲ್ಲಿ ಹೇಳುತ್ತಾನೆ.

ವಿವರಣೆ: ಹಗಳಿರುಳು ಒಂದೇ ಸಮನೆ ಸುರಿಯುತ್ತಿರುವ ಈ ಜಡಿಮಳೆಯಿಂದಾಗಿ ಹಗಲು ಬಹಳದೀರ್ಘವಾಗಿ ಕಾಣಿಸುತ್ತಿದೆ, ಮನಸ್ಸಿಗೆ ಬೇಸರವಾಗಿದೆ. ಯಾವುದಾದರೂ ಒಂದು ಕಥೆಯನ್ನು ಹೇಳು ಎಂದಾಗ ಮುದ್ದಣನು ಅಷ್ಟೇ ತಾನೇ ಯಾವ ಕಥೆ ಹೇಳಲಿ ಭೋಜ ಪ್ರಬಂಧವೋ, ವಿಕ್ರಮ ವಿಜಯವೋ, ಮಹಾವೀರಚರಿತೆಯೋ ಎಂದಾಗ ಇವುಗಳಲ್ಲಿ ನನಗೆ ಆಸಕ್ತಿಯಿಲ್ಲ ಉಳಿದರೂ ಅಳಿದರೂ ದಾರಿತೋರಿಸು ವಂತ ರಸಭರಿತವಾದ ಕಥೆ ಹೇಳು ಎಂದು ಹೇಳುತ್ತಾಳೆ. ನಿನಗೆ ಯಾವ ರಸ ಇಷ್ಟ ಶೃಂಗಾರರಸವೇ? ವೀರರಸವೇ? ಹಾಸ್ಯರಸವೇ? ಎನ್ನುವಾಗ ಈ ಮೇಲಿನ ಮಾತು ಬಂದಿದೆ.

3. ಸೀತಾಪಹರಣದ ಕಥನದೊಳ್ ಬಯಕೆಯೆ?

ಆಯ್ಕೆ: ಈ ಮಾತನ್ನು ಮುದ್ದಣ ಕವಿಯು ರಚಿಸಿರುವ ತಿರುಳ್ಗನ್ನಡದ ಬೆಳ್ನುಡಿ ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಮುದ್ದಣ ತನ್ನ ಮಡದಿ ಮನೋರಮೆಯಲ್ಲಿ ಕೇಳುವ ಪ್ರಶ್ನೆ ಇದಾಗಿದೆ. ವಿವರಣೆ: ಮುದ್ದಣ ಮನೋರಮೆಯರು ಸುಖಸಲ್ಲಾಪದಿಂದ ಮಾತನಾಡುತ್ತಿರುವಾಗ ಮನೋರಮೆಯು ರಾಮಾಯಣದ ಯಾವುದಾದರೊಂದು ಕಥೆ ಹೇಳು ಎಂದು ಕೇಳಿದಾಗ, ಮುದ್ದಣನು ಸೀತಾ ಸ್ವಯಂವರದ ಕಥೆ ಹೇಳಲೇ ಎಂದಾಗ ಅದನ್ನು ಮೊದಲೇ ಕೇಳಿದ್ದೇನೆ ಎನ್ನುತ್ತಾಳೆ. ಹಾಗಾದರೆ ಏನು ಸೀತಾಪಹರಣದ ಕಥೆಯ ಕೇಳುವ ಬಯಕೆಯೇ ಎನ್ನುವಾಗ ಈ ಮೇಲಿನ ಮಾತು ಬಂದಿದೆ.

4. ಪದ್ಯಂ ವದ್ಯಂ ; ಗದ್ಯಂ ಹೃದ್ಯಂ.

ಆಯ್ಕೆ: ಈ ಮಾತನ್ನು ಮುದ್ದಣ ಕವಿಯು ರಚಿಸಿರುವ ತಿರುಳ್ಗನ್ನಡದ ಬೆಳ್ನುಡಿ ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಮನೋರಮೆಯು ಮುದ್ದಣನಲ್ಲಿ ಹೇಳುವ ಮಾತಿದು.

ವಿವರಣೆ: ಮನೋರಮೆಯ ಬಯಕೆಯಂತೆ ಶ್ರೀರಾಮನು ಅಶ್ವಮೇಧ ಮಾಡಿದ ಕಥೆಯನ್ನು ಅಂದರೆ ಶೇಷರಾಮಾಯಣವನ್ನು ಹೇಳಲು

ನಿರ್ಧರಿಸಿದ ಮುದ್ದಣ ಪದ್ಯದಲ್ಲಿ ಹೇಳಲೋ ಗದ್ಯದಲ್ಲಿ ಹೇಳಲೋ ಎಂದು ಕೇಳಿದಾಗ ಮನೋರಮೆ ಈ ಮೇಲಿನಂತೆ ಹೇಳುತ್ತಾಳೆ. ಪದ್ಯಧಾಟಿಗಿಂತಲೂ ಹೃದಯಕ್ಕೆ ಗದ್ಯಧಾಟಿ ಹತ್ತಿರ ಎಂಬುದು ಅವಳ ಭಾವನೆಯಾಗಿದೆ.

5. ಕಬ್ಬಮಂ ಕಂಡಲ್ತೆಕಚ್ಚೞಿಯನಿತ್ತರ್.

ಆಯ್ಕೆ: ಈ ಮಾತನ್ನು ಮುದ್ದಣ ಕವಿಯು ರಚಿಸಿರುವ ತಿರುಳ್ಗನ್ನಡದ ಬೆಳ್ನುಡಿ ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಮನೋರಮೆಯು ಮುದ್ದಣನಲ್ಲಿ ಹೇಳುವ ಮಾತು ಇದಾಗಿದೆ.

ವಿವರಣೆ: ಕಥೆ ಹೇಳಲು ಆರಂಭಿಸುವ ಮುನ್ನ ಮುದ್ದಣನು ಇಂಥ ನಲ್ಗತೆಯನ್ನು ಹೇಳಿದರೆ ಅರಮನೆಯಲ್ಲಿ ರತ್ನದ ಕಡಗವನ್ನೋ, ಚಿನ್ನದ ಕಂಠೀಹಾರವನ್ನೋ ಕೊಡುತ್ತಾರೆ. ನೀನೇನು ಕೊಡುವೆ ಎಂದು ಕೇಳುತ್ತಾನೆ. ಮನೋರಮೆಯು ಅದಕ್ಕೆ ತನ್ನ ಉತ್ತರವಾಗಿ ಎನ್ನನೇ ಆನೀವೆಂ ಎಂದು ಹೇಳುತ್ತಾಳೆ, ಅವನು ಬಿಡದೆ ಮೊದಲೇ ನಿನ್ನ ತಂದೆ-ತಾಯಿಗಳು ನಿನ್ನನ್ನು ನನಗೆ ಅರ್ಪಿಸಿದ್ದಾರೆ, ಬೇರೆ ಏನು ಕೊಡುವೆ ಎಂದು ಕೀಟಲೆ ಮಾಡುತ್ತಾನೆ. ಅವಳೋ ಮಹಾ ಜಾಣೆ. ಅರಮನೆಯವರು ಕಥೆ ಕೇಳಿದ ನಂತರ ಉಡುಗೊರೆ ನೀಡುವರಲ್ಲವೇ ನಾನೂ ಕಥೆ ಕೇಳಿ ಅದರ ಶಕ್ತಿ ಎಷ್ಟಿದೆ ನೋಡಿ ಅದಕ್ಕೆ ತಕ್ಕಂತೆ ಸನ್ಮಾನಿಸುತ್ತೇನೆ ಎನ್ನುವಾಗ ಈ ಮೇಲಿನ ಮಾತು ಬಂದಿದೆ.

6. ನೀರಿೞಿಯದ ಗಂಟಲೊಳ್ ಕಡುಬಂ ತುರುಕಿದಂತಾಯ್ತು.

ಆಯ್ಕೆ: ಈ ಮಾತನ್ನು ಮುದ್ದಣ ಕವಿಯು ರಚಿಸಿರುವ ತಿರುಳ್ಗನ್ನಡದ ಬೆಳ್ನುಡಿ ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಮನೋರಮೆಯು ಮುದ್ದಣನಲ್ಲಿ ಹೇಳುವ ಮಾತು ಇದಾಗಿದೆ.

ವಿವರಣೆ : ಮುದ್ದಣ ಕತೆಯನ್ನು ಸ್ವಸ್ತಿ ಶ್ರೀಮತ್ಸುರಾಸುರೇಂದ್ರ ನರೇಂದ್ರ ಮುನೀಂದ್ರ.........ಎಂದು ಆರಂಭಿಸಿದಾಗ ಮನೋರಮೆಯು ಓಓ! ತಡೆ! ತಡೆ! ಭೂಮಿಗೆ ಒಡೆಯನಾದ ಶ್ರೀರಾಮಚಂದ್ರನ ಕತೆಯನ್ನು ಹೇಳು ಎಂದರೆ ಜೈನ ಮಹಾಪುರುಷರ ಕತೆಯನ್ನು ಹೇಳುತ್ತಿದ್ದೀಯಾ? ಎಂದು ಪ್ರಶ್ನಿಸುತ್ತಾ, ಸಾಕು ಸಾಕು ಇಂಥ ಎದೆಬಿರಿಯುವ ಕತೆಗೆ ಎಂತಹ ಉಡುಗೊರೆ ನೀಡಲಿ ಎನ್ನುತ್ತಾಳೆ. ಅದಕ್ಕೆ ಮುದ್ದಣನು ಈ ರೀತಿಯಾಗಿ ಕಾವ್ಯವನ್ನು

ಪ್ರಾರಂಭಿಸುವುದು ಸಂಸ್ಕೃತದ ಒಂದು ಚೆಲುವು ಎನ್ನುತ್ತಾನೆ. ಆಗ ಮನೋರಮೆಯು ಆತನ ಮಾತಿಗೆ ಉತ್ತರಿಸುತ್ತಾ ಈ ಮೇಲಿನಂತೆ ಹೇಳುತ್ತಾಳೆ.

7. ಕನ್ನಡಂ ಕತ್ತುರಿಯಲ್ತೆ.

ಆಯ್ಕೆ: ಈ ಮಾತನ್ನು ಮುದ್ದಣ ಕವಿಯು ರಚಿಸಿರುವ ತಿರುಳ್ಗನ್ನಡದ ಬೆಳ್ನುಡಿ ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಮನೋರಮೆಯು ಮುದ್ದಣನಲ್ಲಿ ಹೇಳುವ ಮಾತು ಇದಾಗಿದೆ.

ವಿವರಣೆ: ಸ್ವಸ್ತಿ ಶ್ರೀ ಮತ್ಸುರಾ ಸುರೇಂದ್ರ ನರೇಂದ್ರ ಮುನೀಂದ್ರ ಎಂದು ಆರಂಭಿಸಿದಾಗ ಮನೋರಮೆಯು ಇದು ಸಂಸ್ಕೃತದ ನುಡಿ, ಕನ್ನಡದ ಸೊಗಸನ್ನೇ ಅರಿಯದ ನನಗೆ ಸಂಸ್ಕೃತದ ಸೊಗಸು ಅರ್ಥವಾಗುವುದೇ, ನೀರಿಳಿಯದ ಗಂಟಲಲ್ಲಿ ಕಡುಬನ್ನು ತುರುಕಿದಂತಾಗುತ್ತದೆ. ಹಾಗಾಗಿ ನನಗೆ ತಿರುಳ್ಗನ್ನಡದಲ್ಲಿಯೇ ಕಥೆಯನ್ನು ಹೇಳು ಎಂದು ಹೇಳುವಾಗ ಕನ್ನಡಂ ಕಸ್ತೂರಿಯಲ್ತೆ ಎಂದಿದ್ದಾಳೆ.

**ನಾಲ್ಕು ಅಂಕದ ಪ್ರಶ್ನೆಗಳು:**

1. ಮುದ್ದಣ ಅರಮನೆಯಿಂದ ಬಂದ ಪರಿಯನ್ನೂ ಮನೋರಮೆಯ ಉಪಚಾರವನ್ನೂ ವಿವರಿಸಿ.

ಕಾಡು ನಾಡುಗಳೆಲ್ಲ ಸುಂದರವಾಗಿ, ಮನೋಹರವಾಗಿ ಕಾಣಿಸುತ್ತದ್ದಂತಹ ಮಳೆಗಾಲದ ಒಂದು ದಿನ ಸಂಜೆಯ ಹೊತ್ತಿನಲ್ಲಿ ಕವಿಗಳ ವಲ್ಲಭ, ಕವಿಗುರು ಎನಿಸಿಕೊಂಡ ಮುದ್ದಣನು ರಾಜನ ಸಭೆಯನ್ನು ಮುಗಿಸಿಕೊಂಡು, ಅರಮನೆಯಿಂದ ಹೊರಹೊರಟು ನಡೆಯುತ್ತಾ ಪಕ್ಕದ ಬೀದಿಯನ್ನು ಬಳಸಿಕೊಂಡು ಮುನ್ನಡೆಯುತ್ತಾ ತನ್ನ ಮನೆಯ ಕಡೆಗೆ ಬರುತ್ತಾನೆ. ಆತನ ಬರುವಿಕೆಯನ್ನು ದೂರದಿಂದಲೇ ಗಮನಿಸಿದ ಆತನ ಮಡದಿ ಮನೋರಮೆಯು ತಾನು ಕೂತಲ್ಲಿಂದ ಎದ್ದು ಪತಿಯನ್ನು ಎದುರುಗೊಂಡು ಕಾಲು ತೊಳೆಯಲು ನೀರನ್ನು ಕೊಟ್ಟು, ನಂತರ ಆತನ ಕೈಯನ್ನು ಹಿಡಿದು ಒಳಮನೆಗೆ ಕರೆದುಕೊಂಡು ಬಂದು ಮಣೆಯಿಟ್ಟು ಕುಳ್ಳಿರಿಸಿ ತಿನ್ನಲು ರುಚಿಕರವಾದ ಹಣ್ಣನ್ನು, ಕೆನೆಭರಿತವಾದ ಹಾಲನ್ನು ಕುಡಿಯಲು ಕೊಟ್ಟಳು. ಜೊತೆಯಲ್ಲಿ ರಸವತ್ತಾದ ಕಂಪುಭರಿತ ತಾಂಬೂಲವನ್ನೂ ಕೂಡ

ಸವಿಯಲು ಕೊಡುತ್ತಾಳೆ. ಆಕೆಯ ಉಪಚಾರದಿಂದ ಮುದ್ದಣನ ಹಸಿವು, ಬಳಲಿಕೆಯು ನಿವಾರಣೆಯಾಯಿತು. ಹೀಗೆ ಸುಖ ಸಂತೋಷದಿಂದ ಪತಿ–ಪತ್ನಿಯರು ಕಾಲ ಕಳೆಯುತ್ತಿದ್ದರು.

2. ಒಳ್ಳೆಯದೊಂದು ಕತೆ ಹೇಳಬೇಕೆಂದಾಗ ಮುದ್ದಣನ ಪ್ರತಿಕ್ರಿಯೆಯೇನು?

ಮನೋರಮೆಯು ಮುದ್ದಣನನ್ನು ಉಪಚರಿಸುತ್ತಾ ತಾಂಬೂಲವನ್ನು ನೀಡುತ್ತಾ, ಮೊದಲು ಪತಿಯ ಬಳಲಿಕೆಯನ್ನು ನಿವಾರಿಸುತ್ತಾಳೆ. ಆ ಮೇಲೆ ತನ್ನ ಮನದ ಬಯಕೆ ಈಡೇರಿಸಿಕೊಳ್ಳಲು ಮುಂದಾಗುತ್ತಾಳೆ. ಮನೋರಮೆ; ಮುದ್ದಣನಲ್ಲಿ ಹಗಲಿರುಳು ಒಂದೇ ಸಮನೆ ಸುರಿಯುತ್ತಿರುವ ಈ ಜಡಿಮಳೆಯಿಂದಾಗಿ ಮನಸ್ಸಿಗೆ ಬೇಸರವಾಗಿದೆ, ಹಾಗಾಗಿ ಯಾವುದಾದರೂ ಒಂದು ಕತೆಯನ್ನು ಹೇಳು ಎನ್ನುತ್ತಾಳೆ. ಆಕೆಯ ಉಪಚಾರದಿಂದ ಸಂತೃಪ್ತನಾದ ಮುದ್ದಣನು ಅಷ್ಟೇ ತಾನೇ ಯಾವ ಕತೆ ಹೇಳಲಿ ಭೋಜ ಪ್ರಬಂಧವೋ? ವಿಕ್ರಮ ವಿಜಯವೋ? ಮಹಾವೀರಚರಿತೆಯೋ? ಎಂದಾಗ ಇವುಗಳಲ್ಲಿ ನನಗೆ ಆಸಕ್ತಿಯಿಲ್ಲ ಉಳಿದರೂ ಅಳಿದರೂ ದಾರಿತೋರಿಸುವ ರಸಭರಿತವಾದ ಕತೆ ಹೇಳು ಎಂದು ಕೇಳುತ್ತಾಳೆ. ಆಗ ಮುದ್ದಣನು ನಿನಗೆ ಯಾವ ರಸದಲ್ಲಿ ಕತೆ ಹೇಳಲಿ ಶೃಂಗಾರ, ಹಾಸ್ಯ, ವೀರರಸಗಳೇ ಎಂದು ಕೇಳಿದನು. ಅದಕ್ಕೆ ಆಕೆ ಯಾವ ರಸದಲ್ಲಿ ಅಂದರೆ? ನವರಸಗಳು ಒಂದಾಗಿರುವ ಕತೆ ಹೇಳು ಎನ್ನುತ್ತಾಳೆ. ಹಾಗಾದರೆ ಯಾವ ಕತೆ ಎಂದಾಗ ರಾಮಾಯಣದೊಳ್ ಏನಾನು ಮೊಂದು ಎಂದಾಗ ಹಾಗೆಯೇ ಆಗಲಿ ಎಂದ ಮುದ್ದಣನು ಸೀತಾಸ್ವಯಂವರದ ಕತೆ ಹೇಳಲೇ ಎಂದಾಗ ಅದನ್ನು ಮೊದಲೇ ಕೇಳಿದ್ದೇನೆ ಎನ್ನುತ್ತಾಳೆ. ಹಾಗಾದರೆ ಏನು ಸೀತಾಪಹರಣದ ಕತೆ ಕೇಳುವ ಬಯಕೆಯೇ ಎಂದಾಗ ತಾನು ಒಲ್ಲೆ ಎನ್ನುತ್ತಾಳೆ. ಹಾಗಾದರೆ ಬೇರೆ ಯಾವ ಸುಂದರ ಕತೆಯನ್ನು ಹೇಳಲಿ ಎಂದಾಗ, ಇದೇಕೆ ಹೀಗೆ ಹೇಳುತ್ತಿದ್ದೀರಿ, ನಾಡಿನಲ್ಲಿ ಎಷ್ಟೋ ರಾಮಾಯಣದ ಕಥೆಗಳಿವೆ. ಅದರಲ್ಲಿ ನೀವು ಕೇಳ್ದು ಅರಿತಿರುವ ಒಂದು ಒಳ್ಳೆಯ ಕತೆಯನ್ನು ಹೇಳಿ ಎಂದಾಗ ಮುದ್ದಣನು ಯಾವುದಾಗಬಹುದು ಎಂದು ನೀನೇ ಒಂದನ್ನು ಆಯ್ದುಕೊಂಡು ಹೇಳು ಎನ್ನುತ್ತಾನೆ. ಆಗ ಮನೋರಮೆಯು ಶ್ರೀರಾಮನು ಅಶ್ವಮೇಧಯಾಗವನ್ನು ಕೈಗೊಂಡನಂತಲ್ಲ ಆ ಕತೆಯೇ ಹೇಳಿ ಎಂದಾಗ ಶೇಷ ರಾಮಾಯಣದ ಕತೆಯೇ ಆಗಬಹುದು ಎನ್ನುತ್ತಾ ಮುದ್ದಣನು ಆಕೆಯ ಮಾತಿಗೆ ಉತ್ತರವಾಗಿ

ಈ ಕತೆಯನ್ನು ಮೊದಲು ಶೇಷನು ವಾತ್ಸಾಯನನಿಗೆ ಹೇಳಿದನು ಎನ್ನುತ್ತಾನೆ. ಯಾವ ದಾಟಿಯಲ್ಲಿ ಹೇಳಲಿ ಪದ್ಯದಲ್ಲೋ ಅಥವಾ ಗದ್ಯದಲ್ಲೋ ಎಂದಾಗ, ಆಕೆ ಪ್ರತಿಕ್ರಿಯಿಸುತ್ತಾ ಹೃದಯಕ್ಕೆ ಹತ್ತಿರವಾದ ಗದ್ಯದಲ್ಲೇ ಆಗಬಹುದು ಎನ್ನುತ್ತಾಳೆ. ಮುದ್ದಣ ತನ್ನ ಸಲ್ಲಾಪವನ್ನು ಮುಂದುವರೆಸುತ್ತಾ ಅದು ಹಾಗಿರಲಿ ಅರಮನೆಯಲ್ಲಿ ಈ ರೀತಿಯ ನಲ್ಗತೆಯನ್ನು ಹೇಳಿದರೆ ರತ್ನದ ಕಡಗವನ್ನು, ಚಿನ್ನದ ಹಾರವನ್ನು ಉಡುಗೊರೆಯಾಗಿ ನೀಡುತ್ತಾರೆ. ನೀನು ಏನನ್ನು ಕೊಡುತ್ತೀಯಾ ಎಂದು ಆಕೆಯನ್ನು ಕೀಟಲೆಗೈಯುತ್ತಾ ಆತ ಪ್ರತಿಕ್ರಿಯಿಸುತ್ತಾನೆ.

3. ಎಂತಹ ತಿರುಳು ಕನ್ನಡದಲ್ಲಿ ಕತೆಯನ್ನು ಹೇಳುವುದಾಗಿ ಮುದ್ದಣ ಹೇಳುವನು?

ಮುದ್ದಣ ಕಥೆಯನ್ನು ಸ್ವಸ್ತಿ ಶ್ರೀಮತ್ಸುರಾಸುರೇಂದ್ರ ನರೇಂದ್ರ ಮುನೀಂದ್ರ......ಎಂದು ಆರಂಭಿಸಿದಾಗ ಮನೋರಮೆಯು ಓಓ! ತಡೆ! ತಡೆ! ಭೂಮಿಗೆ ಒಡೆಯನಾದ ಶ್ರೀರಾಮಚಂದ್ರನ ಕಥೆಯನ್ನು ಹೇಳು ಎಂದರೆ ಜೈನ ಮಹಾಪುರುಷರ ಕಥೆಯನ್ನು ಹೇಳುತ್ತಿದ್ದೀಯಾ?ಎಂದು ಪ್ರಶ್ನಿಸುತ್ತಾ, ಸಾಕು ಸಾಕು ಇಂಥ ಎದೆ ಬಿರಿಯುವ ಕತೆಗೆ ಎಂತಹ ಉಡುಗೊರೆ ನೀಡಲಿ ಎನ್ನುತ್ತಾಳೆ, ಆಗ ಮುದ್ದಣನು ಪ್ರತಿಕ್ರಿಯಿಸುತ್ತಾ ಈ ರೀತಿಯಾಗಿ ಕಾವ್ಯವನ್ನು ಪ್ರಾರಂಭಿಸುವುದು ಸಂಸ್ಕೃತದ ಒಂದು ಚೆಲುವು ಎನ್ನುತ್ತಾನೆ. ಆಗ ಮನೋರಮೆಯು ಆತನ ಮಾತಿಗೆ ಉತ್ತರವಾಗಿ ಒಳ್ಳೆದೊಳ್ಳೆದು ನೀರಿಳಿಯದ ಗಂಟಲೊಳ್ ಕಡುಬಂ ತುರುಕಿದಂತಾಯ್ತು ಕನ್ನಡದ ಸೊಗಸನ್ನೇ ಅರ್ಥಮಾಡಿಕೊಳ್ಳುವಷ್ಟು ಸಮರ್ಥಳು ನಾನಲ್ಲ, ಅಂತಹದ್ದರಲ್ಲಿ ಸಂಸ್ಕೃತದ ಸೊಗಸನ್ನು ಹೇಳುವುದೇ! ಆಗ ಮುದ್ದಣನು ಹಾಗಾದರೆ ಇನ್ನು ಯಾವ ರೀತಿಯಲ್ಲಿ ಹೇಳಲಿ ಎಂದಾಗ ಮನೋರಮೆಯು ಕನ್ನಡವು ಕಸ್ತೂರಿಯಂತೆ ಅಲ್ಲವೇ ಆದ್ದರಿಂದ ಕತೆಯನ್ನು ತಿರುಳ್ಗನ್ನಡದ ಬೆಳ್ನುಡಿಯಲ್ಲಿ ಸಾರವನ್ನು ಮಾತ್ರ ಹೇಳು ಎನ್ನುತ್ತಾಳೆ. ಆಗ ಮುದ್ದಣನು ಸಂಸ್ಕೃತ ಒಂದು ಚಿನ್ನದಲ್ಲಿ ಪೋಣಿಸಿದ ರತ್ನದ ಮಣಿ, ಕರಿಮಣಿ ಸರದಲ್ಲಿ ಕೆಂಪು ಹವಳವನ್ನು ಪೋಣಿಸಿದಂತೆ, ಸಂಸ್ಕೃತ ಮತ್ತು ಕನ್ನಡವನ್ನು ರಸಂ ವಸರುವಂತೆ, ಕಾವ್ಯ ಲಕ್ಷಣವಿರುವಂತೆ ಅಲ್ಲಲ್ಲಿ ಬೆರೆಸಿ ಹೇಳಿದಾಗ ಚೆನ್ನಾಗಿರುತ್ತದೆ ಎಂದು ಮುದ್ದಣ ಹೇಳುತ್ತಾನೆ.

4. ಮುದ್ದಣ–ಮನೋರಮೆಯರಸಂವಾದದಸ್ವಾರಸ್ಯವನ್ನು ವಿವರಿಸಿ.

ಕನ್ನಡ ಸಾಹಿತ್ಯ ಸೌರಭದಲ್ಲಿಯೇ ಮುದ್ದಣ–ಮನೋರಮೆಯರ ಸಂವಾದ ಬಹಳ ಸ್ವಾರಸ್ಯಕರವಾದ ಘಟ್ಟವಾಗಿದೆ. ಅರಮನೆಯಿಂದ ಬಂದ ಪತಿಯನ್ನು ಉಪಚರಿಸುತ್ತಾ ಬಗೆಯು ಬೆಸರ್ತುದು ಏನಾನುಂ ಒಂದು ನಲ್ಗತೆಯಂ ಪೇಳಾ ಎಂದರೆ ಪ್ರಾಣೇಶ್ವರೀ ತಡೆಯೇಂ ಇನಿತೊಂದು ಬಯಕೆ ತಲೆದೋರೆಆವಗಹನಂ ಎಂದು ಹೇಳುವಾಗ, ಸೀತಾಪಹರಣದ ಕಥೆಯ ಕೇಳುವ ಬಯಕೆಯೇ ಎಂದಾಗ ಉ:! ಆನೊಲ್ಲೆಂ ಎನ್ನುತ್ತಾಳೆ, ಮೇಣ್ ಆವ ನಲ್ಗತೆಯಂ ಪೇಳ್ವೆನೋ ಎಂದು ಗೊಂದಲ ತೋರಿದರೆ ಇಂತೇಕೆ ಉಸಿರ್ವಯ್ ನಾಡೊಳ್ ಎನಿತ್ತೋ ರಾಮಾಯಣಂಗಳ್ ಒಳವು ನೀಂ ಕೇಳ್ದುದರೊಳೇ ನಲ್ಮೆದೋರೆ ಕಂಡು ಪೇಳ್ವುದು ಎಂದು ತನ್ನ ಗಂಡ ಜ್ಞಾನಿ ಎಷ್ಟೆಲ್ಲಾ ತಿಳಿದುಕೊಂಡಿದ್ದಾನೆ ಎಂಬ ಭಾವ ವ್ಯಕ್ತಪಡಿಸುತ್ತಾಳೆ. ಅಂತೆಯೇ ಉಡುಗೊರೆಯ ವಿಚಾರ ಬಂದಾಗ ಅರಮನೆಯಲ್ಲಿ ಈ ರೀತಿಯ ಕಥೆ ಹೇಳಿದರೆ ರತ್ನದ ಕಡಗವನ್ನೋ ಚಿನ್ನದ ಕಂಠೀಹಾರವನ್ನೋ ಕೊಡುತ್ತಾರೆ ನೀನು ಏನು ಕೊಡುವೆ ಎಂದು ಛೇಡಿಸಿದರೆ ಅದಕ್ಕೆ ತಕ್ಕ ಉತ್ತರವಾಗಿ ಎನ್ನನೇ ಆನೀವೆಂ ಎಂದು ಹೇಳುತ್ತಾಳೆ. ಅವನು ಬಿಡದೆ ಮೊದಲೇ ನಿನ್ನ ತಂದೆ–ತಾಯಿಗಳು ನಿನ್ನನ್ನು ನನಗೆ ಅರ್ಪಿಸಿದ್ದಾರೆ, ಬೇರೆ ಏನು ಕೊಡುವೆ ಎಂದು ಕೀಟಲೆ ಮಾಡುತ್ತಾನೆ. ಅವಳೋ ಮಹಾ ಜಾಣೆ ಅರಮನೆಯವರು ಕಥೆ ಕೇಳಿದ ನಂತರ ಉಡುಗೊರೆ ನೀಡುವರಲ್ಲವೇ ನಾನು ಕಥೆ ಕೇಳಿ ಅದರ ಶಕ್ತಿ ಎಷ್ಟಿದೆ ನೋಡಿ ಅದಕ್ಕೆ ತಕ್ಕಂತೆ ಸನ್ಮಾನಿಸುತ್ತೇನೆ ಎಂಬ ಜಾಣ ಉತ್ತರ ನೀಡುತ್ತಾಳೆ. ಸಂಸ್ಕೃತದಲ್ಲಿ ಕಥೆಯನ್ನು ಆರಂಭಿಸಿದೊಡೆ ಈ ರೀತಿ ಆರಂಭವಾಗುವ ಕಥೆಗೆ ಎಂತು ಉಡುಗೊರೆ ಯೀವೇನೋ ಎಂದು ರೇಗಿಸುತ್ತಾಳೆ. ಅಲ್ಲದೆ ನೀರಿಳಿಯದ ಗಂಟಲಲ್ಲಿ ಕಡುಬನ್ನು ತುರುಕಿದಂತೆ ಆಯಿತು ಸರಳವಾಗಿ ತಿಳಿಕನ್ನಡದಲ್ಲಿ ಕಥೆ ಹೇಳು ಎಂದು ಕನ್ನಡ ಪ್ರೇಮ ವ್ಯಕ್ತಪಡಿಸುತ್ತಾಳೆ. ಇವರಿಬ್ಬರ ಸಂವಾದದಲ್ಲಿ ಪತಿ ಪತ್ನಿಯರ ನಡುವಿನ ಸಲ್ಲಾಪ, ಒಬ್ಬರನೊಬ್ಬರು ರೇಗಿಸುವ, ಕೆಣಕುವ, ಮೆಚ್ಚುವ ಭಾವಗಳು ಕಣ್ಣೆದುರು ತೇಲಿ ಹೋಗುತ್ತದೆ.

===0===

# ಹಳ್ಳಿಯ ಚಹಾ ಹೋಟೇಲುಗಳು

**ವೀರೇಂದ್ರ ಸಿಂಪಿ**

**ಸಂದರ್ಭ ಸಹಿತ ವಿವರಿಸಿ:**

1. ಅದು ಯಾವ ಶಸ್ತ್ರಕ್ಕೂ ಮಣಿಯದು.

ಆಯ್ಕೆ: ಈ ಮಾತನ್ನು ವೀರೇಂದ್ರ ಸಿಂಪಿಯವರು ಬರೆದ ಹಳ್ಳಿಯ ಚಹಾ ಹೋಟೇಲುಗಳು ಎಂಬ ಗದ್ಯ ಭಾಗದಿಂದ ಆರಿಸಲಾಗಿದೆ.

ಸಂದರ್ಭ: ಪಟ್ಟಣದ ಹೋಟೇಲಿನ ಬಗ್ಗೆ ವಿವರಿಸುವಾಗ ಈ ಮಾತು ಬಂದಿದೆ.

ವಿವರಣೆ: ಪಟ್ಟಣದ ಹೋಟೇಲಿನಲ್ಲಿ ಶುಭ್ರ ವಸ್ತ್ರದ ಮಾಣಿ ಇರುತ್ತಾನೆ. ಏನಿದೆ ಎಂದು ನಾವು ನೀರಸವಾಗಿ ಕೇಳಿದರೆ ಬೋಂಡ, ದೋಸೆ, ಉತ್ತಪ್ಪ, ಉಪಮಾ, ಪೂರಿ, ಭಜಿ ಎಂದು ಪಟಪಟನೆ ಒದರುತ್ತಾನೆ. ಆದರೆ ಅದರಲ್ಲಿ ಬಿಸಿ ಯಾವುದು ಹಸಿ ಯಾವುದು ತಾಜಾ ಯಾವುದು ಹಳಸಿದ್ದು ಯಾವುದು ಎಂದು ಸ್ವತಃ ಮಾಣಿಗೂ ಗೊತ್ತಿಲ್ಲ. ನೂರು ಹೆಸರುಗಳಲ್ಲಿ ಯಾವುದೋ ಹೆಸರಿಗೆ ಜೋತುಬಿದ್ದು ಬೋಂಡ ತರಿಸಿದರೆ ಗಂಟಲಲ್ಲೇ ಇಳಿಯುವುದಿಲ್ಲ. ಅದೇ ರೀತಿ ವಡೆ ತರಿಸಿದರೆ; ಯಾವ ಶಸ್ತ್ರವನ್ನು ಉಪಯೋಗಿಸಿದರೂ ಅದನ್ನು ತಿನ್ನಲಾಗುವುದಿಲ್ಲ ಎನ್ನುವಾಗ ಈ ಮೇಲಿನಂತೆ ಲೇಖಕರು ಹೇಳಿದ್ದಾರೆ.

2. ಇಂದು ಸ್ಪೆಶಲ್ ಅವಲಕ್ಕಿ ಸೂಸಲ ಮಾಡಿದ್ದೇನೆ.

ಆಯ್ಕೆ: ಈ ಮಾತನ್ನು ವೀರೇಂದ್ರ ಸಿಂಪಿಯವರು ಬರೆದ ಹಳ್ಳಿಯ ಚಹಾ ಹೋಟೇಲುಗಳು ಎಂಬ ಗದ್ಯ ಭಾಗದಿಂದ ಆರಿಸಲಾಗಿದೆ.

ಸಂದರ್ಭ: ಹಳ್ಳಿ ಹೋಟೇಲಿಗೆ ಹೋಗುವ ಗ್ರಾಹಕರಿಗೆ ಮಾಣಿಗಳಿಂದ ಸಿಗುವ ಆತಿಥ್ಯದ ಕುರಿತಾಗಿ ಹೇಳುವಾಗ ಈ ಮಾತು ಬಂದಿದೆ.

ವಿವರಣೆ: ಹಳ್ಳಿಯ ಹೋಟೇಲುಗಳಲ್ಲಿ ನಮ್ಮ ಬೇಕು ಬೇಡಗಳನ್ನು ಅರಿತ ಮಾಣಿ ಒಂದು ಕೈಯಿಂದ ಬೆವರನ್ನು ಒರೆಸಿಕೊಳ್ಳುತ್ತ ಇನ್ನೊಂದು ಕೈಯಲ್ಲಿ ನಮ್ಮ ನೆಚ್ಚಿನ ಪೂರಿ ಸಾಗುಗಳನ್ನು ತಂದು ಮುಂದೆ ಇಡುತ್ತಾನೆ. ಪೂರಿಯ ಎಣ್ಣೆ ನಮ್ಮ ಪ್ರಕೃತಿಗೆ ಒಗ್ಗದು ಎಂದು ತಿಳಿದು ಅದನ್ನು ಒರೆಸಿ ತೆಗೆಯಲು ರದ್ದಿ ಕಾಗದದ ಚೂರುಗಳನ್ನೂ ತಂದು ಇರಿಸುತ್ತಾನೆ. ಹೆಂಡತಿಯೂ ತೋರಿಸದ ಕಾಳಜಿ ಈ ಮಾಣಿ ತೋರುತ್ತಾನೆ. ಪೂರಿಯ ಪ್ಲೇಟನ್ನು ಸರಿಸುತ್ತಲೇ ಭಜಿಯೂ ಬಂದು ನಮ್ಮೆದುರು ಕೂಡುತ್ತದೆ. ಇಂದು ಸ್ಪೆಶಲ್ ಅವಲಕ್ಕಿ ಸೂಸಲ ಮಾಡಿದ್ದೇನೆ. ತರಲೇನು ಕೇವಲ ನಿಮಗಾಗಿಯೇ ಎಂದು ಕಿವಿಯಲ್ಲಿ ಉಸುರುತ್ತಾನೆ ಎಂದು ಹೇಳುವ ಸಂದರ್ಭವಿದು.

3. ಅನಕ್ಷರಸ್ಥರ ಪಾರ್ಲಿಮೆಂಟು.

ಆಯ್ಕೆ: ಈ ಮಾತನ್ನು ವೀರೇಂದ್ರ ಸಿಂಪಿಯವರು ಬರೆದ ಹಳ್ಳಿಯ ಚಹಾ ಹೋಟೇಲುಗಳು ಎಂಬ ಗದ್ಯ ಭಾಗದಿಂದ ಆರಿಸಲಾಗಿದೆ.

ಸಂದರ್ಭ: ಹಳ್ಳಿಯ ಚಹಾ ಹೋಟೇಲುಗಳು ಸಾರ್ವಜನಿಕರ ಕೂಟ ಎಂದು ಲೇಖಕರು ಹೇಳುವ ಸಂದರ್ಭವಿದು.

ವಿವರಣೆ: ಹಳ್ಳಿಯ ಚಹಾ ಹೋಟೇಲುಗಳೆಂದರೆ ಅದೊಂದು ಸಾರ್ವಜನಿಕರ ಕೂಟವಾಗಿದೆ. ಬೇರೆ ಬೇರೆ ರೀತಿಯ ಜನರು ಬಂದು ಅವರ ಅಭಿರುಚಿಗೆ ತಕ್ಕಂತೆ ಹೋಟೇಲಲ್ಲಿ ಕಾಲಕಳೆಯುತ್ತಾರೆ. ಹೋಟೇಲೆಂದರೆ ರಸಿಕರ ಉಂಡಾಡಿಗಳ ನಿವಾಸ, ತರುಣರ ಕ್ಲಬ್ಬು, ಗೃಹಸ್ಥರ ವಿಶ್ರಾಮಗೃಹ , ವೃದ್ಧರ ಬಾಯಚಪಲ ತಣಿಸುವ ಅಕ್ಷ0ಯ ಪಾತ್ರೆ, ಅನಕ್ಷರಸ್ಥರ ಪಾರ್ಲಿಮೆಂಟು, ಸರ್ವ ವಯಸ್ಸಿನ, ಸರ್ವ ಅಭಿರುಚಿ ಹವ್ಯಾಸಗಳ, ಸರ್ವ ಉದ್ಯೋಗದ, ಸರ್ವ ಜಾತಿಗಳ ಜನರಿಗೆ ಇಲ್ಲಿ ಸಮನಾದ ಸ್ಥಾನವಿದೆ. ಎಲ್ಲಾ ರೀತಿಯ ವಿಷಯಗಳು ಅಲ್ಲಿ ಚರ್ಚೆಗೆ ಒಳಗಾಗುತ್ತವೆ ಎಂದು ಲೇಖಕರು ವಿವರಿಸುವಾಗ ಈ ಮಾತು ಬಂದಿದೆ.

4. ನನ್ನ ದೃಷ್ಟಿಯಲ್ಲಿ ವಾರ್ತಾ ಇಲಾಖೆ ಇದ್ದಂತೆ.

ಆಯ್ಕೆ: ಈ ಮಾತನ್ನು ವೀರೇಂದ್ರ ಸಿಂಪಿಯವರು ಬರೆದ ಹಳ್ಳಿಯ ಚಹಾ ಹೋಟೇಲುಗಳು ಎಂಬ ಗದ್ಯ ಭಾಗದಿಂದ ಆರಿಸಲಾಗಿದೆ.

ಸಂದರ್ಭ: ಹಳ್ಳಿಯ ಹೋಟೇಲುಗಳನ್ನು ಲೇಖಕರು ವಾರ್ತಾ ಇಲಾಖೆಗೆ ಹೋಲಿಸುವ ಸಂದರ್ಭವಿದು.

ವಿವರಣೆ: ಕಾಲುಬಿಟ್ಟ ಕತ್ತೆಯಂತೆ ಊರಸುತ್ತ ತಿರುಗಾಡುವ ಹಳ್ಳಿಯ ಗಂಡಸರಿಗೆ ಸಾಮಾಜಿಕ ವಿಷಯಗಳ ಬಗ್ಗೆ ಮಾತನಾಡಲು ಹಳ್ಳಿಯ ಹೋಟೇಲ್ ಪ್ರಶಸ್ತವಾದ ಸ್ಥಳ. ತಮ್ಮ ಮನೆಯ ಸಮಾಚಾರ ತಮಗೆ ತಿಳಿದಿರದಿದ್ದರೂ ಊರ ಮೂಲೆ ಮೂಲೆಗಳಲ್ಲಿ ಏನು ನಡೆದಿದೆ, ಯಾರು ಹುಟ್ಟಿದರು, ಯಾರು ಸತ್ತರು, ಯಾರ ಮನೆಯಲ್ಲಿ ಆಕಳು ಈಯಿತು, ಯಾರ ಕೊಟ್ಟಿಗೆಯಲ್ಲಿ ಎಮ್ಮೆ ಸತ್ತಿತು, ಯಾರ ಬಣವೆಗೆ ಬೆಂಕಿ ಹಚ್ಚಿದರು, ಯಾರ ಮನೆ ದರೋಡೆಯಾಯ್ತು ಎಂಬ ಸಣ್ಣ ದೊಡ್ಡ ವಿಷಯಗಳನೆಲ್ಲ ಹೋಟೇಲಿನಲ್ಲಿ ಮಾತನಾಡುತ್ತ ಕಾಲಕಳೆಯುತ್ತಾರೆ. ಹಾಗಾಗಿ ಇದೊಂದು ವಾರ್ತಾ ಇಲಾಖೆ ಇದ್ದಂತೆ ಎಂದು ಲೇಖಕರು ಹೇಳಿದ್ದಾರೆ.

5. ಇಳಕಲ್ ಸೀರೆ ಉಟ್ಟ ಗುಳೇದಗುಡ್ಡ ಕುಪ್ಪಸ ತೊಟ್ಟ ಹೆಣ್ಣಿದ್ದಂತೆ.

ಆಯ್ಕೆ: ಈ ಮಾತನ್ನು ವೀರೇಂದ್ರ ಸಿಂಪಿಯವರು ಬರೆದ ಹಳ್ಳಿಯ ಚಹಾ ಹೋಟೇಲುಗಳು ಎಂಬ ಗದ್ಯ ಭಾಗದಿಂದ ಆರಿಸಲಾಗಿದೆ.

ಸಂದರ್ಭ: ಪಟ್ಟಣದ ಹೋಟೇಲಿಗಿಂತ ಹಳ್ಳಿ0ಯ ಹೋಟೇಲುಗಳಲ್ಲಿರುವ ಹೆಚ್ಚುಗಾರಿಕೆಯನ್ನು ಕುರಿತು ಹೇಳುವ ಸಂದರ್ಭವಿದು.

ವಿವರಣೆ: ಪೇಟೆಯ ಹೋಟೇಲು ನೋಡಲು ಅಂದವಾಗಿರುತ್ತದೆ. ಅಲ್ಲಿಯ ಆಹಾರ ಅಷ್ಟು ಚೆನ್ನಾಗಿರುವುದಿಲ್ಲ. ಅದು ನಯನಾಜೂಕಿನ ಹೆಣ್ಣಿದ್ದಂತೆ. ಹಳ್ಳಿಯ ಚಹಾ ಫಳಾರದ ಅಂಗಡಿಯೆಂದರೆ ಇಳಕಲ್ಲ ಸೀರೆ ಉಟ್ಟ ಗುಳೇದಗುಡ್ಡ ಕುಪ್ಪಸ ತೊಟ್ಟ ಹೆಣ್ಣಿದ್ದಂತೆ. ನೋಡಲು ಅಂದವಾಗಿರುವುದಿಲ್ಲ. ಆದರೆ ಸ್ವರ್ಗ ಸುಖ ಕೊಡಬಲ್ಲದು. ಹಳ್ಳಿಯ ಹೋಟೇಲಿನ ವೈಶಿಷ್ಟ್ಯದ ಕುರಿತಾಗಿ ಲೇಖಕರು ಈ ಮಾತಿನ ಮೂಲಕ ಹೇಳಿದ್ದಾರೆ.

6.ಬಾಯಿ ಚಪಲ ತಣಿಸುವ ಅಕ್ಷಯ ಪಾತ್ರೆ.

ಆಯ್ಕೆ: ಈ ಮಾತನ್ನು ವೀರೇಂದ್ರ ಸಿಂಪಿಯವರು ಬರೆದ ಹಳ್ಳಿಯ ಚಹಾ ಹೋಟೇಲುಗಳು ಎಂಬ ಗದ್ಯ ಭಾಗದಿಂದ ಆರಿಸಲಾಗಿದೆ.

ಸಂದರ್ಭ: ಪಟ್ಟಣದ ಹೋಟೇಲಿಗಿಂತ ಹಳ್ಳಿ0ಯ ಹೋಟೇಲುಗಳು ಏನೆಲ್ಲ ಹೆಚ್ಚುಗಾರಿಕೆಯನ್ನು ಮಾಡುತ್ತವೆ ಎಂಬ ಕುರಿತು ಹೇಳುವ ಸಂದರ್ಭವಿದು.

ವಿವರಣೆ: ಹಳ್ಳಿಯ ಹೋಟೆಲ್ ಗಳೆಂದರೆ ಏನೆಂದು ತೀಳಿದಿದ್ದಿರಿ, ಅದೊಂದು ಸಾರ್ವಜನಿಕ ಕೂಟ. ರಸಿಕರ ಉಂಡಾಡಿಗಳ ನಿವಾಸ, ತರುಣರ ಕ್ಲಬ್ಬು, ಗೃಹಸ್ಥರ ವಿಶ್ರಾಮ ಗೃಹ, ವೃದ್ಧರ ಬಾಯಚಪಲ ತಣಿಸುವ ಅಕ್ಷಯ ಪಾತ್ರೆ, ಅನಕ್ಷಸ್ಥರ ಪಾಲಿಗೆ ಪಾರ್ಲಿಮೆಂಟು, ಸರ್ವ ವಯಸ್ಸಿನ, ಸರ್ವ ಅಭೀರುಚಿಯ ಹವ್ಯಾಸಗಳ ಸರ್ವ ಉದ್ಯೋಗಸ್ಥರ ಜನರಿಗೆ ಇದು ಸಮಾನ ಸ್ಥಳ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿರುತ್ತದೆ.

**ಒಂದು ವಾಕ್ಯದಲ್ಲಿ ಉತ್ತರಿಸಿ:**

1. ಕಲಿಯುಗದ ಅಮೃತ ಯಾವುದು?

ಕಲಿಯುಗದ ಅಮೃತ ಚಹಾ.

2. ಮೂರು ಕಾಲಿನ ಕುರ್ಚಿ ಎಲ್ಲಿದೆ?

ಹಳ್ಳಿಯ ಚಹಾ ಫಳಾರದ ಅಂಗಡಿಯಲ್ಲಿ ಮೂರು ಕಾಲಿನ ಕುರ್ಚಿ ಇದೆ

3. ಎತ್ತುಗಳು ಗಕ್ಕೆಂದು ಎಲ್ಲಿ ನಿಲ್ಲುತ್ತವೆ?

ಫಳಾರದ ಅಂಗಡಿ ಬಂದೊಡನೆ ಎತ್ತುಗಳು ಗಕ್ಕೆಂದು ನಿಲ್ಲುತ್ತವೆ.

4. ಬಾಯಿಚಪಲ ಯಾರಿಗೆ ಜಾಸ್ತಿ ಇರುತ್ತದೆ?

ಬಾಯಿಚಪಲ ವೃದ್ಧರಿಗೆ, ಪೇನ್‌ಶನ್‌ದಾರರಿಗೆ ಜಾಸ್ತಿ ಇರುತ್ತದೆ.

5. ಲೇಖಕರ ದೃಷ್ಟಿಯಲ್ಲಿ ಹಳ್ಳಿಯ ಚಹಾದ ಅಂಗಡಿ ಹೇಗೆ?

ಲೇಖಕರ ದೃಷ್ಟಿಯಲ್ಲಿ ಹಳ್ಳಿಯ ಚಹಾದ ಅಂಗಡಿ ವಾರ್ತಾ ಇಲಾಖೆಯಿದ್ದಂತೆ.

6. ಯಾರ ಬಗ್ಗೆ ಮೂಕರ್ಜಿಯ ದೂರನ್ನು ಹಳ್ಳಿಗರು ಕೊಡುತ್ತಾರೆ?

ಹೆಡ್‌ಮಾಸ್ತರರ ಬಗ್ಗೆ ಮೂಕರ್ಜಿಯ ದೂರನ್ನು ಹಳ್ಳಿಗರು ಕೊಡುತ್ತಾರೆ.

7. ಕಲ್ಲಪ್ಪನವರ ಗೂಢ ಪ್ರಶ್ನೆ ಯಾವುದು?

ಆ ಶಿವಶರಣಪ್ಪನಿಗೆ ಅಷ್ಟು ಸುಂದರ ಹೆಂಡತಿ ಯಾಕಿರಬೇಕು? ಎಂಬುದು ಕಲ್ಲಪ್ಪನವರ ಗೂಢ ಪ್ರಶ್ನೆ.

8. ಲೋಕಲ್ ಸುದ್ದಿಗಳಿಗೆ ಎಲ್ಲಿ ಪ್ರಾಶಸ್ತ್ಯವಿದೆ?

ಹಳ್ಳಿಯ ಹೊಟೇಲುಗಳಲ್ಲಿ ಲೋಕಲ್ ಸುದ್ದಿಗಳಿಗೆ ಪ್ರಾಶಸ್ತ್ಯವಿದೆ.

9. ಲೇಖಕರು ಹೇಳುವ ಹಳ್ಳಿಯ ಹೋಟೇಲಿನ ಹೆಸರೇನು?

ಲೇಖಕರು ಹೇಳುವ ಹಳ್ಳಿಯ ಹೋಟೇಲಿನ ಹೆಸರು ಚಂದ್ರಭವನ.

10. ಯಾವುದಕ್ಕೆ ಭೇಟಿ ಕೊಡಬೇಕೆಂದು ಲೇಖಕರು ಹೇಳುತ್ತಾರೆ?

ಸಮೀಪದ ಹಳ್ಳಿಯ ಚಹಾ ಫಳಾರದ ಅಂಗಡಿಗೆ ಭೇಟಿ ಕೊಡಬೇಕೆಂದು ಲೇಖಕರು ಹೇಳುತ್ತಾರೆ.

**ಎರಡು– ಮೂರು ವಾಕ್ಯಗಳಲ್ಲಿ ಉತ್ತರಿಸಿ:**

1. ಪಟ್ಟಣದ ಹೋಟೇಲಿನ ಕಟ್ಟಡ ಹೇಗಿದೆ?

ಮನವನ್ನಾಕರ್ಷಿಸುವ ಭವ್ಯ ಕಟ್ಟಡವಿದೆ. ನಡೆದರೆ ಕಾಲು ಜಾರುವ ನಯವಾದ ಫರಸಿಯ ನೆಲವಿದೆ.ಕೂತರೆ ಮಾಸಿ ಹೋದೀತೆನ್ನುವ ಖುರ್ಚಿಯಿದೆ. ತಂಪಾದ ಫ್ಯಾನಿನ ಗಾಳಿಯಿದೆ. ಡೆಕೋಲಮ್‌ನಿಂದ ಅಲಂಕೃತವಾದ ಟೇಬಲ್ಲೂ ಇದೆ.ಟೇಬಲ್ ಮೇಲೆ ಗ್ಲಾಸೂ ಇದೆ. ಗ್ಲಾಸಿನಲ್ಲಿ ನೀರೂ ಇದೆ.

2. ಹಳ್ಳಿಯ ಚಹಾದ ಅಂಗಡಿಯೆಂದರೆ ಹೇಗಿರುತ್ತದೆ?

ಹಳ್ಳಿಯ ಚಹಾದ ಅಂಗಡಿಯಲ್ಲಿ ಮುರುಕು ಬೆಂಚು ಇದೆ. ಮೂರು ಕಾಲಿನ ಕುರ್ಚಿ ಇದೆ. ಗಟ್ಟಿ ಹಾಲಿನ ಹೆಡಸು, ಚಹಾದ ಕಂಪು ಬಣ್ಣ ಎಲ್ಲಾ ಇದೆ. ಜೊತೆಗೆ ಆತ್ಮೀಯತೆ, ಆತಿಥ್ಯವೂ ಇದೆ.

3. ಭಾವೈಕ್ಯತೆ ಈ ದೇಶದಲ್ಲಿ ಎಲ್ಲಿದೆ?

ಹಳ್ಳಿಯ ಹೋಟೇಲುಗಳು ಸಾರ್ವಜನಿಕರ ಕೂಟ. ಸರ್ವ ವಯಸ್ಸಿನ, ಸರ್ವ ಅಭಿರುಚಿ ಹವ್ಯಾಸಗಳ, ಸರ್ವ ಉದ್ಯೋಗದ, ಸರ್ವ ಜಾತಿಗಳ ಜನರಿಗೆ ಇಲ್ಲಿ ಸಮಾನವಾಗಿದೆ. ಹಳ್ಳಿಗಳಲ್ಲಿ ಸಮಾನತೆಯ ಬೀಜವನ್ನು ಬಿತ್ತಿ ಬೆಳೆದ ಸಂಸ್ಥೆಯೆಂದರೆ ಚಹಾ ಫಳಾರದ ಅಂಗಡಿಯೇ ಆಗಿದೆ. ಭಾವೈಕ್ಯತೆ ನಮ್ಮ ದೇಶದಲ್ಲಿ ಎಲ್ಲಿಯಾದರೂ ಇದ್ದಿದ್ದರೆ ಅದು ನಮ್ಮ ಹಳ್ಳಿಯ ಚಹಾ ಫಳಾರದ ಅಂಗಡಿಯಲ್ಲಿ.

4. ರೋಗಿಗಳ ಹಾಗೂ ಪಥ್ಯ ಮಾಡುವವರ ಜಿದ್ದು ಎಂತಹುದು?

ಮನೆಯಲ್ಲಿ ಪಥ್ಯ ಮಾಡುತ್ತ ಹೋಟೇಲಿನಲ್ಲಿಕರಿದ ಪದಾರ್ಥಗಳನ್ನು ಜಡಿಯುವ ರೋಗಿಗಳ ಹಾಗೂ ಪಥ್ಯ ಮಾಡುವವರ ಜಡ್ಡೆಂದೂ ನೆಟ್ಟಗಾಗದು. ಹಾಗೂ ಸಾಯುತ್ತೇವೆ, ಹೀಗೂ ಸಾಯುತ್ತೇವೆ, ಕರಿದಿದ್ದನ್ನು ತಿಂದು ಸಾಯುತ್ತೇವೆ ಎನ್ನುವುದು ಇವರ ಜಿದ್ದು.

5. ಗಿಡ್ಡ ಮಾಸ್ತರು ಶಾಲೆಯಲ್ಲಿ ಹುಡುಗರಿಗೆ ಏಕೆ ಹೊಡೆಯುತ್ತಾರೆ?

ಗಿಡ್ಡ ಮಾಸ್ತರು ಶಾಲೆಯಲ್ಲಿ ಹುಡುಗರಿಗೆ ಹೊಡೆಯುತ್ತಾರೆ. ಆ ರೀತಿ ಹೊಡೆಯುವುದಕ್ಕೆ ಮನೆಯಲ್ಲಿ ಅವರ ಹೆಂಡತಿಯ ಕಾಟವೇ ಕಾರಣ.

6. ಹಳ್ಳಿಗರ ಆಕ್ಷೇಪದ ವಿಷಯ ಯಾವುದು?

ಹೊಸದಾಗಿ ವರ್ಗವಾಗಿ ಬಂದ ವೈದ್ಯಾಧಿಕಾರಿ ರೋಗಿಗಳಿಗೆ ಬರೀ ಪ್ರಿಸ್ಕ್ರಿಪ್ಶನ್ ಮಾತ್ರೆ ಬರೆದುಕೊಡುತ್ತಿದ್ದಾರೆ. ಇದು ಹಳ್ಳಿಗರ ಆಕ್ಷೇಪದ ವಿಷಯ.

7. ಸುದ್ದಿಯ ಸೂರಪ್ಪ ಗೊಂಬೆಯನ್ನು ಹೇಗೆ ವರ್ಣಿಸುತ್ತಾನೆ?

ಸುದ್ದಿಯ ಸೂರಪ್ಪನವರಿಗೂ ಹಳ್ಳಿಯ ಹೋಟೇಲಿನಲ್ಲಿ ಸ್ಥಾನವಿದೆ. ಆ ಜನ್ಮ ಬ್ರಹ್ಮಚಾರಿ ಹನುಮಾನ್ ಭಕ್ತ ಭರಮಣ್ಣ–ತಾನು ಪಟ್ಟಣಕ್ಕೆ ಹೋದಾಗ ಶೋರೂಂನ ಎದುರಿಗೆ ನಿಲ್ಲಿಸಿದ ಹೆಣ್ಣು ಗೊಂಬೆಯನ್ನು ಎವೆಯಿಕ್ಕದೆ ನೋಡಿ ಬಂದು "ಏನ್ ಹೆಣ್ಣಪ್ಪಾ ಅದು. ಕೈ ತೊಳೆದು ಮುಟ್ಟಬೇಕು ಅದನ್ನು" ಎಂದು ಗೊಂಬೆಯನ್ನು ವರ್ಣಿಸುತ್ತಾನೆ.

**ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ:**

1. ಹಳ್ಳಿಯ ಚಹಾದಂಗಡಿಯನ್ನು ಪರಿಚಯಿಸಿ.

ಹಳ್ಳಿಯ ಚಹಾದ ಅಂಗಡಿಯನ್ನು ಇಳಕಲ್ಲ ಸೀರೆ ಉಟ್ಟು ಗುಳೇದಗುಡ್ಡದ ಕುಬಸ ತೊಟ್ಟ ಹೆಣ್ಣಿದ್ದಂತೆ. ನೋಡಲು ಅಂದವಾಗಿರದಿದ್ದರೂ ಸ್ವರ್ಗ ಸುಖ ಕೊಡಬಲ್ಲದು. ಹಳ್ಳಿಯ ಚಹಾದ ಅಂಗಡಿಯಲ್ಲಿ ಮುರುಕು ಬೆಂಚು ಇದೆ. ಮೂರು ಕಾಲಿನ ಕುರ್ಚಿ ಇದೆ. ಗಟ್ಟಿ ಹಾಲಿನ ಹೆಡಸು, ಚಹಾದ ಕಂಪು ಬಣ್ಣ ಎಲ್ಲಾ ಇದೆ.ಜೊತೆಗೆ ಆತ್ಮೀಯತೆ, ಆತಿಥ್ಯವೂ ಇದೆ. ಎರಡೂ ಕಾಲುಗಳನ್ನು ಬೆಂಚಿನ ಮೇಲಿರಿಸಿ, ಹೊಟ್ಟೆರಾಯನ ಸೇವೆ ಮಾಡಿ ಪ್ಲೇಟಿನಲ್ಲಿ ಕೈ ತೊಳೆದು, ನಂತರ ಕೈಯನ್ನು ಒರೆಸಿಕೊಂಡು, ಇಂಜಿನ್ ಹೊಗೆಯಂತೆ ಬೀಡಿಯ ಹೊಗೆಯನ್ನು ಬಿಡುತ್ತ ಕೆಮ್ಮುತ್ತ ತಾಸುಗಟ್ಲೆ ಅಲ್ಲಿ ಕೂಡಬಹುದು. ತಿಂದದಕ್ಕೆ ಹಣ ಕೊಡಬೇಕಾಗಿಲ್ಲ. ಕೌಂಟರ ಮುಂದೆ ನಿಂತು 'ನನ್ನ ಹೆಸರಲ್ಲೇ ಹಚ್ರಿ' ಎಂದರೆ ಸಾಕು. ಸುಗ್ಗಿಗೊಮ್ಮೆ ನಾಲ್ಕು ಚೀಲ ಜೋಳ ತಂದು ಹೋಟೇಲಿಗೆ ಹಚ್ಚಿದರೆ ಬಾಕಿ ಚುಕ್ತಾ ಆಯಿತು. ಹಳ್ಳಿಯ ಹೋಟೇಲೆಂದರೆ ಸಾರ್ವಜನಿಕರ ಕೂಟ. ರಸಿಕರ ಉಂಡಾಡಿಗಳ ನಿವಾಸ, ತರುಣರ ಕ್ಲಬ್ಬು, ಗೃಹಸ್ಥರ ವಿಶ್ರಾಮಗೃಹ, ವೃದ್ಧರ ಬಾಯ ಚಪಲ ತಣಿಸುವ ಅಕ್ಷಯ ಪಾತ್ರೆ, ಅನಕ್ಷರಸ್ಥರ ಪಾರ್ಲಿಮೆಂಟು, ಸರ್ವ ವಯಸ್ಸಿನ, ಸರ್ವಜಾತಿಗಳ ಜನರಿಗೆ ಇಲ್ಲಿ ಸಮವಾದ ಸ್ಥಾನವಿದೆ. ಭಾವೈಕ್ಯತೆಯನ್ನು ಹಳ್ಳಿಯ ಚಹಾದಂಗಡಿಯಲ್ಲಿ ಕಾಣಬಹುದು. ಹಳ್ಳಿಯ ಚಹಾದಂಗಡಿ ವಾರ್ತಾ ಇಲಾಖೆಯಿದ್ದಂತೆ. ಹಳ್ಳಿಯ ಸಣ್ಣ ದೊಡ್ಡ ವಿಚಾರಗಳೆಲ್ಲ ಹೋಟೇಲಿನ ಸದಸ್ಯರ ಪಾಲಿಗೆ ಸುದ್ದಿಯ

ಸಾಮಾಗ್ರಿಗಳು. ಜನರು ತಮ್ಮ ಹೊಟ್ಟೆಕಿಚ್ಚು, ಸಿಟ್ಟು, ದರ್ಪ, ಧಕ್ಕೆಗೊಂಡ ಗರ್ವ, ಅಳಲುಗಳನ್ನು ಅಭಿವ್ಯಕ್ತಿಸುತ್ತಾರೆ. ದೇಶ ವಿದೇಶಗಳ ಸುದ್ದಿಗಳಿಗೂ ಇಲ್ಲಿ ಪ್ರಾಶಸ್ತ್ಯ ಇದೆ. ಹೊರಗಿನ ಸುದ್ದಿಗಿಂತ ಲೋಕಲ್ ಸುದ್ದಿಗೆ ಹೆಚ್ಚಿನ ಮಹತ್ವವಿದೆ.

2. ಪಟ್ಟಣದ ಚಹಾದಂಗಡಿಗಳು ಹೇಗಿರುತ್ತವೆ?

ಪಟ್ಟಣದ ಹೋಟೇಲೆಂದರೆ ನಯನಾಜೂಕಿನ ಹೆಣ್ಣಿದ್ದಂತೆ. ಪಟ್ಟಣದ ಹೋಟೇಲಿನಲ್ಲಿ ಎಲ್ಲವೂ ಇದೆ. ಮನವನ್ನಾಕರ್ಷಿಸುವ ಭವ್ಯ ಕಟ್ಟಡವಿದೆ. ನಡೆದರೆ ಕಾಲು ಜಾರುವ ನಯವಾದ ಫರಸಿಯ ನೆಲವಿದೆ. ಕೂತರೆ ಮಾಸಿಹೋದೀತೆನ್ನುವ ಖುರ್ಚಿಯಿದೆ. ತಂಪಾದ ಫ್ಯಾನಿನ ಗಾಳಿಯಿದೆ. ಡೆಕೋಲಮ್‌ನಿಂದ ಅಲಂಕೃತವಾದ ಟೇಬಲ್ಲೂ ಇದೆ. ಟೇಬಲ್ ಮೇಲೆ ಗ್ಲಾಸೂ ಇದೆ. ಗ್ಲಾಸಿನಲ್ಲಿ ನೀರೂ ಇದೆ. ಕುಳಿತಾಗ ಏನು ಬೇಕು ಎಂದು ಯಂತ್ರದ ಗೊಂಬೆ0ಯಂತೆ ಮೂಕ ಸನ್ನೆ ಮಾಡಿಕೇಳುವ, ಶುಭ್ರವಸ್ತ್ರದ ಮಾಣಿಯೂ ಇದ್ದಾನೆ. ತಂದು ಕೊಟ್ಟ ತಿಂಡಿ0ಯಲ್ಲಿ ಹಸಿ ಯಾವುದು? ಬಿಸಿ ಯಾವುದು? ತಾಜಾ ಯಾವುದು? ಹಳಸಿದ್ದಾವುದು? ಯಾರಿಗೂ ಸ್ವತಃ ಮಾಣಿಗೂ ಗೊತ್ತಿರುವುದಿಲ್ಲ. ಪಟ್ಟಣದ ಹೋಟೇಲಿನಲ್ಲಿ ನೆಮ್ಮದಿಯಾಗಿ ಸ್ವಲ್ಪ ಹೊತ್ತು ಕುಳಿತು ತಿಂಡಿ ತಿನ್ನಲು ಅವಕಾಶವಿಲ್ಲ. ಸ್ಥಳವನ್ನಾಕ್ರಮಿಸಲು ನಾ ಮುಂದು ನೀಮುಂದು ಎಂದು ಸ್ಪರ್ಧೆ ನಡೆಸುತ್ತ, ಜನರು ನಮ್ಮ ಎದೆಯ ಮೇಲೆ ನಿಂತಂತೆ ನಿಂತು ಬಿಟ್ಟಿದ್ದರೆ ತಿಂಡಿ ತೀರ್ಥ ತಿನ್ನಲು ಸಾಧ್ಯವಿಲ್ಲ. ಪಟ್ಟಣದ ಹೋಟೇಲುಗಳ ನೂಕುನುಗ್ಗಲುಗಳು, ಗಲಭೆ ಗಲೀಜುಗಳು ಸಾಕಪ್ಪ ಇದರ ಸಹವಾಸ ಎನ್ನಿಸಿಬಿಡುತ್ತದೆ. ತಿಂಡಿ ತಿಂದು ಚಹಾ ಕುಡಿದು ಹೊರಬಿದ್ದರೆ ಅದ್ಭುತ ಸಾಹಸ ಮಾಡಿ ಬಂದ ಅನುಭವ ಆಗುತ್ತದೆ.

3. ಹಳ್ಳಿ ಮತ್ತು ಪಟ್ಟಣ ಹೋಟೇಲುಗಳ ಮಾಣಿಯ ಕುರಿತು ಬರೆಯಿರಿ.

ಹಳ್ಳಿಯ ಹೋಟೇಲುಗಳಲ್ಲಿ ನಮ್ಮ ಬೇಕು ಬೇಡಗಳನ್ನು ಅರಿತ ಮಾಣಿ ಒಂದು ಕೈಯಿಂದ ಬೆವರನ್ನು ಒರೆಸಿಕೊಳ್ಳುತ್ತ ಇನ್ನೊಂದು ಕೈಯಲ್ಲಿ ನಮ್ಮ ನೆಚ್ಚಿನ ಪೂರಿಸಾಗುಗಳನ್ನು ತಂದು ಮುಂದೆ ಇಡುತ್ತಾನೆ. ಪೂರಿಯ ಎಣ್ಣೆ ನಮ್ಮ ಪ್ರಕೃತಿಗೆ ಒಗ್ಗದು ಎಂದು ತಿಳಿದು ಅದನ್ನು ಒರೆಸಿ ತೆಗೆಯಲು ರದ್ದಿ ಕಾಗದದ ಚೂರುಗಳನ್ನೂ ತಂದು ಇರಿಸುತ್ತಾನೆ. ಪೂರಿಯ ಪ್ಲೇಟನ್ನು ಸರಿಸುತ್ತಲೇ ಭಜಿಯೂ ಬಂದು ನಮ್ಮೆದುರು ಕೂಡುತ್ತದೆ. ಇಂದು ಸ್ಪೆಶಲ್ ಅವಲಕ್ಕಿ

ಸೂಸಲ ಮಾಡಿದ್ದೇನೆ. ತರಲೇನು ಕೇವಲ ನಿಮಗಾಗಿಯೇ ಎಂದು ಕಿವಿಯಲ್ಲಿ ಉಸುರುತ್ತಾನೆ. ಆಗ ರೋಮಾಂಚನ ಉಂಟಾಗುತ್ತದೆ. ಪಟ್ಟಣದ ಹೋಟೇಲಿನಲ್ಲಿ ಕುಳಿತಿರೋ ಇಲ್ಲವೋ ಯಂತ್ರದ ಗೊಂಬೆಯಂತೆ ಮೂಕಸನ್ನೆ ಮಾಡಿ ಕೇಳುವ, ಶುಭ್ರ ವಸ್ತ್ರದ ಮಾಣಿ ಇರುತ್ತಾನೆ. ಏನಿದೆ ಎಂದು ನಾವು ನೀರಸವಾಗಿ ಕೇಳಿದರೆ ಬೋಂಡ, ದೋಸೆ, ಉತ್ತಪ್ಪ, ಉಪಮಾ, ಪೂರಿ,ಭಜಿ ಎಂದು ನಮಗಿಂತಲೂ ನೀರಸವಾಗಿ ಪಟಪಟನೆ ಒದರುತ್ತಾನೆ. ಆದರೆ ಅದರಲ್ಲಿ ಬಿಸಿ ಯಾವುದು ಹಸಿ ಯಾವುದು ತಾಜಾ ಯಾವುದು ಹಳಸಿದ್ದು ಯಾವುದು ಸ್ವತಃ ಮಾಣಿಗೂ ಗೊತ್ತಿಲ್ಲ. ಕೇಳಿದ್ದನ್ನು ತಂದು ಎದುರಿಗಿಡುವ ಯಂತ್ರದಂತೆ ಕಾರ್ಯ ನಿರ್ವಹಿಸುತ್ತಿದ್ದಾನೆ.

4. ಹಳ್ಳಿಗರು ಹೊತ್ತನ್ನು ಹೇಗೆ ಕಳೆಯುತ್ತಾರೆ? ವಿವರಿಸಿ.

ವೃದ್ಧರು, ಪೇನ್‌ಶನ್‌ದಾರರು ರೋಗಿಗಳು ಹಳಿಯ ಚಹಾ ಹೋಟೇಲ್‌ಗಳಲ್ಲಿರುವುದು ಸಾಮಾನ್ಯ. ತಿನ್ನುವ ಚಪಲ ಮಾತನಾಡುವ ಚಪಲವನ್ನು ತೀರಿಸಿಕೊಳ್ಳುವ ಜನ ಇಲ್ಲಿಗೆ ಬರುತ್ತಾರೆ. ಇನ್ನು ತರುಣರು, ಹೇಳಿ ಕೇಳಿ ಉತ್ಸಾಹಿಗಳು. ಇವರಿಗೆ ಜವಾಬ್ದಾರಿಯಿಲ್ಲ. ಮಾಡಲು ಕೆಲಸವಿಲ್ಲ. ಕೆಲಸವಿದ್ದರೂ ಮಾಡುವ ಮನಸಿಲ್ಲ. ಇವರಿಗೆ ಹೊತ್ತು ಹೋಗದು. ಅದಕ್ಕಾಗಿ ಪಣತೊಟ್ಟು ಇಡೀ ದಿವಸ ಚಹಾದ ಅಂಗಡಿಯಲ್ಲಿ  ಚಹಾ ಕುಡಿಯುತ್ತ, ಕೇರಂ ಬೋರ್ಡನ್ನು ಆಡುತ್ತ ಕೂಡುತ್ತಾರೆ. ಹಳ್ಳಿಯ ಪಟೇಲರು, ಊರ ಪುಢಾರಿಗಳು, ಸ್ವಯಂಘೋಷಿತ ದಳ್ಳಾಳಿಗಳು, ಪಟ್ಟಣದ ಶಾಲೆ ಕಾಲೇಜು ನರ್ಸರಿಗಳಲ್ಲಿ ಸೀಟುಕೊಡಿಸುವೆನೆಂದು ಅಡ್ವಾನ್ಸ್ ಎತ್ತುವ ಲೀಡರರು, ಗ್ರಾಮಪಂಚಾಯಿತಿಯ ಸರಪಂಚರು, ಈಗಿನ ಹಾಲಿ ಸದಸ್ಯರು, ಶಾಲೆಗೆ ಆಗಾಗ ಭೆಟ್ಟಿ ಕೊಡುವ ಶಾಲಾ ಶಿಕ್ಷಕರು, ಅಂಗಡಿಯಲ್ಲಿ ಲೋಡಿಗಾನಿಸಿ ಕೂತು ಬೇಸತ್ತ ವ್ಯಾಪಾರಿಗಳು, ದಿನಕ್ಕೆ ಸರಾಸರಿ 5–6 ತಾಸುಗಳನ್ನಾದರೂ ಚಹಾಫಳಾರದ ಅಂಗಡಿಯಲ್ಲಿ ಕಳೆಯುತ್ತಾರೆಂದರೆ ಅದೊಂದು ಆಶ್ಚರ್ಯದ ಮಾತಲ್ಲ. ಕಾಲುಬಿಟ್ಟ ಕತ್ತೆಯಂತೆ ಊರಸುತ್ತ ತಿರುಗಾಡುವ ಹಳ್ಳಿಯ ಗಂಡಸರಿಗೆ ಸಾಮಾಜಿಕ ವಿಷಯಗಳ ಬಗ್ಗೆ ಮಾತನಾಡಲು ಹೋಟೇಲ್ ಪ್ರಶಸ್ತವಾದ ಸ್ಥಳ. ತಮ್ಮ ಮನೆಯ ಸಮಾಚಾರ ತಮಗೆ ತಿಳಿದಿರದಿದ್ದರೂ ಊರ ಮೂಲೆ ಮೂಲೆಗಳಲ್ಲಿ ಏನು ನಡೆದಿದೆ, ಯಾರು ಹುಟ್ಟಿದರು, ಯಾರು ಸತ್ತರು, ಯಾರ ಮನೆಯಲ್ಲಿ ಆಕಳು ಈಯಿತು, ಯಾರ ಕೊಟ್ಟಿಗೆಯಲ್ಲಿ ಎಮ್ಮೆ

ಸತ್ತಿತು, ಯಾರ ಬಣವೆಗೆ ಬೆಂಕಿ ಹಚ್ಚಿದರು, ಯಾರ ಮನೆ ದರೋಡೆಯಾಯ್ತು ಎಂಬ ಸಣ್ಣ ದೊಡ್ಡ ವಿಷಯಗಳೆಲ್ಲ ಹೋಟೇಲಿನಲ್ಲಿ ಮಾತನಾಡುತ್ತ ಕಾಲಕಳೆಯುತ್ತಾರೆ.

5. ಹಳ್ಳಿಯ ಹೊಟೇಲುಗಳಲ್ಲಿ ಬಂದ ನವೀನತೆಯ ಕುರಿತು ಬರೆಯಿರಿ.

ಹಳ್ಳಿಯ ಹೋಟೇಲಿನಲ್ಲಿ ಈಗ ಸಿನೆಮಾ ದೇವತೆಗಳ ದರ್ಶನವೂ ಆಗುತ್ತದೆ. ಒಂದು ಕಡೆ ತಿರುಪತಿ ವೆಂಕಟೇಶ್ವರನ ಫೋಟೋ ನೇತಾಡುತ್ತಿದ್ದರೆ, ಇನ್ನೊಂದು ಕಡೆ ಐಶ್ವರ್ಯ ರೈ, ಹೇಮಾಮಾಲಿನಿ, ಧರ್ಮೇಂದ್ರರ ಕ್ಯಾಲೆಂಡರುಗಳೂ ಶೋಭಿಸುತ್ತವೆ. ಅಷ್ಟರಮಟ್ಟಿಗೆ ನವೀನತೆಯ ಗಾಳಿ ಹಳ್ಳಿಯ ಚಹಾ ಫಳಾರದ ಅಂಗಡಿಯಲ್ಲಿ ಬೀಸಿದೆ. ಇಪ್ಪತ್ತು ವರ್ಷಗಳ ಹಿಂದೆ ಗ್ರಾಮಾಫೋನದ ರೆಕಾರ್ಡುಗಳು ಜನರನ್ನು ತಣಿಸುತ್ತಿದ್ದಂತೆ, ಇಂದು ಟಿ.ವಿ., ರೇಡಿಯೋ, ಸ್ಟೀರಿಯೋ, ಟೇಪ್‌ರೇಕಾರ್ಡುಗಳಿಂದ ಹಿಡಿದು ಎಫ್.ಎಮ್.ರೇಡಿಯೋ ಶ್ರೋತೃಗಳ ಕರ್ಣಪಟಲವನ್ನು ಹರಿದುಬಿಡುವಷ್ಟು ಕೀಸರಿಟ್ಟಿವೆ. ರಾಮಾಯಣ ಮಹಾಭಾರತ ಸೀರಿಯಲ್ ಬರುವಾಗಂತೂ ಟಿ.ವಿ.ಗೆ ಪೂಜೆ ಸಲ್ಲಿಸಿ ಧಾರಾವಾಹಿಗಳನ್ನು ಬಹಳ ಭಯಭಕ್ತಿಯಿಂದ ನೋಡಿದ್ದುಂಟು. ಆದರೂ ತರುಣರು ಆ ಹಾಡುಗಳನ್ನು ಆಸಕ್ತಿಯಿಂದ ಕೇಳುತ್ತ ಗುನುಗುನಿಸುತ್ತಿದ್ದರೆ ವೃದ್ದರೂ ಯಾರೂ ತಮ್ಮನ್ನು ನೋಡದಿರುವುದನ್ನು ಖಾತ್ರಿ ಮಾಡಿಕೊಂಡು ತಲೆದೂಗುತ್ತಾರೆ.

===0===

# ದೀರ್ಘ ಗದ್ಯ

# ಕೃಷ್ಣೇಗೌಡನ ಆನೆ

**ಕೆ. ಪಿ. ಪೂರ್ಣಚಂದ್ರ ತೇಜಸ್ವಿ**

**ಸಂದರ್ಭ ಸಹಿತ ವಿವರಿಸಿ.**

1. ನಮ್ಮ ಕಡೆ ಕೆಮ್ಮು ಕಾಲಿಂಗ್‌ಬೆಲ್ ಇದ್ದ ಹಾಗೆ.

ಆಯ್ಕೆ : ಈ ಮೇಲಿನ ವಾಕ್ಯವನ್ನು ಕೆ. ಪಿ. ಪೂರ್ಣಚಂದ್ರ ತೇಜಸ್ವಿಯವರು ರಚಿಸಿದ, 'ಕಿರಗೂರಿನ ಗಯ್ಯಾಳಿಗಳು' ಎಂಬ ಕೃತಿಯಿಂದ ಆಯ್ದ, 'ಕೃಷ್ಣೇಗೌಡನ ಆನೆ' ಎಂಬ ನೀಳ್ಗತೆಯಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ನಿರೂಪಕರು ಲೈನ್‌ಮನ್ ದುರ್ಗಪ್ಪನು ಕೆಮ್ಮಿದ ಸಂದರ್ಭವನ್ನು ನೆನಪಿಸುತ್ತಾ ಹೇಳುವ ಮಾತು ಇದಾಗಿದೆ.

ವಿವರಣೆ: ನಿರೂಪಕರು ಹಳೆಯ ಫೋರ್ಡ್ ಜೀಪಿನ ಗೇರ್‌ಬಾಕ್ಸ್‌ನ್ನು ಅದರ ಅಡಿ ಬಿದ್ದುಕೊಂಡು ರಿಪೇರಿ ಮಾಡುತ್ತಿರುತ್ತಾರೆ. ಆಗ ಅಲ್ಲಿಗೆ ಲೈನ್‌ಮನ್ ದುರ್ಗಪ್ಪ ಕೊಡಲಿ ಕೇಳಲಿಕ್ಕಾಗಿ ಬರುತ್ತಾನೆ. ಬಂದವನಿಗೆ ನಿರೂಪಕರನ್ನು ಹೇಗೆ ಮಾತನಾಡಿಸುವುದು ಎಂದು ತಿಳಿಯದೇ ಒಂದೆರಡು ಬಾರಿ ಕೆಮ್ಮುತ್ತಾನೆ. ಆತನ ಕೆಮ್ಮನ್ನು ಗಮನಿಸಿದ ನಿರೂಪಕರು ಈ ಮೇಲಿನಂತೆ ಹೇಳುತ್ತಾರೆ.

2. ಆನೆ ಸಾಕುವುದು ಎಂದರೆ ಎಲೆಕ್ಷನ್ನಿಗೆ ನಿಂತ ಹಾಗೆ.

ಆಯ್ಕೆ: ಈ ವಾಕ್ಯವನ್ನು ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ರಚಿಸಿದ 'ಕಿರಗೂರಿನ ಗಯ್ಯಾಳಿಗಳು' ಎಂಬ ಕೃತಿಯಿಂದ ಆಯ್ದ, 'ಕೃಷ್ಣೇಗೌಡನ ಆನೆ' ಎಂಬ ನೀಳ್ಗತೆಯಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಎಲ್ಲಾ ತರಹದ ವ್ಯವಹಾರಗಳಲ್ಲಿ ಸೋತ ಕೃಷ್ಣೇಗೌಡರು ಆನೆಯನ್ನು ಖರೀದಿಸಿದಾಗ ಅವರ ಬಗ್ಗೆ ಜನರು ಪಟ್ಟ ಅಭಿಪ್ರಾಯ ಇಲ್ಲಿದೆ.

ವಿವರಣೆ: ವಿಮ್‌ಕೋ ಕಂಪೆನಿಯವರು ಬೆಂಕಿಕಡ್ಡಿ ಮರ ಕಡಿಯಲು ಗುತ್ತಿಗೆ ಪಡೆದು ಕೊಂಡಾಗ, ಚಾರ್ಮುಡಿ ಕಣಿವೆಯ ಪಾತಾಳದಲ್ಲಿದ್ದ

ಮರಗಳನ್ನು ಲಾರಿ ದಾರಿಗೆ ಸಾಗಿಸಲು ಆನೆಯ ಅಗತ್ಯ ಇತ್ತು. ಆಗ ಮರಗಳನ್ನು ಸಾಗಿಸುವ ಗುತ್ತಿಗೆಯನ್ನು ಕೃಷ್ಣೇಗೌಡರು ತಾನು ತೆಗೆದುಕೊಂಡು ಆನೆಯನ್ನು ಗೂಳೂರು ಮಠದಿಂದ ಖರೀದಿ ಮಾಡುತ್ತಾರೆ. ಆದರೆ ಎಲ್ಲಾ ತರಹದ ವ್ಯವಹಾರಗಳನ್ನು ಮಾಡಿ ಎಲ್ಲದರಲ್ಲೂ ನಷ್ಟ ಅನುಭವಿಸಿ ಸೋತು ಕೃಷ್ಣೇಗೌಡ ಆನೆಯನ್ನು ತಂದಾಗ ಇಲ್ಲಿಗೆ ಇವನ ಕತೆ ಮುಗಿದಂತೆಯೇ ಎಂದು ಎಲ್ಲಾ ತೀರ್ಮಾನಿಸಿದರು. ಆಗ ಈ ಮೇಲಿನ ಮಾತು ಉಲ್ಲೇಖಿತವಾಗುತ್ತದೆ.

3. ಆನೆಗೂ ಮಾನ ಮರ್ಯಾದೆ ಇರುತ್ತೆ ತಿಳುಕೊ.

ಆಯ್ಕೆ: ಈ ವಾಕ್ಯವನ್ನು ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ರಚಿಸಿದ 'ಕಿರಗೂರಿನ ಗಯ್ಯಾಳಿಗಳು' ಎಂಬ ಕೃತಿಯಿಂದ ಆಯ್ದು, 'ಕೃಷ್ಣೇಗೌಡನ ಆನೆ' ಎಂಬ ನೀಳ್ಗತೆಯಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ನೆರೆದಿದ್ದ ಜನರು ರಹಮಾನ್ ಸಾಬಿಗೆ ಹೇಳುವ ಮಾತು ಇದಾಗಿದೆ.

ವಿವರಣೆ: ಒಮ್ಮೆ ಆನೆಯು ರಹಮಾನ್ ಸಾಬಿಯ ಪೆಟ್ಟಿಗೆ ಅಂಗಡಿಯನ್ನು ದೂಡಿ ಬೀಳಿಸಿತು. ಆಗ ರಹಮಾನ್ ದೊಡ್ಡ ರಂಪಾಟವನ್ನೇ ಮಾಡಿದ. ಈ ನಡುವೆ ವೇಲಾಯುಧ ಅಲ್ಲಿಗೆ ಅಗಮಿಸಿ ಆನೆಯ ಪರ ನಿಂತ. ಆಗ ರಹಮಾನ್, ಜುಬೇದಾಳನ್ನು ಪ್ರತ್ಯಕ್ಷ ಸಾಕ್ಷಿಯೆಂಬಂತೆ ಆಕೆಯಲ್ಲಿ ಕೇಳಿ ಎಂದ. ಆದರೆ ಆಕೆ ರಹಮಾನ್‌ನ ಪರ ಮಾತನಾಡದೆ ಆನೆಯ ಪರವಾಗಿ ಮತನಾಡುತ್ತ, ರೆಹಮಾನ್ ಏನೋ ಅನ್ನ ಬಾರದ್ದನ್ನು ಅಂದ ಎಂದು ಹೇಳುತ್ತಾಳೆ. ಆಗ ಅಲ್ಲಿ ನೆರೆದಿರುವ ಎಲ್ಲರೂ ಆನೆಗೆ ಒಂದು ವ್ಯಕ್ತಿತ್ವವನ್ನು ಆರೋಪಿಸುತ್ತಾ ಈ ಮೇಲಿನಂತೆ ಹೇಳುತ್ತಾರೆ.

4. ನನ್ನ ಕೊಡಲಿ ಯಾಕೆ ತಂದು ಆಫೀಸಿನಲ್ಲಿ ಇಟ್ಕೊಂಡಿದ್ದೀರ?

ಆಯ್ಕೆ: ಈ ವಾಕ್ಯವನ್ನು ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ರಚಿಸಿದ 'ಕಿರಗೂರಿನ ಗಯ್ಯಾಳಿಗಳು' ಎಂಬ ಕೃತಿಯಿಂದ ಆಯ್ದು, 'ಕೃಷ್ಣೇಗೌಡನ ಆನೆ' ಎಂಬ ನೀಳ್ಗತೆಯಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ನಿರೂಪಕರು ಫಾರೆಸ್ಟ್ ಆಫೀಸರ್ ನಾಗರಾಜ್‌ನಲ್ಲಿ ಕೇಳುವ ಮಾತು ಇದಾಗಿದೆ.

ವಿವರಣೆ: ದುರ್ಗಪ್ಪ ತೆಗೆದುಕೊಂಡು ಹೋಗಿರುವ ಕೊಡಲಿಯು ನಿರೂಪಕರದ್ದಾಗಿದ್ದಿತು. ದುರ್ಗಪ್ಪ ಮರ ಕಡಿಯುವುದನ್ನು ಕಂಡ ಅರಣ್ಯ ಇಲಾಖೆಯವರು ಸಾಕ್ಷ್ಯಕ್ಕೆ ಕೊಡಲಿ ತಂದಿಟ್ಟುಕೊಂಡಿದ್ದರು. ಇದನ್ನು ತಿಳಿದ ನಿರೂಪಕರು ನಾಗರಾಜನ ಬಳಿ ವಿಚಾರಿಸುವಾಗ ಈ ಮೇಲಿನ ಮಾತು ಬಂದಿದೆ.

5. ವೆಪನ್ ಸಾರ್, ವೆಪನ್ ನಮಗೆ ಮುಖ್ಯ.

ಆಯ್ಕೆ: ಈ ವಾಕ್ಯವನ್ನು ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ರಚಿಸಿದ 'ಕಿರಗೂರಿನ ಗಯ್ಯಾಳಿಗಳು' ಎಂಬ ಕೃತಿಯಿಂದ ಆಯ್ದ, 'ಕೃಷ್ಣೇಗೌಡನ ಆನೆ' ಎಂಬ ನೀಳ್ಗತೆಯಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಈ ಮಾತನ್ನು ನಾಗರಾಜ್ ನಿರೂಪಕರಲ್ಲಿ ಹೇಳುತ್ತಾನೆ.

ವಿವರಣೆ: ನಾಗರಾಜ್‌ನ ಕಚೇರಿಗೆ ಬಂದ ನಿರೂಪಕರು 'ಅಲ್ರೀ ನಾಗರಾಜ್ ನಿಮ್ಮ ಡಿಪಾರ್ಟ್‌ಮೆಂಟಿನ ಮರ ಕಡಿದರೆ ನೀವು ಅವನ ಮೇಲೆ ಕ್ರಮ ತೆಗೆದುಕೊಳ್ಳಿ. ನನ್ನ ಕೊಡಲಿ ಯಾಕೆ ತಂದು ಇಟ್ಟುಕೊಂಡಿದ್ದೀರಾ' ಎಂದು ಕೇಳುತ್ತಾರೆ. ಆಗ ನಾಗರಾಜ ತನ್ನ ಎದುರಿನ ಕುರ್ಚಿ ತೋರಿಸಿ ಕೂತ್ಕೊಳ್ಳಿ ಎನ್ನುತ್ತಾ ಈ ಮೇಲಿನಂತೆ ಹೇಳುತ್ತಾನೆ.

6. ನಿನ್ನ ಪುಕಾರೇನಿದ್ರೂ ಬರ್ವಣಿಗೇಲಿ ಇರಬೇಕು.

ಆಯ್ಕೆ: ಈ ವಾಕ್ಯವನ್ನು ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ರಚಿಸಿದ 'ಕಿರಗೂರಿನ ಗಯ್ಯಾಳಿಗಳು' ಎಂಬ ಕೃತಿಯಿಂದ ಆಯ್ದ, 'ಕೃಷ್ಣೇಗೌಡನ ಆನೆ' ಎಂಬ ನೀಳ್ಗತೆಯಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಈ ಮಾತನ್ನು ನಾಗರಾಜ ದುರ್ಗಪ್ಪನಲ್ಲಿ ಹೇಳುತ್ತಾನೆ.

ವಿವರಣೆ: ಮರ ಕಡಿಯುತ್ತಿದ್ದ ಆರೋಪದ ಮೇಲೆ ದುರ್ಗಪ್ಪನನ್ನು ಲಾಕಪ್ಪಿಗೆ ಹಾಕಿಸುವೆನೆಂದು ನಾಗರಾಜ ಹೇಳಿದಾಗ, ದುರ್ಗಪ್ಪ ಮರವನ್ನು ತಾನು ಕಡಿದಿಲ್ಲವೆಂದು ಕೃಷ್ಣೇಗೌಡರ ಆನೆ ಮುರಿದು ಬೀಳಿಸಿದ್ದೆಂದು ಹಳೆ ಪ್ರವರ ಪುನರಾವರ್ತನೆ ಮಾಡುತ್ತಾನೆ. ಅವನು ಹೇಳಿದ್ದನ್ನೇ ಮತ್ತೆ ಮತ್ತೆ ಹೇಳುವುದನ್ನು ನೋಡಿ, ನಾಗರಾಜ ಹಾಗಂತ ಹೇಳಿಕೆ ಬರ್ಕೊಡ್ತೀಯಾ ಎನ್ನುತ್ತಾ ಈ ಮೇಲಿನಂತೆ ಹೇಳುತ್ತಾನೆ.

7. ಡ್ರೈವರಣ್ಣ ಎತ್ಲಾಗಿ ಹೋದ! ಇಲ್ಲೇ ಇದ್ದನಲ್ಲ!

ಆಯ್ಕೆ: ಈ ವಾಕ್ಯವನ್ನು ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ರಚಿಸಿದ 'ಕಿರಗೂರಿನ ಗಯ್ಯಾಳಿಗಳು' ಎಂಬ ಕೃತಿಯಿಂದ ಆಯ್ದು, 'ಕೃಷ್ಣೇಗೌಡನ ಆನೆ' ಎಂಬ ನೀಳ್ಗತೆಯಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಕ್ಲೀನರ್, ಡ್ರೈವರಣ್ಣನನ್ನು ಹುಡುಕುತ್ತಾ ಹೇಳುವ ಮಾತು ಇದಾಗಿದೆ.

ವಿವರಣೆ: ಶಿವೇಗೌಡರ ಸಾಮಿಲ್ಲಿನಲ್ಲಿ ವೇಲಾಯುಧ ಮತ್ತು ಆನೆ ಇಬ್ಬರೂ ಪಾನಮತ್ತರಾಗಿದ್ದ ನಿಮಿತ್ತ ಲಾರಿ ಮತ್ತು ನಾಟಾಗಳಿಗೆ ಕಟ್ಟಿದ್ದ ಹಗ್ಗವನ್ನು ಬಿಚ್ಚದೆ ವೇಲಾಯುಧ ಆನೆಗೆ ನಾಟಗಳನ್ನು ಇಳಿಸಲು ಆದೇಶಿಸಿದ. ವೇಲಾಯುಧನ ಆದೇಶದಂತೆ ಆನೆ ನಾಟಾಗಳನ್ನು ತಳ್ಳಿ ಬೀಳಿಸಿತು. ಲಾರಿ ಧಡಾರನೆ ಬಿದ್ದ ಸದ್ದು ಕೇಳಿ ಶಿವೆಗೌಡರು ಮತ್ತು ಲಾರಿ ಕ್ಲೀನರ್ ಎಲ್ಲರೂ ಓಡಿ ಬಂದು ಉರುಳಿ ಬಿದ್ದಿರುವ ಲಾರಿ ನೋಡಿ ಕಂಗಾಲಾಗಿ ಹೋಗುವರು. ಆದರೆ ಕ್ಲೀನರ ಹಗ್ಗ ಬಿಚ್ಚುವ ಬದಲು ಯಾರನ್ನೋ ಹುಡುಕುತ್ತಿರುವುದನ್ನು ಕಂಡಿತು. ಏನೆಂದು ಕೇಳುವಾಗ ಈ ಮೇಲಿನಂತೆ ಕ್ಲೀನರ್ ಹೇಳುತ್ತಾನೆ.

8. ಕುಶಾಲಿಗಂತ ಸೊಂಡಿಲು ಬೀಸಿದರೆ ಸಾಕಲ್ಲ.

ಆಯ್ಕೆ: ಈ ವಾಕ್ಯವನ್ನು ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ರಚಿಸಿದ 'ಕಿರಗೂರಿನ ಗಯ್ಯಾಳಿಗಳು' ಎಂಬ ಕೃತಿಯಿಂದ ಆಯ್ದು, 'ಕೃಷ್ಣೇಗೌಡನ ಆನೆ' ಎಂಬ ನೀಳ್ಗತೆಯಿಂದ ಆರಿಸಿಕೊಳ್ಳಲಾಗಿದೆ

ಸಂದರ್ಭ: ಈ ಮಾತನ್ನು ದುರ್ಗಪ್ಪ ನಿರೂಪಕರಲ್ಲಿ ಹೇಳುತ್ತಾನೆ.

ವಿವರಣೆ: ಕೊಡಲಿ ವಾಪಸ್ ಕೊಡಲು ಬಂದ ದುರ್ಗಪ್ಪ ಕೃಷ್ಣೇಗೌಡರ ಅನೆಯನ್ನು ಮನಸಾರೆ ಶಪಿಸುತ್ತಾನೆ. ಅಲ್ಲದೆ ಅದು ಕೊಂದ ಡ್ರೈವರ್ ಹೆಣವನ್ನು ಮರದ ಹೊಟ್ಟಿನೊಳಗೆ ಹಾಕಿ ಆಗಾಗ ಬೆಂಕಿ ಕೊಡುವಂತೆ ಬೆಂಕಿ ಕೊಟ್ಟು ಬೂದಿ ಮಾಡಿದರೆಂದು ಹೇಳುತ್ತಾನೆ. ಆತ ನಿರೂಪಕರಲ್ಲಿ ಆ ಆನೆಗೆ ಹೆಂಡ ಕುಡಿಸಿದರೆ ಹೇಗಾಗಬಹುದು ಹೇಳಿ. ಮಕ್ಕಳು ಮರಿ ಓಡಾಡೋ ಜಾಗದಲ್ಲಿ ಓಡಾಡುತ್ತದೆ ಎನ್ನುತ್ತಾ ಆನೆಯ ಬಗ್ಗೆ ಈ ಮೇಲಿನಂತೆ ಹೇಳುತ್ತಾನೆ. ಒಂದೊಂದು ಕೆಂಪು ಪೋಸ್ಟ್‌ಬಾಕ್ಸ್‌ಗಳನ್ನು ನೇತುಹಾಕಿದರು. ಈ ಎಲ್ಲಾ ಬೆಳವಣಿಗೆಗಳನ್ನು ವಿವರಿಸುತ್ತಾ ನಿರೂಪಕರು ಈ ಮೇಲಿನಂತೆ ಹೇಳುತ್ತಾರೆ.

9. ಹದಿನಾಲ್ಕು ಇಂಜಕ್ಷನ್ ಹೊಟ್ಟೆಗೆ ಚುಚ್ಚಿಸ್ಕೊತೀನಿ.

ಆಯ್ಕೆ: ಈ ವಾಕ್ಯವನ್ನು ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ರಚಿಸಿದ 'ಕಿರಗೂರಿನ ಗಯ್ಯಾಳಿಗಳು' ಎಂಬ ಕೃತಿಯಿಂದ ಆಯ್ದ, 'ಕೃಷ್ಣೇಗೌಡನ ಆನೆ' ಎಂಬ ನೀಳ್ಗತೆಯಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಈ ಮಾತನ್ನು ಪೋಸ್ಟ್‌ಮನ್ ಜಬ್ಬಾರ್ ನಿರೂಪಕರಲ್ಲಿ ಹೇಳುತ್ತಾನೆ.

ವಿವರಣೆ: ಜಬ್ಬಾರ್ ನಿರೂಪಕರಲ್ಲಿ ತನ್ನ ಬವಣೆಗಳನ್ನು ವಿವರಿಸುತ್ತಾ ಪೋಸ್ಟ್ ಕೊಡಲು ಹೋದಲ್ಲಿ ಎಲ್ಲರ ಮನೆಯ ಮುಂದೇಯೂ ನಾಲ್ಕು ನಾಲ್ಕು ನಾಯಿ ಮಲಗಿರ್ತವೆ. ಪ್ರತಿ ವರ್ಷ ಒಂದಲ್ಲ ಒಂದು ನಾಯಿ ಕಚ್ಚೇಕಚ್ಚುತ್ತೇ. ಹುಚ್ಚು ಬಂದ ಮೇಲೆ ಔಷಧ ಇಲ್ಲವಾದ ಕಾರಣ ತನಗೆ ಕಚ್ಚಿರುವುದು ಹುಚ್ಚು ನಾಯಿ ಹೌದೋ ಅಲ್ವೋ ಒಟ್ಟಿನಲ್ಲಿ ಹದಿನಾಲ್ಕು ಇಂಜೆಕ್ಷನ್ ಹೊಟ್ಟೆಗೆ ಚುಚ್ಚಿಸ್ಕೋತೀನಿ ಎಂದು ಹೇಳುತ್ತಾನೆ.

10. ಕೃಷ್ಣೇಗೌಡರ ಆನೆಗೂ ಕಚ್ಚಿದೆ ಅಂತ ವರ್ತಮಾನ ಉಂಟಪ್ಪ.

ಆಯ್ಕೆ: ಈ ವಾಕ್ಯವನ್ನು ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ರಚಿಸಿದ 'ಕಿರಗೂರಿನ ಗಯ್ಯಾಳಿಗಳು' ಎಂಬ ಕೃತಿಯಿಂದ ಆಯ್ದ, 'ಕೃಷ್ಣೇಗೌಡನ ಆನೆ' ಎಂಬ ನೀಳ್ಗತೆಯಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಈ ಮಾತನ್ನು ಪುಟ್ಟಯ್ಯ ನಿರೂಪಕರಲ್ಲಿ ಹೇಳುತ್ತಾನೆ.

ವಿವರಣೆ: ಪುಟ್ಟಯ್ಯನು ನಿರೂಪಕರ ಬಳಿ ಮಾತನಾಡುತ್ತಾ, ನಿನ್ನೆ ಒಂದು ಹುಚ್ಚು ನಾಯಿ ಏಳು ಜನಕ್ಕೆ, ಹತ್ತಾರು ದನಗಳಿಗೆ ಕಚ್ಚಿದೆ. ಅವರಿಗೆಲ್ಲ ಎಲ್ಲಿಂದ ಇಂಜೆಕ್ಷನ್ ಸಪ್ಲೆ ಮಾಡೋಕಾಗುತ್ತೆ ಹೇಳಿ ಎಂದು ಹೇಳುತ್ತಾ ಕೊಂಚ ದನಿ ತಗ್ಗಿಸಿ ಕೃಷ್ಣೇಗೌಡರ ಆನೆಗೂ ಕಚ್ಚಿದೆ ಎಂದು ವರ್ತಮಾನ ಉಂಟಪ್ಪ ಎಂದು ಹೇಳುತ್ತಾನೆ.

11. ನಂಗೇನು ಈ ನಾಯಿಗಳನ್ನು ಕಂಡರೆ ಪ್ರೀತಿನಾ ಸ್ವಾಮಿ!

ಆಯ್ಕೆ: ಈ ವಾಕ್ಯವನ್ನು ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ರಚಿಸಿದ 'ಕಿರಗೂರಿನ ಗಯ್ಯಾಳಿಗಳು' ಎಂಬ ಕೃತಿಯಿಂದ ಆಯ್ದ, 'ಕೃಷ್ಣೇಗೌಡನ ಆನೆ' ಎಂಬ ನೀಳ್ಗತೆಯಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಈ ಮಾತನ್ನು ಮುನ್ಸಿಪಾಲಿಟಿ ಪ್ರೆಸಿಡೆಂಟರಾದ ಖಾನ್ ಸಾಬರು ನಿರೂಪಕರಲ್ಲಿ ಹೇಳುತ್ತಾರೆ.

ವಿವರಣೆ: ಮೂಡಿಗೆರೆಯಲ್ಲಿ ಉಂಟಾದ ಕಂತ್ರಿನಾಯಿಗಳ ಸಮಸ್ಯೆಯನ್ನು ಬಗೆಹರಿಸುವ ಸಲುವಾಗಿ ನಿರೂಪಕರು, ಜಬ್ಬಾರ್, ಪುಟ್ಟಯ್ಯ ಮುನ್ಸಿಪಾಲಿಟಿ ಪ್ರೆಸಿಡೆಂಟರಾದ ಖಾನ್ ಸಾಬ್ ರಲ್ಲಿ ಕೇಳಬೇಕು ಎಂದು ಅವರಲ್ಲಿಗೆ ಬರಲು ತಯಾರಾಗುತ್ತಾರೆ. ಆದರೆ ಜಬ್ಬಾರ್ ಮತ್ತು ಪುಟ್ಟಯ್ಯ ಇಬ್ಬರೂ ಅಲ್ಲಿಯೇ ಜಾರಿಕೊಂಡಿರುವುದನ್ನು ಗಮನಿಸಿದ ನಿರೂಪಕರು ತಾನೊಬ್ಬನೆ ಕೇಳುತ್ತೇನೆ ಎಂದು ಕೊಂಡು ಕಛೇರಿಗೆ ಬಂದು ಖಾನ್ ಸಾಬ್‌ರಲ್ಲಿ ಕೇಳುವಾಗ ಈ ಮಾತು ಬಂದಿದೆ.

12. ಹೊರಗಡೆಯಿಂದ ಎಕ್ಸ್‌ಪೋರ್ಟ್ ಆದವು.

ಆಯ್ಕೆ: ಈ ವಾಕ್ಯವನ್ನು ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ರಚಿಸಿದ 'ಕಿರಗೂರಿನ ಗಯ್ಯಾಳಿಗಳು' ಎಂಬ ಕೃತಿಯಿಂದ ಆಯ್ದು, 'ಕೃಷ್ಣೇಗೌಡನ ಆನೆ' ಎಂಬ ನೀಳ್ಗತೆಯಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಮುನ್ಸಿಪಾಲಿಟಿ ಪ್ರೆಸಿಡೆಂಟರಾದ ಖಾನ್ ಸಾಬ್‌ರು ನಿರೂಪಕರಲ್ಲಿ ಹೇಳುವ ಮಾತಿದು.

ವಿವರಣೆ: ಮುನ್ಸಿಪಾಲಿಟಿ ಪ್ರೆಸಿಡೆಂಟರಾದ ಖಾನ್ ಸಾಹೇಬರನ್ನು ಭೇಟಿಯಾಗಲು ಹೋದ ಲೇಖಕರು ಊರಿನಲ್ಲಿ ಹೆಚ್ಚಿರುವ ಕಂತ್ರಿನಾಯಿಯ ಕುರಿತು ಪ್ರಸ್ತಾಪಿಸಿದಾಗ ಅದನ್ನು ಒಪ್ಪಿಕೊಳ್ಳುತ್ತಾರೆ. ಆದರೆ ಅವೆಲ್ಲಾ ಇಲ್ಲಿಯ ನಾಯಿಗಳಲ್ಲ. ಯಾರೋ ಹೊರಗಡೆಯಿಂದ ಲಾರಿಯಲ್ಲಿ ನಾಯಿಗಳನ್ನು ತುಂಬಿಕೊಂಡು ಬಂದು ಇಲ್ಲಿ ರಾತ್ರೋ ರಾತ್ರಿ ಬಿಟ್ಟು ಹೋಗಿದ್ದಾರೆ ಎಂದು ಹೇಳುತ್ತಾ ತಾನು ತನ್ನ ಕಡೆಯಿಂದ ಆದ ಪ್ರಯತ್ನವೆಲ್ಲ ಮಾಡಿದ್ದೇನೆ ಎಂದು ಹೇಳುತ್ತಾರೆ.

13. ಮುನ್ಸಿಪಾಲ್ ಪ್ರೆಸಿಡೆಂಟಾಗಿ ಊರನ್ನು ಸ್ವಚ್ಚವಾಗಿಡೋದು ನಿಮ್ಮ ಕರ್ತವ್ಯ.

ಆಯ್ಕೆ: ಈ ವಾಕ್ಯವನ್ನು ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ರಚಿಸಿದ 'ಕಿರಗೂರಿನ ಗಯ್ಯಾಳಿಗಳು' ಎಂಬ ಕೃತಿಯಿಂದ ಆಯ್ದು, 'ಕೃಷ್ಣೇಗೌಡನಆನೆ' ಎಂಬ ನೀಳ್ಗತೆಯಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಈ ಮಾತನ್ನು ಮುನಿಸಿಪಾಲಿಟಿ ಪ್ರೆಸಿಡೆಂಟ್ ಖಾನ್ ಸಾಹೇಬರ ಬಳಿ ಹೇಳುತ್ತಾರೆ.

ವಿವರಣೆ: ಕಂತ್ರಿನಾಯಿಗಳು ಹೆಚ್ಚಾಗಿರುವ ಪ್ರಸ್ತಾಪವನ್ನು ಖಾನ್ ಸಾಬರು ಹಿಂದೂ ಮುಸ್ಲಿಂ ಧರ್ಮದೊಂದಿಗೆ ಗಂಟು ಹಾಕುತ್ತಿದ್ದಾರೆಂದು

ನಿರೂಪಕರಿಗೆ ಅನ್ನಿಸಿತು. ಆದ್ದರಿಂದ ನಿರೂಪಕರು, ತನ್ನ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಿದೆ ಧರ್ಮಗಳ ಕಾರಣ ಕೊಡುತ್ತಿರುವ ಖಾನ್ ಸಾಬರಿಗೆ ಕರ್ತವ್ಯ ಪ್ರಜ್ಞೆಯನ್ನು ನೆನಪಿಸುತ್ತಾ ಈ ಮೇಲಿನಂತೆ ಹೇಳುತ್ತಾರೆ.

14. ಕಂಬದ ಮೇಲೇ ಯಾಕೋ ಕೈಲಾಸ ಕಂಡಹಾಗೆ ಇದೆಯಲ್ಲಾ.

ಆಯ್ಕೆ: ಈ ಮೇಲಿನ ವಾಕ್ಯವನ್ನು ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ರಚಿಸಿದ, 'ಕಿರಗೂರಿನ ಗಯ್ಯಾಳಿಗಳು' ಎಂಬ ಕೃತಿಯಿಂದ ಆಯ್ದ, 'ಕೃಷ್ಣೇಗೌಡನ ಆನೆ' ಎಂಬ ನೀಳ್ಗತೆಯಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಈ ಮಾತನ್ನು ಲೈನ್‌ಮನ್ ಶಂಕ್ರಪ್ಪ, ಜೂನಿಯರ್ ಇಂಜಿನಿಯರ್ ರಮೇಶ್‌ಬಾಬುವಿನ ಹತ್ತಿರ ಹೇಳುತ್ತಾನೆ.

ವಿವರಣೆ: ಟೆಲಿಫೋನ್ ಲೈನು ಸರಿ ಮಾಡಲು ಹೋದ ತಿಪ್ಪಣ್ಣನ ಸುದ್ದಿ ಇಲ್ಲದಾಗ, ರಮೇಶ್‌ಬಾಬು ತಿಪ್ಪಣ್ಣನ ಸೋಮಾರಿತನವನ್ನು ಶಪಿಸುತ್ತಾ ಲೈನ್‌ಮನ್ ಶಂಕ್ರಪ್ಪನನ್ನು ಕರೆದುಕೊಂಡು ನುಗ್ಗೇಹಳ್ಳಿ ಲೈನು ನೋಡುತ್ತ ಹೊರಡುತ್ತಾನೆ. ಅಲ್ಲಿ ಜಂಕ್ಷನ್ ಬಾಕ್ಸ್ ಇದ್ದ ಹದಿನೇಳನೇ ಕಂಬದ ಮೇಲೆ ಕುಳಿತಿದ್ದ ತಿಪ್ಪಣ್ಣ ಕೂಗಿದರೂ, ಕರೆದರೂ ಮಾತಾಡದೇ ಇದ್ದಾಗ, ಶಂಕ್ರಪ್ಪ ಆತನನ್ನು ನೋಡಿ ಕೈಯಲ್ಲಿದ್ದ ತಂತಿ, ಮೇಲಿಂದಲೇ ಆಫೀಸಿಗೆ ಮಾತಾಡುವ ಫೋನ್ ಕೆಳಗಿಡುತ್ತಾ ಏನ್ ಸಾರ್ ಇದು ಏನಾಯ್ತು ಇವನಿಗೆ ಎನ್ನುತ್ತಾ ತನ್ನ ಇಂಜಿನಿಯರ್ ರಮೇಶ್‌ಬಾಬುವನ್ನು ನೋಡಿ ಈ ಮೇಲಿನಂತೆ ಹೇಳುತ್ತಾನೆ.

15. ಈ ಕಂಬದೊಳ್ಗೆ ಏನೋ ಸೇರ್ಕೊಂಡಿದೆ.

ಆಯ್ಕೆ: ಈ ಮೇಲಿನ ವಾಕ್ಯವನ್ನು ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ರಚಿಸಿದ, 'ಕಿರಗೂರಿನ ಗಯ್ಯಾಳಿಗಳು' ಎಂಬ ಕೃತಿಯಿಂದ ಆಯ್ದ, 'ಕೃಷ್ಣೇಗೌಡನ ಆನೆ' ಎಂಬ ನೀಳ್ಗತೆಯಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಲೈನ್‌ಮನ್ ಶಂಕ್ರಪ್ಪ ಇಂಜಿನಿಯರ್ ರಮೇಶ್‌ಬಾಬುವಿನಲ್ಲಿ ಹೇಳುವ ಮಾತಿದು.

ವಿವರಣೆ: ತಿಪ್ಪಣ್ಣನನ್ನು ನೋಡಿದ ರಮೇಶ್‌ಬಾಬು ಶಂಕ್ರಪ್ಪನಲ್ಲಿ; ಕಂಬ ಹತ್ತಿ ಒಮ್ಮೆ ನೋಡ್ಡೋ ಮಾರಾಯ, ಅಕಸ್ಮಾತ್ ಜೀವ ಇದ್ದರೆ ಆಸ್ಪತ್ರೆಗೆ ಸೇರಿಸೋಣ ಎನ್ನುತ್ತಾನೆ. ಅವನ ಮಾತಿನಂತೆ ಕಂಬ ಹತ್ತಿದ ಶಂಕ್ರಪ್ಪ, ಕಂಬವನ್ನು ಅರ್ಧ ಹತ್ತುವಷ್ಟರಲ್ಲಿ ಕೈಕಾಲು ಜುಮ್ಮೆಂದು ನಡುಗಿದಂತಾಗಿ ಅಯ್ಯಯ್ಯೋ ಎಂದು ಕಿರುಚಿ ಕಂಬದಿಂದ ದೂರನಿಲ್ಲುತ್ತಾನೆ. ಇದನ್ನು

ಗಮನಿಸಿದ ರಮೇಶ್‌ಬಾಬು ಏನಾಯ್ತು ಎಂದು ಕೇಳಿದಾಗ ಶಂಕ್ರಪ್ಪ ಈ ಮೇಲಿನಂತೆ ಹೇಳುತ್ತಾನೆ.

16. ಆನೆ ಬೇಲಿ ದಾಟಿ ಹೋಯ್ತು ಸಾರ್.

ಆಯ್ಕೆ: ಈ ಮೇಲಿನ ವಾಕ್ಯವನ್ನು ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ರಚಿಸಿದ, 'ಕಿರಗೂರಿನ ಗಯ್ಯಾಳಿಗಳು' ಎಂಬ ಕೃತಿಯಿಂದ ಆಯ್ದ, 'ಕೃಷ್ಣೇಗೌಡನ ಆನೆ' ಎಂಬ ನೀಳ್ಗತೆಯಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಈ ಮಾತನ್ನು ಗಾರ್ಡ್ ರಾಮಪ್ಪ ನಾಗರಾಜನಲ್ಲಿ ಹೇಳುತ್ತಾನೆ.

ವಿವರಣೆ: ಆನೆಯನ್ನು ಕೊಲ್ಲಬೇಕು ಎಂದು ನಾಗರಾಜ ಒಳ್ಳೆ ಆಯಕಟ್ಟಿನ ಗಂಡಿಯಲ್ಲಿ ಕೋವಿ ಹಿಡಿದು ಕೊಂಡು ಕುಳಿತಿದ್ದ. ಅವನು ಕುಳಿತಿದ್ದ ಗಂಡಿ ಬಹಳ ಹೆಸರುವಾಸಿಯಾದ ಗಂಡಿಯಾಗಿತ್ತು. ಕಾಡು ಪ್ರಾಣಿಗಳು ಅಲ್ಲಿಂದಲೇ ದಾಟಿ ಹೋಗ ಬೇಕಾದ ಕಾರಣ ಕೃಷ್ಣೇಗೌಡರ ಆನೆಗಾಗಿ ಕಾಯುತ್ತಿದ್ದ. ಅಷ್ಟರಲ್ಲಿ ಅಲ್ಲಿಗೆ ಬಂದ ಗಾರ್ಡ್ ರಾಮಪ್ಪ ಆನೆಯು ಬೇಲಿ ದಾಟಿ ಹೋದ ವಿಚಾರವನ್ನು ತಿಳಿಸಿದಾಗ ಈ ಮೇಲಿನ ಮಾತು ಬಂದಿದೆ.

17. ಕೋವಿ ಸಿಕ್ಕಿದೆ ಆದರೆ ಹೆಣ ಸಿಗಲಿಲ್ಲ.

ಆಯ್ಕೆ: ಈ ಮೇಲಿನ ವಾಕ್ಯವನ್ನು ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ರಚಿಸಿದ, 'ಕಿರಗೂರಿನ ಗಯ್ಯಾಳಿಗಳು' ಎಂಬ ಕೃತಿಯಿಂದ ಆಯ್ದ, 'ಕೃಷ್ಣೇಗೌಡನ ಆನೆ' ಎಂಬ ನೀಳ್ಗತೆಯಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಪೋಲೀಸರು ನಾಪತ್ತೆಯಾದ ನಾಗರಾಜನ ಕುರಿತು ಮಹಜರು ಮಾಡಿಕೊಂಡ ಸಂದರ್ಭ ಇದಾಗಿದೆ.

ವಿವರಣೆ: ನಾಗರಾಜನು ಏಕಾಏಕಿ ನಾಪತ್ತೆಯಾದುದು ದೊಡ್ಡ ಸಮಸ್ಯೆಯಾಗಿ ಹೋಯಿತು. ಆತನನ್ನು ಆನೆ ತುಳಿದು ಸಾಯಿಸಿತೋ, ಕೊಲೆಯಾದನೋ, ಆತ್ಮಹತ್ಯೆ ಮಾಡಿಕೊಂಡನೋ ಎಂಬ ಹಲವಾರು ಪ್ರಶ್ನೆಗಳು ಉಗಮವಾದವು. ಈ ನಡುವೆ ಪೊಲೀಸರು ಕಾಡೆಲ್ಲಾ ಹುಡುಕಾಡಿ ಮಹಜರು ಮಾಡಲು ಮುಂದಾದಾಗ ಈ ಮೇಲಿನ ಮಾತು ಬಂದಿದೆ.

18.ಬುಟ್ಟಿಗಟ್ಲೆ ಬಿದ್ದಿಲ್ಲವ ಅದರ ಲದ್ದಿ!

ಆಯ್ಕೆ: ಈ ಮೇಲಿನ ವಾಕ್ಯವನ್ನು ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ರಚಿಸಿದ, 'ಕಿರಗೂರಿನ ಗಯ್ಯಾಳಿಗಳು' ಎಂಬ ಕೃತಿಯಿಂದ ಆಯ್ದು, 'ಕೃಷ್ಣೇಗೌಡನ ಆನೆ' ಎಂಬ ನೀಳ್ಗತೆಯಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಲೈನ್ ಮನ್ ದುರ್ಗಪ್ಪ ನಿರೂಪಕರಿಗೆ ಈ ಮಾತನ್ನು ಹೇಳುತ್ತಾನೆ.

ವಿವರಣೆ: ನಿರೂಪಕರ ಮನೆಗೆ ಕೊಡಲಿ ಕೇಳಲು ಬಂದ ದುರ್ಗಪ್ಪನನ್ನು ನಿರೂಪಕರು ಕರೆಂಟು ಕೆಲಸಕ್ಕೆ ಕೊಡಲಿ ಏಕೆಂದು ಪ್ರಶ್ನಿಸಿದಾಗ, ಅವನು ಕೃಷ್ಣೇಗೌಡರ ಆನೆಯಿಂದಾಗಿ ಮರವೊಂದು ಮುರಿದುಕೊಂಡು ತಂತಿಮೇಲೆ ಬಿದ್ದಿರುವುದರಿಂದ ಮರವನ್ನು ಕಡಿದು ಲೈನ್ ಕ್ಲೀಯರ್ ಮಾಡಲು ಬೇಕೆಂದು ಉತ್ತರಿಸುತ್ತಾನೆ. ಆಗ ಲೇಖಕರು "ಅದು ಹೇಗೆ ಆನೆ ಕೆಲಸ ಅಂತೀಯ? ತಂತಿ ಮೇಲೆ ಕೊಂಬೆ ಎಳೆದರೆ ಅದಕ್ಕೆ ಕರೆಂಟು ಹೊಡೆದು ಸತ್ತೋಗೋದಿಲ್ವೇನೋ?" ಎಂದು ಪ್ರಶ್ನಿಸಿದರು. ಆಗ ದುರ್ಗಪ್ಪ ತನ್ನ ಮಾತನ್ನು ಸಮರ್ಥಿಸಿಕೊಳ್ಳುತ್ತಾ ಈ ಮೇಲಿನ ಮಾತನ್ನು ಹೇಳುತ್ತಾನೆ.

19. ಅದನ್ನು ಸುತ್ತಿಗೆ ಎಂದು ಕರೆಯಬಹುದಿತ್ತು.

ಆಯ್ಕೆ: ಈ ಮೇಲಿನ ವಾಕ್ಯವನ್ನು ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ರಚಿಸಿದ, 'ಕಿರಗೂರಿನ ಗಯ್ಯಾಳಿಗಳು' ಎಂಬ ಕೃತಿಯಿಂದ ಆಯ್ದು, 'ಕೃಷ್ಣೇಗೌಡನ ಆನೆ' ಎಂಬ ನೀಳ್ಗತೆಯಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ:ನಿರೂಪಕರೇ ತಮ್ಮ ಕೊಡಲಿಯ ಆಕಾರದ ಬಗ್ಗೆ ಹೇಳಿತ್ತಾ ಈ ಮಾತನ್ನು ಹೇಳಿದರು.

ವಿವರಣೆ: ದುರ್ಗಪ್ಪ ಕೊಡಲಿ ತಗೊಂಡು ಹೋದವನು ಮೂರ್ನಾಲ್ಕು ದಿನವಾದರು ಹಿಂದಿರುಗಿಸಲು ಬಾರದಿದ್ದಾಗ ನಿರೂಪಕರು ಆ ಕೊಡಲಿಯ ಬಗ್ಗೆ ತಮ್ಮ ನಿರ್ಲಕ್ಷವನ್ನು ವಿವರಿಸುತ್ತಾ ಅದರ ಆಕಾರದ ಬಗ್ಗೆ ಯೋಚಿಸುವರು. ನಿರೂಪಕರ ಮನೆಯ ಬಳಿ ಕೆರೆ ಕೆಲಸಕ್ಕೆಂದು ಮಣ್ಣು ಒಡ್ಡರು ಬಂದಾಗ ಬೇರುಗಳನ್ನು ಕಡಿಯಲೆಂದು ಕೊಡಲಿ ತಗೊಂಡು ಯರ್‍ರಾಬಿರ್‍ರಿ ಜಪ್ಪಿ ಕೊಡಲಿಯ ಹಿಂಭಾಗ ಯಾವುದು ಮುಂಭಾಗ ಯಾವುದು ಗೊತ್ತಾಗದಷ್ಟು ಹಾಳಾಗಿತ್ತು. ಇದನ್ನು ವಿವರಿಸುತ್ತಾ ಈಗ ಅದನ್ನು ಸುತ್ತಿಗೆ ಎಂದೂ ಕರೆಯಬಹುದಿತ್ತು ಎಂದು ತಿಳಿ ಹಾಸ್ಯ ಮಾಡಿದರು.

20.ಜಗದ್ಗುರುಗಳು ಯಾವ ಧೈರ್ಯದ ಮೇಲೆ ಇದರ ಮೇಲೆ ಕುಳಿತುಕೊಳ್ಳುತ್ತಿದ್ದರೋ?

ಆಯ್ಕೆ: ಈ ಮೇಲಿನ ವಾಕ್ಯವನ್ನು ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ರಚಿಸಿದ, 'ಕಿರಗೂರಿನ ಗಯ್ಯಾಳಿಗಳು' ಎಂಬ ಕೃತಿಯಿಂದ ಆಯ್ದು, 'ಕೃಷ್ಣೇಗೌಡನ ಆನೆ' ಎಂಬ ನೀಳ್ಗತೆಯಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ:ಕಾಡಪ್ಪಶೆಟ್ಟರು ನಿರೂಪಕರ ಬಳಿ ಈ ಮಾತನ್ನು ಹೇಳಿದರು.

ವಿವರಣೆ: ನಿರೂಪಕರು ತಮ್ಮ ಗೆಳೆಯ ಪ್ರಕಾಶ್ ಜೊತೆ ಭದ್ರಾ ಅರಣ್ಯದಲ್ಲಿ ತಿರುಗುತ್ತಿರಬೇಕಾದರೆ ಕಾಡಪ್ಪಶೆಟ್ಟರು ಸಿಕ್ಕಿ ಕೃಷ್ಣೇಗೌಡನ ಆನೆಯು ಅಯ್ಯಪ್ಪ ಸ್ವಾಮಿಯ ಫೋಟೋ ಸಮೇತ ಕಾಡಿಗೆ ಓಡಿಹೋಗಿರುವ ವರ್ತಮಾನ ತಿಳಿಸಿದರು.ಆನೆ ಮೈಮೇಲಿದ್ದ ಏಳೆಂಟು ಸಾವಿರ ರೂ ಗಳ ಆಭರಣವನ್ನು ಕಾಡಪ್ಪಶೆಟ್ಟರು ಎಲ್ಲಿಂದಲೋ ಎರವಲು ತಂದಿದ್ದರಿಂದ ಅದಕ್ಕಾಗಿ ಕಾಡಿನಲ್ಲಿ ಆನೆಯನ್ನು ಹುಡುಕುತ್ತಿದ್ದರು.ಆಗ ಆನೆಯ ಪುಂಡಾಟಿಕೆಯನ್ನು ಬೈಯುತ್ತಾ ಈ ಮೇಲಿನ ಮಾತನ್ನು ಹೇಳಿದರು.

21.ಪೋಸ್ಟ್ ಬಾಕ್ಸ್‌ಗಳನ್ನು ನೇತುಹಾಕುವುದು ಕಡಿಮೆ ಖರ್ಚಲ್ಲವೇ?

ಆಯ್ಕೆ: ಈ ಮೇಲಿನ ವಾಕ್ಯವನ್ನು ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ರಚಿಸಿದ, 'ಕಿರಗೂರಿನ ಗಯ್ಯಾಳಿಗಳು' ಎಂಬ ಕೃತಿಯಿಂದ ಆಯ್ದು, 'ಕೃಷ್ಣೇಗೌಡನ ಆನೆ' ಎಂಬ ನೀಳ್ಗತೆಯಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ:ಜಬ್ಬಾರನ ತೊಂದರೆಗಳನ್ನು ವಿವರಿಸುತ್ತಾ ನಿರೂಪಕರು ಈ ಮಾತನ್ನು ಹೇಳಿದರು.

ವಿವರಣೆ: ಮೂಡಿಗೆರೆಯಂಥ ಕುಗ್ರಾಮ ಆಧುನೀಕರಣಗೊಳ್ಳುತ್ತಾ ಟೆಲಿಫೋನ್ ಎಕ್ಸಚೆಂಜ್, ವಿದ್ಯುತ್ ಎಲ್ಲ ಬಂದಹಾಗೆ ಅಂಚೆ ಇಲಾಖೆಯವರು ತಮ್ಮ ಸೇವೆಯನ್ನು ವಿಸ್ತರಿಸುತ್ತಾ ಹೋದದ್ದನ್ನು ವಿವರಿಸಿ ಲೇಖಕರು, ಆ ಸೇವೆ ವಿಸ್ತಾರಗೊಂಡ ಬಗೆಯನ್ನು ಲೇವಡಿ ಮಾಡಿದ್ದಾರೆ.ಅಲ್ಲಲ್ಲಿ ಪೋಸ್ಟ್ ಬಾಕ್ಸಗಳನ್ನು ನೇತುಹಾಕುವುದು ಸೇವಾ ವಿಸ್ತರಣೆಯಾಗಿತ್ತು! ಇದನ್ನು ಹೇಳುತ್ತ ವ್ಯಂಗ್ಯವಾಡಿದ್ದಾರೆ.

22.ಕಂತ್ರಿ ನಾಯಿಗಳನ್ನು ಕಡಿಮೆ ಮಾಡೋದಿಕ್ಕೆ ಆಗೋದಿಲ್ವೆ?

ಆಯ್ಕೆ: ಈ ಮೇಲಿನ ವಾಕ್ಯವನ್ನು ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ರಚಿಸಿದ, 'ಕಿರಗೂರಿನ ಗಯ್ಯಾಳಿಗಳು' ಎಂಬ ಕೃತಿಯಿಂದ ಆಯ್ದ, 'ಕೃಷ್ಣೇಗೌಡನ ಆನೆ' ಎಂಬ ನೀಳ್ಗತೆಯಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ವೆಟರ್ನರಿ ಆಸ್ಪತ್ರೆ ಸ್ಟಾಕ್ ಮೆನ್ ಪುಟ್ಟಯ್ಯ ನಿರೂಪಕರಿಗೆ ಈ ಮಾತನ್ನು ಹೇಳಿದರು.

ವಿವರಣೆ: ಊರಿನಲ್ಲಿ ಕಂತ್ರಿನಾಯಿಗಳು ಹೆಚ್ಚಗಿರುವುದಕ್ಕೆ ಮುನ್ಸಿಪಾಲಿಟಿಯವರು ಬೇಜವಾಬ್ದಾರಿತನವನ್ನು ನಿಂದಿಸುತ್ತಾ ಪುಟ್ಟಯ್ಯ ನಿರೂಪಕರ ಬಳಿ ನೋಡಿ ಸರ್ ಈ ಊರಿನ ಮುನ್ಸಿಪಾಲಿಟಿಯವರು ಸ್ವಲ್ಪವೂ ಜವಾಬ್ದಾರಿಯಿಲ್ಲದ ಜನ. ಇವರಿಂದ ಮತ್ತೇನು ಆಗದಿದ್ರೂ ಪರ್ವಾಗಿಲ್ಲ, ಈ ಊರಿನ ಕಂತ್ರಿ ನಾಯಿಗಳನ್ನು ಕಡಿಮೆ ಮಾಡೋದಕ್ಕೆ ಆಗೋಲ್ವೇ? ಎಂದು ದೂರಿದ ಸಂದರ್ಭವಿದು.

23.ಹೌದಾ ಎಲ್ಲಿ ಕಚ್ಚಿತೋ ಜಬ್ಬಾರ್?

ಆಯ್ಕೆ: ಈ ಮೇಲಿನ ವಾಕ್ಯವನ್ನು ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ರಚಿಸಿದ, 'ಕಿರಗೂರಿನ ಗಯ್ಯಾಳಿಗಳು' ಎಂಬ ಕೃತಿಯಿಂದ ಆಯ್ದ, 'ಕೃಷ್ಣೇಗೌಡನ ಆನೆ' ಎಂಬ ನೀಳ್ಗತೆಯಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಪುಟ್ಟಯ್ಯ ಜಬ್ಬಾರನನ್ನು ಪ್ರಶ್ನಿಸುವ ಸಂದರ್ಭ ಇದಾಗಿದೆ.

ವಿವರಣೆ: ಊರಿನಲ್ಲಿ ಕಂತ್ರಿನಾಯಿಗಳ ಕಾಟ ಹೆಚ್ಚಾಗಿರುವುದಕ್ಕೆ ಮುನ್ಸಿಪಾಲಿಟಿಯವರ ಬೇಜವಾಬ್ದಾರಿತನವೇ ಕಾರಣವೆಂದು ವೆಟರ್ನರಿ ಸ್ಟಾಕ್‌ಮನ್ ಪುಟ್ಟಯ್ಯ ನಿರೂಪಕರ ಬಳಿ ದೂರಿದನು. ಆಗ ನಿರೂಪಕರು ನಿಮ್ಮ ಡಾಕ್ಟರ್ ಗೆ ಹೇಳಿ ಮುನ್ಸಿಪಾಲಿಟಿಯ ಪ್ರೆಸಿಡೆಂಟರಿಗೆ ಒಂದು ಕಂಪ್ಲೇಂಟ್ ಕೊಡಿಸಬೇಕೆಂದೂ, ಜಬ್ಬಾರನಿಗೂ ನಾಯಿ ಕಚ್ಚಿದೆಯೆಂದೂ ತಿಳಿಸಿದಾಗ ಪುಟ್ಟಯ್ಯ ಜಬ್ಬಾರನಿಗೆ " ಹೌದಾ ಎಲ್ಲಿ ಕಚ್ಚತೋ ಜಬ್ಬಾರ?" ಎಂದು ಪ್ರಶ್ನಿಸಿರುವ ಸಂದರ್ಭವಿದಾಗಿದೆ.

24. ನಾನೇನು ನೋಡಿದಿನಾ ಆನೆ ಅಲ್ಲಾಡಿಸ್ತಿರೋದನ್ನ?

ಆಯ್ಕೆ: ಈ ಮೇಲಿನ ವಾಕ್ಯವನ್ನು ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ರಚಿಸಿದ, 'ಕಿರಗೂರಿನ ಗಯ್ಯಾಳಿಗಳು' ಎಂಬ ಕೃತಿಯಿಂದ ಆಯ್ದ, 'ಕೃಷ್ಣೇಗೌಡನ ಆನೆ' ಎಂಬ ನೀಳ್ಗತೆಯಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ:ದುರ್ಗಪ್ಪ ನಾರಾಯಣನ ಬಳಿ ಹೇಳಿದ ಸಂದರ್ಭವಾಗಿದೆ.

ವಿವರಣೆ: ದುರ್ಗಪ್ಪ ತಿಪ್ಪಣ್ಣನ ಸಾವಿಗೆ ಕೃಷ್ಣೇಗೌಡನ ಆನೆ ಮೈತಿಕ್ಕಿದ್ದೇ ಕಾರಣವೆಂದು ಹೇಳುವನು. ಆಗ ನಾರಾಯಣ ಬೈಯುತ್ತಾ "ಆ ಗಾಂಚಾಲಿ ಮನುಷ್ಯ ನಾಗರಾಜ ನಿಮ್ಗೆಲ್ಲಾ ಬುದ್ಧಿ ಕಲಿಸ್ತೀನಿ, ಕೋಳ ಹಾಕಿಸ್ತಿನಿ ಅಂತ ಹಾರಾಡ್ತನಲ್ಲಯ್ಯಾ. ಅವನ ಹತ್ರ ಮಾತಾಡೋದು ಹೇಗಯ್ಯಾ? ಏನಿದ್ರೂ ರೈಟಿಂಗಿನಲ್ಲಿ ಕೊಡಬೇಕಂತೆ! ನಾನೇನು ಕಂಡಿಲ್ಲ, ಅಂತ ಹೇಳುವಾಗಿನ ಸಮಯದಲ್ಲಿ ಬಂದ ಮಾತು.

25.ಇತ್ತ ಮುಖ ಹಾಕಲಿ, ಅದನ್ನು ಕೋವೀಲೆ ಹೊಡಿತೀನಿ.

ಆಯ್ಕೆ: ಈ ಮೇಲಿನ ವಾಕ್ಯವನ್ನು ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ರಚಿಸಿದ, 'ಕಿರಗೂರಿನ ಗಯ್ಯಾಳಿಗಳು' ಎಂಬ ಕೃತಿಯಿಂದ ಆಯ್ದು, 'ಕೃಷ್ಣೇಗೌಡನ ಆನೆ' ಎಂಬ ನೀಳ್ಗತೆಯಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ:ಸುಬ್ಬಣ್ಣನ ಮೇಕೆಗಳು ಸತ್ತ ಸಂದರ್ಭದಲ್ಲಿ ಅವನು ಕೂಗಾಡಿದಾಗಿನ ಸಂದರ್ಭವಿದು.

ವಿವರಣೆ: ಒಂದು ರಾತ್ರಿ ತೋಟದ ಮನೆಯಲ್ಲಿ ಮಲಗಿದ್ದ ಸುಬ್ಬಣ್ಣ ನಾಯಿಗಳು ಒಂದೇ ಸಮನೆ ಬೊಗಳುವುದನ್ನು ಕೇಳಿ ಹೊರಬಂದಾಗ ಅವನ ಕಣ್ಣೆದುರೇ ಕೊಟ್ಟಿಗೆಯ ಮಾಡು ದೊಪ್ಪನೆ ಕುಸಿದು ಬಿತ್ತು. ಮೇಕೆಗಳು ಅರಚಾಡಿದವು. ಕೆಲವು ಸತ್ತೇ ಹೊದವು. ಸೇರಿದ ಜನರು ಕೊಟ್ಟಿಗೆಯನ್ನೇ ಉರುಳಿಸಿ ಹೋಗಬೇಕಾದರೆ ಇದು ಆನೆಯದೆ ಕೆಲಸವೆಂದು ನಿರ್ಧರಿಸಿ ಆನೆಯನ್ನು ಬಗೆಬಗೆಯಾಗಿ ನಿಂದಿಸಿದಾಗ ಅವರೆದುಗೆ ಸುಬ್ಬಣ್ಣ ಕೋಗಾಡಿದ ಸಂದರ್ಭದಲ್ಲಿ ಹೇಳಿದ ಮಾತಿದು.

26.ಕಾಡಾನೆಗಳ ಕಾಟಕ್ಕೂ ಈ ಹೆಣ್ಣಾನೆಯೇ ಕಾರಣ.

ಆಯ್ಕೆ: ಈ ಮೇಲಿನ ವಾಕ್ಯವನ್ನು ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ರಚಿಸಿದ, 'ಕಿರಗೂರಿನ ಗಯ್ಯಾಳಿಗಳು' ಎಂಬ ಕೃತಿಯಿಂದ ಆಯ್ದು, 'ಕೃಷ್ಣೇಗೌಡನ ಆನೆ' ಎಂಬ ನೀಳ್ಗತೆಯಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಪಾರೆಸ್ಟರ್ ನಾಗರಾಜ ಸಭೆಯಲ್ಲಿ ಕೊಟ್ಟ ಕಾರಣದ ಸಂದರ್ಭ.

ವಿವರಣೆ: ಮುನ್ಸಿಪಲ್ ಪ್ರೆಸಿಡೆಂಟರು ಕರೆದ ಪುರ ಪ್ರಮುಖರ ಸಭೆಯಲ್ಲಿ ಕೃಷ್ಣೇಗೌಡನ ಆನೆಯದೇ ಮುಖ್ಯ ವಿಷಯವಾಯಿತಲ್ಲದೆ, ಅದೇ ಎಲ್ಲಾ ಅನಾಹುತಗಳಿಗೆ ಮುಖ್ಯ ಕಾರಣವೆಂದು ಆರೋಪಿಸಲಾಯ್ತು. ನಾಗರಾಜನಿಗೆ

ಆನೆಯ ಬಗ್ಗೆ ವಿಪರೀತಿ ಕೋಪ ಬಂದಿತ್ತು ಆತ ಎಲ್ಲರೆದರು ತನಗೆ ಸರಿಯಾದ ವೆಪನ್ ಕೊಟ್ಟರೆ ಆನೆಯನ್ನು ಈಗಲೇ ಶೂಟ್ ಮಾಡುವುದಾಗಿ ಊರಿನ ಬಳಿ ಕಾಡಾನೆಗಳು ಬಂದು ಕಾಟ ಕೊಡುತ್ತಿರುವುದಕ್ಕೆ ಈ ಹೆಣ್ಣಾನೆಯೇ ಕಾರಣವೆಂದು ಹಾರಾಡಿ ಹೇಳಿದನು.

**ಒಂದು ಅಂಕದ ಪ್ರಶ್ನೆಗಳು**

1. ನಿರೂಪಕರಿಗೆ ಯಾವ ಕೆಲಸ ಖಾಯಮ್ಮಾಗಿತ್ತು?

ನಿರೂಪಕರಿಗೆ ತಿಂಗಳಿಗೊಮ್ಮೆ ಜೀಪಿನ ಅಡಿ ಬಿದ್ದುಕೊಂಡು ಅದರ ಗೇರ್‌ಬಾಕ್ಸ್ ಬಿಚ್ಚಿ ರಿಪೇರಿಮಾಡುವ ಕೆಲಸ ಖಾಯಮ್ಮಾಗಿತ್ತು.

2. ದುರ್ಗಪ್ಪ ಏನನ್ನು ಕೇಳಿ ಪಡೆಯಲು ಬಂದಿದ್ದನು?

ದುರ್ಗಪ್ಪ ನಿರೂಪಕರಿಂದ ಕೊಡಲಿ ಕೇಳಿ ಪಡೆಯಲು ಬಂದಿದ್ದನು.

3. ದುರ್ಗಪ್ಪನ ಪ್ರಕಾರ ತರ್ಲೆ ಡಿಪಾರ್ಟ್‌ಮೆಂಟ್ ಯಾವುದು?

ಟೆಲಿಫೋನ್ ಡಿಪಾರ್ಟ್‌ಮೆಂಟ್ ದುರ್ಗಪ್ಪನ ಪ್ರಕಾರ ತರ್ಲೆ ಡಿಪಾರ್ಟ್‌ಮೆಂಟ್ ಆಗಿತ್ತು.

4. ಕೃಷ್ಣೇಗೌಡರ ಆನೆ ಮೊದಲು ಯಾವ ಮಠದಲ್ಲಿತ್ತು?

ಕೃಷ್ಣೇಗೌಡರ ಆನೆಯು ಮೊದಲು ಗೂಳೂರು ಮಠದಲ್ಲಿತ್ತು.

5. ಕೃಷ್ಣೇಗೌಡರ ಆನೆಯ ಹೆಸರೇನು?

ಕೃಷ್ಣೇಗೌಡರ ಆನೆಯ ಹೆಸರು ಗೌರಿ.

6. ಅನೆಗೆ ಜಗದ್ಗುರುಗಳನ್ನು ಹೊರುವ ಕೆಲಸ ತಪ್ಪಿಹೋದುದೇಕೆ?

ಮಠದ ಜಗದ್ಗುರುಗಳನ್ನು ಜನರು ಅಡ್ಡಪಲ್ಲಕ್ಕಿಯಲ್ಲಿ ತಮ್ಮ ಹೆಗಲ ಮೇಲೆ ಹೊರತೊಡಗಿದ್ದರಿಂದ ಆನೆಗೆ ಜಗದ್ಗುರುಗಳನ್ನು ಹೊರುವ ಕೆಲಸ ತಪ್ಪಿಹೋಯಿತು.

7. ಆನೆಯ ಮಾವುತನ ಹೆಸರೇನು?

ಆನೆಯ ಮಾವುತನ ಹೆಸರು ವೇಲಾಯುಧ.

8. ರಹಮಾನ್ 'ಐ ವಿಟ್‌ನೆಸ್' ಎಂದು ಯಾರನ್ನು ತೋರಿಸಿದನು?

ರಹಮಾನ್ 'ಐ ವಿಟ್‌ನೆಸ್' ಎಂದು ಜುಬೇದಳನ್ನು ತೋರಿಸಿದ.

9. ನಿರೂಪಕರ ಇಕಾಲಜಿಸ್ಟ್ ಗೆಳೆಯ ಯಾರು?

ನಿರೂಪಕರ ಇಕಾಲಜಿಸ್ಟ್ ಗೆಳೆಯ ಪ್ರಕಾಶ್.

10. ಆನೆ ಇಲ್ಲದ್ದರಿಂದ ವೇಲಾಯುಧ ಎಲ್ಲಿ ಕೆಲಸಕ್ಕೆ ಸೇರಿದ?

ಆನೆ ಇಲ್ಲದ್ದರಿಂದ ವೇಲಾಯುಧ ಶಿವೇಗೌಡರ ಸಾಮಿಲ್ಲಿನಲ್ಲಿ ಕೆಲಸಕ್ಕೆ ಸೇರಿದ.

11. ಶಿವೇಗೌಡರು ರಾತ್ರೋ ರಾತ್ರಿ ಆನೆ ಕರೆದುಕೊಂಡು ಹೋದುದ್ದೇಕೆ?

ಶಿವೇಗೌಡರು ತಮ್ಮ ಸಾಮಿಲಿನಲ್ಲಿ ಕಳ್ಳನಾಟ ಇಳಿಸಲು ರಾತ್ರೋ ರಾತ್ರಿ ಆನೆ ಕರೆದುಕೊಂಡು ಹೋದರು.

12. ಪೋಸ್ಟ್‌ಮನ್ ಜಬ್ಬಾರನಿಗೆ ಒದಗಿದ ತೊಂದರೆ ಏನು?

ಪೋಸ್ಟ್‌ಮನ್ ಜಬ್ಬಾರನಿಗೆ ಒದಗಿದ ತೊಂದರೆ ಎಂದರೆ, ಪೋಸ್ಟ್ ಕೊಡುವುದಲ್ಲದೆ ಪ್ರತಿದಿನ ಪೋಸ್ಟ್ ಬಾಕ್ಸ್ ಇರುವವರೆಗೂ ಹೋಗಿ ಪೋಸ್ಟ್ ಸಂಗ್ರಹಿಸಿ ಹೆಡ್ಡಾಫೀಸಿಗೆ ಕೊಡಬೇಕಾಗಿತ್ತು.

13. ಜಬ್ಬಾರ್ ವೆಟರ್ನರಿ ಆಸ್ಪತ್ರೆಗೆ ಬರಲು ಕಾರಣವೇನು?

ನಾಯಿ ಕಚ್ಚಿದ್ದರಿಂದ ಇಂಜೆಕ್ಷನ್ ತೆಗೆದುಕೊಳ್ಳಲು ಜಬ್ಬಾರ್ ವೆಟರ್ನರಿ ಆಸ್ಪತ್ರೆಗೆ ಬಂದಿದ್ದ.

14. ಮುನ್ಸಿಪಾಲಿಟಿ ಪ್ರೆಸಿಡೆಂಟರ ಹೆಸರೇನು?

ಮುನ್ಸಿಪಾಲಿಟಿ ಪ್ರೆಸಿಡೆಂಟರ ಹೆಸರು ಖಾನ್ ಸಾಹೇಬ್.

15. ನಿರೂಪಕರ ಪ್ರಕಾರ ಮುನ್ಸಿಪಾಲಿಟಿ ಪ್ರೆಸಿಡೆಂಟರ ಕರ್ತವ್ಯ ಯಾವುದು?

ನಿರೂಪಕರ ಪ್ರಕಾರ ಮುನ್ಸಿಪಾಲಿಟಿ ಪ್ರೆಸಿಡೆಂಟರ ಕರ್ತವ್ಯ ಊರನ್ನು ಸ್ವಚ್ಛವಾಗಿಡೋದು.

16. ಟೆಲಿಫೋನ್ ಕಂಬದ ಮೇಲೆ ಮೃತನಾದ ಲೈನ್‌ಮನ್ ಯಾರು?

ಟೆಲಿಫೋನ್ ಕಂಬದ ಮೇಲೆ ಮೃತನಾದ ಲೈನ್‌ಮನ್ ತಿಪ್ಪಣ್ಣ.

17. ಟೆಲಿಫೋನ್ ಸಿಬ್ಬಂದಿ ಯಾರ ವಿರುದ್ಧ ಮುಷ್ಕರ ಹೂಡಿದರು?

ಟೆಲಿಫೋನ್ ಸಿಬ್ಬಂದಿ ವಿದ್ಯುತ್ ಇಲಾಖೆಯ ವಿರುದ್ಧ ಮುಷ್ಕರ ಹೂಡಿದರು

18. ಯಾವ ವಿಷಯ ಪ್ರಸ್ತಾಪಿಸಲು ಲೇಖಕರು ಮೀಟಿಂಗಿಗೆ ಹೋಗಿದ್ದರು?

ಮೂಡಿಗೆರೆಯಲ್ಲಿ ಇರುವ ಕಂತ್ರಿ ನಾಯಿಗಳ ಕಾಟವನ್ನು ಪ್ರಸ್ತಾಪಿಸಲೆಂದು ಲೇಖಕರು ಮೀಟಿಂಗ್‌ಗೆ ಹೋಗಿದ್ದರು.

19. ರೇಂಜರ್ ಆನೆಗೆ ಶೂಟ್ ಮಾಡುವಂತೆ ಯಾರಿಗೆ ಸೂಚಿಸಿದರು?

ರೇಂಜರ್ ಆನೆಗೆ ಶೂಟ್ ಮಾಡುವಂತೆ ಫಾರೆಸ್ಟ್ ಆಫೀಸರ್ ನಾಗರಾಜನಿಗೆ ಸೂಚಿಸಿದರು.

20. ಆನೆಶಾಸ್ತ್ರದವನು ಏನೆಂದು ಭವಿಷ್ಯ ನುಡಿದಿದ್ದನು?

ಆನೆಶಾಸ್ತ್ರದವನು ಈ ಆನೆಯಿಂದ ಐದು ಜನ ಪ್ರಾಣ ಕಳೆದುಕೊಳ್ಳುತ್ತಾರೆಂದು ಭವಿಷ್ಯ ನುಡಿದಿದ್ದನು.

21. ನಾಗರಾಜ ಕೋವಿ ಹಿಡಿದು ಎಲ್ಲಿ ಕುಳಿತಿದ್ದ?

ನಾಗರಾಜ ಕೃಷ್ಣೇಗೌಡರ ತೋಟದ ಬೇಲಿ ಮೂಲೆಯಲ್ಲಿ ಬಿಳಿ ಬೂರುಗದ ಮರದ ಕೆಳಗೆ ಒಳ್ಳೆ ಆಯಕಟ್ಟಿನ ಗಂಡಿಯಲ್ಲಿ ಕೋವಿ ಹಿಡಿದು ಕುಳಿತಿದ್ದ.

22. ಪೊಲೀಸರು ಏನೆಂದು ಮಹಜರು ಬರೆದುಕೊಂಡರು?

ಪೊಲೀಸರು ಕಾಡೆಲ್ಲ ಹುಡುಕಾಡಿ ಕೊನೆಗೆ 'ನಾಗರಾಜನ ಕೋವಿ ಸಿಕ್ಕಿದೆ, ಆದರೆ ಹೆಣ ಸಿಗಲಿಲ್ಲ' ಎಂದು ಮಹಜರು ಬರೆದುಕೊಂಡರು.

23.ನಿರೂಪಕರ ಕೊಡಲಿಯ ಆಕಾರ ಹೇಗಿತ್ತು?

ನಿರೂಪಕರ ಕೊಡಲಿ ಆಕಾರ ಸುತ್ತಿಗೆಯಂತೆ ಕಾಣುತ್ತಿತ್ತು.

24. ಸರ್ಕಾರ ವಿಮ್ ಕೋ ಕಂಪನಿಗೆ ಯಾವ ಗುತ್ತಿಗೆ ಕೊಟ್ಟಿತ್ತು?

ಸರ್ಕಾರ ವಿಮ್ ಕೋ ಕಂಪನಿಗೆ ಬೆಂಕಿ ಕಡ್ಡಿ ತಯಾರಿಕೆಗೆ ಮರ ಕಡಿಯಲು ಗುತ್ತಿಗೆ ಕೊಟ್ಟಿತ್ತು

25.ಆನೆ ಯಾರ ಅಂಗಡಿಯನ್ನು ದೂಡಿ ಬೀಳೀಸಿತು?

ಆನೆ ರೆಹಮಾನ್ ಸಾಬಿಯ ಅಂಗಡಿಯನ್ನು ದೂಡಿ ಬೀಳೀಸಿತು.

26.ನಿರೂಪಕರ ಕೆಟ್ಟ ಕೂತೂಹಲ ಯಾವುದು?

ತರಲೆ ಕೇಸುಗಳ ಕ್ಷುದ್ರ ಸಂಗತಿಗಳ ಜಾಡು ಹಿಡಿದು ಬಿಡಿಸುವುದು ಕೆಟ್ಟ ಕೂತೂಹಲವಾಗಿತ್ತು.

27. ಭಲಭೀಮನಂತಿದ್ದ ಆನೆಯ ಮಾವುತ ನೋಡಲು ಹೇಗಿದ್ದ?

ಭಲಭೀಮನಂತಿದ್ದ ಆನೆಯ ಮಾವುತ ನೋಡಲು ನರಪೇತಲ ನಾರಾಯಣನಂತಿದ್ದ.

28.ಪುಟ್ಟಯ್ಯ ಯಾರು?

ಪುಟ್ಟಯ್ಯ ವೆಟರ್ನರಿ ಆಸ್ಪತ್ರೆಯ ಸ್ಟಾಕ್‌ಮೆನ್.

29.ರಮೇಶ ಬಾಬು ಯಾರು?

ರಮೇಶ್ ಬಾಬು ಟೆಲಿಫೋನ್ ಇಲಾಖೆಯ ಇಂಜಿನಿಯರ್.

30.ಹಳೆಕೊಪ್ಪದ ಸುಬ್ಬಣ್ಣನಿಗೆ ಆನೆಯಿಂಧಾದ ತೊಂದರೆ ಯಾವುದು?

ಆನೆಯು ಸುಬ್ಬಣ್ಣನ ಕುರಿಗಳ ಕೊಟ್ಟಿಗೆಯನ್ನು ದೂಡಿ ಬೀಳಿಸಿತ್ತು.

31. ಆನೆಯ ಕಾಲಿಗೆ ಸರಪಳಿ ಕಟ್ಟಲಾಗದೆಂದು ವೇಲಾಯುಧ ಹೇಳೀದ್ದೇಕೆ?

ಆನೆಯ ಕಾಲಿಗೆ ಗಾಯವಾಗಿರುವುದರಿಂದ ಸರಪಳಿ ಕಟ್ಟಲಾಗದೆಂದು ವೇಲಾಯುಧ ಹೇಳಿದ.

32.ಆನೆ ಕಣ್ಮರೆಯಾದ ವಿಚಾರವನ್ನು ನಾಗರಾಜನಿಗೆ ಹೇಳಿದವರ್ಯ್ಯಾರು?

ಆನೆ ಕಣ್ಮರೆಯಾದ ವಿಚಾರವನ್ನು ನಾಗರಾಜನಿಗೆ ಗಾರ್ಡ ರಾಮಪ್ಪ ಹೇಳಿದ.

33. ಸಾರ್ವಜನಿಕರು ನಾಗರಾಜನ ಸಾವನ್ನು ಕುರಿತು ಏನೆಂದು ಯೋಚಿಸಿದರು.?

ಸಾರ್ವಜನಿಕರು ಸಭೆಯಲ್ಲಾದ ಅವಮಾನದಿಂದ ನಾಗರಾಜ ಆತ್ಮಹತ್ಯೆ ಮಾಡಿಕೊಂಡಿರಬಹುದೆಂದು ಯೋಚಿಸಿದರು.

34.ಕೃಷ್ಣೇಗೌಡನನ್ನು ಕಾಡಿದ ಕಳವಳವೇನು?

ಓಡಿ ಹೋದ ಆನೆ ಕಾಡಿನಿಂದ ಮತ್ತೆ ಹಿಂದಿರುಗಿದರೆ ಏನು ಕಥೆ ಎಂದು ಕಳವಳಗೊಂಡನು.

**ಎರಡು ಅಂಕಗಳ ಪ್ರಶ್ನೆಗಳು (ಎರಡು– ಮೂರು ವಾಕ್ಯಗಳಲ್ಲಿ ಉತ್ತರಿಸಿ):**

1. ನಮ್ಮ ಕಡೆ ಕೆಮ್ಮುವುದು ಕಾಲಿಂಗ್ ಬೆಲ್ ಇದ್ದಹಾಗೆ ಎಂದು ನಿರೂಪಕರು ಹೇಳುವುದೇಕೆ?

ಮನೆ ಬಳಿ ಬಂದವರು ಗಮನ ಸೆಳೆಯಲು ಕೆಮ್ಮುವುದು, ಕ್ಯಾಕರಿಸುವುದು ಮಾಡಿ ಗಲಾಟೆ ಮಾಡುತ್ತಿದ್ದರು. ಬಹುಶಃ ಭಾಷೆ ಉಪಯೋಗಿಸಿ ಕರೆಯಬೇಕೆಂದಾದರೆ ಮನೆಯವರ ಹೆಸರೇನು? ಹೆಸರು ಹಿಡಿದು ಕರೆಯಬೇಕೋ? ಸ್ವಾಮಿ ಎನ್ನಬೇಕೋ? ಬಹುವಚನ ಉಪಯೋಗಿಸಬೇಕೋ? ಏಕವಚನವೋ? ಭಾಷೆ ಉಪಯೋಗಿಸಿ ಕರೆಯಬೇಕೆಂದಾದಲ್ಲಿ ಹಲವು ಬಿಕ್ಕಟ್ಟುಗಳನ್ನು ಎದುರಿಸಬೇಕು. ಅದರ ಬದಲು ಒಂದೆರಡು ಸಾರಿ ಕೆಮ್ಮಿದರೆ ಈ ಎಲ್ಲ ತೊಂದರೆಗಳೇ ಇರುವುದಿಲ್ಲ ಎನ್ನುವುದು ನಿರೂಪಕರ ಅಭಿಪ್ರಾಯ.

2. ದುರ್ಗಪ್ಪ ಏಕೆ ಬಂದಿರಬಹುದೆಂದು ನಿರೂಪಕರು ಯೋಚಿಸಿದರು?

ನಿರೂಪಕರು ದುರ್ಗಪ್ಪನ ಮಾತುಗಳನ್ನು ಕೇಳಿದಾಗ ಏನೂ ಕೆಲಸವಿಲ್ಲದೆ ಆತ ಪುರುಸೊತ್ತಾಗಿದ್ದ ಎಂದು ಅರ್ಥಬರುತಿತ್ತು. ಹಾಗಿದ್ದರೆ ಏನೋ ಇನಾಮು ಕೇಳಲೋ ಅಥವಾ ಚಂದಾವಸೂಲಿಗೋ ಇಲ್ಲವೇ ಮನೆ ಉಪಯೋಗಕ್ಕೆ ಕಾಫಿ ಬೀಜವನ್ನೋ ಏಲಕ್ಕಿಯನ್ನೋ ಕೇಳಲು ಈ ರೀತಿ ಪೀಠಿಕೆ ಹಾಕಿರಬಹುದೆಂದು ಯೋಚಿಸಿದರು.

3. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆ ಹೇಗೆ?

ಕೃಷ್ಣೇಗೌಡರ ಆನೆ ಕಾಡಿನಿಂದ ಹಿಡಿದು ತಂದು ಪಳಗಿಸಿದ ಆನೆಯಲ್ಲ. ಘಟ್ಟದ ಕೆಳಗಿದ್ದ ಗೂಳೂರು ಮಠದ ಆನೆ ಹಾಕಿದ ಮರಿಯೇ ಇದಾಗಿತ್ತು. ಇದು ಹುಟ್ಟಿದ್ದು ಬೆಳೆದದ್ದು ಎಲ್ಲ ಜನಗಳ ನಡುವೆಯೇ. ಹಾಗಾಗಿ ಅದಕ್ಕೆ ಕಾಡಿನ ಬಗ್ಗೆಯಾಗಲಿ ಕಾಡಿನಲ್ಲಿರುವ ಇತರ ಕಾಡಾನೆಗಳ ಬಗ್ಗೆಯಾಗಲಿ ಏನೂ ತಿಳಿವಳಿಕೆ ಇರಲಿಲ್ಲ.

4. ಮಠದವರಿಗೆ ಆನೆಗಿಂತ ವೇಲಾಯುಧನನ್ನು ಸಾಕಲು ತ್ರಾಸವಾದುದೇಕೆ?

ಮಠದವರಿಗೆ ಆನೆಗಿಂತ ವೇಲಾಯುಧನನ್ನು ಸಾಕಲು ತ್ರಾಸದಾಯಕವಾಗಿತ್ತು ಏಕೆಂದರೆ, ಇಪ್ಪತ್ತನಾಲ್ಕು ಗಂಟೆಯು ಕುಡಿದೇ ಇರುತ್ತಿದ್ದ. ಅಲ್ಲದೆ ಮಠದ ಸಾತ್ವಿಕ ವಾತಾವರಣಕ್ಕೂ ದೊಡ್ಡ ತಲೆನೋವಾಗಿದ್ದ. ಒಮ್ಮೆ ಆತನ ದುರ್ನಡತೆಗಾಗಿ ಛೀಮಾರಿ ಹಾಕಿಸಿ ಓಡಿಸಿದಾಗ ಆನೆ ಅನೇಕ ದಿನಗಳ ವರೆಗೆ ಯಾರ ಮಾತನ್ನು ಕೇಳದೆ ಊಟವನ್ನೇ ವರ್ಜಿಸಿತ್ತು. ಆನೆ ಇರುವವರೆಗೆ ತನ್ನ ಅನಿವಾರ್ಯತೆಯನ್ನು ಮನಗಂಡ ವೇಲಾಯುಧ ಮಠಕ್ಕೆ ಇನ್ನಷ್ಟು ಕಿರುಕುಳ ಕೊಡಲಾರಂಭಿಸಿದ.

5. ಆನೆ ಸಾಕುವುದರ ಬಗ್ಗೆ ಜನರ ನಂಬಿಕೆ ಏನಾಗಿತ್ತು?

ಆನೆ ಸಾಕುವುದು ಎಂದರೆ ಎಲೆಕ್ಷನ್ನಿಗೆ ನಿಂತ ಹಾಗೆ. ಮನೆ ಮಠ ಸಂಪೂರ್ಣ ಹಾಳುಮಾಡಿಕೊಂಡು ಹೆಂಡತಿ ಮಕ್ಕಳ ಬಾಯಿಗೆ ಮಣ್ಣು ಹಾಕುವ ಕ್ಷಿಪ್ರ ಮಾರ್ಗ ಇದೆಂದು ಎಲ್ಲರೂ ದೃಢವಾಗಿ ನಂಬಿದ್ದರು.

6. ಸೊರಗಿದ್ದ ಆನೆಯನ್ನು ಕೃಷ್ಣೇಗೌಡ ಹೇಗೆ ಸಾಕಿದ?

ಮಠದಲ್ಲಿ ಬರಿ ಒಣಹುಲ್ಲು ಮೊಸರನ್ನ ತಿಂದು ಸೊರಗಿದ್ದ ಆನೆಗೆ ಬಯನೆ ಸೊಪ್ಪು, ಹಸಿ ಹುಲ್ಲು, ಹಿಂಡಿ, ಬೆಲ್ಲ ಗೆಣಸು ಎಲ್ಲ ಕೊಟ್ಟು ಕೃಷ್ಣೇಗೌಡ ಪಗಡುದಸ್ತಾಗಿ ಬೆಳೆಸಿದ. ಆನೆ ಮರ ಎಳೆದು ತಂದ ಬಾಡಿಗೆಯಿಂದ ಕೃಷ್ಣೇಗೌಡನಿಗೆ ಒಳ್ಳೆಯ ಲಾಭವೂ ಕೂಡ ಬಂತು.

7. ಕಾಡಾನೆಗಳ ಹಾವಳಿಗೆ ಪ್ರಕಾಶ್ ನೀಡಿದ ಕಾರಣಗಳೇನು?

ಅಪ್ಪರ್ ಭದ್ರಾ ಅಣೆಕಟ್ಟಿನಿಂದ ಮುಳುಗಡೆಯಾಗುವ ಕಾಡುಗಳನ್ನು ಸರ್ವೇ ಮಾಡಲು ಬಂದಿದ್ದ ಇಕಾಲಜಿಸ್ಟ್ ಪ್ರಕಾಶ್ ಮೂಡಿಗೆರೆಯಲ್ಲಿ ಒಂದು ಭಾಷಣ ಮಾಡುತ್ತ, ಕಾಡಾನೆಗಳ ಹಾವಳಿಗೆ ಕಾರಣ ಅರಣ್ಯ ಇಲಾಖೆಯವರು ಕಾಡಿನ

ಮರಗಳನ್ನು ತೆಗೆದು ನೀಲಗಿರಿ, ಅಕೇಶಿಯಾ ಮುಂತಾದ ಆನೆಗಳಿಗೆ ನಿರುಪಯುಕ್ತವಾದುದನ್ನು ನೆಡುತ್ತಿರುವುದು ಎಂಬುದು.

8. ಫಾರೆಸ್ಟ್ ಡಿಪಾರ್ಟ್‌ಮೆಂಟಿನವರ ನಂಬರ್ ಒನ್ ಎನಿಮಿಗಳು ಯಾರು?

ಫಾರೆಸ್ಟ್ ಡಿಪಾರ್ಟ್‌ಮೆಂಟಿನವರಿಗೆ, ಮೂರು ಡಿಪಾರ್ಟ್‌ಮೆಂಟಗಳು ನಂಬರ್ ಒನ್ ಎನಿಮಿಗಳು. ಪಿಡಬ್ಲ್ಯುಡಿನವರು, ಕರೆಂಟಿನವರು, ಟೆಲಿಫೋನಿನವರು. ಪಿಡಬ್ಲ್ಯುಡಿನವರು ರಸ್ತೆಗೆ ಟಾರು ಹಾಕಲು ಮರಾನೆಲ್ಲ ಕಡಿದು ಟಾರು ಕಾಯಿಸ್ಕೋತಾರೆ. ಟೆಲಿಫೋನಿನವರು ಕರೆಂಟಿನವರು ಲೈನ್ ಎಳಿತೀವಿ ಅಂತ ಸಾವಿರಾರು ಎಕರೆ ಕಾಡು ಕಡಿದು ಹಾಳುಮಾಡುತ್ತಾರೆ ಎನ್ನುವುದಾಗಿ ಫಾರೆಸ್ಟ್ ಆಫೀಸರ್ ನಾಗರಾಜ ಹೇಳುತ್ತಾನೆ.

9. ನಾಗರಾಜ ದುರ್ಗಪ್ಪನ ಮೇಲೆ ಏನೆಂದು ರೇಗಿದನು?

ನಾಗರಾಜ ದುರ್ಗಪ್ಪನ ಮೇಲೆ 'ಏನೋ ಮರ ಯಾಕೆ ಕಡೀತೀಯಾಂತ ಕೇಳಿದರೆ ಮ್ಯಾಲಿನೋರ್ನ ಕೇಳ್ಕಳಿ ಅಂತ ಉಚಾಯಿಸಿ ಮಾತಾಡ್ತೀಯಾ? ಹೇಳದೆ ಕೇಳದೆ ಡಿಪಾರ್ಟ್‌ಮೆಂಟಿನ ಮರ ಕಡಿದರೆ ಇನ್ನೊಂದ್ ಸಾರಿ, ಮತ್ತೇನಿಲ್ಲ! ನಿನ್ನೇ ಲಾಕಪ್ಪಿಗೆ ಹಾಕಿಸಿ ಬಿಡ್ತೀನಿ. ಏನಂತ ತಿಳ್ಕೊಂಡಿದ್ದೀಯ'.

ಎಂದು ರೇಗಿದನು.

10. ಡ್ರೈವರ್‌ನ ತಲೆ ಜಜ್ಜಿ ಹೋದದ್ದು ಹೇಗೆ? ಆನೆ ಅದಕ್ಕೆ ಕಾರಣವೇ?

ವೇಲಾಯುಧ ಆನೆಯಲ್ಲಿ ಲಾರಿಯಲ್ಲಿರುವ ಮರದ ದಿಮ್ಮಿಗಳನ್ನು ತಳ್ಳಿ ಉರುಳಿಸಲು ಹೇಳಿದ. ಆದರೆ ಲಾರಿಗೂ ನಾಟಗಳಿಗೂ ಹಗ್ಗ ಬಿಗಿದು ಕಟ್ಟಿದ್ದು ಬಿಚ್ಚಬೇಕೆಂದು ಮರತೇಹೋಗಿತ್ತು. ಆನೆ ನಾಟಾಗಳನ್ನು ಹಗ್ಗದ ಸಮೇತ ಎಳೆದದ್ದರಿಂದ ಲಾರಿ ಮೆಲ್ಲಗೆ ವಾಲುತ್ತ ಒಂದು ಕಡೆಗೆ ಉರುಳಿತು. ಆದರೆ ಕ್ಯಾಬಿನ್ನಿನಲ್ಲಿ ಇಟ್ಟಿದ್ದ ಲಾರಿ ಜಾಕ್ ಲಾರಿ ಸ್ಟೇರಿಂಗ್ ಮೇಲೆ ಮಲಗಿದ್ದ ಡ್ರೈವರ್ ತಲೆ ಬುರುಡೆಯ ಮೇಲೆ ಬಿದ್ದ ಕಾರಣ ಡ್ರೈವರ್ ತಲೆ ಜಜ್ಜಿ ಹೋಯಿತು. ಆದರೆ ಅದಕ್ಕೆ ಆನೆ ಕಾರಣವಲ್ಲ. ಆನೆ ವೇಲಾಯುಧ ಏನು ಹೇಳಿದನೋ ಅದರಂತೆ ಆನೆ ನಡೆಯಿತು.

11. ತನ್ನ ಕೆಲಸ ಅತ್ಯಂತ ಅಪಾಯಕಾರಿಯೆಂದು ದುರ್ಗಪ್ಪ ವಿವರಿಸಿದ್ದು ಹೇಗೆ?

ಲೈನ್‌ಮನ್ ಕೆಲಸಕ್ಕೆ ಸೇರಿದ ಮೇಲೆ ಪ್ರಾಣದ ಆಸೆ ಇಟ್ಕೊಂಡ್ರೆ ಆಗುತ್ತ? ನಮ್ಮ ಡಿಪಾರ್ಟ್‌ಮೆಂಟಿನ ಲೈನ್‌ಮನ್‌ಗಳ್ಯಾರದ್ರೂ ಈ ವರೆಗೆ ಸರ್ವಿಸ್

ಮುಗಿಸಿ ರಿಟೈರಾಗಿರೋದನ್ನ ನೋಡಿದ್ದೀರಾ? ಕರೆಂಟಿನ ಜೊತೆ ಕೆಲಸ ಅದು. ಒಂದಲ್ಲ ಒಂದು ದಿನ ಸ್ವಲ್ಪ ಎಚ್ಚರ ತಪ್ಪಿದರೂ ಅಲ್ಲಿಗೆ ನಮ್ಮ ಸರ್ವಿಸ್ ಮುಗಿದಂಗೆ ಎಂದು ತನ್ನ ಕೆಲಸ ಅತ್ಯಂತ ಅಪಾಯಕಾರಿಯೆಂದು ದುರ್ಗಪ್ಪ ವಿವರಿಸಿದ.

12. ಜಬ್ಬಾರ್ ನಿರೂಪಕರಿಗೆ ಅಂಚೆ ವಿಲೇವಾರಿ ಬಗ್ಗೆ ಅಸಡ್ಡೆಯಿಂದ ಏನು ಹೇಳಿದ ?

ಜಬ್ಬಾರ್ ನಿರೂಪಕರಿಗೆ ಅಂಚೆ ವಿಲೇವಾರಿ ಬಗ್ಗೆ ಅಸಡ್ಡೆಯಿಂದ “ಅಯ್ಯೋ ಯಾವೋ ಮದ್ವೆಮನೆ ಕಾಗದ ಸಾರ್. ನೀವೇನು ಹೋಗೋದಿಲ್ಲ ಏನಿಲ್ಲ. ಅವನ್ನು ಇವತ್ತು ಕೊಟ್ಟರೂ ಒಂದೆ, ನಾಳೆ ಕೊಟ್ಟರೂ ಒಂದೆ” ಎಂದು ಹೇಳಿದ.

13. ನಾಯಿ ಕಚ್ಚಿದ್ದೆಲ್ಲಿ ಎಂದಾಗ ಜಬ್ಬಾರ್ ಇರುಸುಮುರುಸುನಿಂದ ಏನು ಹೇಳಿದನು?

ನಾಯಿ ಕಚ್ಚಿದ್ದೆಲ್ಲಿ ಎಂದಾಗ ಜಬ್ಬಾರ್ ಇರುಸು ಮುರುಸುನಿಂದ; ಹೋಗಲಿ ಬಿಡಿ. ಅದು ಬೀದೀಲಿ ತೋರಿಸೋ ಹಂಗಿಲ್ಲ. ನನ್ಮಗಂದು ಅಂಥಾ ಜಾಗದಲ್ಲಿ ಕಚ್ಚಿದೆ. ಪ್ಯಾಂಟು ಬಿಚ್ಚಬೇಕಾಗುತ್ತೆ ಎಂದು ದನಿ ತಗ್ಗಿಸಿ ಹೇಳಿದ.

14. ಹುಚ್ಚುನಾಯಿಗಳು ಆಸ್ಪತ್ರೆಯಲ್ಲಿ ಹೇಗೆ ವರ್ತಿಸುತ್ತವೆಂದು ಪುಟ್ಟಯ್ಯ ಹೇಳಿದನು?

ಹುಚ್ಚುನಾಯಿಗಳು ಆಸ್ಪತ್ರೆಯಲ್ಲಿ ವರ್ತಿಸುವ ಬಗ್ಗೆ ಪುಟ್ಟಯ್ಯ ಹೀಗೆ ಹೇಳುತ್ತಾನೆ; ಹುಚ್ಚುನಾಯಿ ಹತ್ರ ಧೈರ್ಯದ ಪ್ರಶ್ನೇನೆ ಬರೋದಿಲ್ಲ. ಅವಕ್ಕೆ ತಲೆಕೆಟ್ಟು ಕಂಡಕಂಡಿದ್ದಕ್ಕೆಲ್ಲಾ ಕಚ್ಚುತ್ತವೆ. ಆಸ್ಪತ್ರೆಗೆ ತಗೊಂಡು ಬಂದವನ್ನ ನೋಡಿದೀನಲ್ಲ. ಮೇಜು ಕುರ್ಚಿ ಕಾಲಿಗೆಲ್ಲ ಕಚ್ಚುತ್ತವೆ ಎಂದನು.

15. ನಾಯನ್ನು ಕೊಲ್ಲದೆ ನೌಕರರು ಸುಳ್ಳು ಹೇಳಿರುವರೆಂದು ನಿರೂಪಕರು ಯಾವ ಸಲಹೆ ನೀಡಿದರು?

ನಿರೂಪಕರು ಖಾನ್‌ಸಾಬ್‌ಗೆ; ಒಂದು ಕೆಲಸ ಮಾಡಿ, ಇನ್ನು ಮೇಲೆ ನಾಯಿ ಕೊಂದರೆ ಬಾಲ ತಗೊಂಡು ಬಂದು ತೋರಿಸಬೇಕು ಅಂತ ಹೇಳಿ. ಅವರ ಲೆಕ್ಕ ಸುಳ್ಳೋ ನಿಜವೋ ನಿಮಗೆ ಗೊತ್ತಾಗುತ್ತೆ ಎಂದು ಸಲಹೆ ನೀಡಿದರು.

16. ಆನೆಯೇ ತಿಪ್ಪಣ್ಣನ ಸಾವಿಗೆ ಕಾರಣವೆಂದು ದುರ್ಗಪ್ಪ ಹೇಳಿದಾಗ ನಿರೂಪಕರ ಪ್ರತಿಕ್ರಿಯೆ ಏನು?

ಆನೆಯೇ ತಿಪ್ಪಣ್ಣನ ಸಾವಿಗೆ ಕಾರಣವೆಂದು ದುರ್ಗಪ್ಪ ಹೇಳಿದಾಗ ನಿರೂಪಕರು "ಅದೇನ್ಮಾಡುತ್ತಯ್ಯಾ ಆನೆ. ಎಲ್ಲೋ ಕಂಬದ ಮೇಲೆ ಸತ್ತಿರೋ ತಿಪ್ಪಣ್ಣನಿಗೂ, ಎಲ್ಲೋ ಓಡಾಡಿಕೊಂಡಿರೋ ಆನೆಗೂ ಕಟ್ಟೇರಲ್ಲಯ್ಯ. ಬಾಯಿಲ್ಲದೋರು ಈ ಪ್ರಪಂಚದಲ್ಲಿ ಬದುಕೋಹಂಗೇ ಇಲ್ಲವೇನಯ್ಯ?" ಎಂದು ಪ್ರತಿಕ್ರಿಯಿಸಿದರು.

17. ಡ್ರೈವರ್ ಅಬ್ಬಾಸ್, ಕ್ಲೀನರ್ ಕೃಷ್ಣರ ಸಾವಿಗೆ ಕಾರಣವೇನು?

ಲೋಡು ಲಾರಿ ಬಿಟ್ಟುಕೊಂಡು ಬರುತ್ತಿದ್ದ ಅಬ್ಬಾಸ್‌ಗೆ, ಎರಡು ದಂ ಬೀಡಿ ಎಳೆಯಬೇಕೆನ್ನುವ ತೆವಲು ಉಂಟಾಯಿತು. ಬೀಡಿ ಹಚ್ಚಿಕೊಳ್ಳುವವರೆಗೆ ಕ್ಲೀನರ್ ಕೃಷ್ಣನಲ್ಲಿ ಸ್ಟೇರಿಂಗ್ ಹಿಡಿಯಲು ಹೇಳುತ್ತಾನೆ. ಆದರೆ ಕ್ಲೀನರ್ ಕೃಷ್ಣ ನಿದ್ದೆಯ ಮಂಪರಿನಲ್ಲಿ ಇದ್ದ ಕಾರಣ ಆತ ಸ್ಟೇರಿಂಗನ್ನು ಆಚೀಚೆ ಅಲ್ಲಾಡದಂತೆ ವಜ್ರಮುಷ್ಟಿಯಲ್ಲಿ ಹಿಡಿಯುತ್ತಾನೆ. ಆದರೆ ನೇರವಾಗಿ ಮರದ ದೊಡ್ಡ ಕಾಂಡದ ಕಡೆಗೆ ಮುನ್ನುಗ್ಗುತ್ತಿದ್ದ ಲಾರಿಯನ್ನು ತಪ್ಪಿಸಲು ಡ್ರೈವರ್ ಅಬ್ಬಾಸ್ ಕೃಷ್ಣನಲ್ಲಿ ಸ್ಟೇರಿಂಗ್ ಬಿಡೊ ಎನ್ನುತ್ತಾನೆ. ಆದರೆ ಕೃಷ್ಣ ಬಿಡದೇ ಇದ್ದಾಗ ಕೊನೆ ಕ್ಷಣದಲ್ಲಿ ಬ್ರೇಕ್ ಹಾಕಲು ಮುಂದಾಗುತ್ತಾನೆ. ಆದರೆ ಅಷ್ಟೊತ್ತಿಗಾಗಲೇ ಪರಿಸ್ಥಿತಿ ಕೈಮೀರಿ ಲಾರಿ ಮರಕ್ಕೆ ಡಿಕ್ಕಿ ಹೊಡೆಯುತ್ತದೆ. ಆ ತೀವ್ರತೆಗೆ ಡ್ರೈವರ್ ಅಬ್ಬಾಸ್ ಕ್ಲೀನರ್ ಕೃಷ್ಣ ಇಬ್ಬರೂ ಪ್ರಾಣ ಕಳೆದುಕೊಳ್ಳುತ್ತಾರೆ.

18. ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣರ ಸಾವಿಗೆ ಆನೆ ಕಾರಣವಲ್ಲವೆಂದು ಕೃಷ್ಣೇಗೌಡರಿಗೆ ಏಕೆ ಹೇಳಲಾಗಲಿಲ್ಲ?

ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣರ ಸಾವಿಗೆ ಆನೆ ಕಾರಣವಲ್ಲವೆಂದು ಕೃಷ್ಣೇಗೌಡರಿಗೆ ಹೇಳಲಾಗಲಿಲ್ಲ ಏಕೆಂದರೆ, ಅವರಿಬ್ಬರು ಸತ್ತ ಸಮಯದಲ್ಲಿ ವೇಲಾಯುಧ ಆನೆಯ ಜೊತೆಗೆ ಶಿವೇಗೌಡರ ಸಾಮಿಲಿನಲ್ಲಿ ಲಾರಿ ತರುವ ಕಳ್ಳನಾಟಕ್ಕಾಗಿ ಕಾಯುತ್ತಾ ನಿಂತಿದ್ದ. ಆದರೆ ಈ ವಿಷಯ ಹೇಳುವುದು ಅಸಾಧ್ಯವಾಗಿತ್ತು. ಏಕೆಂದರೆ ಅದು ಕಳ್ಳತನದ ವ್ಯವಹಾರವಾಗಿತ್ತು.

19. ಆನೆಯನ್ನು ಹದ್ದುಬಸ್ತಿನಲ್ಲಿಡುವುದರ ಬಗ್ಗೆ ವೇಲಾಯುಧನ ಅಪ್ಪ ಏನು ತಿಳಿಸಿದ್ದ?

ಆನೆಯನ್ನು ಹದ್ದುಬಸ್ತಿನಲ್ಲಿಡುವುದರ ಬಗ್ಗೆ ವೇಲಾಯುಧನ ಅಪ್ಪ ಹೀಗೆ ಹೇಳಿದ್ದ: ಆನೆಯ ಕಾಲಿನ ಉಗುರುಗಳ ಬಳಿ ಅಂಕುಶದಿಂದ ತಿವಿದರೆ ಅದಕ್ಕೆ ಪ್ರಾಣವೇ ಹೋಗುವಷ್ಟು ನೋವಾಗುತ್ತದೆಂದೂ, ಆ ಭಯಂಕರ ನೋವಿಗೆ ನಾಲ್ಕು ಸಾರಿ ತಿವಿಯುವುದರೊಳಗೆ ಎಂಥ ಪುಂಡು ಆನೆಯಾದರೂ ಶರಣಾಗಿ ನೆಲದ ಮೇಲೆ ಮಲಗಿಬಿಡುತ್ತದೆಂದೂ" ಹೇಳಿದ್ದ.

20. ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹೀರಾತು ನೀಡಿದರು?

ಅರಣ್ಯ ಇಲಾಖೆಯವರು ನಾಗರಾಜನ ಫೋಟೋವನ್ನು ಪತ್ರಿಕೆಗಳಲ್ಲಿ ಕೊಟ್ಟು, ಮನೆಯವರು, ಮೇಲಧಿಕಾರಿಗಳು ಹಾಗೂ ಊರಿನ ಜನರೆಲ್ಲಾ ನಿನ್ನದೇ ನಿರೀಕ್ಷೆಯಲ್ಲಿದ್ದಾರೆಂದೂ, ನಿನ್ನ ವಿರುದ್ಧ ಯಾವುದೇ ಕ್ರಮ ಅಥವಾ ಷೋಕಾಸ್ ನೋಟೀಸ್ ಅಥವಾ ತನಿಖೆ ನಡೆಸುವುದಿಲ್ಲವೆಂದೂ, ಈ ಮನವಿ ನೋಡಿದ ಕೂಡಲೇ ಎಲ್ಲಿದ್ದರೂ ಹಿಂದಿರುಗಿ ಬರತಕ್ಕದೆಂದೂ ಜಾಹೀರಾತು ನೀಡಿದರು.

21. ಕೊಂಬೆ ಲೈನ್ ಮೇಲೆ ಬೀಳಲು ಆನೆಯೇ ಕಾರಣವೆಂಬುದಕ್ಕೆ ದುರ್ಗಪ್ಪ ಹೇಳಿದ ಸಂಗತಿಗಳಾವವು?

ಮರದ ಕೇಳಗೆ ಬುಟ್ಟಿಗಟ್ಟಲೆ ಆನೆಯ ಲದ್ದಿ ಬಿದ್ದಿರುವುದರಿಂದಲೂ, ಶೀವೇಗೌಡರ ಸಾಮಿಲ್ಲಿನಲ್ಲಿ ಪಕ್ಕದಲ್ಲಿ ಮರ ಮುರಿದು ಬಿದ್ದಿರುವದರಿಂದಲೂ ಆನೆಯೇ ಕೊಂಬೆಯನ್ನು ಲೈನ್ ಮೇಲೆ ಬೀಳಿಸಿದೆಯೆಂದು ದುರ್ಗಪ್ಪ ಹೇಳುತ್ತಾನೆ.

22. ಕಾಡಪ್ಪಶೆಟ್ಟರು ಯಾವ ವರ್ತಮಾನವನ್ನು ಮುಟ್ಟಿಸಿದರು?

ಕಾಡಪ್ಪಶೆಟ್ಟ್ರು ಕಾಡೊಳಗಿನ ದಾರಿಯಲ್ಲಿ ಪ್ರಕಾಶ್ ಮತ್ತ ನಿರೂಪಕರಿಗೆ ಸಿಕ್ಕು "ಕೃಷ್ಣೇಗೌಡನ ಆನೆಯ ಮೇಲೆ ಅಯ್ಯಪ್ಪ ಸ್ವಾಮಿ ಫೋಟೋ ಇಟ್ಟು ಮೆರವಣಿಗೆ ಮಾಡುತ್ತಿದ್ದಾಗ ಅದಕ್ಕೆ ಇದ್ದಕ್ಕಿದ್ದಂತೆ ತಲೆ ಕೆಟ್ಟು ಅಂಬಾರಿ ಸಮೇತ ಕಾಡಿಗೆ ಓಡಿ ಹೋಯ್ತು" ಎಂಬ ವರ್ತಮಾನವನ್ನು ತಲುಪಿಸಿದರು.

23.ನಿರೂಪಕರಿಗೆ ಕಾಡಾನೆಗಳ ಬಗ್ಗೆ ಯಾವ ಅನುಮಾನ ಮೂಡಿತು.?

ನಿರೂಪಕರಿಗೆ ಕಾಡಾನೆಗಳು ಸಿಂಗರಿಸಿಕೊಂಡಿದ್ದ, ಮತ್ತು ಅಂಬಾರಿಯನ್ನು ಹೊತ್ತ ಈ ಆನೆಯನ್ನು ತಮ್ಮ ಗುಂಪಿಗೆ ಸೇರಿಸಿಕೋಳ್ಳುತ್ತವೆಯೇ! ಎಂದು ಅನುಮಾನ ಮೂಡಿತು.

24. ಫಾರೆಸ್ಟ ಡಿಪಾರ್ಟಮೆನಂಟ್‌ನ ಮುಂದಿದ್ದ ತುಕ್ಕು ಹಿಡಿದಿದ್ದ ವಾಹನಗಲ ಸ್ಥಿತಿ ಹೇಗಿತ್ತ?

ಅರಣ್ಯ ಇಲಾಖೆಯ ಮುಂದೆ ಇದ್ದ ಕಾರುಗಳು ಮಲೆನಾಡಿನ ಮಳೆಗೆಡ ತುಕ್ಕು ಹಿಡಿದು ತೂಕಡಿಸುತ್ತಾ ಕುಳಿತಿದ್ದವು. ಒಂದು ಕಾರಿನ ಸ್ಥಿತಯಂತೂ ಚಕ್ರದ ಮೇಲೆ ಹುತ್ತವೇ ಬೆಳೆದಿತ್ತು. ಇನ್ನೊಂದೆರಡರ ಮೇಲೆ ಯಾವುದೋ ಕಾಡುಬಳ್ಳಿಗಳು ಹಬ್ಬಿದ್ದವು.ಅವುಗಳ ಶೋಚನೀಯ ಸ್ಥಿತಿ ನೋಡಿದರೆ ಅವು ಗುಜರಿಗೂ ಉಪಯೋಗಕ್ಕೆ ಬಾರದಂತಾಗಿದ್ದವು.

25.ಆನೆ ಮರ ತಳ್ಳುವು ಬಗೆಯನ್ನು ನಿರೂಪಕರು ಹೇಗೆ ವಿವರಿಸಿದ್ದಾರೆ.

ನಿರೂಪಕರು ವಿವರಿಸಿದಂತೆ ಆನೆಗಳು ದೊಡ್ಡ ದೊಡ್ಡ ಮರಗಳಿಗೆ ಹಣೆ ಹಚ್ಚಿ ಒಮ್ಮೆ ತಳ್ಳಿದರೆ ಸಾಕು ಬೇರುಗಳೆಲ್ಲ ಪಟಪಟ ನೆಲದಿಂದೆದ್ದು ಮರ ಬುಡಸಮೇತ ಪಲ್ಟಾಯಿಸಿ ಬಿಡುತ್ತದೆ. ಎಂಥ ಮರಗಳಾದರೂ ಆನೆಯ ದೈತ್ಯ ಶಕ್ತಿಯ ಎದುರು ಚೀತ್ಕರಿಸಿ ನೆಲಕ್ಕೆ ಉರುಳುತ್ತದೆ.

26.ನಿರೂಪಕರು ತಮ್ಮ ಕ್ಯಾಲ್ಕುಲೇಟರ್‌ನಲ್ಲಿ ಲೆಕ್ಕ ಹಾಕಿ ಏನೆಂದರು?

ನಿರೂಪಕರು ತಮ್ಮ ಹೊಸ ಕ್ಯಾಲ್ಕುಲೇಟರ್ನಲ್ಲಿ ಲೆಕ್ಕ ಹಾಕಿ “ಹನ್ನೆರಡು ವರ್ಷಕ್ಕೆ ಕಡಿಮೆ ಎಂದರೂ ಎರಡು ಲಕ್ಷ ಕಿ.ಮಿ. ನಡೆದಿದ್ದಿಯ, ನಿನ್ನ ಮೂಗಿನ ನೇರಕ್ಕೆ ನೆಟ್ಟಗೆ ನಡೆದಿದ್ದರೆ ಇಡೀ ಭೂಮಂಡಲವನ್ನ ಸುತ್ತಿ ಬರಬಹುದಿತ್ತು” ಎಂದು ಜಬ್ಬಾರಗೆ ಹೇಳಿದರು.

27.ಖೇಡಿಗಳು ನಾಗರಾಜನನ್ನು ಖೂನಿ ಮಾಡಿದರೆಂದು ರಾಮಪ್ಪ ಹೇಗೆ ಹೇಳಿದನು?

ರಾಮಪ್ಪ “ ನಾಗರಾಜ ಗಂಗಾಧರನ ಗ್ಯಾಂಗಿನ ಕಾರನ್ನು ನಿಲ್ಲಿಸಿ ಒಳಗೇನಿದೆ ಎಂದು ಚೆಕ್ ಮಾಡಲು ಇಣುಕಿ ನೋಡಿದನಂತೆ, ಒಳಗಿದ್ದ ಖೇಡಿಯೊಬ್ಬ ನಾಗರಾಜನ ತಲೆಯನ್ನು ಹೊರಗೇಳೆದುಕೊಳ್ಳದಂತೆ ಜುಟ್ಟು ಹಿಡಿದು ಕಾರಿನ ಗಾಜನ್ನು ಏರಿಸಿ ಕುತ್ತಿಗೆ ಸಿಗಿಸಿದನಂತೆ. ಕಿಟಕಿಯಲ್ಲಿ ಕುತ್ತಿಗೆ ಸಿಕ್ಕಿಕೊಂಡು ವಿಲವಿಲ ಒದ್ದಾಡುತ್ತಿದ್ದ ನಾಗರಾಜನ ಸಮೇತ ಕಾರು ಚಾರ್ಮುಡಿ ಕಡೆಗೆ ಓಡಿತೆಂದು” ಹೇಳಿದನು.

## ನಾಲ್ಕು ಅಂಕಗಳ ಪ್ರಶ್ನೆಗಳು.

1. ದುರ್ಗಪ್ಪ ನಿರೂಪಕರ ಬಳಿಗೆ ಬಂದ ಸಂದರ್ಭವನ್ನು ವಿವರಿಸಿ.

ದುರ್ಗಪ್ಪ ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟ್‌ನ ಲೈನ್‌ಮನ್ ಆಗಿದ್ದನು. ಈತ ನಿರೂಪಕರ ಬಳಿಗೆ ಬಂದಾಗ ನಿರೂಪಕರು ಜೀಪಿನ ಅಡಿಯಲ್ಲಿ ಮಲಗಿಕೊಂಡು ಜೀಪು ರಿಪೇರಿ ಮಾಡುತ್ತಿದ್ದರು. ಅಲ್ಲಿಂದ ಅವರಿಗೆ ಎರಡು ಖಾಕಿ ಪ್ಯಾಂಟ್‌ಧಾರಿ ಕಾಲುಗಳು ಅವರತ್ತ ಬರುವುದು ಕಾಣಿಸಿತು. ಬಂದಾತ ನಿರೂಪಕರು ಗಮನಿಸಲಿಲ್ಲವೆಂದು ಒಂದೆರಡು ಬಾರಿ ಕೆಮ್ಮಿದ. ಏಕೆಂದರೆ ನಿರೂಪಕರ ಊರಿನಲ್ಲಿ ಕೆಮ್ಮು ಕಾಲಿಂಗ್‌ಬೆಲ್ ಇದ್ದ ಹಾಗೆ. ಯಾರೆಂದು ನಿರೂಪಕರು ಕೇಳಿದಾಗ 'ನಾನು ಲೈನ್‌ಮನ್ ಸ್ವಾಮಿ ಎನ್ನುತ್ತಾನೆ' ಯಾರು ಲೈನ್‌ಮನ್ ತಿಪ್ಪಣ್ಣಾನೇನಯ್ಯಾ? ಎಂದಾಗ ಥುಥು ! ಟೆಲಿಫೋನ್ ಡಿಪಾರ್ಟ್‌ಮೆಂಟ್ ಅಲ್ಲ ಸ್ವಾಮಿ. ನಾವು ಕರೆಂಟಿನೋರು. ನಾನು ಲೈನ್‌ಮನ್ ದುರ್ಗಪ್ಪ ಸ್ವಾಮಿ ಎನ್ನುತ್ತಾನೆ. ಆಗ ನಿರೂಪಕರು ಅದ್ಯಾಕೆ ಟೆಲಿಫೋನ್ ಡಿಪಾರ್ಟ್‌ಮೆಂಟ್‌ಗೆ ಥೂ ಅಂತೀಯ ಎಂದಾಗ, ಅದೊಂದು ತರ್ಲೆ ಡಿಪಾರ್ಟ್‌ಮೆಂಟ್ ಅಲ್ಲವ ಸಾರ್. ನಮ್ಮ ತಂತಿ ತರಬ್ಯಾಡ್ರಿ. ಟೆಲಿಫೋನು ಗೊರಾಗೊರಾ ಅನ್ನುತ್ತೆ, ಹಾಗೆ– ಹೀಗೆ ಅಂತೆಲ್ಲಾ ದಿನಾ ನಮ್ ಜೊತೆ ಮುಕಾರ್ ತೆಗೀತಾನೆ ಇರ್ತಾರೆ. ಜೀಪಿನ ಅಡಿಯಿಂದ ಹೊರಬಂದ ನಿರೂಪಕರು ಹಾಗಾದರೆ ಮತ್ತೇಕೆ ಬಂದೆ? ಎಂದು ನಿರೂಪಕರು ಕೇಳಿದಾಗ ಸುಮ್ಮನೆ ಬಂದೆ ಎಂದು ಹೇಳಿದ .ಅವನ ಮಾತು ಕೇಳಿದರೆ ಏನೂ ಕೆಲಸವಿಲ್ಲದೆ ಪುರುಸೊತ್ತಾಗಿದ್ದರಿಂದ ಇಲ್ಲಿಯವರೆಗೂ ಬಂದಿದ್ದಾನೆಂದು ಅರ್ಥ ಬರುತ್ತಿತ್ತು. ಹಾಗಿದ್ದರೆ ಏನೋ ಇನಾಮು ಕೇಳಲೋ ಅಥವಾ ಚಂದಾವಸೂಲಿಗೋ ಇಲ್ಲವೇ ಮನೆ ಉಪಯೋಗಕ್ಕೆ ಕಾಫಿ ಬೀಜವನ್ನೋ ಏಲಕ್ಕಿಯನ್ನೋ ಕೇಳಲು ಈ ರೀತಿ ಪೀಠಿಕೆ ಹಾಕಿರಬಹುದೆಂದು ಯೋಚಿಸಿದರು. ಆತ ಬಂದ ವಿಷಯ ಹೇಳದೇ ಇದ್ದಾಗ ನಿರೂಪಕರೇ ಬಾಯಿ ಬಿಡಿಸಲು ಮುಂದಾಗುತ್ತಾರೆ. ಆಗ ಆತ ಏನಿಲ್ಲ, ಸ್ವಲ್ಪ ಕೊಡಲಿ ಇದ್ರೆ ಬೇಕಿತ್ತು ಸ್ವಾಮಿ, ಒಂದು ಮರ ಮುರ್ಕೊಂಡು ತಂತಿ ಮೇಲೆ ಬಿದ್ದಿದೆ. ಅದನ್ನು ಕಡಿದು ಲೈನ್ ಕ್ಲೀಯರ್ ಮಾಡಲು ಕೊಡಲಿ ಬೇಕಾಗಿತ್ತೆಂದು, ಕೃಷ್ಣೇಗೌಡರ ಆನೆಯದೇ ಕೆಲಸವೆಂದು ಕೊಡಲಿ ತಗೊಂಡು ಹೋಗುತ್ತಾನೆ.

2. ನಿರೂಪಕರು ಕೊಡಲಿ ವಸೂಲಿ ಮಾಡಲು ಹೋಗಲಿಲ್ಲವೇಕೆ? ವಿವರಿಸಿ.

ದುರ್ಗಪ್ಪ ಕೊಡಲಿ ತಗೊಂಡು ನಿರ್ಗಮಿಸಿದವ ಮತ್ತೆ ಬರಲೇ ಇಲ್ಲ. ಮೂರು ನಾಲ್ಕು ದಿನವಾದರೂ ದುರ್ಗಪ್ಪನೂ ಪತ್ತೆ ಇಲ್ಲ. ಕೊಡಲಿಯೂ ಪತ್ತೆ ಇಲ್ಲ. ಆ ಕೊಡಲಿ0ುಾದರೋ ಸುಳ್ಳು ಹೇಳಿ ಕದ್ದುಕೊಂಡು ಹೋಗಬೇಕಾದಷ್ಟು ಅಮೂಲ್ಯವಾದುದೇನೂ ಅಲ್ಲ. ಕೆರೆ ಕೆಲಸಕ್ಕೆಂದು ಬಂದಿದ್ದ ಮಣ್ಣು ಒಡ್ಡರು ಅಗೆಯುವಾಗ ಅಡ್ಡಾಗುವ ಬೇರುಗಳನ್ನು ಕಡಿ0ುಲೆಂದು ನನ್ನ ಕೊಡಲಿ ತಗೊಂಡು ಕಲ್ಲುಮಣ್ಣು ನೋಡದೇ ಯರ‍್ರಾಬಿರ‍್ರಿ ಜಪ್ಪಿ ಅದರ ಹಿಂಬಾಗ ಯಾವುದು ಮುಂಬಾಗ ಯಾವುದು ಗೊತ್ತಾಗದಷ್ಟು ಹಾಳುಮಾಡಿದ್ದರು. ಈಗ ಅದನ್ನು ಸುತ್ತಿಗೆ ಎಂದು ಸಹ ಕರೆ0ುಬಹುದಿತ್ತು. ಅದರಲ್ಲಿ ದುರ್ಗಪ್ಪ ಹೇಗೆ ಮರ ಕಡಿಯುತ್ತಾನೋ ಗೊತ್ತಾಗಲಿಲ್ಲ. ಏನೇ ಇರಲಿ ಅದನ್ನು ಅವನೇ ಹುಡುಕಿ ತೆಗೊಂಡು ಹೋಗಿದ್ದರಿಂದ ಮೊಂಡು ಕೊಡಲಿ ಕೊಟ್ಟಿದ್ದಕ್ಕೆ ನನ್ನನ್ನು ಅವನು ದೂಷಿಸುವಂತೆ ಇರಲಿಲ್ಲ. ಅದನ್ನು ಅವನು ಅಕಸ್ಮಾತ್ ಕದ್ದರೂ ನನಗೇನೂ ಕೊಡಲಿ ಹೋಯ್ತೆಂದು ದುಃಖವಾಗುತ್ತಿರಲಿಲ್ಲ. ಹಾಗಾಗಿ ನಾನು ದುರ್ಗಪ್ಪನನ್ನು ಹುಡುಕಿ ಕೊಡಲಿ ವಸೂಲಿ ಮಾಡುವ ಗೋಜಿಗೇ ಹೋಗಲಿಲ್ಲ.

3. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆಯನ್ನು ವಿವರಿಸಿ.

ಕೃಷ್ಣೇಗೌಡರ ಆನೆ ಕಾಡಿನಿಂದ ಹಿಡಿದುತಂದು ಪಳಗಿಸಿದ ಆನೆ ಅಲ್ಲ. ಗಟ್ಟದ ಕೆಳಗಿದ್ದ ಗೂಳೂರು ಮಠದ ಆನೆ ಹಾಕಿದ ಮರಿ0ುೇ ಕೃಷ್ಣೇಗೌಡರ ಬಳಿ ಇದ್ದ ಆನೆ. ಇದು ಹುಟ್ಟಿದ್ದು ಬೆಳೆದಿದ್ದು ಎಲ್ಲ ಊರಿನಲ್ಲಿ ಜನಗಳ ನಡುವೆ0ುೇ. ಹಾಗಾಗಿ ಅದಕ್ಕೆ ಕಾಡಿನ ಬಗ್ಗೆ0ುಾಗಲಿ ಕಾಡಿನಲ್ಲಿರುವ ಇತರ ಕಾಡಾನೆಗಳ ಬಗ್ಗೆ0ುಾಗಲೀ ಏನೂ ತಿಳುವಳಿಕೆ ಇರಲಿಲ್ಲವೆಂದು ಕಾಣುತ್ತದೆ. ಅದು ಮೂಡಿಗೆರೆ0ು ಪೇಟೆಗೆ ಎಷ್ಟೊಂದು ಒಗ್ಗಿತ್ತೆಂದರೆ 0ುಾವ ಲಂಗುಲಗಾಮಿಲ್ಲದೆ ದನಕರುಗಳ ರೀತಿ0ುಲ್ಲಿ ಪೇಟೆ0ೊಳಗೆ ತಿರುಗಿಕೊಂಡಿರುತ್ತಿತ್ತು. ಸ್ಕೂಲು ಮಕ್ಕಳು ಅದರ ಹತ್ತಿರ ಬರಲು ಹೆದರುತ್ತಿದ್ದವಾದರೂ ಅವರು ದೂರದಿಂದಲೇ ಗೌರಿ ಎಂದು ಕೂಗಿದರೆ ಸಾಕು ಸೊಂಡಿಲೆತ್ತಿ ಸಲಾಮ್ ಮಾಡುತ್ತಿತ್ತು. ದಾರಿ ಬದಿ0ು ಪೆಟ್ಟಿಗೆ ಅಂಗಡಿಗಳವರು ಹಣ್ಣು, ಖರ್ಚಾದ ಬಾಳೆಗೊನೆಗಳ ದಿಂಡು, ಸಿಪ್ಪೆಗಳನ್ನೂ, ಜಜ್ಜಿದ, ಹಾಳಾದ ಹಣ್ಣುಗಳನ್ನೂ, ಅದಕ್ಕೆ ಕೊಡಲು ಇಟ್ಟಿರುತ್ತಿದ್ದರು. ಈ ಆನೆ

ಖಾಯಮ್ಮಾಗಿ ಎಲ್ಲಾ ಪೆಟ್ಟಿಗೆ ಅಂಗಡಿಗಳ ಬಳಿಗೂ ಹೋಗಿ ಅವನ್ನೆಲ್ಲಾ ಸೊಂಡಿಲಲ್ಲಿ ತಗೊಂಡು ತಿನ್ನುತ್ತಿತ್ತು.

4. ಆನೆ ಮತ್ತು ಮಾವುತ ವೇಲಾಯುಧನನ್ನು ಸಾಗಹಾಕಲು ಮಠದವರು ಹವಣಿಸಿದ್ದೇಕೆ?

ಕೃಷ್ಣೇಗೌಡರ ಅನೆ ಊರಿನಲ್ಲಿ ಇತರ ದನಕರುಗಳಂತೆ ಲಂಗುಲಗಾಮಿಲ್ಲದೆ ಪೇಟೆಯೊಳಗೆ ತಿರುಗಿಕೊಂಡಿರುತ್ತಿತ್ತು. ಆದರೆ ಇದಕ್ಕೆ ಮೊದಲು ಅದು ಗೂಳೂರು ಮಠದ ಜಗದ್ಗುರುಗಳನ್ನು ಹೊರುವ ಕಾಯಕ ನಿರ್ವಹಿಸುತ್ತಿತ್ತು. ಮಠದ ಜಗದ್ಗುರುಗಳನ್ನು ಜನರು ಯಾವಾಗ ಅಡ್ಡಪಲ್ಲಕ್ಕಿಯಲ್ಲಿ ಹೊರಲು ಆರಂಭಿಸಿದರೋ ಆಗ ಆನೆ ನಿರುಪಯುಕ್ತ ಎನಿಸತೊಡಗಿತು. ಆನೆಯ ಪುಂಡಾಟದ ಜೊತೆಗೆ ಆನೆಯ ಮಾವುತ ವೇಲಾಯುಧನೂ ಕೂಡ ನಿರುಪಯುಕ್ತನಾಗಿದ್ದ. ಇಪ್ಪತ್ತನಾಲ್ಕು ಗಂಟೆಯು ಕುಡಿದೇ ಇರುತ್ತಿದ್ದ ಈತ ಮಠದ ಸಾತ್ವಿಕ ವಾತಾವರಣಕ್ಕೂ ದೊಡ್ಡ ತಲೆನೋವಾಗಿದ್ದ. ಒಮ್ಮೆ ಆತನ ದುರ್ನಡತೆಗಾಗಿ ಛೀಮಾರಿ ಹಾಕಿಸಿ ಓಡಿಸಿದಾಗ ಆನೆ ಅನೇಕ ದಿನಗಳ ವರೆಗೆ ಯಾರ ಮಾತನ್ನು ಕೇಳದೆ ಊಟವನ್ನೇ ವರ್ಜಿಸಿತ್ತು. ಆನೆ ಇರುವವರೆಗೆ ತನ್ನ ಅನಿವಾರ್ಯತೆಯನ್ನು ಮನಗಂಡ ವೇಲಾಯುಧ ಮಠಕ್ಕೆ ಇನ್ನಷ್ಟು ಕಿರುಕುಳವನ್ನು ಕೊಡಲು ಆರಂಭಿಸಿದ್ದ. ಹೀಗಾಗಿ ಆನೆ ಮತ್ತು ಮಾವುತ ವೇಲಾಯುಧನನ್ನು ಸಾಗಹಾಕಲು ಮಠದವರು ಹವಣಿಸುತ್ತಿದ್ದರು.

5. ಎಲ್ಲರ ನಿರೀಕ್ಷೆ ಸುಳ್ಳಾಗುವಂತೆ ಕೃಷ್ಣೇಗೌಡ ಆನೆಯನ್ನು ಹೇಗೆ ಸಾಕಿದನು?

ಎಲ್ಲಾ ತರಹದ ವ್ಯವಹಾರಗಳನ್ನು ಮಾಡಿ ಎಲ್ಲದರಲ್ಲೂ ನಷ್ಟ ಅನುಭವಿಸಿ ಸೋತು ಹೋಗಿದ್ದ ಕೃಷ್ಣೇಗೌಡ ಆನೆಯನ್ನು ತಂದಾಗ ಇಲ್ಲಿಗೆ ಇವನ ಕತೆ ಮುಗಿದಂತೆಯೇ ಎಂದು ಎಲ್ಲಾ ತೀರ್ಮಾನಿಸಿದರು. ಆನೆ ಸಾಕುವುದು ಎಂದರೆ ಎಲೆಕ್ಷನ್ನಿಗೆ ನಿಂತೆ ಹಾಗೆ. ಮನೆ ಮಠ ಸಂಪೂರ್ಣ ಹಾಳುಮಾಡಿಕೊಂಡು ಹೆಂಡತಿ ಮಕ್ಕಳ ಬಾಯಿಗೆ ಮಣ್ಣು ಹಾಕುವ ಕ್ಷಿಪ್ರ ಮಾರ್ಗ ಇದೆಂದು ಎಲ್ಲರೂ ದೃಢವಾಗಿ ನಂಬಿದ್ದರು. ಆದರೆ ಆಗಿದ್ದು ಇದರ ತದ್ವಿರುದ್ಧ! ಮಠದಲ್ಲಿ ಬರಿ ಒಣಹುಲ್ಲು ಮೊಸರನ್ನ ತಿಂದು ಸೊರಗಿದ್ದ ಆನೆಗೆ ಬಯನೆ ಸೊಪ್ಪು, ಹಸಿ ಹುಲ್ಲು, ಹಿಂಡಿ, ಬೆಲ್ಲ ಗೆಣಸು ಎಲ್ಲ ಕೊಟ್ಟು ಕೃಷ್ಣೇಗೌಡ ಪಗಡುದಸ್ತಾಗಿ ಬೆಳೆಸಿದ. ಆನೆ ಮರ ಎಳೆದು ತಂದ ಬಾಡಿಗೆಯಿಂದ ಕೃಷ್ಣೇಗೌಡನಿಗೆ ಒಳ್ಳೆಯ ಲಾಭವೂ ಕೂಡ ಬಂತು. ಕೃಷ್ಣೇಗೌಡ

ದುಡ್ಡಿನ ಮುಖ ನೋಡಿದ್ದೇ ಆನೆ ಬಂದ ಮೇಲಿಂದ.

6. ಕಾಡಾನೆಗಳ ಹಾವಳಿ ನಿರೂಪಕರಿಗೆ ಅನುಭವಕ್ಕೆ ಬಂದದ್ದು ಹೇಗೆ?

ಒಮ್ಮೆ ನಿರೂಪಕರು ಮನೆ ನಲ್ಲಿಗೆ ಹಾಕಿದ್ದ ಪೈಪನಲ್ಲಿ ನೀರು ಬರುವುದು ನಿಂತು ಹೋಯ್ತು. ಮನೆಯ ಪಕ್ಕದ ಗುಡ್ಡದ ಮೇಲಿನ ಒರತೆಗೆ ನೇರ ಪೈಪು ಹಾಕಿ ನೀರು ಬರುವಂತೆ ಮಾಡಿಕೊಂಡಿದ್ದರು. ಪೈಪಿನೊಳಗೆ ಆಗೀಗ ಕಪ್ಪೆಗಳೋ ನೀರು ಹಾವುಗಳೋ ನುಗ್ಗಿ ಸಿಕ್ಕಿಕೊಂಡು ನೀರು ಬರಲು ಅಡಚಣೆ ಒಡ್ಡುತ್ತಿದ್ದವೇನೋ ಎಂಬುದು ಅವರ ಊಹೆ ಆಗಿತ್ತು. ಹಾಗೇ ಆಗಿರಬಹುದೆಂದು ತಿಳಿದು ಪೈಪಿನ ಉದ್ದಕ್ಕೂ ನೋಡುತ್ತಾ ಹೋದರು. ಕೊಂಚ ದೂರದೊಳಗೆ ಪೈಪು ಇಡಲು ಮಾಡಿದ್ದ ದಾರಿ ಎಲ್ಲಾ ಗುಂಡಿ ಬಿದ್ದು ಪೈಪುಗಳು ಪುಡಿಪುಡಿಯಾಗಿ ಗುಂಡಿಯ ಒಳಗೆ ಹುದುಗಿಹೋಗಿದ್ದು ಕಾಣಿಸಿತು. ಗುಂಡಿಗಳೊಳಗೆಲ್ಲಾ ನೀರು ತುಂಬಿಕೊಂಡಿತ್ತು. ತೇವದ ನೆಲದಲ್ಲಿ ಆನೆಗಳು ಹೆಜ್ಜೆ ಇಟ್ಟರೆ ಸಣ್ಣ ಸಣ್ಣ ಬಾವಿಗಳೇ ನಿರ್ಮಾಣವಾಗುತ್ತವೆಂದಾಗಲಿ, ಪೈಪುಗಳು ಪುಡಿಪುಡಿಯಾಗಿ ಪಾತಾಳದವರೆಗೆ ಹುಗಿದು ಹೋಗುತ್ತವೆಂದಾಗಲೀ ನಿರೂಪಕರಿಗೆ ಅಂದಾಜೇ ಇರಲಿಲ್ಲ. ಎಲ್ಲರೂ ಆನೆಕಾಟ ಎಂದು ಕೂಗಾಡುವವರೆಗೂ ನಿರೂಪಕರು ಮಾತ್ರ ಯಾರೋ ಒಬ್ಬ ಮನುಷ್ಯ ಈ ಕೆಲಸ ಮಾಡಿರಬೇಕೆಂದು ಯೋಚಿಸುತ್ತಿದ್ದರು. ಹೀಗೆ ಕಾಡಾನೆಗಳ ಹಾವಳಿ ನಿರೂಪಕರಿಗೆ ಅನುಭವಕ್ಕೆ ಬಂತು.

7. ಅರಣ್ಯ ಇಲಾಖೆಯ ಶತ್ರುಗಳ ಕಾರ್ಯಭಾರವನ್ನು ನಾಗರಾಜ ವಿವರಿಸಿದ್ದು ಹೇಗೆ?

ಒಮ್ಮೆ ನಿರೂಪಕರು ದುರ್ಗಪ್ಪನಿಂದ ವಶಪಡಿಸಿಕೊಂಡ ಕೊಡಲಿಯನ್ನು ಬಿಡಿಸಿತರುವ ಸಲುವಾಗಿ ಫಾರೆಸ್ಟ್ ಆಫೀಸರ್ ನಾಗರಾಜನ ಬಳಿಗೆ ಹೋಗಿದ್ದರು. ಇದನ್ನು ಅರಿತ ನಾಗರಾಜ್ ನಿರೂಪಕರಲ್ಲಿ ಹೀಗೆ ಹೇಳುತ್ತಾನೆ; ನೋಡಿ ಸಾರ್, ಬೆಳ್ಳಗಿರೋದೆಲ್ಲ ಹಾಲೂಂತ ನಂಬೋರು ನೀವು. ಇದೆಲ್ಲಾ ನೀವು ಹೇಳ್ತಿರೋ ಅಷ್ಟು ಸಿಂಪಲ್ಲಾಗಿಲ್ಲ ಸಾರ್. ನೀವಾಗೆ ಕೇಳ್ತಿರೋದ್ರಿಂದ ವಿಧಿ ಇಲ್ಲದೆ ಹೇಳ್ತಿದೇನೆ. ಪಿಡಬ್ಲ್ಯುಡಿನವರು, ಕರೆಂಟಿನವರು, ಟೆಲಿಫೋನಿನವರು, ಈ ಮೂರು ಡಿಪಾರ್ಟ್‌ಮೆಂಟಗಳು ನಮಗೆ ಎನಿಮಿ ನಂಬರ್ ಒನ್. ಇವರಿಗೆ ಬುದ್ಧಿ ಕಲಿಸೋದಕ್ಕೆ ನಮಗೆ ಗೊತ್ತಿದೆ. ರಸ್ತೆಗೆ ಟಾರು ಹಾಕಲು ನಮ್ಮ ರಸ್ತೆ ಮರಾನೆಲ್ಲಾ ಕಡಿದು ಟಾರು ಕಾಯಿಸ್ಕೋತಾರೆ

ಪಿಡಬ್ಲ್ಯುಡಿನವರು. ಈ ಕರೆಂಟಿವನರು ಟೆಲಿಫೋನಿನವರು ಅವರ ಲೈನು ಎಳೆ0ಯೋದಕ್ಕೆ ಫಾರೆಸ್ಟು ಕ್ಲಿಯರ್ ಮಾಡ್ತೀವಿ ಅಂತ ಎಲ್ಲೆಂದರಲ್ಲಿ ಸಾವಿರಾರು ಎಕರೆ ಕಾಡು ಕಡಿದು ಹಾಳುಮಾಡಿದ್ದಾರೆ. ಈಗ ಹಳ್ಳಿಹಳ್ಳಿಗೆ ಕರೆಂಟು, ಟೆಲಿಫೋನ್ ಕೊಡಬೇಕಂತ ಸರ್ಕಾರ ಪಾಲಿಸಿಮಾಡಿ ಇವರ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಿದೆ ಸಾರ್! ಲೈನು ಕ್ಲಿ0ಯರ್ ಮಾಡೋ ನೆವದಲ್ಲಿ ಇವರು 0ಯಾರೂ ಮನೆಗೆ ಸೌದೆ ಕೊಳ್ತಾನೆ ಇಲ್ಲಾ. ನೀವು ಹೇಳಿದ ಹಾಗೆ ಇವರೂ ಸರ್ಕಾರದ ಡಿಪಾರ್ಟ್‌ಮೆಂಟೇ, ನಾವೂ ಡಿಪಾರ್ಟ್‌ಮೆಂಟೇ. ಆದರೆ ಇವರನ್ನು ಹೀಗೆ ಬಾಲಬಿಚ್ಚೋದಕ್ಕೆ ಬಿಟ್ರೆ ಫಾರೆಸ್ಟು ಡಿಪಾರ್ಟುಮೆಂಟು ಬಾಗಿಲು ಮುಚ್ಚಬೇಕಾಗುತ್ತೆ. ಇವರಿಗೆ ಬುದ್ಧಿ ಕಲಿಸಬೇಕೋ ಬೇಡವೋ ನೀವೇ ಹೇಳಿ. ಎಂದು ನಾಗರಾಜ ಅರಣ್ಯ ಇಲಾಖೆಯ ಶತ್ರುಗಳ ಕಾರ್ಯಭಾರವನ್ನು ವಿವರಿಸಿದನು.'

8. ನಿದ್ರೆ ಮಂಪರಿನಲ್ಲಿದ್ದ ಡ್ರೈವರ್ ಪರಂಧಾಮಕ್ಕೆ ಹೋದ ಸಂದರ್ಭವನ್ನು ವಿವರಿಸಿ.

ಒಂದು ದಿನ ಶಿವೇಗೌಡರ ಸಾಮಿಲ್ಲಿನಲ್ಲಿ ಕಳ್ಳನಾಟ ಇಳಿಸಲು ರಾತ್ರೋರಾತ್ರಿ ಆನೆ ಕರೆದುಕೊಂಡು ಹೋದರಂತೆ. ಈಚೆಗೆ ಮರ ಕಡಿಯುವುದರ ಬಗ್ಗೆ ನಾಟ ಸಾಗಿಸುವುದರ ಬಗ್ಗೆ ಸರ್ಕಾರದ ಕಾನೂನು ನಿಬಂಧನೆಗಳು ವಿಪರೀತ ಬಿಗಿಯಾದ್ದರಿಂದ ಸಾಮಿಲ್ಲಿನವರ ಅರ್ಧಕ್ಕರ್ಧ ಕೆಲಸವೆಲ್ಲ ರಾತ್ರಿಯೇ ನಡೆಯುತ್ತಿದ್ದುದು. ಆನೆ0ಯ ಮಾವುತ ಇಬ್ಬರೂ ತಮ್ಮ ತಮ್ಮ ಕೋಟ ಷರಾಬು ಕುಡಿದು ಬಿಗಿಯಾಗಿದ್ದರು. ವೇಲಾಯುಧನಿಗೆ ರಾತ್ರಿ ಸಹ ಕೆಲಸ ಮಾಡಬೇಕಲ್ಲ ಎಂದು ಸಿಟ್ಟೇ ಬಂದಿತ್ತು. ಸಾಮಿಲ್ಲಿನ ಒಳಗೆ ಲೋಡು ಲಾರಿ ನಿಂತಿತ್ತು. ಕ್ಲೀನರು ನಾಯರ್ ಹೋಟೆಲಿನಲ್ಲಿ ಚಾ ಕುಡಿದು ಬರಲು ಹೋಗಿದ್ದ. ಡ್ರೈವರ್ ಒಬ್ಬನೆ ನಿದ್ರೆ ಮಂಪರಿನಲ್ಲಿ ತೂಕಡಿಸುತ್ತ ಸ್ಟಿಯರಿಂಗ್ ಚಕ್ರದ ಮೇಲೆ ತಲೆ ವಾಲಿಸಿಕೊಂಡು ಅರೆನಿದ್ದೆಯಲ್ಲಿದ್ದ. ಷರಾಬಿನ ನಿಷಾದಲ್ಲಿದ್ದ ವೇಲಾಯುಧನಿಗೆ ಲಾರಿಗೂ ನಾಟಾಗಳಿಗೂ ಹಗ್ಗ ಬಿಗಿದು ಕಟ್ಟಿದ್ದು ಬಿಚ್ಚಬೇಕೆಂದು ಮರತೇಹೋಯ್ತು. ಹಿಂದು ಮುಂದು ನೋಡದೆ ಆನೆಗೆ ಲಾರಿ ಮೇಲಿನ ದಿಮ್ಮಿಗಳನ್ನು ತಳ್ಳಿ ಉರುಳಿಸಲು ಹೇಳಿದ. ನಿದ್ದೆಯ ಜೊಂಪಿನಲ್ಲಿದ್ದ ಡ್ರೈವರ್‌ಗೆ ಎಚ್ಚರಾದಾಗ ಪ್ರಪಂಚ ಯಾಕೋ ತಲೆಕೆಳಗಾಗುತ್ತಿದೆ ಎನ್ನಿಸಿತು. ಲಾರಿಗೆ ನಾಟ ಬಿಗಿದು ಕಟ್ಟಿದ್ದರಿಂದ ನಾಟ

ಉರುಳದೆ ಲಾರಿ ಸಮೇತ ಮೆಲ್ಲಗೆ ವಾಲಿ ಒಂದು ಕಡೆ ಧೊಪ್ಪನೆ ಉರುಳಿ ಬಿತ್ತು. ಲಾರಿ ಮೆಲ್ಲಗೆ ವಾಲುತ್ತ ಒಂದು ಕಡೆ ಉರುಳಿದ್ದರಿಂದ ಡ್ರೈವರ್ ಮಹಾಶ0ಯನಿಗೆ ಹೆಚ್ಚಿಗೆ ಏನೂ ಅಪಾಯವಾಗುವ ಸಂಭವವೇ ಇರಲಿಲ್ಲ. ಆದರೆ ಕ್ಯಾಬಿನ್ನಿನಲ್ಲಿ ಇಟ್ಟಿದ್ದ ಮಣಬಾರದ ಲಾರಿ ಜಾಕ್ ಧೊಪ್ಪನೆ ಅವನ ಬುರುಡೆಯ ಮೇಲೆ ಬಿದ್ದ ಹೊಡೆತಕ್ಕೆ ಅವನ ತಲೆ ಜಜ್ಜಿ ಕಮಕ್ ಕಿಮಕ್ ಎನ್ನದೆ ಪರಂಧಾಮಕ್ಕೆ ಹೋದ.

9. ಡ್ರೈವರ್ ಸಾವಿನ ಸುದ್ದಿಯನ್ನು ಶಿವೇಗೌಡ ಮತ್ತಿತರರು ಹೇಗೆ ಮುಚ್ಚಿಹಾಕಿದರು?

ಒಂದು ದಿನ ಶಿವೇಗೌಡರ ಸಾಮಿಲ್ಲಿನಲ್ಲಿ ಕಳ್ಳನಾಟ ಇಳಿಸಲು ರಾತ್ರೋರಾತ್ರಿ ಆನೆ ಕರೆದುಕೊಂಡು ಹೋದರು. ಷರಾಬಿನ ಮತ್ತಿನಲ್ಲಿದ್ದ ವೇಲಾಯುಧನು ಲಾರಿಗೆ ಕಟ್ಟಿದ್ದ ಹಗ್ಗವನ್ನು ಚಿಚ್ಚಲು ಮರೆತು, ಆನೆ ಮರದ ದಿಮ್ಮಿಗಳನ್ನು ಎಳೆದಾಗ ಇಡೀ ಲಾರಿಯೇ ವಾಲಿ, ಕ್ಯಾಬಿನ್ನಿನಲ್ಲಿ ಇಟ್ಟಿದ್ದ ಮಣಭಾರದ ಜಾಕು ಧೊಪ್ಪನೆ ಬಿದ್ದು. ಡ್ರೈವರ್ ಅಲ್ಲಿಯೇ ಸತ್ತು ಹೋದ. ಇದರಿಂದ ಸಾಮಿಲ್ಲಿನ ಮಾಲಕರಾದ ಶಿವೇಗೌಡರು ಗಾಬರಿಗೊಂಡರು. ಸಾಗಿಸುತ್ತಿರುವ ನಾಟ ಕಳ್ಳ ಮಾಲಾಗಿರುವುದರಿಂದ ಈ ವಿಷಯ ಪೊಲೀಸರಿಗೆ ಗೊತ್ತಾದರೆ ಜೈಲು ಸೇರಬೇಕಾಗಬಹುದು ಎಂಬ ಭಯ ಅವರನ್ನು ಆವರಿಸುತು. ಸಿಟ್ಟುಗೊಂಡ ಶಿವೇಗೌಡರು ವೇಲಾಯುಧನಿಗೆ 'ಕುಡುಕ ಸೂಳೇಮಗನೆ ಎಂಥ ಗಂಡಾಂತ್ರ ತಂದಿಟ್ಟೆ ನೋಡು' ಎಂದು ಬೈಯ್ದರು. ಮುಂದೇನಾಯ್ತು ಎಂದು ಯಾರಿಗೂ ಗೊತ್ತಾಗಲಿಲ್ಲ. ಬೆಳಿಗ್ಗೆ ನೋಡಬೇಕಾದರೆ ಲಾರಿ ಸರಿಯಾಗಿ ನಿಂತಿತ್ತು. ಈ ವಾರ್ತೆ ಬರೇ ಪಿಸುಮಾತಿನಲ್ಲೇ ಮುಕ್ತಾಯವಾದ್ದರಿಂದ ಶಿವೇಗೌಡರು ಕೃಷ್ಣೇಗೌಡರು ಇಬ್ಬರೂ ಸೇರಿ ಇದನ್ನು ಮುಚ್ಚಿಹಾಕಿರಬೇಕು. ಯಾರೂ ದೂರು ಕೊಡದ ಕಾರಣ ಕಾನೂನಿನ ಕ್ರಮ ಯಾರ ಮೇಲೂ ಜಾರಿ ಆಗಲಿಲ್ಲ. ಲಾರಿ ಟ್ರಿಪ್ಪಿಗೆ ಹೋದ ದಿಕ್ಕಿನಲ್ಲೆಲ್ಲ ಆ ಡ್ರೈವರಿಗೆ ಒಂದೊಂದು ಸಂಸಾರ ಇದ್ದದ್ದರಿಂದ ಆ ಹದಿನೇಳು ಜನರಲ್ಲಿ ಯಾರು ಅಧಿಕೃತ ಯಾರು ಅನಧಿಕೃತ ನಿರ್ಧರಿಸಲಾರದೆ ಕ್ಲೀನರ್ ಯಾರಿಗೂ ವಿಷಯ ತಿಳಿಸ ಹೋಗಲಿಲ್ಲ. ಕೊಡಲಿ ವಾಪಾಸ್ ಕೊಡಲೆಂದು ಬಂದ ದುರ್ಗಪ್ಪ ಕೃಷ್ಣೇಗೌಡರ ಆನೆಯನ್ನು ಶಪಿಸಿದ್ದಲ್ಲದೆ ,

ಅದು ಕೊಂದ ಡ್ರೈವರ್ ಹೆಣವನ್ನು ಮರದ ಹೊಟ್ಟೆನೊಳಗೆ ಹಾಕಿ ಆಗಾಗ ಬೆಂಕಿ ಕೊಡುವಂತೆ ಬೆಂಕಿ ಕೊಟ್ಟು ಬೂದಿ ಮಾಡಿದರೆಂದು ಹೇಳಿದ. ಹೀಗೆ ಡ್ರೈವರ್ ಸಾವಿನ ಸುದ್ದಿಯನ್ನು ಶಿವೇಗೌಡ ಮತ್ತಿತರರು ಮುಚ್ಚಿಹಾಕಿದರು.

10. ದುರ್ಗಪ್ಪನಿಗೆ ಲೈನ್‌ಮ್ಯನ್ ಕೆಲಸ ರೋಸಿ ಹೋಗಲು ಕಾರಣವೇನು?

ದುರ್ಗಪ್ಪನಿಗೆ ಲೈನ್‌ಮನ್ ಕೆಲಸ ರೋಸಿಹೋದಂತೆ ಕಂಡಿತು. ಅದಕ್ಕೆ ಮುಖ್ಯ ಕಾರಣ ಅವನಿಗೆ ಶಿವೇಗೌಡರ ಸಾಮಿಲ್ಲಿನ ಎದುರು ಹೋಗಿದ್ದ ಕಳಸಾ ಲೈನು ನೋಡಿಕೊಳ್ಳಲು ಕೊಟ್ಟಿದ್ದರು. ಆ ವಿದ್ಯುತ್ ಲೈನು ಇಡೀ ಮೂಡಿಗೆರೆಗೆ ತರಲೆ ಲೈನು ಎಂದು ಹೆಸರುವಾಸಿಯಾಗಿತ್ತು. ಒಂದು ಕಡೆ ಹಳೇಕೋಟೆ, ಗೌಡಳ್ಳಿ, ಭೈರಾಪುರದವರೆಗೆ, ಇನ್ನೊಂದು ಕಡೆ ಬಣಕಲ್ಲು, ನಿಡುವಾಳೆ, ಜಾವಳಿವರೆಗೆ, ಎಲ್ಲೆಲ್ಲೋ ಕಗ್ಗಾಡಿನ ನಡುವೆ ಎಲ್ಲ ನುಗ್ಗಿ ನುಸುಳಿ ಹೋಗಿತ್ತು. ಈ ದರಿದ್ರ ಲೈನಿನ ಯೋಗಕ್ಷೇಮ ನೋಡಿಕೊಳ್ಳಲು ಹೋಗಿ ಅವನಿಗೆ ಬದುಕಿನ ಆಸೆಯೇ ಬತ್ತಿ ಹೋಗಿತ್ತು. ಕಾಡಿನ ಯಾವ ಮೂಲೆಯಲ್ಲಿ ಕೊಂಬೆ ಮುರಿದು ಬೀಳಲಿ, ಎಲ್ಲಿ ಲೈನಿಗೆ ಬಾವಲಿಗಳು ಸಿಕ್ಕಿಕೊಳ್ಳಲಿ ಇಡೀ ಲೈನು ಕಟ್ಟಾಗುತ್ತಿತ್ತು. ಬೆಳಿಗ್ಗೆ ಎದ್ದು ದುರ್ಗಪ್ಪ ತಂತಿ ಸುರುಳಿ ಕಟ್ಟಿಂಗ್‌ಪ್ಲೇಯರ್ರು ಹಿಡಿದು ಎಲ್ಲಿ ಟ್ರಬಲ್ ಇದೆ ಎಂದು ಹುಡುಕಿ ಹೊರಡುತ್ತಿದ್ದ. ಜನಕ್ಕಾಗಲೀ ಡಿಪಾರ್ಟ್‌ಮೆಂಟಿನವರಿಗಾಗಲಿ ಫಾರೆಸ್ಟಿನವರಿಗಾಗಲಿ ಅವನ ಕಷ್ಟ ಏನು ತಾನೆ ಗೊತ್ತಾದೀತು. ನಾಗರಾಜ ಸೌದೆ ಮಾಡುತ್ತಾರೆ ಎಂದು ಜರೆದರೆ, ಡಿಪಾರ್ಟ್‌ಮೆಂಟಿನವರು ಲೈನು ಸರಿಯಾಗಿ ಮೇಂಟೇನ್ ಮಾಡಿಲ್ಲ ಎಂದು ಬಯ್ಯುತ್ತಿದ್ದರು.

11. ಪೋಸ್ಟ್‌ಮನ್ ಜಬ್ಬಾರನ ಬವಣೆಗಳನ್ನು ನಿರೂಪಕರು ಹೇಗೆ ವಿವರಿಸಿದ್ದಾರೆ?

ಜಬ್ಬಾರ್ ಲೈನ್‌ಮನ್ ದುರ್ಗಪ್ಪನ ರೀತಿಯಲ್ಲೇ ತೊಂದರೆಗೆ ಸಿಕ್ಕಿಕೊಂಡಿದ್ದ ಮನುಷ್ಯ. ಹೆಸರಿಗೆ ಇವನು ಕೇಂದ್ರ ಸರ್ಕಾರದ ನೌಕರನಷ್ಟೆ. ಹದಿನಾರು ವರ್ಷದಿಂದ ಕೆಲಸ ಮಾಡುತ್ತಿದ್ದರೂ ಇನ್ನೂ ಟೆಂಪರ್ವರಿಯಾಗೆ ಇದ್ದುದರಿಂದ ಅವನ ಸಂಬಳ ಅರವತ್ತು ರೂಪಾಯಿ. ಆ ಸಂಬಳದಿಂದ ಹೊಟ್ಟೆಹೊರಯಲು ಸಾಧ್ಯವಿಲ್ಲದೆ ನೂರೆಂಟು ಪತ್ರಿಕೆಗಳ ಏಜೆನ್ಸಿ ತಗೊಂಡು ಪೋಸ್ಟ್ ಕೊಡುವಲೆಲ್ಲಾ ಚಂದಾದಾರರನ್ನು ಮಾಡಲು ಪ್ರಯತ್ನಿಸುತ್ತಿದ್ದ. ಪೋಸ್ಟಿನ ಜೊತೆಗೆ ಮ್ಯಾಗಝೀನುಗಳ ಕಂತೆಯನ್ನೂ ಹೊತ್ತುಕೊಂಡು ಅವನು

ತಿರುಗಬೇಕಾಗಿತ್ತು. ಅದೂ ಎಷ್ಟು ದೂರ? ದಿನ ಹದಿನೆಂಟು ಕಿಲೋಮೀಟರು ಹೋಗಿ ಬರಬೇಕಿತ್ತು. ನಿರೂಪಕರೂ ಕೂಡ ಅವನ ತಿರುಗಾಟವನ್ನು ಗಮನಿಸಿ, ಲೆಕ್ಕಹಾಕಿ; ಅವನ ಮೂಗಿನ ನೇರಕ್ಕೆ ನೆಟ್ಟಗೆ ನೆಡೆದಿದ್ದರೆ ಇಡೀ ಭೂಮಂಡಲ ಸುತ್ತಿ ಬರಬಹುದಾಗಿತ್ತು ಎಂದಿದ್ದರು. ಅಲ್ಲದೆ ಮೂಡಿಗೆರೆಯಂತ ಕುಗ್ರಾಮ ಆಧುನೀಕರಣಗೊಳ್ಳುತ್ತ ಟೆಲಿಫೋನ್ ಎಕ್ಸ್‌ಛೇಂಜ್, ವಿದ್ಯುತ್ ಎಲ್ಲ ಬಂದ ಹಾಗೆ ಪೋಸ್ಟಲ್ ಡಿಪಾರ್ಟ್‌ಮೆಂಟ್‌ನವರು ಸೇವೆಯನ್ನು ವಿಸ್ತರಿಸುತ್ತಾ ಹೋಗಿ ಪೋಸ್ಟ್ ಆಫೀಸ್‌ಗಳ ಬದಲು ಪೋಸ್ಟ್ ಬಾಕ್ಸ್‌ಗಳನ್ನು ಬಿದಿರಳ್ಳಿ ಇಲ್ಲೆಲ್ಲ ನೇತು ಹಾಕಿದರು. ಇದರಿಂದ ತೊಂದರೆಗೆ ಸಿಕ್ಕಿ ಹಾಕಿಕೊಂಡವನು ಜಬ್ಬಾರ್ ಪೋಸ್ಟ್ ಕೊಡುವುದಲ್ಲದೆ ಪ್ರತಿ ದಿನ ಪೋಸ್ಟ್‌ಬಾಕ್ಸ್ ಇರುವವರೆಗೂ ಹೋಗಿ ಪೋಸ್ಟ್ ಸಂಗ್ರಹಿಸಿ ಹೆಡ್ಡಾಫೀಸಿಗೆ ಕೊಡಬೇಕಾಗಿತ್ತು. ಅಲ್ಲದೆ ಪೋಸ್ಟ್ ಕೊಡಲು ಹೋದಾಗ ಅಲ್ಲಲ್ಲಿ ನಾಯಿಗಳಿಂದ ಕಚ್ಚಿಸಿಕೊಳ್ಳಬೇಕಾಗಿತ್ತು. ಇದು ಪೋಸ್ಟ್‌ಮನ್ ಜಬ್ಬಾರನ ಬವಣೆಗಳಾಗಿವೆ.

12. ಪುಟ್ಟಯ್ಯ ತನ್ನ ಅಸಹಾಯಕತೆಯನ್ನು ಹೇಗೆ ವಿವರಿಸುತ್ತಾನೆ?

ಪುಟ್ಟಯ್ಯ ವೆಟರ್ನರಿ ಸ್ಟಾಕ್‌ಮನ್ ಆಗಿ ಸೇವೆ ನಿರ್ವಹಿಸುತ್ತಿದ್ದ. ಜಬ್ಬಾರ್ ಮತ್ತು ನಿರೂಪಕರು ಮಾತನಾಡುತ್ತಿರುವಾಗ ಮಧ್ಯ ಪ್ರವೇಶಿಸಿದ ಪುಟ್ಟಯ್ಯ ತನ್ನ ಅಸಹಾಯಕತೆಯನ್ನು ತೋಡಿಕೊಳ್ಳುತ್ತಾನೆ. ಹುಚ್ಚುನಾಯಿ ಇಂಜೆಕ್ಷನ್ ಏನೋ ಇದೆ. ಆದರೆ ಅದು ಗ್ಯಾರೆಂಟಿ ಇಲ್ಲ. ದನ ಎಮ್ಮೆಗಾದ್ರೆ ಹ್ಯಾಗೋ ರಿಸ್ಕ್ ತಗೊಂಡು ಅದನ್ನೇ ಚುಚ್ಚಬಹುದು. ಆದರೆ ಮನುಷ್ಯರ ವಿಷಯಕ್ಕೆ ಸ್ವಲ್ಪ ಯೋಚನೆ ಮಾಡಬೇಕು. ಒಂದು ವಾರದಿಂದ ನಮಗೆ ಕರೆಂಟ್ ಇಲ್ಲ ನೋಡಿ. ರೆಫ್ರಿಜಿರೇಟರ್ ಒಳಗೆ ಸಾವಿರಾರು ರೂಪಾಯಿಗಳ ಔಷಧಿ ಇಟ್ಟಿರ್ತೀವಿ. ಕರೆಂಟಿನವರಿಗೆ ಏನು ಗೊತ್ತಾಗುತ್ತೆ ಹೇಳಿ ಅವೆಲ್ಲಾ. ಒಟ್ಟಿನಲ್ಲಿ ಲೈನು ಟ್ರಬಲ್ಲಿದೆ ಅಂತ ಕರೆಂಟ್ ತೆಗೆದು ಹಾಕಿಬಿಡುತ್ತಾರೆ. ಯಾರ್‍ಯಾರಿಗೆ ಎಷ್ಟೆಷ್ಟು ನಷ್ಟ ಆಗುತ್ತೆ ಅಂತ ಏನಾದರೂ ಯೋಚನೆ ಮಾಡ್ತಾರ ಸಾರ್! ನಿಮ್ಮಂತೋರು ಚೆನ್ನಾಗಿ ಉಗಿಬೇಕು ಸಾರ್. ಇಲ್ಲದಿದ್ರೆ ಸರಿ ಹೋಗಲ್ಲ. ನಮ್ಮಂತೋರ ಮಾತಿಗೆ ಅವರು ಬಿಲ್‌ಕುಲ್ ಬಗ್ಗೋದಿಲ್ಲ. ಇವತ್ತು ಹುಚ್ಚುನಾಯಿ ಕಚ್ಚಿದೆ ಅಂತ ಸುಮಾರು ದನಗಳು ಬಂದಿದ್ವು. ರೆಫ್ರಿಜಿರೇಟರ್ ಕೆಲಸ ಮಾಡುತ್ತಿಲ್ಲ, ಸಿರಂ ಕೆಟ್ಹೋಗಿದೆ ಅಂತ ಅವರನ್ನೆಲ್ಲಾ ಹಿಂದಕ್ಕೆ ಕಳಿಸಿದೀನಿ. ಹೊಸ ಸಿರಂ ಕಳಿಸೋದಕ್ಕೆ ಕೂನೂರಿಗೆ ಇಂಡೆಂಟ್ ಹಾಕಿದ್ದೇನೆ. ಯಾವಾಗ ಕನ್‌ಸೈನ್‌ಮೆಂಟ್

ಕಳಿಸ್ತಾರೋ ನೋಡಬೇಕು. ಎಂದು ತನ್ನ ಅಸಹಾಯಕತೆಯನ್ನು ತೋಡಿಕೊಂಡನು.

13. ಬೀದಿನಾಯಿಗಳ ನಿವಾರಣೆಗೆ ಖಾನ್ ಸಾಹೇಬರು ತೆಗೆದುಕೊಂಡಿದ್ದ ಕ್ರಮಗಳಾವುವು?

ಬೀದಿನಾಯಿಗಳನ್ನು ಎರಾಡಿಕೇಟ್ ಮಾಡೋದಕ್ಕೆ ನಾವು ಕೈಲಾದದ್ದೆಲ್ಲ ಪ್ರಯತ್ನ ಮಾಡಿದ್ದೇವೆ. ಶೂಟ್ ಮಾಡಿಸಿದ್ದೇನೆ. ಪಾಯ್ಸನ್ ತರಿಸಿ ಹಾಕಿಸಿದ್ದೇನೆ. ಒಬ್ಬ ಮುನಿಸಿಪಲ್ ಪ್ರೆಸಿಡೆಂಟ್ ಆದೋನು ಇನ್ನೇನು ಮಾಡಬಹುದು ಹೇಳ್ರಿ? ಈ ಸಾರಿ ನಾವು ತರಿಸಿದ ಡಾಗ್ ಪಾಯ್ಸನ್ ಅಷ್ಟೊಂದು ಎಫೆಕ್ಟಿವ್ ಆದ ಹಾಗೆ ಕಾಣಲಿಲ್ಲ. ಅದೇನು ಅದನ್ನೂ ಕಲಬೆರಕೆ ಮಾಡ್ತಾರೋ ಏನೋ. ಆದರೂ ಈ ವರ್ಷ ಇನ್ನೂರು ಮುನ್ನೂರು ನಾಯಿನಾದ್ರೂ ಸಾಯಿಸಿದ್ದೇವೆ ನೋಡಿ. ಎನಪ್ಪಾ ಅಂದರೆ ಅವು ಮುನಿಸಿಪಾಲಿಟಿ ಹದ್ದು ಬಸ್ತಿನ ಒಳಗೆ ಇದ್ರೆ ಮಾತ್ರ ನಾವು ಆಕ್ಷನ್ ತಗೋಬಹುದು. ಮೂಡಿಗೆರೆ ಒಳಗೆ ಇನ್ನೂ ತುಂಬಾ ಕಂತ್ರಿ ನಾಯಿಗಳಿರೋದು ನಿಜ. ಅದಕ್ಕೆ ಕಾರಣ ಹೇಳ್ತೀನಿ ಕೇಳಿ. ಅವೆಲ್ಲಾ ಇಲ್ಲಿ ನಾಯಿಗಳಲ್ಲಾ! ಹೊರಗಡೆಯಿಂದ ಇಲ್ಲಿಗೆ ಎಕ್ಸ್‌ಪೋರ್ಟ್ ಅದವು. ಲಾರೀಲಿ ನಾಯಿಗಳನ್ನ ತುಂಬಿಕೊಂಡು ಬಂದು ಇಲ್ಲಿ ರಾತ್ರೋರಾತ್ರಿ ಬಿಟ್ಟು ಹೋಗಿದ್ದಾರೆ. ನಾಯಿ ಕಾಟ ವಿಪ್ರೀತ ಆದ ಕೂಡಲೆ ಲಾರೀಲಿ ತುಂಬಿಸಿ ದೂರ ಎಲ್ಲಾದರೂ ಬಿಡ್ತಾರೆ ಎನ್ನುತ್ತಾ ತಾನು ಕೈಗೊಂಡ ಕ್ರಮಗಳ ಬಗ್ಗೆ ಸಮಜಾಯಿಸಿ ಮಾಡಿಕೊಂಡರು.

14. ಟೆಲಿಫೋನ್ ಲೈನ್‌ಮನ್ ತಿಪ್ಪಣ್ಣನ ಸಾವಿನ ಸಂದರ್ಭವನ್ನು ವಿವರಿಸಿ.

ತಿಪ್ಪಣ್ಣ ಟೆಲಿಫೋನ್ ಇಲಾಖೆಯಲ್ಲಿ ಲೈನ್‌ಮನ್ ಕಾಯಕ ನಿರ್ವಹಿಸುತ್ತಿದ್ದ. ತಿಪ್ಪಣ್ಣನಿಗೆ ನುಗ್ಗೇಹಳ್ಳಿಯ ಕಡೆಗೆ ಹೋದ ಲೈನುಗಳು ಮೃತ್ಯುಸ್ಥಂಭವಾದೀತೆಂದು ತಿಳಿದಿರಲಿಲ್ಲ. ಆತ ಬೆಳಿಗ್ಗೆ ಎಕ್ಸ್‌ಛೇಂಜ್ ಬಳಿಗೆ ಬಂದಾಗ ನುಗ್ಗೇಹಳ್ಳಿ ಕಡೆಯ ಅಷ್ಟೂ ಲೈನುಗಳು ಡೆಡ್ಡಾಗಿವೆ ಎಂದು ಮೇಂಟೆನೆನ್ಸ್‌ನವರು ಹೇಳಿ ಕಳಿಸಿದರು. ಊರಿನಿಂದ ಸಾಕಷ್ಟು ದೂರದಲ್ಲಿದ್ದ ಹದಿನೇಳನೇ ಕಂಬದ ಜಂಕ್ಷನ್ ಬಾಕ್ಸ್ ಪರಿಶೀಲನೆ ಮಾಡಿ, ಯಾವ ಯಾವ ಲೈನು ಡೆಡ್ಡಾಗಿದೆ ತಿಳಿಯಲು ತಿಪ್ಪಣ್ಣ ಆ ಕಂಬ ಹತ್ತಿದ. ಮೂವತ್ತು ನಲವತ್ತು

ತಂತಿಗಳ ತೊಡಕಿನೊಳಗೆ ನುಸುಳಿ ತಿಪ್ಪಣ್ಣ ಜಂಕ್ಷನ್ ಬಾಕ್ಸ್ ಬಿಚ್ಚಿ ಸ್ಕ್ರೂಡ್ರೈವರಿನಲ್ಲಿಎಂಥದನ್ನೊ ಮೀಟುತ್ತಿರಬೇಕಾದರೆ ಇದ್ದಕ್ಕಿದ್ದಂತೆ ಅಲ್ಲೇ ಸತ್ತು ಹೋದ. ಅನೇಕ ತಂತಿಗಳ ಗೋಜಲಿನೊಳಗೆ ಸಿಕ್ಕಿಕೊಂಡಿದ್ದ ತಿಪ್ಪಣ್ಣನ ಹೆಣ ರಿಪೇರಿ ಭಂಗಿಯಲ್ಲೇ ಕುಳಿತುಕೊಂಡು ಸತ್ತಹಾಗೇ ಕಾಣುತ್ತಲೇ ಇರಲಿಲ್ಲ. ನೋಡಿದವರೆಲ್ಲಾ ಏನೋ ಕಂಬ ಹತ್ತಿ ರಿಪೇರಿ ಮಾಡುತ್ತಿದ್ದಾನೆಂದು ತಿಳಿದು ಅಲಕ್ಷಿಸಿ ತಮ್ಮ ಪಾಡಿಗೆ ನಡೆದರು. ದಿನ ಕಳೆದ ಮೇಲೆ ನುಗ್ಗೇಹಳ್ಳಿಯ ರಾಮೇಗೌಡರು ಇನ್ನೂ ಯಾಕೆ ತಮ್ಮ ಫೋನು ಸರಿಯಾಗಿಲ್ಲವೆಂದು ಎಕ್ಸ್‌ಛೇಂಜ್‌ಗೆ ಬಂದು ಕೂಗಾಡಿದಾಗಲೇ ಜೂನಿಯರ್ ಇಂಜಿನಿಯರ್ ರಮೇಶ್‌ಬಾಬು ಗಮನ ಅತ್ತ ಹೋದುದು. ರಮೇಶ್‌ಬಾಬು ಲೈನ್‌ಮನ್ ಶಂಕ್ರಪ್ಪನನ್ನು ಕರೆದುಕೊಂಡು ಹೋಗಿ ನೋಡಿದಾಗ ತಿಪ್ಪಣ್ಣ ಸತ್ತಿರುವುದು ಖಾತ್ರಿಯಾಯಿತು.

15. ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣನ ಸಾವಿಗೆ ಕೃಷ್ಣೇಗೌಡರ ಆನೆ ಕಾರಣವೆ ವಿವರಿಸಿ.

ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣನ ಸಾವಿಗೆ ಕೃಷ್ಣೇಗೌಡರ ಆನೆ ಕಾರಣವಲ್ಲ. ಏಕೆಂದರೆ, ಅವರಿಬ್ಬರು ಸತ್ತ ಸಮಯದಲ್ಲಿ ವೇಲಾಯುಧ ಆನೆಯ ಜೊತೆಗೆ ಶಿವೇಗೌಡರ ಸಾಮಿಲಿನಲ್ಲಿ ಲಾರಿ ತರುವ ಕಳ್ಳನಾಟಕ್ಕಾಗಿ ಕಾಯುತ್ತಾ ನಿಂತಿದ್ದ. ಅಬ್ಬಾಸ್ ಮತ್ತು ಕೃಷ್ಣನ ಸಾವಿಗೆ ಅವರ ಅಜಾಗರೂಕತೆಯೇ ಕಾರಣ. ಲೋಡು ಲಾರಿ ಬಿಟ್ಟುಕೊಂಡು ಬರುತ್ತಿದ್ದ ಅಬ್ಬಾಸ್‌ಗೆ ಇದ್ದಕ್ಕಿದ್ದಂತೆ ಎರಡು ದಂ ಬೀಡಿ ಎಳೆಯುವ ತೆವಲು ಶುರುವಾಯ್ತು. ಕ್ಲೀನರ್ ಕೃಷ್ಣನಿಗೆ ಚೂರು ಸ್ಟೇರಿಂಗ್ ಹಿಡಿಯೋ,ಬೀಡಿ ಹತ್ತಿಸಿಕೋತೀನಿ, ಬಾಯಿ ಯಾಕೋ ಒಂಥರಾ ಆಗ್ತಿದೆ ಎಂದು ಅವನ ಕೈಗೆ ಸ್ಟೇರಿಂಗ್ ಕೊಟ್ಟ. ಜೇಬಿನಿಂದ ಬೀಡಿ ತೆಗೆದು ಬಾಯಿಗಿಟ್ಟು, ಬೆಂಕಿ ಕಡ್ಡಿ ಗೀರಿ ಒಂದು ದಂ ಎಳೆದು, ಅದರ ಹೊಗೆಯಲ್ಲೇ ಊದಿ ಕಡ್ಡಿ ನಂದಿಸಿ, ತಲೆ ಎತ್ತಿ ಎದುರು ನೋಡಿದ! ಲಾರಿ ಎದುರು ಮರದ ದೊಡ್ಡ ಕಾಂಡ ಒಂದು ನೇರವಾಗಿ ನುಗ್ಗುತ್ತಿದೆ. ಆದರೂ ಕೈ ಮೀರಿಲ್ಲ, “ಏ ಕೃಷ್ಣಾ, ಸ್ಟೇರಿಂಗ್ ಬಿಡೋ” ಎಂದು ಕೂಗುತ್ತಾ ಸ್ಟೇರಿಂಗ್‌ಗೆ ಕೈ ಹಾಕಿ ಲಾರಿ ಮೂತಿಯನ್ನು ದಾರಿ ಕಡೆಗೆ ತಿರುಗಿಸಲು ಯತ್ನಿಸಿದ. ಆದರೆ ಕೃಷ್ಣನಿಗೆ ಮೈ ಮೇಲಿನ ಪರಿವೇ ಇದ್ದ ಹಾಗೆ

ಕಾಣಲಿಲ್ಲ. ಸ್ಟೇರಿಂಗ್ ಹಿಡಿ ಎಂದು ಡ್ರೈವರಣ್ಣಾ ಹೇಳಿದ್ದೊಂದೇ ಅವನ ತಲೆಯೊಳಗಿತ್ತೋ ಏನೋ. ಸ್ಟೇರಿಂಗ ಅಲ್ಲಾಡದ ಹಾಗೆ ವಜ್ರಮುಷ್ಟಿಯಲ್ಲಿ ಹಿಡಿದಿದ್ದ. ಗಡಿಬಿಡಿಯಲ್ಲಿ ನಿಸ್ಸಾಹಕವಾಗಿ ಒದ್ದಾಡುತ್ತಿದ್ದ ಅಬ್ಬಾಸ್‌ಗೆ ಬ್ರೇಕ್ ಹಾಕಬೇಕೆಂದು ತಲೆಗೆ ಹೊಳೆದಿದ್ದು ತುಂಬಾ ತಡವಾಗಿ. ಲಾರಿ ಮರಕ್ಕೆ ಢಿಕ್ಕಿ ಹೊಡೆದ ಕೂಡಲೆ ಹಿಂದುಗಡೆ ಇದ್ದ ಅಪಾರ ತೂಕದ ದಿಮ್ಮಿಗಳು ಕ್ಯಾಬಿನ್ ಮುರಿದು ಮುನ್ನುಗಿದವು. ಮರಕ್ಕೂ ದಿಮ್ಮಿಗಳಿಗೂ ನಡುವೆ ಸಿಕ್ಕಿದ ಕ್ಲೀನರ್, ಡ್ರೈವರ್ ಇಬ್ಬರೂ ಅಲ್ಲೇ ಸತ್ತು ಹೋದರು.

16. ವೇಲಾಯುಧನ ಹೆಂಡತಿಗೆ ಆನೆಯ ಬಗ್ಗೆ ಸವತಿ ಮಾತ್ಸರ್ಯ ಮೂಡಲು ಕಾರಣಗಳೇನು?

ಮನುಷ್ಯನ ಹಣೆಬರಹವನ್ನು ಎಷ್ಟು ಸಣ್ಣ ಸೂಕ್ಷ್ಮ ಸಂಗತಿಗಳು ನಿಯಂತ್ರಿತ್ತವೆ ಎಂದು ಯೋಚಿಸಿದರೆ ಆಶ್ಚರ್ಯ ಆಗುತ್ತದೆ. ಮಕ್ಕಳಿಲ್ಲದ ವೇಲಾಯುಧನಿಗೆ ಮನಸ್ಸಿನ ಆಳದಲ್ಲಿ ಎನೇನು ಅಳುಕುಗಳಿತ್ತೋ ಗೊತ್ತಿಲ್ಲ. ಕೃಷ್ಣೇಗೌಡನ ಹೆಣ್ಣಾನೆ ಹುಡುಕಿಕೊಂಡು ಕಾಡಿನ ಆನೆಗಳು ಊರಿನ ಬಳಿ ಸುಳಿದಾಡಿದ್ದು ಅವನಿಗೆ ಆನೆಯ ಮೇಲೆ ದ್ವೇಷ ಸಾಧನೆ ಮೂಡಲು ಪ್ರೇರಣೆಯಾಯ್ತೋ ಏನೋ. ಮಠದವರು ಇವನನ್ನು ಓಡಿಸಿದಾಗ ಆ ಆನೆ ಊಟ ಬಿಟ್ಟು ಸೊರಗಿದ್ದು ಈಗ ಕಾಡಿಗೆ ಹೋಗಿ ಬಂದುದರಿಂದ ಅದು ದೊಡ್ಡ ಅಧಿಕಪ್ರಸಂಗವಾಗಿ ಕಂಡಿರಲೂ ಸಾಕು. ಆ ಆನೆಯ ಮಾವುತ ಆಗಿದ್ದರಿಂದಲೇ ಇವನಿಗೆ ಸಂಬಳ ಸಿಗುತ್ತಿದ್ದರೂ ಅದು ಹೆಣ್ಣಾನೆಯಾದ್ದರಿಂದಲೂ ಮತ್ತು ಅದನ್ನು ಕರೆದುಕೊಂಡು ಹಗಲೆನ್ನದೆ ರಾತ್ರಿ ಎನ್ನದೆ ವೇಲಾಯುಧ ಕೆಲಸಕ್ಕೆ ಹೋಗಬೇಕಾದ್ದರಿಂದಲೂ ವೇಲಾಯುಧನ ಹೆಂಡತಿಗೆ ಮಾತ್ರ ಒಂದು ರೀತಿಯ ವಿಚಿತ್ರ ಮಾತ್ಸರ್ಯ ಅದರ ಮೇಲೆ ಇದ್ದುದು ನಿಜ. ಬಸುರಿಯಾಗದೆ ವರ್ಷ ಕಳೆದ ಹಾಗೂ ವಿನಾಕಾರಣ ಅವರ ಸಂಸಾರಕ್ಕೆ ಅನ್ನ ಕೊಡುತ್ತಿದ್ದ ಈ ಆನೆ ವಿಷಯದಲ್ಲಿ ಸೂಕ್ಷ್ಮವಾದ ದ್ವೇಷ ಅವಳಲ್ಲಿ ರೂಪುಗೊಳ್ಳುತ್ತಾ ಇತ್ತು. ತನ್ನ ಸಿಟ್ಟನ್ನು ಆಕೆ "ಆನೆ ಜೊತೆ ಮಲಗುತ್ತೀಯಾ; ನೀನ್ಯಾವ ಗಂಡಸು" ಎನ್ನುವ ಮೂಲಕ ಹೊರಹಾಕಿದ್ದಳು. ಕಾರೋ ಲಾರಿಯೋ ಟ್ರಾಕ್ಟರೋ ಯಾವುದನ್ನೇ ಆಗಲಿ ಗಂಡಸರು ಅಷ್ಟೊಂದು ಹಚ್ಚಿಕೊಂಡರೆ ಕೆಲವು ಹೆಂಗಸರಿಗೆ ಸಿಟ್ಟುಬರುತ್ತದೆ. ತಮ್ಮ ಆಕರ್ಷಣಾ ಶಕ್ತಿಗೆ ಇವು ಸವಾಲು ಎಂದೇ ತಿಳಿಯುತ್ತಾರೆ. ಅಂಥದರಲ್ಲಿ

ಆನೆಯಂಥ ಒಂದು ಜೀವ, ಅದೂ ಹೆಣ್ಣಾನೆ ವೇಲಾಯುಧನನ್ನು ಹಚ್ಚಿಕೊಂಡರೆ! ಇನ್ನೂ ಸಹಿಸಲಸಾಧ್ಯ.

17. ನಾಗರಾಜನ ನಿಗೂಢ ಸಾವಿನ ಬಗ್ಗೆ ಜನರ ಅಭಿಪ್ರಾಯಗಳೇನು?

ನಾಗರಾಜನ ನಿಗೂಢ ಸಾವಿನ ಬಗ್ಗೆ ಹಲವಾರು ಅಭಿಪ್ರಾಯಗಳು ಹುಟ್ಟಿಕೊಂಡಿದ್ದವು. ಕೆಲವರು ಸಾರ್ವಜನಿಕ ಸಭೆಯಲ್ಲಾದ ಅವಮಾನ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡನೆಂದು ಹೇಳಿದರು. ಮೊದಲಿಗೆ ಕೃಷ್ಣೇಗೌಡರ ಆನೆಯೇ ಅವನನ್ನು ದುರ್ಗಮವಾದ ಕಾಡಿನಲ್ಲಿ ಎಲ್ಲೋ ಒಂದು ಕಡೆ ಕೊಂದು ನೆಲಕ್ಕೆ ಹಾಕಿ ತಿಕ್ಕಿದೆ ಎಂದು ಶಂಕಿಸಿದರು. ಹಾಗೇ ಆಗಿದ್ದರೆ ಆ ಆನೆಯ ನಿಮಿತ್ತ ನಡೆದ ಎಲ್ಲಾ ಘಟನೆಗಳಿಗೂ ಒಂದು ಅರ್ಥ ಸ್ಫುರಿಸುತ್ತಿತ್ತೋ ಏನೋ! ಪೊಲೀಸರು ಕಾಡೆಲ್ಲ ಹುಡುಕಾಡಿ ನಾಗರಾಜನ ಕೋವಿ ಸಿಕ್ಕಿದೆ. ಆದರೆ ಹೆಣ ಸಿಗಲಿಲ್ಲ ಎಂದು ಮಹಜರು ಬರೆದುಕೊಂಡರು. ಇನ್ನು ಕೆಲವರು ಅಭಿಪ್ರಾಯಪಡುವ ಪ್ರಕಾರ ನಾಗರಾಜನಿಗೆ ಇದ್ದಕ್ಕಿದ್ದಂತೆ ಮನಃಪರಿವರ್ತನೆಯಾಗಿ ಕೋವಿ ತೆಗೆದು ಚರಂಡಿಗೆ ಎಸೆದು ಧರ್ಮಸ್ಥಳದ ಬಸ್ಸು ಹತ್ತಿದನೆಂದೂ ತಲೆಬೋಳಿಸಿಕೊಂಡು ಧರ್ಮಸ್ಥಳದಲ್ಲಿ ಓಡಾಡುತ್ತಿರುವುದನ್ನು ತಾವು ಕಣ್ಣಾರೆ ಕಂಡೆವೆಂದೂ ಹೇಳಿದರು. ಕೆಲವರು ನಾಗರಾಜ ಆನೆ ಬೆನ್ನಟ್ಟಿದವನು ದಾರಿಯಲ್ಲಿ ಹಿಂದಿರುಗಿ ಬರುತ್ತಿರಬೇಕಾದರೆ ಎದುರಿಗೆ ಸಿಕ್ಕ ಗಂಧ ಸಾಗಾಣಿಕೆಯ ಗಂಗಾಧರನ ಕಾರಿಗೆ ಕೈ ಅಡ್ಡಹಾಕಿ ಹಿಂದುಮುಂದು ನೋಡದೆ ಅದರೊಳಗೆ ಕುಳಿತು ಆನೆಯನ್ನು ಬೆನ್ನಟ್ಟುವಂತೆ ಹೇಳಿದನೆಂದು, ನಾಗರಾಜನನ್ನು ಅವನ ಗ್ಯಾಂಗೇ ಕೂನಿ ಮಾಡಿ ಹೆಣ ನಾಪತ್ತೆ ಮಾಡಿದರಬೇಕೆಂದು ಹೇಳಿದರು. ಗಾರ್ಡ್ ರಾಮಪ್ಪ ಕೂಡ ನಾಗರಾಜನ ಸಾವಿನ ಬಗ್ಗೆ ಹೇಳಿದ ದೃಢವಾದ ಮಾತುಗಳು ಆತನ ಸಾವಿನ ಕುರಿತಂತೆ ಇನ್ನು ಕೆಲವು ಅನುಮನಕ್ಕೆ ಎಡೆಮಾಡುವಂತಿತ್ತು.

18. ತನ್ನ ಆನೆಯ ಬಗ್ಗೆ ಕೃಷ್ಣೇಗೌಡನಲ್ಲಿ ಬೇಸರ ಮೂಡಲು ಕಾರಣಗಳೇನು?

ಕೃಷ್ಣೇಗೌಡ ಆನೆಯಿಂದ ಎದುರಾಗುತ್ತಿರುವ ಸಮಸ್ಯೆಗಳ ಬಗ್ಗೆ ರೋಸಿ ಹೋಗಿದ್ದ. ಹಿಂದೊಮ್ಮೆ ಇದೇ ಅನೆ ಆತನ ಮನೆಗೆ ಲಕ್ಷ್ಮೀ ಬಂದ ಹಾಗೆ ಆಗಿತ್ತು. ಆದರೆ ಈಗ ಅದೇ ಅನೆಯನ್ನು ಸಾಗಹಾಕುವುದು ದೊಡ್ಡ ತಲೆನೋವಾಗಿ ಪರಿಣಮಿಸಿತ್ತು. ಊರಿನಲ್ಲಿ ಏನೇ ನಡೆದರು ಅದಕ್ಕೆ ಆನೆಯೇ ಕಾರಣ ಎನ್ನುವ ಅಪವಾದದ ಮಾತುಗಳು ಆತನನ್ನು ಸಂಕಷ್ಟಕ್ಕೆ

ಗುರಿಪಡಿಸಿತ್ತು. ಹಿಂದೊಮ್ಮೆ ಮಠದವರು ಅದನ್ನು ಯಾರಿಗಾದರು ದಾಟಿಸಿದಂತೆ ತಾನೂ ದಾಟಿಸಬೇಕೆಂದು ಯೋಚಿಸಿದ. ಆದರೆ ಯಾರಿಗೆ ಮಾರುವುದು? ಸರ್ಕಸ್ ಕಂಪೆನಿಗಲೆಲ್ಲಾ ಪಾಪರ್ ಎದ್ದಿವೆ. ಜಗದ್ಗುರುಗಳೆಲ್ಲಾ ಅಡ್ಡಪಲ್ಲಕ್ಕಿ ಇಲ್ಲವೆ ಬೆಂಜ್ ಕಾರುಗಳನ್ನು ಹಿಡಿದಿದ್ದಾರೆ. ಮರದ ವ್ಯಾಪಾರಿಗಳಂತೂ ಸರ್ಕಾರದ ಬಿಗಿ ಧೋರಣೆಯಿಂದ ಮತ್ತು ಲಂಚದ ಕಾಟದಿಂದ ಸುಸ್ತಾಗಿ ಹೋಗಿದ್ದಾರೆ. ಕಾಡಿಗೇ ಅಟ್ಟಿ ಬಿಡೋಣವೆಂದರೆ ಅದು ಊರಿನ ಅನೆ. ಕಾಡಿಗೆ ಹೋಗಿದ್ದು ಸಹ ಮತ್ತೆ ಬಂದು ಲಾಯದೊಳಗೆ ನಿಂತಿದೆ. ಆತನಿಗೆ ಆನೆ ಕುತ್ತಿಗೆಗೆ ಕಟ್ಟಿಕೊಂಡ ಕಲ್ಲುಗುಂಡಿನಂತೆ ಭಾಸವಾಯ್ತು.

19.ಕೃಷ್ಣೇಗೌಡನ ಆನೆಯಲ್ಲಿ ಬರುವ ಭ್ರಷ್ಟ ವ್ಯವಸ್ಥೆಯ ಚಿತ್ರಣವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಕೃಷ್ಣೇಗೌಡನ ಆನೆ ಕಥೆಯಲ್ಲಿ ತೇಜಸ್ವಿಯವರು ಸಮಾಜದ ಭ್ರಷ್ಟ ವ್ಯವಸ್ಥೆಗೆ ಕನ್ನಡಿ ಹಿಡಿದಿದ್ದಾರೆ.ಶಿವೇಗೌಡ– ಕೃಷ್ಣೇಗೌಡರು ನಡೆಸುವ ಕಳ್ಳನಾಟ ಸಾಗಾಣಿಕೆಯ ಅವ್ಯವಹಾಖ, ಗಂಗಾಧರನ ಗ್ಯಾಂಗಿನವರ ಕಳ್ಳದಂಧೆ– ಕೊಲೆ ಸುಲಿಗೆಗಳು,ಮುನ್ಸಿಪಾಲಿಟಿ ಪ್ರೆಸಿಡೆಂಟರ ಅಧಿಕಾರ ವ್ಯಾಮೋಹ, ಪಿಡಬ್ಲುಡಿ, ಟೆಲಿಫೋನ್,ಎಲೆಕ್ಟ್ರಿಕ್ ಡಿಪಾರ್ಟ್ಮೆಂಟಿನವರ ಅರಣ್ಯ ಲೋಟಿ, ಗ್ರಾಮೀಣರಲ್ಲಿ ಎದ್ದು ಕಾಣುವ ಅನೀತಿ ಮುಂತಾದ ಸಂಗತಿಗಳನ್ನು ಲೇಖಕರು ಈ ಕಥೆಯಲ್ಲಿ ದಾಖಲಿಸಿದ್ದಾರೆ. ಜಬ್ಬಾರ್ ಮತ್ತು ದುರ್ಗಪ್ಪರ ಅಸಾಹಯಕತೆ, ನಾಗರಾಜನ ಅಧಿಕಾರ ವ್ಯಾಮೋಹ, ಫೋಲಿಸ್ ಇಲಾಖೆಯವರ ಕರ್ತವ್ಯ ಲೋಪ, ಎಲ್ಲವನ್ನು ಸಾಂದರ್ಭಿಕವಾಗಿ ನಿರೂಪಕರು ಚಿತ್ರಿಸಿದ್ದಾರೆ.ವ್ಯವಸ್ಥೆಯ ನಿಷ್ಕ್ರೀಯತೆ, ಭ್ರಷ್ಟತೆ, ಪರಸ್ಪರ ಈರ್ಷೆ,ರಾಜಕೀಯ, ಧಾರ್ಮಿಕತೆ, ಸಾಮಾಜಿಕ ಹಾಗೂ ಅಧಿಕಾರಶಾಹಿಯೊಳಗಿನ ಕರಾಳ ಸತ್ಯಗಳನ್ನು ಲೇಖಕರು ಈ ಕಥೆಯಲ್ಲಿ ಕಾಣಿಸಿದ್ದಾರೆನ್ನಬಹುದು.

20.ಆನೆಯು ಇಲ್ಲಿ ಬಾಯಿ ಇಲ್ಲದವರ ಸಂಕೇತವಾಗಿರುವುದನ್ನು ವಿಶ್ಲೇಷಿಸಿ.

ಕೃಷ್ಣೇಗೌಡನ ಆನೆಯು ಬಲಭೀಮನಂತಿದ್ದರೂ ಬಾಯಿಯಿಲ್ಲದ ಕಾರಣ ಪಾಪದ ಪ್ರಾಣಿಯಾಗಿದೆ. ಅಲ್ಲದೆ ಸಮಾಜದಲ್ಲಿ ಬಾಯಿಯಿಲ್ಲದೆ ಬದುಕುವ ಅಸಹಾಯಕ ಜನರ ಸಂಕೇತವೆಂಬಂತೆ ಚಿತ್ರಿತವಾಘಿದೆ. ಆನೆಯ ಮೇಲೆ ಬಂದ ಆಪಾದನೆಗಳು ಹಲವು. ಆದರೆ ಯಾವುದಕ್ಕೂ ಆನೆ ನೇರವಾಗಿ ಕಾರಣವಾಗುವುದಿಲ್ಲ. ಅದಿರುವುದು ಮನುಷ್ಯನ ನಿಯಂತ್ರಣದಲ್ಲಿ. ಆದರೂ

ಜನ ತಮ್ಮ ಮನಸ್ಸಿಗೆ ತೋಚಿದ್ದನ್ನು ಆನೆಯ ಮೇಲೆ ಹೊರಿಸುತ್ತಾ ಅದನ್ನು ಅಪರಾಧಿಯನ್ನಾಗಿಸುತ್ತಾರೆ.ಪ್ರತಿಯೊಬ್ಬನೂ ಆನೆಗೊಂದು ವ್ಯಕ್ತಿತ್ವವನ್ನು ಆರೋಪಿಸಿ,ತನಗೆ ಕಂಡಂತೆ ಅರ್ಥೈಸುತ್ತಾನೆ.ಎಲ್ಲ ಪಾಪಕೃತ್ಯಗಳ ಅಪರಾಧವನ್ನು ಹೊತ್ತ ಆನೆ ಬಾಯಿಯಿಲ್ಲದ ಎಲ್ಲರಿಗೂ, ಎಲ್ಲದಕ್ಕೂ ಸಂಕೇತವೆಂಬಂತೆ ಚಿತ್ರಿತವಾದೆ. ಮಾನವನ ಸ್ವಾರ್ಥಮೂಲ ನೆಲೆಯಿಂದ ಉತ್ಪನ್ನವಾದ ಬಲವಂತದಲ್ಲಿ ತನ್ನ ಮೂಲ ಸಹಜ ಸೌಭಾವವನ್ನು ಬಿಟ್ಟುಕೊಟ್ಟಿರುವ ಆನೆಯು ತನಗಾಗಿ ಅಲ್ಲದೆ, ಪರರ ಇಚ್ಚೆಯ ನಿಯಂತ್ರಣದಲ್ಲಿ ಬದುಕುತ್ತದೆ. ಸಮಾಜದಲ್ಲಿ ದನಿಯೆತ್ತಲಾರದೆ ಬಡವರ ಸ್ಥಿತಿ ಕೂಡ ಇದಕ್ಕೆ ಭಿನ್ನವಾಗಿಲ್ಲ.

===0===

# ಪಲ್ಲವ

## ಆಯ್ದ ಸಮಾನಾರ್ಥಗಳು

1. ಸ್ಫುರಿಸು= ಮಿಂಚು, ಹೊಳೆ, ಮೂಡು, ಉದಯಿಸು.
2. ಸಮುದ್ರ= ಕಡಲು, ಸಾಗರ, ಅಬ್ಧಿ, ಜಲಧಿ, ನೀರಧಿ, ವಾರಿಧಿ, ಅಂಬುಧಿ.
3. ಕರ್ತವ್ಯ= ಮಾಡಲೇ ಬೇಕಾದ ಕೆಲಸ, ಕಾಯಕ.

4. ಭೂಮಿ= ಧರೆ,ಇಳೆ, ವಸುಧೆ, ಪೃಥ್ವಿ, ನೆಲ, ವಸುಂಧರೆ, ಅವನಿ.
5. ತಾಳ್ಮೆ= ಸಹನೆ, ಸಮಾಧಾನ, ಸೈರಣೆ.
6. ಸಲಿಲ= ನೀರು, ಜಲ, ಉದಕ.
7. ವಕ್ತ್ರ= ಮುಖ, ವದನ, ಮೋರೆ.
8. ನೀಲಿರಾಗ= ಸ್ಥಿರವಾದ ಪ್ರೀತಿ, ಸ್ಥಿರತೆ, ಶಾಶ್ವತ ವ್ಯಾಮೋಹ.
9. ಪರಾಭವ= ಸೋಲು, ಪರಾಜಯ.
10. ಕುಡುಪು= ಪರಾಕ್ರಮ, ಶೌರ್ಯ.
11. ಡಂಬಕ= ದೃಢಭಕ್ತಿ ಇಲ್ಲದವನು, ಬೂಟಾಟಿಕೆಯವನು, ಸೋಗಿನ ನಡೆನುಡಿ, ವಂಚಕ.
12. ಹಂದೆ= ಹೇಡಿ, ಅಂಜುಬುರುಕ, ಪುಕ್ಕಲ.
13. ನಂಜು= ವಿಷ, ಪಾಷಾಣ, ಗರಳ.
14. ಸೂರ್ಯ= ರವಿ, ಭಾಸ್ಕರ, ದಿನಕರ, ನೇಸರ, ದಿನಪ, ಭಾನು.
15. ದೀಪ= ಹಣತೆ, ಪ್ರಣತಿ, ಜ್ಯೋತಿ.
16. ಗೃಹ= ಮನೆ, ಆಲಯ, ನಿವಾಸ, ಸದನ.
17. ಹರಿ= ವಿಷ್ಣು, ನಾರಾಯಣ, ಕೃಷ್ಣ.
18. ಕುಂದು= ತೊಂದರೆ, ಕೆಡುಕು, ಕುಗ್ಗು, ಬಾಡು.
19. ಮೊರೆ= ಬೇಡು, ಗೋಳಿಡು, ಆರ್ತನಾದ.
20. ಖತಿ= ಕೋಪ, ಮುನಿಸು.
21. ಚಿತ್ತ= ಮನಸ್ಸು, ಬುದ್ಧಿ.
22. ಕಾಂತೆ= ಪತ್ನಿ, ಹೆಂಡತಿ, ಪ್ರಿಯೆ, ಮನದನ್ನೆ, ಅರ್ಧಾಂಗಿ.
23. ಕಾಲ= ಸಮಯ, ಹೊತ್ತು, ವೇಳೆ.
24. ಗಂಡ= ಪತಿ, ವಲ್ಲಭ, ಪ್ರಾಣಕಾಂತ.
25. ಧರೆ= ಭೂಮಿ, ಇಳೆ, ವಸುಧೆ, ಧರಣಿ, ಪೃಥ್ವಿ, ನೆಲ, ವಸುಂಧರೆ.
26. ಕುಸುಮ= ಹೂವು, ಸುಮ, ಪುಷ್ಪ.
27. ಕರ್ಮ= ಕೆಲಸ, ಕಾರ್ಯ.
28. ಬಿನ್ನಾಣ= ಬೆಡಗು, ಜಂಬ, ಒಯ್ಯಾರ, ಒನಪು.
29. ಕುನ್ನಿ= ಶ್ವಾನ, ಶುನಕ, ನಾಯಿಮರಿ.
30. ದೇಹ= ಕಾಯ, ಶರೀರ.

31. ಸರ್ಪ= ಹಾವು, ಉರಗ, ಫಣಿ.
32. ಬಂಗಾರ= ಚಿನ್ನ, ಸುವರ್ಣ, ಹೇಮ.
33. ಸ್ಥಿರ= ಶಾಶ್ವತ, ಸದಾ.
34. ಪುತ್ಥಳಿ= ಗೊಂಬೆ, ವಿಗ್ರಹ.
35. ಮರ= ತರು, ವೃಕ್ಷ,ವಿದ್ರುಮ.
36. ಅಟ್ಟ= ಮಹಡಿ, ಮೇಲುಪ್ಪರಿಗೆ.
37. ಮಾಗು= ಹಣ್ಣಾಗು, ಪರಿಪಕ್ವವಾಗು.
38. ಮಿಂದು= ಸ್ನಾನಮಾಡು, ಜಳಕಮಾಡು, ಶುಚಿಯಾಗು.
39. ಹಣತೆ= ದೀಪ, ಜ್ಯೋತಿ, ಪ್ರಣತಿ.
40. ಸಂತೈಸು= ಸಮಾಧಾನಪಡಿಸು, ಸಾಂತ್ವನನೀಡು.
41. ತಾರೆ= ಚುಕ್ಕಿ, ನಕ್ಷತ್ರ
42. ತಮ= ಕತ್ತಲೆ, ಅಂಧಕಾರ
43. ಮಾಹೆ=ತಿಂಗಳು, ಮಾಸ

# ತತ್ಸಮ-ತದ್ಭವ

ಅಕ್ಷರ – ಅಕ್ಕರ
ಭಕ್ತಿ – ಭಕುತಿ
ಭಿಕ್ಷಾ – ಭಿಕ್ಕೆ
ಬೀಜ – ಬಿತ್ತ
ಮುಖ – ಮೊಗ
ಯಂತ್ರ – ಜಂತ್ರ
ಯೋಗಿ – ಜೋಗಿ

ವಸತಿ – ಬಸದಿ
ವಲ್ಲಭ – ಬಲ್ಲಹ
ವಿದ್ಯೆ – ಬಿಜ್ಜೆ
ವೀದಿ – ಬೀದಿ
ವೇಳಾ – ವೇಳೆ
ಶ್ರುತಿ – ಸ್ತುತಿ
ಸಂಸ್ಕೃತ – ಸಕ್ಕದ

ರಾಜ – ರಾಯ
ವೇಷ – ವೇಸ
ಮಸೀದಿ – ಮಸಜೀದು
ಪ್ರಣತಿ – ಹಣತೆ
ಸ್ಥಾನ – ತಾಣ
ಭಕ್ತ – ಭಕುತ
ಪ್ರಾಣ – ಹರಣ
ಆತ್ಮ – ಆತುಮ
ಗ್ರಹ – ಗರ
ಗೃಹ – ಗೇಹ
ಆಜ್ಞೆ – ಅಪ್ಪಣೆ, ಆಣತಿ
ಕರುಣೆ – ಕರುಣಾ
ಕ್ಷಮೆ – ಕ್ಷಮಾ
ಘೂಕ – ಗೂಗೆ
ಘಂಟಾ – ಗಂಟೆ
ಅಗ್ನಿ – ಅಗ್ಗಿ, ಅಗಿನಿ
ಅಡವಿ – ಅಟವಿ
ಅಮೃತ – ಅಮರ್ದು
ಆರ್ಯ – ಅಜ್ಜ
ಆಕಾಶ – ಆಗಸ
ಆಯುಷ್ಯ – ಆಯಸ್ಸು
ಆಚಾರ್ಯ – ಆಚಾರಿ
ಉದ್ಯೋಗ – ಉಜ್ಜುಗ
ಔಷಧ – ಔಷಧಿ
ಕಸ್ತೂರಿ – ಕತ್ತುರಿ
ಕವಿ – ಕಬ್ಬಿಗ
ಕಾವ್ಯ – ಕಬ್ಬ
ಕೀರ್ತಿ – ಕೀರುತಿ

ಕ್ಷಣ – ಚಣ
ಗಂಗಾ – ಗಂಗೆ
ದಯಾ – ದಯೆ
ದೃಷ್ಟಿ – ದಿಟ್ಟಿ
ನಿದ್ರಾ – ನಿದ್ದೆ
ಪಂಕ್ತಿ – ಹಂತಿ, ಪಂತಿ, ಬಂತಿ
ಪ್ರಭು – ವಿಭು
ಪ್ರಯಾಣ – ಪಯಣ
ಬೀಡು – ವೀಡು
ಮಾಲಾ – ಮಾಲೆ
ಮೂರ್ತಿ – ಮೂರುತಿ
ಮೃಗ – ಮಿಗ
ಮೃದು – ಮಿದು
ಧರಾ – ಧರೆ
ನಿದ್ರಾ – ನಿದ್ದೆ
ವನ – ಬನ
ತಾಂಬೂಲ – ತಂಬುಲ
ವಧೆ – ವಧ
ವೀರ – ಬೀರ
ಯಶ – ಜಸ
ಯಮ – ಜವ
ಲಕ್ಷ್ಮೀ – ಲಕುಮಿ
ವಸತಿ – ಬಸದಿ
ಶಿರ – ಸಿರ
ಶಾಲೆ – ಶಾಲಾ
ಪಳ್ಳ – ಹಳ್ಳ
ಪರೀಕ್ಷಿಸು – ಪರಿಕಿಸು
ಪ್ರಸಾದ – ಹಸಾದ

ಭಂಗ – ಬನ್ನ
ಮುಖ – ಮೊಗ
ಸಂಸ್ಥಾ – ಸಂತೆ, ಸಂಸ್ಥೆ
ಪದ್ಮ – ಪದುಮ
ನೀಲಿ – ನೀಳ
ಲೇಹ್ಯ – ಲೆಪ್ಪ
ಲಜ್ಜಾ – ಲಜ್ಜೆ
ವರ್ಷ – ವರುಸ
ರತ್ನ – ರನ್ನ
ರತ್ನಮಣಿ – ರನ್ನವಣಿ
ವಿಷ – ಬಿಸ
ಮಕುಟ – ಮುಗುಡ
ಮರ್ಕಟ – ಮಂಗಡ, ಮಕ್ಕಡ
ಭಂಡ – ಬಂಡ
ಜ್ಯೋತಿ –ಜೋತಿ
ಆತ್ಮ – ಆತುಮ
ಉಷಾ – ಉಸೆ
ಕವಯಿತ್ರಿ – ಕಬ್ಬಿಗಿತ್ತಿ
ಜ್ವರ – ಜರ
ರೇಖೆ – ರೇಕೆ
ಲಕ್ಷಣ – ಲಕ್ಕಣ
ಲಘು – ಲಗು
ವರ್ತಿ – ಬತ್ತಿ
ವಿಸ್ತರಿಸು – ಬಿತ್ತರಿಸು
ಸ್ಥಾನ – ತಾಣ
ಸ್ನಾನ – ಸಾನ
ಕಾಕ – ಕಾಗೆ
ಗೆಳತಿ – ಕೆಳದಿ
ಶ್ರೀ – ಸಿರಿ
ನೆಪ – ನೆವ

# ವಾಕ್ಯಗಳು

**ನುಡಿಗಟ್ಟುಗಳು: (ಹೆಚ್ಚುವರಿ ಪದಗಳು)**

**ತುತ್ತೂರಿ ಊದು** : (ತನ್ನ ಬಗ್ಗೆ ತಾನೇ ಹೇಳಿಕೊಳ್ಳುವುದು): ದುರ್ಜನರು ತಮ್ಮ ಕೆಲಸಕ್ಕಾಗಿ ತಮ್ಮ ತುತ್ತೂರಿ ಊದಿಕೊಂಡು ಕಾರ್ಯ ಸಾಧಿಸಿಕೊಳ್ಳುತ್ತಾರೆ.

**ತರ್ಪಣ ಬಿಡು** : (ಆಸೆ, ಋಣ ತೀರಿತು): ದುರ್ಯೋಧನನಿಗೆ ಆತ ಬದುಕಿರುವಾಗಲೇ ಮಗನಿಗೆ ತರ್ಪಣ ಬಿಡುವ ಅನಿವಾರ್ಯತೆ ಎದುರಾಯಿತು.

**ನರಪೇತಲ ನಾರಾಯಣ :** (ಕೃಶ ದೇಹಿ, ತೆಳ್ಳನೆಯ): ಮಾದಕ ವ್ಯಸನಗಳನ್ನು ಹೊಂದಿದ್ದ ವಿಕ್ರಮನು ನೋಡಲು ನರಪೇತಲ ನಾರಾಯಣನಂತಿದ್ದನು.

**ಗಾಳಿಸುದ್ದಿ ಹಬ್ಬು :** (ಸುಳ್ಳು ಸುದ್ದಿ, ಊಹಾ ಪೋಹ): ರಮೇಶನ ಬಗ್ಗೆ ಹಬ್ಬಿದ ಗಾಳಿಸುದ್ದಿಯು ಆತನನ್ನು ಬೆಚ್ಚಿಬೀಳಿಸಿತು.

**ಹೆಸರುವಾಸಿಯಾಗು :** (ಪ್ರಸಿದ್ಧನಾಗು): ರೋಹಿತ್ ಶರ್ಮನು ಶ್ರೀಲಂಕಾದ ವಿರುದ್ಧದ ಏಕದಿನ ಪಂದ್ಯದಲ್ಲಿ ಗಳಿಸಿದ ಅತ್ಯಧಿಕ ವೈಯಕ್ತಿಕ ಅಂಕವು ಅತನನ್ನು ಹೆಸರುವಾಸಿಯಾಗುವಂತೆ ಮಾಡಿತು.

**ಮುಖಹಿಂಜಿಕೊಳ್ಳು :** (ಅತೃಪ್ತಿ ವ್ಯಕ್ತಪಡಿಸು): ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಯನ್ನು ಕಂಡು, ಕಡಿಮೆ ಅಂಕ ಪಡೆದ ವಿದ್ಯಾರ್ಥಿಯು ಮುಖಹಿಂಜಿಕೊಂಡನು.

**ಅಧಿಕಪ್ರಸಂಗ ಮಾಡು :** (ಸಂಬಂಧಿಸದ ವಿಷಯದಲ್ಲಿ ತಲೆಹಾಕು):ಕೆಲವರು ತಮ್ಮ ಅಧಿಕಪ್ರಸಂಗತನದಿಂದ ಅನ್ಯೋನ್ಯ ಸಂಬಂಧಗಳನ್ನು ಹಾಳುಮಾಡಿಕೊಳ್ಳುತ್ತಾರೆ.

**ಕಾಲುಕೀಳು :** (ಪಲಾಯನ ಮಾಡು): ನವಿಲನ್ನು ನೋಡಿದ ಹಾವು ತಾನು ಇರುವ ಜಾಗದಿಂದ ಕಾಲುಕೀಳ ಬೇಕಾಯಿತು.

**ಕಣ್ಣಿಗೆ ಒತ್ತಿಕೋ :** (ಬಹಳ ಇಷ್ಟಪಡು): ದೇವರ ಪ್ರಸಾದವನ್ನು ನಾವು ಕಣ್ಣಿಗೆ ಒತ್ತಿಕೊಂಡು ತಿನ್ನುತ್ತೇವೆ.

**ಗಾಳಿಗೆ ಉಗಿ :** (ಅಸಮಾಧಾನದಿಂದ ಕಾಣು): ಕ್ರೀಡೆಯಲ್ಲಿ ಸೋತ ಕ್ರೀಡಾಳುವೊಬ್ಬ ನಿರಾಸೆಯಿಂದ ಗಾಳಿಗೆ ಉಗಿದ.

**ದೇಶಾವರಿ ನಗೆಬೀರು :** (ಬಲವಂತದ ನಗು): ಕೆಲವು ರಾಜಕಾರಣಿಗಳು ವೋಟಿಗಾಗಿ ಜನರ ಎದುರು ದೇಶಾವರಿ ನಗೆ ಬೀರುತ್ತಾರೆ.

**ಮೂಗು ಹಾಕು :** (ಹಸ್ತಕ್ಷೇಪ ಮಾಡು): ನಾವು ಅನಾವಶ್ಯಕವಾಗಿ ಇನ್ನೊಬ್ಬರ ವಿಚಾರದಲ್ಲಿ ಮೂಗು ಹಾಕಬಾರದು.

**ಮೇಲೆ ಎತ್ತಿ ಕಟ್ಟು :** (ಪ್ರಚೋದಿಸು): ತನಗಾದ ಅವಮಾನದ ಸೇಡನ್ನು ತೀರಿಸಿಕೊಳ್ಳಲು ರಾಮನು ತನ್ನ ಸ್ನೇಹಿತನನ್ನು ತನ್ನ ವಿರೋಧಿಯ ಮೇಲೆ ಎತ್ತಿ ಕಟ್ಟಿದನು.

**ಉರಿಯುವ ಬೆಂಕಿಗೆ ತುಪ್ಪಸುರಿ :** (ಮತ್ತಷ್ಟು ಕೆಡಿಸು): ಗೆದ್ದ ವ್ಯಕ್ತಿಯ ನಗುವು ಸೋತ ವ್ಯಕ್ತಿಗೆ ಉರಿಯುವ ಬೆಂಕಿಗೆ ತುಪ್ಪಸುರಿದಂತಾಯಿತು.

**ಹದ್ದುಬಸ್ತಿನಲ್ಲಿಡು :** (ನಿಯಂತ್ರಣದಲ್ಲಿಡು):ನಾವು ನಮ್ಮ ಮನದ ಅನಗತ್ಯದ ಬಯಕೆಗಳನ್ನು ಹದ್ದುಬಸ್ತಿನಲ್ಲಿಡಬೇಕು.

**ತಲೆಕೊಡವು :** (ನಿರಾಕರಿಸು): ನಮಗೆ ಸಮ್ಮತಿಯಿರದ ಸಂಗತಿಗಳನ್ನು ಕೆಲವೊಮ್ಮೆ ನಾವು ತಲೆಕೊಡವಿ ತಿಳಿಸುತ್ತೇವೆ.

**ತಲೆದೂಗು :** (ಮೆಚ್ಚು) : ಸುಮಂತನ ಸಂಗೀತವನ್ನು ಕೇಳಿ ಸಭೆಯಲ್ಲಿ ನೆರೆದವರೆಲ್ಲ ತಲೆದೂಗಿದರು.

**ತಲೆಬಾಗು :** (ನಮಸ್ಕರಿಸು): ನಾವು ನಮ್ಮ ಹಿರಿಯರಿಗೆ ತಲೆಬಾಗುವ ಗುಣವನ್ನು ಹೊಂದಿರಬೇಕು.

**ತಲೆತಗ್ಗಿಸು:** (ಅಪಮಾನ ಅನುಭವಿಸು): ಕೆಲವೊಮ್ಮೆ ನಾವು ಮಾಡದೇ ಇರುವ ತಪ್ಪಿಗಾಗಿ ತಲೆತಗ್ಗಿಸ ಬೇಕಾಗುತ್ತದೆ.

**ತಲೆಬಿಸಿಯಾಗು:** (ಆಯಾಸಗೊಳ್ಳು): ಕಚೇರಿಯ ಹತ್ತು ಹಲವು ಕೆಲಸಗಳಿಂದ ರಮೇಶನು ತಲೆಬಿಸಿಯಾಗಿ ಹೋದ.

**ತಲೆಹಾಕು:** (ಅನಗತ್ಯವಾಗಿ ಪ್ರವೇಶಿಸು): ಕೆಲವರು ತಮಗೆ ಸಂಬಂಧಿಸದ ವಿಚಾರಗಳಲ್ಲಿ ತಲೆಹಾಕಿ ಜಗಳಕ್ಕೆ ಕಾರಣವಾಗುತ್ತಾರೆ.

**ತಲೆ ಮೇಲೆ ಚಪ್ಪಡಿ ಎಳೆ:** (ಮೋಸಮಾಡು):ಅತಿಯಾಗಿ ನಂಬಿದ ಕಾರಣಕ್ಕಾಗಿ ತನ್ನ ಸ್ನೇಹಿತನಿಂದ ದಿಗಂತ್ ವ್ಯವಹಾರದಲ್ಲಿ ತಲೆ ಮೇಲೆ ಚಪ್ಪಡಿ ಎಳೆದುಕೊಂಡ.

**ತಲೆ ತಿರುಗು:** (ಅಹಂಕಾರ ಬರು): ತಾನು ಎಲ್ಲರಿಗಿಂತ ಬುದ್ಧಿವಂತ ಎಂಬ ಮನಸ್ಥಿತಿಯು ಕೆಲವೊಮ್ಮೆ ನಮ್ಮ ತಲೆತಿರುಗುವಂತೆ ಮಾಡುತ್ತದೆ.

**ತಲೆಎತ್ತು:** (ಹೆಮ್ಮೆಪಡು,ಆತ್ಮವಿಶ್ವಾಸ):ಅರುನಿಮಾ ಸಿನ್ಹಾ ಗೈದ ಸಾಧನೆಯು ಆಕೆಗೆ, ಆಕೆಯ ತಂದೆ–ತಾಯಿಗಳಿಗೆ ತಲೆಎತ್ತುವಂತೆ ಮಾಡಿತು.

**ತಲೆದಂಡ:** (ಶಿಕ್ಷೆ, ಮರಣದಂಡನೆ):ಕೆಲವೊಮ್ಮೆ ಯಾರೋ ಮಾಡಿದ ತಪ್ಪಿಗೆ ಇನ್ಯಾರೋ ತಲೆದಂಡ ತೆರಬೇಕಾಗುತ್ತದೆ.

**ಪರದೇಶಿ:** (ಪರಕೀಯ, ಅನಾಥ):ನಾವು ಬೇರೆ ದೇಶಗಳಿಗೆ ಹೋದಾಗ ನಮಗೆ ನಮ್ಮದಲ್ಲದ ದೇಶದಲ್ಲಿ ಪರದೇಶಿಗಳೆಂಬ ಪ್ರಜ್ಞೆ ಕಾಡುತ್ತದೆ.

**ಮೈಗೆಹತ್ತು:** (ಅರಗು,ರಕ್ತಗತವಾಗು):ಚೆನ್ನಾಗಿ ಜಗಿದು ತಿಂದ ಆಹಾರ ಮೈಗೆ ಹತ್ತುತ್ತದೆ.

**ತಲೆಮೇಲೆ ಮೆರಸು:** (ಹೆಚ್ಚಿನ ಪ್ರಾಶಸ್ತ್ಯ ಕೊಡು): ಪೋಷಕರು ತಮ್ಮ ಮಕ್ಕಳನ್ನು ಅಗತ್ಯಕ್ಕಿಂತ ಹೆಚ್ಚು ತಲೆಮೇಲೆ ಮೆರಸಿಕೊಳ್ಳದೆ ಸಕಾಲಕ್ಕೆ ಸರಿಯಾದ ಬುದ್ಧಿಮಾತುಗಳನ್ನು ಹೇಳಬೇಕು.

**ಬಾಯಿತುರಿಕೆ:** (ಬಾಯಿಯ ಚಪಲ): ಕೆಲವು ಹೆಂಗಸರು ಅಕ್ಕ-ಪಕ್ಕದವರೊಂದಿಗೆ ಮಾತಾಡಿ ತಮ್ಮ ಬಾಯಿತುರಿಕೆ ತೀರಿಸಿಕೊಳ್ಳುತ್ತಾರೆ.

**ಕಡುಬಿನ ಸೋರೆ:** ತಮ್ಮದೇ ಲೋಕದಲ್ಲಿ ಮುಳುಗಿರುವ ಕಿರಿಯರಿಗೆ, ಹಿರಿಯರು ಏನಾದರೊಂದು ಕೆಲಸ ಹೇಳಿದಾಗ ಕಡುಬಿನ ಸೋರೆ ಇಟ್ಟಂತಾಗುತ್ತದೆ.

**ಪರಿಭವ:(ಸೋಲು):** ರಾಮನಿಂದ ರಾವಣನಿಗೆ ಪರಿಭವ ಉಂಟಾಯಿತು.

**ಭ್ರಮಿತನಾಗು:(ಭ್ರಮೆಗೆ ಸಿಲುಕಿದ):** ಪಾರ್ಥನು ತನ್ನ ಅಣ್ಣನ ಆಜ್ಞೆಯಲ್ಲಿ ಭ್ರಮಿತನಾಗಿದ್ದಾನೆ.

**ಹುರುಳು:(ಸಾಮರ್ಥ್ಯ):** ದ್ರೌಪದಿಯು ಭೀಮನಲ್ಲಿಯೂ ತನ್ನನ್ನು ಕಾಪಾಡುವ ಹುರುಳಿಲ್ಲದೆ ಹೋದರೆ ತಾನು ವಿಷ ಕುಡಿಯುವುದಾಗಿ ನಿರ್ಧರಿಸಿದಳು.

**ಬಸವಳಿ:(ಆಯಾಸಗೊಳ್ಳು):** ಲೋಹಿತಾಶ್ವನು ಹುಲ್ಲುಕಟ್ಟಿಗೆಗಾಗಿ ಕಾಡಿನಲ್ಲಿ ಅಲೆದು ಅಲೆದು ಬಸವಳಿದನು.

**ಬಸುರಬಗೆ:(ಹೊಟ್ಟೆ ಸೀಳು):** ಭೀಮನು ದುಶ್ಯಾಸನನ ಬಸುರನ್ನು ಬಗೆದನು.

**ಗಂಡುಗೂಸು:(ಗಂಡಸು):** ಹೆಂಡತಿಯ ಕಷ್ಟಕ್ಕಾಗಿ ಒಬ್ಬನೇ ಗಂಡುಗೂಸು ತನ್ನ ಪ್ರಾಣವನ್ನು ಲೆಕ್ಕಿಸದೇ ಶತ್ರುವಿನ ವಿರುದ್ಧ ಹೋರಾಡುತ್ತಾನೆ.

**ಕಡಿಖಂಡ : (ಕಡಿದು ತುಂಡು ಮಾಡು):** ಅಭಿಮನ್ಯು ರಣರಂಗದಲ್ಲಿ ಶತ್ರುಗಳ ತಲೆಗಳನ್ನು ಕಡಿಖಂಡ ಮಾಡಿದನು.

**ಕಣ್ಣುಕೆಂಪಾಗು:** ಪರೀಕ್ಷೆಯಲ್ಲಿ ಕಡಿಮೆ ಅಂಕ ಗಳಿಸಿದ್ದಕ್ಕೆ ನನ್ನ ತಂದೆ ಕಣ್ಣು ಕೆಂಪಾಗಿಸಿದರು.

**ಕೈಯೊಡ್ಡು:** ನಾವು ವಿನಾಕಾರಣ ಇನ್ನೊಬ್ಬರ ಮುಂದೆ ಕೈಯೊಡ್ಡಬಾದರು.

**ಮೊರೆಯಿಡು:** ನಾವು ಕಷ್ಟಬಂದಾಗ ದೇವರಲ್ಲಿ ಮೊರೆಯಿಡುತ್ತೇವೆ.

# ದ್ವಿರುಕ್ತಿಗಳು:

**ಬೇಗಬೇಗ:** ಶಾಲೆಗೆ ತಡವಾಯಿತೆಂದು ಮಕ್ಕಳು ಬೇಗಬೇಗ ಹೆಜ್ಜೆಹಾಕಿದರು.

**ಮೆಲ್ಲಮೆಲ್ಲನೆ:** ನಾಟಕ ಮುಗಿಯುತ್ತಿದ್ದಂತೆ ಜನ ಮೆಲ್ಲಮೆಲ್ಲನೆ ಮನೆಗೆ ನಡೆದರು.

**ಓಡೋಡಿ:** ತಾಯಿ ಯಶೋಧೆಯ ಕರೆಗೆ ಕೃಷ್ಣನು ಓಡೋಡಿ ಬಂದನು.

**ನಡೆನಡೆದು:** ಬಸ್ಸಿಲ್ಲದ ಕಾರಣ ವಿದ್ಯಾರ್ಥಿಗಳು ನಡೆನಡೆದು ಮನೆ ಸೇರಿದರು.

**ಪರಿಪರಿಯಾಗಿ:** ಕೃಷ್ಣನ ವಿಶ್ವರೂಪ ದರ್ಶನದಿಂದ ಭಯಗೊಂಡ ದೃತರಾಷ್ಟ್ರ ಭಗವಂತನನ್ನು ಪರಿಪರಿಯಾಗಿ ಪ್ರಾರ್ಥಿಸಿ ಕೋಪ ಶಮನಗೊಳಿಸಿದನು.

**ಹೌದುಹೌದು:** ವಾಗ್ಮಿಯೊಬ್ಬರ ನಿಖರವಾದ ಮಾತಿಗೆ ನೆರೆದವರು ಹೌದುಹೌದು ಎಂದು ತಲೆದೂಗಿದರು.

**ನೋಡುನೋಡು:** ಎಲ್ಲರೂ ನೋಡುನೋಡುತ್ತಿದ್ದಂತೆ ಬಸ್ಸು ಚಾಲಕನ ನಿಯಂತ್ರಣ ತಪ್ಪಿ ನದಿಗೆ ಹಾರಿತು.

**ನಲಿನಲಿದು:** ಶಾಲಾ ವಾರ್ಷಿಕೋತ್ಸವದಲ್ಲಿ ವಿದ್ಯಾರ್ಥಿಗಳು ನಲಿನಲಿದು ಕುಣಿದಾಡಿದರು.

**ಕುಣಿಕುಣಿದು:** ಪರೀಕ್ಷೆಯಲ್ಲಿ ಕಾಲೇಜಿಗೆ ಪ್ರಥಮ ಬಂದ ವಿದ್ಯಾರ್ಥಿಯು ಕುಣಿಕುಣಿದು ಸಂಭ್ರಮ ಹಂಚಿಕೊಂಡ.

**ತುತ್ತತುದಿ:** ತನ್ನ ಅಂಗವಿಕಲತೆಯ ನಡುವೆಯು ಅರುನಿಮಾ ಸಿನ್ಹಾ ಮೌಂಟ್ ಎವೆರೆಸ್ಟ್‌ನ ತುತ್ತತುದಿಯನ್ನು ತಲುಪಿ ಸಾಧನೆ ಗೈದರು.

**ಆಗಲಿಆಗಲಿ:** ಗುರುಗಳ ಮಾತಿಗೆ ಶಿಷ್ಯರೆಲ್ಲರೂ ಆಗಲಿಆಗಲಿ ಎಂದು ತಲೆಯಾಡಿಸಿದರು.

**ಬಿದ್ದೂಬಿದ್ದೂ:** ಯಕ್ಷಗಾನದಲ್ಲಿ ಹಾಸ್ಯಗಾರನ ಹಾಸ್ಯಚಟಾಕಿಗೆ ನೆರೆದವರೆಲ್ಲರೂ ಬಿದ್ದುಬಿದ್ದು ನಕ್ಕರು.

**ನಡುನಡುವೆ:** ವಿದ್ಯುತ್ ಅಭಾವದಿಂದ ಸ್ವಾಮೀಜಿಯವರ ಪ್ರವಚನದಲ್ಲಿ ನಡುನಡುವೆ ಅಡ್ಡಿ ಉಂಟಾಯಿತು.

**ಹಳೆಹಳೆಯ:** ನಮ್ಮೂರಿನಲ್ಲಿ ನಡೆದ ವಸ್ತು ಪ್ರದರ್ಶನದಲ್ಲಿ ಹಳೆಹಳೆಯ ಮಾದರಿಯ ವಸ್ತುಗಳು ನೋಡುಗರ ಗಮನ ಸೆಳೆದವು.

**ಬರೆಬರೆದು:** ಬರೆಬರೆದು ಕಲಿಯುವುದು ಓದಿ ನೆನಪಿಟ್ಟುಕೊಳ್ಳುವುದಕ್ಕಿಂತ ಹೆಚ್ಚು ಪರಿಣಾಮಕಾರಿ.

**ಹೆಜ್ಜೆಹೆಜ್ಜೆ:** ಪಾಂಡವರು ವನವಾಸದಲ್ಲಿ ಹೆಜ್ಜೆಹೆಜ್ಜೆಗೂ ಕಷ್ಟವನ್ನು ಅನುಭವಿಸಿದರು.

**ಸಹಸ್ರ ಸಹಸ್ರ:** ಮೈಸೂರು ದಸರಾದ ಜಂಬೂ ಸವಾರಿಯನ್ನು ನೋಡಲು ಜನ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಜಮಾಯಿಸಿದ್ದರು.

**ಒಳ್ಳಿತೊಳ್ಳಿತು:** ನನಗೆ ಒಳ್ಳೆಯ ನೌಕರಿ ದೊರಕಿದ ಸುದ್ದಿಯನ್ನು ತಿಳಿಸಿದಾಗ ತಾತ ಒಳ್ಳಿತೊಳ್ಳಿತೆಂದರು.
**ತಡೆತಡೆ:** ಅವಸರದಲ್ಲಿ ಹೊರಡಲು ಮುಂದಾದ ನನ್ನನ್ನು ನನ್ನ ಸ್ನೇಹಿತ ತಡೆತಡೆ ನಾನೂ ಬರುವೆನೆಂದನು.
**ಲೇಸುಲೇಸು:** ನಾನು ಈ ಬಾರಿ ಒಳ್ಳೆಯ ಫಲಿತಾಂಶ ಪಡೆದುಕೊಳ್ಳುವ ನಿರೀಕ್ಷೆಯಲ್ಲಿದ್ದೇನೆಂದು ತಂದೆಗೆ ತಿಳಿಸಿದಾಗ ತಂದೆ ಲೇಸುಲೇಸೆಂದರು.

## ಗುಣವಾಚಕಗಳು

ವಕ್ತ್ರಪದ್ಮ–ಪದ್ಮ
ಪೊಲ್ಲವಾರ್ತೆ–ಪೊಲ್ಲ
ಮಂಗಳ ಲಿಂಗ– ಮಂಗಳ
ಲಘುವರ್ತನ–ಲಘು
ಕುಜನರು–ಕು
ಅಪ್ರತಿಮಲ್ಲ–ಅಪ್ರತಿ
ಹೆಮ್ಮರ– ಹಿರಿದು
ಹಡೆದವ್ವ– ಹಡೆದ
ತುಂಬಿಬಾಳು–ತುಂಬಿ
ಗಟ್ಟಿಪಾದ–ಗಟ್ಟಿ
ಹಿತವಚನ–ಹಿತ
ಒಳನೋಟ–ಒಳ
ಕಲಿಭೀಮ–ಕಲಿ
ಕಡುಪಾಪ–ಕಡು
ದುರ್ಗಂಧ–ದುರ್
ದುರ್ಜನ– ದುರ್
ರಸಬಳ್ಳಿ–ರಸ
ಹುಸಿನಿದ್ದೆ–ಹುಸಿ
ಎಡಗಣ್ಣು–ಎಡ
ದೂರದೃಷ್ಟಿ–ದೂರ
ಕಿರುಹಾದಿ–ಕಿರು
ನಸುಮಿಸುಕು–ನಸು
ಕೆಳಹೊಟ್ಟೆ–ಕೆಳ
ಅಪಸ್ವರ–ಅಪ

## ವಿಭಕ್ತಿ ಪ್ರತ್ಯಯಗಳು

KSEEBSolutions.in

| | | ವಿಭಕ್ತಿ ಪ್ರತ್ಯಯ | | ಪ್ರಯೋಗ | |
|---|---|---|---|---|---|
| ವಿಭಕ್ತಿಗಳು | ಕಾರಕಾರ್ಥಗಳು | ಹೊಸಗನ್ನಡ | ಹಳಗನ್ನಡ | ಹೊಸಗನ್ನಡ | ಹಳಗನ್ನಡ |
| ಪ್ರಥಮಾ | ಕರ್ತ್ರರ್ಥ | ಉ | ಮ್ | ರಾಮನು | ರಾಮಮ್ |
| ದ್ವಿತೀಯಾ | ಕರ್ಮಾರ್ಥ | ಅನ್ನು | ಅಂ | ರಾಮನನ್ನು | ರಾಮನಂ |
| ತೃತೀಯಾ | ಕರಣಾರ್ಥ (ಸಾಧನಾರ್ಥ) | ಇಂದ | ಇಂ, ಇಂದಂ ಇಂದೆ | ರಾಮನಿಂದ | ರಾಮನಿಂ ರಾಮನಿಂದಂ |
| ಚತುರ್ಥೀ | ಸಂಪ್ರದಾನ (ಕೊಡುವಿಕೆ) | ಗೆ, ಇಗೆ, ಕ್ಕೆ, ಅಕ್ಕೆ | ಗೆ, ಕೆ, ಕ್ಕೆ | ರಾಮನಿಗೆ | ರಾಮಂಗೆ |
| ಪಂಚಮೀ | ಅಪಾದಾನ (ಅಗಲಿಕೆ) | ದೆಸೆಯಿಂದ | ಅತ್ತಣಿಂ ಅತ್ತಣಿಂದಂ | ರಾಮನ ದೆಸೆಯಿಂದ | ರಾಮನತ್ತಣಿಂ ರಾಮನತ್ತಣಿಂದ |
| ಷಷ್ಠೀ | ಸಂಬಂಧ | ಅ | ಅ | ರಾಮನ | ರಾಮನ |
| ಸಪ್ತಮೀ | ಅಧಿಕರಣ | ಅಲ್ಲಿ, ಇಲ್ಲಿ | ಒಳ್ ಎ, ಒಳು | ರಾಮನಲ್ಲಿ | ರಾಮನೊಳ್ ರಾಮನೊಳು |
| ಸಂಬೋಧನಾ | ಅಭಿಮುಖೀಕರಣ (ಕರೆಯುವಿಕೆ) | ಆ,ಏ ಇರಾ, ಈ | ಆ,ಏ,ಇರಾ ಈ | ರಾಮಾ ರಾಮನೇ | ರಾಮಾ ರಾಮನೇ |

# ಕ್ರಿಯಾಪದಗಳು

- ನೋಡಿದಳು ನೋಡಳು
- ನೋಡುವರು – ನೋಡರು
- ತರುವರು ತರರು
- ಹಾಡುವನು ಹಾಡನು
- ಆಡಿದರು – ಆಡರು
- ಆಡಿತು – ಆಡದು
- ಹೋಗುವಿರಿ – ಹೊಗರು
- ಕೇಳುವರು – ಕೇಳರು
- ತಿನ್ನುವಳು – ತಿನ್ನಳು
- ಬರುವುದು. – ಬಾರದು
- ಹಾಡುವೆ – ಹಾಡೆನು
- ನೋಡುವುದು – ನೋಡರು
- ಕರೆಯಿತು – ಕರೆಯರು
- ಮರೆಯುವೆ – ಮರೆಯನು
- ತಿನ್ನು – ತಿನ್ನ
- ಹೋಗುವುದು – ಹೋಗದು
- ನೋಡುವಳು – ನೋಡಳು
- ತಿಂದಿತು – ತಿನ್ನದು
- ಬರುತ್ತಾರೆ – ಬರರು
- ಮಾಡುವೆ – ಮಾಡೆ
- ಹೋಗುವಳು – ಹೋಗಳು
- ನಿಲ್ಲುವುದು – ನಿಲ್ಲದು
- ಕರೆಯುವರು – ಕರೆಯರು
- ಬರೆಯುವನು – ಬರೆಯನು

KSEEBSolutions.in

<u>ಅಭ್ಯಾಸ - ೧: ಈ ಕ್ರಿಯಾಪದಗಳ 'ಧಾತು'ವನ್ನು ಗುರುತಿಸಿರಿ:</u>

೧. ಓದಿದನು - ಓದು
೨ ತಿಂದನು - ತಿನ್ನು
೩. ಬಂದವು - ಬರ್
೪. ನಿಂತರು - ನಿಲ್ಲು
೫. ಹಾಡುವಳು - ಹಾಡು
೬ ತೋರಿಸು - ತೋರು
೭. ಕುಡಿಸು - ಕುಡಿ
೮. ನಲಿಯುತ್ತಾ - ನಲಿ
೯. ಕಟ್ಟಿಸು - ಕಟ್ಟು
೧೦. ಓಡುವರು - ಓಡು
೧೧. ಬೀಸುತ್ತಿತ್ತು ಬೀಸು
೧೨. ಹೇಳಿದಾಗ - ಹೇಳು.
೧೩. ನೋಡಿದನು - ನೋಡು
೧೪. ಬರೆಯುವಳು - ಬರೆ
೧೫, ಕಲಿಯುವರು - ಕಲಿ
೧೬. ಹೋದರು - ಹೋಗು
೧೭. ಹೋಯಿತು - ಹೋಗು
೧೮. ಅಳುತ್ತಿತ್ತು - ಅಳು
೧೯. ಬಾರಿಸುವಳು - ಬಾರಿಸು
೨೦. ನುಡಿಸುವಳು - ನುಡಿಸು
೨೧. ಕೇಳಿದರು - ಕೇಳು
೨೨. ಕೇಳುವರು - ಕೇಳು.

LearnCram.com

# ಗಾದೆ ವಿಸ್ತರಣೆ

## 1. ಹಾಸಿಗೆ ಇದ್ದಷ್ಟು ಕಾಲು ಚಾಚು.

ಹಾಸಿಗೆ ಇದ್ದಷ್ಟು ಕಾಲು ಚಾಚು ಎಂಬ ಗಾದೆ 'ಮಿತಿಯನ್ನು ಅರಿತು ಬಾಳು' ಎಂಬ ಉಪದೇಶವನ್ನು ನೀಡುತ್ತದೆ. 'ಆಸೆಯೇ ದುಃಖಕ್ಕೆ ಕಾರಣ' ಎನ್ನುವ ಮಾತನ್ನೂ 'ಆಸೆಯೇ ಪ್ರಗತಿಗೆ ಮೂಲ' ಎನ್ನುವ ಮಾತನ್ನೂ ನಾವು ಕೇಳಿದ್ದೇವೆ. ಇವೆರಡೂ ಪರಸ್ಪರ ವಿರುದ್ಧವಾಗಿ ಕಂಡರೂ, ಈ ಎರಡನ್ನೂ ಹೊಂದಿಸಿ, "ಆಸೆಯಿರಬೇಕು, ಆಸೆಗೆ ಮಿತಿಯಿರಬೇಕು' ಎಂದು ಹೇಳಬಹುದು. ಯಾವುದೇ ಕೆಲಸಕ್ಕೆ ಕೈ ಹಾಕಬೇಕಾದರೂ ನಮ್ಮ ಶಕ್ತಿ ಸಾಮರ್ಥ್ಯ, ಸೌಕರ್ಯಗಳನ್ನು ಗಮನಿಸಬೇಕು. ಶಕ್ತಿ ಮೀರಿ ಕೈ ಚಾಚುವುದಕ್ಕೆ ಹೋದರೆ ಅಥವಾ ಹಾಸಿಗೆಯನ್ನು ಮೀರಿ ಕಾಲು ಚಾಚಿದರೆ ಅಪಾಯ, ತೊಂದರೆ ತಪ್ಪಿದ್ದಲ್ಲ.

ಒಬ್ಬ ಬಡವ ತನ್ನ ಹೊಲ, ಗದ್ದೆ, ಮನೆ ಎಲ್ಲವನ್ನೂ ಮಾರಿ ಸಂಭ್ರಮದಿಂದ ತನ್ನ ಮಗಳ ಮದುವೆ ಮಾಡಲು ಸಿದ್ಧನಿದ್ದ. ಅವನ ಹಿತೈಷಿಯೊಬ್ಬನು ಹೀಗೆಲ್ಲಾ ಮಾಡಬೇಡ, ಇದ್ದಬದ್ದುದನ್ನೆಲ್ಲಾ ಮಾರಿ, ಮದುವೆ ಮಾಡಬೇಡ, ನಿನ್ನ ಕೈಯಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನೇ ಖರ್ಚು ಮಾಡು. ಶಕ್ತಿಮೀರಿ ಖರ್ಚು ಬೇಡ, ಹಾಸಿಗೆ ಇದ್ದಷ್ಟು ಕಾಲು ಚಾಚು' ಎಂದು ಹಿತನುಡಿದನು. ಹಾಗೆಯೇ ನಡೆದ ಬಡವ ಮುಂದೆ ಜೀವನದಲ್ಲಿ ಕಷ್ಟಪಡಲಿಲ್ಲ. ಈ ಮಾತು ಎಲ್ಲರಿಗೂ ಅನ್ವಯಿಸುವುದು.

3. ದೇಶ ಸುತ್ತಬೇಕು, ಕೋಶ ಓದಬೇಕು.

ಇದು ಒಂದು ಗಾದೆ ಮಾತು. ಗಾದೆಗಳನ್ನು ಜೀವನಾನುಭವದ ಸಾರವೆನ್ನುತ್ತಾರೆ. ಈ ಗಾದೆಯು ಆ ಹೇಳಿಕೆಯನ್ನು ಸಮರ್ಥಿಸುವಂತಿದೆ. ಜ್ಞಾನವನ್ನು ಗಳಿಸಬೇಕೆಂದಿರುವವನು ಪುಸ್ತಕಗಳನ್ನು ಓದಿದರಷ್ಟೇ ಸಾಲದು, ಹಲವು ದೇಶಗಳನ್ನು ಸುತ್ತಬೇಕು. ಬೇರೆ ಬೇರೆ ಜನರ ಸಂಪರ್ಕಮಾಡಬೇಕು. ಅವರ ಆಚಾರ, ವ್ಯವಹಾರ, ಆಹಾರ, ಅಭ್ಯಾಸಾದಿಗಳನ್ನು ತಿಳಿಯಲು ಪ್ರಯತ್ನಿಸಬೇಕು. ಆಯಾ ಪ್ರದೇಶಗಳ ಪ್ರಾಕೃತಿಕ ಸಂಪತ್ತು, ಮಳೆ, ಬೆಳೆ, ಹವಾಗುಣ, ಜನಜೀವನದ ರೀತಿನೀತಿಗಳನ್ನು ಅಭ್ಯಸಿಸಬೇಕು. ಆಯಾ ದೇಶಗಳ ಪ್ರದೇಶ ಪರಿಚಯ, ಇತಿಹಾಸಗಳ ಓದುವಿಕೆಯೊಂದಿಗೆ, ಇಂತಹ ಸುತ್ತಾಟ ಮಾಡುವುದರಿಂದ ಕಲಿಕೆಗೆ ಉತ್ತಮ ತಳಹದಿ ಲಭಿಸುತ್ತದೆ. ಅದಕ್ಕಾಗಿ ದೇಶ ಸುತ್ತಬೇಕು.

ಅದರಂತೆಯೇ ನಮ್ಮ ಶಬ್ದ ಸಂಪತ್ತನ್ನು ಜ್ಞಾನ ಸಂಪತ್ತನ್ನು ಹೆಚ್ಚಿಸಿಕೊಳ್ಳಲು ಕೋಶಗಳನ್ನು ಓದಿ ಅರ್ಥಮಾಡಿಕೊಳ್ಳ ಬೇ ಅದು ಶಬ್ದಕೋಶ (ನಿಘಂಟು) ಆಗಬಹುದು, ಇಲ್ಲವೇ ವಿಶ್ವಕೋ ಆಗಬಹುದು. ಅವುಗಳ ಓದುವಿಕೆಯಿಂದ ನಮ್ಮ ಜ್ಞಾನಾಭಿವೃದ್ಧಿಯಾಗುತ್ತದೆ. ಹೀಗಾಗಿ ಇದೊಂದು ಮಾರ್ಗದರ್ಶಕ ಗಾದೆಯಾಗಿದೆ.

KSEEBSolutions.com

## ಮಾದರಿ ಪ್ರಶ್ನೆಪತ್ರಿಕೆ – 1

## ದ್ವಿತೀಯ ಪಿಯುಸಿ – ಕನ್ನಡ (code : 01)

**ಅಂಕಗಳು : 100** **ಅವಧಿ : 3:15 ಗಂಟೆ**

### ಅ–ವಿಭಾಗ

**ಅ) ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ 1x10= 10**

1. ಹಗೆಯನ್ನು ಏನೆಂದು ಉಪೇಕ್ಷಿಸಬಾರದೆಂದು ಸೋಮನಾಥನು ಹೇಳಿದ್ದಾನೆ?
2. ತಾಯಿಯನ್ನು ಯಾವಾಗ ನೆನೆಯಬೇಕು?
3. ಯಾವುದಕ್ಕೆ ಸೆಳೆವಿಹುದೆಂದು ಬೇಂದ್ರೆಯವರು ಹೇಳಿದ್ದಾರೆ?
4. ವ್ಯರ್ಥವಲ್ಲದ ಕೆಲಸ ಯಾವುದು?
5. ದುರಾಸೆಯ ಹುಡುಗನನ್ನು ನಿರಾಕರಿಸಿದವರು ಯಾರು?
6. ಕನ್ನಡದ ಮೂಲಕ ಕಲಿತು ಶ್ರೇಷ್ಠ ವಿಜ್ಞಾನಿಯಾದವರು ಯಾರು?
7. ಭೂಮಿಯ ಮೇಲಿನ ಮೊದಲ ವಿಜ್ಞಾನಿ ಯಾರು?
8. ದುರ್ಗಪ್ಪ ಏನನ್ನು ಕೇಳಿ ಪಡೆಯಲು ಬಂದಿದ್ದನು?
9. ಕೃಷ್ಣೇಗೌಡನ ಆನೆಯ ಹೆಸರೇನು?
10. ಪೊಲೀಸರು ಏನೆಂದು ಮಹಜರು ಬರೆದುಕೊಂಡರು?

### ಆ–ವಿಭಾಗ

**ಅ)ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ: 2x4 =8**

11. ಸೀತೆಯ ತಲ್ಲಣಕ್ಕೆ ಕಾರಣವೇನು?
12. ಯಾರು ಮನೆ ಮನೆಯನ್ನು ತಿರಿಯುವುದಿಲ್ಲ? ಕೆರೆಯುದಕವನ್ನರಸದವರು ಯಾರು?
13. ಯಾವ ಸಂದೇಶವನ್ನು ನೀಡುವ ರೀತಿಯಲ್ಲಿ ಜೀಸಸ್ ಶಿಲುಬೆಯೇರಿದ್ದಾನೆ?
14. ಮುದುಕಿಯು ಯಾರನ್ನು, ಏನೆಂದು ಪ್ರಾರ್ಥಿಸುವಳು?
15. ಜನರನ್ನು ಕವಯತ್ರಿ ಯಾವ ಯಾವುದರಿಂದ ಪಾರು ಮಾಡುವುದಾಗಿ ಹೇಳಿದ್ದಾರೆ?

**ಆ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ: 2 x3 = 6**

16. ಸಿಂಹಬಾಲದ ಕೋತಿಗಳಿಗೆ ಒದಗಿದ ತೊಂದರೆ ಏನು?
17. ಧಣಿಪತ್ನಿ ಬೆಳ್ಳಿಲೋಟವನ್ನು ಹೇಗೆ ಪರಿಚಯಿಸಿದ್ದಾಳೆ?
18. ಮುದ್ದಣನನ್ನು ಮನೋರಮೆ ಹೇಗೆ ಉಪಚರಿಸಿದಳು?
19. ಹಳ್ಳಿಯ ಚಹಾದ ಅಂಗಡಿಗಳು ಹೇಗಿರುತ್ತವೆ?

**ಇ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ: 2x3 = 6**

20. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆ ಹೇಗೆ?
21. ಕಾಡಾನೆಗಳ ಹಾವಳಿಗೆ ಪ್ರಕಾಶ್ ನೀಡಿದ ಕಾರಣಗಳೇನು?
22. ಡ್ರೈವರ್‌ನ ತಲೆ ಜಜ್ಜಿ ಹೋದದ್ದು ಹೇಗೆ? ಆನೆ ಅದಕ್ಕೆ ಕಾರಣವೇ?
23. ಆನೆಯನ್ನು ಹದ್ದುಬಸ್ತಿನಲ್ಲಿಡುವುದರ ಬಗ್ಗೆ ವೇಲಾಯುಧನ ಅಪ್ಪ ಏನು ತಿಳಿಸಿದ್ದ?

## ಇ–ವಿಭಾಗ

**ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ: 3 x2 = 6**

24. ಅಸಾಧ್ಯಮಪ್ಪ ಮರುವಕ್ಕಮಿಲ್ಲ.
25. ಕುಸುಮ ವಾಸನೆಯಿಲ್ಲ ಕೂಡಲು ಸ್ಥಳವಿಲ್ಲ.
26. ಕುಳಿತು ಕೆಮ್ಮುವ ಪ್ರಾಣಿ.

**ಆ) ಯಾವುದಾದರೂ ಒಂದು ವಾಕ್ಯ ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ: 3x 1 = 3**

27. ವ್ಯಕ್ತಿಗಿಂತ ರಾಷ್ಟ್ರ ದೊಡ್ಡದು.
28. ಪದ್ಯಂ ವಧ್ಯಂ: ಗದ್ಯಂ ಹೃದ್ಯಂ

**ಇ) ಯಾವುದಾದರೂ ಒಂದು ವಾಕ್ಯ ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ: 3 x1 = 3**

29. ವೆಪನ್ ಸಾರ್, ವೆಪನ್ ನಮಗೆ ಮುಖ್ಯ.
30. ಹೊರಗಡೆಯಿಂದ ಎಕ್ಸ್‌ಪೋರ್ಟ್ ಆದವು.

## ಈ–ವಿಭಾಗ

**ಅ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ: 4 x 3 = 12**

31. ಪ್ರಮದವನದಲ್ಲಿ ರಾವಣ–ಸೀತೆಯರ ನಡುವೆ ನಡೆದ ಸಂಭಾಷಣೆಯನ್ನು ವಿವರಿಸಿ.
32. ದ್ರೌಪದಿ ಅಪಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿ.
33. ಮಾನವನ ಜೀವನದ ಸಾರ್ಥಕತೆಯ ಬಗ್ಗೆ ಬೇಂದ್ರೆ ಹೇಳಿರುವ ಮಾತುಗಳಾವುವು?
34. ಮಗ,ಸೊಸೆ ಮತ್ತು ಮೊಮ್ಮಗಳು ಮುದುಕಿಯನ್ನು ಹೇಗೆ ನಡೆಸಿಕೊಂಡರು?

**ಆ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ: 4 x 2 = 8**

35. ಬಸಲಿಂಗ ಡಾ|ತಿಮ್ಮಪ್ಪನವರ ಸೂಚನೆಗಳನ್ನು ಪಾಲಿಸದೆ ಇರಲು ಕಾರಣವೇನು?
36. ವಾಲ್ ಪರ್ಕೈಗೆ ಬಂದ ಮಾರ್ಷ್ ಅಲ್ಲಿ ಹೇಗೆ ನೆಲೆಯೂರಿದನು? ವಿವರಿಸಿ.
37. ಹೊರನಾಡಿನ ಕನ್ನಡಿಗರು ಇಲ್ಲಿ ನೆಲೆಸಿರುವಾಗ ಅವರ ಜವಾಬ್ದಾರಿಗಳೇನು?

**ಇ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ: 4 x 2 = 8**

38. ನಿರೂಪಕರು ಕೊಡಲಿ ವಸೂಲಿ ಮಾಡಲು ಹೋಗಲಿಲ್ಲವೇಕೆ? ವಿವರಿಸಿ.
39. ಪೋಸ್ಟ್‌ಮನ್ ಜಬ್ಬಾರನ ಬವಣೆಗಳನ್ನು ನಿರೂಪಕರು ಹೇಗೆ ವಿವರಿಸಿದ್ದಾರೆ?
40. ನಾಗರಾಜನ ನಿಗೂಢ ಸಾವಿನ ಬಗ್ಗೆ ಜನರ ಅಭಿಪ್ರಾಯಗಳೇನು?

## ಉ–ವಿಭಾಗ

**ಅ) ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ: 5 x 1 = 5**

41. ರಾಮನಿನಗಲ್ಚಿ ತರಾ
ನೀ ಮಾನಿನಿಗಿನಿತು ದುಃಖಮಂ ಪುಟ್ಟಿಸಿದೆಂ
ಕಾಮವ್ಯಾಮೋಹದಿನಾ
ಶಾಮುಖಮಂ ಪುದಿಯೆ ದುರ್ಯಶಃಪಟಹರವಂ

42. ಹಂಚಿಕೊಂಡಿದ್ದಾರೆ ಅಪ್ಪ ಅಮ್ಮನನ್ನು
ಇಲ್ಲಿ ದೊಡ್ಡಮಗನ ತಾವಲ್ಲಿ ಮುದುಕಿ, ಸದ್ಯ ಕನ್ನಡ ದೇಶ
ಮಗಸೊಸೆ ಹೊರಗೆ ಹೋದಾಗಲಾದರೂ ನಾಲ್ಕು ಮಾತಾಡಿ
ತೀರಿಸಿಕೊಳ್ಳುತ್ತಾಳೆ ಬಾಯತುರಿಕೆ,ಪಾಪ ಮುದುಕ ದೂರದ
ಅಸ್ಸಾಮಿನಲ್ಲಿ, ಅಲ್ಲಿಯ ಮಾತು ಅವನಿಗೆ ಸಸೇಮಿರ ಬರದು.

**ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಆರಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿರಿ** **2x6 =12**

**43. ಈ ಪದಗಳಿಗೆ** ಅರ್ಥ **ಬರೆಯಿರಿ :**
1. ಉರಗ 2. ಕಡಲು

**44. ಈ ಪದಗಳಿಗೆ** ನಾನಾರ್ಥ **ಬರೆಯಿರಿ :** 1. ಅಡಿ 2. ಬಗೆ

**45. ಈ ನುಡಿಗಟ್ಟುಗಳನ್ನು** ಸ್ವಂತ ವಾಕ್ಯದಲ್ಲಿ **ಬಳಸಿ ಬರೆಯಿರಿ :**
1. ಗಾಳಿಗೆ ತೂರು 2. ಕೈಕೊಡು

**46. ಈ ಕೆಳಗಿನ ಕ್ರಿಯಾಪದಗಳ ಕಾಲವನ್ನು ಗುರುತಿಸಿರಿ :**
1. ತಿನ್ನುವರು 2. ಬರುತ್ತವೆ

**47. ಈ ಕೆಳಗಿನ ಪದಗಳಲ್ಲಿನ** 'ಗುಣವಾಚಕ'**ಗಳನ್ನು ಗುರುತಿಸಿರಿ :**
1. ಎಳೆಬಿಸಿಲು 2. ದೊಡ್ಡಕಲ್ಲು

**48. ಈ ಪದಗಳಿಗೆ** ತದ್ಭವ **ರೂಪವನ್ನು ಬರೆಯಿರಿ :**
1. ಸಂಧ್ಯಾ 2. ಆಯುಷ್ಯ

**49. ಇವುಗಳ** ವಿಭಕ್ತಿ ಪ್ರತ್ಯಯಗಳನ್ನು **ಗುರುತಿಸಿ, ಹೆಸರಿಸಿರಿ:**
1. ಧರೆಯೊಳ್ 2. ಕುದುಪನನ್ನು

**ಆ) ಯಾವುದಾದರೂ ಒಂದನ್ನು ಕುರಿತು ಪ್ರಬಂಧವನ್ನು ಬರೆಯಿರಿ: 5x1 = 5**

50. ಕ್ರೀಡೆ ಮತ್ತು ನಮ್ಮ ಆರೋಗ್ಯ.
51. ಅರಣ್ಯ ಮತ್ತು ವನ್ಯ ಜೀವಿ ಸಂರಕ್ಷಣೆ.

**ಇ) ಪತ್ರಲೇಖನ: ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ: 4x1= 4**

52. ನಿಮ್ಮ ಬಡಾವಣೆಯಲ್ಲಿ ಗ್ರಂಥಾಲಯವನ್ನು ಆರಂಭಿಸುವಂತೆ ಮುಖ್ಯ ಗ್ರಂಥಪಾಲಕರಿಗೆ ಒಂದು ಪತ್ರ ಬರೆಯಿರಿ.
53. ನೀವು ಕೈಗೊಂಡ ಶೈಕ್ಷಣಿಕ ಪ್ರವಾಸಾನುಭವವನ್ನು ಕುರಿತು ನಿಮ್ಮ ಸ್ನೇಹಿತರಿಗೊಂದು ಪತ್ರ ಬರೆಯಿರಿ.

**ಈ) ಈ ಗಾದೆಗಳಲ್ಲಿ ಒಂದನ್ನು** ವಿಸ್ತರಿಸಿ: **4 x 1 = 4**

54. ಹಣಕ್ಕಿಂತ ಗುಣ ಮುಖ್ಯ.
55. ಸಂತೆಯ ಹೊತ್ತಿಗೆ ಮೂರು ಮೊಳ ನೇಯ್ದಂತೆ.

## ಮಾದರಿ ಪ್ರಶ್ನೆಪತ್ರಿಕೆ – 2

## ದ್ವಿತೀಯ ಪಿಯುಸಿ – ಕನ್ನಡ (code : 01)

**ಅಂಕಗಳು : 100** **ಅವಧಿ : 3:15 ಗಂಟೆ**

### ಅ–ವಿಭಾಗ

**ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ 1 x 10 = 10**

1 ಮಯತನೂಜೆ ಯಾರು?
2 ತತ್ತ್ವಜ್ಞಾನವನ್ನು ಕೇಳದವರು ಯಾರು
3 ಏನು ಬಂದೇ ತೀರುತ್ತದೆ ಎಂಬ ನಂಬಿಕೆಯಲ್ಲಿ ಜೀಸಸ್ ಶಿಲುಬೆ ಏರಿದ್ದಾನೆ?
4 ಹತ್ತಿಯ ಬೀಜಕ್ಕೆ ತಪ್ಪದ ಕರ್ಮ ಯಾವುದು
5 ವಾಲ್ ಪರ್ರೈಗೆ ಬಂದ ಬ್ರಿಟಿಷ್ ಪ್ರಜೆ ಯಾರು
6 ಅಬ್ದುಲ್ ಕಲಾಂ ಅವರ ಆತ್ಮ ಚರಿತ್ರೆಯ ಹೆಸರೇನು?
7 ಕಲಿಯುಗದ ಅಮೃತ ಯಾವುದು?
8 ಆನೆಯ ಮಾವುತನ ಹೆಸರೇನು?
9 ಆನೆಶಾಸ್ತ್ರದವನು ಏನೆಂದು ಭವಿಷ್ಯ ನುಡಿದಿದ್ದನು?
10 ಕೃಷ್ಣೇಗೌಡನನ್ನು ಕಾಡಿದ ಕಳವಳದ ಸಂಗತಿ ಯಾವುದು?

### ಆ–ವಿಭಾಗ

**ಅ) ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ: 2x4 = 8**

11. ಯಾವಾಗ ನಿಲಬಹುದು? ಯಾವಾಗ ನಿಲಲಾಗದೆಂದು ಬಸವಣ್ಣನವರು ತಿಳಿಸಿದ್ದಾರೆ?
12. ರಾಜ ಮತ್ತು ಮಂತ್ರಿಗಳಿಗೆ ಯಾವ ಅರ್ಹತೆಗಳಿರಬೇಕೆಂದು ಸೋಮನಾಥನು ಹೇಳಿದ್ದಾನೆ?
13. ಮುಂಬೈನ ಅವಸರದ ಜೀವನ ಚಿತ್ರಕ್ಕೆ ಎರಡು ಉದಾಹರಣೆ ನೀಡಿ.
14. ಮೊಮ್ಮಗಳ ಆತುರಕ್ಕೆ ಮುದುಕಿ ಏನೆಂದುಕೊಂಡಳು?
15. ಕವಯತ್ರಿ ಮುಗಿಲತ್ತ ಕೈ ಚಾಚಿ ಏಕೆ ನಿಂತಿದ್ದಾಳೆ?

**ಆ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ: 2x 3 = 6**

16. ಸಿದ್ಲಿಂಗಿಯು ಬಸಲಿಂಗನಿಗೆ ಏನನ್ನು ಹೇಳುತ್ತಲೇ ಇದ್ದಳು?
17. ಕಮಲ ಮೇಡಂ ವೈದ್ಯರ ಯಾವ ಸಲಹೆಯನ್ನು ರೂಢಿಸಿಕೊಂಡಿದ್ದರು?
18. ಧಣಿಯ ಬಡಿತದಿಂದ ಗುಂಡ ಬಂಧಮುಕ್ತನಾದುದು ಹೇಗೆ?
19. ಕತೆಯನ್ನು ಯಾವ ರಸಗಳಲ್ಲಿ ಹೇಳಲೆಂದು ಮುದ್ದಣ ಕೇಳಿದನು?

**ಇ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ: 2x 3 = 6**

20. ಮಠದವರಿಗೆ ಆನೆಗಿಂತ ವೇಲಾಯುಧನನ್ನು ಸಾಕಲು ತ್ರಾಸಾದುದೇಕೆ?
21. ಸೊರಗಿದ್ದ ಆನೆ0ಯನ್ನು ಕೃಷ್ಣೇಗೌಡ ಹೇಗೆ ಸಾಕಿದ?
22. ಡ್ರೈವರ್ ಅಬ್ಬಾಸ್, ಕ್ಲೀನರ್ ಕೃಷ್ಣರ ಸಾವಿಗೆ ಕಾರಣವೇನು?
23. ಅರಣ್ಯ ಇಲಾಖೆ0ಯವರು ನಾಗರಾಜನನ್ನು ಕುರಿತು ಏನೆಂದು ಜಾಹೀರಾತು ನೀಡಿದರು?

**ಇ–ವಿಭಾಗ**

**ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ : 3 x2 = 6**

24. ಕಲಿಭೀಮನೇ ಮಿಡುಕುಳ್ಳ ಗಂಡನು.
25. ತೃಣವೇ ಪರ್ವತವಲ್ಲವೇ.
26. ಹಿತ್ತಾಳೆಗಿಂತ ಬಲುಹೀನ.

**ಆ) ಯಾವುದಾದರೂ ಒಂದು ವಾಕ್ಯ ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ: 3x 1 = 3**

27. ಕನ್ನಡಿಗರು ಮೊದಲು ಕನ್ನಡಿಗರಾಗಬೇಕು.
28. ಮಗುವೇ ಮೊದಲ ವಿಜ್ಞಾನಿ.

**ಇ) ಯಾವುದಾದರೂ ಒಂದು ವಾಕ್ಯ ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ: 3x 1 = 3**

29. ಹದಿನಾಲ್ಕು ಇಂಜೆಕ್ಷನ್ ಹೊಟ್ಟೆಗೆ ಚುಚ್ಚುಸ್ಕೋತಿನಿ.
30. ಕೋವಿ ಸಿಕ್ಕಿದೆ, ಆದರೆ ಹೆಣ ಸಿಗಲಿಲ್ಲ.

**ಈ–ವಿಭಾಗ**

**ಅ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ : 4x 3 = 12**

31. ಭೀಮನು ದ್ರೌಪದಿಯನ್ನು ಹೇಗೆ ಸಂತೈಸಿದನು?
32. ‘ಬಂಗಾರ ನಿನಗೆ ಸ್ಥಿರವಲ್ಲ’ ಎಂಬ ಮಾತಿನ ಸ್ವಾರಸ್ಯವನ್ನು ವಿವರಿಸಿ.
33. ‘ಬೆಳಗು ಜಾವ’ ಕವನದ ಮೂಲಕ ಕವಿ ಬೇಂದ್ರೆ ಹೇಳಿರುವ ವಿಚಾರಗಳವುವು?
34. ಮುದುಕಿಯ ತಳಮಳ ‘ಒಂದು ಹೂ ಹೆಚ್ಚಿಗೆ ಇಡುತೀನಿ’ ಕವಿತೆಯಲ್ಲಿ ಹೇಗೆ ವ್ಯಕ್ತವಾಗಿದೆ?

**ಆ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ: 4 x 2 = 8**

35. ಬಸಲಿಂಗ ಎದುರಿಸುತ್ತಿದ್ದ ಸಮಸ್ಯೆಗಳಾವುವು?
36. ಧಣಿ ಹಾಗೂ ಹೊಳೆಯ ನಡುವಿನ ಸಮರವನ್ನು ತಿಳಿಸಿ.
37. ಹಳ್ಳಿಗರು ಹೊತ್ತನ್ನು ಹೇಗೆ ಕಳೆಯುತ್ತಾರೆ?ವಿವರಿಸಿ.

**ಇ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ: 4 x2 = 8**

38. ದುರ್ಗಪ್ಪನಿಗೆ ಲೈನ್‌ಮನ್ ಕೆಲಸ ರೋಸಿ ಹೋಗಲು ಕಾರಣವೇನು?
39. ಟೆಲಿಫೋನ್ ಲೈನ್‌ಮನ್ ತಿಪ್ಪಣ್ಣನ ಸಾವಿನ ಸಂದರ್ಭವನ್ನು ವಿವರಿಸಿ.
40. ತನ್ನ ಆನೆ ಬಗ್ಗೆ ಕೃಷ್ಣೇಗೌಡನಲ್ಲಿ ಬೇಸರ ಮೂಡಲು ಕಾರಣವೇನು?

**ಉ–ವಿಭಾಗ**

**ಅ) ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನುಬರೆಯಿರಿ: 5x 1 = 5**

41. ಪರುಷದ ಗೃಹದೊಳಗಿದ್ದು ತಿರಿವನೆ ಮನೆಮನೆಯ?
ತೊರೆಯೊಳಗಿದ್ದವನು, ತೃಷೆಯಾಗಲರಸುವನೆ ಕೆರೆಯುದಕವ?
ಮಂಗಳಲಿಂಗವ ಅಂಗದ ಮೇಲೆ ಇದ್ದು,
ಅನ್ಯಲಿಂಗಗಳ ನೆನೆವನೆ ನಿಮ್ಮ ಭಕ್ತನು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶರಾ?

42. ಬಾಗಿದ ಶಿರ ಕುತ್ತಿಗೆ0ಯಲ್ಲಿ
ಉಬ್ಬಿದೊಂದು ನರ,
0ಯಾತನೆಗೂ ನಲ್ವಾತನೇ
ನುಡಿವ ಮುಖ ಮುದ್ರೆ;
ತೆರೆದೆದೆ ಎನ್ನುವಂತಿದೆ;

**ಅ)ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಆರಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿರಿ 2x 6= 12**

**43. ಈ ಪದಗಳಿಗೆ** ಅರ್ಥ **ಬರೆಯಿರಿ :**

1. ಆಜ್ಯ 2. ಖಿಲ

**44. ಈ ಪದಗಳಿಗೆ** ನಾನಾರ್ಥ **ಬರೆಯಿರಿ :**

1. ನೆರೆ 2. ಸಾರು

**45. ಈ ಕೆಳಗಿನ ಕ್ರಿಯಾಪದಗಳ ಕಾಲವನ್ನು ಸೂಚಿಸಿ :**

1. ಹೋಗುವರು 2. ಬಂದಳು

**46. ಈ ನಾಮಪದಗಳ ವಿಶೇಷಣವನ್ನು ಗುರುತಿಸಿರಿ :**

1. ಎಳೆಮೀನು 2. ಸಿಹಿಮಾವು

**47. ಈ ನುಡಿಗಟ್ಟುಗಳನ್ನು** ಸ್ವಂತ ವಾಕ್ಯದಲ್ಲಿ **ಬಳಸಿ ಬರೆಯಿರಿ**

1. ತಲೆದೂಗು 2. ಕಾಲುಕೆರೆ

**48. ಈ ಕೆಳಗಿನ ಕ್ರಿಯಾಪದಗಳ ಧಾತು ಗುರುತಿಸಿ**

1. ತಿಂದನು 2. ಹೋಗುತ್ತಾರೆ.

**49. ಈ ಪದಗಳಿಗೆ** ತದ್ಭವ **ರೂಪವನ್ನು ಬರೆಯಿರಿ :**

1. ಶ್ರೀ 2. ಸಂಸ್ಥಾ

**ಆ) ಯಾವುದಾದರೂ ಒಂದನ್ನು ಕುರಿತು ಪ್ರಬಂಧವನ್ನು ಬರೆಯಿರಿ : 5 x 1 =5**

50. ನಗರ ನೈರ್ಮಲ್ಯ ಕಾಪಾಡುವಲ್ಲಿ ನಾಗರಿಕರ ಪಾತ್ರ.

51. ಕೆರೆಗಳ ಶುದ್ಧೀಕರಣದ ಅಗತ್ಯ.

**ಇ) ಪತ್ರಲೇಖನ: ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ : 4 x 1 = 4**

52. ವರ್ಗಾವಣೆ ಪತ್ರ ಕೋರಿ ಪ್ರಾಚಾ0ರ್ಯರಿಗೊಂದು ಪತ್ರ ಬರೆಯಿರಿ.

53. ನಿಮ್ಮ ಮೆಚ್ಚಿನ ಪುಸ್ತಕದ ಬಗ್ಗೆ ಗೆಳೆ0ಯರಿಗೆ ಒಂದು ಪತ್ರ ಬರೆಯಿರಿ.

**ಈ) ಈ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿ: 4 x 1 = 4**

54. ಬೆಳೆಯುವ ಸಿರಿ ಮೊಳಕೆಯಲ್ಲಿ.

55. ಕೈ ಕೆಸರಾದರೆ ಬಾಯಿ ಮೊಸರು

**ದ್ವಿತೀಯ ಪಿ.ಯು.ಸಿ ಮಾದರಿ ಪ್ರಶ್ನೆ ಪತ್ರಿಕೆ –3**

ವಿಷಯ : **ಕನ್ನಡ (01)**

**ಅವಧಿ : 3–15 ಗಂಟೆ** **ಗರಿಷ್ಠ ಅಂಕಗಳು : 100**

**ಅ – ವಿಭಾಗ**

**ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ : 1x10=10**

1. ಉರಿಲಿಂಗಪೆದ್ದಿಯ ವಚನಗಳ ಅಂಕಿತ ಯಾವುದು?
2. ಜಾಲಿಯ ಮರ ಯಾರಿಗೆ ಹಣ್ಣು ಕೊಡುವುದಿಲ್ಲ?
3. ಹೊರ ಲೋಕವನ್ನು ಪರಿಚಯಿಸಿ ಎಚ್ಚರಿಕೆ ಕೊಟ್ಟವಳು ಯಾರು?
4. ತೈಲ ತೀರಿದ್ದು ಹೇಗೆ ತಿಳಿಯುತ್ತದೆ?
5. ಸೂತಕವನ್ನು ಪರಿಹರಿಸಲು ಬಸಲಿಂಗ ಏನು ಮಾಡಿದ?
6. ಧಣಿಗಳ ಹೆಸರೇನು?
7. ಲೇ ಖಕರ ರ ಹೇ ಳು ವ ' ಹಳ್ಳಿಯ ಹೊ ಟೇಲಿನ ' ಹೆಸರೇನು?
8. ಆನೆಯ ಮಾವುತನ ಹೆಸರೇನು?
9. ಟೆಲಿಫೋನ್ ಕಂಬದ ಮೇಲೆ ಮೃತನಾದ ಲೈನ್‌ಮನ್ ಯಾರು?
10. ಆನೆ ಶಾಸ್ತ್ರದವನು ಏನೆಂದು ಭವಿಷ್ಯ ನುಡಿದಿದ್ದನು?

**ಆ – ವಿಭಾಗ**

**ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ : 2x4=8**

11. ರಾವಣ ನು ಜಾನಕಿ ಯ ನ್ನು ನೊ ಡಲ ು ಎಲ್ಲಿಗೆ? ಯಾರು ಬರುವಂತೆ ಬಂದನು?
12. ತೋಳ ಹೊರೆ ನಿಮಗೇಕೆ ಎಂದು ದ್ರೌಪದಿ ಹೇಳಲು ಕಾರಣವೇನು?
13. ಬಾನು ಮತ್ತು ಮರದ ನಿತ್ಯನೂತನತೆಯ ಬಗ್ಗೆ ಕವಿ ಏನು ಹೇಳಿದ್ದಾರೆ?
14. ಎಣ್ಣೆಯಲ್ಲಿ ನೆನೆದು ಉರಿಯುವ ಬತ್ತಿಯನ್ನು ಯಾವ ಯಾವುದಕ್ಕೆ ಹೋಲಿಸಲಾಗಿದೆ?
15. ಕವಯತ್ರಿ ನಗುವ ನಗು ಎಂತಹುದ್ದು?

**ಆ) ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ : 2x3=6**

16. ಮಾರ್ಷ್‌ನನ್ನು ಕಂಡು ಆದಿವಾಸಿಗಳು ಹೇಗೆ ಪ್ರತಿಕ್ರಿಯಿಸಿದರು?
17. ನಮ್ಮ ಸಾರ್ವಜನಿಕ ಶಾಲೆಗಳ ಬಗ್ಗೆ ಲೇಖಕರ ಅಭಿಪ್ರಾಯವೇನು?
18. ಪದ್ಮಶೇಷಾದ್ರಿ ಬಾಲಭವನದ ಮಕ್ಕಳಿಗೆ ಕಲಾಂ ಕೇಳಿದ ಪ್ರಶ್ನೆ ಯಾವುದು?
19. ಮನೋರಮೆ ಕತೆ ಹೇಳೆಂದು ಕೇಳಲು ಕಾರಣವೇನು?

**ಇ) ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ : 2x3=6**

20. ಕೃಷ್ಣೇಗೌಡನ ಆನೆ ಹುಟ್ಟಿ ಬೆಳೆದ ಬಗೆ ಹೇಗೆ?
21. ಡ್ರೈವರ್‌ನ ' ತಲ ' ಜಜ್ಜಿ ಹೊ ದದ ರ್ದ ಹೇ ಗೆ? ಆನೆ ಅದಕ್ಕೆ ಕಾರಣವೇ?

22. ನಾಯಿ ಕಚ್ಚಿದ್ದಲ್ಲಿ ಎಂದಾಗ ಜಬ್ಬಾರ್ ಇರಿಸು ಮುರಿಸಿನಿಂದ ಏನು ಹೇಳಿದನು?
23. ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹೀರಾತು ನೀಡಿದರು?

## ಇ – ವಿಭಾಗ

**ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ವಾಕ್ಯಗಳನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ : 3x2=6**

24. ಧರೆಹತ್ತಿ ಉರಿದಡೆ ನಿಲಲುಬಾರದು.
25. ನೀ ತಂಪ ನನ್ನ ತವರೀಗಿ.
26. ದಿನನಿತ್ಯ ಶಿಲುಬೆ ಏರಿದ್ದಾನೆ ಜೀಸಸ್.

**ಆ) ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ : 3x1=3**

27. ನೀರು ಬಿದ್ದರೆ ಕಣ್ಣು ಹೋಗುವ ಅಪಾಯವಿದೆ.
28. ಅನಕ್ಷರಸ್ಥರ ಪಾರ್ಲಿಮೆಂಟ್.

**ಇ) ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ : 3x1=3**

29. ಅಯ್ಯೋ ಯಾವ್ದೊ ಮದ್ವೆಮನೆ ಕಾಗದ ಸಾರ್.
30. ಈ ಕಂಬದೊಳಗೆ ಏನೋ ಸೇರ್‌ಕೊಂಡಿದೆ.

## ಈ – ವಿಭಾಗ

**ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : 4x3=12**

31. ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿ.
32. ಯಾವ ಯಾವ ಸಂಗತಿಗಳನ್ನು ಉಪೇಕ್ಷಿಸಬಾರದಾಗಿ ಸೋಮನಾಥನು ತಿಳಿಸಿದ್ದಾನೆ.
33. ತಂದೆ – ತಾಯಿಗಳು ಮಗುವಿಗೆ ಗೋಚರಿಸುವ ಬಗೆಯನ್ನು ವಿವರಿಸಿರಿ.
34. ಮುದುಕಿಯ ತಳಮಳ ಕವಿತೆಯಲ್ಲಿ ಹೇಗೆ ವ್ಯಕ್ತವಾಗಿದೆ?

**ಆ) ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : 4x2=8**

35. ಅಂತಾರಾಷ್ಟ್ರೀಯ ವಿದ್ಯಮಾನಗಳಿಂದಾಗಿ ವಾಲ್‌ಪರೈಗೆ ಒದಗಿದ ಸಮಸ್ಯೆಗಳೇನು?
36. ಅದೃಷ್ಟವನ್ನೇ ಅವಲಂಬಿಸಿ ಬದುಕಲು ಸಾಧ್ಯವಿಲ್ಲ ಎಂಬುದನ್ನು ಈ ಲೇಖನ ಹೇಗೆ ಪ್ರತಿಪಾದಿಸುತ್ತದೆ.
37. ಚಿನ್ನಮ್ಮ ಬೆಳ್ಳಿಲೋಟವನ್ನು ಮತ್ತೆ ಹೊಳೆಗೆ ಎಸೆಯಲು ಕಾರಣವೇನು? ವಿಶ್ಲೇಷಿಸಿ.

**ಇ) ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : 4x2=8**

38. ನಿರೂಪಕರು ಕೊಡಲಿ ವಸೂಲಿ ಮಾಡಲು ಹೋಗಲಿಲ್ಲವೇಕೆ? ವಿವರಿಸಿ.
39. ಪೋಸ್ಟ್‌ಮನ್ ಜಬ್ಬಾರನ ಬವಣೆಗಳನ್ನು ನಿರೂಪಕರು ಹೇಗೆ ವಿವರಿಸಿದ್ದಾರೆ?

40. ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣನ ಸಾವಿಗೆ ಕೃಷ್ಣೇಗೌಡರ ಆನೆ ಕಾರಣವೇ? ವಿವರಿಸಿ.

**ಉ – ವಿಭಾಗ**

**ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ : 5x1=5**

41. ಕರುಣಿಸುವೊಡೆನಗೆ ದಶಕಂ
ಧರ ಧುರದೊಳ್ ರಘುತನೂಜನಾಯುಃ ಪ್ರಾಣಂ।
ಬರೆಗಂ ಬಾರದಿರೆನುತುಂ
ಧರಿತ್ರಿಯಳ್ ಮೈಯನೊಕ್ಕು ಮೂರ್ಛೆಗೆ ಸಂದಳ್॥

42. ನಿಶೆಳಿದ ಉಷೆಯ, ಎಳನಗೆಯ ಬಗೆಗೆ, ಸೋತಿರಲು ಜಗವು ಸವಿಗೆ,
ಕಣ್ಣೆದಿರು ಒಂದು, ಕಟ್ಟಿತು ಕನಸು; ಕೂಗೊಂದು ಬಂತು ಕಿವಿಗೆ
ಮಕ್ಕಳಿರ ಕೇಳಿ, ರಸ ಕುಡಿಯಲೇಳಿ, ಹುಸಿನಿದ್ದೆಗಿದ್ದೆ ಸಾಕು.
ಈ ತುಂಬಿ ಬಾಳು, ತುಂಬಿರುವ ತನಕ, ತುಂತುಂಬಿ ಕುಡಿಯಬೇಕು.

**ಭಾಷಾಭ್ಯಾಸ**

**ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ ಆರಕ್ಕೆ ಸೂಚನೆಗನುಗುಣವಾಗಿ ಉತ್ತರಿಸಿ : 2x6=12**

43. ಈ ಪದಗಳ ಧಾತು ಗುರುತಿಸಿ : ಎದ್ದರು, ಪೇಳಲು
44. ಈ ಪದಗಳ ವಿಭಕ್ತಿಗಳನ್ನು ಹೆಸರಿಸಿ : ಭಾಷೆಗಳ, ಬದುಕನ್ನು
45. ಈ ಪದಗಳ ಗುಣವಾಚಕಗಳನ್ನು ಬರೆಯಿರಿ : ನಲ್ಗತೆ, ತಿರುಳ್ಗನ್ನಡ
46. ಯಾವುದಾದರೂ ಎರಡು ದ್ವಿರುಕ್ತಿಗಳನ್ನು ಬರೆಯಿರಿ.
47. ಈ ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ : ಗಾಳಿಸುದ್ಧಿ, ಪರಂಧಾಮಕ್ಕೆ ಹೋಗು.
48. ಈ ಪದಗಳ ನಾನಾರ್ಥ ಬರೆಯಿರಿ: ಉರುಳು, ಬೆಳೆ
49. ಈ ಪದಗಳ ತತ್ಸಮ – ತದ್ಭವ ಬರೆಯಿರಿ : ಶಿರ, ಅಗ್ನಿ

**ಆ) ಈ ಕೆಳಗಿನವುಗಳಲ್ಲಿ ಒಂದನ್ನು ಕುರಿತು ಪ್ರಬಂಧವನ್ನು ಬರೆಯಿರಿ : 5x1=5**

50. ಮೂಢನಂಬಿಕೆಗಳು
51. ಹೆಚ್ಚುತ್ತಿರುವ ವೃದ್ಧಾಶ್ರಮಗಳು.

**ಇ) ಪತ್ರಲೇಖನ : ಕೆಳಗಿನವುಗಳಲ್ಲಿ ಒಂದನ್ನು ಕುರಿತು ಪತ್ರ ಬರೆಯಿರಿ : 4x1=4**

52. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಆಹ್ವಾನಿಸಿ ನಿಮ್ಮ ಗೆಳೆಯ/ಗೆಳತಿಗೆ ಪತ್ರ ಬರೆಯಿರಿ.
53. ವರ್ಗಾವಣೆ ಪತ್ರ ಕೋರಿ ಪ್ರಾಂಶುಪಾಲರಿಗೆ ಪತ್ರ ಬರೆಯಿರಿ.

**ಈ) ಈ ಕೆಳಗಿನ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿ ಬರೆಯಿರಿ : 4x1=4**

54. ಅಡಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು.
55. ತಾಳಿದವನು ಬಾಳಿಯಾನು.

# ದ್ವಿತೀಯ ಪಿಯುಸಿ ಮಾದರಿ ಪ್ರಶ್ನೆ ಪತ್ರಿಕೆ---4

ಸಮಯ:3:15ಗಂ ಅಂಕಗಳು:100

**ಅ– ವಿಭಾಗ**

**I. ಒಂದು ವಾಕ್ಯದಲ್ಲಿ ಉತ್ತರಿಸಿರಿ. 1x10=10**

1. ಸೀತೆಯನ್ನು ರಾವಣ ಎಲ್ಲಿರಿಸಿದ್ದನು?
2. ದುರ್ಗಂಧ ಬಿಡದಿರುವುದು ಯಾವುದು?
3. ಮೊಮ್ಮಗಳು ಏನು ಮಾಡುತ್ತಿದ್ದಳು?
4. ಕವಯಿತ್ರಿ ಯಾರಲ್ಲಿ ಮೊರೆ ಇಡುತ್ತಾಳೆ?
5. ಅದೃಷ್ಟದ ಪ್ರಶ್ನೆ ಬಂದಾಗ ಯಾರು ನೆನಪಾಗುತ್ತಾರೆ?
6. ಕನ್ನಡದ ಸಮಸ್ಯೆಗಳಿಗೆ ಪರಿಹರ ದೊರಕಿಸಲು ನಾವು ಏನು ಮಾಡಬೇಕು?
7. ಕಲ್ಲಪ್ಪನವರ ಗೂಢ ಪ್ರಶ್ನೆ ಯಾವುದು?
8. ಕೃಷ್ಣೇಗೌಡನನ್ನು ಕಾಡಿದ ಕಳವಳವೇನು?
9. ನಿರೂಪಕರ ಕೊಡಲಿಯ ಆಕಾರ ಹೇಢಗಿತ್ತು?
10. ರಮೇಶ ಬಾಬು ಯಾರು?

**ಆ–ವಿಭಾಗ**

**II. ಬೇಕಾದ ಮೂರು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

**2x3=6**

11. ಕಾಡಾನೆಗಳ ಹಾವಳಿಗೆ ಪ್ರಕಾಶ ನೀಡಿದ ಕಾರಣವೇನು?
12. ದುರ್ಗಪ್ಪ ಏಕೆ ಬಂದಿರಬಹುದೆಂದು ನಿರೂಪಕರು ಯೋಚಿಸಿದರು?
13. ನಾಗರಾಜ ದುರ್ಗಪ್ಪನ ಮೇಲೆ ಏನೆಂದು ರೇಗಿದನು?
14. ನಿರೂಪಕರು ಕ್ಯಾಲಿಕ್ಯುಲೇಟರಿನಲ್ಲಿ ಲೆಕ್ಕಹಾಕಿ ಜಬ್ಬಾರಗೆ ಏನೆಂದರು?

**III. ಬೇಕಾದ ಮೂರು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

**2x3=6**

15. ಕಲಾಂ ಅವರ ದೃಷ್ಟಿಯಲ್ಲಿ ಕನಸುಗಳು ಏನಾಗುತ್ತವೆ?
16. ಸಿದ್ಲಿಂಗಿ ಏಕೆ ರಾದ್ಧಾಂತ ಮಾಡಿದಳು?
17. ಮಾರ್ಷನನ್ನು ಕಂಡು ಆದಿವಾಸಿಗಳು ಹೇಗೆ ಪ್ರತಿಕ್ರಿಯಿಸಿದರು?
18. ಯಾವ ವಸ್ತುಗಳು ನೀರು ಪಾಲಾದವು?

**IV. ಬೇಕಾದ ನಾಲ್ಕು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

**2x4=8**

19. ಮಾಗುವ ಜೀವದ ಪಯಣ ಹೇಗಿರುತ್ತದೆ?
20. ಧನ ಮತ್ತು ಸುತನ ವಿಷಯದಲ್ಲಿ ಸೋಮನಾಥನ ಅಭಿಪ್ರಾಯವೇನು?
21. ಕೊಲಲಕ್ಷಮರೆಂದು ದ್ರೌಪದಿ ಯಾರನ್ನು ಕುರಿತು ಹೇಳಿದ್ದಾಳೆ?
22. ಮಗುವಿನ ಪಾಲಿಗೆ ತಾಯಿ ಹೇಗಿದ್ದಾಳೆ?

23.ಕ್ರಿಸ್ಮಸ್ ಮನೆಗೆ ಏನನ್ನು ಹೊತ್ತು ತಂದಿದೆ?

**ಇ–ವಿಭಾಗ**

**V. ಯಾವುದಾದರು ಒಂದು ವಾಕ್ಯದ ಸಂದರ್ಭ ಸೂಚಿಸಿ,ಸ್ವಾರಸ್ಯ ತಿಳಿಸಿರಿ.**

**3x1=3**

24. "ಧಣಿಯವರು ಎಂದಾದರೂ ಒಕ್ಕಲು ಮಕ್ಕಳನ್ನು ನಂಬಿದ್ದುಂಟೆ"

25. "ಬಸಲಿಂಗಪ್ಪ ನೀನು ತುಂಬಾ ಇಳ್ಳೆಯವನು"

**VI. ಯಾವುದಾದರು ಎರಡು ವಾಕ್ಯಗಳ ಸಂದರ್ಭ ಸೂಚಿಸಿ,ಸ್ವಾರಸ್ಯ ತಿಳಿಸಿರಿ.**

**3x2=6**

26. "ತಾನೆ ಲಘು ಮಾಡಿ ಲಘುವಾದನಯ್ಯ"

27. "ಕಡುಪಾಪಂ ಬಲು ಮೀಯಲಾತ ಶುಚಿಯೇ"

28."ನೀ ತಂಪ ನನ್ನ ತವರೀಗಿ"

**VII. ಯಾವುದಾದರು ಒಂದು ವಾಕ್ಯದ ಸಂದರ್ಭ ಸೂಚಿಸಿ,ಸ್ವಾರಸ್ಯ ತಿಳಿಸಿರಿ.**

**3x1=3**

29. "ಹೌದಾ ಎಲ್ಲಿ ಕಚ್ಚಿತೋ ಜಬ್ಬಾರ"

30."ನಮ್ಮ ಕಡೆ ಕೆಮ್ಮು ಕಾಲಿಂಗ್ ಬೆಲ್ ಇದ್ದಹಾಗೆ"

**ಈ–ವಿಭಾಗ**

**VIII. ಬೇಕಾದ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ.**

**4x3=12**

31. ಪ್ರಮದವನದಲ್ಲಿ ರಾವಣ–ಸೀತೆಯರ ನಡುವೆ ನಡೆದ ಸಂಭಾಷಣೆಯನ್ನು ವಿವರಿಸಿ.

32.ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿ.

33.ಬೆಳಗು ಜಾವ ಕವನದ ಮೂಲಕ ಕವಿ ಬೇಂದ್ರೆ ಹೇಳಿರುವ ವಿಚಾರಗಳಾವವು?

34.ನಗರದ ಅಬ್ಬೆಪಾರಿ ಜೀವನದ ಕುರಿತು ಕವಿತೆಯಲ್ಲಿ ಹೇಗೆ ಮೂಡಿಬಂದಿದೆ?

**IX. ಬೇಕಾದ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ.**

**4x2=08**

35.ಕೇಂದ್ರ ಸರ್ಕಾರದ ಕಚೇರಿಯಲ್ಲಿ ಕನ್ನಡತನವಿಲ್ಲದಿರುವ ಬಗ್ಗೆ ಹಾಮಾನಾ ಹೇಗೆ ಟೀಕಿಸಿದ್ದಾರೆ?

36.ಕಲಾಂ ಅವರು ಯಾವಾಗಲೂ ಸಾಧ್ಯತೆಗನ್ನು ಅರಸುವ ಆಶಾಜೀವಿ ಹೇಗೆ?ವಿವರಿಸಿ.

37.ಒಳ್ಳೆಯದೊಂದು ಕಥೆ ಹೇಳಬೇಕೆಂದಾಗ ಮುದ್ದಣನ ಪ್ರತಿಕ್ರಿಯೆಯೇನು?

**X. ಬೇಕಾದ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ.**

**4x2=08**

38.ದುರ್ಗಪ್ಪ ನಿರೂಪಕರ ಬಳಿಗೆ ಬಂದ ಸಂದರ್ಭವನ್ನು ವಿವರಿಸಿರಿ.

39.ಪುಟ್ಟಯ್ಯ ತನ್ನ ಅಸಹಾಯಕತೆಯನ್ನು ಹೇಗೆ ವಿವರಿಸಿದ್ದಾನೆ?

40. ಆನೆಯು ಇಲ್ಲಿ ಬಾಯಿಲ್ಲದ ಜನರ ಸಂಕೇತವಾಗಿರುವುದನ್ನು ವಿಶ್ಲೇಷಿಸಿ.

## ಉ–ವಿಭಾಗ

**XI. ಯಾವುದಾದರು ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ 5x1=10**

41. "ರಾಮನಿನಗಲ್ಚಿ ತಂದಾ
ನೀ ಮಾನಿನಿಗಿನಿತು ದು:ಖಮಂ ಪುಟ್ಟಿಸಿದಂ
ಕಾಮವ್ಯಾಮೋಹದಿನಾ
ಶಾಮುಖಮೋ ಮದಿಯೆ ದುರ್ಯಶಃಪಟಹರವಂ"

**ಅಥವಾ**

42. "ಹಂಚಿಕೊಂಡಿದ್ದಾರೆ ಅಪ್ಪ ಅಮ್ಮನನ್ನು
ಇಲ್ಲಿ ದೊಡ್ಡಮಗನ ತಾವಲ್ಲಿ ಮುದುಕಿ, ಸದ್ಯ ಕನ್ನಡ ದೇಶ
ಮಗ ಸೊಸೆ ಹೊರಗೆ ಹೋದಾಗಲಾದರೂ ನಾಲ್ಕು ಮಾತಾಡಿ
ತೀರಿಸಿಕೊಳ್ಳುತ್ತಾಳೆ ಬಾಯತುರಿಕೆ,ಪಾಪ ಮುದುಕ ದೂರದ
ಅಸ್ಸಾಮಿನಲ್ಲಿ,ಅಲ್ಲಿಯ ಮಾತು ಅವನಿಗೆ ಸಸೇಮಿರ ಬರದು"

**ಭಾಷಾಭ್ಯಾಸ**

**XII. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರು ಆರಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿರಿ**

**2x6=12**

43.ಈ ಪದಗಳಿಗೆ ಅರ್ಥ ಬರೆಯಿರಿ

ಅ)ತೃಷೆ, ಆ)ಇನ

44. ಈ ಪದಗಳಿಗೆ ಸಮಾನಾರ್ಥಗಳನ್ನು ಬರೆಯಿರಿ.

ಅ)ತೊರೆ ಆ)ಸೂಳ್

45.ಈ ಕೆಳಗಿನ ಕ್ರಿಯಾಪದಗಳಲ್ಲಿ 'ಧಾತು' ಗುರುತಿಸಿರಿ.

ಅ)ಎದ್ದರು ಆ)ನಿಂತರು

46. ಈ ಕೆಳಗಿನ ನುಡಿಗಟ್ಟುಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿರಿ.

ಅ)ಸಿಂಹಸ್ವಪ್ನ ಆ)ಹೌದೌದು

47.ಈ ಪದಗಳಿಗೆ ತತ್ಸಮ–ತದ್ಭವ ಬರೆಯಿರಿ.

ಅ)ಆರ್ಯ ಆ)ವೀದಿ

48.ಈ ಕೆಳಗಿನ ಪದಗಳಲ್ಲಿ ಗುಣ ವಾಚಕಗಳನ್ನು ಗುರುತಿಸಿ.

ಅ)ಅಪಸ್ವರ ಆ)ಹಡೆದವ್ವ

49. ಇವುಗಳ ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿರಿ.

ಅ)ಅದೃಷ್ಟದಿಂದ ಆ)ಅದ್ಯದೊಳ್

**XIII. ಯಾವುದಾದರೂ ಒಂದನ್ನು ಕುರಿತು ಪ್ರಬಂದ ಬರೆಯಿರಿ.**

**5x1=10**

50.ಸಮಾನ ಶಿಕ್ಷಣದ ಅವಶ್ಯಕತೆಗಳು

51. ಮೂಢನಂಬಿಕೆಗಳು

**XIV. ಪತ್ರಲೇಖನ: ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ.**

**4x1=04**

52. ಪುಸ್ತಕಗಳನ್ನು ಅಂಚೆಯ ಮೂಲಕ ಕಳುಹಿಸುವಂತೆ ಪುಸ್ತಕಾಲಯಕ್ಕೆ ಒಂದು ಪತ್ರ ಬರೆಯಿರಿ.

53. ಪರೀಕ್ಷಾ ಸಿದ್ದತೆಯನ್ನು ಕುರಿತು ಪೋಷಕರಿಗೆ ಒಂದು ಪತ್ರ ಬರೆಯಿರಿ.

**XV. ಈ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿರಿ.**

**4x1=04**

54. ಅಜ್ಜಿ ಇಲ್ಲದ ಮನೆ; ಮಜ್ಜಿಗೆ ಇಲ್ಲದ ಊಟ.

55. ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆಯೇ ಮೇಲು.

====0====

# ದ್ವಿತೀಯ ಪಿಯುಸಿ ಮಾದರಿ ಪ್ರಶ್ನೆ ಪತ್ರಿಕೆ---5

ಸಮಯ:3:15ಗಂ ಅಂಕಗಳು:100

**ಅ– ವಿಭಾಗ**

**XVI. ಒಂದು ವಾಕ್ಯದಲ್ಲಿ ಉತ್ತರಿಸಿರಿ. 1x10=10**

1. ಲಕ್ಷದಾರಿಗಳ ಚದುರಂಗದಾಟ ಯಾವುದು?
2. ಯಾರನ್ನು ಯೋಗಿ ಎನ್ನಬಹುದು?
3. ತಾಯಿಯನ್ನು ಯಾವುದಕ್ಕೆ ಹೋಲಿಸಲಾಗಿದೆ?
4. ಅನಾಥ ಭಾವವನ್ನು ಸೂಚಿಸುವ ಪದ ಯಾವುದು?
5. ರೇಂಜರ್ ಆನೆಗೆ ಶೂಟ್ ಮಾಡುವಂತೆ ಯಾರಿಗೆ ಸೂಚಿಸಿದರು?
6. ಕೃಷ್ಣೇಗೌಡರ ಆನೆಯ ಹೆಸರೇನು?
7. ಹಲೇಕೊಪ್ಪದ ಸುಬ್ಬಣ್ಣನಿಗೆ ಆನೆಯಿಂದಾದ ತೊಂದರೆ ಯಾವುದು?
8. ಲೇಖಕಿಯ ಪತಿ ಯಾವ ತೊಂದರೆಯಿಂದ ಬಳಲಿದರು?
9. ಭಾಷೆ ಯಾವುದಕ್ಕಿಂತ ದೊಡ್ಡದು?
10. ಭೂಮಿಯ ಮೇಲಿನ ಮೊದಲ ವಿಜ್ಞಾನಿ ಯಾರು?

**ಆ–ವಿಭಾಗ**

**XVII. ಬೇಕಾದ ಮೂರು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. 2x3=6**

11. ಮಗು ಏನನ್ನು ಕುಡಿದು ಬೆಳೆದಿದೆ?
12. ಯಾವ ಗುಣಗಳಿಲ್ಲದವನು ಢಾಂಭಿಕನೆನಿಸುತ್ತಾನೆ?
13. ಗಂಡರ್ರೈವರು ಮೂರುಲೋಕದ ಗಂಡರಾರು?ಹೆಸರಿಸಿ.
14. ಮುದುಕ ಏನೆಂದು ಗೋಗರೆಯುತ್ತಾನೆ?
15. ದನಗಳಿಗೆ ಜನಗಳಿಗೆ ಏನೇನಿಲ್ಲ?

**XVIII. ಬೇಕಾದ ಮೂರು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. 2x3=6**

16. ಕಲಾಂ ಅವರ ಪಂಚಾಕ್ಷರೀ ಮಂತ್ರ ಯಾವುದು?
17. ಯಾವ ಉತ್ತರಗಳಿಂದ ಲೇಖಕಿಗೆ ತೃಪ್ತಿಯಾಗಲಿಲ್ಲ?
18. ತ್ರಿಭಾಷಾ ಸೂತ್ರದ ಬಳಕೆ ಹೇಗಿರಬೇಕು?
19. ಕಥೆಯನ್ನು ಯಾವ ರಸಗಳಲ್ಲಿ ಹೇಳಲೆಂದು ಮುದ್ದಣ ಕೇಳಿದನು?

**XIX. ಬೇಕಾದ ಮೂರು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. 2x3=6**

20. ಆನೆ ಸಾಕುವುದರ ಬಗ್ಗೆ ಜನರ ನಂಬಿಕೆ ಏನಾಗಿತ್ತು?
21. ಆನೆ ಮರತಳ್ಳುವ ಬಗೆಯನ್ನು ನಿರೂಪಕರು ಹೇಗೆ ವಿವರಿಸಿದ್ದಾರೆ?
22. ಆನೆಯನ್ನು ಹದ್ದುಬಸ್ತಿನಲ್ಲಿಡುವುದರ ಬಗ್ಗೆ ವೇಲಾಯುಧನ ಅಪ್ಪ ಏನು ತಿಳಿಸಿದ್ದ?
23. ಕಾಡಪ್ಪಶೆಟ್ಟರು ಯಾವ ವರ್ತಮಾನವನ್ನು ಮುಟ್ಟಿಸಿದರು?

**ಇ–ವಿಭಾಗ**

**XX. ಯಾವುದಾದರು ಒಂದು ವಾಕ್ಯದ ಸಂದರ್ಭ ಸೂಚಿಸಿ,ಸ್ವಾರಸ್ಯ ತಿಳಿಸಿರಿ. 3x1=3**

24. "ಈ ಮುಟ್ಟುವಿಕೆ ನಾನು ಊಹಿಸದೆ ಇದ್ದದ್ದನ್ನು ಮಾಡಿದೆ"
25. "ನಿನಗಾವ ರಸದೊಳಿಷ್ಟಂ?"

**XXI. ಯಾವುದಾದರು ಒಂದು ವಾಕ್ಯದ ಸಂದರ್ಭ ಸೂಚಿಸಿ,ಸ್ವಾರಸ್ಯ ತಿಳಿಸಿರಿ. 3x1=3**

26. "ಕದಡಿದ ಸಲಿಲಂ ತಿಳಿವಂದದಿ"
27. "ಕುಸುಮ ವಾಸನೆಯಿಲ್ಲ ಕೂಡಲು ಸ್ಥಳವಿಲ್ಲ"

28. "ಮುಳುಗಿರಲಿ ಮುಪ್ಪು ಚಿಂತನದಿ"

**XXII. ಯಾವುದಾದರು ಒಂದು ವಾಕ್ಯದ ಸಂದರ್ಭ ಸೂಚಿಸಿ,ಸ್ವಾರಸ್ಯ ತಿಳಿಸಿರಿ. 3x1=3**

29. "ಇತ್ತ ಮುಖಹಾಕಲಿ,ಅದನ್ನು ಕೋವೀಲೆ ಹೊಡಿತೀನಿ"

30. "ಕುಶಾಲಿಗಂತ ಸೊಂಡಿಲು ಬೀಸಿದರೆ ಸಾಕಲ್ಲ".

**ಈ–ವಿಭಾಗ**

**XXIII. ಬೇಕಾದ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ. 4x2=8**

31. ಮಂಗಳಲಿಂಗದ ಮಹತ್ವವನ್ನು ಹೇಗೆ ವಿವರಿಸಲಾಗಿದೆ?
32. ಭೀಮನು ದ್ರೌಪದಿಯನ್ನು ಹೇಗೆ ಸಂತೈಸಿದನು?
33. ಗರತಿ ತವರಿಗೆ ಏನೆಂದು ಹರಸುತ್ತಾಳೆ?
34. ಶಿಲುಬೆಗೇರಿದ ಜೀಸಸ್ನ ದೇಹ ಏನನ್ನು ಹೇಳುವಂತಿದೆ?

**XXIV. ಬೇಕಾದ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ. 4x2=08**

35. ಅಭಿವೃದ್ಧಿ ತರುವ ಪ್ರಾಕೃತಿಕ ನಾಶದ ಸ್ವರೂಪವನ್ನು ಪಠ್ಯದ ಹಿನ್ನೆಲೆಯಲ್ಲಿ ಚರ್ಚಿಸಿರಿ.
36. ಧನಿ ಹಾಗೂ ಹೊಳೆಯ ನಡುವಿನ ಸಮರವನ್ನು ಚಿತ್ರಿಸಿರಿ.
37. ಹಳ್ಳಿಗರು ಹೊತ್ತನ್ನು ಹೇಗೆ ಕಳೆಯುತ್ತಾರೆ?

**XXV. ಬೇಕಾದ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ. 4x2=08**

38. ಕಾಡಾನೆಗಳ ಹಾವಳಿ ನಿರೂಪಕರ ಅನುಭವಕ್ಕೆ ಬಂದುದು ಹೇಗೆ?
39. ನಾಗರಾಜನ ನಿಗೂಢ ಸಾವಿ ಬಗ್ಗೆ ಜನರ ಅಭಿಪ್ರಾಯವೇನು?
40. ತನ್ನ ಆನೆಯ ಬಗ್ಗೆ ಕೃಷ್ಣೇಗೌಡರಿಗೆ ಬೇಸರ ಮೂಡಲು ಕಾರಣವೇನು?

**ಉ–ವಿಭಾಗ**

**XXVI. ಯಾವುದಾದರು ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ 5x1=10**

41. "ಇನ್ನು ಹುಟ್ಟದೆಯಿರಲಿ ನಾರಿಯ
ರೆನ್ನವೋಲು ಭಂಗಿತರು ಭುವನದೊ
ಳಿನ್ನು ಜನಿಸಲುಬೇಡ ಗಂಡರು ಭೀಮಸನ್ನಿಭರು
ಎನ್ನವೊಲು ಪಾಂಡವರವೊಲು ಸಂ
ಪನ್ನ ದುಃಖಿಗಳಾರು ನವೆದರು
ಮುನ್ನಿನವರೊಳಗೆಂದು ದ್ರೌಪದಿ ಹಿರಿದು ಹಲುಬಿದಳು."

**ಅಥವಾ**

42. "ಹಚ್ಚಿಟ್ಟ ಹಣತೆಯಲಿ
ಹೊಸೆದು ಬತ್ತಿಯಾಗಿರುವ ಹತ್ತಿ
ಮಿಂದು ಮಡಿಯುಟ್ಟ ಭಕ್ತನಂತೆ
ತೈಲದಲಿ ಮುಳುಗಿ,ತಮದ ಕತ್ತಲ ಸುಡುತ
ಬೆಳಕ ಬಟ್ಟೆಯ ತೊಡುವ,ಯೋಗಿಯಂತೆ!
ತನ್ನೊಡಲ ನೂಲಿನಲೇ ಜೇಡ
ತನ್ನ ಜೀವಜಾಲದ ಕೇಡ
ತಾನೇ ಬಗೆದು ಪ್ರಾಣ ನೀಗುವಂತೆ"

**ಭಾಷಾಭ್ಯಾಸ**

**XXVII. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರು ಆರಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿರಿ. 2x6=12**

43. ಈ ಪದಗಳಿಗೆ ಅರ್ಥ ಬರೆಯಿರಿ

ಅ)ಪಥ ಆ)ಮಾರ

44. ಈ ಪದಗಳಿಗೆ ಸಮಾನಾರ್ಥಗಳನ್ನು ಬರೆಯಿರಿ.
ಅ)ಅಡಿ ಆ)ಬಂಟ
45. ಈ ಕೆಳಗಿನ ಕ್ರಿಯಾಪದಗಳಲ್ಲಿ 'ಧಾತು' ಗುರುತಿಸಿರಿ.
ಅ)ತಿಂದನು ಆ)ಕಟ್ಟಿಸು
46. ಈ ಕೆಳಗಿನ ನುಡಿಗಟ್ಟುಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿರಿ.
ಅ)ಬೇರೂರು ಆ)ಒಡಕುಬಾಯಿ
47. ಈ ಪದಗಳಿಗೆ ತತ್ಸಮ–ತದ್ಭವ ಬರೆಯಿರಿ.
ಅ)ಪಳ್ಳ ಆ)ವಿದ್ಯೆ
48. ಈ ಕೆಳಗಿನ ಪದಗಳಲ್ಲಿ ಗುಣ ವಾಚಕಗಳನ್ನು ಗುರುತಿಸಿ.
ಅ)ದಯಾಮೃತ್ಯು ಆ)ರಸಬಳ್ಳಿ
49. ಇವುಗಳ ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿರಿ.
ಅ)ರಾವಣನೇ ಆ)ರಾಮನಿಂ

**XXVIII. ಯಾವುದಾದರೂ ಒಂದನ್ನು ಕುರಿತು ಪ್ರಬಂಧ ಬರೆಯಿರಿ. 5x1=10**

50. ನಗರ ನೈರ್ಮಲ್ಯ ಕಾಪಾಡುವಲ್ಲಿ ನಾಗರೀಕರ ಪಾತ್ರ.
51. ಕೃಷಿ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಅಗತ್ಯ.

**XXIX. ಪತ್ರಲೇಖನ: ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ. 4x1=04**

52. ವರ್ಗಾವಣೆ ಪತ್ರ, ಅಂಕ ಪಟ್ಟಿ ಕೋರಿ ಪ್ರಾಚಾರ್ಯರಿಗೆ ಒಂದು ಪತ್ರ ಬರೆಯಿರಿ.
53. ಶೈಕ್ಷಣಿಕ ಪ್ರವಾಸಕ್ಕೆ ಅನುಮತಿ ಕೋರಿ ತಂದೆ/ತಾಯಿ/ಪೋಷಕರಿಗೆ ಒಂದು ಪತ್ರ ಬರೆಯಿರಿ.

**XXX. ಈ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿರಿ. 4x1=04**

54. ಬುದ್ಧಿವಂತ ಬರೀತಾನೆ,ವಿವೇಕಿ ಅರಿತಾನೆ.
55. ಸಜ್ಜನರ ದುಃಖ ;ದುರ್ಜನರ ಸಿರಿ ಶಾಶ್ವತವಲ್ಲ.

===0===

## ದ್ವಿತೀಯ ಪಿ.ಯು.ಸಿ ಮಾದರಿ ಪ್ರಶ್ನೆ ಪತ್ರಿಕೆ –6

**ವಿಷಯ : ಕನ್ನಡ (01)**

**ಅವಧಿ : 3–15 ಗಂಟೆ** **ಗರಿಷ್ಠ ಅಂಕಗಳು : 100**

### ಅ – ವಿಭಾಗ

**ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ: 1x10=10**

1. ಲಕ್ಷ್ಮೀಧರ ಎಂದರೆ ಯಾರು?
2. ಬ್ಯಾಸಗಿ ದಿವಸಕ್ಕ ಯಾವ ಮರ ತಂಪು?
3. ಜಗವು ಯಾವುದಕ್ಕೆ ಸೋತಿದೆ?
4. ಕ್ರಿಸ್ಮಸ್ ಸಂದರ್ಭದಲ್ಲಿ ಹತ್ತಿ ಯಾವ ಕೆಲಸ ಮಾಡಿದೆ?
5. ಬದುಕುಳಿಯುವ ಛಲತೊಟ್ಟ ಹಾಡು ಹಕ್ಕಿ ಯಾವುದು?
6. ಧಣಿಗಳ ದಾಂಪತ್ಯಕ್ಕೆ ಯಾವುದು ಮ ೂಕಸ ಾಕ್ಷಿಯಾಗಿತು?
7. ಎಂತಹ ಗದ್ಯದಲ್ಲಿ ಕತೆ ಹೇಳೆಂದು ಮನೋರಮೆ ಕೇಳುವಳು?
8. ಹಾಳಾಗಿದ್ದ ಕೊಡಲಿ ನೋಡಲು ಹೇಗೆ ಕಾಣುತ್ತಿತ್ತು?
9. ನಿರೂಪಕರ ಇಕಾಲಜಿಸ್ಟ್ ಗೆಳೆಯ ಯಾರು?
10. ಆನೆಶಾಸ್ತ್ರದವನು ಏನೆಂದು ಭವಿಷ್ಯ ನುಡಿದಿದ್ದನು?

### ಆ – ವಿಭಾಗ

**ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ: 2x4=8**

11. ಶಿವಪಥವನ್ನು ಅರಿಯದವನನ್ನು ಹೇಗೆ ವಿಡಂಬಿಸಲಾಗಿದೆ?
12. ಭೀಮನೇ ಮಿಡುಕುಳ್ಳ ಗಂಡನೆಂದು ದ್ರೌಪದಿ ಏಕೆ ಭಾವಿಸಿದಳು?
13. ಕ್ರಿಸ್ತ ಎಲ್ಲೆಲ್ಲಿ ಶಿಲುಬೆಗೇರಿದ್ದಾನೆ?
14. ಹತ್ತಿಯ ಬೀಜ ಲೋಕದ ಹಿತಕ್ಕೆ ತನ್ನನ್ನು ಹೇಗೆ ಸುಟ್ಟುಕೊಳ್ಳುತ್ತದೆ?
15. ದನಗಳಿಗೆ ಜನಗಳಿಗೆ ಏನೇನು ಇಲ್ಲ?

**ಆ) ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ: 2x3=6**

16. ಮುಸುರೆ ಪಾತ್ರೆಗಳ ಒಡೆಯ ಏನೆಂದು ಯೋಚಿಸಿದನು?
17. ಕಲ ಾಂ ಅವರ ' ಬದು ಕಿನ ' ಮ ಂತ್ರ ' ಯ ಾವುದು ?
18. ಸಂಸ್ಕೃತ–ಕನ್ನಡಗಳು ಸೇರಿದರೆ ಹೇಗೆ ಸೊಗಯಿಸುತ್ತದೆ?
19. ರೋಗಿಗಳ ಹಾಗೂ ಪಥ್ಯ ಮಾಡುವವರ ಜಿದ್ದು ಎಂತಹುದು?

**ಇ) ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ: 2x3=6**

20. ಸೊರಗಿದ್ದ ಆನೆಯನ್ನು ಕೃಷ್ಣೇಗೌಡ ಹೇಗೆ ಸಾಕಿದ?
21. ಜಬ್ಬಾರ್ ನಿರೂಪಕರಿಗೆ ಅಂಚೆ ವಿಲೇವಾರಿ ಬಗ್ಗೆ ಅಸಡ್ಡೆಯಿಂದ ಏನು ಹೇಳಿದ?
22. ಆನೆಯನ್ನು ಇತರರಿಗೆ ದಾಟಿಸಿಬಿಡಲು ಕೃಷ್ಣೇಗೌಡನಿಗಿದ್ದ ತೊಡಕುಗಳೇನು?

23. ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹೀರಾತು ನೀಡಿದರು?

**ಇ – ವಿಭಾಗ**

**ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ವಾಕ್ಯಗಳನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ: 3x2=6**

24. ಕುಸುಮ ವಾಸನೆಯಿಲ್ಲ ಕೂಡಲು ಸ್ಥಳವಿಲ್ಲ.
25. ತುಂಬಿರುವ ತನಕ ತುಂತುಂಬಿ ಕುಡಿಯಬೇಕು.
26. ಮಾತೇ ಮರೆತು ಹೋಗಿದೆ ಕಣೆ.

**ಆ) ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ: 3x1=3**

27. ದುರಂತದ ಮೂಲ ಬೀಜಗಳು ಚಹಾಗಿಡದ ರೂಪದಲ್ಲಿ ಬಂದವು.
28. ಅನಕ್ಷರಸ್ಥರ ಪಾರ್ಲಿಮೆಂಟು.

**ಇ) ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ: 3x1=3**

29. ಆನೆಗೂ ಮಾನ ಮರ್ಯಾದೆ ಇರುತ್ತೆ ತಿಳುಕೋ.
30. ಕೋವಿ ಸಿಕ್ಕಿದೆ. ಆದರೆ ಹೆಣ ಸಿಗಲಿಲ್ಲ.

**ಈ – ವಿಭಾಗ**

**ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ: 4X3=12**

31. ತನಗೊದಗಿದ ಅಪಾಯವನ್ನು ನಿವಾರಿಸಿಕೊಳ್ಳುವ ದ್ರೌಪದಿಯ ಜಾಣ್ಮೆಯನ್ನು ವಿವರಿಸಿ.
32. ಜ್ಞಾನವನ್ನು ಹೊಂದುವ ಮಾರ್ಗ ಯಾವುದೆಂಬುದನ್ನು ಸೋಮನಾಥನು ಹೇಗೆ ವಿವರಿಸಿದ್ದಾನೆ?
33. ಜನಪದರು ತಾಯಿ–ತವರಿನ ಬಗೆಗೆ ಇರಿಸಿಕೊಂಡ ಪ್ರೀತಿ ಎಂತಹದು?
34. ನಗರ ಜೀವನದ ಯಾಂತ್ರಿಕ ವಿವರಗಳು 'ಮುಂಬೈ ಜಾತಕ'ದಲ್ಲಿ ಹೇಗೆ ಚಿತ್ರಿತಗೊಂಡಿದೆ? ವಿವರಿಸಿ.

**ಆ) ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ: 4X2=8**

35. ಡಾ. ತಿಮ್ಮಪ್ಪನವರ ವ್ಯಕ್ತಿತ್ವವನ್ನು ನಿರೂಪಿಸಿ.
36. ಬದುಕಿನಲ್ಲಿ ಆಯ್ಕೆಗಳು ಮುಖ್ಯ ಎಂಬುದನ್ನು ಲೇಖಕಿ ನೇಮಿಚಂದ್ರ ಹೇಗೆ ನಿರೂಪಿಸಿದ್ದಾರೆ?
37. ಕನ್ನಡಿಗರ ಉದ್ಯೋಗದ ತೀವ್ರತರ ಸವರ ಸ್ಯೆಗ ಸಂಬಂಧಿಸಿದ ಹಾ.ಮಾ.ನಾಯಕರ ಅಭಿಪ್ರಾಯಗಳನ್ನು ತಿಳಿಸಿ.

**ಇ) ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ: 4X2=8**

38. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆಯನ್ನು ವಿವರಿಸಿ. ಅದು ಪೇಟೆಯಲ್ಲಿ ಏನು ಮಾಡುತ್ತಿತ್ತು?
39. ನಿದ್ರಿಮ ಂಪರಿ ನಲ್ಲಿದ್ದ ಡ್ರೈವರ ಪರ ರ ಧಾಮ ಕ್ಕೆ ಹೋದ ಸಂದರ್ಭವನ್ನು ವಿವರಿಸಿ.

40. ಕೃಷ್ಣೇಗೌಡನ ' ಆನ ' ಕತ ರೆ ಯ ಲ್ಲಿ ಬರು ವ ಭ್ರಷ್ಟ್ರವ್ಯವಸ್ಥೆಯ ಚಿತ್ರಣವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಉ – ವಿಭಾಗ**

**ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ: 5x1=5**

41. ಇವರಂ ಪ್ರಾಣಪ್ರಿಯರಂ
ನೆವಮಿಲ್ಲದೆ ಕರ್ಮವಶಮೆ ನೆವಮೆನೆ ಕಂದ
ರ್ಪವಿಮೋಹದಿಂದಗಲ್ಚಿದೆ
ನವಿವೇಕಿಯೆನೆನ್ನ ಕುಲದ ಪೆಂಪಳಿವಿನೆಗಂ

42. ಪರುಷದ ಗೃಹದೊಳಗಿದ್ದು, ತಿರಿವನೆ ಮನೆಮನೆಯ?
ತೊರೆಯೊಳಗಿದ್ದವನು, ತೃಷೆಯಾಗಲರಸುವನೆ ಕೆರೆಯುದಕವ?
ಮಂಗಳಲಿಂಗ ಅಂಗದ ಮೇಲೆ ಇದ್ದು,
ಅನ್ಯಲಿಂಗಗಳ ನೆನೆವನೆ ನಿಮ್ಮ ಭಕ್ತನು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ?

**ಭಾಷಾಭ್ಯಾಸ**

**ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ ಆರಕ್ಕೆ ಸೂಚನೆಗನುಗುಣವಾಗಿ ಉತ್ತರಿಸಿ: 2x6=12**

43. ಈ ಪದಗಳಿಗೆ ಅರ್ಥ ಬರೆಯಿರಿ : ಪರಿಭವ, ವಕ್ತಾರ
44. ಈ ಪದಗಳ ತದ್ಭವರೂಪ ಬರೆಯಿರಿ : ನಿದ್ರಾ, ಭಂಗ
45. ಈ ಪದಗಳ ವಿಭಕ್ತಿಗಳ ಹೆಸರನ್ನು ಬರೆಯಿರಿ : ಬೆಳಗಿಂದ, ಸಲಿಲಂ
46. ಈ ಪದಗಳ ನಾನಾರ್ಥ ಬರೆಯಿರಿ : ಕಲಿ, ಫಲ
47. ಈ ಪದಗಳಲ್ಲಿನ ಗುಣವಾಚಕಗಳನ್ನು ಗುರುತಿಸಿರಿ : ಗೂಗೆಮರಿ, ದುರ್ಗಂಧ
48. ಇವುಗಳ ಕಾಲಸೂಚಕಗಳನ್ನು ಬರೆಯಿರಿ : ಬೀಸುತ್ತಿತ್ತು, ನೋಡಿತು
49. ಈ ಕ್ರಿಯಾಪದಗಳ ನಿಷೇಧರೂಪ ಬರೆಯಿರಿ : ತಿನ್ನು, ಬರೆವೆನು

**ಆ) ಈ ಕೆಳಗಿನವುಗಳಲ್ಲಿ ಒಂದನ್ನು ಕುರಿತು ಪ್ರಬಂಧವನ್ನು ಬರೆಯಿರಿ: 5x1=5**

50. ರಕ್ತದಾನ ಮತ್ತು ಮತ್ತು ನೇತ್ರದಾನಗಳ ಮಹತ್ವ.
51. ಸ್ವಚ್ಛ ಭಾರತ.

**ಇ) ಪತ್ರಲೇಖನ : ಕೆಳಗಿನವುಗಳಲ್ಲಿ ಒಂದನ್ನು ಕುರಿತು ಪತ್ರ ಬರೆಯಿರಿ: 4x1=4**

52. ನಿಮ್ಮ ಪ್ರವಾಸಾನುಭವದ ಕುರಿತು ಗೆಳೆಯ/ ಗೆಳತಿಗೊಂದು ಪತ್ರ ಬರೆಯಿರಿ.
53. ನಿಮ್ಮೂರಿನಲ್ಲಿರುವ ತ್ಯಾಜ್ಯವನ್ನು ವಿಲೇವಾರಿ ಮಾಡುವ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಗೊಂದು ಪತ್ರ ಬರೆಯಿರಿ.

**ಈ) ಈ ಕೆಳಗಿನ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿ ಬರೆಯಿರಿ: 4x1=4**

54. ಹಣಕ್ಕಿಂತ ಗುಣ ಮುಖ್ಯ .
55. ಹಾಸಿಗೆ ಇದ್ದಷ್ಟು ಕಾಲು ಚಾಚು

====0====

# ದ್ವಿತೀಯ ಪಿ.ಯು.ಸಿ ಮಾದರಿ ಪ್ರಶ್ನೆ ಪತ್ರಿಕೆ –7

ವಿಷಯ : **ಕನ್ನಡ (01)**

**ಅವಧಿ : 3–15 ಗಂಟೆ** **ಗರಿಷ್ಠ ಅಂಕಗಳು : 100**

## ಅ – ವಿಭಾಗ

**. ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ: 1x10=10**

1. ರಾವಣನ ಮಾತು ಕೇಳಿ ಮೂರ್ಛೆ ಹೋದವರು ಯಾರು?
2. ಯಾರ ಬಸುರನ್ನು ಬಗೆಯುವುದಾಗಿ ಭೀಮ ಹೇಳುತ್ತಾನೆ?
3. ಕುಳಿತು ಕೆಮ್ಮುವ ಪ್ರಾಣಿ ಯಾರು?
4. ಚಿತ್ತವನ್ನು ಯಾವುದಕ್ಕೆ ಹೋಲಿಸಲಾಗಿದೆ?
5. ಹಾ.ಮಾ.ನಾಯಕರ ಮೊದಲ ಪ್ರೀತಿ ಯಾವುದು?
6. ಕನ್ನಡವು ಕಸ್ತೂರಿಯಲ್ಲವೆ ಎಂದವರಾರು?
7. ಬಾಯಿಚಪಲ ಯಾರಿಗೆ ಜಾಸ್ತಿ ಇರುತ್ತದೆ?
8. ಹಾಳಾಗಿದ್ದ ಕೊಡಲಿ ನೋಡಲು ಹೇಗೆ ಕಾಣುತ್ತಿತ್ತು?
9. ಪುಟ್ಟಯ್ಯ ಯಾರು?
10. ಆನೆಶಾಸ್ತ್ರದವನು ಏನೆಂದು ಭವಿಷ್ಯ ನುಡಿದಿದ್ದನು?

## ಆ – ವಿಭಾಗ

**ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ: 2x4=8**

11. ರಾವಣನು ಸೊಕ್ಕಿನಿಂದ ಸೀತೆಯನ್ನುದ್ದೇಶಿಸಿ ಆಡಿದ ಮಾತುಗಳಾವುವು?
12. ಯಾವಾಗ ನಿಲಬಹುದು? ಯಾವಾಗ ನಿಲಲಾಗದು?
13. ಯ ಾರಿಗ ೆ ಷಡ ್ರಸ ಾನ್ನವನಿ ಕ್ಕಿ ಉಪರ ಠೆ ೇಗವಿ ಲ್ಲ? ಏಕೆ?
14. ಮ ುಂಬೈ ಅವಸ ರ ದ ್ ಜೀವನ ್ ಚಿತ್ರಕ ್ಕೆ ಎರಡ ು ಉದಾಹರಣೆ ನೀಡಿ
15. ದನಗಳಿಗೆ ಜನಗಳಿಗೆ ಏನೇನು ಇಲ್ಲ?

**ಆ) ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ: 2x3=6**

16. ಈಗ ಹಾಡು ಹಕ್ಕಿಗಳ ನೆಲೆ ಯಾವುದು?
17. ಪದ್ಮ ಶೇಷಾದ್ರಿ ಬಾಲಭವನದ ಮಕ್ಕಳಿಗೆ ಕಲಾಂ ಕೇಳಿದ ಪ್ರಶ್ನೆ ಯಾವುದು?
18. 'ನೀರಿಳಿಯದ ಗಂಟಲಲ್ಲಿ ಕಡುಬನ್ನು ತುರುಕಿದಂತಾಯ್ತು' ಎಂದು ಮನೋರಮೆ ಹೇಳಿದ್ದೇಕೆ?
19. ಹಳ್ಳಿಯ ಚಹಾದ ಅಂಗಡಿಯೆಂದರೆ ಹೇಗಿರುತ್ತದೆ?

**ಇ) ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ: 2x3=6**

20. ಜಬ್ಬಾರ್ ತಾನು ವಟೆ ರ್ನ ರಿ ಆಸ್ಪತ್ರೆಗ ೆ ಬಂದು ದಕ್ಕೆ ಕೊಟ್ ್ಟ ಕಾರಣವೇನು?
21. ಡ್ರ ೈವರ ್ ಅಬ್ಬಾಸ್, ಕ್ಲೀನರ ್ ಕೃಷ್ಣರ ್ ಸಾವಿಗ ೆ ಕಾರಣವೇನು?
22. ಆನೆಯನ್ನು ಹದ್ದುಬಸ್ತಿನಲ್ಲಿಡುವುದರ ಬಗ್ಗೆ ವೇಲಾಯುಧನ ಅಪ್ಪ ಏನು ತಿಳಿಸಿದ್ದ?
23. ಗುರುತುಸಿಗದ ಹೆಣ ವೇಲಾಯುಧನದು ಎಂದು ತಿಳಿದಮೇಲೆ ಪೋಲೀಸರಿಗೆ ಬಂದ ಪೀಕಲಾಟವೇನು?

**ಇ – ವಿಭಾಗ**

**ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ವಾಕ್ಯಗಳನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ: 3x2=6**

24 ಅನ್ಯ ಲಿಂಗಗಳ ನೆನೆವನೆ ನಿಮ್ಮ ಭಕ್ತನು.

25. ಕೆಲವಂ ಬಲ್ಲವರಿಂದ ಕಲ್ತು..

26. ಹಬ್ಬಲಿ ಅವರ ರಸಬಳ್ಳಿ.

**ಆ) ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ: 3x1=3**

27. ಕೋತಿಗಳಿಗೆ 'ದಯಾಮೃತ್ಯು' ಕರುಣಿಸಲೂ ಕಾನೂನಿನಲ್ಲಿ ಅವಕಾಶವಿಲ

28. ಕನ್ನಡಿಗರು ಮೊದಲು ಕನ್ನಡಿಗರಾಗಬೇಕು.

**ಇ) ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ: 3x1=3**

29. ದುಣ್ಣಮುಂಡೆ ಆನೆಯನ್ನು ತೂಗೋದಕ್ಕೆ ತಕ್ಕಡಿ ಎಲ್ಲಿಂದ ತರ್ತೀರ ಹೇಳಿ.

30. ಆನೆ ಬೇಲಿ ದಾಟಿ ಹೋಯ್ತು ಸಾರ್.

**ಈ – ವಿಭಾಗ**

**ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ: 4x3=12**

31. ರಕ್ಷಿಸಬೇಕಾದವರೆ ಭಕ್ಷಕರಾದರೆ ಒದಗುವ ವಿಘಟನೆಯನ್ನು ಬಸವಣ್ಣನವರು ಹೇಗೆ ಚಿತ್ರಿಸಿದ್ದಾರೆ?

32. ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿರಿ.

33. ಜನಪದರು ತಾಯಿ–ತವರಿನ ಬಗೆಗೆ ಇರಿಸಿಕೊಂಡ ಪ್ರೀತಿ ಎಂತಹದು?

34. ನಗರ ಜೀವನದ ಯಾಂತ್ರಿಕ ವಿವರಗಳು ಕವಿತೆಯಲ್ಲಿ ಹೇಗೆ ಚಿತ್ರಿತಗೊಂಡಿದೆ? ವಿವರಿಸಿ.

**ಆ) ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ: 4x2=8**

35. ಬಸಲಿಂಗ ಕೊನೆಯಲ್ಲಿ ತೆಗೆದುಕೊಂಡ ನಿರ್ಧಾರ ಯಾವುದು? ಅದಕ್ಕೆ ಕಾರಣಗಳೇನು?

36. ಸೀತಾ ಎಂಬ ಗೆಳತಿಯ ಗುಣ–ಸ್ವಭಾವವನ್ನು ಲೇಖಕಿ ಹೇಗೆ ಚಿತ್ರಿಸಿದ್ದಾರೆ?

37. ಚಿನ್ನಮ್ಮ ಬೆಳ್ಳಿಲೋಟವನ್ನು ಮತ್ತೆ ಹೊಳೆಗೆ ಎಸೆಯಲು ಕಾರಣವೇನು? ವಿಶ್ಲೇಷಿಸಿ.

**ಇ) ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ: 4x2=8**

38. ಮೂಡಿಗೆರೆಯಲ್ಲಿ ಪ್ರಕಾಶ್ ಮಾಡಿದಡಿ ಭಾಷಣದ ಪರಿಣಾಮಗಳನ್ನು ವಿವರಿಸಿ.

39. ಡ್ರೈವರ್ ಅಬ್ಬಾಸ್ ಮತ್ತು ಕ್ಲೀನ್‌ರ್ ಕೃಷ್ಣನ ಸಾವಿಗೆ ಕೃಷ್ಣೇಗೌಡನ ಆನೆ ಕಾರಣವೆ? ವಿವರಿಸಿ.

40. ನಾಗರಾಜನ ನಿಗೂಢ ಸಾವಿನ ಬಗ್ಗೆ ಜನರ ಅಭಿಪ್ರಾಯಗಳೇನು? ವಿವರಿಸಿ.

## ಉ – ವಿಭಾಗ

**ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ: 5x1=5**

41. ಪತ್ತುವಿಡದಿರ್ದನೇ ರವಿ
ಪತ್ತಿದ ಸಂಧ್ಯಾನುರಾಗಮಂ ಮನದಳಿಪಿಂ
ದೆತ್ತಾನುಂ ಪೊಲ್ಲೆನಿಪುದ
ನುತ್ತಮನಾಚರಿಸಿ ಪತ್ತುವಿಡದಿರ್ದಪನೇ

42. ಹಂಚಿಕೊಂಡಿದ್ದಾರೆ ಅಪ್ಪ ಅಮ್ಮನನ್ನು
ಇಲ್ಲಿ ದೊಡ್ಡಮಗನ ತಾವಲ್ಲಿ ಮುದುಕಿ, ಸದ್ಯ ಕನ್ನಡ ದೇಶ
ಮಗ ಸೊಸೆ ಹೊರಗೆ ಹೋದಾಗಲಾದರೂ ನಾಲ್ಕು ಮಾತಾಡಿ
ತೀರಿಸಿಕೊಳ್ಳುತ್ತಾಳೆ ಬಾಯತುರಿಕೆ, ಪಾಪ ಮುದುಕ ದೂರದ
ಅಸ್ಸಾಮಿನಲ್ಲಿ, ಅಲ್ಲಿಯ ಮಾತು ಸಸೇಮಿರ ಬರದು

### ಭಾಷಾಭ್ಯಾಸ

**ಅ) ಈ ಕೆಳಗಿನವುಗಳಲ್ಲಿ ಯಾವುದಾದರೂ ಆರಕ್ಕೆ ಸೂಚನೆಗನುಗುಣವಾಗಿ ಉತ್ತರಿಸಿ: 2x6=12**

43. ಈ ಪದಗಳಿಗೆ ಅರ್ಥ ಬರೆಯಿರಿ : ಅಂತರ್ಧಾನ, ಹರಿಬ
44. ಈ ತದ್ಭವ ಪದಗಳ ತತ್ಸಮ ರೂಪ ಬರೆಯಿರಿ : ಮುಕುತಿ, ಸಂತೆ
45. ಈ ಪದಗಳ ವಿಭಕ್ತಿಗಳ ಹೆಸರನ್ನು ಬರೆಯಿರಿ : ಉದಾತ್ತನೊಳ್, ಕುಟುಂಬಕ್ಕೆ
46. ಈ ಪದಗಳ ನಾನಾರ್ಥ ಬರೆಯಿರಿ : ನರ, ಹೊಳೆ
47. ಈ ನುಡಿಗಟ್ಟುಗಳನ್ನು ಬಳಸಿ ವಾಕ್ಯ ರಚಿಸಿ : ತಲೆಕೊಡವು, ಮೂಲೆಗುಂಪು
48. ಈ ದ್ವಿರುಕ್ತಿ ಪದಗಳನ್ನು ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿ : ಮತ್ತೆಮತ್ತೆ, ಅಡಿಗಡಿಗೆ
49. ಈ ಕ್ರಿಯಾಪದಗಳ ನಿಷೇಧರೂಪ ಬರೆಯಿರಿ : ನಿಲ್ಲುವೆನು, ಬರೆಯುತ್ತಾಳೆ

**ಆ) ಈ ಕೆಳಗಿನವುಗಳಲ್ಲಿ ಒಂದನ್ನು ಕುರಿತು ಪ್ರಬಂಧವನ್ನು ಬರೆಯಿರಿ: 5x1=5**

50. ನೋಟು ಅಮಾನ್ಯೀಕರಣ ಮತ್ತು ಕಪ್ಪು ಹಣ
51. ಡಿಜಿಟಲೀಕರಣದಲ್ಲಿ ಕನ್ನಡ ಭಾಷಾ ಬಳಕೆಯ ಅಗತ್ಯ

**ಇ) ಪತ್ರಲೇಖನ : ಕೆಳಗಿನವುಗಳಲ್ಲಿ ಒಂದನ್ನು ಕುರಿತು ಪತ್ರ ಬರೆಯಿರಿ: 4x1=4**

52. ನಿಮ್ಮ ಹಳ್ಳಿಯ ಸಾರಿಗೆ ಅವ್ಯವಸ್ಥೆ ಸರಿಪಡಿಸುವಂತೆ ಕೋರಿ ಸಂಬಂಧಿಸಿದ ಅಧಿಕಾರಿಗಳಿಗೆ ಪತ್ರವೊಂದನ್ನು ಬರೆಯಿರಿ.
53. ನಿಮ್ಮ ಕಾಲೇಜಿನಲ್ಲಿ ಜರುಗಿದ ಪರಿಸರ ಕೂಟ(ಇಕೋ ಕ್ಲಬ್)ದ ಆರಂಭ ಸಮಾರಂಭದ ಕುರಿತು ನಿಮ್ಮ ಗೆಳೆಯ/ಗೆಳತಿಗೆ ಪತ್ರ ಬರೆಯಿರಿ.

**ಈ) ಈ ಕೆಳಗಿನ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿ ಬರೆಯಿರಿ: 4x1=4**

54. ಊರು ಉಪಕಾರವರಿಯದು ಹೆಣ ಸಿಂಗಾರವರಿಯದು
55. ದೇಶ ಸುತ್ತಬೇಕು, ಕೋಶ ಓದಬೇಕು.

===0===